To Answer, v. a. ಪ್ರತ್ಯುತ್ತರಕೊಡು; *(to answer for)* ಉತ್ತರವಾದಿಯಾಗಿರು; *(to suit with)* ಸರಿಬೀಳು, ಹೊಂದಿರು, ಒಪ್ಪಿರು; *(to perform what is intended by the agent)* ಕೆಲಸಕೈಬರು, ಅನುಕೂಲವಾಗು, ಕೈಸಾಡಿಬರು; *(to defend)* ಆಸಕೆಕೊಡು; *Answer* that letter ಆಪತ್ರಕ್ಕೆಬದಲುತ್ತರವಂಸುಬರಿ; If he should say any thing I will *answer* for it ಅವನೇನಾದರುಹೇಳಿದರೆನಾನುತ್ತರಕೊಡುತ್ತೇನೆ; This horse *answers* my purpose very well ನನ್ನಕೆಲಸಕ್ಕೀಕುದುರೆತಕ್ಕದ್ದಾಗಿದೆ; You cannot *answer* that fault ಆಯಪರಾಧಕ್ಕೆನೀಬೊಂಕ್ಕಲಾರೆ, or ಆ

ಅಪರಾಧಕ್ಕೆನೀ ಪ್ರತ್ಯುತ್ತರಕೊಡಲಾರಿ, or ಆ ಮಾರಿಗೆನೀನೇ ಸಮ್ಮೆಳ್ಳಲಾರಿ; This *answers* several purposes ಇದನೇಕಕಾರ್ಯಗಳಿಗೆಬರುತ್ತದೆ; It will *answer* the trouble I have taken with it ನಾನುಪಡುವಕಷ್ಟಕ್ಕಿದುಫಲವಾಗುವದು, or ಕಷ್ಟಕ್ಕೆತಕ್ಕಫಲವುಕೊಡಲ್ಪಟ್ಟೀತು.

Answerable, a. ಉತ್ತರವಾದಿಯಾಗಿರುವ, ಹೊಸುಬೆಯಾಗಿರುವ; I am *answerable* ನಾನುತ್ತರವಾದಿ.

Ant, s. n. ಇರುವೆ; *(large)* ಕಟ್ಟಿರುವೆ; *(white)* ಬೆಳುದು, ಗೆದ್ದಲು; *(small)* ಕರಿಯಿರುವೆ; *(red)* ಕೆಂಪಿರುವೆ, ಕೆಂಜಿಗ.

Antagonist, s. n. ಎದುರಾಳು, ಅರಾತಿ, ರಿಪುವು, ವೈರಿ, ಸಪತ್ನ, ಅರಿ, ದ್ವಿಷತ್ತು, ದ್ವೇಷಣ, ದುರ್ಹೃದನು, ದ್ವಿಷನು, ವಿಪಕ್ಷನು, ವಿರೋಧಿ, ಅಹಿತನು, ಅಮಿತ್ರನು, ದಸ್ಯು, ಶಾತ್ರವ, ಶತ್ರುವು, ಅಭಿಘಾತಿ, ಪರ, ಪ್ರತ್ಯರ್ಥಿ, ಪರಿಪಂಥಿ, ಹಗೆಯಾಳಿ, ಯೆದುರಿ, ಕಾದುವಸೆಲಸು, ಆರಡಿಯು. v. *Adversary, enemy.*

To Antecede, v. a. ಮುಂಚೆಹೋಗ.

Antecedent, a. ಮುಂದಿನ, ಪೂರ್ವದ, ಪ್ರಾಕಿನ, ಮೇಲಿನ. v. *Prior, former.*

To Antedate, v. a. ಕೃತ್ರಿಮವಾಗಿಬರೆಯ, ತತ್ಪೂರ್ವಕಾಲದಲ್ಲಿಬರೆಯು; *(an antedated bond)* ಸುಳ್ಳುಪತ್ರ, ಕಳ್ಳಪತ್ರ.

Antediluvian, a. ಜಲಪ್ರಳಯಕ್ಕೆಪೂರ್ವದ.

Antelope, s. n. ಜಿಂಕೆ, ಹರಿಣ, ಚಿಗರಿ, ಮೃಗ, ಕುರಂಗ, ವಾತಾಯು, ಅಜಿನಯೋನಿ *(male antelope)* ಹೆರಳೆ, ಏಣವು, ಕೃಷ್ಣಮೃಗವು, ಮೃಗ; *(a swift antelope)* ವಾತಪ್ರಮಿ, ವಾತಮೃಗ, ಘೂಳಿಗೆದರಿನಡೆವ.

Anterior, a. ಪೂರ್ವ, ಮುಂಚಿನ, ಮೊದಲಿನ. v. *Prior, former, antecedent.*

Anthem, s. n. ಕೀರ್ತನೆಯು.

Anthony's fire, s. n. ದದ್ದು.

Ant-hill, s. n. ಇರುವೆಗೂಡು, ಹುತ್ತು, ನಾಕು, ವಲ್ಮೀಕ, ವಾಮಲೂರು.

Antibilious, a. ಪಿತ್ತಶಾಂತಿಯಚಿಕಿತ್ಸೆಯ.

Antic, a. ಕುಚೇಷ್ಟೆಯ, ಮಂಗತನದ, ತಮಾಷೆಯಾದ. v. *Droll, strange, odd, antique.* *(an antic)* ತಮಾಷೆಗಾರ, ಹಾಸ್ಯಗಾರ, ವಿದೂಷಕ, ವಿಡಂಬಕ, ಚೋದ್ಯಗಾರ; *(to play the antic)* ಕುಚೇಷ್ಟೆಮಾಡ, ಹಾಸ್ಯಮಾಡ, ಕುಚೋದ್ಯಮಾಡ.

Antichamber, s. n. ಕೊಠಡಿ.

Antichrist, s. n. ಪ್ರತಿಕ್ರೀಸ್ತು.

Antichristian, a. ಕ್ರೀಸ್ತುವಿನಮತಕ್ಕೆವಿರೋಧವಾದ.

To Anticipate, v. a. ನಿರೀಕ್ಷಣೆಮಾಡ, ನಿರೀಕ್ಷಿಸ, ಕಾಯ, ಹಾದಿನೋಡ, ಪ್ರತೀಕ್ಷಿಸ.

Anticipation, s. n. ನಿರೀಕ್ಷಣೆ, ಪ್ರತೀಕ್ಷಣೆ, ಕಾಯೋಣ, ಹಾದಿನೋಡೋಣ.

Antidote, s. n. ವಿಷಾಪಹಾರ, ಗರಳಖಂಡನ, ವಿಷಚಿಕಿತ್ಸೆಯು; *(a dealer in antidotes)* ವಿಷವೈದ್ಯ, ಜಾಂಗಲಿಕ.

Antifebrile, a. ಜ್ವರಾಪಹಾರದ, ಜ್ವರಹರದ.

Antimony, s. n. ಸುರ್ಮ, ಯಮ್ಮುನ್ನಾ, ಕಾಡಿಗೆ, ಕಪ್ಪು, ಸ್ರೋತಾಂಜನ, ಸೌವೀರ, ಕಪೋತಾಂಜನ, ಯಾಮುನ.

Antipathy, s. n. ಅಸಂಮತಿ, ಅಸಂಹ್ಯ, ವಾಕರಿಕೆ, ಬೀಭತ್ಸೆ, ವಿರೋಧ, ವಿಕಾರ.

Antique, a. ಪುರಾತನದ, ಹಳೇದು, ಪುರಾಣ, ಪ್ರತನ, ಪ್ರತ್ನ, ಚಿರಂತನ, ಪ್ರಾಚೀನ.

Antiquity, s. n. ಪೂರ್ವಕಾಲವು, ಆದಿಕಾಲ, ಪ್ರಾಕು, ಹಿಂಗಾಲ.

Antithesis, s. n. ಪ್ರತಿಕಕ್ಷೆ, ಪ್ರಸವ್ಯ, ಪ್ರತಿಕೂಲ, ಅಪಸವ್ಯ, ಅಪಷ್ಠು. v. *Opposition.*

Antivenereal, a. ಮೇಹಚಿಕಿತ್ಸೆಯ.

Antler, s. n. ಸಾರಂಗದ ಕೋಡು, ಸಾರಂಗದ ಕೊಂಬು. v. *Horn.*

Anvil, s. n. ಸಂಮ್ಮಟಿಕೆ.

Anxiety, s. n. ಚಿಂತೆ, ಉತ್ಕಂಠೆ, ಉತ್ಕಲಿಕೆ, ಲವಲವಿಕೆ, ವ್ಯಾಕುಲ, ಉದ್ವೇಗ, ಆಧಿ, ರಣರಣ, ಮನೋವ್ಯಾಧಿ. v. *Anguish, solicitude, care, doubt.*

Anxious, a. ಚಿಂತೆಯ, ವ್ಯಾಕುಲದ, ಉತ್ಕಂಠೆಯುಳ್ಳ, ಉತ್ಕಲಿಕೆಯುಳ್ಳ, ಆಧಿಯುಳ್ಳ, ಮನೋವ್ಯಾಧಿಯುಳ್ಳ, ಉದ್ವೇಜಕ.

Anxiousness, s. n. ವ್ಯಾಕುಲತೆ, ಚಿಂತೆ, ಆಧಿ, ಮನೋವ್ಯಾಧಿ, ಉತ್ಕಂಠೆ, ಉತ್ಕಲಿಕೆ, ಲವಲವಿಕೆ, ಜಾರ್ತ್ಸ್ಯವು; *(to be anxious)* ಚಿಂತೆಪಡ, ಮನೋವ್ಯಾಧಿಯಾಗಿರ.

Anus, s. n. ಆಸನವು, ಕುಂಡೆಯು, ಗುದವು, ಪುಕಳೆಯು, ಅಪಾನವು, ಪಾಯುವು.

Any, a. *(neut.)* ದಾವದಾದರು, ಯಾವದಾದರು, ಆವದಾದರು, ಆವದು, ಯಾವದು, ದಾವದು, ಏನಾದರು, ಯೇನಾದರು, ಯೇನೇನು; *(mas. & fem.)* ಆರಾದರು, ಯಾರಾದರು, ದಾರಾದರು, *(mas. sing.)* ಆವನಾದರು, ಯಾವನಾದರು, ದಾವನಾದರು; *(fem. sing.)* ಆವಳಾದರು, ಯಾವಳಾದರು, ದಾವಳಾದರು; You may go *any* where you like ನೀನೆಲ್ಲಿಗೆಹೋಗಬೇಕಾದರಲ್ಲಿಗೆಹೋಗಬಹುದು; I know not *any* one of them ಅವರಲ್ಲಿನಾನೊಬ್ಬಂನಾದರೂಅರಿಯೆ; Take *any* one but that ಅದರಂನಬಿಟ್ಟುಮತ್ತಾವದಂನಾದರುತೆಗೋ; Do not go *any* more ಇಂನೊಂಮ್ಮೆಹೋಗಬೇಡ, or ಇಂನೊಂದುಸಾರಿಹೋದೀಕಂಡ್ಯಾ, or ಇಂನೊಂದುಸಾರಿಹೋದೀಗೀದೀಕಂಡ್ಯಾ; You must not stay there *any* longer ಇಂನಲ್ಲಿರಬೇಡ; I never saw *any* man so strong as he is ದಾವಂನಾದರಿಂಥಾಪರಾಕ್ರಮಿಯಾದವಂನನಾನೋಡಲಿಲ್ಲಾ; Is there *any* more? ಇಂನೇನಾದರುಂಟೆ; You must not allow *any* more to come ನೀನಿಂನಾರಾದರಂನಬರಗೊಡಿಸಬೇಡ; *Any* one that sees this will laugh ಇದರಂನಾರಾದರುನೋಡಿದರೆನಗುವರು; *Any* time will suit me ನನಗೆಯಾವವೇಳೆಸರಿ; *Any* how ಹ್ಯಾಗಾದರು, or ಯಾವಬಗೆಯಾದರು; *Any* where ಎಲ್ಲ್ಯಾದರು.

Apace, ad. ಶೀಘ್ರವಾಗಿ, ಜಲ್ದಾಗಿ, ಗಾಢವಾಗಿ, ಗಕ್ಕನೆ, ಬೇಗ, ಬ್ಯಾಗನೆ. v. *Quickly, hastily.*

Apart, ad. ಬ್ಯೇರೆಯಾಗಿ, ಇಂಗಡವಾಗಿ, ಪ್ರೇಲವಾಗಿ, ವಿರಳವಾಗಿ, ಅಂಗಲವಾಗಿ, ತೆಸುವಾಗಿ. v. *Separately.*

Apartment, s. n. ಕೊಠಡಿ, ಮನೆ. v. *Chamber.*

Apathy, s. n. ಸ್ತಬ್ಧ, ಜಡ, ಮದ್ದ.

Ape, s. n. ಕೋತಿ, ಕೋಡಗ, ವಾನರ, ಮರ್ಕಟ,

ಕಪಿ, ಪ್ಲವಂಗ, ಪ್ಲವಗ, ಶಾಖಾಮೃಗ, ವಲೀಮುಖ, ವನೌಕಸ್ಸು, ಕೀಶ.

To Ape, v. a. ವಿಡಂಬಿಸು, ಅನುಕರಿಸು, ಅಭಿನಯಿಸು, ನಟಿಸು. v. *To imitate, mimic.*

Aperient, a. ಭೇದಿಮಾಡುವ, ವಿರೇಚಕವಾದ,

Aperture, s.n. ಕಿಂಡಿ, ಕನ್ನ, ಕುಹರ, ಸುಷಿರ, ವಿವರ, ತೂತು, ಪೊರೆ, ಬಿಲ, ಛಿದ್ರ, ನಿರ್ವ್ಯಥನ, ರೋಕ, ರಂಧ್ರ, ಶ್ವಭ್ರ, ವಪೆ, ಸುಷಿಯು. v. *Opening, hole, crevice, breach.*

Apex, s. n. ತುದಿ, ಅಂಚು, ಕೊನೆ, ಶಿರಸ್ಸು, ಅಗ್ರ, ಶಿಖರ, ಶೃಂಗ, ಕೂಟ. v. *Summit, top, point.*

Aphorism, s. n. ನಾಣ್ಣುಡಿ, ಗಾದೆ, ವಚನ. v. *Maxim.*

Apiary, s. n. ಜೇನುಗೂಡು, ಮಧುಪಟಲ. v. *Beehive.*

Apiece, ad. *(mas.)* ಒಬ್ಬೊಬ್ಬನಿಗೆ; *(fem.)* ಒಬ್ಬೊಬ್ಬಳಿಗೆ; *(neut.)* ಒಂದೊಂದಕ್ಕೆ, ವಂದೊಂದಕ್ಕೆ; How much are the clothes *apiece?* ಜೋಡೊಂದಕ್ಕೇನುಬೆಲೆ; How much are the oranges *apiece?* ಕಿತ್ತಳೆವಂದಕ್ಕೆಷ್ಟು.

Apish, a. ಮಂಗನ, ಕೋತಿಚೇಷ್ಟೆಯ. v. *Imitative, affective, trifling.*

Apishly, ad. ಮಂಗನಾಗಿ, ಕೋತಿಯಾಗಿ. v. *Affectedly.*

Apishness, s. n. ಮಂಗತನ, ಕೋತಿಚೇಷ್ಟೆ. v. *Imitation, silliness, playfulness.*

Apocryphal, a. ದೈವಪ್ರೋಕ್ತವಾಗದ, ಕಲ್ಪಿತವಾದ.

To Apologize, v. n. ನೆವಪೇಳ್, ಅನುನಯಿಸು.

Apologue, s. n. ಕಥಾತಂತ್ರ. v. *Fable.*

Apology, s. n. ನೆವವು, ವ್ಯಾಜವು, ಅನುನಯವು, ಸಮಾಧಾನವು.

Apoplexy, s. n. ರುದ್ರವಾಯುವು, ವಾತಸಂಧಿ, ಮೂರ್ಛೆ, ಜನ್ನಿ.

Apostacy, s. n. ಮತಭ್ರಂಶವು, ಸನ್ಮಾರ್ಗಪರಿತ್ಯಜಿಸುವದು.

Apostate, s. n. ಮತಭ್ರಷ್ಟ, ಸನ್ಮಾರ್ಗಪರಿತ್ಯಾಗಿ.

To Apostatize, v. n. ಮತಭ್ರಷ್ಟವಾಗು, ಸನ್ಮಾರ್ಗಪರಿತ್ಯಜಿಸು.

Apostle, s. n. ಕಳುಹಿಸಿಕೊಳ್ಳಲ್ಪಟ್ಟವ.

Apothecary, s. n. ಗಂಧಿಗನು; *(apothecary's shop)* ಗಂಧಿಗರಂಗಡಿ.

To Appal, v. a. ದಿಗಿಲುಪಡಿಸು, ಭಯಪಡಿಸು, ಅಂಜಿಸು, ಹೆದರಿಸು. v. *To terrify, depress.*

Apparatus, s. n. ಸಾಮಗ್ರಿ, ಸಾಮಾನು, ಉಪಕರಣ. v. *Furniture, equipage, tools, instruments.* *(warlike apparatus)* ಯುದ್ಧೋಪಕರಣ; *(apparatus for a journey)* ಯಾತ್ರೋಪಕರಣ; *(household apparatus)* ಪಾತ್ರಮುಸ್ತೈದಿ, ಕಂಚುಮುಟ್ಟುಗಳು.

Apparel, s. n. ಉಡುಪು, ಉಡಿಗೆ, ಬಟ್ಟೆಗಳು, ವಸ್ತ್ರಗಳು, ಅಂಬರ. v. *Coat, dress, habit, garment.* *(for the upper part of the body)* ಪ್ರಾವಾರ; ಉತ್ತರಾಸಂಗ, ಬೃಹತಿಕೆಯು, ಸಂವ್ಯಾನ, ಉತ್ತರೀಯ, ಹೊದಿಕೆ; *(for the lower part)* ಅಂತರೀಯ, ಉಪಸಂವ್ಯಾನ, ಪರಿಧಾನ, ಅಧೋಂಶುಕವು, ಉಡುವಬಟ್ಟೆ; *(a male's lower apparel)* ಧೋತ್ರ; *(a female's apparel)* ಸೀರೆ, ಶ್ಯೇಲೆ.

To Apparel, v. a. ವಸ್ತ್ರವಧರಿಸು, ಉಟ್ಟುಕೊಳ್ಳು, ತೊಟ್ಟುಕೊಳ್ಳು. v. *To dress, clothe, cover, deck.*

Apparent, a. ನಿಚ್ಚಳ, ಸ್ಪಷ್ಟ, ಸ್ಫುಟ, ಪ್ರವ್ಯಕ್ತ, ಉಜ್ವಲ, ನಿರ್ಮಲ. v. *Manifest, plain, evident, visible, seeming, open.*

Apparently, ad. ನಿಚ್ಚಳವಾಗಿ, ನಿರ್ಮಲವಾಗಿ. v. *Evidently, plainly.*

Apparition, s. n. ಭೂತ, ಪ್ರೇತ, ಪಿಶಾಚ, ಘೂಳಿ, ದೆವ್ವ. v. *Spectre, ghost, phantom ;* also *visibility, appearance.*

To Appeal, v. n. ಉತ್ತರಸತ್ತಿಗೆಹೋಗು, ನ್ಯಾಯವತಿರಿಗಿಸು, ಪೇಟೇಮನೆಹೂಕು, ನ್ಯಾಯಹೂಡು. v. Also *to accuse, charge, summon, refer to.*

Appeal, s. n. ನ್ಯಾಯತಿರಿಗಿಕೆ, ಉತ್ತರಸತ್ತಿಗೆಹೋಗೋಣ. v. *Accusation, reference, summons. (place of appeal)* ದೊಡ್ಡನ್ಯಾಯಚಾವಡಿ, ಅಪೀಲ್ ಕಮಟಿ, ನ್ಯಾಯವಪ್ರತಿಘಟಿಸುವಸ್ಥಳವು, ಉತ್ತರಸತ್ತಿ; *(court of appeals)* ಸದರದಾಲತು, ಉತ್ತರಸತ್ತಿ; There is no higher court to which you can *appeal* ನಿನ್ನನ್ಯಾಯವಂನೇರುವದಕ್ಕೆಮತ್ತೊಂದುಹೆಚ್ಚಾದನ್ಯಾಯಸ್ಥಾನವಿಲ್ಲವು; He is not satisfied with the decision of this court, and has, therefore, *appealed* to the supreme court at Madras ಅವನೀನ್ಯಾಯಸ್ಥಾನದಲ್ಲಿತೀರಿಸಿದತನನ್ಯಾಯದತೀರಿಕೆಯಂಮನಸಂಮತಿಸದೆತನನ್ಯಾಯವಂಮಚಂನಪಟ್ಟಣದಲ್ಲಿರುವಮುಖ್ಯವಾದನ್ಯಾಯಸ್ಥಾನಕ್ಕೇರಮಾಡಿದನು.

To Appear, v. n. ಕಾಣಿಸು, ತೋರು, ತೋಚು. v. *To seem, to be visible.* He *appeared* intoxicated ಅವನುಅಮಲೇರಿಯಾದವನಹಾಗೆಕಾಣಿಸಲ್ಪಟ್ಟನು; He *appears* very unwell ಅವನುಬಹಳಜಡವಾದವನಹಾಗೆಕಾಣಿಸುತ್ತಾನೆ; You are summoned to *appear* in court to-morrow ನೀನುನಾಳೆನ್ಯಾಯಸ್ಥಾನದಲ್ಲಿಹಾಜರಾಗಿರಬೇಕಾಯಿತು; Let the dry land *appear* ಒಣಗಿದಭೂಮಿಕಾಣಲ್ಪಡಲಿ; So it *appears* ಹಾಂಗೆತೋರುತ್ತದೆ, or ಆರೀತಿಕಾಣುತ್ತದೆ.

Appearance, s. n. *(the act of coming into sight)* ಕಾಣಬರೋಣ, ಅವಲೋಕನ; *(the thing seen)* ದೃಷ್ಟವು, ಅವಲೋಕಿತವು, ಆಲೋಕಿತವು, ಕಂಡದ್ದು; *(shape)* ಆಕಾರ, ರೂಪ; *(probability)* ತೋರುವಿಕೆ, ಕಾಣ್ವಿಕೆ; That witness has not made his *appearance* yet ಆಸಾಕ್ಷಿಯವನಿದುವರಿಗೂಮೋರೆತೋರಿಸಲಿಲ್ಲ; There was a strange *appearance* in the heavens last night ರಾತ್ರಿಯೊಳಾಕಾಶದಲ್ಲಾಶ್ಚರ್ಯವಾದಚೋದ್ಯವಿತ್ತು; There is an *appearance* of rain ಮಳೆಬರಸೂಚನೆತೋರುತ್ತದೆ; You must not judge of people from their *appearance* ಮನುಷ್ಯರಮುಖವಂನೋಡಿನಿರ್ಧಾರಗೈಮಾಡಬೇಡ.

To Appease, v. a. ಸಮದಾಯಿಸು, ಸಮಾಧಾನಪಡಿಸು, ಶಾಂತಪಡಿಸು, ಆರಿಸು. v. *To pacify, quiet, calm, reconcile.*

Appellant, s. n. ವಾದಿ, ಉತ್ತರಫಿರ್ಯಾದಿದಾರನು. v. *Challenger, accuser.*

Appellation, s. n. ನಾಮ, ನಾಮಧೇಯವು, ಹೆಸರು, ಪೆಸರು, ಆಖ್ಯೆಯು, ಆಹ್ವಯವು, ಅಭಿಧಾನವು, ಸಂಜ್ಞೆಯು. v. *Name.*

Appellative, s. n. ಜಾತಿವಾಚಕ.

To Append, v. a. ತೂಗಹಾಕು, ನೇಣುಹಾಕು. v. *To hang, suspend.*

Appendage, s. n. ಉಪಕರಣವು.

Appendant, a. ತೂಗಾಡುವ, ನೇತಾಡುವ, ಜೋತಾಡುವ, ಜೋಲಾಡುವ. v. *Suspended.*

Appendix, s. n. ತಾಜಾಕಲಂ, ಪರಿಶಿಷ್ಟ, ಪುರ್ವಣೆ, ಸಂಬಂಧಿಕೆ ; He has written an *appendix* to that book ಆಪುಸ್ತಕಕ್ಕವನು ವಿಶೇಷಾಭಿಪ್ರಾಯವನ್ನು ಬರದು ಜೋಡಿಸಿದನು; What is in the *appendix* ಪರಿಶಿಷ್ಟದಲ್ಲೇನುಂಟು.

To Appertain, v. n. ಹೊಂದಿರು, ಹತ್ತಿರು, ಸಂಬಂಧವಾಗಿರು. v. *To appertain.*

Appertainment, Appertenance, s. n. ಹೊಂದಿರುವಿಕೆ, ಹತ್ತಿರುವಿಕೆ, ಉಪಕರಣ.

Appertinent, a. ಸಂಮಂದವಾದ, ಸಂಬಂಧವಾದ. v. *Belonging.*

Appetence, s. n. ಇಚ್ಛೆ, ಆಶೆ, ವಾಂಛೆ, ಅಪೇಕ್ಷೆ, ಕಾಂಕ್ಷೆ, ಕಾಮ, ಅಭಿಲಾಷೆ. v. *Desire, lust.*

Appetite, s. n. ಹಸಿವೆಯು, ಕ್ಷುತ್ತು, ಬುಭುಕ್ಷೆಯು, ಅಶನಾಯೆಯು ; He has a good *appetite* ಅವನಿಗನ್ನಪುಟಿಚಂನಾಗಿದೆ ; I have lost my *appetite* ನನಗೆ ಮಂದಾಗ್ನಿಯಾಗಿದೆ ; Bitters are good for the *appetite* ಪೈತ್ಯವಸ್ತ್ರಗಳು ಹಸಿವಿಗೊಳ್ಳೆಯದು.

To Applaud, v. a. ಹೊಗಳು, ಸ್ತುತಿಸು, ವಿನುತಿಸು, ಘೋಷಿಸು ; He was much *applauded* ಅವನು ಬಹಳ ಶಾಬಾಸುಹೊಂದಿದನು, or ಅವನು ಬಹಳ ಮೆಚ್ಚಿಸಿಕೊಂಡನು.

Applause, s. n. ಶಾಬಾಸು, ಘೋಷಣ, ಶ್ಲಾಘನೆ, ಸ್ತೋತ್ರವು .v. *Praise.*

Apple, s. n. (*custard*) ಸೀತಾಫಲ ; (*pine*) ಅನಾಸು ; (*thorn apple*) ಉಮ್ಮತ್ತಿ, ಉನ್ಮತ್ತ, ಕಿತವ, ಧೂರ್ತ, ಧುತ್ತೂರ, ಕಾಂಚನಾಹ್ವಯ, ಮಾತುಲ, ಮದನ ; (*apple of the eye*) ಕಂಣುಗುಡ್ಡೆ.

Applicable, a. ಹೊಂದಿರುವ, ತಕ್ಕ. v. *Suitable, addible.* That word is *applicable* to him ಆಮಾತವನಿಗೆಸರಿಹೋಯಿತು, or ಆಮಾತವನಿಗೆತಕ್ಕದು, or ಆಮಾತವನಿಗೆಹೊಂದುತದೆ.

Application, s. n. (*for any thing*) ಅಂಸರ, ಮನವಿ, ಅರಿಕೆ, ವಿಜ್ಞಾಪನೆ ; (*of any thing*) ಪ್ರಯೋಗ ; (*of mind*) ಮನವಿಡೋಣ, ಆಸಕ್ತಿ, ಆತುರ, ಅಧ್ಯವಸಾಯ ; He has made an *application* to the government for a better situation ಇಂನುವಲ್ಲೇ ಉದ್ಯೋಗಕ್ಕೋಸ್ಕರವಾಗವನು ಸರಕಾರಕ್ಕೆ ಅಂನವತ್ತಿಯೇ ಬರದುಕೊಂಡನು ; The *application* of cold water is good for weak eyes ಹೊಗೆಗಂಣಿಗೆತಂಣೀರಿಡುವುದುತ್ತಮವು ; Knowledge cannot be attained without close *application* of mind ಸ್ಥಿರಮನಸ್ಸುಮಾಡಿದರೇಹೊರ್ತಾಗಿ ತಿಳುವಳಿಕೆಯು ಬಾರದು.

To Apply, v. a. (*to put one thing to another*) ಹಚ್ಚು ; (*to have recourse to*) ಮನವಿಮಾಡು, ವಿಜ್ಞಾಪನೆಮಾಡು ; (*to apply the mind*) ಮನಸ್ಸುಕೊಡು, ಮನವಿಡು ; If young people would be wise they must *apply* their minds to study ಹುಡು

ಗರುಬುದ್ಧಿಗಲಿಯಬೇಕಾದರೆ ಪೂರ್ಣಮನಸ್ಸುಕೊಡಬೇಕಾದ್ದು; If you *apply* to him he will give you as much as you want ನೀನವನಿಗೆಮನವಿಮಾಡಿಕೊಂಡರೆಯವನು ನಿನಗೆಬೇಕಾದಷ್ಟುಕೊಡುವನು This comparison you must *apply* to yourself ಈಸಾಮ್ಯವು ನಿನಗೆಸರಿಹೋದದ್ದೆಂದುತಿಳಿ; If he *applies* a poultice to the boil it will soon come to a head ಅವನಾಗಡ್ಡೆಗೆಯಾವಕಟ್ಟಾದರುಕಟ್ಟಿದರ ಮತ್ತ್ಯರೆಯಾಗಿ ಮೋರೆಯಾಗುವದು.

To Appoint, v. a. (*to fix a time*) ಕಾಲನಿರ್ಣಯಿಸು, ಹೊತ್ತುನೇಮಕಮಾಡು, ವೇಳೆಗೊತ್ತುಮಾಡು; (*to appoint to an office*) ಉದ್ಯೋಗಕ್ಕೆ ನೇಮಿಸು, ಕೆಲಸದಲ್ಲಿಡು; (*to establish*) ನಿರ್ಣಯಿಸು, ವ್ಯವಸ್ಥೆಮಾಡು, ನಿಶ್ಚಯಿಸು; He is *appointed* to that situation ಆವುದ್ಯೋಗಕ್ಕವನು ನೇಮಕವಾದನು; *Appoint* a time and I will come ನೀನೊಂದು ಗೊತ್ತು ಮಾಡು ನಿನ್ನ ಗೊತ್ತಿಗೆ ಬರುತ್ತೇನೆ.

Appointment, s. n. (*stipulation*) ಸಂವಿತ್ತು, ಪ್ರತಿಜ್ಞಾನವು, ನಿಯಮ, ಆಶ್ರವ, ಸಂಶ್ರವ, ಅಂಗೀಕಾರ, ಅಭ್ಯುಪಗಮ, ಪ್ರತಿಶ್ರವ, ಸಮಾಧಿ, ಗಮ್ಯತಿಪದ್ಯೋಗ, ಒಪ್ಪೋಗ; (*office*) ಉದ್ಯೋಗ, ಕೆಲಸ, ನೌಕರಿ; (*decree*) ತೀರ್ಪು, ವ್ಯವಸ್ಥೆ, ನಿರ್ಣಯ, ನಿಶ್ಚಯ; (*command*) ಆಜ್ಞೆ, ಕಟ್ಟಳೆ, ನಿರೂಪ, ನಿಯೋಗ; (*equipment*) ಸನ್ನಾಹ, ಸಾಮಗ್ರಿ, ಉಪಕರಣ. We have made an *appointment* to meet at Nundydroog ನಾವು ನಂದಿದುರ್ಗದಲ್ಲಿ ಕೂಡುವದಕ್ಕೆ ನೇಮಕಮಾಡಿಕೊಂಡಿದ್ದೇವೆ; The government have given him an *appointment* ಸರಕಾರದವರವನಿಗಾವುದ್ಯೋಗವನ್ನುಕೊಟ್ಟಿರು.

To Apportion, v. a. ವಿಭಜಿಸು, ಭಾಗಮಾಡು, ಪಾಲುಮಾಡು, ಹಂಚು.

Apposite, a. ತಕ್ಕ, ಸರಿಯಾದ, ಹೊಂದಿಕೆಯಾದ, ಯೋಗ್ಯವಾದ, ಸಂಗತ. v. *Fit, proper, adapted.* An *apposite* argument ಉದಾಹರಣ.

Apposition, s. n. ಹೆಚ್ಚು. v. *Addition.*

To Appraise, v. a. ಖರೀದಿನಿರ್ಣೈಸು, ಬೆಲೆಮಥಿಸು, ಬೆಲೆಮಾಡು, ಬೆಲೆನಿಷ್ಕರ್ಷೆಮಾಡು.

Appraisement, s. n. ಬೆಲೆನಿರ್ಣಯವು, ಬೆಲೆನಿಷ್ಕರ್ಷವು, ಖರೀಧೀನಿರ್ಣಯವು, ಡವುಲು; (*appraisement of the probable harvest*) ಅಂಬನಾ.

Appraiser, s. n. ಬೆಲೆಗಾರ, ನಿರ್ಣಯಿಕ, ಕ್ರಯನಿಷ್ಕರ್ಷಕ, (*an appraiser of the probable harvest*) ಅಂಬವಾದಾರ, ಡವುಲುದಾರನು.

To Apprehend, v. a. (*to conceive*) ತಿಳುಕೊಳ್ಳು, ಗ್ರಹಿಸು; (*to lay hold of*) ಹಿಡಿಯು; (*to suspect*) ಅನುಮಾನಪಡು, ಸಂದೇಹಗೊಳ್ಳು; (*to dread*) ಭಯಪಡು; The thief is *apprehended* ಕಳ್ಳನು ಸಿಕ್ಕಿದನು; He does not *apprehend* your meaning ಅವನು ನಿನ್ನರ್ಥವನ್ನು ಕಂಡುಹಿಡಿಯಲಿಲ್ಲ, or ಅವನು ನಿನ್ನಭಿಪ್ರಾಯವನ್ನು ಗ್ರಹಿಸಲಿಲ್ಲ.

Apprehension, s. n. (*conception*) ಉಪಲಬ್ಧಿ, ಅನುಭವ, ಸಂಗ್ರಾಹಿಕ; (*fear*) ಭಯ, ಭೀತಿ, ಹೆದರಿಕೆ; (*seizure*) ಹಿಡಿಕೊಂಬುವದು; He is a

man of dull *apprehension* ಆಮನುಷ್ಯನು ಮಂದಮತಿಯು.

Apprehensive, a. *(fearful)* ಭಯವುಳ್ಳ, ಶಂಕೆಯಾದ; *(quick)* ಕುಶಾಗ್ರಮತಿಯುಳ್ಳ, ಜಾಗ್ರತೆಪರವಾದ; *(feeling)* ಸ್ಪರ್ಶವರಿವ; *(apprehensive of death)* ವಿವಶ, ಅರಿಷ್ಟದುಷ್ಟಿ.

Apprentice, s. n. There is nothing that corresponds exactly to the legal acceptation of this word among the Hindoos, nor do they ever bind their children by a covenant to an artificer, upon condition of his instructing them in his art; but it is not uncommon for individuals to give their services to craftsmen or scholars for a maintenance, and with a view of being instructed in science. This is called ಶರಚ್ಛೇರಿಯಾಗಬಿಡುವದು, and the individual is designated ಶುಶ್ರೂಷಕ, or ಶಿಷ್ಯ.

To Apprize, v. a. ತಿಳಿಸು, ತಿಳಿಯಪಡಿಸು. v. *To inform.*

Approach, s. n. *(the act of drawing near)* ಹತ್ತಿರವಾಗೋಣ, ಸಮೀಪಿಸೋಣ; *(access)* ದಾರಿ, ಮಾರ್ಗ.

To Approach, v. n. ಸಮೀಪವಾಗು, ಸಂನಿಧಿತವಾಗು; The harvest *approaches* ಸುಗ್ಗಿಕಾಲ ಸಮೀಪಿಸುತದೆ.

To Approach, v. a. ಸಮೀಪಿಸು, ಸಂನಿಧಿಸು; The thief *approached* up to him and knocked him down ಕಳ್ಳನವನ ಹತ್ರ ಕಲಹುಬಂದು ನೆಲಕ್ಕೆ ಉರಗಬಡಿದನು; Ye *approach* this day to battle with enemies ನೀವಿಂದು ನಿಮ್ಮ ಶತ್ರುಗಳ ಮೇಲೆ ಯುದ್ಧಪ್ರಸಕ್ತರಾಗಿ ಹೋಗುತ್ತೀರಿ, or ಇಂದು ನೀವು ನಿಮ್ಮ ಶತ್ರುಗಳ ಮೇಲೆ ಯುದ್ಧಸಂನದ್ಧರಾಗಿ ಹೋಗುತ್ತೀರಿ.

Approbation, Approval, s. n. ಅಂಗೀಕಾರ, ಮೆಚ್ಚಿಕೆ, ಸಂಮತ, ಸಮರ್ಪಕ, ಅಭಿಮತ. v. *Praise, applause, liking.* Does this work meet with your *approbation?* ಈ ಕೆಲಸವು ನಿನಗೆ ಸಂಮತವೇ, or ಈ ಕೆಲಸವು ನಿನ್ನ ಮನಸ್ಸಿಗೆ ಸಮರ್ಪಕವೋ.

To Appropriate, v. a. *(to a religious use)* ಮೀಸಲಾಗಿರಿಸು, ನಿಯಮವಾಗಿಡು; *(to one's own use)* ಬಳಿಸು, ಸ್ವಂತಕ್ಕೆ ಮಾಡಿಕೊಳ್ಳು; They have detected the amildar in *appropriating* the public revenue to his own private use ಅಮಲುದಾರನು ಸರಕಾರದ ಹೊಣವನ್ನು ತನ್ನ ಪ್ರಯೋಜನಕ್ಕಾಗಿ ಬಳಿಸಿಕೊಳ್ಳುತ್ತಾನೆಂದವರು ಕಂಡುಕೊಂಡರು; He has *appropriated* a thousand rupees to charity ಅವನು ಸಾವಿರ ರೂಪಾಯಿಗಳನ್ನು ಧರ್ಮಖರ್ಚಿಗಾಗಿ ತೆಗೆದಿಟ್ಟನು, or ಅವನು ಸಾವಿರ ರೂಪಾಯಿಗಳನ್ನು ಧರ್ಮಖರ್ಚಿಗೋಸ್ಕರ ಮೀಸಲಾಗಿಟ್ಟನು.

Appropriation, s. n. ಮುಡುಪು, ಮೀಸಲು, ಕೈವಶ, ಕೈಗಂಟು.

Approvable, a. ತಕ್ಕದ್ದು, ಯುಕ್ತವಾದದ್ದು, ಸಂಮತಿಸತಕ್ಕ.

Approval, s, n. ಮಂಜೂರು, ಸಂಮತಿ, ಮೆಚ್ಚಿಕೆ, ಅಂಗೀಕಾರ, ಸಮರ್ಪಕ.

To Approve, v. a. ಅಂಗೀಕರಿಸು, ಒಪ್ಪು, ಸಂಮತಿಸು, ಅನುಮೋದಿಸು, ಮೆಚ್ಚಿಕೊಳ್ಳು, ಮಂಜೂರು

ಮಾಡ, ಸಮರ್ಪಕಪಡ; Do you *approve* of such foolish customs? ನೀನಿಂಥಾಅವಿವೇಕವಾದ ಮರ್ಯಾದಿಗಳಂನೊಪ್ಪಿಕೊಳ್ಳುತ್ತಿದ್ದೀಯೋ; He much *approves* of my conduct ನನ್ನನಡತೆಯ ವನಿಗೆಬಹಳಸರಿಬರುತ್ತದೆ.

Approximate, a. ಹತ್ತಿರಿಶಿದ, ಆಸಂನವಾದ, ಸಂನಿಹಿತವಾದ. v. *Near to.*

Approximation, s. n. ಸಂಸರ್ಗ, ಆಸಂನ, ಸಂನಿಹಿತ, ಪಕ್ಕ, ಹೊರೆ, ಹೊರ್ದುಗೆ, ಕಿಲಂ. v. *Approach.*

April, s. n. ಚೈತ್ರಮಾಸ. v. *Month.*

Apron, s. n. ಪಾವಡ, ಪರಿಕಾರ.

Apropos, a. ತಕ್ಕ,ಅನುಕೂಲವಾದ, ಸಾನುಕೂಲತೆಯಾದ.

Apt, a. (*fit*) ತಕ್ಕ, ಯುಕ್ತ, ಯೋಗ್ಯ; (*quick*) ಜಾಗ್ರತೆಯುಳ್ಳ, ಶೀಘ್ರಪಾಕವುಳ್ಳ; (*inclined*) ಪಕ್ಷವಾಗಿರುವ, ಮನಸಾಗಿರುವ, ಅಭ್ಯಾಸವಾಗಿರುವ. v. *Fit, qualified, tending, inclined, ready, quick.* He is very *apt* at his learning ಅವನುಕಲಿಯುವದರಲ್ಲಿಚುರುಕು, or ಅವನುವಿದ್ಯವನ್ನುಕಲಿತುಕೊಳ್ಳುವದರಲ್ಲಿಮೇಧೆಯುಳ್ಳವನು.

Aptness, Aptitude, s. n. ಚುರುಕು, ಮೇಧೆ, ಜಾಗ್ರತೆ.

Aptly, ad. (*quickly*) ಚುರುಕಾಗಿ, ಮೇಧೆಯಾಗಿ, ಜಾಗ್ರತೆಯಾಗಿ; (*fitly*) ತಕ್ಕದಾಗಿ, ಯುಕ್ತವಾಗಿ; He learned that business very *aptly* ಅವನಾಉದ್ಯೋಗವನ್ನುಅತಿಜಾಗ್ರತೆಯಾಗಿಕಲತನು; This was very *aptly* spoken ಇದುಸರಿಯಾದ ಮಾತು, or ಅದುಸಾದೃಶ್ಯವಾಗಿಹೇಳಲ್ಪಟ್ಟಿತು.

Aqua-fortis, s. n. ಗಂಧಕದ್ರಾವಕ, ಗಂಧಕದ್ರುತಿ.

Aquarius, s. n. (*the celestial sign*) ಕುಂಭರಾಶಿ.

Aquatic, a. ಜಲಚರದ, ನಾದೇಯದ; (*aquatic animals*) ಜಲಜಂತುಗಳು, ಯಾದಸ್ಸುಗಳು.

Aqueduct, s. n. ಕಾರಂಜಿ, ಕಾಲುವೆ, ಖಿಲ, ಕುಲ್ಯ. v. *Canal, conduit.*

Aqueous, a. ನೀರಿನ.

Arabic, s. n. ಅರಬ್ಬ; (*gum*) ಗೋಂದು.

Arabia, s. n. ಅರಬ್ಬಿಯ.

Arable, a. ಹಸನಾಗುವ.

Arbiter, s. n. (*a judge*) ನ್ಯಾಯಾಧಿಪತಿ; (*an umpire*) ಸಂಧಿಮಾಡುವವ, ಮಧ್ಯಸ್ತಗಾರ, ವ್ಯಾಜ್ಯಬಗೆಹರಿಸುವವ.

Arbitrary, a. ಸ್ವತಂತ್ರ, ಅಪಾವೃತ, ಸ್ವೈರಿ, ಸ್ವಚ್ಛಂದ,ನಿರವಗ್ರಹ; (*arbitrary rule*) ಸ್ವೇಚ್ಛಾಪ್ರಭುತ್ವ, ಡೊಂಬೀಘೋರತನ. v. *Imperious, despotic, absolute, tyrannical.*

To Arbitrate, v. a. ತೀರಿಸು, ನಿಶ್ಚಯಿಸು, ಬಗೆಹರಿಸು. v. *To determine, decide, give judgment.*

Arbitration, s. n. ತೀರ್ಪು, ನಿಶ್ಚಯಿಕೆ, ಬಗೆಹರಿಸೋಣ. v. *Decision, determination.* (*An assembly of five or more persons to settle a matter by arbitration*) ಪಂಚಾಯತಿ; (*to settle a matter by arbitration*) ಪಂಚಾಯತಿಮಾಡ; The matter shall be settled by *arbitration* ಈ ಕಾರ್ಯವುಪಂಚಾಯತಿಯವರಮುಖಾಂತ್ರತೀರಿಶಿಕೊಳ್ಳುವ.

Arbitrator, s. n. (*a judge*) ನ್ಯಾಯಾಧಿಪತಿ; (*umpire*) ಮಧ್ಯಸ್ತ.

Arbour, s. n. ನಿಕುಂಜ, ಕುಡುಂಗವು.

Arch, s. n. ಕಮಾನು, ಟೂಸು ; (*A house with an arched roof*) ಲದಾವಿನಮಾಳಿಗೆಯಮನೆಯು, or ಕಮಾನಿನಮಾಳಿಗೆಯಮನೆಯು.

To Arch, v. a. ಕಮಾನುಮಾಡ, ಟೂಸುಕಟ್ಟ, ಕಮಾನುಕಟ್ಟ.

Arch-angel, s. n. ಪ್ರಧಾನದೇವದೂತ.

Arched, part. ಕಮಾನಿನ, ಟೂಸಿನ, ಗೊಂಡಾದ, ಗುಂಡಾದ, v. *Bent, curved.*

Archer, s. n. ಧನುರ್ಧಾರಿ, ಬಿಲ್ಲುಗಾರ, ಧನ್ವಿ, ಧನುಷ್ಮಂತನು, ಧಾನುಷ್ಕ, ನಿಷಂಗಿ, ಅಸ್ತ್ರಿ, ಧನುರ್ಧರ.

Archery, s. n. ಶರಾಭ್ಯಾಸ, ಧನುರ್ವಿದ್ಯ, ಉಪಾಸನ, ಬಿಲ್ಲುಸಾಧಕ ; (*skilled in archery*) ಕೃತಹಸ್ತ, ಸುಪ್ರಯೋಗವಿಶಿಖ, ಕೃತಪುಂಖ ; (*unskilled in archery*) ಅಪರಾದ್ಧಪೃಷತ್ಕ.

Architect, s. n. ಶಿಲ್ಪಕಾರ, ಸ್ಥಪತಿ, ಕಾಮಾಟಿ.

Architecture, s. n. ಶಿಲ್ಪಶಾಸ್ತ್ರವು.

Architrave, s. n. ಬೋದಿಗೆ.

Archetype, s. n. ಪ್ರತಿಫಲಿಕೆ, ಲಕ್ಷ್ಯ, ನಕಲು.

Archieves, s. n. ಕಾಯಸದಮನೆ, ದಸ್ತರಖಾನೆ.

Arcturus, s. n. ಸ್ವಾತಿ.

Arcuate, Arcuatile, a. ವಕ್ರ, ಅರಾಳ, ಪ್ರಜಿನ, ಜಿಹ್ಮ, ಊರ್ಮಿಮತ್ತಾದ, ಕುಂಚಿತವಾದ, ನತ, ಆವಿದ್ಧ, ಕುಟಿಲ, ಭುಗ್ನ, ವೆಲ್ಲಿತ, ಡೊಂಕಾದ, ಸೊರಟೂ, ಓರೆಯಾದ, ವಂಕರವಾದ. v. *Bent.*

Arcuation, s. n. ಡೊಂಕು, ವಂಕರೆ. v. *Curvature.*

Ardent, a. ತೀಕ್ಷ್ಣದ, ಚುರುಕಾದ. v. *Fiery.*

Ardently, ad. ತೀಕ್ಷ್ಣವಾಗಿ, ಚುರುಚುರುಕಾಗಿ.

Ardour, s. n. ತೀಕ್ಷ್ಣ, ಆತುರ, ಚುರುಕು. v. *Warmth.*

Arduous, a. ಕಠಿಣವಾದ, ಕಷ್ಟವಾದ, ಶ್ರಮೆಯಾದ, ಬೇಸರಿಕೆಯಾದ, ಆಯಾಸದ, ಪ್ರಯಾಸದ.

Arduousness, s. n. ಪ್ರಯಾಸವು, ಕಷ್ಟವು, ಆಯಾಸವು. v. *Difficulty.*

Are, v. n. They *are* (*mas. and fem.*) ಇದ್ದಾರೆ, ಇರುತಾರೆ ; They *are* (*neuter*) ಅವೆ, ಇದ್ದಾವೆ.

Area, s. n. (*court*) ಗೃಹಾಂಗಣ, ಅಂಗಣ ; (*open place or surface*) ಬಟ್ಟಬಯಲು ; (*an area within a native house*) ಮನೆಯಂಗಳ.

Areca-nut, s. n. ಕ್ರಮುಕ, ಅಡಿಕೆ, ಪೂಗ, ಘೋಂಟಿಯು, ಖಪುರ, ಸುಪಾರಿ, ಉದ್ವೇಗ.

To Argue, v. a. ವಾದಿಸು, ತರ್ಕಿಸು, ಅಧ್ಯಾಹರಿಸು, ಊಹಿಸು. v. *To reason, debate.* (*to accuse*) ಬಾಧ್ಯತೆಹೇಳ. v. *To reproach, blame.*

Arguer, s. n. ತರ್ಕಿಸುವವ, ವಾದಿ, ಊಹಿಸುವವ, ಅಧ್ಯಾಹರಿಸುವವ.

Argument, s. n. ಸಾಧನ, ದೃಷ್ಟಾಂತವು, ಜವಾಬುಸ್ವಾಲು ; That is a weak *argument* ಅದುಬಲಹೀನವಾದಸಾಧನ.

Argumentation, s. n. ತರ್ಕ, ಅಧ್ಯಾಹಾರ, ಊಹ, ವಾದ, ವಾಗ್ವಾದ.

Argumental, Argumentative, a. ವಾಗ್ವಾದವುಳ್ಳ, ತಾರ್ಕಿಕ.

Arid, a. ಒಣಗಿದ, ಕಾದ, ಶುಷ್ಕ, ಅನಾರ್ದ್ರ.

Aries, s. n. (*a celestial sign*) ಮೇಷರಾಶಿಯು.

Aright, ad. ಸರಿಯಾಗಿ, ಯುಕ್ತವಾಗಿ. v. *Right, rightly, justly.*

To Arise, v. n. *(as the sun)* ಸೂರ್ಯನುದಯವಾಗು, ಹೊತ್ತುಹುಟ್ಟು; *(to get up from a seat, &c.)* ಯೇಳು, ಏಳು; *(to proceed from)* ಹುಟ್ಟು, ಆಗು, ಸಂಭವಿಸು; *(to awake)* ಯೆಚ್ಚರ, ಎಚ್ಚರ; How did this dispute *arise?* ಈಜಗಳವು ಹ್ಯಾಗೆಹುಟ್ಟಿತು, or ಈವಿವಾದಹಾಂಗೆಹುಟ್ಟಿತು.

Aristocracy, s. n. ಬಹುನಾಯಕತ್ವ.

Arithmetic, s. n. ಗಣಿತ, ಸಂಕಲಿತ, ಲೆಖ್ಖ, ಲೆಖ್ಖಷೋಖ್ಖ; *(book of)* ಗಣಿತಪುಸ್ತಕ, ಲೆಖ್ಖದವಹಿ.

Arithmetician, s. n. ಗಣಕ, ಕರಣಿಕ.

Ark, s. n. *(of Noah)* ನಾವೆ, ಹಡಗ; *(a chest)* ಪೆಟ್ಟಿಗೆ; *(of the covenant)* ಒಡಂಬಡಿಕೆಯಪೆಟ್ಟಿಗೆಯು. v. *Casket, coffer, press, repository.*

Arm, s. n. *(human)* ಭುಜ, ಬಾಹು, ತೋಳು, ಪ್ರವೇಷ್ಟವು; *(of a tree)* ಹಂಗಲು, ಕೊಂಬೆಯು, ಶಾಖೆಯು; *(of the sea)* ಸರಿವೆ, ಕಾರು, ಕಾಲು; *(the measure of the two arms stretched out)* ಮಾರು, ವ್ಯಾಮವು; Keep at *arm's length* ನನ್ನಕೈಗೆನಿಲುಕದಸ್ಥಳದಲ್ಲಿರು, or ನನಗಂದದಸ್ಥಳದಲ್ಲಿರು, or ನನಗೆದೂರದಲ್ಲಿರು; *(Arm hole)* ಕಕ್ಷವು, ಕಂಕುಳು, ಬಾಹುಮೂಲವು; *(Arm chair)* ಬಗಲಕುರಿಚೆ; *(A strong arm)* ಬಲವಾದಭುಜ.

To Arm, v. a. ಆಯುಧಧರಿಸು, ಮುಸ್ತೈದಿಮಾಡು.

Armed, part. ಆಯುಧಧರಿಸಿದ, ಸಜ್ಜ, ದಂಶಿತ, ವ್ಯೂಢಕಂಟಕ, ತನುತ್ರಾಣಧರಿಸಲ್ಪಟ್ಟ, ತನುತ್ರತೊಟ್ಟುಕೊಳ್ಳಲ್ಪಟ್ಟ, ದಂಶನಹೊರಲ್ಪಟ್ಟ, ಸನ್ನದ್ಧ, ವರ್ಮಿತ.

Arm-full, s. n. ಮಡಿಲುತುಂಬಿದ್ದು.

Armour, s. n. ಸವಗ, ಜೋಡು, ಮುಸ್ತೈದು, ತನುತ್ರವು, ತನುತ್ರಾಣವು, ಯೋಗ, ವರ್ಮ, ದಂಶನ; *(for breast)* ವಾರವಾಣ, ಕಂಚುಕ, ಯೆದೆಕಾಯುವಬಿಲ್ಲೆ; *(for elephant, horse, &c.)* ಜಯನ, ಗಜತನುತ್ರವು.

Armour-bearer, s. n. ಶಸ್ತ್ರವಾಹಕ, ಆಯುಧಹೊರುವವನು.

Armourer, s. n. ಯೋಧಕಾರಕ, ಯಂತ್ರಗಾರ, ಚಿಕಲಿಗಾರ.

Armoury, s. n. ಆಯುಧಶಾಲೆ. v. *Arsenal.*

Armlet, s. n. *(a bracelet for the arm)* ಭುಜಕೀರ್ತಿ, ಅಂಗದ, ತೋಳುಬಳೆ, ಕೇಯೂರ.

Arm-pit, s. n. ಕೊಂಕುಳು, ಕಕ್ಷವು.

Arms, s. n. ಯುದ್ಧೋಪಕರಣವು, ಶಸ್ತ್ರ, ಅಸ್ತ್ರ, ಪ್ರಹರಣ; *(fire arms)* ಅಗ್ನಿಯಂತ್ರವು, ಬಾಣ, ಬಿರುಸು. v. *Weapons, arms, shields, &c.* The soldiers are all in *arms* ಕಾಲುಬಲವೆಲ್ಲಾ ಮುಸ್ತೈದಾಗಿಯಿದೆ, or ಪದಾತಿಗಳೆಲ್ಲರೂ ಸನ್ನದ್ಧರಾಗಿದಾರೆ; *(to sound to arms)* ಕೂಗುಮಾಡಿಸು, ಸನ್ನೆಮಾಡು, ಹುಯಿಲುತಪಟೆಬಡಿಯು.

Army, s. n. ದಂಡು, ಸೇನೆ, ಸೈನ್ಯ, ಪತಾಕಿನಿ, ಧ್ವಜಿನಿ, ಪೃತನೆ, ವಾಹಿನಿ, ಅನೀಕಿನಿ, ಚಮೂ, ಲಷ್ಕರು, ಫೌಜು, ಬಲ, ಚಕ್ರ, ಅನೀಕ; *(a complete army)* ಅಕ್ಷೋಹಿಣಿ, this, among the Hindoos, consists of 109,350 foot, 65,610 horse, 21,870 chariots, and 21,870 elephants. *(the rear of an army)* ಪ್ರತ್ಯಾಸಾರ, ವ್ಯೂಹಪಾ

ಸೈನ್ಯ; (*the reserve of an army*) ಪ್ರತಿಗ್ರಹ; (*a platoon*) ಪತ್ತಿ, comprising one elephant, one chariot, three horse, and five foot; (*a well disciplined army*) ಕೃತಹಸ್ತ ಸೇನೆಯು, ಕೃತಪುಂಖಾನೀಕವು; (*a raw undisciplined army*) ಬೇಖಾಪುದಂಡು, ಅಕೃತಾಸ್ತ್ರ ಸೇನೆಯು; (*a victorious army*) ಜಿತಾನೀಕವು, ಜಯಿಸಿದ ದಂಡು; (*to encamp an army*) ದಂಡಿಳಿಸು; (*to levy or embody an army*) ದಂಡಿಡು, ಫೌಜಿಡು, ದಳವಿಡು; (*the leader of an army*) ದಳವಾಯಿ, ದಳಪತಿ, ಸೇನಾನಿಯು, ವಾಹಿನೀಪತಿ; (*the review of an army*) ಮುಸುಲಮಾಡುವದು; (*component part of an army*) ಸೇನಾಂಗ; (*to rout an army*) ದಂಡುಮುರಿಯಿಸು; (*to be routed as an army*) ಮುರಿಯು; (*assembling of a complete army*) ಸರ್ವಾಭಿಸಾರ, ಸರ್ವೌಘ, ಸರ್ವಸನ್ನಹನ, ಪಡೆಮಾಡುವದು; (*an army in motion*) ತೆರಳಿದ ದಳವು, ಪ್ರಚಕ್ರವು; (*an army in great disorder*) ಕಲಗಿದ ಸೇನೆಯು, ಸಮುತ್ಪಿಂಜ, ಪಿಂಜಲ. v. Also *troop, squadron, infantry, cavalry.*

Aromatic, a. ಸುಗಂಧದ. v. *Fragrant, spicy.*

Around, ad. ಸುತ್ತುಮುತ್ತಾಗಿ, ಸುತ್ತಾಗಿ. v. *Round, about.*

To Arouse, v. a. (*to awake*) ಎಬ್ಬಿಸು, ಎಚ್ಚರಿಸು, ಜಾಗ್ರತೆಮಾಡು; (*to stir up*) ಪ್ರೇರೇಪಿಸು, ಉಬ್ಬಗೆಮಾಡು. v. *To awake, excite.*

Arrack, s. n. ಸಾರಾಯಿ.

To Arraign, v. a. ನಿಂದೆಗೊಳಿಸು, ತಪ್ಪುಗೊಳಿಸು, ಅಪರಾಧಗೊಳಿಸು. v. *To aceuse.*

Arraignment, s. n. ವ್ಯಪದೇಶ, ದೂರು, ಪರಿವಾದವು, ಅಭಿಶಸ್ತಿ.

To Arrange, v. a. ಸರಿಮಾಡು, ನೆಟ್ಟಗೆಮಾಡು, ಪೋಣಿಸು, ಹೊಂದಿಕೆಯಾಗಿಡು, ಸಂಸ್ಥೆಮಾಡು. v. *To put in order, to regulate.*

Arranged, part. ಪೋಣಿಸಿದ, ಹೊಂದಿಕೆಯಾಗಿಟ್ಟ, ಸಂಸ್ಥಿತ, ಸಂಕಲಿತ.

Arrangement, s. n. ಕ್ರಮವಾಗಿಡೋಣ, ಮಂಡಣೆ, ಜೋಕ್ಕಟವಾಗಿರಿಸೋಣ, ಬಂದೋಬಸ್ತು. v. *Order.*

Arranger, s. n. ಪೋಣಿಸುವವ, ನೆಟ್ಟಗೆಮಾಡುವವ, ಹೊಂದಿಕೆಯಾಗಿಡುವವ.

Arrant, a. ಮಹಾಕೆಟ್ಟ. v. *Villainous, shameful.*

Array, s. n. (*order*) ಪಂಕ್ತಿ, ಸಾಲು, ವರಸೆ, ಶ್ರೇಣಿ; (*dress*) ಪೋಷಾಕು, ಉಡಿಗೆ, ವಸ್ತ್ರ; (*military array*) ವ್ಯೂಹ, ಬಲವಿನ್ಯಾಸ; (*in line*) ದಂಡವ್ಯೂಹ; (*in column*) ಭೋಗವ್ಯೂಹ; (*in circle*) ಮಂಡಲವ್ಯೂಹ. The Hindoos speak of several other kinds of military array; as, (*ear shape array*) ಶಕಟವ್ಯೂಹ; (*array in marine monster shape*) ಮಕರವ್ಯೂಹ; (*array in the ferm of a flag*) ಪತಾಕವ್ಯೂಹ.

To Array, v. a. (*to set in order*) ಸಾಲಾಗಿನಿಲ್ಲಿಸು, ಹೊಂದಿಕೆಯಾಗಿಡು; (*to dress*) ತೊಡಿಸು, ಧರಿಸು.

Arrayer, s. n. ಸಾಲಾಗಿನಿಲ್ಲಿಸುವವ.

Arrear, Arrears, Arrearage, s. n. ನಿಲುವುಬಾಕಿ, ನಿಲುಹು ಬಾಕಿ; He is in *arrears* to the merchant ಅವನು ವರ್ತಕನಿಗೆ ಬಾಕಿಯಿದ್ದಾನೆ.

Arrest, s. n. ದುರಾಯಿ, ಅಡಗಾಣಿಕೆ, ನಿರ್ಬಂಧ, ಪಾರೇಯಿಹಾಕೋಣ.

To Arrest, v. a. ದುರಾಯಿಕಟ್ಟು, ನಿರ್ಬಂಧಮಾಡು, ಪಾರೇಯಿಹಾಕು.

Arrested, part. ಅಡಗಾಣಿಸಪಟ್ಟ, ದುರಾಯಿಕಟ್ಟಿದ, ನಿರ್ಬಂಧಮಾಡಲ್ಪಟ್ಟ, ಪಾರೇಯಿಹಾಕಲ್ಪಟ್ಟ; He is *arrested* for debt ಅವನು ಸಾಲಕ್ಕೋಸ್ಕರ ದುರಾಯಿಹಾಕಿದ್ದಾನೆ, or ಅವನು ಋಣನಿಮಿತ್ತ ದುರಾಯಿಯಲ್ಲಿದ್ದಾನೆ; He is under an *arrest* ಅವನು ಪಹರೆಯಲ್ಲಿದ್ದಾನೆ, or ಅವನ ಪಹರಾಹಾಕಿದ್ದಾರೆ, or ಅವನು ಕಾಶೆಯಲ್ಲಿದ್ದಾನೆ.

Arrival, s. n. ಸೇರಿಕೆ, ದಾಖಲು, ಮುಟ್ಟುವಿಕೆ; Have you heard of the king's *arrival*? ಅರಸು ಸೇರಿದ ವರ್ತಮಾನವೇನಾದರೂ ಕೇಳಿದಿಯೋ.

To Arrive, v. n. ಸೇರು, ಮುಟ್ಟು. v. *To come, reach, gain, happen.*

Arrogance, Arrogantness, s. n. ಉದ್ಧತಮನಸ್ಕತ್ವ, ಡಂಭ, ಬಡಾಯಿ, ಉತ್ಸೇಕವು, ಠೇಕರ, ದಾಷ್ಟೀಕತನವು, ಮಾನವು, ಚಿತ್ತಸಮುನ್ನತಿಯು. v. *Pride, presumption.*

To Arrogate, v. a. ಒಡ್ಡವಣೆಮಾಡು, ಉದ್ಧತವಾಗು, ದುರಭಿಮಾನಿಸು. v. *To presume.*

Arrogant, a. ಠೇಕರದ, ದುರಭಿಮಾನವುಳ್ಳ. v. *Proud, self-conceited.*

Arrogantly, ad. ಠೇಕರವಾಗಿ, ದುರಭಿಮಾನವಾಗಿ.

Arrow, s. n. ಅಂಬು, ಸರಳು, ಪಣಂಬು, ಕೋಲು, ಕಣೆ, ಬಾಣ, ಪೃಷತ್ಕ, ವಿಶಿಖ, ಅಜಿಹ್ಮಗ, ಖಗ, ಆಶುಗ, ಕಲಂಬ, ಮಾರ್ಗಣ, ಶರ, ಪತ್ರಿ, ರೋಪ, ಇಷು; *(poisoned arrows)* ವಿಷಹಚ್ಚಿದ, ದಿಗ್ಧ, ಲಿಪ್ತಕ; *(iron arrows)* ಪ್ರಕ್ಷ್ವೇಡನ, ನಾರಾಚ; *(the feathers of an arrow)* ಕೈಪೊಡೆ, ಪಕ್ಷ, ವಾಜ, ಅಂಬಿನಗರಿ; *(the point of an arrow)* ಬಾಣದಗ್ರ, ಅಂಬಿನಮೊನೆ; *(a quiver for arrows)* ಬತ್ತಳಿಕೆ, ದೊಣೆ, ಕೊದೆ, ಮೂಡಿಗೆ, ತೂಣ, ಉಪಾಸಂಗ, ತೂಣೀರ, ನಿಷಂಗ, ಇಷುಧಿ, ತೂಣಿ; *(to shoot an arrow)* ಅಂಬೆಸೆಯು, ಬಾಣಪ್ರಯೋಗಿಸು; *(bow and arrow)* ಬಿಲ್ಲುಬಾಣ.

Arrow-maker, s. n. ಬಾಣಶಿಲ್ಪಿ.

Arse, s. n. ಆಸನ, ಕುಂಡಿ, ಪಶ್ಚಿಮದ್ವಾರ, ಅಪಾನ, ಅಧೋಭಾಗ, ಗುದವು.

Arsenal, s. n. ಆಯುಧಶಾಲೆ. v. *Magazine.*

Arsenic, s. n. ಪಾಷಾಣವು.

Arson, s. n. ಕಿಚ್ಚೋಟಿಕೆ.

Art, s. n. *(skill)* ನೈಪುಣ್ಯ, ಚಾತುರ್ಯ, ಚಮತ್ಕಾರಿಕೆ, ಕುಶಲತ್ವ, ಜಾಣತನ, *(trade)* ಶಿಲ್ಪ, ಗೇಮೆ, ನೌಕರಿ, ಬದುಕು; *(cunning)* ತಂತ್ರ, ಕೃತ್ರಿಮ. v. *Dexterity, industry, science, profession, trade.*

Artery, s. n. ಪಿಂಗಳನಾಡಿ, ಜೀಕೇನರ.

Artful, a. *(cunning)* ಮಹಾಉಪಾಯವುಳ್ಳ, ತಂತ್ರವುಳ್ಳ, ಕೃತ್ರಿಮವುಳ್ಳ; *(skilful)* ನಿಪುಣವುಳ್ಳ, ಜಾಣತನವುಳ್ಳ, ಚಮತ್ಕಾರವುಳ್ಳ.

Artfully, ad. *(skilfully)* ಉಪಾಯವಾಗಿ, ಯುಕ್ತಿಯಾಗಿ, ಜಾಣತನವಾಗಿ, ಕುಶಲವಾಗಿ.

Artfulness, s. n. *(cunning)* ಕೃತ್ರಿಮ, ತಂತ್ರ; *(skill)* ಜಾಣತನ, ನಿಪುಣ, ಚಮತ್ಕಾರ. v. *Art, cunning, skill.*

Arthritic, s. n. ವಾತರೋಗವುಳ್ಳ.

Article. In the Canarese language the English definite and indefinite *articles* are both, in general, considered as inherent in the noun. (*vide* A and The.)

Article, s. n. *(clause)* ಪಟ್ಟು, ಸಂಗತಿ; *(of trade)* ಸರಕು, ದಿನಸು; *(of religion)* ಒಂದು ಸಂಪ್ರದಾಯವು, ಒಂದು ಮತವಿಧಿಯು.

Articulate, a. ವ್ಯಕ್ತವಾದ, ಸ್ಪಷ್ಟವಾದ. v. *Distinct.* *(divided)* ಪ್ರತ್ಯೇಕಿಸಲ್ಪಟ್ಟ, ಇಂಗಡಿಂಗಡವಾದ, ಛೇದಿಸಿದ, ಅಲಾಹಿದೆಯಾದ.

To Articulate, v. a. *(to form words)* ಉಚ್ಚರಿಸು, ನುಡಿಯು, ಮಾತಾಡು. v. *To pronounce, speak.* *(to speak distinctly)* ವ್ಯಕ್ತವಾಗಿ ಹೇಳು, ಉಚ್ಚಾರಣೆಚೆಂನಾಗಿ ಹೇಳು; Is my *articulation* correct? ನನ್ನ ಶಬ್ದವು ವ್ಯಕ್ತವೋ, or ನನ್ನ ಶಬ್ದವು ಉಚ್ಚಾರಣೆಚೆಂನಾಗಿದೆಯೋ, or ನನ್ನ ಬಾಯಿ ಚೆಂನಾಗಿ ತಿರುಗುತಿದೆಯೋ.

Articulation, s. n. ಉಚ್ಚಾರಣೆಯು, ನುಡಿಯೋಣ. v. *Speech.* *(jointure)* ಹೊಂದಿಸುವದು.

Artifice, s. n. ತಂತ್ರ, ಜಾಲ, ಉಪಾಯ, ಕೃತ್ರಿಮವು. v. *Fraud, art, deceit, stratagem.* *(trade)* ಉದ್ಯೋಗವು, ಕೆಲಸವು, ಕೈಮೆ, ಬದುಕು.

Artificer, s. n. ಶಿಲ್ಪಕಾರನು, ಕರ್ಮಕಾರನು. v. *Tradesman, contriver.*

Artificial, a. *(made by art)* ಕೃತಕದ, ಕೈಗಾರಿಕೆಯ; *(fictitious)* ಕಲ್ಪನೆಯಾದ, ಮಾಯವಾದ. v. Also *artful.*

Artificially, ad. *(by art)* ಕೃತಕವಾಗಿ; *(with skill)* ಚಮತ್ಕಾರವಾಗಿ, ನಿಪುಣವಾಗಿ, ಜಾಣವಾಗಿ.

Artillery, s. n. ಗೋಲಂದಾಜ, ಮದ್ದುಗುಂಡು, ಅಗ್ನಿಯಂತ್ರಗಳು.

Artisan, Artist, s. n. ಶಿಲ್ಪಕಾರ, ಕಾರು, ಕೈವಾಡದವನು. v. *Artificer, tradesman.*

Artless, a. *(without skill)* ಅಚಮತ್ಕಾರದ, ಅಚತುರ, ಅಕೃತ್ರಿಮ ಕರ್ಮ, ಕೈವಾಡವಾದ; *(simple, guileless)* ಸಾಧುವಾದ, ನಿಷ್ಕಪಟಿಯಾದ. v. *Innocent, harmless.*

As, conj. ಹಾಗೆ, ಹೇಗೆ, ಹಾಂಗೆ, ಹೇಂಗೆ, ಪ್ರಕಾರ, ಅಪ್ಪಂದ, ಅಂತೆ; *(like).* Bring the same *as* this ನೀನಿದರಂಥಾದ್ದೇ ತೆಗೆದುಕೊಂಡುಬಾ; *(while)* *As* I was going along the street I met him ನಾನುಬೀದಿಯಲ್ಲಿಹೋಗುವಾಗಲವಂನನ್ನ ಭೇಟಿಸಿದನು; *(because)* *As* he desired you to go do not delay ನಿಂನವನುಹೋಗೆಂದು ಹೇಳಿದ್ದರಿಂದನೀಯಾಲಸ್ಯವು ಮಾಡಬೇಡ; *(comparative)* This shines *as* bright *as* the sun ಇದುಸೂರ್ಯನಹಾಗೆಯೇಬೆಳಗುತ್ತದೆ, or ಇದುಸೂರ್ಯನೆಷ್ಟುಥಳಥಳಿಸುತ್ತಾನೋಅಷ್ಟುಥಳಥಳಿಸುತ್ತದೆ; Take *as* many *as* you want ನಿನಗೆಷ್ಟುಬೇಕೋಅಷ್ಟು ತೆಕೋ; or ನಿನಗೆಬೇಕಾದಷ್ಟು ತೆಗೆದುಕೋ; Bring *as* much *as* you can ನಿಂನಿಂದಾದಷ್ಟು ತೆಗೆದುಕೊಂಡುಬಾ, or ನಿನ್ನ ಕೈಲಾದಷ್ಟು ತಾ; I want *as* much *as* you have got ನಿನಗೆಷ್ಟಿದೆಯೋಅಷ್ಟುನನಗೆಬೇಕು, or ನಿನಗಿದ್ದಷ್ಟುನನಗೆಬೇಕು; Give me *as* many *as* you can spare ನಿನಗೆಬೇಕಿಲ್ಲದವುಗಳೆಷ್ಟಿವೆಯೋಅಷ್ಟುಕೊಡು, or ನೀಕೊಟ್ಟಷ್ಟುಕೊಡು; It must be *as* long *as* wide, and *as* thick *as* this ಇದೆಷ್ಟಗಲಾ ಮೊಳೆ ದಪ್ಪವಿರುವದೋ ಅದು

ಹಾಗೆಯೇಯಿರಬೇಕಾದ್ದು; Come *as* often *as* you like ನಿನಗೆ ಮನಸ್ಸುಬಂದಾಗ ಬಾ, or ನೀನಾವಾಗ ಬೇಕೆಂದರಾಗ ಬಾ; Do it *as* well *as* this ಇದು ಚೆಂನಾಗದರ ಹಾಗೆಯೇ ಮಾಡು, or ಅದರ ಸ್ಪಂದದಿದರಂತ ಮಾಡು; I treated him *as* kindly *as* though he had been my brother ನಾನವಂನ ನನ್ನವಡಹುಟ್ಟಿದವನ ಹಾಗೆಯೇ ಪ್ರೀತಿಯಾಗಾದರಿಸಿದೆನು; This is *as* much like that *as* can be ಇದದರ ಹಾಗೆಯೇ; *As* he walked across the road a horse ran over him ಅವನು ಹಾದಿಯಲ್ಲಿ ಹಾದುಹೋಗುವಾಗ ಕುದುರೆಯವಂ ನಹಾಯಿತು; This child is *as* big again *as* that ಈಮಗುವದಕಿಂ ಮಡಿದೊಡ್ಡದು; *As* rich *as* he is, he may one day become poor ಅವನೆಷ್ಟುಭಾಗ್ಯವಂತನಾಗಿದ್ದರೂವಂದುವ್ಯಾಳ್ಯ ದರಿದ್ರನಾಗಬಹುದು; *As* I cannot come to you, you must come to me ನಾನು ನಿನ್ನಬಳಿಗೆ ಬರಲಾಗದದುಕಾರಣ ನೀನು ನನ್ನಬಳಿಗೆ ಬರಬೇಕಾದ್ದು; *As* long *as* there is rain the river continues full ಮಳೆಯೆಷ್ಟುದಿವಸವಿರುವದೋ ಅಷ್ಟುದಿವಸವು ನದಿ ಪೂರ್ಣ ಪ್ರವಾಹವಾಗಿರುವದು; Do *as* I told you ನಾಹೇಳಿದ ಹಾಗೆ ಮಾಡು; Love thy neighbour *as* thyself ನಿನ್ನ ಹಾಗೆಯೇ ನಿನ್ನ ನೆರಮನೆಯವಂನ ಸ್ನೇಹಿಸು, or ನಿನ್ನ ಹಾಗೆಯೇ ನಿನ್ನ ನೆರಮನೆಯವನನ್ನ ನೋಡಿಕೊ; *As* for this man we know not what to do with him ಇವಂನಾದರೆ ನಾವೇನು ಮಾಡುವದ ನಮಗೇನೂ ತಿಳಿಯದು.

Ascarides, s. n. ಕಿಚಿಬೇಹುಳ.

To Ascend, v. a. ಯೇರ, ಮೇಲಕ್ಕೆಹೋಗ. v. *To rise.*

Ascendant, s. n. (*height*) ಯತ್ತರ, ಉಚ್ಚ; (*influence*) ಅಧಿಕಾರ.

Ascendency, s. n. ಆಧಿಕ್ಯ, ಅತಿಕ್ರಮ. v. *Influence, power.*

Ascension, s. n. (*in astronomy*) ಲಗ್ನವು.

Ascension, Ascent, s. n. ಏರೋಣ, ಯೇರೋಣ, ದಿಣ್ಣೆ; (*ascent & descent*) ತಗ್ಗದಿಂಣೆ, or *uneven ground.*

To Ascertain, v. a. ನಿರ್ಧಾರಮಾಡ, ನಿಶ್ಚೈಸ, ಸ್ಥಾಪಿಸ. v. *To fix, determine, confirm, establish.*

Ascertainment, s. n. ನಿರ್ಧಾರಿಕೆ, ಧ್ರುವವು, ಸ್ಥಾಪನೆ. v. *Confirmation.*

Ascetic, s. ತಪಸ್ವಿ, ತಪೋಶೀಲ, ಆತ್ಮೈಕ್ಯಸಂಧಾನಿ, ತಪೋಧನನು, ಪರಿಕಾಂಕ್ಷಿತ, ತಪಸಿ.

Ashamed, part. ನಾಚಿಕೆಪಟ್ಟ, ಲಜ್ಜಿತ, ಹ್ರೀತ, ಹ್ರೀಣ, ಶಿಗ್ಗಪಟ್ಟ; Are you not *ashamed of* your evil conduct? ನೀನು ನಿನ್ನ ದುರ್ಮಾರ್ಗತನಕ್ಕೆ ನಾಚಿಕೆಪಡುವದಿಲ್ಲವೋ; This man is *ashamed of* nothing ಇವನು ದಾವದಕ್ಕೂ ಹ್ಯಾಸನು.

To be Ashamed, v. n. ನಾಚಿಕೆಪಡ, ಲಜ್ಜೆಗೊಳ್ಳ, ಮಂದಾಕ್ಷಪಡ.

Ashes, s. n. ಬೂದಿ, ಭಸ್ಮ, ಧೂಳಿ, ಭಸಿತ; (*of the dead*) ಚಿತಾಭಸ್ಮ; (*ashes of cow dung, &c. with which Siva is said to have smeared his*

body, and thence used in imitation of him by devotees) ವಿಭೂತಿ.

Ashore, ad. ದಡದಲ್ಲಿ, ತೀರದಲ್ಲಿ. v. *Shore, coast.* We came *ashore* yesterday ನಿಂನೆನಾವುಹಡಗವಂಬಿಟ್ಟುದಡಕ್ಕೆಬಂದಿವಿ; A foul wind ran the ship *ashore* ಸುಳಿಗಾಳಿಹಡಗವಂದಡಕ್ಕೆನೂಕಿತು.

Aside, ad. ಪಕ್ಕವಾಗಿ, ವರಗಾಗಿ. v. *Apart, alone, separately. (to put aside)* ಕಡೆಗೆಹಾಕು; Put it *aside* ಅದೊಂದುಕಡೆಹಾಕಿಬಿಡು, or ಅದರಲ್ಲಿ ಹಾಕಿಬಿಡು; *(to go aside)* ವರಗ, ವರಗಾಗಿ ಹೋಗ, ಒತ್ತ; *(to set aside)* ತೆಗೆದುಹಾಕು, ನಿಲ್ಲಿಸು; *(to speak to aside)* ಕಡೆಗಾಗಿಮಾತಾಡು; *(to throw aside)* ಬಿಸಾಡು, ಬಿಸುಡು, ಬಿಸಾಟುಬಿಡು; *(to call aside)* ಕಡೆಗೆಕರಿಯು.

To Ask, v. a. ಕೇಳು, ಯಾಚಿಸು, ಬೆಸಗೊಳ್ಳು, ಬೇಡು; *(to ask for)* ವಿಚಾರಿಸು. v. *To question, implore, beg, demand, claim, enquire, require.*

Asker, s. n. ಕೇಳುವವ. v. *Petitioner, enquirer.*

Aslant, ad. ವಾರಿಗಾಗಿ, ಪಕ್ಕೆಯಾಗಿ. v. *Obliquely.*

Asleep, ad. ನಿದ್ರಾಣ, ಶಯಿತ. v. *Sleepy, drowsy.* He is *asleep* ಅವನುಮಲಗುತಾನೆ, ro ಅವನುನಿದ್ರೆಯುಲ್ಲಾನೆ; The people are all *asleep*; ಜನರೆಲ್ಲರುಮಲಗಿದ್ದಾರೆ; *(to be asleep as the foot, &c.)* ಜ್ಯಾಗೇರು, ಜ್ಯಾಮುಹಿಡಿಯು; My foot is *asleep* ನನ್ನಕಾಲುಜ್ಯಾಮುಹಿಡಿದದೆ, or ನನ್ನ ಕಾಲುಜ್ಯಾಗುತಂಬಿಯದೆ.

Aslope, ad. ವಾರಿಗಾಗಿ, ಪಕ್ಕೆಯಾಗಿ, ಕಡೆಯಾಗಿ, ಡೊಂಕಾಗಿ, ಓರೆಯಾಗಿ.

Asp, s. n. ವಿಷದಸರ್ಪ.

Aspect, s. n. *(appearance)* ತೋರುವಿಕೆ, ತೋರು ವಿಕೆ; *(face)* ಮುಖ, ಮೋರೆ. v. *Countenance, face, appearance. (glance)* ನೋಟ, ದರ್ಶನ.

Asperity, s. n. ಮೊರಡುತನ, ಕಠಿನತ್ವ, ನಿರ್ದಯತ್ವ. v. *Sternness, roughness, unfeelingness.*

Asperous, a. *(uneven)* ಯಗ್ಗುಡಿಗ್ಗಾದ.

To Asperse, v. a. ವ್ಯಪದೇಶಹಾಕು, ಬಾಧ್ಯಹೇಳು, ಆಕ್ಷೇಪಿಸು. v. *To calumniate, censure. (to sprinkle)* ಚಿಂಮಿಕಿಸು.

Aspersion, s. n. ವ್ಯಪದೇಶ, ದೂರು. v. *Calumny. (sprinkling)* ಚಿಮಿಕಿಸೋಣ.

Aspirate, a. ಮಹಾಪ್ರಾಣದ; *(an aspirate)* ಮಹಾಪ್ರಾಣಾಕ್ಷರ.

To Aspirate, v. a. *(to pronounce with full breath)* ವತ್ತಿಹೇಳು, ಮಹಾಪ್ರಾಣವಾಗಿಹೇಳು.

Aspiration, s. n. *(pronouncing with full breath)* ವ್ಯಕ್ತವಾಗಿನುಡಿಯೋಣ; *(ardent wish)* ಅತ್ಯಾಶೆ, ಅತ್ಯಾಪೇಕ್ಷೆ. v. *Ambition, desire.*

To Aspire, v. a. ವಾಂಛಿಸು, ಅತ್ಯಾಪೇಕ್ಷಿಸು.

Aspirer, s. n. ಧಾರ್ಷ್ಟೀಕನು, ಅಧಿಕಪ್ರಸಂಗಿಯು.

Aspiring, a. ಧಾರ್ಷ್ಟೀಕತನವುಳ್ಳ, ಅತ್ಯಾಶೆಯುಳ್ಳ, ಅಧಿಕಪ್ರಸಂಗವುಳ್ಳ.

Asquint, ad. ಕ್ರೋರೆಗಣ್ಣಾವಾಗಿ, ವಕ್ರವಾಗಿ, ತಿಕರವಾಗಿ. v. *Obliquely, transversely.*

Ass, s. n. ಕತ್ತೆ, ಗಾರ್ಧಭ, ಖರ, ರಾಸಭ, ಚಕ್ರೀವಂತವು, ಬಾಲೇಯವು; *(male)* ಗಂಡುಕತ್ತೆ; *(she)* ಹೆಂಣುಕತ್ತೆ; *(foal)* ಕತ್ತೆಮರಿ.

Assafœtida, s. n. ಹಿಂಗು, ರಮಠ, ಬಳಿಕುಡು, ರಾಮಠ, ಇಂಗು, ಸಹಸ್ರವೇಧಿ, ಜತುಕ, ಬಾಹ್ಲಿಕ.

To Assail, v. a. ಹೋಗಿಬೀಳು, ಮೇಲಿಬೀಳು, ಅಭಿಯೋಗಿಸು, ಅಭಿಗ್ರಹಿಸು.

Assailant, s. n. ವಾದಿ, ಪಕ್ಷಿ.

Assassin, s. n. ಪ್ರಾಣಘಾತಕ, ಕೊಲೆಪಾತಕ.

To Assassinate, v. a. ಕೊಲ್ಲು, ಕೊಂದುಹಾಕು, ನರಹತೆಮಾಡು, ಪ್ರಾಣಘಾತಮಾಡು. v. *To murder, kill, slay.*

Assassination, s. n. ಪ್ರಾಣಘಾತ, ಕೊಲೆ, ಹಿಂಸೆ, ಸಂಹರಣೆ.

Assault, s. n. ಮೇಲೆಬೀಳುವಿಕೆ, ಅಭಿಯೋಗ, ಅಭಿಗ್ರಹ, ದುಡುಕು. v. *Attack, storm, invasion, hostility, violence.*

To Assault, v. a. ಹೋಗಿಬೀಳು, ಮೇಲಿಬೀಳು.

Assay, s. n. *(of metals)* ಶೋಧನೆ. v. Also, *essay, proof, experiment, attempt.*

To Assay, v. a. *(metals)* ಪರೀಕ್ಷಿಸು, ಶೋಧಿಸು, ಪುಟಹಾಕು; *(to attempt)* ವಿಚಾರಿಸು, ನೋಡು. v. *To prove, try, endeavour.*

Assayer, s. n. ಶೋಧಕನು, ಪರೀಕ್ಷಕನು, ಲೋಹಶೋಧಕನು.

Assemblage, s. n. *(in Carnáṭaca)* ಗೊಂದಣೆ, ತರಳೆ, ಸಾಲು, ಒಬ್ಬುಳಿ, ಹೊರಳಿ, ಬಳಗ, ದೊಂದುಳಿ, ಕದಳಿ, ಗೊಂಚೆ, ಜಂಗುಳಿ, ನೆರವಿ, ಥಟ್ಟು, ಬಿಂದು, ಶಿಂಧಿಗೆ, ತಿಮ್ಮ, ವಗ್ಗ, ವಂಗಡ, ಸಂತೆ, ಮೊತ್ತ, ಮೊಕ್ಕಳ, ಮೊಗ್ಗರ, ಸಂದಣೆ, ಪಸರ, ಪಿಂಡು, ಹಿಂಡು, ಸೋಗೆ, ಪಟ್ಟು, ಕಿಕ್ಕಿಂದ, ತಂಡ, ಗುಮ್ಮಿ, ಗುಂಡು, ಬಂಬಲು, ತುರಗ, ಉಂಡಲು, ಪೊಟ್ಟಿಲು, ಗುಂಪು, ಲೋಮ, ಗದಣ, ಜಾಳಿಗೆ, ಗೊಂಚೆ; *(in Sanscrit)* ಸಮೂಹ, ನಿವಹ, ವ್ಯೂಹ, ಸಂದೋಹ, ವಿಸರ, ವ್ರಜ, ಸ್ತೋಮ, ಓಘ, ನಿಕರ, ವ್ರಾತ, ವಾರ, ಸಂಘಾತ, ಸಂಚಯ, ಸಮುದಾಯ, ಸಮುದಯ. ಸಮವಾಯ, ಚಯ, ಗಣ, ಸಂಹತಿ, ಬೃಂದ, ನಿಕುರುಂಬ, ಕದಂಬಕ, ಪುಂಜ, ರಾಶಿ, ಉತ್ಕರ, ಕೂಟ, v. *Collection, accumulation.*

To Assemble, v. a. *(bring together)* ಕೂಡಿಸು, ಜಮೆಮಾಡು, ಕುಪ್ಪೆಮಾಡು. v. *To accumulate, collect*: *(to meet together)* ಕೂಡಿಬರು, ಕೂಡಿಕೊಳ್ಳು, ಗುಂಪುಗೂಡು, ಸಂಮರ್ದವಾಗು. v. *to meet*: *(to call together)* ಕೂಡಿಸು, ಗುಂಪುಗೂಡಿಸು. v. *To convoke, summon, invite*: *(to assemble an army)* ಕೂಟಮಾಡಿಸು, ಸನ್ನೆಮಾಡು.

Assembly, s. n. ಆಸಾನಿ, ಸದಸ್ಸು, ಗುಂಪು, ಸಭೆ, ಪರಿಷತ್ತು, ಪ್ರತಿಶ್ರಯವು, ಸಮಜ್ಯೆ, ಗೋಷ್ಠಿ, ಸಮಿತಿ, ಸಂಸತ್ತು, ಆಸ್ಥಾನ.

Assent, s. n. ಒಪ್ಪಿಗೆ, ಸಮ್ಮತಿ, ಸಮರ್ಥಕ, ಒಪ್ಪಂದ. v. *Consent, agreement.*

To Assent, v. a. ಒಪ್ಪು, ವಲ್ಲಿತೆನು, ಹವುದೆನು, ಸಮ್ಮತಿಸು, ಅಂಗೀಕರಿಸು. v. *To concede, yield to, consent, agree to.*

To Assert, v. a. ಖಂಡಿತಮಾಡು, ಸಾಧಿಸಿಹೇಳು, ಸ್ಥಾಪಿಸಿಹೇಳು. v. *To confirm, maintain.*

Assertion, s. n. *(affirmation)* ಖಚಿತವಾಕ್ಯ, ಖಂಡಿತಮಾತು, ಸ್ಥಾಪನೇಮಾತು, ಸಾಧನೇಮಾತು.

Asserter, s. n. ಖಂಡಿತವಾಗಿಹೇಳುವವ, ಸಾಧಿಸಿಹೇಳುವವ, ಸ್ಥಾಪಿಸಿಹೇಳುವವ.

To Assess, v. a. ಗುತ್ತಿಗೆಮಾಡು, ತೆರಿಗೆಕಟ್ಟು. v. *To tax.*

Assessment, s. n. ತೆರಿಗೆ, ಪಟ್ಟಿಗೆ, ಕಂದಾಯ. v. *Tax, rent, tribute: (the settlement of the assessment)* ಜಮಾಬಂದಿ; *(the total assessment of a district)* ಬೇರೀಜು.

Assessor, s. n. *(he that lays taxes)* ಪಟ್ಟಿಗೆದಾರ, ಅಮಲದಾರ; Who is the *assessor?* ಶಾನಭೋಗ ಯಾರು, or ಪಟ್ಟಿಗೆದಾರ ಯಾರು, or ಕರಣಿಕ ಯಾರು; Is there any *assessment* on these things? ಈ ಜಿನಸುಗಳಿಗೆ ಸುಂಕವೇನಾದರೂ ಉಂಟೇ; Some people are *assessed* by the day, some by the month, and some by the year ಕೆಲವರು ದಿನದ ತೆರಿಗೆಯವರು ಕೆಲವರು ತಿಂಗಳ ತೆರಿಗೆಯವರು ಕೆಲವರು ಕಂದಾಯದ ತೆರಿಗೆಯವರು ಕೆಲವರು ವರ್ಷದ ತೆರಿಗೆಯವರು; How much are you *assessed?* ನಿನ್ನ ಪಟ್ಟಿಗೆಯೆಷ್ಟು, or ನಿನ್ನ ತೆರಿಗೆಯೆಷ್ಟು.

Assets, s. n. ಹೊಣೆತೀರಿಸತಕ್ಕದ್ದು.

To Asseverate, v. a. ಖಂಡಿತವಾಗಿ ಹೇಳು, ಸಾಧಿಸಿ ಹೇಳು, ಸ್ಥಾಪಿಸಿ ಹೇಳು. v. *To affirm.*

Asseveration, s. n. ಖಂಡಿತ ವಾಕ್ಯ, ಸಾಧನೇ ಮಾತು, ಖಡಾಖಡಿ ಮಾತು, ತೀರ್ವಾದ ಮಾತು, ನಿಶ್ಚಯದ ಮಾತು, ಸ್ಥಾಪನೇ ಮಾತು. v. *Affirmation.*

Assiduity, s. n. ಅಧ್ಯವಸಾಯವು, ಕೃಷಿ, ಔತ್ಸುಕ್ಯವು, ಉತ್ಸಾಹವು, ಜಾಗ್ರತೆಯು. v. *Diligence, industry, perseverance.*

Assiduous, a. ಮಹೋದ್ಯಮ, ಕಷ್ಟಕಾರಿಯುಳ್ಳ, ಜಾಗ್ರತೆಯುಳ್ಳ; *(an assiduous person)* ಜಾಗ್ರತೆಯುಳ್ಳವನು, ಕಷ್ಟಕಾರಿ, ಜಾಗರೂಕನು, ಕರ್ಮಕರ, ಕರ್ಮಠ; *(to be assiduous* ಜಾಗ್ರತೆಯಾಗಿರು.

Assiduously, ad. ಮಹೋದ್ಯಮವಾಗಿ, ಅಧ್ಯವಸಾಯವಾಗಿ, ಜಾಗ್ರತೆಯಾಗಿ, ಉತ್ಸಾಹವಾಗಿ, ಉತ್ಸುಕವಾಗಿ.

To Assign, v. a. *(to appoint)* ನೇಮಿಸು; *(to determine)* ನಿರ್ಧರಿಸು; *(to assign a cause)* ಮುಖಾಂತ್ರ ಹೇಳು.

Assignation, s. n. ಸಂಕೇತ, ಗೊತ್ತು; *(a woman who goes to an assignation)* ಅಭಿಸಾರಿಕೆ.

Assignee, s. n. ನಿಯಾಮಕನು, ಬಾಧ್ಯನು.

Assignment, s. n. ನೇಮಿಸೋಣ; *(an assignment on revenues)* ತನಖೆ, ಬರಾತವು, ಹವಾಲೆ.

To Assimilate, v. ಹೋಲಿಸು, ಉಪಮಿಸು, ಉಪಮಾನಿಸು.

Assimilation, s. n. ಸಾದೃಶ್ಯ, ತುಲ್ಯತ್ವ, ಉಪಮೆಯು, ಉಪಮಾನವು, ಹೋಲಿಕೆ, ಸಾಮ್ಯ. v. *Resembling, likeness, similitude.*

To Assist, v. a. ಸಹಾಯಕೊಡು, ಅನುಕೂಲಿಸು, ಒತ್ತಾಸೆಮಾಡು. v. *To help, benefit, serve.*

Assistance, s. n. ಸಹಾಯ, ಅನುಕೂಲ, ಬೆಂನಾಸರೆ, ಉಪಷ್ಟಂಭ.

Assistant, s. n. ಸಹಾಯಕನು, ಹಮ್ಮೇಯವನು, ಅನುಕೂಲಕ, ಬೆಂನಾಸರೆಕೊಡುವವ.

Assistant, Assisting, a. ಸಹಾಯವಾದ, ಅನುಕೂಲವಾದ. v. *Auxiliary.*

Assize, s. n. *(measure)* ನಿರ್ಧಾರ, ಬೆಲೆನಿಷ್ಕರ್ಷೆ. v. *Measure, rate: (statute)* ಕಟ್ಟಳೆ, ಪ್ರಮಾಣ; *(court of justice)* ನ್ಯಾಯಸ್ಥಾನ; When do the *assizes* commence? ಪಂಚಾಯತಿ ಇದ್ದಾಗ ಆರಂಭವಾಗುತ್ತದೆ, or ನ್ಯಾಯವಿಚಾರಣೆ ದಾವಾಗ

ಪ್ರಾರಂಭಿಸುತ್ತದೆ; Are the *assizes* over? ಜರಿ ಯಾಪ್ತಿಯಾಯಿತೆ.

To Assize, v. a. *(to fix the rate)* ನಿರ್ಧಾರಮಾಡು, ನಿರಖುಮಾಡು, ಕ್ರಯನಿಶ್ಚೈಸು.

Assizer, s. n. ನಿರ್ಧಾರಿಕ, ಅವಟಿಗ, ಕ್ರಯನಿಶ್ಚೈಕ.

Associate, s. n. ಸಂಗಡಿಗ, ಜತೆಗಾರ, ಸ್ನೇಹಿತ, ಸವಯಸು, ಸಖಸು, ಸುಹೃತ್ತು, ವಯಸ್ಯನು, ಸಂಗಾತಿ, ಮಿತ್ರನು. v. *Friend, companion, partner.*

To Associate, v. a. ಕೂಡು, ಕಲೆಯು, ಸಂಯುಕ್ತವಾಗು, ಸ್ನೇಹಮಾಡು.

Association, s. n. ಸಂಗಾತಿ, ಸಂಘಟ್ಟನೆ, ಕಾಸು, ಪಲ್ಲಂಚ್ಚು, ಸಾಹಚರ್ಯ, ಸಾಂಗತ್ಯ, ಸಾಂಗತ್ಯವು. v. *Partnership, confederacy, society, union, connection.*

To Assort, v. a. ಆರಿಸಿಡು, ಇಂಗಡಿಸು, ಕ್ರಮವಾಗಿಡು, ಪಾಂಕ್ತವಾಗಿಡು. v. *To arrange.* These goods must be *assorted* ಈಜಿನಸುಗಳಂನಾರಿಸಿಡಬೇಕಾದ್ದು, or ಈಸಾಮಾನುಗಳಂನು ಕ್ರಮವಾಗಿಡಬೇಕಾದ್ದು.

Assorter, s. n. ಕ್ರಮವಾಗಿಡುವವನು, ಆರಿಸಿಡುವವನು, ವಿಂಗಡಿಸುವವನು.

Assortment, s. n. *(the act)* ವಿಂಗಡಿಸಿಯಿಡೋಣ, ಕ್ರಮವಾಗಿಡೋಣ, ಪಾಂಕ್ತವಾಗಿಡೋಣ.

To Assuage, v. a. ಶಮನಮಾಡು, ತಂಣಗೆಮಾಡು, ಶಾಂತಪಡಿಸು, ಆರಿಸು. v. *To mitigate, ease, soften, appease, pacify, abate.*

To Assuage, v. n. *(as fever, anger, &c.)* ಶಾಂತವಾಗು, ಆರು, ಆರಾಗು; *(as wind, rain, &c.)* ತೆರಪಾಗು, ಇಳಿಯು, ಮಟ್ಟಾಗು, ಬಿಡುಗಡೆಯಾಗು, ಇಳಿಮುಖವಾಗು, ತಗ್ಗು.

Assuasive, a. ಶಾಂತಮಾಡುವ, ಮಟ್ಟುಮಾಡುವ, ಲಘುತರಮಾಡುವ.

To Assume, v. a. *(to take)* ತೆಗೆದುಕೊಳ್ಳು; *(to appropriate)* ಬಳಸು, ಸ್ವಾಧೀನಮಾಡು; *(to suppose)* ಊಹಿಸು, ನೆನಸು, ಭಾವಿಸು; *(to take upon one's self)* ವಹಿಸು; *(to arrogate)* ಅಧಿಕಪ್ರಸಂಗಮಾಡು, ಬಡಾಯಿಮಾಡು.

Assumer, s. n. *(an arrogant man)* ಡಾಂಭಿಕನು, ದೊಡ್ಡಸ್ತಿಕೆಯವ, ಬಡಾಯಿಕೋರ, ದಾಷ್ಟೀಕನು.

Assuming, a. ಡಾಂಭಿಕವಾದ, ಬಡಾಯಿಯುಳ್ಳ, ದಾಷ್ಟೀಕತನವುಳ್ಳ. v. *Arrogant, haughty.*

Assumption, s. n. *(taking)* ತೆಕ್ಕೊಂಬೋಣ; *(supposition)* ಊಹೆ. v. *Taking, supposition, presumption.*

Assurance, s. n. *(freedom from doubt)* ನಿಸ್ಸಂಶಯ, ನಿರ್ವಿಚಿಕಿತ್ಸೆ, ನಿಸ್ಸಂದೇಹ; *(firmness)* ದೃಢ, ಘಟ್ಟಿತನ; *(promise)* ಮಾತು, ವಾಗ್ದತ್ತ; *(confidence)* ಭರವಸ, ನಂಬಿಕೆ; *(certainty)* ನಿಶ್ಚಯವು, ದಿಟವು; *(impudence)* ಮರ್ಯಾದಾ ಹೀನತ್ವ, ಮೀರಿಕೆಯಡುತನ; *(intrepidity)* ಧೈರ್ಯವು, ಗುಂಡಿಗೆಯು, ನಿರ್ಭೀತಿಯು. v. Also *insurance, security, expectation.*

To Assure, v. a. *(to give confidence)* ಖಂಡಿತಮಾಡು, ಖಚಿತಮಾಡು; *(to exempt from doubt)* ಅನುಮಾನತೀರಿಸು, ಸಂದೇಹತೀರಿಸು, ನಂಬಿಸೊ

ಳಿಸು; (*to promise*) ಮಾತುಕೊಡು, ವಾಗ್ದಾನಮಾಡು. v. Also *to betroth.*

Assuredly, ad. ನಿಸ್ಸಂದೇಹವಾಗಿ, ನಿಶ್ಚಯವಾಗಿ, ಅಗತ್ಯವಾಗಿ. v. *Certainly, indubitably.*

Asterisk, s. n. ಹಂಸಪಾದಿ. v. *Mark.*

Asterisms, s. n. ಅಶ್ವಿನ್ಯಾದಿತಾರೆಗಳು, ದಾಕ್ಷಾಯಣಿಗಳು, the longitude of which regulates the divisions of the zodiac. In mythology they are nymphs, and daughters of ದಕ್ಷಪ್ರಜಾಪತಿ.

Astern, ad. ಅಪರಭಾಗದಲ್ಲಿ, ಹಿಂಭಾಗದಲ್ಲಿ.

Asthma, s. n. ಉಬ್ಬಸ, ಗೂರಲು, ಶ್ವಾಸಕಾಸ; That man has an *asthma* ಆಮನುಷ್ಯನಿಗೆ ಗೂರುರೋಗವುಂಟು; What medicine is good for the *asthma?* ಗೂರುರೋಗಕ್ಕೆ ಯಾವ ಔಷಧ ಉತ್ತಮವು.

Asthmatical, Asthmatic, a. ಉಬ್ಬಸವಾದ, ಗೂರಲಾದ, ಶ್ವಾಸಕಾಸವಾದ.

To Astonish, v. a. ಭ್ರಮಿಸು, ದಿಗಿಲುಪಡಿಸು, ಆಶ್ಚರ್ಯಗೊಳಿಸು, ವಿಸ್ಮಯಪಡಿಸು. v. *To amaze, surprise.*

Astonished, part. ಭ್ರಮಿಸಲ್ಪಟ್ಟ, ವಿಲಕ್ಷ, ವಿಸ್ಮಯಾನ್ವಿತ; (*to be astonished*) ಭ್ರಮೆಗೊಳ್ಳು, ವಿಸ್ಮಯಗೊಳ್ಳು, ಆಶ್ಚರ್ಯಪಡು.

Astonishing, a. ಭ್ರಮೆಗೊಳಿಸುವ, ಚೋದ್ಯವಾದ, ಅದ್ಭುತವಾದ, ಆಶ್ಚರ್ಯವಾದ, ವಿಸ್ಮಯ, ಅದ್ಭುತ, ಬೆಕ್ಕಸವಾದ.

Astonishment, s. n. ವಿಭ್ರಮ, ನಿರ್ವಿಣ್ಣತ್ವ, ಭ್ರಮೆ, ಬೆಕ್ಕಸ, ತಲ್ಲಣಿಕೆ, ತಳವೆಳಗು, ಬಕ್ಕುದಿ, ಬೆಗಡು, ಸೋಜಿಗ, ಸಲಿಗೆ, ಬೆರಗು, ಬೆಬ್ಬಳಂ, ತಳಮೆಳಂ, ಬೆರಗು.

Astray, ad. ತಪ್ಪುಹಾದಿಯಾಗಿ. v. *Wandering.* (*to go astray*) ಹಾದಿತಪ್ಪಿಹೋಗು; (*to lead astray*) ದುರ್ಬೋಧಿಸು; The oxen are gone *astray* ದನಗಳು ತಪ್ಪಿಸಿಕೊಂಡು ಹೋದವು.

Astride, ad. ಹಂಗಡಿಸಿಯಾಗಿ; European females ride sideways and not *astride* as the Hindoo females ಹಿಂದೂಸ್ತ್ರೀಯರು ಹಂಗಡಿಸಿ ಹತ್ತಿಕೊಂಡಹಾಗೆ ಹತ್ತಿಕೊಳ್ಳದೆ ಯೂರೋಪುದೇಶದ ಸ್ತ್ರೀಯರುವರೆಟ್ಟಾಗಿ ಹತ್ತಿಕೊಂಬುವರು.

Astringency, Astriction, s. n. ಬದ್ಧಕೋಷ್ಟ, ವಿಬಂಧ, ಮಲಬಂಧ, ಬದ್ಧಿಕೆ. v. *Constipation, contraction, costive, drawing together.*

Astringent, a. (*binding*) ಬದ್ಧಿಕೆಯಾದ, ವಿಬಂಧವಾದ, ಬದ್ಧಕೋಷ್ಟವಾದ; (*taste*) ಕಷಾಯವಾದ; My bowels are too much relaxed, I therefore require *astringent* medicine ನನ್ನಹೊಟ್ಟೆಯು ಬಹಳ ಕಳಿಯುತ್ತದೆಯಾದ್ದರಿಂದ ಹೊಟ್ಟೆಗೆ ಕಟ್ಟಿಕೊಳ್ಳಲು ಔಷಧವು ಬೇಕಾಗಿದೆ.

Astrologer, s. n. ಸಿದ್ಧಾಂತಿ, ಪಂಚಾಂಗಿ, ಜ್ಯೋಯಿಸ, ಜ್ಞಾತಸಿದ್ಧಾಂತ, ಗಣಕ, ಮೌಹೂರ್ತಿಕ, ಮೌಹೂರ್ತ, ಜ್ಞಾನಿ, ಕಾರ್ತಾಂತಿಕ, ತಾಂತ್ರಿಕ, ಜ್ಯೋಯಿಸಿಗನು, ಸಿದ್ಧಾಂತಿಗನು, ಸಾಂವತ್ಸರ, ಜ್ಯೋತಿಷಿಕ, ದೈವಜ್ಞನು.

Astrology, s. n. ಜ್ಯೋತಿಶ್ಶಾಸ್ತ್ರವು, ಜೋತಿಷವು.

Astronomer, s. n. ಜ್ಯೋತಿಷಿಕನು, ಜ್ಯೋಯಿಸಿಗನು, ಗಣಕನು, ದೈವಜ್ಞನು.

Astronomical, a. ಗಣಿತದ, ಸಿದ್ಧಾಂತಿಕೆಯ.

Astronomy, s. n. ಗಣಿತಶಾಸ್ತ್ರವು, ಜ್ಯೋತಿಷಶಾಸ್ತ್ರವು.

Asunder, ad. ಖಂಡವಾಗಿ, ಬೇರಬೇರಾಗಿ, ಇಂಗಡಿಂಗಡವಾಗಿ, ಪ್ರತ್ಯೇಕವಾಗಿ, ಅಲಾದಾಗಿ, ಛಿನ್ನವಾಗಿ. v. *Apart, separately.* *(to put asunder)* ವಿಂಗಡವಾಗಿಡ, ಬೇರೆಬೇರೆಯಾಗಿಡ, ಪ್ರತ್ಯೇಕಿಸಿಡ, ಅಲಾದಲಾದಾಗಿಡ; Put these a little *asunder* ಇವುಗಳನ್ನು ಸ್ವಲ್ಪ ವಿಂಗಡಿಸಿಡು; The trees in that forest are not far *asunder* ಆ ಅಡವಿಯಲ್ಲಿರುವ ಮರಗಳು ಒಂದೊಂದಕ್ಕೆ ಬಹಳ ದೂರವಿಲ್ಲ.

Asylum, s. n. ಆಸ್ಪದ, ಸ್ಥಳ, ಆಶ್ರಯ, ಗವಿ, ಗರುಡಿ, ಗೂಡು, ನೆಲೆ, ಹೊಗಲು, ಇಕ್ಕೆ, ಹಕ್ಕೆ, ಬಾವಡಿ, ಠಾಣ, ಬೀಡು, ಇಂಬು, ಬಳಿಕೆ, ಆದುಂಬೋಲವು, ಆಶ್ರಯ.

At, prep. *(near)* ಸಮೀಪ, ಹತ್ತಿರ, ದಂಡೆ, ಬಳಿಗೆ, ಬದಿಲಿ, ಸಮೀಪ, ನಿಕಟ, ಅರುಹ್ನ, ಸನ್ನಿಕೃಷ್ಟ, ಸನೀಡ, ಸದೇಶ, ಅಭ್ಯಾಶ, ಸವಿಧ, ಸಮರ್ಯಾದ, ಸವೇಶ, ಉಪಕಂಠ, ಅಂತಿಕ, ಅಭ್ಯರ್ಣ, ಪಕ್ಕ, ಹೊರೆ, ಹೊರ್ದುಗೆ, ಕೆಲಂ, ಸನಿಹ; *(co-existence of time)* He rose *at* sun-rise ಸೂರ್ಯೋದಯಕಾಲದಲ್ಲವನೆದ್ದನು; *(with)* He cut it off *at* a stroke ಅವನೊಂದು ಪೆಟ್ಟಿಯಲ್ಲಿ ಖಂಡಿಸಿ ಬಿಟ್ಟನು; *(condition)* The kings are now *at* peace ಅರಸುಗಳೀಗ ಸಮಾಧಾನವಾಗಿದ್ದಾರೆ; *(employment, or attention)* The boys are busy *at* their tasks ಹುಡುಗರವರ ಪಾಠಗಳಲ್ಲಿ ನೋಡನೆಯಾಗಿದ್ದಾರೆ, or ಹುಡುಗರು ತಮ್ಮ ಪಾಠಗಳನ್ನು ನೋಡುತ್ತಿದ್ದಾರೆ; *(place where any thing is)* He lives *at* Bangalore ಅವನು ಬೆಂಗಳೂರಿನಲ್ಲಿರುತ್ತಾನೆ; *(in consequence of)* He swooned *at* the sight ಅವನು ನೋಡಿದ್ದರಿಂದ ತಕ್ಕವಳಿಕೊಂಡನು. Did you find him *at* home? ಅವನ ಮನೆಯಲ್ಲಿ ಕಂಡ್ಯಾ; The Mahrattas are *at* war with the English ಆರ್ಯರು ಇಂಗ್ಲೀಜರ ಸಂಗಡ ಯುದ್ಧದಲ್ಲಿದ್ದಾರೆ; He is laughed *at* by every one ಅವನ ನೋಡಿ ಎಲ್ಲರು ನಗುತ್ತಾರೆ, or ಅವನೆಲ್ಲರಿಂದಲು ನಗುವಿಗೀಡಾದನು; The moon shines *at* night ರಾತ್ರಿಯಲ್ಲಿ ಚಂದ್ರನು ಪ್ರಕಾಶಿಸುತ್ತಾನೆ; The boys are *at* school ಹುಡುಗರು ಓದುವ ಸಾಲೆಯಲ್ಲಿದ್ದಾರೆ; The thief entered the house *at* the window ಕಳ್ಳನು ಕಿಟಿಕಿಯಿಂದಲು ಮನೆಯೊಳಹೊಕ್ಕನು; Are the people all *at* their work? ಜನರೆಲ್ಲರು ತಮ್ಮ ಕೆಲಸದಲ್ಲಿದ್ದಾರೋ; I am *at* a loss what to do ನಾ ಹ್ಯಾಗೆ ಮಾಡಲಿ ನನಗೇನು ತೋರದು; Does he go *at* his own cost or your's? ಅವನು ಸ್ವಖರ್ಚಿನಿಂದ ಹೋಗುತ್ತಾನೋ ಇಲ್ಲವೆ ನೀವು ಕಳುಹಿಸುತ್ತಿದ್ದೀರೋ, or ಅವನು ಹೋಗುವ ಖರ್ಚು ನಿಂನದೋ ಅವನದೋ The people are all *at* a stand ಜನರೆಲ್ಲರು ಸುಮ್ಮನೇ ಕುಳಿತಿದ್ದಾರೆ; This trouble is *at* an end ಈ ಕಷ್ಟವು ತೀರಿತು; *At* first he objected to come ಅವನು ಮೊದಲು ಬರಲಕ್ಷ್ಯಂತರಿಸಿದನು; The box you require is *at* the end, and very difficult to come *at* ನಿನಗೆ ಬೇಕಾದ ಪೆಟ್ಟಿಗೆ ಯಗಾಧದಲ್ಲಿಬಿದ್ದದೆ ದೂರ ಕಲಿಕಷ್ಟವು; He went *at* a word ಅವನು ಮಾತುಮಾತ್ರದಲ್ಲಿ ಹೋದನು; The roof of the house fell in all *at* once ಮನೆಯ ಮಾಳಿಗೆಯೆ

ಲ್ಲವು ಸುಮ್ಮನೆಯೇ ಬಿಟ್ಟೆ; Here is nothing *at* all ಇಲ್ಲೇನಿಲ್ಲವು; He prostrated *at* full length ಅವನು ಸಾಷ್ಟಾಂಗವಾಗಿ ಬಿದ್ದನು; The wet season has *at* length set in ಕಟ್ಟಕಡೆಗೆ ಮಳೆಗಾಲ ಪ್ರಾರಂಭಿಸಿತು; He is come *at* last ಕಟ್ಟಕಡೆಗೆ ಬಂದಿದ್ದಾನೆ; *At* present there is nothing *at* all for me to do ಈಗೇನೂ ನನಗೆ ಮಾಡಲಿಕ್ಕಿಲ್ಲವು; Is your master *at* leisure now? ನಿನ್ನ ಧೊರೆಯು ಈಗೇನು ಬಿಡಿಕೆಯಾಗಿದ್ದಾನೋ; If you have that book *at* hand lend me it a little while ಆ ಪುಸ್ತಕ ನಿನ್ನ ಬಳಿಯಲ್ಲಿ ಇದ್ದರೆ ನನಗೊಂದು ಘಳಿಗೆ ಬದಲಾಗಿ ಕೊಡು, or ನಿನ್ನ ಕೈಯಲ್ಲಿದ್ದರೆ ಕೊಡು; Stay *at* least another day ಕಡೆಗೆ ಇನ್ನೊಂದು ದಿವಸವಾದರೂ ಇರು; This boy threw stones *at* me ಈ ಹುಡುಗ ನಂನನು ಕಲ್ಲೆಸೆದನು; I want none *at* all ನನಗೇನು ಬೇಕಿಲ್ಲವು; This employment may prove very lucrative, *at* all events I will make a trial ಈ ಉದ್ಯೋಗವು ಬಹಳ ಲಾಭದಾಯವುಳ್ಳ ಉದ್ಯೋಗದ ಹಾಗೆ ಕಾಣುತ್ತಿದೆ ಯೇನಾದರಾಗಲಿ ನಾನೊಂದು ಕೈ ನೋಡುತ್ತೇನೆ; *At* times I am in great pain ಒಂಮ್ಮೊಮ್ಮೆ ನನಗೆ ಬಹಳ ನೋವುಂಟು.

Ate, (preterite of *eat*) *I ate* ನಾನುಂಡೆ, ನಾನುತಿಂದೆ; *He ate* ಅವನುಂಡ; *She ate* ಅವಳುಂಡಳು; *It ate* ಅದುತಿಂತು; *They ate* ಅವರುಂಡರು.

Atheism, s. n. ಲೋಕಾಯತಿಕ, ನಾಸ್ತಿಕತೆ, ಮಿಥ್ಯಾದೃಷ್ಟಿ, ದೈವಶೂನ್ಯವಾದವು.

Atheist, s. n. ನಿರೀಶ್ವರವಾದಿಯು, ನಾಸ್ತಿಕನು, ಚಾರ್ವಾಕನು, ಲೋಕಾಯತಿಕನು; (*atheistical philosophy*) ಲೋಕಾಯತಮತವು, ನಾಸ್ತಿಕಮತವು, ಚಾರ್ವಾಕಮತವು.

Athirst, ad. ದಾಹವಾಗಿ, ನೀರಡಿಕೆಯಾಗಿ, ಬಾಯಾರಿಕೆಯಾಗಿ. v. *Thirsty.*

Athletic, a. ಪೀನ, ಪೀವರ, ಶೂರವಾದ, ಸ್ಥೂಲವಾದ, ಪುಷ್ಟಿಯುಳ್ಳ, ಬಲಿತಿದ. v. *Vigorous, robust, heroic.* (*an athletic man*) ಸ್ಥೂಲನು, ಬಲವಂತನು, ಪರಾಕ್ರಮಶಾಲಿ.

Athwart, ad. ಅಡ್ಡವಾಗಿ, ಅಡ್ಡಲಾಗಿ. v. *Cross, through.*

Atilt, ad. ಒರಗಾಗಿ, ಓರೆಯಾಗಿ, ಬಾಗಾಗಿ.

Atlas, s. n. ಭೂಗೋಳದ ಪಟವು.

Atmosphere, s. n. ಅಭ್ಯಂತರ, ಅಂತರಾಳ, ಚಕ್ರವಾಳ, ಮಂಡಲ, ಅಂತರ್ಮಧ್ಯ, ಬಾನ್, ಮುಗಿಲ್ವಟ್ಟೆ, ಆಗಸ, ಅರಿಲ್ವಟ್ಟೆ, ಸಗ್ಗದವಟ್ಟೆ, ಆಕಾಶ, ದಿವವು, ಅಭ್ರ, ವ್ಯೋಮ, ಪುಷ್ಕರ, ಅಂಬರ, ನಭಸ್ಸು, ಅಂತರಿಕ್ಷ, ಗಗನ, ಅನಂತ, ಸುರವರ್ತ್ಮ, ಖವು, ವಿಯತ್ತು, ವಿಷ್ಣುಪದ, ವಿಹಾಯಸವು. v. *Air, sky.*

Atom, s. n. ಅಣುವು, ಪರಮಾಣು.

Atomical, a. ಅಣುವಾದ, ಪರಮಾಣುವಾದ, ಅಣೀಯಸ್ಸಾದ; (*an atomic body*) ಸೂಕ್ಷ್ಮಶರೀರವು.

To Atone, v. a. ಪ್ರಾಯಶ್ಚಿತ್ತಮಾಡಿಕೊಳ್ಳು, ಪಾಪನಿವರ್ತನ, ಪಾಪವಿಮೋಚನೆಮಾಡು. v. *To expiate, apologize;* also *to tune, agree, accord.* (*to stand as an equivalent*) ಈಡಾಗಿರು, ಬದಲಾಗಿರು.

Atonement, s. n. *(for sin)* ಪ್ರಾಯಶ್ಚಿತ್ತವು, ಪ್ರತಿಕಟು, ಪಾಪವಿಮೋಚನೆ, ಪಾಪನಿವರ್ತನೆ, ಪರಿಹರಿಕೆ.

Atop, ad. ಮೇಲೆ, ಮೇಲ್ಭಾಗದಲ್ಲಿ.

Atrocious, a. ಅತಿದುರ್ಗುಣವುಳ್ಳ, ಬಹಳಕೆಟ್ಟ, ಅತಿಕ್ರೂರ, ಬಹುದುಷ್ಟತೆಯುಳ್ಳ, ಅತಿದುರ್ಮಾರ್ಗವುಳ್ಳ, ತುಂಟತನವುಳ್ಳ.

Atrociousness, Atrocity, s. n. ಬಹಳಕೆಟ್ಟತನ, ಅತಿದುರ್ಮಾರ್ಗತನ, ಅತಿದುರ್ಗುಣವು. v. *Enmity, iniquity, cruelty, villainy.*

To Attach, v. a. *(to arrest)* ಕಾವಲಿಡಾಕು; *(to seize)* ಹಿಡಿಯು; *(to win over)* ಒಳಗುಮಾಡಿಕೊಳ್ಳು, ಸ್ವಾಧೀನಮಾಡು, ಒಳಗುಸೇರಿಸಿಕೊಳ್ಳು; *(to enamour)* ವ್ಯಾಮೋಹಹುಟ್ಟಿಸು, ವಿಮೋಹಿಸು, ಪ್ರಮೋಹಿಸು; *(join together)* ಸಂಯೋಗಿಸು, ಸಂಕ್ರಮಿಸು, ಕೂಡಿಸು; *(to attach one's self to another)* ಆಶ್ರಯಮಾಡು.

Attachment, s. n. *(adherence, fidelity)* ಭಕ್ತಿಯು, ಆಪ್ತತೆ, ಪರಾಯಣ, ತುರಾಯಣ; *(regard)* ಸ್ನೇಹ, ಪ್ರೀತಿ, ಅನುರಾಗವು, ಪ್ರೇಮ, ಸೌಹಾರ್ದ, ಸೌಹೃದ, ಯರಕವು.

Attack, s. ಹೋಗಿಬೀಳಿಕೆ, ದುಡುಕು, ಅಭಿಗ್ರಹ, ಅಭಿಯೋಗ. v. *Assault, invasion.* *(a gallant attack)* ಅತಿಕ್ರಮ, ಅಭಿಕ್ರಮ.

To Attack, v. a. ಹೋಗಿಬೀಳು, ಮೇಲುಬೀಳು, ಅಭಿಯೋಗಿಸು, ಅಭಿಕ್ರಮಿಸು.

To Attain, v. a. ಹೊಂದು, ಸಂಪಾದಿಸು, ಐದು. v. *To reach, overtake, come to, arrive at, obtain, acquire, gain, find.*

Attainable, a. ಹೊಂದತಕ್ಕ, ಪ್ರಾಪ್ಯ, ಲಭ್ಯವಾದ, ಗಮ್ಯ, ಸಮಾಸಾದ್ಯ.

Attained, part. ಹಸ್ತಗತ, ಹಸ್ತಪ್ರಾಪ್ತ.

Attainment, s. n. ಸಂಪಾದಿತವು, ಪ್ರಾಪ್ತವು, ಲಭ್ಯವು, ಆರ್ಜಿತವು. v. *Acquisition, knowledge, gain.*

Attainder, s. n. v. *Forfeiture, taint.*

To Attaint, v. *To taint, corrupt, forfeit.*

To Attemper, Attemperate, v. a. *(to mix)* ಕಲಿಸು, ಕಲಬೆರಸು; *(to soften)* ಮೃದುವುಮಾಡು; *(to mitigate)* ತಗ್ಗಿಸು, ಮಟ್ಟುಮಾಡು, ಶಾಂತಮಾಡು; *(to fit)* ಜೋಡಿಸು, ಹೊಂದಿಸು. v. *To proportion, soften, mingle, mitigate.*

Attempt, s. n. ಹವಣ, ಪ್ರಯತ್ನ, ಉದ್ಯೋಗ, ಉದ್ಯಮ, ಯತ್ನ, ವ್ಯವಸಾಯ, ಉಠಾವಳಿ. v. *Effort, essay.*

To Attempt, v. a. ಪ್ರಯತ್ನಮಾಡು, ಯತ್ನಿಸು, ಉದ್ಯೋಗಿಸು, ನೋಡು, ವಿಚಾರಿಸು. v. *To endeavour, to try, to venture.* He made an *attempt* upon his life ಅವನು ತನ್ನ ಪ್ರಾಣಹಾನಿಯನ್ನುಮಾಡಿಕೊಳ್ಳಲಿದ್ದನು, or ಅವನು ತನ್ನ ಪ್ರಾಣಕಳಕೊಳ್ಳುತ್ತಿದ್ದನು; I will make the *attempt* though I fail ನನ್ನ ಕೈಲಾಗದಿದ್ದರೂ ನಾನದರಂನ ಬೆನ್ನಾಗಿನೋಡುತ್ತೇನೆ; He *attempted* to lift up the stone but could not succeed ಅವನಾಕಲ್ಲಂನೆತ್ತಿ ಉಪಾಯವನ್ನು ಮಾಡಿಯೂ ಅದವನಕೈಯ್ಯಲ್ಲಾಗದೆಹೋಯಿತು.

To Attend, v. a. *(to listen)* ಕಿವಿಗೊಡು, ಕೇಳು, ಆಲಯಿಸು; *(to be present)* ಹಾಜರಾಗಿರು, ಇರು,

ನಿಷ್ಠರಾಗಿರ; *(to serve)* ಸೇವಿಸ, ಚಾಕರಿಮಾಡ; *(to follow)* ಹಿಂಡೊಡರ, ಅನುಸರಿಸ ; *(to give attention)* ಓಲಯಿಸ, ಮನವಿಡ; *(to stay for)* ಕಾದುಕೊಂಡಿರ; *Attend* to my words ನನ್ನಮಾತಿಗೆಕಿವಿಕೊಡು, or ನನ್ನಮಾತಂನಾಲೈಸು; Many people *attend* upon the king ಅನೇಕಜನರರಸಂನೋಲೈಸುತ್ತಾರೆ, or ಅನೇಕ ಜನರರಸಂನಕಾದುಕೊಂಡಿದ್ದಾರೆ; Is there nobody to *attend* upon this sick man? ಈರೋಗಿಯಂನಪರಾಮರಿಸುವವರಾರೂಯಿಲ್ಲವೋ; Which church do you *attend*? ನೀನುದಾವದೇವಾಲಯಕ್ಕೆನಡಕೊಳ್ಳುತ್ತಿದ್ಧೀ; Fear *attends* a thief wherever he goes ಕಳ್ಳನೆಲ್ಲಿಹೋದರೂ ಅಲ್ಲಿ ಭಯವವಂನಹಿಮ್ಮೆಟ್ಟುತ್ತದೆ, or ಕಳ್ಳಗೆಲ್ಲಿಹೋದರುಭಯಬಿಡದು.

Attendance, s. n. *(service)* ಸೇವೆ, ಚಾಕರಿ ; *(a train)* ಪರಿವಾರ ಜನರು.

Attendant, s. n. ಪರಿವಾರದವನು. v. *Dependants, equipage, servants.*

Attendant, Attending, a. ಅನುಸರಿಸುವ, ಪ್ರಾಪ್ತಿಸುವ, ಸಾಂದೃಷ್ಟಿಕವಾದ. v. *Consequent, dependant, accompanying.*

Attention, s. n. ಅವೇಕ್ಷೆ, ಪ್ರತಿಜಾಗರ, ಶ್ರವಣ, ಕೇಳಿಕೆ, ಜಾಗ್ರತೆ, ಎಚ್ಚರಿಕೆ, ಖಬರದಾರು. v. *Study, care.* He shewed me much *attention* ಅವನುನನಗತ್ಯಾದರವಂನುಮಾಡಿದನು, or ಅವನುನನಗೆಬಹಳವಾಗಿಯುಪಚಾರವಮಾಡಿದನು.

Attentive, a. ಜಾಗ್ರತೆಯ, ಏಕತಾನ, ಅನನ್ಯವೃತ್ತಿ, ಏಕಾಗ್ರ, ಏಕಾಯನ, ಏಕಸರ್ಗ, ಏಕಾಗ್ರ್ಯ, ಏಕಾಯನಗತ. v. *Studious, careful.* This boy is very *attentive* at his book ಈಹುಡುಗನುತನ್ನಪುಸ್ತಕದಮೇಲೆಮಹಾಲಕಾಂಕ್ಷೆಯಾಗಿದ್ದಾನೆ.

Attentively, ad. ಶ್ರವಣವಾಗಿ, ಜಾಗ್ರತೆಯಾಗಿ, ಏಕತಾನವಾಗಿ, ಏಕಾಗ್ರವಾಗಿ, ಅನನ್ಯವೃತ್ತಿಯಾಗಿ.

Attenuant, a. ಅಲ್ಪಕಮಾಡುವ, ನಳಿಮಾಡುವ.

Attenuate, a. ಅಲ್ಪಕವಾದ, ನಳಿಯಾದ.

To Attenuate, v. a. ಅಲ್ಪಕಮಾಡ, ನಳಿಮಾಡ. v. *To extenuate, thin.*

Attenuation, s. n. ಅಲ್ಪಕಮಾಡೋಣ.

To Attest, v. a. ಸಾಕ್ಷಿಕೊಡ. v. *To witness, certify, prove, authenticate.*

Attestation, s. n. ಸಾಕ್ಷಿ, ಮಹಜರು.

Attire, s. n. ತೊಡ್ಡಿಕೆ, ದುಸ್ತು, ಪೋಷಾಕು, ಉಡುಪು, ಉಡಿಗೆ, ಬಟ್ಟೆಗಳು, ವಸ್ತ್ರಗಳು. v. *Dress, ornament, clothes. (the attire or horns of a stag)* ಸಾರಂಗದಕೊಂಬು.

To Attire, v. a. ದುಸ್ತುಹಾಕ, ಉಟ್ಟುಕೊಳ್ಳ, ತೊಟ್ಟುಕೊಳ್ಳ. v. *To clothe, dress, adorn.*

Attitude, s. n. ಅಂಗಚೇಷ್ಟೆ, ದೇಹಪ್ರಕೃತಿಯು, ಅಂಗಹಾರ, ಅಂಗವಿಕ್ಷೇಪ. v. *Posture.*

Attorney, s. n. ವಕೀಲು, ಮಧ್ಯವರ್ತಿ. v. *Factor, procurator. (a power of attorney)* ವಕಾಲತುನಾಮಾ.

To Attract, v. a. *(draw to something)* ಆಕರ್ಷಣೆಮಾಡ, ಸೆಳಕೊಳ್ಳ, ಎಳಕೊಳ್ಳ; *(to allure)* ವಿಮೋಹಿಸ, ಆಶೆಗೊಳಿಸ, ಪ್ರಮೋಹಿಸ ; He

was *attracted* by her beauty ಅವಳ ಶೃಂಗಾರಭಾವದಿಂದಲವನು ವ್ಯಾಮೋಹಿತನಾದನು, or ಅವನವಳ ಸೌಂದರ್ಯಕ್ಕೆ ಮೋಸಹೋದನು, or ಅವನವಳ ಚಲುವಿಕೆಗೆ ವಳಬಿದ್ದನು, or ಅವನವಳ ಲಾವಂಣ್ಯಕ್ಕೆ ವಿಭ್ರಾಂತನಾದನು; Being *attracted* by something in the road he forgot his errand ಅವನು ಹಾದಿಯಲ್ಲಿ ಹೋಗುತ್ತಾ ದಾವದೋ ವಂದಂನು ಕಂಡದರಲ್ಲಿ ವ್ಯಾಮೋಹಿತನಾಗಿ ತಾನು ಹೋದ ಕಾರ್ಯವಂನು ಮರತು ಹೋದನು; The load-stone *attracts* the needle ಸೂಜಿಗಲ್ಲು ಸೂಜಿಯಂ ಸೆಳೆಯುತ್ತಿದೆ.

Attraction, s. n. ಆಕರ್ಷಣೆ, ವಿಮೋಹನ; (*allurement*) ವಿಮೋಹಕವು, ಪ್ರಮೋಹಕವು.

Attractive, a. ಆಕರ್ಷಕ, ಎಳೆಯುವ; (*alluring*) ವಿಮೋಹಕವಾದ, ಪ್ರಮೋಹಕವಾದ, ಆಶೆಹುಟ್ಟಿಸುವ.

ದುಹಾರಬಲ್ಲದು, or ಅದುಹಾರ ಕೂಡುವದು, or ಅದುಹಾರಲಾಗುವದು, or ಅದುಹಾರೀತು; It *cannot* fly ಅದುಹಾರಲಾರದು, or ಅದುಹಾರ ಲರಿಯದು, or ಅದುಹಾರ ಕೂಡದು, or ಅದುಹಾರಲಾಗದು; We *can* do (or make) ನಾವುಮಾಡೇವು, or ನಾವುಮಾಡಲಾಪೆವು, or ನಾವು ಮಾಡಬಲ್ಲೆವು, or ನಮಗೆಮಾಡ ಕೂಡುವದು, or ನಂಮಿಂದ ಮಾಡಲಾಗುವದು; We *cannot* make (or do) ನಾವುಮಾಡಲಾರೆವು, or ನಾವುಮಾಡಲರಿಯೆವು, or ಮಾಡ ನಂಮಿಂದ ಕೂಡದು, or ಮಾಡ ನಂಮಿಂದಲಾಗದು; You *can* ask (or hear) ನೀವು ಕೇಳೀರಿ, or ನೀವು ಕೇಳಲಾಪಿರಿ, or ನೀವುಕೇಳ ಬಲ್ಲಿರಿ, or ನಿಂಮಿಂದ ಕೇಳ ಕೂಡುವದು or ನಿಂಮಿಂದ ಕೇಳಲಾಗುವದು; You *cannot* ask (or hear) ನೀವುಕೇಳಲಾರಿರಿ, or ನೀವುಕೇಳ ಲರಿಯರಿ, or ನಿಂಮಿಂದಕೇಳ ಕೂಡದು, or ಕೇಳನಿಂಮಿಂದಲಾಗದು; They *can* tell ಅವರುಹೇಳಿಯಾರು, or ಅವರು ಹೇಳಲಾಪರು, or ಅವರುಹೇಳ ಬಲ್ಲರು, or ಅವರಿಂದಹೇಳ ಕೂಡುವದು, or ಅವರಿಂದಹೇಳಲಾಗುವದು, or ಅವರಿಂದಿದುಹೇಳಲಾದೀತು; They *cannot* tell ಅವರುಹೇಳಲಾರರು, or ಅವರು ಹೇಳಲರಿಯರು, or ಅವರಿಂದಹೇಳ ಕೂಡದು, or ಅವರಿಂದಹೇಳಲಾಗದು; We *cannot be* there ನಾವಲ್ಲಿರ ಕೂಡದು; You *cannot* stand ನೀವುನಿಲ್ಲ ಕೂಡದು; They *cannot* send ಅವರು ಕಳುಹಿಸ ಕೂಡದು; I *can* do ನಂನಿಂದಲಾಗುವದು, or ನಂನಿಂದಲಾದೀತು; I *cannot* do ನಂನಿಂದಲಾಗದು, or ನನ್ನಶಕ್ತಿಯಿಂದಲಾಗದು, or ನಂನಿಂದಲಾಗಲರಿಯದು; I will do what I *can* ನಂನಿಂದಲಾದಮಟ್ಟಿಗೂ ಮಾಡುತ್ತೇನೆ, or ನನ್ನಶಕ್ತಿಯಿಂದಲಾದಮಟ್ಟಿಗೂ ಮಾಡುತ್ತೇನೆ, or ನನ್ನಶಕ್ತಿಲಾದಷ್ಟುಮಾಡುತ್ತೇನೆ, or ನನ್ನಶಕ್ತಿಲಾದಂತೆಮಾಡುತ್ತೇನೆ, or ನಂನಶಕ್ತಿಯಲ್ಲಾದಹಾಗೆ ಮಾಡುತ್ತೇನೆ.

The English potential mood is likewise often expressed, in Carnáṭaca, by ಬರ *to come*, used in connection with the dative case; as, *Can* you speak English? ನಿನಗೆಯಿಂಗರೀಜು ಭಾಷೆಮಾತಾಡಬರುತ್ತದೋ; *Can* you do this? ಇದರಂನನಿನಗೆಮಾಡಬರುತದೋ; *Can* you speak Mahratta? ನಿನಗಾರೇಮಾತು ಬರುತ್ತದೋ; *Can* you recollect that verse? ಆಶ್ಲೋಕನಿನಗೆಜ್ಞಾಪಕಕ್ಕೆಬರುತ್ತದೋ.

Canaille, s. n. ಕಿರಾತಕರು, ಬ್ಯೇಡರು, ಚಾಂಡಾಲರು. v. *Mob, rabble.*

Canal, s. n. ಮಡವೆ, ಕಾಲುವೆ, ಖಲ, ಹಳ್ಳ, ಪರೀವಾಹ. v. *Aqueduct, channel, conduit, bason.*

To Cancel, v. a. ಬಿಕ್ತ್ರ ಮಾಡ, ತೆಗದುಹಾಕ, ಕೆಡಿಸ, ಅಳಿಸ, ತುಡುಪ. v. *To efface, deface, craze.*

Cancer, s. n. *(a disease)* ವ್ರಣ, ಹೂರಿ. v. *Ulcer.* *(a cancer in the breast)* ಸ್ತನವ್ರಣ; *(in the zodiac)* ಕರ್ಕಟಕರಾಶಿ.

To Cancerate, v. n. ವ್ರಣಹುಟ್ಟ, ಹೂರಿಹುಟ್ಟ.

Candid, a. *(white)* ಬಿಳೀ, ಶುಕ್ಲ, ಶ್ವೇತ, ಪಾಂಡರ. v. *Pure, white.* *(open)* ಮರ್ಮವಿಲ್ಲದ, ನಿಷ್ಕಪಟ, ಸರಳ, ಸುಲಕ್ಷ. v. *True, pure, ingenuous, fair, open.*

Candidate, s. n. ಕಾರ್ಯಾರ್ಥಿ, ಉಮೇದುವಾರನು.

How many *candidates* are there for this office? ಈವುದ್ಯೋಗಕ್ಕೋಸ್ಕರವಾಗಿಯೆಷ್ಟುಮಂದಿಯುಮ್ಮೇದವಾರರಿದ್ಧಾರೆ.

Candidly, ad. ಬಗ್ಗರಿಯಾಗಿ, ನಿಷ್ಕಪಟವಾಗಿ, ನಿರ್ವಂಚನೆಯಾಗಿ, ಯಥಾರ್ಥವಾಗಿ. v. *Candid.*

Candidness, s. n. ಬಗ್ಗರಿತನ, ನಿಷ್ಕಾಪಟ್ಯ. v. *Candour.*

Candle, s. n. (*wax*) ಮೇಣದಬಟ್ಟಿ, ಮೇಣಗಪಟಿ; (*wick of a candle*) ಬತ್ತಿ, ವರ್ತಿ, ದಶಿ; (*snuff of a candle*) ಕುಡಿ, ಸೊಡಲು, (*to snuff a candle*) ಕುಡಿಕತ್ತರಿಸು, ಸೊಡಲುಕತ್ತರಿಸು; (*a lighted candle*) ಮುಟ್ಟಿಸಿದ ಬತ್ತಿ; (*candlestick*) ದೀಪಸ್ತಂಭ, ದೀಪದಕಂಭ, ದೀಪಪಾದವು, ಶಿಂಮೆ, ದೀವಿಗೆಕಂಭ. v. *Lamp, lustre, lanthorn.*

Candour, s. n. ಬಗ್ಗರಿಕೆ, ಸರಳತನ, ಸಾಲಕ್ಷ್ಯ, ನಿಷ್ಕಪಟತನ. v. *Sincerity, openness, ingenuousness.*

To Candy, v. a. ಪಾಕಕಾಸು, ಘಟ್ಟಿಪಾಕಮಾಡು, ಹದವಾಗಿಕಾಸು; (*sugar-candy*) ಕಲ್ಲುಸಕ್ಕರೆ. v. *Sugar, confection, conserve.*

Cane, s. n. (*a staff*) ದಂಡ, ಬೆತ್ತ, ಕೋಲು. v. *Stick, reed.* (*sugar*) ಕಬ್ಬು, ಇಕ್ಷುದಂಡ, ಇಂಗೋಲು, ರಸಾಲ; (*leaves of*) ಗರಿ, ಸೋಗೆ; (*plantation*) ಕಬ್ಬಿನತೋಟ, ಕಬ್ಬಿನಗದ್ದೆ; (*hot juice of*) ಕಾಕಂಬಿ, ಎಂಗೆವದ.

To Cane, v. a. ಬಡಿಯು, ಹೊಡೆಯು, ಪ್ರಹರಿಸು; (*to be caned*) ಪೆಟ್ಟುತಿನ್ನು, ಹೊಡೆಯಲ್ಪಡು, ಪ್ರಹರಿಸಲ್ಪಡು, ಬಡಿಯಲ್ಪಡು.

Canine, a. ನಾಯಿಸಂಶಿನ, ಶ್ವಾನಾಯಮಾನ; (*a canine appetite*) ಬಕಹಸಿವು; (*tooth*) ನಾಯಿಹಲ್ಲು.

Canister, s. n. ಡಬ್ಬಿ. v. *Basket.*

Canker, s. n. (*a worm*) ಎಲೆಹುಳ; (*blight*) ಶೀವಿಕೆ, ಕಪ್ಪುದಿವಿಕೆ. v. *Mildew.* (*corrosion*) ಕಿಲುಬು, ತುಕ್ಕು; (*of a sore*) ಇಸಬು, ಜುರಿ, ದುರ್ಮಾಂಸ.

To Canker, v. n. (*to grow corrupt*) ಕಿಲುಬುಹಿಡಿಯು, ತುಕ್ಕುಹಿಡಿಯು; (*corrode*) ಕೆಡಿಸು. v. *To corrupt, infect, pollute.*

Cannibal, s. n. ಮನುಷ್ಯಾಶನನು, ರಾಕ್ಷಸನು, ರಕ್ಕಸನು.

Cannon, s. n. ದೊಡ್ಡಫಿರಂಗಿ.

To Cannonade, v. a. ತೋಪುಹೊಡೆಯು, ಫಿರಂಗಿಹಾಕು.

Cannon-ball, s. n. ಫಿರಂಗಿ, ಗುಂಡು.

Cannonier, s. n. ಗೋಲಂದಾಜ, ಫಿರಂಗಿಸುಡುವವ.

Cannot, (v. *Can.*) It *cannot* be ಅದು ಆಗದು, or ಅದುಆರದು; I *cannot* ನನ್ನಿಂದಲಾಗದು, or ನನ್ನಿಂದಲಾರದು; I *cannot* do ನಾನುಮಾಡಲಾರೆ.

Canoe, s. n. ದೋಣಿ, ದ್ರೋಣಿ.

Canon, s. n. ವಿಧಿ, ನಿರ್ಣಯ, ಧರ್ಮ, ಪದ್ಧತಿ, ನ್ಯಾಯ, ನೀತಿ, ಶ್ರುತಿ, ಶಾಸ್ತ್ರ. v. *Institution, regulation, rule, custom, law.*

Canonical, a. ನ್ಯಾಯ್ಯ, ನ್ಯಾಯಪ್ರಕಾರವಾದ, ಧರ್ಮಶಾಸ್ತ್ರೋಕ್ತವಾದ. v. *Legal.*

Canopy, s. n. ಉಲ್ಲೋಚವು, ಚಾಂದಣಿ, ಬಿಸಿಲುಚಪ್ಪರ, ಸೂರ್ಯಪಾನ, ಸುರಟಿ, ನಡುಚಪ್ಪರ.

Canorous. v. *Musical, tuneful.*

Cant, s. n. (*barbarous language*) ಅಪಭ್ರಂಶ,

ಗ್ರಾಮ್ಯಭಾಷೆ; (*auction*) ಯಿಲಾಲ; (*hypocrisy*) ಕಪಟ, ಪುಸಲಾಯಿಕೆ, ನಂಬಿಸಸುಳ್ಳತನ; (*whining*) ದೀನಸ್ವರ, ನರಳು.

To Cant, v. n. (*talk barbarously*) ಅಪಭ್ರಂಶವಾಗಿ ಮಾತಾಡ; (*to play the hypocrite*) ಇಚ್ಛಕವಾಗಿ ಮಾತಾಡ, ಪುಸಲಾಯಿಸ, ನಂಬಿಸ.

Canter, s. n. (*a hypocrite*) ಇಚ್ಛಕದವ, ದೀನಸ್ವರವುಳ್ಳವನು, ಮಾಯಾವಾದಿ, ಅಷಾಢಭೂತಿ, ಕಳ್ಳಾಚಾರದವನು; (*of a horse*) ಕುಪ್ಪವಿಕೆ.

To Canter, v. n. ಕುಪ್ಪ.

Canthus, s. n. ಅಪಾಂಗ, ನೇತ್ರಾಂತ; (*inner*) ಕಣಗೆಕೆ; (*outer*) ಕೊಣಿಕೆ.

Canticle, s. n. ಹಾಡು, ಪದ, ಸಂಗೀತ.

Cantingly, ad. ಇಚ್ಛಕವಾಗಿ, ದೀನಸ್ವರವಾಗಿ.

Cantle, s. n. ತುಂಡು, ಖಂಡ. v. *Segment.*

To Cantle, v. a. ಛಿದ್ರಛಿದ್ರವಾಗಿ ಕಡಿಯು, ತುಂಡುತುಂಡಾಗಿ ಕೊಯ್ಯು. v. *To cut.*

Cantlet, s. n. ತುಂಡು, ಖಂಡ, ತುನಿಕೆ.

Canto, s. n. (*section of a poem*) ಸಂಧಿ, ಪ್ರಕರಣ.

Canton, s. n. (*a parcel of land*) ಪರಗಣೆ, ತಾಲೂಕು; ಗಡಿ (*a tribe*) ಗೋತ್ರ, ಕುಲ, ಜಾತಿ.

To Canton, v. a. ಪರಗಣೆಮಾಡ, ಹಂಚಿಡ, ಪಾಲುಮಾಡ, ವಿಂಗಡಿಸ. v. *To divide, parcel out.*

Cantonments, s. n. ಛಾವಣಿ, ಬಿಡಾರ.

Canvass, s. n. (*cloth*) ಕಿಂದಿ, ತೊಂತಬಟ್ಟೆ, ದಪ್ಪದಬಟ್ಟೆ; (*enquiry*) ವಿಚಾರಣೆ, ಪರಾಮರ್ಶಿಕೆ; (*solicitation*) ಬೇಡುವದು, ಬೆಸಗೊಳ್ಳುವದು, ಯಾಚಿಸುವದು.

To Canvass, v. a. (*to examine*) ಪರೀಕ್ಷಿಸ, ಶೋಧಿಸ, ವಿಚಾರಿಸ; (*to solicit*) ಬೇಡಿಕೊಳ್ಳ, ಬೆಸಗೊಳ್ಳ.

Cap, s. n. ಕುಲ್ಲಾಯಿ, ಟೋಪಿ; (*of a pole*) ಅಣಸು.

To Cap, v. a. ಅಣಸುಹಾಕ.

Capable, a. ಸಾಮರ್ಥ್ಯವುಳ್ಳ, ಯೋಗ್ಯತೆಯುಳ್ಳ, ತ್ರಾಣೆಯುಳ್ಳ. v. *Able, fit, equal to.* When you are in trouble we will help you as far as we are *capable* ನಿನಗೊಂದಾಪತ್ತು ಬಂದಾಗ ನಮ್ಮ ಕೈಲಾದಷ್ಟು ಸಹಾಯಮಾಡುವೆವು; (*intelligent*) ಬುದ್ಧಿವಂತ, ವಿದ್ವಾಂಸನಾದ. v. *Learned, wise, skilful.*

Capableness, Capability, s. n. ಸಾಮರ್ಥ್ಯ, ಶಕ್ತಿ; ಯೋಗ್ಯತೆ; (*to the extent of capability*) ಯಥಾಶಕ್ತಿ.

Capacious, a. ವಿಸ್ತಾರ, ದೊಡ್ಡ, ಅಗಲವಾದ, ವಿಶಾಲವಾದ. v. *Ample, large, wide, extensive.*

Capaciousness, s. n. ವಿಸ್ತಾರಿಕೆಯು, ವಿಸ್ತೀರ್ಣತ್ವವು, ವಿಶಾಲತ್ವವು. v. *Space, room.*

Capacity, s. n. ತ್ರಾಣೆ, ಹಂಮ್ಮು, ಯೋಗ್ಯತೆ, ಶಕ್ತಿ. v. *Capableness, capaciousness.*

Cap-a-pie, s. n. ಆಪಾದಮಸ್ತಕ.

Caparison, s. n. ಶಾಜೀನ, ಝೂಲ್ನಾ, ಕುದುರೇದುಸ್ತು.

To Caparison, v. a. (*a horse*) ಶಾಜೀನಹಾಕ, ಝೂಲ್ನಾಹಾಕ; (*to adorn*) ಅಲಂಕರಿಸ, ಶೃಂಗರಿಸ.

Cape, s. n. (*collar*) ಕಂಟಿದುಸ್ತು; (*head land*) ದಡದಕಚ್ಚು, ದಡದಕೊಲ್ಲಿ.

Caper, s. n. (*a leap*) ಕುಪ್ಪಳಿಕೆ, ಹಾರುವಿಕೆ, ಕುಪ್ಪವಿಕೆ.

To Caper, v. a. ಕುಪ್ಪಳಿಸ, ಹಾರ, ಕುಪ್ಪ. v. *Jump, dance.*

Caperer, s. n. ಹಾರುವವ, ಕುಪ್ಪುವವ.

Capital, s. n. (*city*) ಸಂಸ್ಥಾನ, ರಾಜಸ್ಥಾನ; (*crime*) ಪ್ರಾಣಾಂತ್ಯದಪರಾಧವು; (*stock*) ಅಸಲುಗಂಟು, ಮೂಲದ್ರವ್ಯ, ನೀವಿ, ಪರಿಪಣ, ಮೂಲಧನವು; (*letter*) ಪಟ್ಟಾಕ್ಷರ; (*capital of a pillar*) ಬೋದಿಗೆ; (*chief*) ಪ್ರಾಮುಖ್ಯ, ಮುಖ್ಯವಾದ, ಶ್ರೇಷ್ಠವಾದ. v. *Great, principal.*

Capitation, s. n (*poll tax*) ತಲೇತೆರಿಗೆ, ತಲೇಪಟ್ಟಿಗೆ.

To Capitulate, v. a. ಕೌಲುಮಾತಾಡ, ಸಲಹಾಮಾತಾಡ.

Capitulation, s. n. ಕೌಲು, ಕರಾರು, ಸಲಹಾ. v. *Terms, conditions, stipulations.* (*to request it*) ಕೌಲುಕೇಳ; (*to accept it*) ಕೌಲುಗೆಳಿಯು.

Capon, s. n. ಬೀಜಾತೆಗೆದಕೋಳಿ.

Caprice, s. n. ವಿಪರೀತಬುದ್ಧಿ, ಯಡವಟ್ಟಿತನ, ಯದೃಚ್ಛೆ. v. *Whim, fancy, freak, obstinacy.*

Capricious, a. ಯಡವಟ್ಟಿನ, ವಿಪರೀತಬುದ್ಧಿಯುಳ್ಳ, ಚಂಚಲವುಳ್ಳ; (*man*) ಸ್ವೇಛಾಪುರುಷ, ವಿಪರೀತಬುದ್ಧಿಯವನು. v. *Inconstant, fanciful.*

Capriciously, ad. ಯಡವಟ್ಟಾಗಿ, ವಿಪರೀತವಾಗಿ, ಯದೃಛೆಯಾಗಿ, ಚಂಚಲವಾಗಿ.

Capricorn, s. n. (*in the zodiac*) ಮಕರರಾಶಿಯು.

Capsicum, s. n. (*red pepper*) ಮೆಣಸಿನಕಾಯಿ.

Captain, s. n. ಸುಬೇದಾರ. v. *Commander.* (*ship captain*) ಹಡಗಿನಯಜಮಾನ.

Captious, a. ಜಗಳಗಂಟಿಯಾದ, ಕುಯುಕ್ತಿಯುಳ್ಳ, ಕೊಸಷ್ಟೆಯುಳ್ಳ. v. *Quarrelsome.*

Captiousness, s. n. ರಂಧ್ರಾನ್ವೇಷಣೆ, ಕೋಸಷ್ಟೆ, ಕಲಹಪ್ರೀತಿಯು.

To Captivate, v. a. ಮರುಳುಮಾಡ, ವಲಿಪಿಸ, ಪ್ರಮೋಹಿಸ, ವಿಮೋಹಿಸ.

Captivated, part. ವಶ್ಯವಾದ, ಬಲೆಬಿದ್ದ, ಮರುಳಾದ.

Captivating, a. ಆಸೇಚನಕ, ಪ್ರಮೋಹಿಸುವ, ಮೋಹಿಸುವ, ವಲಿಪಿಸುವ.

Captive, s. n. ಸೆರೆಸಿಕ್ಕಿದವ, ಕಾರಾಗ್ರಹಿತ; (*To take captive*) ಸೆರೆಹಿಡಿಯು; (*To be taken captive*) ಸೆರೆಬೀಳ.

Captivity, s. n. ಸೆರೆ, ಬಂಧಕ, ಕಾವಲಿ. v. *Slavery, servitude.*

Captor, s. n. ಸೆರೆಹಿಡಿದವನು, ಸೂರೆಗಾರ, ಕೊಳ್ಳೆಯಿಡುವವ.

Capture, s. n. ಕೊಳ್ಳೆ, ಸೂರೆ, ಸುಲಿಗೆ, ಲೂಟಿ. v. *Prize, plunder.*

To Capture, v. a. ಸುಲಿಕೊಳ್ಳ, ಕೊಳ್ಳೇಮಾಡ.

Car, s. n. ರಥ, ತೇರು. v. *Carriage.* (*a covered car*) ಕಣಿಕೇರಥ, ಪ್ರವಹಣ.

Carabine, s. n. ಕತೋಲು.

Caravan, s. n. ಬೀಡಿಕೆ, ಬೀಡಿಕೆಜನ, ಪರಿಕೆ.

Caravansary, s. n. ಬಿಡಾರ, ಚಾವಡಿ, ಛತ್ರ.

Caraway, s. n. ಶಾಜೀರ, ಸೋಂಪು.

Carbuncle, s. n. (*jewel*) ಮಾಣಿಕ್ಯ, ಮಾಣಿಕ, ಕೆಂಪು, ಕೆಂಬರಲು, ರತ್ನವರಲು, ಕಿಸುಗಲ್ಲು; (*red pimple*) ಪುಲುಪುರಿ, ಮಡವಿ.

Carcanet, s. n. ಮಣಿಹಾರ, ರತ್ನಹಾರ.

Carcase, Carcass, s. n. ಶವ, ಹೆಣ, ಕುಣಪವು.

Card, s. n. (*used in games*) ಗಂಜೀಫು; (*for wool*) ಉಣ್ಣೇಹಣಿಗೆ.

To Card, v. a. *(wool)* ಬಾಚು, ಎಕ್ಕು, ಉಂಗಿರೆಬಿಡಿಸು.

Cardamums, s. n. ಏಲಕ್ಕಿ; *(large)* ಪೃಥ್ವೀಕೆ, ಚಂದ್ರವಾಲೆ, ಏಲೆ; *(small)* ಸಂಣೇಲಕ್ಕಿ, ಕುಂಚಿಕೆ, ತುಷ್ಠಿ, ಕೋರಂಗಿ, ತ್ರಿಪುಟೆ.

Carder, s. n. This work is done by ಕುರುಬರು shepherds.

Cardialgy, s. n. *(heart-burn)* ಎದೆಯುರುಪು, ಅಮ್ಲಪೈತ್ಯ.

Cardinal, a. ಪ್ರಧಾನವಾದ, ಪ್ರಮುಖವಾದ, ಮುಖ್ಯವಾದ, ಶ್ರೇಷ್ಠವಾದ, ಗುರುತ್ವದ, ಪ್ರಬಲವಾದ.

Care, s. n. *(caution)* ಜಾಗ್ರತೆ, ಖಾತ್ರ, ಜಾಗರೂಕತನ, ಖಬರುದಾರಿ; *(anxiety)* ವ್ಯಸನ, ವ್ಯಾಕುಲ, ಚಿಂತೆ; *(regard)* ಪ್ರೀತಿ; Take *care* how you go ಖಾತ್ರವಾಗಿಹೋಗು, or ಎಚ್ಚರವಾಗಿನಡಿ; Take *care* of this for me ನನ್ನದಾಗಿನಿನ್ನಬಳಿಯಲ್ಲಿರಲಿ, or ನನಗೋಸ್ಕರವಾಗಿದರಂನಜ್ಯಾಕೆಯಾಗಿಡು; If you do not take *care* it will break ಒಂದುವೇಳೆಯೊಡದೀತುಜ್ಯಾಕೆ, or ಶ್ರದವಡದೀತುಕಂಡ್ಯಾ; He seems full of *care* ಅವನುಬಹಳ ವ್ಯಾಕುಲಿತನಾದ ಹಾಗೆಕಾಣುತ್ತಿದೆ, or ಅವನ್ಯಾಕೋಬಹಳ ಚಿಂತೆಯಾಗಿಧಾನೆ; I dont *care* ನನಗೇನು, or ನನಗೆಚಿಂತೆಯಿಲ್ಲ, or ನನಗೇಕಚಿಂತೆದು.

To Care, v. n. ಚಿಂತಿಸು, ಚಿಂತೆಪಡು; *(to be careful)* ಜಾಗ್ರತೆಯಾಗಿರು; *(to regard)* ಮನಸಿಡು; *(to watch over or provide for)* ಪರಾಮರಿಸು, ಪೋಷಿಸು; *(to take care)* v. a. ಖಾತ್ರಮಾಡು, ಜಾಗ್ರತೆಮಾಡು; *(to be affected with care)* ಚಿಂತೆಪಡು, ವ್ಯಸನಪಡು, ವ್ಯಾಕುಲಪಡು.

Career, s. n. *(the course of any thing)* ತಿರಗಾಟ, ಸುತ್ತಿಯಾಟ; *(race ground)* ಕುದುರೇಜ್ಞಾಡಿಸಗಂಡುನಾಡೆ; *(race)* ಕುದುರೇಜ್ಞಾಜು, ಕುದುರೇಪಂತ, ಕೂಡುಕೆಯಾಟ.

Careful, a. *(cautious)* ಜಾಗ್ರತೆಯಾದ, ಖಾತ್ರವಾದ, ಜಾಗರೂಕವಾದ; *(provident)* ಮುಂನೆಚ್ಚರವುಳ್ಳ, ಮಿತಿ, ದೂರದೃಷ್ಟಿಯುಳ್ಳ; *(full of anxiety)* ಚಿಂತೆಯುಳ್ಳ ಮನೋವ್ಯಾಕುಲವುಳ್ಳ.

Carefulness, s. n. ಖಾತ್ರ, ಜಾಗ್ರತೆ, ಜ್ಯಾಕೆ, ಜಾಗರೂಕತ್ವ. v. *Care, vigilance.*

Carefully, ad. ಜಾಗ್ರತೆಯಾಗಿ, ಖಾತ್ರವಾಗಿ, ಹುಷಾರವಾಗಿ.

Careless, a. *(negligent)* ಅಜಾಗ್ರತೆಯ, ಎಚ್ಚರಿಕೆಯಿಲ್ಲದ, ನಿಶ್ಚಿಂತೆಯಾದ, ತಾತ್ಸಾರವುಳ್ಳ. v. *Thoughtless, undisturbed.* He is a very *careless* man ಅವನುಮಹಾಅಶ್ರದ್ಧೆಯುಳ್ಳವನು, or ಅವನುಮಹಾಅಜಾಗ್ರತೆಯವನು.

Carelessly, ad. ಅಜಾಗ್ರತೆಯಾಗಿ, ಮಂದಮತಿಯಾಗಿ, ತಾತ್ಸಾರವಾಗಿ, ಎಚ್ಚರಿಕೆಯಿಲ್ಲದೆ.

Carelessness, s. n. ಅಶ್ರದ್ಧೆ, ಅಜಾಗ್ರತೆ, ತಾತ್ಸಾರವು, ಮತಿಮದವು, ಅಸಡ್ಡೆ. v. *Negligence, inattention.*

Caress, s. n. ಆದರಣೆ, ಮೆಚ್ಚಿಕೆ, ಸರಸ, ಲಾಲನೆ, ಹೊಮ್ಮೋಪ್ಪಿ, ಓಲಾಟ. v. *Endearment.*

To Caress, v. a. ನ್ಯಾವರಿಸು, ಆದರಿಸು, ವಾತ್ಸಲ್ಯಮಾಡು, ಲಾಲಿಸು. v. *To endear, fondle, favour, love.*

Cargo, s. n. ಹಡಗಿನಸರಕು, ಹಡಗಿನಭಾರ.

Caries, Cariosity, s. n. ಶಿಥಿಲತ್ವ, ಪುಘನ, ಪುಪ್ಪಿ v. *Rottenness.*

Carious, a. ಶಿಥಿಲವಾದ, ಹುಳುಕ; (*a carious tooth*) ಹುಳುಕ ಹಲ್ಲು. v. *Rotten.*

Carnage, s. n. ಕೊಲೆ, ಪ್ರಮಾಪಣ, ನಿಬರ್ಹಣ, ನಿಕಾರಣ, ಪ್ರವಾಸನ, ಪರಾಸನ, ನಿಷೂದನ, ನಿಹಿಂಸನ, ನಿರ್ವಾಸನ, ಸಂಜ್ಞಪನ, ನಿಗ್ರಂಥನ, ಅಪಾಸನ, ನಿಸ್ತರ್ಹಣ, ನಿಹನನ, ಕ್ಷಣನ, ಪರಿವರ್ಜನ, ನಿರ್ವಾಪಣ, ವಿಶಸನ, ಮಾರಣ, ಪ್ರತಿಘಾತನ, ಉದ್ವಾಸನ, ಪ್ರಮಥನ, ಕ್ರಥನ, ಉಜ್ಜಾಸನ, ಆಲಂಭ, ಪಿಂಜ, ವಿಶರ, ಘಾತ, ಉನ್ಮಂಥ, ವಧ. v. *Slaughter, havock, massacre.*

Carnal, a. ಶರೀರಾಭಿಮಾನವುಳ್ಳ, ದೇಹಾಭಿಮಾನವುಳ್ಳ, ಲೌಕಿಕವಾದ; (*lecherous*) ಕಾಮವಿಕಾರವುಳ್ಳ, ಕಾಮಮುಳ್ಳವುಳ್ಳ; (*the three cardinal carnal desires commonly spoken of by the Hindoos*) ಈಷಣಾತ್ರಯ; as, ವಿತ್ತೇಷಣಾ *estate;* ಪುತ್ರೇಷಣಾ *children;* ದಾರೇಷಣಾ *women;* or ಮಣ್ಣು *earth,* or *landed estates, houses, &c.* ಹೆಣ್ಣು *women;* ಹೊನ್ನು *riches.*

Carnality, s. n. ಶರೀರಾಭಿಮಾನ, ದೇಹಾಭಿಮಾನ, ಲೌಕಿಕತನ.

Carnally, ad. ದೇಹಾಭಿಮಾನವಾಗಿ.

Carnation, s. n. (*colour*) ಮಾಂಸದವರ್ಣ.

Carnivorous, a. ಮಾಂಸಾದಿಯಾದ, ಮಾಂಸಾಹಾರಿಯಾದ, ಕ್ರವ್ಯಾದವಾದ.

Carol, s. n. ಕೀರ್ತನೆ, ಪದ. v. *Song, hymn.*

To Carol, v. a. ಕೀರ್ತನೆಯೆತ್ತು, ಪದಾಡಾಡ.

Carousal, s. n. ಜಾತ್ರೆ, ಹಬ್ಬ, ಕ್ಷಣ, ಉದ್ಧರ್ಷ, ಮಹ, ಉದ್ಧವ, ಉತ್ಸವ. v. *Festival.*

To Carouse, v. n. ದುಂದುಮಾಡ, ಸುರಾಪಾನಮಾಡ, ಹೆಂಡಬಾಕರತನಮಾಡ. v. *To drink, quaff.*

Carouser, s. n. ದುಂದುಗಾರ, ಕುಡಿಗಾರ, ಹೆಂಡಬಾಕ. v. *Toper.*

Carp, s. n. (*fish*) ಪ್ರೋಷ್ಠಿ, ಶಫರಿ.

To Carp, v. n. ಕುಯುಕ್ತಿಮಾಡ, ತರ್ಕಿಸ, ತಪ್ಪುಹಿಡಿಯ, ಕೊನೆಹೊಸೆತ್ತು. v. *To cavil, censure.*

Carpenter, s. n. ಬಡಿಗೆಯುವ, ವರ್ಧಕಿ, ಮರಕುಟಿಗನು, ಓಜನು, ತಕ್ಷನು, ತಷ್ಟನು, ರಥಕಾರನು; (*carpenter's work bench*) ಉದ್ಘನ, ಕೊರಡು.

Carpentry, s. n. ಬಡಿಗೆತನ.

Carper, s. n. ವಾಚಾಳಕ, ಕೂಹಕವುಳ್ಳವನು, ತಾರ್ಕಿಕನು, ಕುಭಿತನು, ಕೊನೆಹೊಸೆಗಾರ.

Carpet, s. n. ಜಂಮಖಾನ, ರತ್ನಕಂಬಳಿ, ಉಲಾರ.

To Carpet, v. a. ಜಂಬುಕಾನಹಾಸ.

Carping, a. ಕುವಾದ, ಕುಚರ, ಪುಹೋತ್ಸಾಗವುಳ್ಳ, ಕುಚೇಷ್ಟೆಯುಳ್ಳ, ಕುಯುಕ್ತಿಯುಳ್ಳ, ಕುಚೋದ್ಯವುಳ್ಳ, ಕೂಹಕವುಳ್ಳ. v. *Censorious.*

Carpingly, ad. ಕುಯುಕ್ತಿಯಾಗಿ, ಕುಚೇಷ್ಟೆಯಾಗಿ.

Carriage, s. n. ಬಂಡಿ, ರಥ, ಗಾಡಿ, ವಹಿತ್ರ; (*a carriage drawn by oxen*) ಎತ್ತಿನಬಂಡಿ, ಗಂತ್ರಿಯು; (*fender of a carriage*) ಘಾಳಿಮರೆ, ರಥಗುಪ್ತಿ, ವರೂಥ; (*pole of a carriage*) ಇರಸು, ಅಚ್ಚಿಕೂಬರ, ಯುಗಂಧರ; (*bottom of a carriage*) ಬಂಡಿಮಣೆ, ಅನುಕರ್ಷ; (*behaviour*) ಪ್ರವರ್ತನೆ, ನಡತೆ; (*air*) ಮುಖಭಾವ; (*of a cannon*) ಫಿರಂಗಿಬಂಡಿ.

Carrier, s. n. ಒಯ್ಯುವವ, ಹೊರುವವ; (*a

messenger) ಹರಕಾರ, ಠಪ್ಪಾಲ; (of goods) ಮೊಟ್ಟೆಯಾಳು, ಮೊಟ್ಟೆಕಾರನು. Those persons who carry baggage from village to village for travellers are called ಬಿಟ್ಟೀಯಾಳುಗಳು; these people have lands allowed them to live upon, and, therefore, can make no charge for the labour they perform in the above employ, though it is usual to give them a small present. Other persons employed as carriers or porters are called ಕೂಲೀಜನರು, and, agreeably to the public regulations, have two fanams allowed them for every ten miles; (a letter carrier) ಅಂಚೆಯವ, ಠಪಾಲುಕಾರ. v. *Courier, messenger.*

Carrion, s. n. ಸತ್ತಮೃಗ, ಶವಮಾಂಸವು.

Carrot, s. n. ಗಜ್ಜರಿ, ಪೀತಕಂದ, ಶಿಖಾಮೂಲ.

Carroty hair, s. n. ಕೆಂಪುಕೂದಲು.

To Carry, v. a. (*to bear*) ಹೊತ್ತುಕೊಳ್ಳು, ನಿರ್ವಹಿಸು. v. *To bear.* (*to convey from a place*) ತೆಗೆದುಕೊಂಡುಹೋಗು, ಒಯ್ಯು; They have *carried* all the corn from the threshing floor to the market ಅವರು ಕಳದೊಳಗಿನ ಕಾಳೆಲ್ಲವು ಬಾಜಾರಕ್ಕೊಯಿದರು, or ಅವರು ಕಳದೊಳಗಿಂದಲು ಕಾಳೆಲ್ಲವು ಸಂತೆಗೊಯಿದರು; (*to have about one*) ಧರಿಸಿಕೊಂಡಿರು; The peons all *carry* fire-arms ಉಳಿಗದವರೆಲ್ಲ ಕಾಲಾಯುಧಸ್ತರಾಗಿರುವರು, or ಬಂಟರೆಲ್ಲ ಕಾಲಾಯುಧವನ್ನು ಹಿಡಿದಿರುವರು; (*to carry off by force*) ಬಲಾತ್ಕಾರವಾಗಿ ಹಿಡಿದು ಕೊಳ್ಳು, ಬಲೋದ್ಧಂಡಿಯಾಗಿ ಹಿಡಿದುಕೊಂಡುಹೋಗು; (*to effect any thing*) ಜಯಿಸು, ಗೆಲ್ಲು, ಕೈವಶಮಾಡು, ಸಾಧಿಸು, ಘಟಿಸು; He has *carried* his purpose ಅವನು ತಾನು ನೆನಸಿದ ಕಾರ್ಯವನ್ನು ಕೈವಶಮಾಡಿಕೊಂಡನು, or ಅವನು ಸಾಧಿಸಿದವನು, or ಅವನು ಸಾಧ್ಯವು ಮಾಡಿಕೊಂಡನು; (*to gain in competition*) ಗೆಲ್ಲು; He *carried* the prize ಅವನು ಬಹುಮಾನ ಹೊಂದಿದನು, or ಅವನು ಬಿರುದುವನ್ನು ಹಿಡಿದನು; (*to manage*) ನಿರ್ವಹಿಸು, ನಡಿಸು, ಆಳು; Since the father died the eldest son *carries* on the business ತಂದೆ ಸತ್ತಂದಿನಿಂದ ಹಿರಿಯಮಗ ವ್ಯಾವಹಾರವನ್ನು ನಡೆಯಿಸುತ್ತಾನೆ; (*to behave*) ನಡೆಯು, ಪ್ರವರ್ತಿಸು; He *carries* himself very strangely towards me ಅವನು ನನ್ನ ಸಂಗಡ ಒಂದು ಪ್ರಕಾರವಾಗಿ ಕಾಣಿಸುತ್ತಾನೆ; (*to urge*) ಮನವೆಳೆಯು, ಪ್ರೇರೇಪಿಸು, ಉತ್ಸಾಹಮಾಡು, ಚಿತ್ತವೆಳೆಯು; His inclinations *carried* him too far ಅವನ ಬುದ್ಧಿಯವನನ್ನು ತಪ್ಪಿಸಿತು, or ಅವನು ಭ್ರಾಂತಿಗೊಳಗಾದನು, or ಅವನ ಮನಸ್ಸು ಮೀರಿತು; (*to have annexed*) ಸಂಯುಕ್ತವಾಗಿರು; Secrecy commonly *carries* fear ಗೋಪ್ಯವಾದ ಕಾರ್ಯವು ಭಯಯುಕ್ತವಾಗಿರುವದು, or ಅಂತರಂಗದ ಕಾರ್ಯವಂಜಿಕೆಯನ್ನು ತೋರಿಸುವದು; (*to display on the outside*) ಹೊರಗೆತೋರಿಸು; He *carries* two faces under one hood ಅವನು ಎರಡು ನಾಲಿಗೆಯವನು, or ಹಾವುನಾಲಿಗೆಯವ, or ಉಡುವುನಾಲಿಗೆಯವ, or ಬದ್ಧವಿಲ್ಲದವ; (*to carry off*) ಎತ್ತಿಕೊಂಡುಹೋಗು, ಹೊಸಕೊಂಡುಹೋಗು; A tiger came

down from the hills last night and *carried* off two sheep ನಿಂನಿನ ರಾತ್ರಿ ಹುಲಿ ಗುಡ್ಡದಿಯಿಂ ದಿಳಿದು ಬಂದು ಎರಡು ಕುರಿಗಳಂ ಹೊಡೆಯಿತು, or ಎತ್ತಿ ಕ್ಕೊಂಡು ಹೋಯಿತು; They *carried* it off very slyly ಅವರು ದರಂನ ಶಿಳಿಯದ ಹಾಗೆ ತಂಗೊಯಿದರು; (*to carry off, kill*) ಕೊಲ್ಲು, ಕೊಂದು ಹಾಕು; A violent fever *carried* him off ಬಲವಾದ ಜ್ವರ ಅವನಂ ಕೊಂದಿತು; (*to carry on, to help forward*) ನಡಿಸು, ನಡೆಯಿಸು, ಮುಂದಕ್ಕೆ ನಡೆಯಿಸು; (*to carry through*) ತೀರಿಸು, ಮುಗಿಸು, ಸಂಪೂರ್ಣ ಮಾಡು; He began the business but was not able to *carry* it through ಅವನು ಕೆಲಸವಂನು ಪ್ರಾರಂಭಿಸಿದನಾದರೆ ಅದಂನು ಪೂರಯಿಸಲವನಿಂದಾಗದೆ ಹೋಯಿತು; He *carries* it very high ಅವನು ಬಹಳ ಕೊಬ್ಬಿಯಿದ್ದಾನೆ, or ದಾಷ್ಟೀಕವಾಗಿ ನಡೆಯುತ್ತಾನೆ; He *carries* it very fair before me, but behind my back he is a great rogue ನನ್ನ ಮುಂದೆ ಸಾಧುವು ಹಿಂದೆ ಮಹಾ ಕಳ್ಳನು, He wants to *carry* all before him ಅವನು ಸರ್ವ ಶ್ರೇಷ್ಠನಾಗಬೇಕೆನ್ನುತ್ತಾನೆ, or ಅವನೆಲ್ಲವಂನು ತನ್ನ ಕೈಕೆಳಗೆ ಇಟ್ಟುಕೊಳ್ಳಬೇಕೆಂದಿದ್ದಾನೆ; It was *carried* at last in his favor ಕಟ್ಟ ಕಡೆಯಲ್ಲಿ ಅವನಿಗೆ ಅನುಕೂಲವಾಗಿ ತೀರಿಸಲ್ಪಟ್ಟಿತು, or ಅವನ ಪರವಾಗಿ ತೀರಿಸಲ್ಪಟ್ಟಿತು; How high are they going to *carry* up this wall? ಈ ಗೋಡೆಯಂನು ಎಷ್ಟು ಎತ್ತರವಾಗಿ ಕಟ್ಟಬೇಕೆಂದಿದ್ದಾರೆ, or ಕಟ್ಟಿ ಹೋಗುತ್ತಿದ್ದಾರೆ; Which of them *carried* the day? ಅವರಲ್ಲಿ ಯಾರು ಗೆದ್ದರು; This horse *carries* himself well ಈ ಕುದುರೆ ಚಂನಾಗಿ ತಲೆ ಎತ್ತಿಕೊಂಡು ನಡೆಯುತ್ತದೆ, or ಈ ಕುದುರೆಯ ನಡಿಗೆ ಒಳ್ಳೇದು; (*to carry meaning*) ಅರ್ಥ ಕೊಡು, ಅರ್ಥವಾಗು. v. *To signify.*

Cart, s. n. ಬಂಡಿ, ಗಾಡಿ, ವಂಡಿಲಿ, ಅನಸ್ಸು, ಶಕಟವು; (*a bullock cart*) ಎತ್ತಿನ ಬಂಡಿ, ಗಂತ್ರಿ, ಕಂಬಳಿ ವಾಹ್ಯಕ; (*to carry on a cart*) ಬಂಡಿಯ ಮೇಲೆ ಒಯ್ಯು; (*a cart rut*) ಜಾಡು, ಸರಳೆ, ಬಂಡಿಗೆರೆ; (*a cart load*) ಬಂಡಿಯ ಭಾರ, ಬಂಡಿಯ ಹೊರೆ, ಆಚರೆ ಫು; (*to put on a cart*) ಬಂಡಿಯ ಮೇಲೆ ಹೊರಿಸು, ಬಂಡಿಯ ಮೇಲೆ ಏರು; In this country women sometimes drive the buffalo *carts* ಈ ದುವ್ಯಳಿ ಯಾದೇಶದಲ್ಲಿ ಸ್ತ್ರೀಯರು ಕೋಣಗಳ ಕಟ್ಟಿದ ಬಂಡಿ ಯಂನು ಹೊಡೆಯುತ್ತಾರೆ.

Cartel, s. n. ಕವಲು ಕಾಗದ, ಕರಾರು ನಾಮೆ.

Carter, s. n. ಬಂಡಿಯವ, ಗಾಡಿಯವನ, ಗಾಡಿಕಾರ, ಬಂಡಿಕಾರ.

Cartilage, s. n. ಮೃದೆಲುಬು, ಮರಿಯೆಲುಬು, ಬೆಂಡೆಲುಬು.

Cartridge, s. n. ಮದ್ದಿನ ಟೋಟಾ.

Carni, s. n. (*Carum carni*) ಓದಕ್ಕಿ ಗಿಡ, ಅಜಮೋದ, ಉಗ್ರಗಂಧ.

Caruncle, s. n. (*small excrescence of flesh*) ನಲುವರಿ, ಕೆಂಪು ಸರಗಣೆ, ದುಳುಕದ್ದಿ.

To Carve, v. a. (*in stone, wood, &c.*) ಕೆತ್ತು, ಚಿತ್ರಿಸು, ಕಟ್ಟಿ ಕೆಲಸ ಮಾಡು. v. *To engrave.* (*meat*) ಅರಿಯು, ಕೊಯ್ಯು. v. *To cut, dissect.* (*to carve, choose for one's self*) ಆರಿಸಿ ತೆಗೆದುಕೊಳ್ಳು; (*to distribute*) ಹಂಚಿಡು, ಪಾಲು ಮಾಡು, ವಿಭಾಗಿಸು; Is this a *carved* image or a molten image? ಈ ವಿಗ್ರಹವು ಕೆತ್ತಿದ್ದೋ ಎರಕ

ಸೋಯಿದಷ್ಟೋ; Is it easier to *carve* in wood or stone? ಕಟ್ಟಿಗೆಯಚಿ ತ್ರಿಸುವದಕ್ಕಿಂತಾಕಟ್ಟಿಗೆ ಯಂತುಬಚಿತ್ರಿಸುವದುಸುಲಭವೋ.

Carver, s.n. (*in stone*) ಕಲ್ಲುಕುಟಿಗನು, ಕಲ್ಲಾಯಿತ, ಕಲ್ಲೊಜ, ಕಾಲೇಯವ, ಶಿಲ್ಪಿಗಾರ.

Carving, s. n. (*in stone*) ಕಲ್ಲುಕುಟಿಗತನ.

Cascade, s. n. ಸಣ್ಣದಕಲೆ, ನಿರ್ಝರ, ಝರವು, ಚಿಟ್ಟಿಮೊರಕೆ, ಝರಿ.

Case, s. n. (*sheath*) ಒರೆ, ಕೋಶ; (*box*) ಪೆಟ್ಟಿಗೆ; ಕರಂಡಿ; (*of nouns*) ವಿಭಕ್ತಿ; (*state, condition*) ಸ್ಥಿತಿ; (*state of the body*) ದೇಹಧರ್ಮ, ದೇಹಸ್ಥಿತಿ; (*case of facts*) ವಿದ್ಯಮಾನ; Have your doctors any *cases* of instruments? ನಿಮ್ಮವೈದ್ಯರಲ್ಲಿಶಸ್ತ್ರದಹದಪೆಟ್ಟಿ ನಾದರುಂಟೋ; This is a strange *case* ಇದಾಶ್ಚರ್ಯವಾದಕೆಲಸ, or ಇದುಹೊಸಕಾರ್ಯ; It is a plain *case* ಇದುಬಟ್ಟಬೈಲಾದಕಾರ್ಯ; How many *cases* are there in Carnatáca nouns? ಕಂನಡಶಬ್ದಗಳಿಗೆ ಸ್ಟುವಿಭಕ್ತಿಗಳುಂಟು; Is this noun in the nominative *case* or the accusative *case*? ಈಶಬ್ದವು ಪ್ರಥಮಾವಿಭಕ್ತಿಯೋದ್ವಿತೀಯಾವಿಭಕ್ತಿಯೋ, or ಈಶಬ್ದವುಕರ್ತೃವಾಚಕವೋಕರ್ಮವಾಚಕವೋ; It is not at all in *case* ಇದೇನೂಅರ್ಥಾರ್ಥಸಂಬಂಧವಿಲ್ಲದ್ದು; Have you no *case* for your spectacles? ನಿನ್ನಸುಲೋಚನಕ್ಕೆನಾದರುಗೂಡಿಲ್ಲವೋ; This is a pen *case* ಇದುಲೆಕ್ಕಣಿಕೆಯಕೊಳವೆ; This is a distressing *case* ಇದುಮಹಾಅವಚಿಸಿಯಾದಕಾರ್ಯ, or ಇದುಮಹಾಸಂಕಟವಾದಕೆಲಸ; (*a paper case*) ಕಾಗದದಚೀಲವು; (*a leather case*) ತೊಗಲುಚೀಲ, or ತೊಗಲುಮೊರೆ; (*a bamboo case*) ಗೊಟ್ಟ, ಒಳಿಗೆ, ಕೊಳವೆ; (*a wooden case*) ಕಟ್ಟಿಗೆಗೂಡು, ಪೆಟ್ಟಿಗೆ; What would you do in such a *case*? ಹಾಗಾದಕಾಲಕ್ಕೆನೀನೇನುಮಾಡುತ್ತೀಯೆ, or ನಿನಗೀಪ್ರಕಾರವಾದಕೆಲಸಬಂದಾಗ್ಯೆನಿಮಾಡುತ್ತೀಯೆ; If this be the *case* make no delay ಹಾಗಿದ್ದರೆನೀನಾಲಸ್ಯವನ್ನುಮಾಡಬೇಡ; He stated his *case* ಅವನು ತನ್ನವಿದ್ಯಮಾನವನ್ನುಹೇಳಿಕೊಂಡನು.

To Case, v. a. ಒರೆಗೆಹಾಕು, ಗೂಡೊಳಗಿಡು, ಕೊಡಗು, ಗವುಸುಹಾಕು.

Casement, s. n. ಕಿಟಿಕಿ, ಜಾಲಾಂತರ. v. *Lattice*, *window*.

Cash, s. n. ಕಾಸು, ಚಿಲ್ಲರೆನಾಣ್ಯವು.

Cashier, Cashkeeper, s. n. ಗಣಕ, ಚಿನ್ನವರದ, ಸೊನ್ನವರದ.

To Cashier, v. a. ಉದ್ಯೋಗತೆಗೆಯು, ನಿರುದ್ಯೋಗಿಮಾಡು, ಬರತರಪುಮಾಡು.

Cashew-nut, s. n. ಬಾದಾವಿ.

Cask, s. n. ಪೀಪಾಯಿ.

Casket, s. n. ಕರಂಡಿ, ಸಂಪುಟ, ಸಮುದ್ಗವು.

Cassia, s.n. (*woody cassia*) ಲವಂಗದಮರ, ತ್ವಕ್ಪತ್ರ, ಉತ್ಕಟ, ಭೃಂಗ, ತ್ವಚ, ಚೋಚ, ವರಾಂಗಕ; (*cassia fistula*) ಕಕ್ಕೇಮರ, ಆರಗ್ವಧ, ರಾಜವೃಕ್ಷ, ಶಮ್ಯಾಕ, ಚತುರಂಗುಲ, ಆರೇವತ, ವ್ಯಾಧಿಘಾತ, ಕೃತಮಾಲ, ಸುವರ್ಣಕ, (*cassia tera* or *alata*) ತಗಚೇಗಿಡ, ಪ್ರಪುನ್ನಾಡ, ಏಡಗಜ, ದದ್ರುಘ್ನ, ಚಕ್ರಮರ್ದಕ, ಪದ್ಮಾಟ, ಉರಣಾಕ್ಷ.

Cast, s.n. *(as among the Hindoos)* ಜಾತಿ, ಕುಲ, ವರ್ಣ; Of these there are four principal divisions; viz. *(bramins)* ಬ್ರಾಹ್ಮಣರು, ಪಾರುವರು, ಹಾರುವರು; *(military)* ಕ್ಷತ್ರಿಯರು, ಅರಸರು; *(merchants)* ವೈಶ್ಯರು, ಕೋಮಟಿಗರು; *(menial)* ಶೂದ್ರರು, ಒಕ್ಕಲಿಗರು; *(a cast, a throw)* ಎಸೆತ, ಎಯ್ಯುತ. v. *Throw, stroke, touch.* *(a cast or glance of the eye)* ಕಂಣೋಡುವದು; *(a cast or squint of the eye)* ಕಟಾಕ್ಷ, ಕಡೆಗಂಣುನೋಟ; *(a cast or mould)* ಅಚ್ಚು; *(cast, air)* ಮುಖಭಾವ. v. *Mien.* It is only a stone's *cast* from here ಅದು ಕಲ್ಲೆಸುಗೆಯ ದೂರ ಮಾತ್ರ; That boy has a *cast* in his eye ಆ ಹುಡುಗನು ವಾರೆಗಂಣು ನೋಟದವನು, or ಆ ಹುಡುಗನು ಮೆಳ್ಳೆಗಂಣು ನೋಟದವನು; This is a *cast* off cloth ಇದು ಹಳೆಯ ಕೋರಿ, or ಇದು ಜೀರ್ಣವಸ್ತ್ರ, or ಇದು ಹಳೇ ಜಲ್ಲಿ; Is this *cast* iron, or wrought iron; ಇದು ಎರಕದ ಕಬ್ಬಿಣವೋ ಕಾಸಿದ ಕಬ್ಬಿಣವೋ.

To **Cast**, v. a. *(throw)* ಎಸೆಯು, ಏಯು, ಹಾಕು, ಪ್ರಯೋಗಿಸು, ಬೀರು, ಇಡು. v. *To hurl, fling, throw, dart, shoot.* *(to cast anchor)* ಲಂಗರು ಹಾಕು; *(to cast lots)* ಚೀಟಿಹಾಕು; *(to cast, condemn)* ತಪ್ಪುನಿಶ್ಚಯಿಸು, ಅಪರಾಧನಿರ್ಣಯಿಸು; *(to cast in one's mind)* ಚಿಂತಿಸಿಕೊಳ್ಳು, ಯೋಚಿಸಿಕೊಳ್ಳು. v. *To consider.* *(to cast up)* ಗಣಿಸು, ಎಣ್ಣಿಸು, ಗುಣಿಸು, ಗುಣಾಕಾರಮಾಡು, ಲೆಖ್ಖಮಾಡು, ಕೂಡು. v. *To calculate, compute.* *(to vomit)* ವಾಂತಿಮಾಡು, ವಾಕರಿಸು, ವಗದಿಸು, ಕಕ್ಕು; *(to cast down headlong)* ನಾಶನಮಾಡು, ಹಾಳುಮಾಡು. v. *To precipitate, ruin.* *(to cast down, deject)* ಮನಮುರಿಯಿಸು, ಮನೋಭಂಗಮಾಡು, ಮನನೋಯಿಸು, ವ್ಯಸನಪಡಿಸು, ತಲ್ಲಣಗೊಳಿಸು; *(to cast blame upon another)* ತಪ್ಪುಹಾಕು, ಆಕ್ಷೇಪಿಸು. v. *To accuse.* *(to cast in one's teeth)* ಹಂಗಿಸು, ಮರ್ಮಘಾಟಿಸೇಮಾಡು, ಕುಂದಿಸು. v. *To reproach.* *(to cast away)* ಬಿಸುಡು, ಬಿಸಾಡು, ಬಿಸಾಟುಬಿಡು, ಪರಿತ್ಯಜಿಸು, ತ್ಯಜಿಸು, ವಿಸರ್ಜಿಸು, ಬಿಡು, ಬಿಟ್ಟುಬಿಡು, ಕಳೆಯು. v. *To abandon, reject.* *(to be cast away)* ಬಿಸಾಡಲ್ಪಡು; *(to be wrecked)* ಹಡಗಿನ ನಷ್ಟವಂ ಅನುಭವಿಸು, ಹಡಗಿನ ಮೋಸವಂ ಪೊಂದು; *(to be cast on shore)* ದಡಕ್ಕೆ ಬಡಿಸಲ್ಪಡು; *(to cast stones)* ಕಲ್ಲೆಸೆಯು, ಕಲ್ಲುಬೀರು; *(to cast upon the ground)* ನೆಲದಮೇಲೆ ಬಿಸುಡು, ಕೆಳಗೆ ಬಿಸುಡು, ಕೆಳಗೆ ಹಾಕು; *(to cast high)* ಬಹಳ ಉದ್ದಕ್ಕೆ ಎಸೆಯು; *(to cast far)* ದೂರಕ್ಕೆಸೆಯು, ದೂರಕೊಗೆಯು; *(to cast in a mould)* ಅಚ್ಚಿನಲ್ಲಿ ಹೊಯು, ಎರಕ ಹೊಯ್ಯು; *(to cast the skin, as a serpent)* ಪೊರೆತೆಗೆಯು; *(to cast away care)* ಚಿಂತೆಬಿಡು; *(to cast the eyes towards)* ಕಂಣಿಡು, ನೋಡು; *(to cast, model)* ಎರಕಮಾಡು; *(to cast feathers)* ಗರಿಯುದುರಿಸು. v. *To moult.* *(to cast a horoscope, calculate a nativity)* ಜಾತಕನೋಡು; *(to cast in wrestling)* ಬೀಳಕೆಡವು, ಕೆಳಗೆ ಹಾಕು; He was *cast* on an uninhabited island ಅವನು ನಿರ್ಮಾನುಷದ್ವೀಪಾಂತರಕ್ಕೊಯ್ಯಲ್ಪಟ್ಟನು; They have *cast* up a high bank there ಅವರು ಅಲ್ಲಿಯೆತ್ತರವಾದ ದಿಣ್ಣೆಯಂ ಕಟ್ಟಿಕೊಂಡರು.

The judge *cast* four persons to-day ಈದಿವಸ ನ್ಯಾಯಾಧಿಪತಿಯು ನಾಲ್ವರಿಗೆ ಪ್ರಾಣಾಂತ್ಯ ಪ್ರಾಯಶ್ಚಿತ್ತನ್ನೆಯು ವಿಧಿಸಿದನು; The serpent has *cast* his skin ಸರ್ಪ ಪೊರೆಯನ್ನು ಬಿಟ್ಟಿತು; He has *cast* that turban aside as no longer fit to wear ಕೆಲಸಕ್ಕೆ ಬಾರದೆಂದು ಆ ಮುಂಡಾಸನ್ನು ಬಿಸಾಡಿಬಿಟ್ಟನು; The cow has *cast* her calf ಆಕಳು ಕರುವನ್ನು ಹಾಕಿತು; He has *cast* the reckoning wrong ಅವನು ಲೆಕ್ಕ ಮಾಡುವದರಲ್ಲಿ ತಪ್ಪಿಹೋದ್ದಾನೆ; Who *cast* these spoons? ಈ ಚಮಚಗಳನ್ನು ಯಾರು ಎರಕ ಹೊಯಿದರು; *Cast* thyself at his feet ನೀನು ಅವನ ಕಾಲು ಮೇಲೆ ಬೀಳು, or ನೀನು ಅವನ ಕಾಲು ಹಿಡುಕೋ, or ನೀನು ಅವನಿಗೆ ಅಡ್ಡ ಬೀಳು; Why do you *cast* reproaches on him? ನೀನು ಅವನನ್ನು ಯಾಕೆ ನಿಂದಿಸುತ್ತಿ; Ships *cast* anchor near the shore ಹಡಗಿನವರು ಸಮುದ್ರದ ದಡದ ಹತ್ತಿರದಲ್ಲಿ ಲಂಗರು ಹಾಕುತ್ತಾರೆ; They *cast* lots for it ಅವರು ಅದಕ್ಕೋಸ್ಕರ ಚೀಟು ಹಾಕಿದರು; He *cast* his adversary ಅವನು ತನ್ನ ವಿರೋಧಿಯ ವ್ಯಾಜ್ಯವನ್ನು ಬಿಡಿದು ಹಾಕಿದನು; He is much *cast* down ಅವನು ಬಹಳ ಅಧೈರ್ಯವಾಗಿದ್ದಾನೆ, or ಅವನು ಬಹಳ ವ್ಯಾಕುಲಿತನಾಗಿದ್ದಾನೆ, or ಅವನು ಬಹಳ ವಿಷಾದಪಟ್ಟವನಾಗಿದ್ದಾನೆ, or ಅವನು ಬಹು ವಿಷಣ್ಣನಾಗಿದ್ದಾನೆ; He *cast* his eyes upon her ತಾನು ಅವಳ ಮೇಲೆ ಕಣ್ಣಿಟ್ಟನು; It is well to *cast* off false friends ಸುಳ್ಳು ಸ್ನೇಹಿತರನ್ನು ಬಿಟ್ಟು ಬಿಡುವದು ಒಳ್ಳೆಯದು, or ಮಿತ್ರದ್ರೋಹಿಗಳನ್ನು ವಿಸರ್ಜಿಸುವದು ಉತ್ತಮವು; They *cast* him out of doors ಅವರು ಅವನ್ನು ಬಾಗಲ ಹೊರಗೆ ದೊಬ್ಬಿಹಾಕಿದರು; This boy is *casting* his teeth ಈ ಹುಡುಗನ ಹಲ್ಲು ಬೀಳುತ್ತವೆ, or ಈ ಹುಡುಗನ ಹಲ್ಲುಗಳು ಬಿದ್ದು ಮೊಳೆಯುತ್ತವೆ.

Cast away, s. n. ಭ್ರಷ್ಟನು, ಉಚ್ಛಿಷ್ಟನು, ನಿಷ್ಪ್ರಯೋಜಕನು, ಕೆಲಸಕ್ಕೆ ಬಾರದವನು, ಅಪ್ರಯೋಜಕನು.

Cast away, a. ಕೆಲಸಕ್ಕೆ ಬಾರದ, ಅಪ್ರಯೋಜಕನಾದ.

Caster, s. n. ಬಿಸಾಡುವವ, ಎಸೆಯುವವನು, (*a caster of horoscopes, or one who calculates fortunes*) ಸಾಮುದ್ರಿಕನು, ಜಾತಕ ಗುಣಿಸುವವ. v. *Fortune teller.*

To Castigate, v. a. ದಂಡಿಸು, ಬಡಿಯು, ಶಿಕ್ಷಿಸು, ಪ್ರಾಯಶ್ಚಿತ್ತ ಮಾಡು, ಪ್ರಹರಿಸು.

Castigation, s. n. (*chastisement*) ದಂಡನೆಯು, ಪ್ರಾಯಶ್ಚಿತ್ತವು, ಶಿಕ್ಷೆ, (*amendment*) ಸುಧಾರಣೆ, ವಾಸಿ, ಲಘುತರ,

Castle, s. n. ಕೋಟೆ, ದುರ್ಗ, ಸಪ್ರಾಕಾರ ಹರ್ಮ್ಯ.

Castling, s. n. ಹೊಲವಿಳಿದ ಪಿಂಡ. v. *Abortive.*

Castor, s. n. ನೀರುನಾಯಿ. v. *Beaver.*

Castor-oil, s. n. ಅವುಡಲದ ಎಣ್ಣೆ, ಹರಳೆಣ್ಣೆ, ಕೈಯೆಣ್ಣೆ, ಏರಂಡತೈಲ.

To Castrate, v. a. (*man*) ಬೀಜ ಮಾಡು; (*a horse*) ಬೀಜ ತೆಗೆಯು; (*a bull*) ತರಡು ಜೊಚೆಯು, ಒಡಾ ಮಾಡು, ಒಡಾ ಬಡಿಯು; At what age do they *castrate* horses? ಕುದುರೆಗಳನ್ನು ಎಷ್ಟು ವರ್ಷದಲ್ಲಿ ತರಡು ಬಡಿಯುತ್ತಾರೆ; Bulls are *castrated* under five years of age ಹೋರಿಗಳಿಗೆ ಐದು ವರ್ಷದಲ್ಲಿ ತರಡು ಬಡಿಯುತ್ತಾರೆ.

Castration, s. n. ಬೀಜಾ ತೆಗೆಯೋಣ.

Casual, a. ಆಕಸ್ಮಿಕವಾದ, ಹಠಾತ್ತಾದ. v. *Accidental, fortuitous.*

Casually, ad. ಆಕಸ್ಮಿಕವಾಗಿ, ಅನಾಯಾಸವಾಗಿ, ಕಾಕತಾಳೀಯವಾಗಿ, ಅಜಾಕೃಪಾಣೀಯವಾಗಿ.

Casualty, s. n. ಅದೃಷ್ಟವು.

Casuist, s. n. ಧರ್ಮಶಾಸ್ತ್ರಜ್ಞನು, ವಿಧಾಯಕ.

Casuistical, a. ಧರ್ಮಶಾಸ್ತ್ರವಾದ.

Casuistry, s. n. ಧರ್ಮಶಾಸ್ತ್ರವು.

Cat, s. n. ಬೆಕ್ಕು, ಓತು, ಬಿಡಾಲ, ಮಾರ್ಜಾಲ, ವೃಷದಂಶಕ, ಆಖುಭುಕ್ಕು; *(pole cat)* ಕೋಮಶಿಮಾರ್ಜಾಲ; *(civet)* ಪುನುಗಿನಬೆಕ್ಕು, ಹುನುಗಿನಬೆಕ್ಕು, ಜವಾದಿಬೆಕ್ಕು; *(cat's eye,* a stone*)* ವೈಡೂರ್ಯ.

Catalogue, s. n. ಜಾಬಿತೆ, ಪಟ್ಟಿ.

Catamite, s. n. *(active)* ಗೊಲ್ಲೇರಹುಡುವವ, ಶಿಕಾಕೀಯುವವ, ಗುದಮೈಥುನಿ; *(passive)* ಗೊಲ್ಲೇರಹದಿಸಿಕೊಂಬುವವ, ಶಿಕಾಕೀಯಿಸಿಕೊಂಬುವವ.

Cataplasm, s. n. ಕೂಳುಸರಿ, ಒತ್ತಳವು. v. *Poultice.*

Cataract, s. n. ಗುಡ್ಡದಶಿಲೆ, ನಿಜರ್ಝರ, ಝುರ; *(in the eye)* ಮೊರಿಬಿಂದು, ಶುಕ್ಲ.

Catarrh, s. n. ಶೀತ, ನೆಗಡಿ, ಪ್ರತಿಶ್ಯಾಯವು, ಛಳಿ.

Catastrophe, s. n. ಕಡೇಫಲ; *(the catastrophe of a drama)* ನಿಷ್ಠೆಯು, ನಿರ್ವಹಣ, ನಾಟ್ಯಪೂರ್ತಿ.

Catch, s. n. *(seizure)* ಹಿಡಿಯೋಣ, ಸಂಗ್ರಹ, ಗ್ರಹಣ; *(watch)* ಹೊಂಚು; *(to lie on the catch)* ಹೊಂಚುಹಾಕ, ರಂಧ್ರಾನ್ವೇಷಣೆಮಾಡ; *(profit)* ಲಾಭವು; *(taint)* ಮುಟ್ಟುಬಟ್ಟೆ; *(a hook)* ಕೊಂಡಿ; *(a door catch)* ಅವಗ್ರಹಿಣೆ, ನಾಗವಾಸ, ಲಾಸ.

To Catch, v. a. *(hold of)* ಹಿಡುಕೊಳ್ಳ, ಸಂಗ್ರಹಿಸ. v. *To seize. (to catch fire)* ಹತ್ತ, ಹೊತ್ತ; *(to catch cold)* ನೆಗಡೀಹಿಡಿಯ; *(to catch a distemper)* ಸೋಂಕುಹಿಡಿಯ; *(to catch with a trap)* ಕೆಡವ, ಹಿಡಿಯ; *(to catch an opportunity)* ಸಮಯಹಿಡಿಯ, ಪ್ರಸ್ತಾವಿಸ; If you sit in the draught you will *catch* cold ನೀನುಗಾಳಿಗೆಕೂಳುತ್ತೆಯಾದರೆನೆಗಡಿಹಿಡಿಯುವದು; If you put fire to straw it will *catch* fire ನೀನುಹುಲ್ಲಿನಲ್ಲಿಬೆಂಕಿಹಾಕಿದೆಯಾದರೆಅದುಹತ್ತಿಕೊಳ್ಳುವದು; *Catch* hold of him and bring him here ಅವಂನಹಿಡಿದ್ಲಿತಾ, or ಅವಂನಹಿಡುಕೊಂಡುಬಾ.

Catcher, s. n. ಹಿಡಿಯುವವನು, ಸಂಗ್ರಹಿಸುವವನು.

Catching, a. *(disease)* ಹತ್ತುವರೋಗ.

Catchword, s. n. ಅಕ್ಷರಸಂಜ್ಞೆ.

To Catechise, v. a. ಉಪದೇಶಿಸ, ಬೋಧಿಸ.

Catechism, s. n. ಉತ್ತರಪ್ರತ್ಯುತ್ತರೋಪದೇಶವು, ಪ್ರಶ್ನೋತ್ತರಬೋಧನೆ, ಆಕ್ಷೇಪೋಪದೇಶ, ಪ್ರಶ್ನಬೋಧನೆ,

Catechist, s. n. ಉಪದೇಶಕನು.

Catechumen, s. n. ಶಿಷ್ಯನು.

Categorical, a. ನಿಸ್ಸಂದೇಹವಾದ, ಅನುಮಾನವಿಲ್ಲದ; *(a categorical answer)* ಸಿದ್ಧಾಂತೋತ್ತರವು.

Categorically, ad. ನಿಸ್ಸಂದೇಹವಾಗಿ, ನಿಸ್ಸಂಶಯವಾಗಿ. v. *Positively, expressly.*

Category, s. n. *(class)* ವರ್ಗ, ಪಂಕ್ತಿ, ಪಾಂಕ್ತಿ,

ಕುಪ್ಪೆ. v. *Class, rank, predicament.* (*predicament*) ಪದಾರ್ಥವು.

To Catenate, v. a. ಸಂಕೋಲೆಹಾಕ.

Catenation, s. n. ಸರಳೆ, ಸರಪಿ. v. *Link, chain.* (*regular connexion*) ಪಾಂಕ್ತ, ಪಾರಂಪರ್ಯ.

To Cater, v. a. ಸಾಮಗ್ರಿಮಾಡ, ಸವರಣೆಮಾಡ, ಮಸ್ತೈದುಮಾಡ, ಮನವಾರ್ಕೆಮಾಡ.

Caterer, s. n. ಸವರಣಿಕ, ಗೃಹಕೃತ್ಯನಿರ್ವಾಹಕ, ಮನವಾರ್ಕೆಯವನು.

Cateress, s. n. ಗೃಹಕೃತ್ಯನಿರ್ವಾಹಿಕೆ, ಮನವಾರ್ಕೆಯವಳು, ಅಡುಗೋಲಜ್ಜಿ.

Caterpillar, s. n. ಕಂಬಳಿಹುಳ, ವೃಶ್ಚಿಕ, ಹೂಕಕೀಟ.

To Caterwaul, v. a. ದಳಸುಮಾಡ, ಮಣೆಲೆಮಾಡ.

Cates, s. n. ಭೋಜನವು, ಊಟವು, ಮಧುರಾಶನ, ಸವಿಯೂಟ. v. *Viands, food, dish.*

Catgut, s. n. ಜೀವು, ಜೀವುಹಗ್ಗ, ನರತಂತಿ.

Cathartic, a. ಸಾರಣೆಮಾಡುವ, ವಿರೇಚಿಸುವ, ಶುದ್ಧಿಮಾಡುವ.

Catholic, a. ಸರ್ವಸಮವಾದ, ಅಕ್ಷೇದಪ್ರತಿಪತ್ತಿಯಾದ, ಸಾಧಾರಣವಾದ.

Cattle, s. n. ದನಕರ; (*cattle for burden*) ಹೊರುವೆತ್ತು, ಹೇರೆತ್ತು, ಧುರ್ವಹ, ಧುರ್ಯ, ಧೌರೇಯ, ಧುರೀಣ, ಧುರಂಧರ; (*cattle yoked*) ಬಂಡಿಯೆತ್ತು, ಯುಗ್ಯ, ಪ್ರಾಸಂಗ್ಯ, ಶಾಕಟ; (*stock for cattle*) ಪಾದಬಂಧನ.

Cavalcade, s. n. ಸ್ವಾರಿ, ರಾಹುತ್ತರು.

Cavalier, s. n. ರಾಹುತ್ತನು. v. *Horseman*; also *brisk, lively.*

Cavalierly, a. ತಲೆಹೊಯಿಕತನವಾಗಿ, ಅಹಂಕಾರವಾಗಿ, ಕೊಬ್ಬಾಗಿ, ದುಡುಕಾಗಿ. v. *Haughtily.*

Cavalry, s. n. ಸ್ವಾರು, ರಾಹುತ್ತರು, ಕುದುರೆಬಲ. v. *Horse.*

Caudle, s. n. ಬಾಣಂತಿಹುಂಡ.

Cave, s. n. (*a natural cave*) ಗವಿ, ಗಂಹ್ವರ, ಗುಹೆ; (*an artificial cave*) ಕಂದರವು, ದರಿ. v. *Grotto, den.*

Caveat, s. n. ಎಚ್ಚರಿಸುವ ಬೋಧನೆಯು.

Cavil, s. n. ಕುಯುಕ್ತಿ, ವಾಗ್ವಾದ, ಸಂವಾದ, ತರ್ಕ, ಹೋರಟೆ, ಬಡಿದಾಟ.

To Cavil, v. a. ಕುಯುಕ್ತಿಮಾಡ, ನಿಗ್ರಹಿಸ, ತರ್ಕಿಸ, ವಾದಿಸ, ವಾಗ್ವಾದಮಾಡ, ಬಡಿದಾಡ.

Caviller, s. n. ವಾಚಾಳಕ, ಕುಹಕ, ಕುತ್ಸಿತನು, ತರ್ಕಿಸುವವ.

Cavity, s. n. ಟೊಳ್ಳು, ಹೊಟ್ಟೆ. v. *Hollow.*

Caul, s. n. ಹೊಟ್ಟೇಹೊರೆ.

Cauliflower, s. n. ಹೂವಿನಕೋಸು.

Causal, a. ಕಾರಣವಾಗಿರುವ, ಪ್ರೇರೇಪಿಸುವ. v. *Efficient.* (*a causal verb*) ಪ್ರೇರಣಾ; What is the sign of the *causal* verb? ಪ್ರೇರಣಾಕ್ರಿಯಾಶಬ್ದಕ್ಕೆಸಂಜ್ಞೆಯೇನು.

Cause, s. n. ಕಾರಣಾ, ಕರಣಾ, ಹೇತು, ನಿಮಿತ್ತ, ನಿಮಿತ್ಯ, ಬೀಜ, ನಿದಾನ. v. *Reason, motive, occasion, author, agent.* (*the immediate or proximate cause*) ಸಮವಾಯಕರಣಾ, ಉಪಾದಾನಕಾರಣಾ; (*the remote or secondary cause*) ಅಸಮವಾಯಕಾರಣಾ; (*the efficient cause* ನಿಮಿತ್ತಕಾರಣಾ; (*the instrumental cause*) ವ್ಯಾಪಾರ

ಕಾರಣ,ಕರಣಕಾರಣ ; (*a primary cause, the first cause*) ಆದಿಕಾರಣ,ಮೂಲಕಾರಣ, ನಿದಾನ; (*the chief cause*) ಮುಖ್ಯಕಾರಣ, ಪ್ರಧಾನಕಾರಣ;(*the cause and effect*) ಕಾರ್ಯಕಾರಣಗಳು; (*to carry on a cause at law*) ಫಿರ್ಯಾದಿನಡಿಸು; (*to decide a cause*) ನ್ಯಾಯತೀರ್ಪುಮಾಡು, ನ್ಯಾಯತೀರಿಸು,ನ್ಯಾಯಬಗೆಹರಿಸು ; (*without cause*) ಕಾರಣವಿಲ್ಲದೆ, ನಿಮಿತ್ತವಿಲ್ಲದೆ ; (*for this cause*) ಇದುನಿಮಿತ್ತ, ಇದುಕಾರಣ ; Fire is the *cause* of heat ಬಿಸಿಗೆಬೆಂಕಿಯೇಹೇತುವು, or ತಾಪಕ್ಕೆಅಗ್ನಿಯೇಹೇತುವು; (*cause, motive*) ನಿಮಿತ್ತ, ನಿಮಿತ್ಯ, ಕಾರಣ ; What was the *cause* of his striking him? ಇವನವನಂನಬಡಿದಕಾರಣವೇನು, or ನಿಮಿತ್ಯವೇನು, or ಯೇನುಕಾರಣದಿಂದಇವನವನಂನಬಡಿದನು ; (*cause, subject of litigation*) ಫಿರ್ಯಾದಿ,ವ್ಯಾಜ್ಯ ; The *cause* is now before the court ಆಫಿರ್ಯಾದಿಯೀಗಕೋರ್ಟಿಗೆಸೇರಿತು, or ಹತ್ತಿತು, or ಮುಟ್ಟಿತು; (*side, party*) ಪಕ್ಷ,ಕಡೆ,ಪರ; Which *cause* have you espoused ನಿನಗೆದಾವಕಡೆಯಲ್ಲಿಭಿಮಾನ, or ನಿನಗೆದಾವಕಡೇಮನಸ್ಸದೆ ; The *cause* of Christ is daily increasing in the world ಕ್ರೀಸ್ತುಮತವುಜಗತ್ತಿನಲ್ಲಿದಿನದಿನಕ್ಕೆವೃದ್ಧಿಯಾಗುತ್ತದೆ.

To Cause, v. a. (*to be the agent or cause*) ಕಾರಣವಾಗಿರು,ಕರ್ತನಾಗಿರು; (*to produce*) ಉಂಟುಮಾಡು,ಹುಟ್ಟಿಸು ; (*to cause another*) ಪ್ರೇರೇಪಿಸು, ಮಾಡಿಸು. v. *To do, make, effect, procure, incite. Cause* him to be called ಅವನಂನಕರೆಯಕಳುಹಿಸು;I will not do it myself, but I will *cause* it to be done ನಾನೇಯದಂನಮಾಡುವದಿಲ್ಲ, ಬೇರೆಯವರಿಂದಅದಂನಮಾಡಿಸುವೆನು.

Causeless, a. ನಿಷ್ಕಾರಣ, ನಿರ್ನಿಮಿತ್ಯ, ಕಾರಣವಿಲ್ಲದ,ಹೇತುವಿಲ್ಲದ,ನಿಮಿತ್ತವಿಲ್ಲದ. v. *Undeserved.*

Causer, s. n. ಕಾರಣವಾದವ, ಪ್ರೇರೇಪಿಸುವವ.

Causey, Causeway, s. n. ಕಾಲುದಾರಿ, ಸಣ್ಣದಾರಿ, ಏಕಪದಿ. v. *Road, street, highway.*

Causing, s. n. ಪ್ರೇರಣೆ, ಪ್ರೇರೇಪಣೆ.

Caustic, s. n. ಉಗ್ರಕ್ಷಾರ. v. *Cautery.*

Cautery, s. n. ಚೆಟಿಕೆ, ರಕ್ಷೆ.

To Cauterize, v. a. ಚೆಟಿಕೆಹಾಕು.

Caution, s. n. (*care*) ಹೆಚ್ಚರ, ಜಾಗ್ರತೆ. v. *Circumspection, foresight.* (*warning*) ಎಚ್ಚರಿಕೆ, ಎಚ್ಚರವು; (*security*) ಜಾಮೀನು,ಹೊಣೆ,ಪ್ರಾತಿಭಾವ್ಯ. v. *Circumspection, foresight, admonition, bail.*

To Caution, v. a. ಎಚ್ಚರಿಸು, ಜಾಗ್ರತೆಪಡಿಸು.

Cautioner, s. n. ಜಾಮೀನುದಾರನು, ಹೊಣೆಗಾರನು, ಪ್ರತಿಭೂವು. v. *Surety.*

Cautious, a. ಎಚ್ಚರಿಕೆಯುಳ್ಳ, ಜಾಗ್ರತೆಯುಳ್ಳ; (*to be cautious*) ಜಾಗ್ರತೆಯಾಗಿರು, ಎಚ್ಚರಿಕೆಯಾಗಿರು.

Cautiously, ad. ಎಚ್ಚರವಾಗಿ, ಜಾಗ್ರತೆಯಾಗಿ.

Cautiousness, s. n. ಜಾಗ್ರತೆ, ಎಚ್ಚರಿಕೆ. v. *Caution.*

To Caw, v. n. (*as a rook*) ಕಾಕೆನ್ನು,ಕರೆಯು. v. *To croak.* When the crows *caw* it is a sign of rain ಕಾಗೆಗಳುಕರೆಯುವದರಿಂದ ಮಳೆಬರುವದಕ್ಕೆಸೂಚನೆಯಾಗಿದೆ.

To Cease, v. a. *(leave off)* ನಿಂತುಬಿಡು. v. *To desist.* *(to rest)* ಸುಮ್ಮನೇಯಿರು; *(as rain, wind, &c.)* ನಿಲ್ಲು, ತೆರಹಾಗು, ವರಹಾಗು; *(to fail)* ಆಗಿಹೋಗು, ನಿಂತುಹೋಗು; (v. a.) ನಿಲ್ಲಿಸು.

Ceaseless, a. *(perpetual)* ತೆರಹಾಗದ, ಎಡೆಬಿಡದ, ನಿಲ್ಲದ, ನಿಂದಿರದ, ಸದಾ, ನಿತ್ಯ. v. *Continual, incessant.*

Ceasing, s. n. ಆರತಿ, ಅವರತಿ, ಉಪರತಿ, ಉಪರಮ, ವಿರತಿ, ಮುಗಿತ, ನಿಲ್ಲು.

To Cede, v. a. ಒಪ್ಪಿಸು, ಕೊಟ್ಟುಬಿಡು, ಹಾಕಿಕೊಡು.

Ceded, a. ಒಪ್ಪಿಸಲ್ಪಟ್ಟ.

To Ceil, v. a. ಜಂತೆಮುಚ್ಚು, ಕೈಜಂತೇಮಾಡು.

Ceiling, s. n. ಮಾಳಿಗೆಯು. v. *Roof.*

To Celebrate, v. a. *(a day)* ಆಚರಿಸು, ಕೊಂಡಾಡು; *(a feast)* ಆಚರಣೇಮಾಡು, ಕೊಂಡಾಡು; *(a wedding)* ಮದುವೇಮಾಡು; *(God)* ಸ್ತುತಿಸು, ಕೊಂಡಾಡು, ಪೂಜಿಸು. v. *To commend, praise, solemnize.*

Celebration, s. n. ಆಚರಣೆ, ಸಂಕೀರ್ತನೆ. v. *Solemnity, commemoration, memorial.*

Celebrated, a. ಪ್ರಸಿದ್ಧ, ಪ್ರತೀತ, ಪ್ರಥಿತ, ಖ್ಯಾತ, ವಿತ್ತ, ವಿಜ್ಞಾತ, ವಿಶ್ರುತ, ಹೆಸರುಪಡೆದ.

Celebrity, s. n. ಹೆಸರುಗೊಳುವಿಕೆ, ಸಮಜ್ಞಾ, ಸಮಾಖ್ಯಾ, ಪ್ರಖ್ಯಾತಿ, ವಿಶ್ರಾವ, ಕೀರ್ತಿ, ವಿಖ್ಯಾತಿ, ಯಶಸ್ಸು, ಹೊಗಳ್ತೆ. v. *Renown, fame.*

Celerity, s. n. ಶೀಘ್ರತಾ, ಜಾಗ್ರತೆ, ತ್ವರೆ, ತೀವರ, ಜವ, ವೇಗವು. v. *Speed, swiftness, velocity.*

Celestial, a. ಆಕಾಶದ, ಸ್ವರ್ಗದ, ಪರಲೋಕದ. v. *Heavenly, blessed.*

Celibacy, s. n. ಬ್ರಹ್ಮಚರ್ಯ, ಸಂನ್ಯಾಸವು, ಅವಿವಾಹಿತತ್ವ, ಅನೂಢತ್ವ.

Cell, s. n. ಅರೆ, ಕೊಠಡಿ, ಕಿರುಮನೆ. v. *Cellar, cave, dungeon.*

Cellar, s. n. ನೆಲಮಾಳಿಗೆ, ನೆಲವರೆ.

Cellular, a. ಕಂಡಿಕಂಡಿಯಾಗಿರುವ, ಪೆರೆಪೆರೆಯಾಗಿರುವ.

Cement, s. n. *(mortar)* ಸುಣ್ಣವು, ಗಚ್ಚು, ಸರೆ; *(glue)* ವಜ್ರ; *(solder)* ಬೆಸಿಗೆ, ಸವಾಸಾಗರ; *(gum)* ಸರೆ; *(figurative)* ಏಕಪ್ರೀಯ, ಒಕೊರಲು. v. *Concord, cohesion.*

To Cement, v. a. *(to unite)* ಹಚ್ಚು, ಹಚ್ಚಿಸು, ಕೂಡಿಸು, ಸೇರಿಸು; *(to cohere)* ಹತ್ತು, ಹಿಡಿದುಕೊಳ್ಳು, ಅಂಟು.

Cemetery, s. n. ಪ್ರೇತಸ್ಥಲ, ಪಿತೃವನ, ಸುಡುಗಾಡು, ಸ್ಮಶಾನ, ರುದ್ರಭೂಮಿ, v. *Burying-ground.*

Cense, s. n. ತೆರಿಗೆ, ಗುತ್ತಿಗೆ. v. *Cess, tax.*

Censer, s. n. ಧೂಪಾರ್ತಿ.

Censorious, a. ಕುವಾದ, ಕುಚರ, ಮುಂಗೋಪವುಳ್ಳ, ಪುಶೋಕ್ಷಾಗಿಯಾದ. v. *Slanderous, severe.*

Censoriousness, s. n. ಮುಂಗೋಪ, ಪುಶೋಕ್ಷಾಗಿತನ, ಕುವಾದತ್ವ. v. *Censure.*

Censurable, a. ನಿಂದ್ಯ, ಗರ್ಹ್ಯ, ತಪ್ಪಾಕತಕ್ಕ.

Censure, s. n. ವಾಗ್ದಂಡನೆ, ನಿಂದನೆ, ಆರ್ಣಸ, ಕುತ್ಸಿಯೆ, ಹೃಣೀಯೆ, ಘೃಣೆ, ಆಕ್ಷೇಪ, ನಿರ್ವಾದ, ಅಪವಾದ, ಪರಿವಾದ, ಜುಗುಪ್ಸೆ, ಕುತ್ಸೆ, ಅವರ್ಣ, ವಿರೂಕ್ಷಣವು, ಗರ್ಹಣೆ, ಪುಶೋಕ್ಷಾಗವು,

ಉಪ ಕ್ರೋಶವು. v. *Accusation, calumny, slander, reprimand, reproach.*

To Censure, v. a. ವಾಗ್ದಂಡನೆಮಾಡ, ಗದರಿಸ, ತಪ್ಪುಹಿಡಿಯ, ಅಪರಾಧಿಸ. v. *To condemn.*

Censured, part. ಅಪರಾಧಿ, ಧಿಕ್ಕೃತ, ಬಯ್ಯಲ್ಪಟ್ಟ.

Censurer, s. n. ಗದರಿಸುವವ, ವಾಗ್ದಂಡಕ, ಬೆದರಿಸುವವ, ತರ್ಜಿಸುವವ. v. *Satirist.*

Cent, s. ನೂರು, ಶತ. v. *Hundred.*

Centipede, s. n. ಸಾವಿರಕಾಲಿ, ಶತಪದಿ, ಕಿವಿಹಾವು, ಕಾಲ್ಜರಿ.

Central, Centric, a. ನಡುವಿನ, ಮಧ್ಯದ.

Centre, s. n. ಮಧ್ಯ, ನಡುವೆ, ಕರ್ಣಿಕೆ, ನಟ್ಟನಡುವೆ.

To Centre, v. a. ನಡುವೆಯಿಡ, ನಡುವೆನಿಲ್ಲಿಸ; (*to centre or rest upon*) ನೆಲೆಗೊಳ್ಳ, ಕೂಡ.

Centrifugal, a. (*receding from the centre*) ಅಪಾಕರ್ಷಣವುಳ್ಳ, ಮೂಲಕ್ಕೆ ವಿಯೋಜಕವಾದ, ಅತ್ಯಪಾಕರ್ಷಕಶಕ್ತಿಯುಳ್ಳ.

Centripetal, a. (*having a tendency to the centre*) ಮೂಲಕ್ಕಾಕರ್ಷಣವುಳ್ಳ, ಅತ್ಯಪಾಕರ್ಷಕಶಕ್ತಿಯುಳ್ಳ.

Centry, s. n. ಪಡಿಹಾರಿ, ಹೊರಾಡವ, ಕಾಯುವವನು, ಕಾವಲುಗಾರ, ಪಹರೆದಾರ. v. *Sentinel.*

Centuple, a. ನೂರಷ್ಟು, ಒಂದಕ್ಕೆ ನೂರು, ಶತಗುಣಿತ.

Centurion, s. n. ನೂರಕ್ಕೊಬ್ಬ ಅಧಿಪತಿ, ಶತೇಶ.

Century, s. n. ನೂರುವರ್ಷಕಾಲ, ಶತಮಾನ.

Cerate, s. n. ಮುಲಾಮು.

To Cere, v. a. ಮೇಣಹಾಕ, ಮೇಣದಲ್ಲದ್ದ.

Cere-cloth, s. n. ಮೇಣಗಪಟೆ, ಮೇಣದಬಟ್ಟೆ.

Ceremonial, a. (*ritual*) ಆಚಾರದ, ಕರ್ಮದ; (*observances for the dead*) ಶ್ರಾದ್ಧಕರ್ಮ, ಅಪರಕರ್ಮ, ತಿಥಿ, ತದ್ದಿನ.

Ceremonious, a. ದುರ್ವಿನಯ, ಅತ್ಯುಪಚಾರವಾದ, ಅತಿವಿನಯವಾದ. v. *Civil, awful, formal, stiff.*

Ceremoniously, ad. ಉಪಚಾರವಾಗಿ, ವಿನಯವಾಗಿ; ಮರ್ಯಾದೆಯಾಗಿ.

Ceremony, s. n. (*religious*) ಆಚಾರ, ನೇಮ, ಕರ್ಮ; (*politeness*) ವಿನಯ, ಉಪಚಾರ, ಮರ್ಯಾದೆ. v. *Form, civility, rite.* (*for the dead*) ಶ್ರಾದ್ಧ, ತಿಥಿ, ತದ್ದಿನ.

Certain, a. ನಿಜ, ನಿಶ್ಚಯ, ಸಹಜ; (*a certain person*) ಒಬ್ಬಾನೊಬ್ಬ; (*a certain thing*) ಒಂದಾನೊಂದು ವಸ್ತುವು; (*certain intelligence*) ಯಥಾರ್ಥಸಮಾಚಾರ, ನಿಜವಾದ ಸುದ್ದಿ; (*one certain time, once*) ಒಂದುದಿವಸ, ಒಂದಾನೊಂದುವೇಳೆಯಲ್ಲಿ; The thing is *certain* ಅದುನಿಶ್ಚಯ; To hold for *certain* ನಿಶ್ಚಯವೆಂದುನೆನೆಸ.

Certainly, ad. ನಿಜವಾಗಿ, ನಿಶ್ಚಯವಾಗಿ, ಅಗತ್ಯವಾಗಿ. v. *Undoubtedly, without fail.*

Certainty, s. n. ನಿಶ್ಚಯಿಕೆ, ನಿರ್ಣಯ.

Certificate, s. n. ಶಿಫಾರಸುಕಾಗದ, ಯೋಗ್ಯತಾಪ್ರಕಟನಪತ್ರಿಕೆ. v. *Testimony.*

To Certify, v. a. ದೃಢ, ತಿಳಿಸ; (*to be certified*) ತಿಳಿಸಲ್ಪಡ.

Cerulean, a. ಇಂದ್ರನೀಲದ. v. *Azure, blue.*

Cess, s. n. ತೆರಿಗೆ, ಪಟ್ಟಿಗೆ. v. *Tax.*

To Cess, v. a. ಪಟ್ಟಿಗೆಮಾಡ, ತೆರಿಗೆಹಾಕ.

Cessation, s. n. ನಿಂದಿರುವಿಕೆ, ತೀರಿಕೆ, ವ್ಯವಧಾನ, ಪ್ರೋಯುವಿಕೆ, ಸಾವಕಾಶ. v. *Stop, pause, rest, vacation.*

Cession, s. n. ಮುಟ್ಟಿಕೆ, ಒಪ್ಪಿಕೆ, ವಶಕ್ಕೆ ಕೊಡುವದು, ವಶಾಮಾಡುವದು. v. *Resignation, retreat, yielding.*

To Chafe, v. a. (*to heat*) ಕಾಂಕೆಕೊರದ; (*to rub*) ತಿಕ್ಕ; (*to rage*) ಕೋಪವೆಬ್ಬಿಸ; (*to vex*) ಬೇಸರಿಕೆಗೊಳ್ಳಸ, ಪೀಡಿಸ, ನೋಯಿಸ; (*to be galled*) ಹುಣ್ಣಾಗ, ತೇದುಹೋಗ.

Chaff, s. n. ಸರಗು, ಕಡಂಕರ, ಬುಸ, ಜೊಟ್ಟು

To Chaffer, v. a. ಕ್ರಯಮಾಡ, ಕ್ರಯಪೊಪ್ಪಂದ ಮಾಡ, ಬೇಹಾರಾಮಾಡ. v. *To buy, bargain, haggle.*

Chaffing-dish, s. n. ಕೆಂಡೋಬಾಗ್ಯ, ಅಗಿಷ್ಟಿಕೆ.

Chagrin, s. n. ಅಕ್ಕಸ, ಕೋಪಿಕೆ, ಬೇಸರಿಕೆ, ವ್ಯಸನ, ವ್ಯಥೆ, ವೇದನೆ. v. *Anguish, vexation, ill-humour.*

To Chagrin, v. a. ಅಕ್ಕಸಬಡಿಸ, ಕೋಪಗೊಳಿಸ, ಕಡಿಸ, ಅಸಂತುಷ್ಟಪಡಿಸ. v. *To anger, vex.*

Chagrined, a. ಅಕ್ಕಸಪಟ್ಟ, ಕೋಪಗೊಳಿಸಲ್ಪಟ್ಟ, ಅಸಂತುಷ್ಟಪಟ್ಟ.

Chain, s. n. ಸರಪಳಿ, ಶೃಂಖಲ; (*for the neck*) ಕಾಯಿಶೇಸರಪಳಿ; (*a prisoner's chain*) ಸಂಕೋಲೆ, ಬೇಡಿ, ನಿಗಳ; (*an elephant's chain*) ಅಂದುಕ, ನಿಗಳ; (*a chain fetter*) ಜಂಘುರಿ; (*a silver chain worn on the wrist*) ಮುಂಗೈಸರಪಳಿ, ಕಡಗಸರಪಳಿ, ತೋಡಾ; (*a silver chain worn on the leg*) ಕಾಲುಸರಪಳಿ, ಕಾಲುಸರ; (*a series linked together*) ವರ್ಗ, ಪಂಕ್ತಿ.

To Chain, v. a. ಸಂಕೋಲೆಹಾಕ.

Chain-work, s. n. ಸರಪಣಿಕೆಲಸ.

Chair, s. n. ಕುರುಚಿ, ಮಣೆ.

Chairman, s. n. ಸಭಾನಾಯಕ, ಸಭಾಪತಿ, ಅಧ್ಯಕ್ಷ. v. *President.*

Chaise, s. n. ಬಂಡಿ, ಗಾಡಿ, ರಥ, ಸದರೇಬಂಡಿ.

Chalk, s. n. ಖಟಿನಿ, ಖಟಿ, ಖಟಿಕೆ, ಬಳಪ; (*red chalk*) ಅದ್ರಿಜವು.

Chalice, s. n. ಬಟ್ಟು. v. *Cup, bowl.*

Chalcedony, s. n. ವಜ್ರಾಭ.

Challenge, s. n. ಹೂಂಕಿ, ಹವ, ಸೂಳುಗರೆಯೋಣ, ಜಗಳಕ್ಕೆ ಕರೆಯೋಣ.

To Challenge, v. a. (*to a contest*) ಸೂಳುಗರೆಯ, ಪ್ರಜ್ಞಾಸ್ಥಾಪನೆಮಾಡ, ಮಾರ್ಕೊಳಿರಿಗಿಸ, ತೋಳುತಟ್ಟಿ, ಜಗಳಕ್ಕೆ ಕರೆಯ.

Challenger, s. n. ಕದನಿಕ, ಸೂಳುಗರೆಯುವವ, ಜಗಳಕ್ಕೆ ಕರೆಯುವವ.

Challenging, s. n. ಹವ, ಹೂಂಕಿ, ಕ್ರಂದನವು, ಕ್ರಂದಿತವು, ಕಾಳಗಕ್ಕೆ ಕರೆಯೋಣ, ಪ್ರಜ್ಞಾಸ್ಥಾಲನೆ.

Chamber, s. n. ಕೊಠಡಿ, ಅರೆ, ಕಿರುಮನೆ.

Chamberlain, s. n. ಸಜ್ಜೆವಳ. ಸಜ್ಜೆವಾಗಿಲವ, ಅಂತರ್ವಂಶಿಕ.

Chamomile, s. n. ಶಾವಂತ್ರಿಗೆ (*it's substitute*).

To Champ, v. a. ಕಲ್ಲುಕಡಿಯ, ಅಗಿಯ. v. *To chew, bite.*

Champaign, s. n. ಬೈಲು, ಬಟ್ಟೆಬಯಲು. v. *Campaign.*

Champion, s. n. ಬಂಟನು, ಶೂರನು, ವೀರನು, ಪರಾಕ್ರಮಿಯು. v. *Hero.*

Chance, s. n. ಅದೃಷ್ಟ, ದಶೆ, ದುರ್ಲಕ್ಷ, ದೈವಾಧೀನ, ಅಕಸ್ಮಾತು, ದೈವಯೋಗ, ದೈವಗತಿ. v. *Luck, fortune.* I will take my *chance* ನನ್ನದೃಷ್ಟ ಹ್ಯಾಗಿದ್ದೀತೋ ನೋಡುತ್ತೇನೆ, or ನನ್ನ ಪ್ರಾಪ್ತಾನುಸಾರವೇನೋ ನೋಡುವೆನು; You stand but a poor *chance* ನಿನಗದಾಗುವದಕ್ಕೆ ಅತಿಕಷ್ಟವು, or ನಿನಗೆ ಸಾಧ್ಯವಾಗುವದು ಬಹು ಕಷ್ಟವು, or ನಿನಗದಾಗುವದಕ್ಕೆ ದಾರಿ ಚನ್ನಾಗಿ ತೋರಲಿಲ್ಲ; (*a chance guest*) ಅತಿಥಿ; It happened by *chance* ಅದಕಸ್ಮಾತ್ತಾಗಿ ಬಂತು, or ಅದು ದೈವಾಧೀನವಾಗಿ ಪ್ರಾಪ್ತಿಸಿತು, or ಅದಲಕ್ಷ್ಯಯೋಗವಾಗಿ ಸಂಘಟಿಸಿತು, or ಅದು ತನಗೆ ತಾನೇ ಬಂತು, or ಅದು ತಂನಿಚ್ಛೆಯಾಗಿ ಬಂತು; This possession came to him quite by *chance* ಈ ವೃತ್ತಿಯು ಅವನಿಗಕಸ್ಮಾತ್ತಾಗಿ ಬಂತು, or ಈ ಸ್ಥಿತಿಯು ಅವನ ದೃಷ್ಟವಶಾತ್ತವನಿಗೆ ಲಭ್ಯವಾಯಿತು.

To Chance, v. n. ಪ್ರಾಪ್ತಿಸು, ಸಂಭವಿಸು, ಲಭಿಸು, ಆಗು. v. *To happen.*

Chancellor, s. n. ಪ್ರಧಾನಿ, ಮಂತ್ರಿ, ವಜೀರು.

Chancellorship, s. n. ಪ್ರಧಾನಿಕೆ, ಮಂತ್ರಿತನ.

Chancel, s. n. ಸದರದಾಲತು, ದೊಡ್ಡನ್ಯಾಯಸ್ಥಾನ, ಅವಲುಕಮಟಿ.

Chancre, s. n. ಮೇಹವ್ರಣವು.

Chandler, s. n. ಬತ್ತಿಮಾಡುವವ.

Change, s. n. ಬದಲು, ಬದಲಾಯಿಕೆ, ಪ್ರತಿನಿಧಿ, ಪ್ರತಿಮಾಟವಿಕೆ, ವಿಕೃತಿ, ವಿಕ್ರಿಯ; (*change of form*) ಪರಿಣಾಮ, ವಿಕಾರ, ವಿಕೃತಿ, ವಿಕ್ರಿಯೆ; (*of the moon*) ಬಿದಿಗೆಚಂದ್ರ, ಚಂದು, ಪೆರೆ; (*small money*) ದುಡ್ಡುಕಾಸು, ಚಿಲ್ಲರೇನಾಣ್ಯ; (*novelty*) ಹೊಸಪರಿ, ಹೊಸಬುದ್ಧಿ. v. *Alteration, conversion, revolution, substitution.* The wind is *changed* ಗಾಳಿತಿರಿಗಿತು; There is a *change* in him for the better (*as applied to sickness*) ಅವನು ತೇರಿಕೊಂಡನು; (*as applied to reformation*) ಅವನು ಮಾರ್ಗಕ್ಕೆ ಬಂದನು, or ತಿರಿಗಿದನು; There is a *change* in the weather ಕಾಲವು ಪರ್ಯಾಸವಾಯಿತು, or ಕಾಲಭೇದವಾಯಿತು; He has now *changed* his mind ಈಗ ಅವನ ಮನಸ್ಸು ಭೇದವಾಯಿತು, or ಬೇರಾಯಿತು; *Change* places with me ನಾನೂ ನೀನೂ ಸ್ಥಳ ಬದಲಾಯಿಸಿಕೊಳ್ಳುವ, or ಮಾರ್ಪಡಿಸುವ.

To Change, v. a. ಬದಲಾಯಿಸು, ಮಾರಿಸು. v. *To alter, convert.* (*money*) ಮುರಿಸು; (*to change clothes*) ಬೇರೆವಸ್ತ್ರ ತೊಟ್ಟುಕೊಳ್ಳು; (*to change appearance*) ಬೇರೆರೀತಿ ಕಾಣಿಸು, ಹೊಸ ಅವತಾರವಾಗು, ಹೊಸ್ತಾಗು, ಬದಲಾಗು.

To Change, v. n. ಬದಲಾಗು; (*to change colour*) ಬದಲುವರ್ಣವಾಗು; (*to change countenance*) ಮುಖಭಾವ ಬದಲಾಗು, ಮುಖಕೆಡು; (*to change feathers*) ಗರಿಯುದರು; (*as the moon*) ಚಂದ್ರ ಕಾಣಿಸು, ಪೆರೆಹುಟ್ಟು; (*to be desirous of change*) ಚಂಚಲಮನಸಾಗಿರು; (*to change one's mind*) ಬೇರೆಮನಸಾಗು.

Changeable, a. (*fickle*) ಚಂಚಲದ, ಚಲವಾದ. v. *Inconstant.* (*liable to change*) ಬದಲಾಗುವ.

Changeableness, s. n. ಚಲನೆ, ಚಂಚಲತ್ವ. v. *Inconstancy.*

Changer, s. n. ಬದಲಾಯಿಸುವವನು.

Channel, s. n. ಕಾಲಿವೆ; (*between two shores*) ಪಾ

ತ್ರವು, ಬಿಡಗಳ ನಡುವು; (*for irrigation of land*) ಕಾಲ್ವೆ, ಕಾಲ್ವೆ.

To Channel, v. a. ಕಾಲುವೆಮಾಡು. v. *To groove, hollow.*

Chant, s. n. ಹಾಡುಗೆ, ರಾಗ.

To Chant, v. a. ರಾಗವೆತ್ತು, ಹಾಡು. v. *To sing.*

Chanter, s. n. ಗಾಯಕ, ಹಾಡುವವ, ಪಾಠಕ.

Chanting, s. n. ಹಾಡುವದು, ಪಾಡುವದು.

Chaos, s. n. ಸಂಕರ, ಸಂಕೀರ್ಣ, ಕಲಪಟೆ, ಕಲಬೆರಿಕೆ, ಕೊಂಡರಿ. v. *Confusion.*

Chap, s. n. ಬಿರಟೆ, ಒಡಪು, ಬಿರಿವು. v. *Gap, chink, cleft.* (*from cold, on the hands, &c.*) ವಿಪಾದಿಕೆ, ಬಿರಟೆ, ಸ್ಫುಟೆ.

To Chap, v. a. ಬಿರಿಯು, ಒಡೆಯು; (*to be chapped, as the hands, &c.*) ಬಿರಟೆಯಾಗು.

Chapel, s. n. ಗುಡಿ, ದೇವಾಲಯ. v. *Church, mosque.*

Chaplain, s. n. ಪುರೋಹಿತ, ಬೋಧಕ, ಪಾದಿರಿ, ಗುರುವು.

Chaplet, s. n. ಮಾಲೆ, ಹಾರ, ಮಾಲ್ಯವು, ಹೂಸರ, ಬಾಸಿಗ.

Chapman, s. n. ಅಂಗಡಿಕಾರ, ಶೆಟ್ಟಿ, ವರ್ತಕ, ಅಂಗಡಿಯವ. v. *Trader, pedlar.*

Chapter, s. n. ಸಂಧಿ, ಅಧ್ಯಾಯ, ಸರ್ಗ, ಅಧಿಕಾರ, ಪ್ರಕರಣ.

Character, s. n. (*reputation*) ಕೀರ್ತಿ, ಹೆಸರು, ನಡತೆ, ಯೋಗ್ಯತೆ, ಮಾನ, ಮಾನುಷ್ಯ, ಆಬುರಾಬು; (*a good character*) ಕಿರಾಬು, ಶ್ಲಾಘನೆ; (*a bad character*) ಬೇಕಿರಾಬು. v. *Honor, renown, letter, stamp, representation, inscription, writing.* (*letter*) ಅಕ್ಷರ; (*mark*) ಗುರುತು, ಸನ್ನೆ, ಸಂಜ್ಞೆ; (*to stand up for one's character*) ಮಾನಾನಲ್ಲಿರಿಸಿಕೊಳ್ಳು, ಆಬುರುದಕ್ಕಿರಿಸಿಕೊಳ್ಳು, ಮಾನುಷ್ಯವುಳ್ಳರಿಸಿಕೊಳ್ಳು; (*to give a good character*) ಒಳ್ಳೇಸಿಫಾರಿಸ್ಸುಮಾಡು; (*to give a bad character*) ಕೆಟ್ಟಸಿಫಾರಿಸ್ಸುಮಾಡು; This man has lost his *character* ಇವನ ಪ್ರತಿಷ್ಠೆವಡೆದನು, or ಮಾನಾಕಳಕೊಂಡನು; He bears an excellent *character* ಅವನುಮಹಾಖ್ಯಾತಿಯಾಗಿದ್ದಾನೆ, or ಅವನೊಳ್ಳೇಹೆಸರಾಗಿದ್ದಾನೆ, or ಅವನಿಗೆಬಹು ಕಿರಾಬುಂಟು.

To Characterise, v. a. (*describe*) ಗುರುತುತೋರಿಸ, ಲಕ್ಷಣಗಾರವೆತ್ತು; (*to inscribe*) ವಿಲಾಸಬರೆಯು.

Characteristic, s. n. ಕೈಗುರುತು, ಹಜಾವು.

Charcoal, s. n. ಇದ್ದಲು, ಅಂಗಾರವು, ಮಶಿ.

Charge, s. n. (*custody*) ಜಿಂಮ್ಮೆ, ಕೈವಾರಿ, ಕಾವಲಿ; ಪಾರಿ. v. *Trust.* (*office*) ಉದ್ಯೋಗವು. v. *Employment.* (*agency*) ಕಾರಾವಹಿಸುವದು; (*accusation*) ಫಿರ್ಯಾದಿ, ತಪ್ಪು, ಬಾಧಿ; (*mandate*) ಆಜ್ಞೆ, ನಿರೂಪ, ಅಪ್ಪಣೆ, ಹುಕುಮು; (*expense*) ಖರ್ಚು, ವ್ರಯ, ವ್ಯಯ, ವೆಚ್ಚ; (*of a gun*) ವಜನ, ತುಪಾಕಿಯೊಚ್ಚ, ತುಪಾಕಿಭಾರು; (*an attack*) ಅಭಿಯೋಗ, ಅಭಿಗ್ರಹ.

To Charge, v. a. (*to give in charge*) ಒಪ್ಪಿಸು, ಹವಾಲುಮಾಡು, ಮಾರಿಫತ್ತುಮಾಡು, ಮುಖಾಂತ್ರಮಾಡು, ಕೈವರ್ತಿಸು; (*to receive in charge*) ಒಪ್ಪಿಸಿಕೊಳ್ಳು, ವಹಿಸು, ಹವಾಲುಮಾಡಿಕೊಳ್ಳು; (*to impute*) ಹೊರಿಸು; They *charge* him with stealing that book ಅವರವನಮೇಲಾಪುಸ್ತ

ತದಕಳವು ಹೊರಿಸುತ್ತಾರೆ, or ಅಪವಾಪ್ಪುಕವಂನು ಕಟ್ಟಿಕೊಂಡನೆಂದು ಹೇಳುತ್ತಾರೆ; (to command) ಆಜ್ಞಾಪಿಸ, ಅಪ್ಪಣೆಕೊಡ, ಹುಕುಮುಮಾಡ; (to attack) ಮೇಲೆಬೀಳ, ಅಭಿಯೋಗಿಸ, ಅಭಿಗ್ರಹಿಸ; (to load a gun) ಬಾರುಮಾಡ; (to fill) ತುಂಬ, ಪೂರಿಸ; (in account) ಲೆಖ್ಖದಲ್ಲಿಡ.

Chargeable, a. (costly) ಬಹುಪ್ರಿಯವಾದ. v. *Dear, expensive.* (imputable) ಹೊರಿಸತಕ್ಕ.

Charged, part. (ordered) ಆಜ್ಞಾಪಿಸಲ್ಪಟ್ಟ; (accused) ಹೊರಿಸಲ್ಪಟ್ಟ; (filled) ತುಂಬಲ್ಪಟ್ಟ.

Charger, s. n. (dish) ಪರಾತ, ತಾಂಬಾಳವು; (a war horse) ತೆಲ್ಲ, ಯುದ್ಧಾಶ್ವ, ಕಾಳಗಕುದುರೆ.

Chariot, s. n. ತೇರು, ಪುಷ್ಪರಥ, ರಥ; (of war) ಶತಾಂಗ, ಸ್ಯಂದನ. v. *Carriage.*

Charioteer, s. n. ರಥಸಾರಥಿ, ರಥಹಟ್ಟೆಂಬಿ, ಸಾರಥಿ, ಸೂತ, ಕ್ಷತ್ತಾರನು, ನಿಯಂತನು.

Charitable, a. ಧರ್ಮವುಳ್ಳ, ದಾತೃತ್ವವುಳ್ಳ, ತ್ಯಾಗವುಳ್ಳ, ದಾನಶೌಂಡವಾದ, ಬಹುಪ್ರದವಾದ, ಸ್ಥೂಲಲಕ್ಷ್ಯವಾದ, ಔದಾರ್ಯವುಳ್ಳ, ಕೊಡುಗೈಯುಳ್ಳ, ವಿಹಾಪಿತವುಳ್ಳ, ದಾನವುಳ್ಳ, ವದಾನ್ಯವಾದ.

Charitableness, s. n. ಧಾರ್ಮಿಕತ್ವ. v. *Charity.*

Charitably, ad. ಧಾರ್ಮಿಕನಾಗಿ, ತ್ಯಾಗಿಯಾಗಿ, ಉದಾರಿಯಾಗಿ, ವದಾನ್ಯನಾಗಿ, ಸ್ಥೂಲಲಕ್ಷ್ಯವಾಗಿ.

Charity, s. n. ಧರ್ಮ, ತ್ಯಾಗ, ಅಪವರ್ಜನ, ದಾತೃತ್ವ, ಪ್ರತಿಪಾದನ, ಪ್ರಾದೇಶನ, ನಿರ್ವಾಪಣ, ದಾನ, ವಿಹಾಪಿತ, ಉದಾರತ್ವ, ಉತ್ಸರ್ಜನ, ವಿಸರ್ಜನ, ವಿಶ್ರಾಣನ, ವಿತರಣ, ಸ್ಪರ್ಶನ.

Charm, s. n. (amulet) ಯಂತ್ರ; (enchantment) ಮರುಳು, ಪ್ರಮೋಹ, ವಿಮೋಹ. v. *Amulet, fascination, spell.*

To Charm, v. a. (bewitch) ಅಭಿಮಂತ್ರಿಸ, ಮಂತ್ರಿಸ; (to please highly) ಮರುಳುಮಾಡ, ಮೋಹಿಸ, ಪ್ರೀತಿಮಾಡ, ವಿಮೋಹಿಸ, ಪ್ರಮೋಹಿಸ, ವಲಪಿಸ, ವಿಮೋಹಿಸ, ಪ್ರಮೋಹಿಸ.

Charmer, s. n. (bewitcher) ಮಂತ್ರಗಾರ, ಮರುಳುಮಾಡುವವ, ಮೋಹಿಸುವವ; (a beloved object) ಮನೋಹರಿ, ವಿಮೋಹಿಸುವವ, ಪ್ರಮೋಹಿಸುವವ, ಪ್ರೀತಿಹರಿ.

Charming, a. ವಿಮೋಹಿಸುವ, ವಲಪಿಸುವ, ಮರುಳುಮಾಡುವ, ಅಭಿರಾಮವಾದ, ಆಸೇಚನಕವಾದ, ಪ್ರಮೋಹಿಸುವ, ವಿಮೋಹಿಸುವ, ಮನೋಹರವಾದ.

Charmingly, ad. ಆಸೇಚನಕವಾಗಿ, ವಿಮೋಹಕವಾಗಿ, ಪ್ರಮೋಹಕವಾಗಿ.

Charnel-house, s. n. ಸಮಾಧಿ, ಪ್ರೇತಗೃಹ. v. *Sepulchre.*

Chart, s. n. ಪಟ. v. *Map.*

Charter, s. n. ಕೌಲುನಾಮೆ, ಕರಾರುನಾಮೆ, ಶಾಸನ, ಸನದು. v. *Diploma, patent, privilege.*

Chase, s. n. ಬೆಂನುಹತ್ತಿಕೆ, ಬೇಟೆ, ಸರವು, ಬೇಂಟೆ, ಸರವಿ, ಆಖೇಟನ, ಮೃಗವ್ಯ, ಆಚ್ಛೋದನ, ಮೃಗಯೆ. v. *Hunting, game, pursuit.*

To Chase, v. a. (pursue) ಬೆಂನುಹತ್ತ, ಹಿಂಬಾಲಿಸ; (hunt) ಬೇಟೆಯಾಡ. v. *To hunt, pursue.*

Chaser, s. n. (of game) ಬೇಟೆಗಾರ; (pursuer) ಬೆಂನುಹತ್ತುವವ, ಹಿಂಬಾಲಿಸುವವ, ಹಿಂಬೊಡರುವವ.

Chasm, s. n. ಸರಕು, ಒಡವು, ಕಂಗ, ಬಿರಟೆ, ಬಿರಿವು. v. *Gap, cleft, vacuity.*

Chaste, a. ಉಪಸ್ಥನಿಗ್ರಹವುಳ್ಳ, ಕಚ್ಚೆ ಶುದ್ಧವುಳ್ಳ. v. *Pure, uncorrupt. (a chaste woman)* ಸುಚರಿತ್ರೆಯು, ಪತಿವ್ರತೆ, ಹದಿಬದಿ, ಸತಿಯು.

Chastely, ad. ಕಚ್ಚೆ ಶುದ್ಧವಾಗಿ, ಉಪಸ್ಥನಿಗ್ರಹವಾಗಿ, ಸುಚರಿತ್ರವಾಗಿ, ಕಾಮನಿಗ್ರಹವಾಗಿ.

To Chastise, v. a. ಹೊಡೆಯು, ದಂಡಿಸು, ಬಡಿಯು, ಪ್ರಾಯಶ್ಚಿತ್ತಮಾಡು, ಪ್ರಹರಿಸು, ಶಿಕ್ಷಿಸು. v. *To punish, correct, admonish.*

Chastisement, s. n. ಶಿಕ್ಷೆ, ಪ್ರಾಯಶ್ಚಿತ್ತ, ದಂಡನೆ. v. *Punishment.*

Chastiser, s. n. ಬಡಿಯುವವ, ಶಿಕ್ಷಕ, ದಂಡಕ.

Chastity, Chastness, s. n. ಇಂದ್ರಿಯನಿಗ್ರಹ, ಕಚ್ಚೆಶುದ್ಧಿ, ಮಿತವಿಷಯ, ಉಪಸ್ಥನಿಗ್ರಹ, ಕಾಮನಿಗ್ರಹ. v. *Continence.*

Chat, s. n. ಹಲುಬಿಕೆ, ಪದಗಿಕೆ, ಹರಟೆ.

To Chat, v. n. ಹಲುಬು, ಮಾತಾಡು, ಹರಟು. v. *To talk, prattle.*

Chattels, s. n. ತಟ್ಟಿಮುಟ್ಟಿಗಳು, ಪಾತ್ರಸಾಮಗ್ರಿಗಳು.

Chatter, Chattering, s. n. *(idle talk)* ವ್ಯರ್ಥಮಾತು, ಬರೀಮಾತು, ಬೈಲುಮಾತು, ಹರಟೆ, ಜಲ್ಪಾಕತನ, ವಾಕ್ಯಚಾಪಲ್ಯ.

To Chatter, v. n. ವ್ಯರ್ಥಮಾತಾಡು, ಗಾಜಗ, ಹರಟು.

Chatterer, s. n. ಬಹುಭಾಷಿ, ತವರ, ಮಿಥ್ಯಾಗೋಷ್ಠಿಕ, ಬೈಲುಮಾತಿನವ, ಅಲಪುಬಾಯಿ, ಜಲ್ಪಾಕ.

Cheap, a. ಅಗ್ಗವಾದ, ಸಯವಾದ, ಬೆಲೆಸುಲಭವಾದ; Is this *cheap* or dear? ಇದೇನಗ್ಗವೋ ಪ್ರಿಯವೆ.

To Cheapen, v. a. ಅಗ್ಗಮಾಡು, ಬೆಲೆಸುಲಭಮಾಡು, ಸಯಮಾಡು.

Cheapness, s. n. ಅಗ್ಗವು, ಬೆಲೆಸುಲಭವು, ಸಯವು, ಚಾರಿ.

Cheat, s. n. ತಸ್ಕರತನ, ಪ್ರಮೋಸ, ಡಂಬು, ಪ್ರತಾರಣವು, ದಗಾಖೋರತನವು, ಕೃತ್ರಿಮ, ವಂಚನೆ, ಜಕ್ಕಲು. v. *Deception, impostor.*

To Cheat, v. a. ಮೋಸಮಾಡು, ವಂಚಿಸು, ದಗಾಮಾಡು, ಜಕ್ಕಲುಮಾಡು. v. *To defraud.*

Cheater, s. n. ತಸ್ಕರದಾರ, ದಗಾಖೋರ, ಕೃತ್ರಿಮಿ, ವಂಚಕನು, ಮೋಸಗಾರ, ಜಕ್ಕಲುಗಾರನು.

Check, s. n. *(curb)* ಬಿಗಿಹಿಡಿಯೋಣ, ನಿರೋಧವು; *(a reprimand)* ಗದರಿಕೆ. v. *Reproof, slight, rebuff. (cloth)* ಚುಕ್ತಾರಿ, ಸೂಶಿ, ಹೊಪ್ಪಳಿ.

To Check, v. a. ಸಮದಾಯಿಸು, ಬಿಗಿಹಿಡಿಯು, ತಗ್ಗಿಸು, ತಿಮ್ಮಣೆಮಾಡು; *(a bill)* ಸಂತ್ರಿಸು.

To Checker, v. a. ಚಿತ್ರವರ್ಣಮಾಡು, ಹೊಪ್ಪಳೀಹಾಕು. v. *To variegate.*

Checkered, a. ಹೊಪ್ಪಳಿಯಾದ, ಪಂಚರಂಗಿನ. v. *Tessellated, mosaic. (a checkered board or cloth)* ಅಷ್ಟಾಪದವು, ಶಾರಿಫಲ, ಪಗಡೇಹಾಸು.

Cheek, s. n. ಗಲ್ಲ, ಗವದಿ, ಗಂಡ, ಕಪೋಲ, ಕೆಂನೆ, ದವಡೆ.

Cheek-tooth, s. n. ದವಡೇಹಲ್ಲು.

Cheer, s. n. *(entertainment)* ಔತಣ, ವಿಂದು. v. *Dainties. (gaiety)* ಉಲ್ಲಾಸ, ವಿಲಾಸ. v. *Alacrity, jollity. (to be of good cheer, to be gay)* ಉಲ್ಲಾಸವಾಗಿರು, ಸಂತ್ರಮವಾಗಿರು, ವಿಲಾಸವಾಗಿರು.

To Cheer, v. a. ಕಂಮಿಸು, ಬೆಂಬತಟ್ಟು, ಧೈರ್ಯ

ಕೊಡು, ಸಂತೋಷಪಡಿಸು. v. *To encourage, comfort, gladden.* (*to cheer up*) ಉಲ್ಲಾಸವಾಗು, ಸಂತೋಷವಾಗು; They *cheered* him as he entered the town ಅವನು ಪಟ್ಟಣದೊಳಗೆ ಪ್ರವೇಶಿಸುತ್ತಲೇ ಯವರವನನ್ನು ಕೊಂಡು ಸಂತೈಸಿದರು; Refreshment and rest *cheer* the weary traveller ಆಯಾಸವುಳ್ಳ ದೇಶಾಂತ್ರಿಯನ್ನು ಭೋಜನವು ವಿಶ್ರಾಂತಿಕೆಗಳು ಹರ್ಷಪಡಿಸುವವು.

Cheerer, s. n. ಸಂತೈಸುವವ, ಉಲ್ಲಾಸಪಡಿಸುವವ.

Cheerful, a. ಸಂತೋಷದ, ಆನಂದದ, ಉತ್ಸಾಹದ, ಹರ್ಷಮಾಣ, ವಿಕಸಮಾಣ, ಪ್ರಸನ್ನ, ಹೃಷ್ಟಮಾನಸ, ಸಂಭ್ರಮದ, ಸಂತುಷ್ಟಮನಸ್ಕ, ಒಸಿಗ್ಗದ. v. *Gay, glad, happy.*

Cheerfully, ad. ಸಂತೋಷವಾಗಿ, ಆನಂದವಾಗಿ, ಸಂಭ್ರಮವಾಗಿ, ಉಲ್ಲಾಸವಾಗಿ.

Cheerfulness, s. n. ಸಂತೋಷ, ಉತ್ಸಾಹಿಕೆ; (*to acquire cheerfulness*) ಸಂತೋಷವಾಗು; (*to promote cheerfulness*) ಸಂತೋಷಪಡಿಸು.

Cheerly, Cheery. v. *Cheerful.*

Cheerless, a. ಅಸಂತೋಷದ, ಮ್ಲಾನ.

Cheese, s. n. ಗಿಣ್ಣು, ಹಾಲುಗಟ್ಟಿ, ಜಾಮ್ನುಗಟ್ಟಿ.

Cheesemonger, s. n. ಗಿಣ್ಣಿನವ.

Cheesy, a. ಗಿಣ್ಣಿನ.

To Cherish, v. a. (*protect*) ಆದರಿಸು, ಪೋಷಿಸು, ಸಾಕು, ಪಾಲಿಸು. v. *To indulge, soothe, encourage, defend, support, shelter.* (*caress*) ಲಾಲಿಸು, ನ್ಯಾವರಿಸು. v. *To indulge, soothe, encourage.* (*as a hen her chickens*) ಕೊಡಗು.

Cherisher, s. n. ಪಾಲಕ, ಪೋಷಕ, ಸಂರಕ್ಷಕ.

Cherub, s. n. ದೇವದೂತ.

Cherubim, s. n. ದೇವದೂತರು.

Chess, s. n. ಚದುರಂಗದಾಟ; (*the king*) ರಾಜ, ಅರಸು; (*the queen*) ಮಂತ್ರಿ; (*the castle*) ಆನೆ; (*the bishop*) ಶಕಟ, ರಥ, ಒಂಟೆ; (*the knight*) ಕುದುರೆ; (*the pawn*) ಆಳು, ಪ್ಯಾದೆ; (*to play at chess*) ಚದುರಂಗವಾಡು.

Chess-board, s. n. ಚದುರಂಗದಮನೆ; (*man*) ಚದುರಂಗದಬೊಂಬೆ; (*player*) ಚದುರಂಗವಾಡುವವ.

Chest, s. n. (*small*) ಪೆಟ್ಟಿಗೆ, ಸಂದೂಕ; (*large*) ಪೆಟಾರಿ; (*of drawers*) ಸಂದೂಕ, ಅರೆಯಪೆಟ್ಟಿಗೆ, ಅಲಮಾದಿ, ಅಂತಸ್ತುಂತಸ್ತಿನ ಪೆಟ್ಟಿಗೆ; (*of the body*) ಎದೆ, ವಕ್ಷಸ್ಥಲ, ಮಾರು; (*broad chested*) ಉರಸಿಲ, ಉರಸ್ವಂತ.

Chevalier, s. n. ಬಂಟನು, ಶೂರನು, ವೀರನು. v. *Cavalier, knight.*

To Chew, v. a. ನಮಲು, ಚರ್ವಿಸು, ಅವದು; (*the cud*) ಮೆಲುಕುಹಾಕು; (*to chew or meditate upon*) ಚಿಂತಿಸಿಕೊಳ್ಳು, ಯೋಚಿಸಿಕೊಳ್ಳು.

Chicane, Chicanery, s. n. ಹುಲವುತಂತ್ರ, ಕೃತ್ರಿಮ, ತಂತ್ರ, ಠಕ್ಕುತನ, ಮೋಸ, ವಂಚನೆ. v. *Deceit, sophistry.*

To Chicane, v. a. ತಂತ್ರಮಾಡು, ಠಕ್ಕುತನಮಾಡು, ವಿಘಾತಮಾಡು.

Chicaner, s. n. ಚತುರೋಪಾಯದವ, ಠಕ್ಕುದಾರ, ವಿಘಾತಗಾರ, ಮೋಸಗಾರ.

Chick, Chicken, s. n. ಕೋಳಿಮರಿ; (*broth*) ಕೋಳಿಸಾರು; (*hearted*) ಕೋಚೆಯಾದ, ಹೇಡಿ

ಯೊದ, ಗುಂಡಿಗೆಯಿಲ್ಲದ. v. *Cowardly, timorous.* (*pox*) ಸೀತಾಳೆ, ಶೀತಾಳೆ ಸಿಡುಬು, ಗಣಾಜಲಿ.

Chickling, s. n. ಕೋಳಿಮರಿ.

Chick-pea, s. n. ಚಣಾಕ, ಹರಿಮಂಥಕ, ಕಡಲೆ.

To Chide, v. a. (*reprove*) ಗದ್ದಿಸು, ನಿಂದಿಸು, ಗದರಿಸು, v. *To blame, reproach.*

To Chide, v. n. (*to quarrel*) ಝಗಳಾಡು, ಜೊಗಳಾಡು. v. *To clamour, scold.*

Chider, s. n. ಗದರಿಸುವವ, ಗದ್ದಿಸುವವ, ತಪ್ಪು ಹೊರಿಸುವವ, ವಾಗ್ದಂಡಕ.

Chief, a. ಯಜಮಾನ, ಪ್ರಧಾನ, ಶ್ರೇಷ್ಠ, ಪೆರ್ಗಡ, ಮುಖ್ಯ, ಪ್ರಮುಖ, ಪ್ರವೇಕ, ಅನುತ್ತಮ, ಉತ್ತಮ, ವರ್ಯ, ವರೇಣ್ಯ, ಪ್ರಬರ್ಹ, ಅನವರಾರ್ಧ್ಯ, ಪರಾರ್ಧ್ಯ, ಅಗ್ರ, ಪ್ರಾಗ್ರಹರ, ಪ್ರಾಗ್ರ್ಯ, ಅಗ್ರೀಯ, ಅಗ್ರಿಯ, ಹೆಗ್ಗಡೆ. v. *First, eminent, principal.*

Chief, s. n. ಯಜಮಾನನು, ಪ್ರಧಾನನು, ಶ್ರೇಷ್ಠನು, ಪೆರ್ಗಡನು, ಹಿರಿಯನು, ಹೆಗ್ಗಡೆಯು.

Chief-Justice, s. n. ಪ್ರಧಾನನ್ಯಾಯಾಧಿಪತಿ.

Chiefly, ad. ಪ್ರಧಾನವಾಗಿ, ಮುಖ್ಯವಾಗಿ. v. *Principally.*

Chiefship, s. n. ಪ್ರಧಾನಿಕೆ, ಮುಖ್ಯತ್ವ.

Chilblain, s. n. ಬಿಕಟೆ, ವಿಪಾದಿಕೆ, ಪಾದಸ್ಫೋಟ, ಹಗಲು.

Child, s. n. ಪಿಳ್ಳೆ, ಕೂಸು, ಪೋತ, ಪಾಕ, ಅರ್ಭಕ, ಡಿಂಭ, ಪೃಥುಕ, ಶಾಬಕ, ಶಿಶು, ಅಪತ್ಯ, ತೋಕ, ಪಸುಳೆ, ಮೊಗವು; (*from a child*) ಚಿಕ್ಕತನ ಮೊದಲು, ಕೂಸುತನ ಮೊದಲುಗೊಂಡು, ಬಾಲ್ಯದಾರಭ್ಯವಾಗಿ, ಬಾಲ್ಯಪ್ರಭೃತಿ; (*a child not exceeding sixteen*) ಬಾಲ, ಮಾಣವಕ, ಕುಮಾರ, ಹುಡುಗ, ಪೈದ, ಕುವರ; (*to be with child*) ಗರ್ಭಿಣಿಯಾಗು, ಬಸುರಾಗು; (*to be delivered of a child*) ಹೆರು, ಹಡೆಯು, ಈಂಗು.

Childbed, s. n. ಹೆರುವಿಕೆ, ಹಡೆಯುವಿಕೆ.

Childbirth, s. n. ಬೇನೆ, ಪ್ರಸವವೇದನೆ, ಮುಲುಕು; (*to bring forth a child*) ಹಡೆಯು, ಹೆರು, ಈಂಗು.

Childhood, s. n. ಬಾಲಪ್ರಾಯ, ಹುಡುಗತನ, ಶಿಶುತ್ವ, ಶೈಶವ, ಬಾಲ್ಯ, ಚಿಕ್ಕತನ.

Childish, a. ಹುಡುಗಾಟದ, ಪೋರಾಟದ, ಪೈಲಾಟದ. v. *Puerile, ignorant, simple, trifling.*

Childishly, ad. ಹುಡುಗಾಟವಾಗಿ, ಪೋರಾಟವಾಗಿ, ಪೈಲಾಟವಾಗಿ, ಮಕ್ಕಳಾಟವಾಗಿ.

Childishness, s. n. ಹುಡುಗಾಟಿಕೆ, ಪೋರಾಟಿಕೆ, ಪೈಲಾಟಿಕೆ, ಮಕ್ಕಳಾಟಿಕೆ.

Childless, a. ಬಂಜೆ, ಗೊಡ್ಡು, ಮಲಡಿ, ಬರಡು, ಪಜ್ಜೆವಂಸ್ತ್ರೀ, ವಂಧ್ಯೆ.

Children, s. n. ಪಿಳ್ಳೆಗಳು, ಮಕ್ಕಳು, ಸುತರು, ಕೂಸುಗಳು.

Chill, Chilliness, Chilness, s. n. ಕೊರಡು, ಐಕಿಲು, ಛಳಿ, ಶೀತಳ, ಶೈತ್ಯ, ಕುಳಿರು, ತಂಗಳು.

To Chill, v. a. ತಂಪುಮಾಡು, ಶಾಂತಮಾಡು, ಛಳಿಮಾಡು; (*to be chill*) ಛಳಿಯಾಗಿರು, ನಗದಿಯಾಗಿರು.

Chime, s. n. ಮೇಳ, ಏಕತಾಳ. v. *Harmony.* (*suitableness*) ಹೊಂದಿಕೆ, ಸಂಬಂಧ, ಒಪ್ಪಿಕೆ. v. *Correspondence, relation.*

To Chime, v. n. (*to be in concord*) ಮೇಳವಾಗಿರು; (*to agree or fall in with*) ಒಪ್ಪು, ಹೊಂದಿರು.

To Chime, v. a. ಘಂಟೆಬಡಿಯು, ಘಂಟೆಹೊಡೆಯು. v. *To jingle, clatter.*

Chimera, s. n. ಅಘಟಿತಘಟನ, ಆಕಾಶದೇಗೋಲೆಯು, ವೃಥಾಲೋಚನೆ, ಖ್ಯಾಲಾಲೋಚನೆ, ಸಮುದ್ರದೇಶವು.

Chimerical, a. ಅಘಟಿತಘಟನೆಯಾದ, ಆಕಾಶದೇಗೋಲೆಯಂತಿನ. v. *Fantastical, imaginary.*

Chimney, s. n. ಇಸ್ಲಾರು, ಬೆಸ್ಕಮಾಳಿಗೆ, ಹೊಗೆಗೂಲೆ, ಗುಬ್ಬೆಗೂಡು. v. *Fireplace.*

Chin, s. n. ಗಡ್ಡ, ಚುಬುಕ, ಗಲ್ಲ; *(a dimple in the chin)* ಗಡ್ಡದಗುಳಿ.

Cut, part. ಕಡಿದ, ಕೊಯಿದ, ಛಿನ್ನ, ಅರಿದ, ಛಾತ, ಲೂತ, ಕೃತ್ತ, ದಾತ, ದಿತ, ಛಿತ, ವೃಕ್ಣ.

Cut, s. n. (*a wound*) ಘಾಯವು; (*a picture*) ಚಿತ್ರ, ಚಿತ್ತಾರ; This is a short *cut* ಇದು ಸಜೂಟಿ, or ಇದು ಹತ್ತಿರ ಹಾದಿ; This man *cuts* a fine figure ಈ ಮನುಷ್ಯ ಬಹು ನೀಟುಗಾರನು; He is of the same *cut* with them ಇವನು ಅವರಿಗೆ ಸರಿಸಮಾನವಾಗಿದ್ದಾನೆ; (*a cut throat*) ಕಾಕೊರ್ಟಿಕ, ಕೊಲೆಪಾತಕ; (*a cut purse*) ಕಳ್ಳನು, ಚೋರನು.

To Cut, v. a. (*to penetrate*) ಕಡಿಯು, ಕೊಯ್ಯು, ಅರಿಯು. v. *To cleave, divide, crop, penetrate, intersect, carve, bleed.* (*with an axe*) ಕಡಿಯು; (*to carve*) ಹೆಚ್ಚು, ಕೊಯ್ಯು; (*to cut with uneasy sensations*) ಮನಸ ಛುಕ, ಮನಸು ಚುಚ್ಚು; This line *cuts* that line in the middle ಈ ಗೀಟಾ ಗೀಟಿನ ನಡುವೆ ಹಾದುಹೋಗುತ್ತದೆ; (*to cut down, hew.*) ಕಡಿದುಹಾಕು; He has *cut* down ten trees ಅವನು ಹತ್ತು ಮರಗಳನ್ನು ಕಡಿದುಹಾಕಿದ್ದಾನೆ; (*to reap*) ಕೊಯ್ಯು; (*to cut off, separate*) ಕೊಯಿದುಹಾಕು, ಖಂಡಿಸು; *Cut off* these large branches ಈ ದೊಡ್ಡ ಕೊಂಬೆಗಳನ್ನು ಕಡಿದುಹಾಕು; (*to kill*) ಕೊಲ್ಲು, ಕೊಂದುಹಾಕು; A thousand people were *cut off* by the

cholera morbus in that town ಆಪಟ್ಟಣದಲ್ಲಿ ಮಾರಿರೋಗದಿಂದಲು ಸಾವಿರ ಜನ ಸಡದುಹೋಯಿರು; (intercept) ಬಂದುಮಾಡ, ಅಟಕಾಯಿಸ; The provisions of the army were *cut off* by the enemy ದಂಡಿನರಸ್ತುಗಳು ಶತ್ರುಗಳಿಂದ ಬಂದಾದವು; (*to abbreviate*) ಸಂಕ್ಷೇಪಮಾಡ; *Cut off* two ciphers from the thousand and ten will remain ಸಾವಿರದಲ್ಲಿಯೆರಡುಸೊನ್ನೆತೆಗೆದರೆ ಹತ್ತುಳಿಯುವದು; (*from heirship*) ಹೊರಡಿಸ; They have *cut* him *off* from the estate ಅವರವನ್ನ ಸ್ತ್ರಿರಿಯಿಂದ ಹೊರಡಿಸಿಬಿಟ್ಟರು; (*extirpate*) ನಿರ್ಮೂಲಮಾಡ; (*put an end to*) ನಿಲ್ಲಿಸ, ತೀರಿಸಹಾಕ; (*withhold*) ಬಿಡುಕೊಂಡಿರ; (*preclude*) ಅಡ್ಡಿಮಾಡ; (*to cut out*) ಕೊಯ್ದು ತೆಗೆಯ; You must *cut out* more yet ನೀನಿಂನೂ ಸ್ವಲ್ಪಕೊರೆಯಬೇಕು, or ನೀನಿಂನೂ ಸ್ವಲ್ಪತೆಗೆದುಹಾಕಬೇಕು; (*form, shape*) ಆಕಾರಿಸ; He *cut out* a bird from this paper ಅವನೀಕಾಗದದಲ್ಲಿಪಕ್ಷಿಯಂಸಕತ್ತರಿಸಿದನು; (*excel*) ಹಿಂದಕ್ಕೆಹಾಕ, ಗೆಲ್ಲ; If you are careful you will *cut* him *out* ನೀಮಜಾಗ್ರತೆಯಾಗಿದ್ದರೆ ಅವನಗೆಲ್ಲುವಿ; (*contrive*) ಪ್ರಯತ್ನಿಸ; (*adapt*) ಹೊಂದಿಸ; (*debar*) ಅಶ್ಯಂತ್ರಿಸ; (*to cut short, retrench*) ಕಡಮೆಮಾಡ, ಕೊರತೆಮಾಡ, ತಗ್ಗಿಸ; The soldiers were *cut short* of their pay ಶಿಪಾಯಿಗಳ ಸಂಬಳಗಳಲ್ಲಿ ಕೊರತೆಮಾಡಿಸಿಕೊಳ್ಳಲ್ಪಟ್ಟರು; (*interrupt*) ಅಟೆಂಕಿಸ, ತಡೆಮಾಡ; (*to cut up, eradicate*) ಕಿತ್ತೆಗೆಯ, ನಿರ್ಮೂಲಮಾಡ; They have *cut up* all the trees ಗಿಡಗಳೆಲ್ಲವನ್ನ ಕಡಿದುಹಾಕಿದರು; (*to overcome in argument*) ಗೆಲ್ಲ, ಜಯಿಸ; (*to cut up as a butcher*) ಖಂಡಖಂಡಾಮಾಡ; (*to cut, carve, or engrave*) ಕೆತ್ತ; (*castrate*) ಬೀಜಾರತೆಗೆಯ; (*to cut in two*) ಛೇಧಿಸ.

To Cut, v. n. (*as a knife*) ಹರಿಯ, ಕಡಿಯ; (*as teeth*) ಹಲ್ಲೂರ, ಹಲ್ಲುಹೊರಡ, ಹಲ್ಲುಮೊಳೆಯ; This knife *cuts* well ಈಚೂರಿಚಂದಾಗಿ ಹರಿಯುತ್ತದೆ; Has the child *cut* all its teeth? ಕೂಸಿನಹಲ್ಲುಗಳೆಲ್ಲವು ಮೊಳೆತವೇ; He *cuts* his teeth very hard ಅವನಹಲ್ಲುಗಳುಬಹಳ ಪ್ರಯಾಸವಾಗಿಹೊರಡುತ್ತವೆ.

Cutaneous, Cuticular, a. ಚರ್ಮದ; (*a cutaneous eruption*) ಕಜ್ಜಿ, ಕಘು, ಪಾಮೆಯು.

Cuticle, s. n. (*outermost skin*) ಮೇಡೊಗಲು, ಮೇಲುದೊಗಲು, ಪಿಸ್ಸಿತೊಗಲು, ಸಣ್ಣದೊಗಲು.

Cutlass, s. n. ಜಮುದಾಡು, ತಲವಾರು.

Cutler, s. n. ಕತ್ತಿಗಳುಮಾಡುವವ, ಶಸ್ತ್ರಕಾರಕನು.

Cutter, s. n. ಕೊಯ್ಯುವವನು. v. Also *boat*.

Cutting, s. n. ಕೊಯಿತ, ಕಡಿತ.

Cycle, s. n. (*a period of time*) ಕಾಲಚಕ್ರ; (*the Hindoo cycle*) ಶಾಲೀವಾಹನಶಕವು.

Cygnet, s. n. ಹಂಸಪಕ್ಷಿ, ಅಂಚೆ.

Cylinder, s. n. ಪ್ರಸ್ಥಾಕಾರವು, ಬೊಂಗೆಯರೂಪವು, ಉಲೂಖಲಾಕಾರ; (*the cylinder of a sugar mill*) ಅರೆಗೆ; (*the cylinder of an oil mill*) ಗಾಣದಒರಳು, ಚೆಕ್ಕ.

Cylindric, Cylindrical, a. ಪ್ರಸ್ಥಾಕಾರವುಳ್ಳ, ಕೊಳವೆಯಾಕಾರದ.

Cymbal, s. n. ಕೈತಾಳ; *(to play on the cymbal)* ತಾಳಬಾರಿಸ.

Cymbalist, s. n. ತಾಳಗಾರ.

Cynic, Cynical, a. ಕೋಸೋರ್ದಿಯ, ಸಿಡಿಮೋರೆಯ. v. *Satirical, snarling.*

Cypress, s. n. *(rotundus)* ಕೋಕಿನಗಡ್ಡೆ, ಸಂಗಮಸ್ತೆ, ಕುಟನ್ನಟ, ದಾಶಪುರ, ವಾನೇಯ, ಪರಿಪೇಲವ, ಪ್ಲವ, ಗೋಪುರ, ಗೋನರ್ದ, ಕೈವರ್ತ, ಮುಸ್ತಕ.

Czar, s. n. ಮಹಾರಾಜನು, ಸುಲ್ತಾನು, ಊಳಿದ ಮಹಾಸ್ವಾಮಿ, ಕರ್ತನು, ಪಾದಶಾಹಾ, ಪಾಚ್ಛಾ.

D

Dab, s. n. *(a lump)* ಉಂಡೆ, ಒಡಿದಿ, ಗಶ್ಟ; *(slap)* ತಟ್ಟು, ದೆಬ್ಬೆ, ಪೆಟ್ಟು, ಚಪ್ಪಳೆ; *(a dab, in low language)* ಉಪಾಯದವನು, ಚಮತ್ಕಾರಸ್ತನು.

To Dab, v. a. ಒತ್ತು, ಹತ್ತುಹಾಕ, ತಟ್ಟಿ, ಅರೆಯ.

Dabchick, s. n. ನೀರುಕೋಳಿ, ಕೊಂಗೆಯು.

To Dabble, v. a. *(smear)* ಬಳಿಯ, ಪೂಸ, ತೊಡೆಯ, ಸವರ; *(to play in water)* ಕಳಿಪಿಳಿಂದು ಕುಳಿಯ; *(to meddle unskilfully)* ಅಬಂದಕೇ ಮಾಡ, ದ್ರಾಕ್ಷೆಮಾಡ.

Dabbler, s. n. *(a player in water)* ಚೆಲ್ಲಾಟದವ. ಕಳಿಪಿಳಿಯೆಂದು ಕುಳಿಯುವವ; *(superficial meddler)* ದ್ರಾಕ್ಷೆಯವ, ಅಬಂದಕೆಯವ.

Dactyle, s. n. ಭಗಣ.

Dad, Daddy, s. n. ಬಾಬಾ, ಅಪ್ಪಾ, ಅಯ್ಯ, ತಂದೆ, ಪಪ್ಪಾ.

To Daft, v. a. ದಬ್ಬಿಹಾಕ, ಹಾಕಿಬಿಡ.

Dag, s. n. ಕಠಾರಿ, ಚೆಲ್ಲಾಣ, ಬಾಂಕು, ನಾಂಗು.

To Dag, v. a. ಎಳೆಯ, ಹರಿದಾಡ, ಎಳೆದಾಡ.

Dagger, s. n. ಕಠಾರಿ, ಚೆಲ್ಲಾಣ, ಕ್ಷುದ್ರಸುರವು.

To Daggle, v. a. ಎಳೆದಾಡ, ಕಳಿಪಿಳಿಂದು ಕುಳಿಯ, ಕೆಸರಲ್ಲಿಳಿಯ.

Daggletail, a. ಕೆಸರಾದ, ಕಳಿಪಿಳಿಯಾದ.

Daily, a. ದಿನಂಪ್ರತಿಯ, ದಿನದಿನದ, ಪ್ರತಿನಿತ್ಯದ; *(ad.)* ದಿನದಿನಕ್ಕೆ, ಯಾವಾಗಲೂ.

Daintily, ad. ಕೋಮಲವಾಗಿ, ರಮ್ಯವಾಗಿ, ವಿಲಾಸವಾಗಿ, ನಾಜೂಕಾಗಿ, ಸ್ವಾರಸ್ಯವಾಗಿ. v. *Deliciously, eleguntly.*

Daintiness, s. n. ನಾಜೂಕುತನ. v. *Elegance, softness, delicacy.* *(squeamishness)* ಬಡಿವಾರತನ.

Dainty, a. *(delicate)* ಕೋಮಲವಾದ, ನಾಜೂಕಾದ; *(nice)* ಸ್ವಾರಸ್ಯವಾದ, ಮಾಧುರ್ಯವಾದ, ಕಮ್ಮಗಿರುವ, ಸವಿಯಾದ, ರುಚಿಯಾದ; *(squeamish)* ಬಡಿವಾರದ, ಒಯ್ಯಾರದ.

Dainty, s. n. ಸ್ವಾದು, ರುಚಿಪದಾರ್ಥ, ಪಾಯಸ.

Dairy, s. n. ಅಮೃತಮಥಲು, ಹಾಲುಕೋಣೆ, ಕ್ಷೀರಕುಟೀನೆ, ಪಯಸ್ಯಶಾಲೆ.

Dale, s. n. ಹಳ್ಳತಾಣ, ತಗ್ಗು, ತೆವರೀಹಳ್ಳ.

Dalliance, s. n. *(amorous playfulness)* ಸರಸಾಲಾಪ, ಅಲ್ಲಿಬಿಲ್ಲಿ, ಸಲ್ಲಾಪ, ಲೀಲೆ, ಶೃಂಗಾರಭಾವ, ಕ್ರೀಡೆ. v. *Blandishment, caress.* *(delay)* ಆಲಸ್ಯ. v. *Procrastination.*

Dallier, s. n. ಸ್ತ್ರೀಮೋಲ, ಸ್ತ್ರೀಚಪಲನು. v. *Fondler, trifler.*

Dallop, s. n. ಅಡೆ, ತೆಟ್ಟೆ, ಜಿಂಟೆ.

To Dally, v. n. *(to fondle)* ಲಾಲಿಸು, ಕ್ರೀಡೆಮಾಡು, ಉಲ್ಲಾಸಮಾಡು, ಸರಸವಾಡು, ಗಾಡಿಗತನಮಾಡು. v. *To caress, frolic, sport, toy.* *(to delay)* ಆಲಸ್ಯಮಾಡು, ದಿನಾಜರಿಗಿಸು; *(to amuse or deceive)* ಅಟಿಮರಿಸು, ನಂಬುಸೂಳಿತನಮಾಡು, ಜಕ್ಕಲುಮಾಡು, ಜಾಪ್ಯಮಾಡು.

Dam, s. n. *(mother)* ತಾಯಿ; *(a bank)* ಕುದಿ, ಅಡ್ಡ, ತಡೆ, ಮಡೆ, ಅಗೆ, ಕಟ್ಟೆ, ಕರೆ.

To Dam, v. a. ಅಡ್ಡಕಟ್ಟು, ಕುದಿಗಟ್ಟು, ಅಗೇಹಾಕು.

Damage, s. n. *(detriment)* ನಷ್ಟ, ಕೇಡು, ಛೇದ, ಲುಕ್ಸಾನು, ಕರಾಬು. v. *Loss.* *(retribution, fine, reparation of damage)* ತೆರ, ಲಿಗಾಡು, ಲಗ್ಗ.

To Damage, v. a. ನಷ್ಟಾಹಾಕು, ಲುಕ್ಸಾನುಹಾಕು; *(to take or receive damage)* ನಷ್ಟವಾಗು.

Damaged, a. ನಷ್ಟವಾದ, ಲುಕ್ಸಾನಾದ.

Damask, s. n. ಬುಟ್ಟೇದಾರಿ, ಪೇಟೆ, ಬುಗುದಿ, ಜಾಂದಾನಿ.

To Damask, v. a. ಬುಟ್ಟೇತೇರು, ಪೇಟ್ಯೇತೇರು, ಬುಗಡೀತೇರು.

Dame, s. n. ಅಜ್ಜಿ, ಮುದಿಕಿ. v. *Lady.*

To Damn, v. a. *(to doom to eternal torments)* ನರಕದಲ್ಲಿದೊಬ್ಬು; *(to hoot)* ಛೀಛೀಯೆಂದು ಹೇಳು; *(to condemn)* ಅಪರಾಧಗ್ರಸ್ತಮಾಡು.

Damnable, a. ನರಕದಲ್ಲಿದೊಬ್ಬತಕ್ಕ.

Damnation, s. n. ನರಕದಲ್ಲಿದೊಬ್ಬುವದು.

Damnatory, a. ಅಪರಾಧಹೊರಿಸುವ.

Damp, a. *(moist)* ತೋದ, ಒದ್ದೆಯಾದ, ತೇವವಾದ. v. *Moist, wet, humid, fresh, green.* *(dejected)* ವಿಷಣ್ಣವಾದ; This room feels very *damp* ಈಕೊಠಡಿಯು ತಂಪಾಗಿ ತಾಗುತದೆ, or ಈಸ್ಥಳವು ಮಹಾಶೈತ್ಯವಾಗಿ ತೋರುತದೆ; He caught cold by wearing *damp* clothes ಅವನು ಒದ್ದೇಬಟ್ಟೆಗಳುಟ್ಟುಕೊಂಡದ್ದರಿಂದ ಅವನಿಗೆ ನೆಗಡಿಹಿಡಿಯಿತು.

Damp, s. n. *(vapour)* ತೇವ, ತೋಯಿಕೆ, ಒದ್ದೆ, ಒರತೆ; *(dejection of spirits)* ವಿಷಣ್ಣತೆ, ವಿಷಾದವು. v. *Depression.*

To Damp, v. a. ತೋಯಿಸು, ಒದ್ದೇಮಾಡು. v. *To wet.* *(to become damp)* ತೇವವಾಗು, ಶೀತವಾಗು; *(to damp, deject)* ವಿಷಣ್ಣನಾಮಾಡು.

Damsel, s. n. ಕನ್ಯಾಸ್ತ್ರೀ, ಯೌವನಸ್ತ್ರೀ, ಹರೇದವಳು. v. *Girl, maid.*

To Dance, v. n. ನಾಟ್ಯವಾಡು, ಪಾತ್ರವಾಡು, ಕುಣಿಯು, ಊಡು.

To Dance attendance, v. a. ಆಶ್ರಯಿಸು.

Dance, s. n. ನಾಟ್ಯ, ಪಾತ್ರ, ಕುಣಿತ, ಆಟ, ಕೂಡು.

Dancer, s. n. ನಟ, ಕುಣಿಯುವವ, ನರ್ತಕ; *(a male dancer in female's apparel)* ಸ್ತ್ರೀವೇಷ

ಧಾರಿಯು, ಪ್ರಹಸನ, ಪ್ರಹಸನ, ಪ್ರಹಸನ.

Dancing, s. n. ಕುಣಿತ, ಆಟ, ತಾಂಡವ, ನಟನ, ನಾಟ್ಯ, ಲಾಸ್ಯ, ನೃತ್ಯ, ನರ್ತನ.

Dancing-girl, s.n. ನರ್ತಕಿ, ಸೂಳೆ, ಕಂಚನಿ, ನಚ್ಚಣೆ, ನಾಯಕಸಾನಿ, ಕುಣಿವವಳು, ಆಡುವವಳು, ಲಾಸಕಿ.

Dancing-master, s. n. ನೃತ್ಯಕನು, ನಟ್ಟುವನು.

Dancing-school, s. n. ನಾಟಕಸಾಲೆ.

Dandeprat, s. n. ಗಿಡ್ಡ, ಗಿಡಗ, ಕುಳ್ಳ.

To Dandle, v. a. *(a child)* ಎಗರಿಸು, ಕುಣಿಸು; *(to fondle)* ಲಾಲಿಸು; *(to delay)* ಆಲಸ್ಯಮಾಡು, ದಿನಜರಿಗಿಸು.

Dandler, s. n. ಎಗರಿಸುವವ.

Dandrufe, s.n *(scales on the head)* ಹುಂಡು, ಅದುರು.

Danger, s. n. ಮೋಸ, ಗಂಡಾಂತ್ರರ, ಗಂಡವು, ಕೇಡು, ಪ್ರಮಾದ, ಅನರ್ಥವು, ಅಪಾಯ. v. *Fear, dread, peril, hazard.* His life is in *danger (as applied to sickness)* ಅವನು ಜೀವಿಸುವದಸಾಧ್ಯ; *(as applied to situation)* ಪ್ರಾಣಗಂಡಾಂತ್ರರದಲ್ಲಿದ್ದಾನೆ; There is *danger* of its falling down ಮಹಾ ಮೋಸ ಬಂದೀತು; That child is in *danger* of being run over ಆ ಮೊಗು ಬಂಡೀನಾದರೂ ಹಾದೀತು; *(casual and unseen danger)* ಅದೃಷ್ಟಭಯ, ಕಾಣದಾಪತ್ತು; *(obvious danger)* ದೃಷ್ಟಭಯ, ಕಂಡಾಪತ್ತು; *(latent danger)* ಅಂತರ್ಭಯ, ಒಳ ಮೋಸ; *(the post of danger)* ವೀರಾಶಂಸನ.

To Danger, v. a. ಪ್ರಾಣಾಂತ್ಯಕ್ಕೆ ತರು.

Dangerless, a. ಮೋಸವಿಲ್ಲದ.

Dangerous, a. ಮೋಸದ, ಗಂಡದ, ಅಪಾಯವಾದ. v. *Perilous, hazardous. (a dangerous place)* ಗಂಡಾಂತ್ರರಸ್ಥಲ; *(a dangerous affair)* ಮೋಸದ ಕೆಲಸ.

Dangerously, ad. ಮೋಸವಾಗಿ, ಗಂಡವಾಗಿ, ಅಪಾಯವಾಗಿ.

Dangerousness, s. n. ಮೋಸ, ಗಂಡಾಂತ್ರರ, ಗಂಡವು, ಅನರ್ಥವು. v. *Danger.*

To Dangle, v. n. ಜೋಲಾಡು, ಜೋಲ್ಯಾಡು, ನೇತಾಡು; *(to hang upon any one)* ಆಶ್ರಯಮಾಡು.

Dangler, s. n. *(after women)* ಸ್ತ್ರೀಲೋಲ, ಸ್ತ್ರೀಚಪಲನು.

Dapper, a. *(mas.)* ಚಿಣಿಮಿಣಿಗಾರ, ಚಿತ್ರಕುಳ್ಳ; *(fem.)* ಚಿಟುಗುಬ್ಬಿ, ಚಿತ್ರಕುಳ್ಳಿ.

Dapperling, s. n. ಗಿಡ್ಡ, ವಾಮನ, ಖರ್ವ, ಕುಳ್ಳ, ಗುಜ್ಜಾರಿ.

Dapple, a. ಚಿತ್ರವರ್ಣವಾದ.

To Dapple, v. a. ಚಿತ್ರವರ್ಣಮಾಡು, ಹಲವುಬಣ್ಣಮಾಡು. v. *To streak, vary.*

Dappled, a. ಕಲ್ಮಾಷವುಳ್ಳ, ಚಿತ್ರವರ್ಣವುಳ್ಳ, ಕಪಿಲೆಬಣ್ಣವುಳ್ಳ.

To Dare, v. n. ಮುಂದುಗೆಯು, ಮುಂದೊದರು, ಧೈರ್ಯವಾಗಿರು; I *dare* do all that may become a man, who dares do more is none ಮನುಷ್ಯರು ಮಾಡತಕ್ಕ ಕೆಲಸವು ಮಾಡನಾನು ಧೈರ್ಯವಂತ್ರನಾಗಿದ್ದೇನೆ ಅದಕ್ಕೆ ಮೀರಿದ ಧೈರ್ಯವುಳ್ಳವನು ಮಾನವನಲ್ಲ, or ಮನುಷ್ಯರಿಗುಂಟಾದ ಶಕ್ತಿನಂನಲ್ಲುಂಟಿದಕ್ಕೆ ಮೀರಿ ಮಾಡುವವ ಮನುಷ್ಯನಲ್ಲ; How *dare* you go there ನೀನಲ್ಲಿಗೆ ಹೋ

ಗಲಸ್ತ್ಯಾಕಿದುಡುಕತ್ತಿ, or ದಾಂಗ್ಯಾಕಿದ್ದೋ ಗತ್ತಿ.

To Dare, v. a. (*to defy*) ದುಡುಕ, ಕಾಲುಕೆರೆಯ, ಮಾಸ್ಸೇರಿಯಾಗಿಸ, ಛಜಚಪ್ಪಳಿಸ.

Dare, s. n. (*defiance*) ಧುರಿ, ದುಡುಕು, ಕಾಲುಕೆರೆಯೋಣ, ಛಜಚಪ್ಪಳಿಕೆ.

Daring, a. ನಿರ್ಲಜ್ಜ್ಯವಾದ, ಧೃಷ್ಟೋತ್ಕರವಾದ, ನಿರ್ಭೀತಿಯಾದ, ಧೈರ್ಯವಾದ. v. *Bold, courageous, audacious, intrepid.*

Daringly, ad. (*boldly*) ನಿರ್ಲಜ್ಜ್ಯವಾಗಿ, ಧೃಷ್ಟೋತ್ಕರವಾಗಿ, ಧೈರ್ಯವಾಗಿ, ನಿರ್ಭೀತಿಯಾಗಿ; (*impudently*) ಮಕರತನವಾಗಿ, ಉಬ್ಬಾವಾಗಿ, ನಾಚಿಕೆಯಿಲ್ಲದವಾಗಿ.

Dark, a. (*not light*) ಕತ್ತಲೆಯಾದ, ಅಂಧಕಾರವಾದ, ಮಬ್ಬಾದ; (*to be in the dark*) ಕತ್ತಲೆಯಲ್ಲಿರ; (*to be ignorant of*) ಅರಿಯದೇಯಿರ; (*a dark night*) ಕತ್ತಲೇರಾತ್ರಿ, ಕಾಳರಾತ್ರಿ; (*the dark half of a month*) ಕೃಷ್ಣಪಕ್ಷ, ಬಹುಳ; (*dark sighted*) ಚತ್ವಾರಿಯುಳ್ಳ, ಬಾಳೇಸವುಳ್ಳ; (*a dark person, or dark complexion*) ಕರಿಯವ, ಕರಿಮೈಯ್ಯವ, ಕಾಳಸ; (*obscure*) ಸ್ಪಷ್ಟವಿಲ್ಲದ, ನಿರ್ಮಲವಿಲ್ಲದ; What may seem *dark* at the first will afterwards be found more plain ಮೊದಲಲ್ಲಿಯಾವದು ಗಾಢವಾಗಿ ಕಾಣಲ್ಪಡುವದೋ ಅದು ಬರಬರ ನಿರ್ಮಲವಾಗಿ ಕಾಣುವದು, or ಮೊದಲು ಕಷ್ಟವಾಗಿ ತೋರಿದ್ದರೆ ಉಪಾಯಸುಲಭವಾಗಿ ಕಾಣುವದು; (*ignorant*) ಅಜ್ಞಾನದ; The age in which we live is a very *dark* age ಈಗ ನಾವಿರುವ ಕಾಲವು ಮಹಾ ಅಜ್ಞಾನ ಕಾಲವು; (*not cheerful*) ಅಸಂತೋಷದ, ಬೇಸರಿಕೆಯ. v. *Gloomy.*

Dark, s. n. ಕತ್ತಲೆ, ಅಂಧಕಾರ, ಕಾವಳ, ತಮಸ್ಸು, ತಿಮಿರ; (*to keep in the dark, to act clandestinely*) ಬಚ್ಚಿಟ್ಟುಕೊಳ್ಳ. v. *To conceal.*

To Darken, v. a. ಕತ್ತಲೇಮಾಡ, ಮರೇಮಾಡ, ಮಬ್ಬುಮಾಡ.

To Darken, v. n. ಕತ್ತಲೆಯಾಗ, ಮಬ್ಬಾಗ, ಅಂಧಕಾರವಾಗ.

Darkly, ad. ಕತ್ತಲೆಯಾಗಿ, ಅಂಧಕಾರವಾಗಿ, ಮಬ್ಬಾಗಿ.

Darkness, s. n. ಕತ್ತಲೆ, ಕಾವಳ, ತಮಿಸ್ರ, ತಮಸ್ಸು, ಮರವು, ಮಬ್ಬು, ಅಂಧಕಾರ, ಕಾಳಗ, ತಿಮಿರ, ಧ್ವಾಂತವು. v. *Obscurity, dimness*; also *ignorance, wickedness.* (*great darkness*) ಗವುಗತ್ತಲೆ, ಅಂಧತಮಸವು; (*imperfect darkness*) ಇಳಿಗತ್ತಲೆ, ಅವತಮಸ; (*universal darkness*) ಸಂತಮಸ, ಸುತ್ತುಗತ್ತಲೆ.

Darksome, a. ಮಬ್ಬಿನ, ಕಾಳ್ಗತ್ತಲೆಯಾದ, ಗಾಢದ, ಗವುಗತ್ತಲೆಯಾದ. v. *Dark, gloomy.*

Darling, a. ಮೋಹದ, ಸೊಬಗಿನ, ಮುದ್ದಿನ. v. *Dear, favourite.*

Darling, s. n. (*a child*) ಮುದ್ದಿನಕೂಸು, ಮುದ್ದುಮಗು; (*a woman*) ಮೋಹದ ಮೊಂಬ್ಬೆ, ರಮ್ಯವಾದಸ್ತ್ರೀ, ಸೊಬಗಿನಸೋನೆ, ಶೃಂಗಾರಸ್ತ್ರೀ, ನಲ್ಲಳು, ಇನಿಯಳು, ಪ್ರಿಯಳು, ಕಾದಲು.

To Darn, v. a. ಎಳೆಯಾಡ, ರಫೂಮಾಡ.

Dart, s. n. ಸಾಂಗು, ಬಾಲಾ, ಬರ್ಚಿ, ಶಲ್ಯ; (*a bearded dart*) ಪ್ರಾಸ, ಸಂಕಿ.

To Dart, v. a. ಚೀರು, ಎಸ್ಯು, ಇರಿಯು.

To Dash, v. a. (*to throw or strike*) ಒಗೆಯು, ಎಸೆಯು; If you *dash* a stone against a stone in the bottom of the water it makes a sound ನೀರನ್ನೀರೊಳಗಿರುವ ಕಲ್ಲಿಗೆ ಕಲ್ಲೊಗೆಯಲದು ಟುಮಕ್ಕೆನುವದು; (*to plash*) ನೀರ ಸೊನ್ನೆದೆಯು; He *dashed* the water on me with his foot ಅವನು ಕಾಲುಗಳಿಂದ ನೀರ ಪ್ಪಳಿಶಿ ನನ್ನ ಮೇಲೆ ಚೆಲ್ಲಿಶಿದನು; What a *dash* he cuts! ಅವನೆಷ್ಟು ಡಬ್ಬಾಗಿ ಧಾನೆ, or ಅವನೆಷ್ಟು ನೀಟಾಗಿ ಧಾನೆ; (*to dash as the waves*) ಬಡಿಯು, ಮೋದು, ರೊಡೆಯು; (*to dash, abash*) ನಾಚಿಕೆಪಡಿಸು, ಮುಖಭಂಗಿಸು; (*to break by collision*) ದಬಾರೆಂದು ಬೀಳು; He fell from the top of the precipice and *dashed* himself in pieces ಅವನು ಕೋಡಿನ ಮೇಲಿಂದ ಬಿದ್ದು ನಜ್ಜುಗುಜ್ಜಾಗಿ ಹೋದನು; (*to obliterate*) ತೊಡೆಯು, ಕೆದಿಸು, ಅಳಿಯು, ತೆಗದುಹಾಕು; *Dash* it out with your pen ಅದಂ ನನಿನ್ನಲೆಕ್ಕಣಿಕೆಯಿಂದ ಗೀರಾಕು, or ಅದರ ಮೇಲೆ ನಿನ್ನಲೆಕ್ಕಣಿಕೆಯಿಂದೆಳೆ; (*to rush thro' water*) ಜತ್ತಿಂದು ಹಾಯು; They *dash* through thick and thin ಸೇರಾಸರಿಯಾಗಿ ಹಾದು ಹೋಗುತ್ತಾರೆ; (*to mix*) ಕಲಿಸು, ಬೆರಿಸು; (*to dash one's hopes*) ನಿರಾಶೆ ಮಾಡು; (*to dash away, form in haste*) ಅರಕ ಪಟ್ಟಿ ಮಾಡು; (*to write rapidly*) ಬೇಗ ಬರೆಯು.

Dash, s. n. (*collision*) ತಾಟೂಟ, ಬಡಿದಾಟ; (*a blow*) ಬಿಚ್ಚು, ಪೆಟ್ಟು, ತಟ್ಟುವಿಕೆ; (*a mark in writing*) ಕೈಹಿ, ಗೆರೆ; (*infusion*) ಬೆರಿಸೋಣ, ಕಲಿಸೋಣ; (*dashing of the waves*) ತೆರೆ ಬಡಿಯುವದು.

Dastard, s. n. ಅಧೈರ್ಯಕ, ಹೇಡಿ, ಕೋಚೆ. v. *Coward*.

Dastardly, ad. ಕೋಚೆಯಾಗಿ. v. *Cowardly*, *mean*.

Date, s. n. (*of a letter*) ತಾರೀಖು, ತೇದಿ; What *date* does the letter bear? ಆ ಕಾಗದ ಬರದ ದಿನವಾವದು, or ಆ ಪತ್ರ ಬರದ ದಿನವಾವದು; (*time*) ಸಮಯ; (*duration*) ಬಾಳ್ವಿಕೆ, ದಿನವಿರುವಿಕೆ; (*time stipulated*) ಗಡ, ವಾಯಿದೆ, ಗೊತ್ತು; (*end*) ಅಂತ್ಯ, ಸಮಾಪ್ತಿ; These things are out of *date* now ಇವು ವಾಡಿಕೆ ತಪ್ಪಿದ ವಸ್ತುಗಳು; (*date fruit*) ಖರ್ಜೂರ.

To Date, v. a. (*a letter*) ಪೈದಸ್ತಿಕೆ ಬರೆಯು, ತಾರೀಖು ಬರೆಯು.

Dateless, a. ದಿನವಿಲ್ಲದ, ಗೊತ್ತಿಲ್ಲದ, ತಾರೀಖಿಲ್ಲದ.

Date-tree, s. n. ಖರ್ಜೂರದ ಗಿಡ.

Dative, s. n. ಸಂಪ್ರದಾನ, ಚತುರ್ಥೀ ವಿಭಕ್ತಿ; In Carnáṭaca ಕೆ and ಗೆ are the signs of the *dative* case.

To Daub, v. a. ಒರಸು, ಪೂಸು, ಎಳೆಯು. v. *To smear, bedaub.*

Dauber, s. n. ಮಡ್ಡೀಬಂಗಾರಗಾರ.

Dauby, a. ಪಿಸುಕಾದ, ಕಸಿಪಿಸಿಯಾದ.

Daughter, s. n. ಮಗಳು, ಕುಮಾರಿ, ತನುಜೆ, ಪುತ್ರಿ, ದುಹಿತೃವು, ದುಹಿತರನು, ದುಹಿತೆಯು; (*daughter's husband*) ಅಳಿಯ, ಜಾಮಾತರ;

(*daughter's son*) ದೌಹಿತ್ರ; (*grand daughter*) ಮೊಮ್ಮಗಳು, ನಪ್ತ್ರಿಯು, ಪೌತ್ರಿಯು; (*grand daughter's daughter*) ಮರಿಮಗಳು; (*a daughter in law*) ಸೊಸೆ, ಸ್ನುಷೆಯು, ಜನಿಯು, ವಧುವು; (*a step daughter*) ಮಲಮಗಳು.

To Daunt, v. a. ಭೀತಿಯಪಡಿಸು, ಅಧೈರ್ಯಪಡಿಸು, ಗದರಿಸು. v. *To frighten, discourage.*

Dauntless, a. ನಿರ್ಭೀತಿಯಾದ, ಧೈರ್ಯವಾದ.

Dauntlessness, s. n. ನಿರ್ಭೀತಿ, ನಿಶ್ಶಂಕೆ, ನಿರ್ಭಯ, ಧೈರ್ಯವು.

To Dawn, v. n. ಬೆಳಗುವಜಾವವಾಗು, ಅರುಣೋದಯವಾಗು.

Dawn, s. n. ಉದಯಕಾಲ, ಬೆಳಗುವಜಾವ, ಕಲ್ಯವು, ಉಷವು, ಪ್ರತ್ಯುಷವು, ಪ್ರಭಾತವು, ಅಹರ್ಮುಖವು.

Day, s. n. ದಿವಸ, ದಿನ, ದಿವಸ, ಪಗಲು, ಹಗಲು, ಘಸ್ರ, ಅಹಸ್ಸು, ವಾಸರ, (*a day from sunrise to sunrise*) ಅಹೋರಾತ್ರ; (*day of new moon*) ಅಮಾವಾಸ್ಯೆ, ದರ್ಶ, ಅವಸಿ, ಅಮಾಸೆ, ಅಮಾವಾಸೆ; (*day of full moon*) ಪೂರ್ಣಮಾಸಿ, ಪೌರ್ಣಮಿ, ಹುಣ್ಣಿಮೆ; (*the last day of the month*) ಮಾಸಾಂತದ ದಿನ, ತಿಂಗಳ ಕಡೇ ತಾರೀಖು; (*the first day of the month*) ತಿಂಗಳ ಮೊದಲುದಿನ; (*this day*) ಇಂದು, ಈದಿನ, ಈದಿವಸ; (*to-day*) ಈಹೊತ್ತು; (*the day after to-morrow*) ನಾಡದ್ದು, ನಾಳಿದ್ದು; (*the day before yesterday*) ಮೊನ್ನೆ; (*to this day*) ಈಹೊತ್ತುವರಿಗೂ, ಇಂದಿನವರಿಗೂ; (*day and night*) ರಾತ್ರಿಹಗಲು, ಅಹೋರಾತ್ರವು; (*every other day*) ದಿನಬಿಟ್ಟುದಿನ, ಪ್ರತಿಮರುದಿನ; (*from day to day*) ದಿನದಿನಕ್ಕೆ, ಪ್ರತಿನಿತ್ಯವು; (*from this day*) ಇಂದಿನಿಂದ, ಈಹೊತ್ತುಮೊದಲುಗೊಂಡು, ಇದುಮೊದಲುಗೊಂಡು; (*a market day*) ಸಂತೇದಿವಸ; (*a fast day*) ಏಕಾದಶಿ, ಉಪವಾಸದದಿವಸ; (*a festival day*) ಹಬ್ಬದದಿವಸ; (*a day's journey*) ಒಂದುದಿನದ ಪ್ರಯಾಣ; (*the day of judgment*) ಯುಗಾಂತ್ಯರ ವಿಚಾರಣೇದಿವಸ; (*some days*) ಕೆಲವುದಿವಸ, ಕೆಲವುದಿನ; Come again this *day* week (or this day se'nnight) ಇಂದಿಗೆಂಟನೇದಿವಸದಲ್ಲಿತಿರಿಗಿಬಾ; He was here this *day* fortnight ಇಂದಿಗೆಹದಿನೈದನೇದಿವಸದಲ್ಲಿ ಇಲ್ಲಿದ್ದ; (*day of the week*) ವಾರ; (*day of the month*) ತೇದಿ, ತಿಥಿ, ತಾರೀಖು; (*day after day*) ಅನುದಿನವೂ, ದಿನದಿನವೂ, ಪ್ರತಿದಿವಸವೂ; He will win the *day* ಅವನುಗೆಲ್ಲುವನು; The thief broke into the house in broad *day* ಕಳ್ಳಹಟ್ಟಹಗಲಲ್ಲಿ ಮನೆಗೆ ಕನ್ನಾಹಾಕಿದನು. An old Carnáṭaca division of the *day* is, ಮುಂಬಗಲು *morning*; ನಡುವಗಲು *noon*; ಕಡೆವಗಲು *evening*; and ಮುಚ್ಚಂಜೆ, ಮುಸ್ಸಂಜೆ, ತ್ರಿಸಂಧ್ಯ *the whole of the day*, or *dawn, noon, and eve.*

Daybook, s. n. ದಿನವಹಿ.

Daybreak, s. n. ಬೆಳ್ತಾರೆ, ಮುಂಜಾನೇ, ಉದಯಕಾಲ, ಸೂರ್ಯೋದಯ, ಪ್ರತ್ಯೂಷ, ಅಹರ್ಮುಖ, ಕಲ್ಯ, ಉಷ, ಪ್ರತ್ಯುಷಸ್ಸು, ಪ್ರಭಾತ. v. *Dawn.*

Daylabour, s. n. ದಿನಗೂಲಿ, ಮಜೂರಿ, ಚೆಂಗೂಲಿ.

Daylabourer, s. n. ದಿನಗೂಲಿಯವ, ಮಜೂರಿಯವ, ಚೆಂಗೂಲಿಯವ.

Daylight, s. n. ಹಗಲು, ಪಗಲು, ದಿವವು.

Daysman, s. n. ಮಧ್ಯಸ್ತಗಾರನು.

Daytime, s. n. ಹಗಲುವೇಳೆ.

To Dazzle, v. a. ಕಂಗಳುಕುಕ್ಕಿಸ.

To Dazzle, v. n. ಕಂಗಳುಕುಕ್ಕ, ಕಣ್ಣುಚುಚ್ಚ.

Dead, a. (*deprived of life*) ಸತ್ತ, ಸತ್ತುಹೋದ, ಕಾಲವಾದ, ಪಂಚತ್ವವಂಗೈದ, ಬರ್ದೆನ್ನೊದಿದ; (*inanimate*) ಮರವಾದ, ಜಡವಾದ. v. *Insensible*. (*motionless*) ಸ್ತಬ್ಧವಾದ. v. *Inactive*. (*vacant*) ಬರಿದು. v. *Empty*. (*languid*) ಮಾಂದ್ಯವಾದ, ತಾಮಸವಾದ. v. *Torpid, dull, slow*. (*gloomy*) ಮಬ್ಬಾದ; (*useless*) ಕೆಲಸಕ್ಕೆಬಾರದ. v. *Unprofitable*. (*vapid*) ಸ್ವಾರಸ್ಯವಿಲ್ಲದ. v. *Insipid*. (*withered as a vegetable*) ಒಣಗಿಹೋದ, ಸತ್ತುಹೋದ; (*a dead sleep*) ಗಾಢನಿದ್ರೆ, ಸುಷುಪ್ತಿ; (*the dead of the night*) ಸೊಲ್ಲಡಗಿದ; This tree is *dead* ಈಮರವೊಣಗಿತು; Trade is very *dead* ವ್ಯಾಪಾರಬಹುತಾಮಸ; (*a dead body*) ಶವ, ಹೆಣ, ಕುಣಪ; (*a dead coal*) ಆರಿದಕೆಂಡ; (*dead drunk*) ದಿಮ್ಮೇರಿದ, ಉಲಿಮಗ್ಗಿದ; (*the dead*) ಪಿತೃಗಳು, ಸತ್ತವರು; (*a dead wall*) ಮೊಂಡಗೋಡೆ; (*a dead fire*) ಹೊತ್ತದಬೆಂಕಿ; (*a dead bough*) ಒಣಕೊಂಬೆ, ಸತ್ತಕೊಂಬೆ.

To Deaden, v. a. (*deprive of force*) ಬಲತಪ್ಪಿಸ, ಬಲಹೀನಮಾಡ; (*to render vapid*) ಅರುಚಿಮಾಡ, ಅಸ್ವಾರಸ್ಯಮಾಡ; (*the sound of a violin*) ಶಕ್ತಿತಪ್ಪಿಸ, ಸಡ್ಲಿಸ.

Deadly, a. ನಾಶಿಸ, ನಾಶನಮಾಡುವ. v. *Destructive, mortal, fatal, murtherous.*

Deadness, s. n. (*weakness*) ನಿತ್ರಾಣೆ, ನಿಶ್ಚೈತನ್ಯ; (*want of ardour*) ಮಾಂದ್ಯ, ಸ್ತಬ್ಧ, ಮಂದವು.

Deaf, a. ಕಿವುಡು, ಬಧಿರ, ಏಡ; (*a deaf man*) ಕಿವುಡ; (*deaf and dumb*) ಏಡಮೂಕ, ಕಿವುಡುಮೂಗ, ಮೂಕಬಧಿರ; (*one who pretends to be deaf*) ಕೇಳಿಯೂಕೇಳದವ; Men are *deaf* to counsel but not *deaf* to flattery ಮನುಷ್ಯರುಬುದ್ಧಿಕೇಳಿಕಿವುಡರಾಗಿಯೂಕೊಂಡಾಟಕ್ಕೆ ಕಿವಿಯುಳ್ಳವರಾಗಿಯೂಇರ್ದಾರೆ.

To Deafen, v. a. ಕಿವುಡುಮಾಡ, ಕಿವುಡುಬೀಳಿಸ.

Deafly, ad. ಕಿವುಡಾಗಿ, ಬಧಿರವಾಗಿ.

Deafness, s. n. ಕಿವುಡುತನ, ಬಧಿರತ್ವ.

Deal, s. n. (*quantity*) ಬಹು, ಅಪಾರ, ಅಧಿಕ.

To Deal, v. a. (*distribute*) ಬಡಿಸ, ನೀಡ, ಹಂಚ; Who *deals* out the rice? ಅಂನದಾರುಬಡಿಸುತ್ತಾರೆ, or ಅಂನಬಡಿಸುವದಾರು.

To Deal, v. n. (*to traffick*) ಪ್ರವರ್ತನಮಾಡ, ವ್ಯಾಪಾರಮಾಡ, ವರ್ತಕತನಮಾಡ; With whom do you *deal*? ನೀನಾರಸಂಗಡವ್ಯಾಪಾರಮಾಡುತ್ತಿ, or ನೀನಾರಲ್ಲಿಬಳೆಸುತ್ತಿ; What does he *deal* in? ಅವನೇನುವ್ಯಾಪಾರಮಾಡುತ್ತಾನೆ.

Dealer, s. n. (*trader*) ವರ್ತಕ, ಬೇಹಾರಿ, ವ್ಯಾಪಾರಸ್ತ, ಆಪಣಿಕನು. v. *Merchant*. (*a shop keeper*) ಅಂಗಡಿಗಾರ; (*a false dealer*) ಮೋಸಬೇಹಾರಿಯು, ಕಳ್ಳವರ್ತಕನು, ದಗಾಖೋರನು; (*a plain dealer*) ನಿಷ್ಕಪಟನು; (*a double dealer*) ಮೋಸಗಾರನು.

Dealing, s.n. *(practice)* ನಡವಳಿಕೆ, ಶೀಲಸ; *(traffic)* ವರ್ತಕಸರ್ತಕ. v. *Action, intercourse, treatment.* *(upright dealings)* ಪ್ರಾಮಾಣಿಕಧರ್ಮ, ಸರೀವರ್ತಕತನ; *(plain dealing)* ನಿಷ್ಕಾಪಟ್ಯವು. v. *Candour, sincerity.* *(double dealing)* ಮೋಸವು, ಕಪಟವು. v. *Duplicity, hypocrisy.* I have no *dealings* with him ಅವನಿಸ್ಸಾನನಗೆಬಳಿಕೆಯಿಲ್ಲ; I do not like double *dealing* ನನಗೊಂದಕ್ಕೆರಡುಮಾಡಸಂಮತಿಯಿಲ್ಲ, or ಮೋಸದಶೀಲಸನನಗೆಸಮರ್ಪಕವಾಗದು; I like plain *dealing* ನನಗೆಸರಾಸರಿಯಾಗಿರುವದೊಳ್ಳೆಯದು.

Dear, a. *(precious)* ದಿವ್ಯವಾದ, ಅಮೂಲ್ಯವಾದ; *(beloved)* ಇಂಪಾದ, ಹೃದ್ಯವಾದ. v. *Darling, favourite.* *(dear, scarce)* ಪ್ರಿಯವಾದ, ಅಪರೂಪದ; *(a dear friend)* ಪ್ರಾಣಸ್ನೇಹಿತ; *(a dear season)* ಪ್ರಿಯಕಾಲ; *(dear bought)* ಪ್ರಿಯವಾಗಿಕೊಂಡ; *(my dear)* ನನ್ನ ಪ್ರಾಣಸ್ನೇಹಿತನೇ; *(dear me!)* ಆಹಾ, ಓಹೋ, ಅಯ್ಯೋ; *(dear, to a child)* ನನ್ನಕಂದ; *(dear, to a wife)* ನನ್ನಮುದ್ದೆ, ನನ್ನಬಂಗಾರೀ; *(dear, to a husband)* ನನ್ನಜೀವವೇ, ನನ್ನಪ್ರಿಯನೇ.

Dearly, ad. *(at a high price)* ಪ್ರಿಯವಾಗಿ; *(fondly)* ಪ್ರೀತಿಯಾಗಿ, ವಾತ್ಸಲ್ಯವಾಗಿ; He loved her *dearly* ಅವನವಳಂನಬಹಳವಾಗಿಮೋಹಿಸಿದನು; You paid *dearly* for it ನೀನದಕ್ಕೆಬಹಳಶ್ರಮಬಟ್ಟೆ, or ನೀನದಕ್ಕೆಕಷ್ಟಶ್ರಮಪಟ್ಟೆ.

Dearness, s. n. *(high price)* ಪ್ರಿಯವು; *(fondness)* ಎರಕ, ಪ್ರೇಮ, ವಾತ್ಸಲ್ಯ, ಪ್ರೀತಿ. v. *Kindness, love.*

Dearness, Dearth, s. n. *(scarcity)* ದುರ್ಭಿಕ್ಷ, ಬರ, ಕ್ಷಾಮ. v. *Barrenness, famine, want.*

Death, s. n. ಸಾವು, ಅಂತ, ನಾಶ, ಮೃತ್ಯು, ನಿಧನ, ಮೃತಿ, ಮರಣ, ಬರ್ದು, ಮಡಿವು, ಅಳಿವು, ಕಾಲಧರ್ಮವು, ಪಂಚತೆಯು, ದಿಷ್ಟಾಂತವು, ಪ್ರಳಯವು, ಅತ್ಯಯ; *(a natural death)* ಕಾಲಮರಣ, ಲೋಕಸಾಮಾನ್ಯಸಾವು, ಲೋಕಾಚಾರದಸಾವು, ಸಹಜವಾದಸಾವು; *(an untimely death)* ಅಕಾಲಮರಣ, ದುರ್ಮರಣ, ಪಟ್ಟೆಪಿಡುಗಸಾವು; *(sudden death)* ಅನರ್ಘಮರಣ, ವ್ಯರ್ಥಸಾವು; *(a death wound)* ಸಾವುಘಾಯ, ಘಾತೀಘಾಯ; *(a sign of death)* ಮರಣಕಳೆ; *(a hard death)* ಕಷ್ಟದಮರಣ, ಆಯಾಸದಮರಣ; *(an easy death)* ಅನಾಯಾಸಮರಣ; *(after death)* ಮರಣಾನಂತರ, ಸತ್ತಮೇಲೆ; *(before death)* ಮರಣಾತ್ಪೂರ್ವ, ಸಾವಿಗೆಮುಂಚೆ; He is at *death's* door ಮೃತ್ಯುವಿನಬಾಯಲ್ಲಿದ್ದಾನೆ; *(a death bed)* ಮರಣಶಯ್ಯೆ, ನೆಲಕಿಡವಿಕೆ; *(the agonies of death)* ಮರಣಾವಸ್ಥೆ; *(to put to death)* ಪ್ರಾಣತೆಗೆದುಕೊಳ್ಳು, ಕೊಂದುಹಾಕ.

Deathless, a. ಚಿರಂಜೀವಿಯಾದ, ಸ್ಥಿರಜೀವಿಯಾದ.

Deathlike, a. ಮರಣಕಳೆಯಾದ, ಮರಣಾವಸ್ಥೆಯಾದ.

Death watch, s. n. ಹಲ್ಲಿ.

To Debar, v. a. ಅಡ್ಡಗಟ್ಟು, ಆಟಂಕಿಸ, ಪ್ರತಿಷೇಧಿಸ. v. *To exclude.* I am *debarred* from going to his house ಅವನಮನೆಗೆಹೋಗಸದಕ್ಕೆಂತರವಾಯಿತು.

To Debase, v. a. ಅವಮಾನಮಾಡು, ಮಾನಭಂಗಮಾಡು, ತಗ್ಗಿಸು. v. *To abase, depress, adulterate, diminish.* Gambling and drunkenness *debase* men into beasts ಪಾನಜೂಜುಗಳು ಮನುಷ್ಯರನ್ನ ಪಶುಪ್ರಾಯಮಾಡುತ್ತವೆ; It is *debasing* to a king to be with the meanest of his subjects ಅರಸುತನಾಪ್ರಜೆಯಲ್ಲಿರುವನೀಚಸಮೂಹದೊಡನೆಕೂಡಿರಲವನಘನಕ್ಕೆ ಕ್ಷೀಣತೆಬರುವದು.

Debasement, s. n. ಮಾನಭಂಗವು, ತಗ್ಗಿಸುವಿಕೆ.

Debaser, s. n. ಮಾನಭಂಗಕ, ತಗ್ಗಿಸುವವ.

Debate, s. n. ವಾಗ್ವಾದ, ವಿವಾದ, ಮಥನೆ, ತರ್ಕವು, ಪ್ರಸ್ತಾಪವು. v. *Controversy, dispute, contest, quarrel.*

To Debate, v. a. ತರ್ಕಿಸು, ವಾಗ್ವಾದಿಸು, ಹೋರಾಡು, v. *To contest.*

To Debate, v. n. ಮಥಿಸು, ವಿವಾದಾಮಾಡು, ಚರ್ಚೆಮಾಡು.

Debater, s. n. ವಿವಾದಿ, ವಿತರ್ಕಿ.

To Debauch, v. a. *(to corrupt)* ಭ್ರಷ್ಟಮಾಡು, ಕೆಡಿಸು; *(to live intemperately)* ಪುಂಡುತನಾಮಾಡು, ಪೋಕರಿತನಾಮಾಡು; *(to debauch a woman)* ವ್ರತಭಂಗಾಮಾಡು, ಕೆಡಿಸು.

Debauch, s. n. ಪುಂಡುತನ, ಪೋಕರಿತನ. v. *Excess, luxury, dissoluteness.*

Debauchee, s. n. ಪೋಕರಿ, ಸೂಳೆಗಾಯ್ತ, ಪಲ್ಲವ, ವಿಟಗಾರ, ಭುಜಂಗನು, ನಾಗರಿಕ. v. *Lecher, drunkard.*

Debaucher, s. n. ಭ್ರಂಶಕ, ಬಂಡ, ಬೆಡಗ, ವ್ರತಕೇಡಿ. v. *Seducer.*

Debauchery, s. n. ಪೋಕರಿತನ, ಬೆಡಗತನ, ಬಂಡುತನ. v. *Debauch.*

To Debilitate, v. a. ನಿಶ್ಚೈತನ್ಯಮಾಡು, ಬಲಹೀನಾಮಾಡು. v. *To weaken.*

Debilitating, a. ಕುಂದಿಸುವ, ನಿತ್ರಾಣಪಡಿಸುವ, ಬಲಹೀನಾಮಾಡುವ.

Debility, s. n. ನಿಶ್ಚೈತನ್ಯವು, ಬಲಹೀನತ್ವ. v. *Weakness.*

Debonair, a. ಉಪಚಾರದ, ಅರಿವಿನಯದ. v. *Civil, polite, elegant.*

Debt, s. n. ಸಾಲ, ಋಣ, ಪ್ರತ್ಯುದಂಚನವು, ಕಡ. v. *Duty, obligation. (to pay a debt)* ಸಾಲಾತೀರಿಸು; *(to demand a debt)* ಸಾಲಕೇಳು; *(to contract debts, to run into debt)* ಸಾಲ, ಸಾಲಾಮಾಡು, ಋಣಾಮಾಡು; He is over head and ears in *debt* ಅವನುಸಾಲದಲ್ಲಿಮುಳುಗಿಧಾನೆ; I am in your *debt* for what you have done ನೀವುಮಾಡಿದಉಪಕಾರಕ್ಕೆನಾನುಋಣಸ್ಥನು; It is easier to get into *debt* than it is to get out ಸಾಲಾಮಾಡಸುಲಭವಾಗಿರುವದಾದರೆತೀರಿಸಕಷ್ಟವಾಗಿರುವದು; *(an unjust debt)* ಸಲುವಳಿಯಾಗದಸಾಲ, ಅನ್ಯಾಯದಸಾಲ; *(a just debt)* ಕೊಡತಕ್ಕಸಾಲ, ಸಲುವಳಿಯಾದಋಣ, ನ್ಯಾಯವಾದಸಾಲ; *(an old debt)* ಹಳೇಸಾಲ, ಪೂರ್ವದಋಣ.

Debtor, s. n. ಸಾಲಗಾರ, ಸಾಲಗಳಿಯು, ಅಧಮರ್ಣನು.

Debullition, s. n. ಉಕ್ಕುವಿಕೆ.

Decagon, s. n. ದಶಕೋಣಾಕಾರ.

To Decamp, v. n. ಕೂಚುಮಾಡು, ಮುಂದಕ್ಕೆ ನಡೆಯು, ದಂಘೂರಡು. v. *To march, move off.*

Decampment, s. n. ಸ್ಥಳ ಬಿಡಿಕೆ, ಕೂಚು, ತೆರಳುವಿಕೆ.

To Decant, v. a. ಸುರಿಯು, ಬಸಿಕೊಳ್ಳು, ಹೊಯ್ಯು.

Decantation, s. n. ಬಸಿಕೆ, ಸುರಿಯುವಿಕೆ.

To Decapitate, v. a. ತಲೆಕೊಯ್ಯು, ಶಿರಚ್ಛೇದಮಾಡು, ಮಂಡೆಕಡಿಯು.

To Decay, v. n. ಇಳಿದುಹೋಗು, ಕೆಟ್ಟುಹೋಗು, ಕೊಳೆತುಹೋಗು, ಇಡಿದುಹೋಗು, ಹಾಳಾಗು, ನಾಶನವಾಗು; He *decays* with age ವೃದ್ಧಾಪ್ಯದಿಂದಿಳಿದುಹೋಗುತ್ತಾನೆ.

To Decay, v. a. ನಾಶನಮಾಡು, ಅಳಿಯು, ಕ್ಷಯಮಾಡು, ಹಾಳುಮಾಡು; Intemperance *decays* the body ದುರ್ನಡತೆಯೊಡಲಬಲವಂಕೆಡಿಸುವದು.

Decay, s. n. ಕೊಳೆತ, ಅಳಿವು, ಹಾಳು, ಕ್ಷಯ, ನಾಶನ. v. *Consumption, destruction, decline.*

Decayer, s. n. ಕುಂಗಿಸುವವ, ನಾಶನಮಾಡುವವ, ಹಾಳುಮಾಡುವವ, ಧ್ವಂಸಕನು.

Decease, s. n. ಮರಣ, ಮೃತ್ಯು, ಸಾವು, ಬರ್ದು. v. *Death.*

To Decease, v. n. ಮೃತಿಹೊಂದು, ಸಾಯು, ಸತ್ತುಹೋಗು, ಬರ್ದಾಂತ್ಯೈದು.

Deceased, part. ಬರ್ದಾಸ್ತ್ಯೈದಿದ, ಸತ್ತ.

Deceit, s. n. ಮೋಸ, ಕಪಟ, ಕೃತ್ರಿಮವು, ಪ್ರತಾರಣವು, ವಿಸ್ಮಾಪನ, ವಂಚನೆ, ವ್ಯಳೀಕವು, ಮಾಯ, ಮಾಜು, ಛದ್ಮ, ಕೈತವ, ಉಪಧಿ, ಕೈದವ, ಜತ್ತುಗ. v. *Cheat, fraud, fallacy, imposture.*

Deceitful, a. ಮೋಸದ, ಕಪಟದ, ಕುತ್ಸಿತದ, ಕೃತ್ರಿಮವುಳ್ಳ. v. *Fraudulent, dishonest.*

Deceitfully, ad. ಮೋಸವಾಗಿ, ವಂಚನೆಯಾಗಿ, ಕೃತ್ರಿಮವಾಗಿ, ಮಾಜಾಗಿ.

Deceitfulness, s. n. ವಂಚನೆ, ಮಾಜು, ಕಪಟವು, ಮೋಸವು.

Deceivable, a. ಮೋಸಗೊಳ್ಳತಕ್ಕ.

To Deceive, v. a. ಮೋಸಗೊಳಿಸು, ಮೋಸಮಾಡು, ವಂಚಿಸು. v. *To cheat. (to deceive the eyes as a juggler, &c.)* ಕಂಗಳುಕಟ್ಟು.

Deceived, part. ಮೋಸಮಾಡಲ್ಪಟ್ಟ, ವಂಚಿಸಲ್ಪಟ್ಟ, ಮೋಸಗೊಳಿಸಲ್ಪಟ್ಟ.

Deceiver, s. n. ಮೋಸಗಾರ, ವಂಚನೆಗಾರ, ಕಪಟಸ್ಥನು, ಅಟಮಟಿಗನು. v. *Cheat, dissembler.*

December, s. n. ಮಾರ್ಗಶಿರಮಾಸ, ಮಾರ್ಗಳಿಂಗಳು. v. *Month.*

Decence, Decency, s. n. ಸಾಕ್ಷ್ಯಸ್ಥಿತಿ, ಗಾಂಭೀರ್ಯವು. v. *Suitableness, propriety, modesty.*

Decent, a. ಒಪ್ಪಾದ, ಯೋಗ್ಯವಾದ, ಗಂಭೀರವಾದ.

Decently, ad. ಯೋಗ್ಯವಾಗಿ, ಒಪ್ಪಾಗಿ, ಶ್ಲಾಘ್ಯವಾಗಿ, ನೇರವಾಗಿ, ಗಂಭೀರವಾಗಿ.

Deception, s. n. ವ್ಯಳೀಕವು, ಮಾಯವು, ಮಾಜು, ವಂಚನೆ. v. *Deceit.*

Deceptious, Deceptive, a. ಮಾಜಾದ, ಮಾಯವಾದ, ಮೋಸದ.

To Decharm, v. a. ಪ್ರತಿಮಂತ್ರಿಸು, ಮಯಕಾ ತೀರಿಸು, ಎದುರುಮಂತ್ರಹಾಕು.

To Decide, v. a. ಬಗೆಹರಿಸು, ನಿಷ್ಕರ್ಷಿಸು, ಬಗೆಹೇಳು, ತೀರಿಸು, ನಿಶ್ಚಯಿಸು.

Decider, s. n. ಬಗೆಹರಿಸುವವ, ಖಂಡಿತವಾದಿ.

To Decipher, v. a. ವಿವರಿಸು, ಛೇದಿಸು.

Decipherer, s. n. ವಿಚ್ಛೇದಕ.

Decision, s. n. ನಿಷ್ಕರ್ಷೆ, ಫಯಿಸಲು, ತೀರ್ಪು, ತೀರ್ಮಾನ; (*of a controversy*) ಬಗೆಹರಿಕೆ, ತೀರ್ಪು; (*a man of decision*) ಪಂತಗಾರ, ಮುಷ್ಕರಗಾರ, ಛಲವಾದಿ, ಹಿಡಿತದವ, ಕಪಿಮುಷ್ಟಿಯವ.

Decisive, a. ನಿಷ್ಕರ್ಷೆಯಾದ, ಖಂಡಿತವಾದ.

Decisively, ad. ನಿಷ್ಕರ್ಷೆಯಾಗಿ, ಖಂಡಿತವಾಗಿ.

Decisiveness, s. n. ನಿಷ್ಕರ್ಷೆ. v. *Decision.*

To Deck, v. a. ಶಿಂಗಾರಿಸು, ಅಲಂಕರಿಸು, ಸೊಬಗುಮಾಡು. v. *To dress, decorate, overspread.*

Deck, s. n. ಹಡಗಿನ ಮೇಲುಗಡೆ, ಹಡಗಿನ ಮೇಲತಟ್ಟು.

Decker, s. n. ಶಿಂಗಾರಿಸುವವ, ಅಲಂಕರಿಸುವವ, ಸೊಬಗುಮಾಡುವವ. v. *Dresser.*

To Declaim, v. n. ಪ್ರಸಂಗಿಸು, ಸಂಮೋಹನವಾಗಿಮಾತಾಡು. v. *To harangue.*

Declaimer, s. n. ಪ್ರಸಂಗಕ, ವಾಕ್ಚತುರನು, ಉಪನ್ಯಾಸಿ. v. *Orator, speaker.*

Declamation, s. n. ಉಪನ್ಯಾಸ, ಪ್ರಸಂಗ, ವಾಗ್ಜೃಂಭಣೆ. v. *Oration, rhetorick.*

Declamatory, a. ವಾಗ್ಜೃಂಭಣಾವುಳ್ಳ. v. *Rhetorical, eloquent.*

Declaration, s. n. ಸಾರುವದು, ಅರಿಸುವಿಕೆ, ಪ್ರಕಟನೆ, ತಿಳಿಸುವಿಕೆ, ವಾಙ್ಮೂಲವು. v. *Proclamation, publication, explanation, affirmation.*

Declarative, a. ಹೇಳುವ, ಉಸುರುವ, ತಿಳಿಸುವ, ಸಾರುವ.

To Declare, v. a. (*to make known*) ತಿಳಿಸು; (*to publish*) ಪ್ರಕಟನೆಮಾಡು, ಸಾರಿಹೇಳು. v. *To publish, proclaim, explain, affirm.*

Declarer, s. n. ತಿಳಿಸುವವ, ಸಾರಿಹೇಳುವವ.

Declension, s. n. ಇಳಿತರ. v. *Declination, decline.* (*inflection of nouns*) ಶಬ್ದರೂಪ; I do not understand the *declension* of the nouns ಶಬ್ದರೂಪಗಳನನಗೆತಿಳಿಯವು; Of what *declension* is this noun? ಈಶಬ್ದದವಿಭಕ್ತಿಯುದಾವದು.

Declination, s. n. ಕ್ಷಯಿಕೆ, ಅಪ್ರವರ್ಧಕೆ; (*declination of an empire*) ರಾಜ್ಯಕ್ಷಯವಾಗುವದು; (*declination of the sun*) ಅಯನಿಸುವದು, ಸಂಕ್ರಮಿಸುವದು; (*the sun's northern declination, or progress to the north of the equator*) ಉತ್ತರಾಯಣ; (*the sun's southern declination, or progress to the south of the equator*) ದಕ್ಷಿಣಾಯನ.

To Decline, v. n. (*to lean downwards*) ಬಾಗು, ಮೊಗ್ಗು; (*to deviate*) ಹಾದಿತಪ್ಪಿಹೋಗು; (*to decay*) ನಾಶನವಾಗಿಹೋಗು, ಹಾಳಾಗಿಹೋಗು; (*to shun*) ತಪ್ಪು, ಬಿಟ್ಟುಬಿಡು; (*to sink*) ಇಳಿದುಹೋಗು, ಕುಂಗು; (*to inflect*) ವಿಭಕ್ತಿಮಾಡು; *Decline* this noun ಈಶಬ್ದದವಿಭಕ್ತಿಯಂನುಹೇಳು, or ಈಶಬ್ದವಂನುವಿಮರ್ಶಿಸು.

Decline, s. n. ಕ್ಷಯ, ಸವಿಕೆ. v. *Decay.* He is in a *decline* ಕ್ಷಯಿಸುತ್ತಾನೆ, or ಅವನುಕ್ಷಯ ರೋಗದಲ್ಲಿಬಿದ್ದಿದ್ದಾನೆ.

Declivity, s. n. ಜಾರಿಕೆ, ಜರುಗು, ಪ್ರವಣ; *(acclivity and declivity)* ಏರುಮುಖ ಇಳಿಮುಖ.

Declivous, a. ಜಾರಿಕೆಯಾದ, ಜರಿಗಿನ, ಬೋಗಸಾದ, ಪ್ರವಣವಾದ.

To Decoct, v. a. *(food)* ಜೀರ್ಣಿಸು, ಪಚನವಾಗು; *(to boil)* ಕುಚ್ಚು, ಬೇಯಿಸು; *(to draw the strength or virtue of any thing)* ಕಷಾಯವಿಡು, ಸಾರಾತೆಗೆಯು.

Decocted, part. ನಿಷ್ಪಕ್ವ, ಕ್ವಥಿತ, ಜೀರ್ಣವಾದ.

Decoction, s. n. ಪಚನ, ಜೀರ್ಣ, ಅರಗುವದು; *(a decoction of plants)* ಕಷಾಯ, ಕಸಾಯ.

To Decompound, v. a. ಕಲೆಗಲಿಸು, ಸಂಮಿಶ್ರಿಸು.

To Decorate, v. a. ಶೃಂಗಾರಿಸು, ಶಿಂಗಾರಿಸು, ಸೊಬಗುಮಾಡು. v. *To ornament, embellish.*

Decorated, part. ಭೂಷಿತವಾದ, ಮಂಡನವುಳ್ಳ, ಅಲಂಕಾರವಾದ.

Decoration, s. n. ಭೂಷಣವು, ಮಂಡನವು, ಶೃಂಗಾರ, ಶಿಂಗಾರ, ಸೊಬಗು; *(of hair)* ರಚನೆ, ಪರಿಸ್ಪಂದವು, ತಲೆಶಿಂಗರಿಸುವದು.

Decorator, s. n. ಶೃಂಗಾರಮಾಡುವವ.

Decorous, a. ಒಪ್ಪಾದ, ಯೋಗ್ಯತೆಯುಳ್ಳ.

To Decorticate, v. a. ಚರ್ಮಸುಲಿಯು, ಪದರು ತೆಗೆಯು, ಸುಲಿಯು.

Decortication, s. n. ನಾರುತೆಗೆಯುವಿಕೆ.

Decorum, s. n. ಗಾಂಭೀರ್ಯ, ಮರ್ಯಾದೆ, ಯೋಗ್ಯತೆ. v. *Decency.*

To Decoy, v. a. *(a bird, &c.)* ಬಲೆಯಲ್ಲಿಹಿಡಿಯು; *(a woman, &c.)* ವಿಮೋಹಿಸು, ಪ್ರಮೋಹಿಸು. v. *To allure, entrap.*

Decoy, s. n. ಬಲೆ, ವಿಮೋಹನೆ, ವಶೀಕರಣ.

To Decrease, v. n. ಕಡಮೆಯಾಗು, ಕ್ಷಯಿಸು.

To Decrease, v. a. ಕ್ಷಯಮಾಡು, ಕಡಮೆಮಾಡು, ಕೊರತೆಮಾಡು.

Decrease, s. n. ಇಳಿವು, ಕ್ಷಯ, ಕೊರತೆ, ಕ್ಷೀಣತೆ; *(the decrease of the moon)* ಚಂದ್ರನಕ್ಷಯ.

To Decree, v. n. ಪ್ರಮಾಣಮಾಡು, ಕಟ್ಟಳೆಯಿಡು, ನೇಮಿಸು.

Decree, v. n. ನೇಮಕ, ತೀರುವೆ, ತೀರ್ಪು.

Decrepit, a. ವೃದ್ಧಾಪ್ಯದ, ಮುಪ್ಪಾದ, ವಾರ್ಧಕ್ಯವುಳ್ಳ.

To Decrepitate, v. a. ಅರಳುಮಾಡು, ಫಟೀಮಾಡು.

Decrepitation, s. n. ಚಟಿಪಟಿ.

Decrepitude, s. n. ಜರೆ, ವೃದ್ಧಾಪ್ಯವು, ಮುಪ್ಪು, ಮುದುಕತನ, ವಾರ್ಧಕ್ಯ.

To Decry, v. a. ಗದರಿಸು, ಅಟ್ಟಿಬಡಿಯು.

Decumbence, Decumbency, s. n. ಮಲಗುವಿಕೆ, ಒರಗುವಿಕೆ.

To Dedicate, v. a. *(to inscribe to a patron)* ಮುದ್ರೆಯಿಡು, ಅಂಕಿತವುಮಾಡು; *(any thing to God)* ಮೀಸಲುಮಾಡು; *(an idol)* ಪ್ರಾಣಪ್ರತಿಷ್ಠೆಮಾಡು; *(a temple)* ಪ್ರತಿಷ್ಠೆಮಾಡು.

Dedicated, a. ಅಳಿಯದ, ಪ್ರತಿಷ್ಠೆಯಾದ, ಮೀಸಲುಮಾಡಿದ.

Dedication, s. n. *(of a book)* ಅಂಕಿತ, ಕೃತಿ; *(of an idol)* ಪ್ರಾಣಪ್ರತಿಷ್ಠೆ.

Dedicator, s. n. ಪ್ರತಿಷ್ಠೆಮಾಡುವವ, ಅಂಕಿತಮಾಡುವವ.

To Deduce, v. a. ಅನುಮಯಿಸ.

To Deduct, v. a. ಕಳೆಯ, ಕಡಮ್ಮೆ ಮಾಡ. v. *To subtract.*

Deduction, s. n. *(subtraction)* ಕಳೆಯುವಿಕೆ, ಮಿನಹಾ, ಮುಜರಾ, ವಜಾ, ಉತಾರ, ಮಾಫು; *(consequence)* ಫಲ.

Deed, s. n. ಕೆಲಸ, ಗೈಮೆ, ಕಾರ್ಯವು, ಕರ್ಮ, ಕ್ರಿಯೆ, ಕೃತ್ಯ; *(good deeds)* ಸತ್ಕರ್ಮ; *(evil deeds)* ದುಷ್ಕರ್ಮ; *(cruel deeds)* ಕ್ರೂರಕರ್ಮ, ಕ್ರೂರಕೆಲಸ; *(a written deed)* ಸಂನ್ನದು.

To Deem, v. n. ನೆನಿಸ, ಯೋಚಿಸ, ಬಗೆಯ. v. *To judge, think.*

Deem, s. n. ಯೋಚನೆ, ತೋರುವಿಕೆ, ಬಗೆ.

Deemster, s. n ನ್ಯಾಯಾಧಿಪತಿ.

Deep, a. ಹಾಳವಾದ, ಆಳವಾದ, ನಿಮ್ನ, ಗಂಭೀರ, ಗಂಭೀರ; *(very deep)* ಅಗಾಧ, ಅತಲಸ್ಪರ್ಶ; *(gloomy)* ಮಬ್ಬಾದ; *(full of stratagem)* ತಂತ್ರವುಳ್ಳ; *(obscure)* ಮರ್ಮದ, ಗೂಢವಾದ; *(a deep well)* ಆಳವಾದಬಾವಿ, ಅಗಾಧಕೂಪ, ಹ್ರದ, ಮಡುವು; *(deep sleep)* ಗಾಢನಿದ್ರೆ, ಅಗಾಧನಿದ್ರೆ; *(a deep scholar)* ಬೋಧಕನು, ಪೂರ್ಣಪ್ರಾಜ್ಞ; *(a person deeply in debt)* ಸಾಲದಿಂದಮುಣಗಿದವನು, ಬಂಡಾಖೋರ; *(deep blue)* ಅಚ್ಚನೀಲ; *(to be in deep study)* ಅಗಾಧಯೋಚನೆಯಲ್ಲಿಬಿದ್ದಿರ; He is a *deep* fellow ಅವನುಬಲುಮರ್ಮಿ, or ಗಟ್ಟಿಂಗಿ, or ನೆಲಗುಮ್ಮ; *(a deep way)* ಕೆಸರುಹಾದಿ; *(a deep silence)* ನಿಶ್ಶಬ್ದ; *(a deep coat)* ನಿಲುವಂಗಿ; *(three deep)* ಮೂರುಮಂದಿಸಾಲಾಗಿ; *(knee deep)* ಮೊಣಕಾಲುದ್ದ; *(a deep sound)* ಘೋರಶಬ್ದ; *(a deep man)* ತಂತ್ರವುಳ್ಳವನು, ಮರ್ಮಿ.

Deep, s. n. *(the sea)* ಸಮುದ್ರ, ಮುನ್ನೀರು, ಕಡಲು; *(the deep of night)* ಮಧ್ಯರಾತ್ರಿ, ಅರ್ಧರಾತ್ರಿ, ನಿಶೀಥವು.

To Deepen, v. a. ಹಾಳಮಾಡ, ಆಳಮಾಡ, ಆಳವಾಗಗೆಯ, ಪಾತಾಳವಾಗಗೆಯ. v. *To dig.* *(to darken)* ಮಬ್ಬುಮಾಡ, ಕತ್ತಲೆಮಾಡ. v. *To cloud.* *(to make gloomy or sad)* ದುಃಖಹಚ್ಚ, ಪೆಸನಹಚ್ಚ.

Deeply, ad. ಅಗಾಧವಾಗಿ, ಹಾಳವಾಗಿ, ಆಳವಾಗಿ; *(with great study or sagacity)* ದೂರವಾಗಿ, ಸಮರ್ಮಕವಾಗಿ; *(sorrowfully)* ದುಃಖವಾಗಿ. v. Also *highly.* *(to be deeply in love)* ಮಯಕವಾಗಿರ, ಶ್ರಮೆಪಡ; *(to be deeply in debt)* ಸಾಲದಲ್ಲಿಮುಣಗಿರ; *(to be deeply coloured)* ಬಂಣಹೆಚ್ಚಾಗಿರ.

Deepness, s. n. ಅಗಾಧತ್ವ, v. *Depth.*

Deer, s. n. ಜಿಂಕೆ, ಇರ್ರಿ, ಎರಳೆ, ಮೃಗ, ಕುರಂಗ, ವಾತಾಯು, ಹರಿಣ, ಅಜಿನಯೋನಿ; *(the red deer)* ಶಂಬರ, ಕೆನ್ನಬೆಯಸಾರಂಗ; *(a white striped deer)* ರುರುವು, ಬಿಳ್ಕೆಕಪ್ಪೆಸಾರಂಗ; *(a deer said to resemble an ass)* ಗೋಕರ್ಣ, ಕೊಂಡಕುರಿ; *(the porcine deer)* ಸಾರಂಗ, ಪೃಷತ; *(a*

black deer) ಕೃಷ್ಣಮೃಗ, ಕರ್ರಿಜಿಂಕೆ, ಏಣ; *(a young deer)* ಜಿಂಕೇಮರಿ, ಜಿಂಕ್ಯೆಪಿಲ್ಲೆ; *(deer eyed)* ಹರಿಣಾಕ್ಷಿಯಾದ.

To Deface, v. a. *(to eraze)* ತುಡುಪ, ಅಳಿಯ, ಒರಸಿಹಾಕ; *(spoil, disfigure)* ರೂಪಾಗೆಡಿಸ, ಛಿನ್ನಮಾಡ. v. *To deform.*

Defacement, s. n. ರೂಪಾಗೆಡಿಸುವಿಕೆ, ಒರಸುವಿಕೆ. v. *Razure*; also, *violation, injury.*

To Defalcate, v. a. ತೆಗದುಹಾಕ, ಕಡಮ್ಮೆಮಾಡ.

Defalcation, s. n. ಕಡಮೆ, ಕೊರತೆ. v. *Diminution.*

Defamation, s. n. ಬದನಾಮಿ, ತುಫಾನು, ಅಪಕೀರ್ತಿ, ಅಪದೂರು, ಅಪವಾದ, ಕಳಂಕ, ದೂರು. v. *Calumny.*

Defamatory, a. ಅಪಕೀರ್ತಿಯಾದ, ಅಪವಾದದ.

To Defame, v. a. ಅಪಕೀರ್ತಿಮಾಡ, ಹೆಸರುಗೆಡಿಸ, ತುಫಾನುಹಾಕ, ಬದನಾಮೀಮಾಡ. v. *To calumniate.*

Defamer, s. n. ದುರ್ನಾಮೀಮಾಡುವವ, ಕೀರ್ತಿಹೀನಮಾಡುವವ, ತುಫಾನುಹಾಕುವವ.

Default, s. n. ತಪ್ಪು, ಅಪರಾಧ, ಗುನೆ, ತಕ್ಸೀರು. v. *Crime, fault. (failure)* ತಪ್ಪುವಿಕೆ; In *default* of which ಇಲ್ಲದಿದ್ದರೆ.

Defeat, s. n. ಸೋಲು, ಅಪಜಯ, ಮುರಿಕೆ, ಪರಾಜಯವು. v. *Rout, overthrow.*

To Defeat, v. a. ಸೋಲಿಸ, ಮುರಿಯ, ಮುರಿದೋಡಿಸ. v. *To overthrow, conquer, vanquish.*

Defeated, part. ಜಯಿಸಿದ, ಸೋತ, ಪರಾಜಿತವಾದ, ಪರಾಭೂತವಾದ.

To Defecate, v. a. ಶೋಧಿಸ, ಝಾಳಿಸ. v. *To purge, purify, cleanse.*

Defect, s. n. *(deficiency)* ಊನ, ಛಿದ್ರ, ಕಡಮೆ, ಕೊರತೆ. v. *Failure, want. (fault)* ತಪ್ಪು, ಅಪರಾಧ. v. *Error, mistake, blemish.*

Defection, s. n. ಮುಕ್ಕು, ಊನ; *(in religion)* ಮತಭ್ರಂಶ; *(revolt)* ಎದುರಿಸುವಿಕೆ, ತಿರಿಗಿಬೀಳುವಿಕೆ.

Defective, a. ಊನದ, ನ್ಯೂನವಾದ, ಕೊರತೆಯಾದ. v. *Deficient, blameable, faulty, imperfect, vicious.*

Defective verb, s. n. ಅವ್ಯಯಕ್ರಿಯಾಶಬ್ದ, ಅನುಬಂಧಕಕ್ರಿಯೆ, ಉಪಪದಕ್ರಿಯೆ.

Defence, s. n. *(protection)* ಆಸ್ಪದ, ಮರೆ, ರಕ್ಷೆ, ಪ್ರಾಕಾರವು. v. *Guard, security.* Have you any thing to say in your own *defence?* ನಿನಗೇನಾದರೂ ಹೇಳ ಜವಾಬುಂಟೋ; *(to speak in defence of one)* ಒಬ್ಬನವ ಹಿಡಿಕೊಂಡುಬರ; *(defence in law)* ಉತ್ತರವಾದವು, ಉತ್ತರಸವಾಲು, ಪ್ರತಿಜವಾಬು.

Defenceless, a. ನಿರಾಧಾರವಾದ, ಮರೆಯಿಲ್ಲದ, ದಿಕ್ಕಿಲ್ಲದ. v. *Unarmed, helpless.*

To Defend, v. a. *(to uphold)* ಕಾಯ, ಬೆಂಬುಹಾಕಿಕ್ಕೊಳ್ಳ, ಕಾಪಾಡ, ಸಂರಕ್ಷಿಸ. v. *To protect, guard, support, vindicate. (to reply)* ಉತ್ತರಪ್ರತ್ಯುತ್ತರಾಕೊಡ, ಎದುರುತ್ತರಾಕೊಡ; *(to fortify)* ಅಪ್ಪೇರಿಕಟ್ಟು; *(to prohibit)* ಪ್ರತಿಷೇಧಮಾಡ.

Defendant, s. n. ಪ್ರತಿಪಕ್ಷಿ, ಪ್ರತಿವಾದಿ; *(plaintiff)* ವಾದಿ, ಪಕ್ಷಿ.

Defended, part. ಕಾಯಲ್ಪಟ್ಟ, ಮರೆಹೊಗಲ್ಪಟ್ಟ.

Defender, s. n. ಮೇರೆಗೊಡುವವ, ಮೇರೆಹಾಕಿಕೊಳ್ಳುವವ. v. *Champion, patron, advocate.*

Defensible, a. ನ್ಯಾಯದ, ನೀತಿಯಾದ, ಶಕ್ತ, ಯುಕ್ತವಾದ. v. *Justifiable, right.*

Defensive, a. ಪ್ರತಿಕಕ್ಷಿಯಾದ, ಪ್ರತಿಘಟನೆಯಾದ, ಪ್ರತಿವಾದನೆಯಾದ; (*to stand on the defensive*) ಪ್ರತಿವಾದಿಸ, ಪ್ರತಿಘಟಿಸ, ಎದುರಾಡ.

To Defer, v. a. ಕಾಲವು ಕಳೆಯ, ಕಾಲಕ್ರಮಣಾ ಮಾಡ, ಜೊಬ್ಬು, ಜರಿಗಿಸ, ಇಟ್ಟಿಡ. v. *To delay, withhold;* also *to refer.* We must *defer* this business till to-morrow ನಾವೀಕೆಲಸ ನಾಳೆ ಪರಿಯಂತ್ರ ಕಟ್ಟಿಡುವ.

Deference, s. n. (*respect*) ಮರ್ಯಾದೆ, ಘನತೆ, ಮಾನ; (*complaisance*) ವಿಧೇಯಿಕೆ, ವಿನಯವು. v. *Regard, veneration, condescension, submission.*

Defiance, s. n. ಠುರಿ, ಸೊಡ್ಡು, ಕಾಲುಕೆದರಿಕೆ, ಭುಜಚಪ್ಪಳಿಕೆ. v. *Insult, affront.*

Deficiency, s. n. ಕೊರತೆ, ಕಡಮೆ, ಕಂಮ್ಮಿ. v. *Defect, want.*

Deficient, a. ಕೊರತೆಯಾದ, ಕಡಿಮೆಯಾದ, ಸರಿಯಿಲ್ಲದ. v. *Defective, wanting.*

Defier, s. n. (*challenger*) ಜಗಳಕ್ಕೆ ಕರೆಯುವವ, ಮೀಶೆ ತಿರುಗಿಸುವವ, ಕಾಲುಕೆರೆಯುವವ; (*contemner*) ಉದಾಸೀನಮಾಡುವವ, ನಿರ್ಲಕ್ಷ್ಯ ಮಾಡುವವ.

To Defile, v. a. ಮೈಲಿಗೆಮಾಡ, ಮುಟ್ಟುಚಟ್ಟು ಮಾಡ, ಕೊಳೆಮಾಡ, ಅಶುಚಿಮಾಡ, ಮಾಸ; (*to defile a cast*) ಭ್ರಷ್ಟಮಾಡ, ಕುಲಾಕೆಡಿಸ; (*to defile the body*) ಮೈಲಿಗೆಮಾಡ, ಮುಟ್ಟುಚಟ್ಟುಮಾಡ; (*to defile a temple*) ಅಪವಿತ್ರಮಾಡ, ಅಶುಚಿಮಾಡ, ಅಂಟುಮಾಡ. v. *To pollute, soil, taint, corrupt, vitiate.* (*to go off file by file*) ಕಿಸ್ತಿಮಾಡ, ಇಂಗಡಿಂಗಡವಾಗಿನಡೆಯ, ತಂಡ ತಂಡವಾಗ; (*to corrupt chastity*) ಕೆಡಿಸ, ವ್ರತಭಂಗಮಾಡ. v. *To debauch, violate, ravish.*

Defile, s. n. (*narrow passage*) ಇಕ್ಕಟ್ಟಿನ ಸ್ಥಳ, ಇರಿಕಿನ ಜಾಗ, ಇಕ್ಕಟ್ಟಿನ ಹಾದಿ.

Defilement, s. n. ಮೈಲಿಗೆ, ಅಶುಚಿ, ಕೊಳೆ, ಎಂಜಲು. v. *Corruption, pollution.* (*ceremonial*) ಮುಟ್ಟು, ಅಂಟು, ಅಪವಿತ್ರ, ಮುಟ್ಟುಚಟ್ಟು.

Defiler, s. n. ಭ್ರಷ್ಟಮಾಡುವವ, ಅಪವಿತ್ರಮಾಡುವವ, ಅಶುಚಿಮಾಡುವವ; (*of a woman*) ಕೆಡಿಸುವವ. v. *Corrupter, ravisher.*

Definable, a. ವಿಮರ್ಶೆಯಾಗತಕ್ಕ, ತಿಳಿಸತಕ್ಕ, ಟೀಕಿಸತಕ್ಕ.

To Define, v. a. (*circumscribe or mark the limits*) ಮೇರೆಹಾಕ, ಸರಹದ್ದುಗೋರಿಸ; (*to describe*) ವಿಮರ್ಶೆಮಾಡ, ವಿವರಿಸ, ಟೀಕಿಸ.

Definer, s. n. ವಿಮರ್ಶೆಮಾಡುವವ.

Definite, a. (*certain*) ನಿಶ್ಚಯಿಸಿದ, ಗೊತ್ತಾದ, ನಿರ್ಣಯಿಸಿದ. v. *Limited, defined, exact, precise.*

Definition, s. n. ವಿವರ, ಟೀಕು. v. *Description, explication, decision.*

Definitive, a. ಸ್ಥಾಪಿತದ, ಸಿದ್ಧಾಂತದ, ನಿಶ್ಚಯವಾದ, ನಿಸ್ಸಂದೇಹದ. v. *Express, positive.*

Definitively, ad. ಸ್ಥಾಪಿತವಾಗಿ, ಸಿದ್ಧಾಂತವಾಗಿ, ನಿಸ್ಸಂದೇಹವಾಗಿ, ನಿಶ್ಚಯವಾಗಿ, ಸರಿಯಾಗಿ.

To Deflagrate, v. a. ಹುರಿತಾಮಾಡ, ಹೊತ್ತಿಕ್ಕ, ಬೆಂಕಿಹೊರಡಿಸ.

Deflagration, s. n. ಹುರಿತವು, ಹೊತ್ತಿಕ್ಕುವದು, ಬೆಂಕಿಹೊರಡಿಸುವದು.

To Deflower, v. a. ಕಂನ್ಯಾತ್ವಾಕೆಡಿಸ, ವ್ರತಭಂಗಾಮಾಡ. v. *To debauch, defile, violate.*

Deflowerer, s. n. ವ್ರತಗೇಡಿ, ಭ್ರಷ್ಟ, ಬಿಡುಗ.

To Deform, v. a. ಛಿನ್ನಾಮಾಡ, ವಿಕಲಾಂಗಾಮಾಡ, ರೂಪಾಕೆಡಿಸ, ಕುರೂಪಾಮಾಡ. v. *To deface, disfigure, destroy, dishonor.*

Deformed, a. ವಿರೂಪಿಯಾದ, ಕುರೂಪಿಯಾದ, ರೂಪಹೀನವಾದ, ವಿಕಲಾಂಗವಾದ, ಮೋಗಂಡವಾದ, ಅಂಗಹೀನವಾದ.

Deformedness, Deformity, s. n. ವಿಕೃತಾಕಾರವು, ಕುರೂಪ, ಹೀನರೂಪವು. v. *Ugliness, irregularity, dishonor, disgrace.*

To Defraud, v. a. ಮಾಜ, ದಗೆಮಾಡ, ಛಪಾಯಿಸ, ಮೋಸಗೊಳ್ಳಿಸ.

To Defray, v. a. (*pay the expense*) ಸುದಾರಿಸ, ಖರ್ಚುಕೊಡ, ವೆಚ್ಚಾಹೊರ. v. *To expend, pay.*

Defunct, a. ಕಾಲವಾದ, ಪಂಚತ್ವಗೈದ, ಸತ್ತ. v. *Dead.*

To Defy, v. a. (*to battle*) ಮೀಸೆತಿರಿಗಿಸ, ಭುಜಚಪ್ಪಳಿಸ, ಕಾಲುಕೆದರ, ತೊಡೆತಟ್ಟ, ಹುತ್ರನ. v. *To challenge.* (*to affront*) ನಿರ್ಲಕ್ಷ್ಯಾಮಾಡ, ಉದಾಸೀನಾಮಾಡ. v. *To despise, insult.*

Defy, s. n. ಹುರಿ, ಕಾಲುಕೆದರಿಕೆ, ಸೊಡ್ಡು.

Degeneracy, s. n. ಭ್ರಷ್ಟ, ಕೇಡು, ಕ್ಷೀಣಾಗತಿ, ದುರ್ಗುಣವು, ಕೆಟ್ಟತನ. v. *Baseness.*

To Degenerate, v. n. ಕ್ಷೀಣವಾಗ, ನಶಿಸ, ಕೆಟ್ಟುಹೋಗ.

Degenerate, a. ನೀಚವಾದ, ಇಳಿತರವಾದ, ಕೆಟ್ಟುಹೋದ, ಕ್ಷೀಣಾದ, ಕ್ಷಯದ, ಪೇಲವದ. v. *Base, mean.*

Degradation, s. n. ಬಹಿಷ್ಕಾರವು, ಮಾನಭಂಗ, ಎತ್ಥಾಕುವದು, ಅಪಮಾನ, ನ್ಯೂನತೆ. v. Also *degeneracy.*

To Degrade, v. a. ಬಹಿಷ್ಕರಿಸ, ಭಂಗಿಸ, ಭಂಗಾಮಾಡ, ನ್ಯೂನತೆಗೊಳಿಸ; Dont *degrade* yourself by such mean actions ಇಂಥಾನೀಚಕರ್ಮಗಳಿಂದನೀನುನ್ಯೂನತೆಹೊಂದಬೇಡಾ; He is *degraded* ಅವನುಭಂಗಿಸಲ್ಪಟ್ಟನು.

Degraded, part. ಹೀನವಾದ, ಅಪಕೀರ್ತಿಹೊಂದಿದ, ನ್ಯೂನತೆಯಾದ.

Degree, s. n. (*rank*) ತರ, ಅಂತಸ್ತು, ಮೆಟ್ಟು, ಹುದ್ದೆಗಿರಿ; (*men of high degree*) ದೊಡ್ಡವರು, ಅಧಿಕಾರಸ್ಥರು; (*comparatively*) ತಮಬರ್ಧಕ; This is several *degrees* better than that ಇದದಕ್ಕಿಂತಾಮಹಾಪುತ್ತಮತರವಾಗಿದೆ; Infinity admits of no *degrees* ಅನಂತಕ್ಕೆಮೀರಿದ್ದುದಾವದೂಯಿಲ್ಲ; (*a higher degree*) ಅತಿಕ್ರಮಣೆ, ಹೆಚ್ಚು, ಆಧಿಕ್ಯ, ಉಲ್ಲಂಘನ, ಮೇಲು; (*degree of kindred*) ಬಂಧುತ್ವದವಾವಿ; (*a higher degree of heat*) ಕಾಂಕೆಯಹೆಚ್ಚಳ, ಹೆಚ್ಚುಕಾಂಕೆ, ಹೆಚ್ಚುಕಾವು; (*a higher degree of cold*) ಹೆಚ್ಚುಛಳಿ, ಹೆಚ್ಚುತಂಪ, ಅಧಿಕಛಳಿ; (*by

degrees decreasing) ಬರಬರ ಇಳಿಥರವಾಗಿ; *(by degrees increasing)* ಬರಬರ ಹೆಚ್ಚಾಗಿ; Learning comes by *degrees* ಓದೋದ ವಿದ್ಯೆ ಬರುವದು, or ಅಭ್ಯಾಸಾನುಸಾರವಾಗಿ ವಿದ್ಯೆ ಬರುವದು; *(to the highest degree)* ಅಧಿಕಾಧಿಕವಾಗಿ; *(by degrees)* ಬರಬರ, ಮೆಟ್ಟುಮೆಟ್ಟಾಗಿ, ಥರಥರವಾಗಿ; The rain came in to such a *degree* that there was no dry place to sleep in ಮಲಗಲಿಕ್ಕೆ ಡೆಯಿಲ್ಲದಹಾಗೆ ಮಳೆಬಂದು ಸೋರಿತು; He is in some *degree* recovered ಅವನು ಸ್ವಲ್ಪಸ್ವಲ್ಪ ತೇರಿಯಿಧಾನೆ; The wind blew to that *degree* that all the trees in the garden fell down ತೋಟದಗಿಡಗಳೆಲ್ಲಾ ಬಿದ್ದುಹೋಗುವಂಥಾ ಸೂಳಿಬೀಸಿತು.

To Deject, v. a. *(make sad)* ವಿಷಂಣವಾಮಾಡು, ವಿಷಾದವಾಮಾಡು, ದುಃಖಬಡಿಸು, ಕುಂದಿಸು, ನೋಯಿಸು, ತಲ್ಲಣಗೊಳಿಸು, ಮುಖಜೋಲಿಸು. v. *To afflict, grieve.*

Dejected, a. ಕುಂದಿದ, ತಲ್ಲಣೆಯಾದ, ಕಳವಳಪಟ್ಟ, ಜೋಲುಮುಖದ. v. *Afflicted, depressed, sorrowful.*

Dejectedly, ad. ತಲ್ಲಣೆಯಾಗಿ, ಕಳವಳವಾಗಿ.

Dejection, Dejectedness, s. n. *(lowness of spirits)* ತಲ್ಲಣೆಯು, ಕಳವಳಿಕೆಯು, ಕುಂದುಕೆ, ವಿಷಂಣತೆ, ವಿಷಾದವು, ಜೋಲುಮುಖ. v. *Melancholy, affliction, weakness.*

Deification, s. n. ದೇವತಾಸಮಾನಮಾಡುವದು.

To Deify, v. a. ದೇವತಾಸಮಾನಮಾಡು, ದೈವಜಂತೆಮಾಡು; *(an idol)* ಪ್ರಾಣಪ್ರತಿಷ್ಠೆಮಾಡು; *(to praise excessively)* ಮೀರಿಸ್ತುತಿಸು, ದೇವಸಮಾನವಾಗಿ ಸ್ತೋತ್ರಿಸು.

To Deign, v. a. *(to grant)* ದಯಾಪಾಲಿಸು; *(to allow)* ಅಪ್ಪಣೆಕೊಡು. v. *To condescend.*

Deity, s. n. ದೇವರು, ಪರಮಾತ್ಮ, ಪರಾಪರನು.

Delacrymation, s. n. ಕಣ್ಣೀರು, ದೂಷಿ, ದೂಷಿಕೆ.

Delactation, s. n. ಮೊಲೆಬಿಡಿಸುವಿಕೆ.

To Delay, v. a. ಆಲಸ್ಯಮಾಡು, ಅಭ್ಯಂತರಿಸು, ಅಡ್ಡಗಟ್ಟು; This business is much *delayed* ಈಕೆಲಸವು ಮಹಾ ಆಲಸ್ಯವಾಯಿತು; Why do you *delay* so? ಇಷ್ಟಾಕಾಲಸ್ಯವುಮಾಡುತ್ತೀಯೆ; Come without *delay* ಆಲಸ್ಯವುಮಾಡದೇ ಬಾ.

Delay, s. n. ಆಲಸ್ಯ, ನಿಧಾನ, ತಡ, ಸಾವಕಾಶ, ಜಾಪ್ಯ, ತಾಮಸ. v. *Hesitation, stay, stop, rest.* *Delays* are dangerous ಆಲಸ್ಯವು ವಿಷವಾಗುವದು.

Delayer, s. n. ಆಲಸ್ಯದವ, ನಿಧಾನದವ, ಅಭ್ಯಂತರದವ, ಕಾಲಜರಗಿಸುವವ, ಎಳೆಯುವವ.

Delectable, a. ಮನೋಹರವಾದ, ಮನೋರಮ್ಯದ, ಇಂಪಾದ, ಸಂತೋಷದ, ಆನಂದದ, ಆಮೋದದ. v. *Delightful, pleasing.*

Delectableness, s. n. ಆಮೋದ, ಸಂತೋಷ, ಮನೋರಮ್ಯ, ಇಂಪು, ಸ್ವಾರಸ್ಯವು.

Delectably, ad. ಆಮೋದವಾಗಿ, ಆನಂದವಾಗಿ, ಸಂತೋಷವಾಗಿ, ಮನೋರಂಮ್ಯವಾಗಿ, ಇಂಪಾಗಿ.

Delectation, s. n. ಆನಂದ, ಸಂಭ್ರಮ, ಖುಷಾಲು.

To Delegate, v. a. *(to send away)* ಕಳಿಸಿಬಿಡು; *(to send upon an embassy)* ರಾಯಭಾರಿಕಳುಹಿಸು, ಪ್ರತಿಯಾಗಿ ಕಳುಹು, ಗುಮಾಸ್ತನಾಗಿ ಕಳುಹು; *(to entrust)* ಒಪ್ಪಿಸಿಕೊಡು, ವಶದಲ್ಲಿಡು.

Delegate, s. n. ಕಾರ್ಯಕರ್ತಾರ, ಡೇಪ್ಯುಟಿ, ಗುಮಾಸ್ತ.

Delegation, s. n. ಡೇಪ್ಯುಟಿತನ. v. *Commission.*

Deleterious, a. ವಿಷಪ್ರಾಯದ, ಮೃತ್ಯುಪ್ರಾಯದ. v. *Deadly, destructive.*

To Deliberate, v. n. ನಿಧಾನಿಸಿನೋಡು, ಯೋಚಿಸು, ಸಮಾಲೋಚಿಸು. v. *To hesitate.*

Deliberate, a. *(slow)* ನಿಧಾನವಾದ, ಸಾವಕಾಶವಾದ; *(cautious)* ಜಾಗ್ರತೆಯಾದ.

Deliberately, ad. *(slowly)* ನಿಧಾನವಾಗಿ, ಸಾವಕಾಶವಾಗಿ, ತಳ್ಳಾರವಾಗಿ; *(with design)* ಬೇಕಾಗಿ; *(cautiously)* ಜಾಗ್ರತೆಯಾಗಿ, *(to resolve deliberately)* ನಿಧಾನವಾಗಿ ಸಂಕಲ್ಪಿಸು.

Deliberateness, s. n. ನಿಧಾನಿಕೆ, ತಳ್ಳಾರ, ಸಾವಕಾಶ.

Deliberation, s. n. ವಿತರ್ಕವು, ಸಂಪ್ರಧಾರಣೆ, ಸಮಾಲೋಚನೆ, ಯೋಚನೆ, ಚರ್ಚೆ. v. *Consultation.*

Delicacies, Delicates, s. n. *(exquisite viands)* ಮೃಷ್ಟಾನ್ನ, ಸೊಗಸೂಟಿ.

Delicacy, s. n. *(softness)* ನಾಜೂಕು, ಕೋಮಲ. v. *Beauty, gracefulness, (tenderness, softness of manners)* ಅತಿವಿನಯ, ನಮ್ರತೆ. v. *Politeness. (pleasing to the senses)* ಮಾಧುರ್ಯ, ಸೊಗಡು, ರುಚಿ, ಪಸಂದು; *(weakness of constitution)* ನಿತ್ರಾಣೆ; *(delicacy in eating, &c.)* ಕುನಾಕುಳಿ, ಭೋಜನಚಂಕರತನ. v. *Luxury, daintiness.*

Delicate, a. *(not coarse)* ನಾಜೂಕಿನ, ನಯವಾದ, ಚೊಕ್ಕಟವಾದ, ಪೇಲವವಾದ, ವಿರಲವಾದ, ತೆಳುವಾದ; *(fine flavour)* ಸಾತ್ಮ್ಯದ, ಕಂಪಾಗಿರುವ, ಸವಿಯಾದ, ರುಚಿಕರವಾದ; *(soft, amiable)* ಕೋಮಲವಾದ, ನಮ್ರತೆಯುಳ್ಳ, ಅತಿವಿನಯವುಳ್ಳ. v. Also *beautiful, elegant; polite, gentle; tender, effeminate; nice, dainty, choice, luxurious; pure, clean, fine.*

Delicately, ad. ನಾಜೂಕಾಗಿ, ಸೂಕ್ಷ್ಮವಾಗಿ, ಕೋಮಲವಾಗಿ. v. *Beautifully, daintily, choicely, finely, politely, effeminately.*

Delicious, a. ಇಷ್ಟ, ಭೋಗ್ಯದ, ರಂಮ್ಯದ, ಮಧುರವಾದ, ಇಂಪಾದ, ಸ್ವಾರಸ್ಯವಾದ, ಚೊಕ್ಕಟವಾದ. v. *Delicate, agreeable, sweet, delightful.*

Deliciously, ad. ಸಾಕರ್ಯವಾಗಿ, ಇಂಪಾಗಿ, ಸ್ವಾರಸ್ಯವಾಗಿ, ಚೊಕ್ಕಟವಾಗಿ. v *Delightfully, sweetly.*

Deliciousness, s. n. ಸಾಕರ್ಯ, ಇಂಪು, ರಮ್ಯ, ಸೊಗಡು, ಇಷ್ಟವು, ಸ್ವಾರಸ್ಯವು, ಸ್ವಾದು.

Delight, Delightfulness, s. n. ಇಂಪು, ಹರ್ಷವು, ತೋಷ, ಉತ್ಸಾಹ, ಹುಶಾಲು, ಮೋದ, ಆನಂದವು, ಸೊಬಗು, ಗರಾಗರಿಕೆ. v. *Joy, gladness, pleasure.*

To Delight, v. a. *(give pleasure)* ಆಮೋದಪಡಿಸು, ಸಂತೋಷಪಡಿಸು, ಸಂಭ್ರಮಪಡಿಸು, ಉಲ್ಲಾಸಪಡಿಸು.

To Delight, v. n. *(have pleasure in)* ಸಂಭ್ರಮವಾಗು, ಆನಂದವಾಗು.

Delightful, Delightsome, a. ಮೋಹದ, ಮನೋರಂಮ್ಯದ, ಇಂಪಾದ, ಹಿತವಾದ, ಆನಂದವಾದ.

Delightfully, ad. ಮನೋರಂಮ್ಯವಾಗಿ, ಮನೋರಂಜನವಾಗಿ, ಇಂಪಾಗಿ, ಹಿತವಾಗಿ.

To Delineate, v. a. ವಿವರಿಸು, ನಿರ್ದೇಶಿಸು, ತೋರಿಸು. v. *To describe.*

Delineation, s. n. ನಿರ್ದೇಶ, ವಿವರಿಕೆ, ತೋರಿಸುವಿಕೆ. v. *Picture.*

Delinquency, s. n. ತಪ್ಪು, ಅಪರಾಧ, ಕುತ್ರ. v. *Fault, failure, offence.*

Delinquent, s.n. ಅಪರಾಧಿ, ಕುತ್ರವಾಳಿ. v. *Offender, criminal.*

Delirious, a. ಉನ್ಮತ್ತವಾದ, ಪೈತ್ಯದ, ಹುಚ್ಚಾದ. v. *Raving.*

Delirium, s. n. ಹುಚ್ಚು, ಪಿತ್ತೋದ್ರೇಕ.

To Deliver, v. a. (*give in charge*) ಸ್ವಾಧೀನಿಸು, ಒಪ್ಪಿಸಿಕೊಡು, ಕಯಿಗೆಕೊಡು, ಹವಾಲಿಸು; (*to give*) ಕೊಡು. v. *To give, offer, yield, surrender.* (*to save, set at liberty*) ತಪ್ಪಿಸು. v. *To rescue.* (*to relate*) ಹೇಳು. v. *To speak, utter, tell.* He *delivered* me out of their hands ಅವನು ನನ್ನನ್ನವರ ಕೈಯಿಂದ ತಪ್ಪಿಸಿರಕ್ಷಿಸಿದನು; They *delivered* them up to the government ಅವರವರನ್ನು ಸರಕಾರಕ್ಕೊಪ್ಪಿಸಿದರು, or ಅವರವರನ್ನು ಸರಕಾರದಪಾಲು ಮಾಡಿದರು; *Deliver* this money into his hands ಈಹಣವನ್ನವನ ಕೈಯಲ್ಲೊಪ್ಪಿಸು, or ಈಹಣವನ್ನವನವಶದಲ್ಲಿಕೊಡು; She was last night *delivered* of a son ಅವಳು ನಿನ್ನೇರಾತ್ರಿಯಲ್ಲಿಗಂಡುಮಗುವನ ಹೆತ್ತಳು, or ಹಡದಳು; *Deliver* him over to me ಅವನನ್ನ ನನಗೊಪ್ಪಿಸು; He *delivered* a long speech ಅವನ ಗಾಢವಾಗಿಹೇಳಿದನು, or ಅವನು ಬಹು ದೂರವಾಗಿಮಾತಾಡಿದನು.

Deliverance, Delivery, s. n. (*release*) ಬಿಡಿಸುವಿಕೆ, ತಪ್ಪಿಸುವಿಕೆ; (*utterance*) ಹೇಳುವಿಕೆ; (*giving or consigning to another*) ಒಪ್ಪಿಸುವದು, ಹವಾಲಿಸುವದು; (*surrender*) ಒಪ್ಪಿಕೊಳ್ಳುವಿಕೆ; (*child-birth*) ಪ್ರಸವ, ಹೆರುವಿಕೆ, ಹಡೆಯುವಿಕೆ.

To Delude, v. a. ವಂಚಿಸು, ದಗೇಮಾಡು, ಮೋಸಗೊಳಿಸು, ಮೂಜು. v. *To beguile, cheat, deceive, frustrate.*

Deluder, s. n. ವಂಚನೆಗಾರ, ದಗಾಖೋರ, ಮೋಸಗಾರ. v. *Deceiver, impostor.*

To Delve, v. a. ತೋಡು, ಅಗೆಯು. v. *To dig.*

Deluge, s. n. ಜಲಪ್ರಳಯ, ಪ್ರಳಯ. v. *Inundation, storm.*

To Deluge, v. a. ಮುಣಗಿಸು, ಪ್ರವಹಿಸು, ಪ್ರಸರಿಸು, ಉಕ್ಕಿಬರು. v. *To drown, overflow, overwhelm.*

Delusion, s. n. ವಂಚನೆ, ಮೋಸ, ದಗೆ, ಭ್ರಾಂತಿಯು, ಭ್ರಮೆ, ಮಾಯೆ, ವ್ಯಳೀಕವು. v. *Cheat, guile, deceit, error, illusion.*

Demagogue, s. n. ತುಂಟರಿಗೆಲ್ಲಾಯಜಮಾನನು.

Demain, Demesne, s. n. ಜಿಂದಿಗಿ, ಆಸ್ತಿ, ವೃತ್ತಿ, ಸ್ಥಿತಿ, v. *Estate, land.*

To Demand, v. a. ತಗಾದೀಮಾಡು, ಘಟ್ಟಿಯಾಗಿ ಕೇಳು.

Demand, s. n. (*claim, requisition*) ತಗಾದಿ, ನಷ್ಟತ್ರೀಕರಣ, ತಂಟೆ; (*a groundless demand*) ಇಲ್ಲದಹವನಿಕ್ಕವದು, ಮಿಥ್ಯಾಭಿಯೋಗವು, ಅಭ್ಯಾಖ್ಯಾನವು; (*a receipt full of all demands*) ಕೇರು

ಸಲ್ಲಬೇಕಾದ,ಹಾರೈಸುತ್ತು ;(*to demand a question*) ಪ್ರಶ್ನೆಮಾಡ,ಪ್ರಶ್ನೆಕೇಳ.

Demandant, Demander, s. n. ಕೇಳುವವ, ಹ ಕ್ಕುವವ, ಕೇಳುವವ ; (*plaintiff*) ವಾದಿ.

To Demean, v. a. (*carry one's self*) ನಡಕೊಳ್ಳ ; *Demean* yourself properly ನೋಡಿನಡ, or ಶಿಕ್ಷಣ ದಿಂದ ; (*to debase*) ಅವಮಾನಿಸ, ತಗ್ಗಿಸ.

Demeanour, s. n. (*air, behaviour*) ನಡತೆ.

Demerit, s. n. ಅಪಾತ್ರತೆ. v. *Worthlessness.*

Demi, (*in comp.*) ಅರ್ಧ, ಅರೆ. v. *Half.*

Demi-gods, s. n. (*of the Hindoos*) ದೇವತೆಗ ಳು, ನರೆಯುದಿಸದದು, ಉಣ್ಣದವರು, ಎವೆ ಯಿಕ್ಕದರು, ಅಗ್ನಿಮೊಗದವರು, ಅಮರ್ತ್ಯರು ಗಳು, ಬಿಡುಗಣ್ಣವರು, ಬೋಳೆಯರು, ಅಗಸ ವಟ್ಟಿಗರು, ಸ್ವರ್ಗಿಗರು, ಬರ್ಹಿರು, ಅಮರರು, ನಿರ್ಜರರು, ದೇವರು, ತ್ರಿದಶರು,ವಿಬುಧರು, ಸು ರರು,ಸುಪರ್ವಾಣರು, ಸುಮನಸರು,ತ್ರಿದಿವೇಶರು, ದಿತಾಕರು, ಆದಿತೇಯರು, ದಿವಿಷದರು, ಲೇಖರು, ಅದಿತಿನಂದನರು, ಆದಿತ್ಯರು,ವಿಬುಧರು, ಸ್ವಪ್ನ ರು, ಅಮರ್ತ್ಯರು, ಅಪ್ಸರಾಂಧಸ್ಸುಗಳು, ಬ ರ್ಹಿರ್ಮುಖರು, ಕ್ರತುಭುಜರು, ಗೀರ್ವಾಣರು, ದಾನವಾರಿಗಳು,ಬೃಂದಾರಕರು, ದೈವತಂಗಳು, ನಿಲಿಂಪರು.

Demirep, s. n. ಬಸಿವಿ, ಸೂಳೆ, ಜಾರಸ್ತ್ರೀ.

Demise, s. n. ನಿರ್ಯಾಣವು, ಸಾವು, ಮರಣವು. v. *Decease, death.*

To Demise, v. a. ಆಸ್ತಿಬರಕೊಡ. v. *To bequeath.*

Democracy, s. n. ಸಭಾಪ್ರಭುತ್ವ.

Democratical, a. ಸಭಾಪ್ರಭುತ್ವದ.

To Demolish, v. a. ನಾಶನಮಾಡ, ಕೆಡಿಸ.

Demolisher, s. n. ಕೆಡಿಸುವವ, ನಾಶಮಾಡುವವ.

Demolition, s. n. ಕೆಡಿಸುವಿಕೆ, ನಾಶನ.

Demon, s. n. ಭೂತ, ಬೇತಾಳ, ದೆವ್ವ,ಪಿಶಾಚವು, ಪಿಶಾಚಿ, ಮರುಳು.

Demoniacal, Demoniack, a. ದೆವ್ವಹಿಡಿದ, ಪಿಶಾ ಚಹಿಡಿದ, ಸೂಳೆಮೆಟ್ಟಿದ, ಭೂತಶಂಕೆಯಾದ.

Demonstrable, a. ಸಿದ್ಧಾಂತವಾಗುವ, ನಿಸ್ಸಂದೇ ಹವಾಗತಕ್ಕ, ತೋರಿಸತಕ್ಕ.

To Demonstrate, v. a. ನಿರ್ಮಲಮಾಡ,ರುಜುಮಾ ಡ, ತೋರಿಸ. v. *To show, prove.*

Demonstration, s. n. ಉತ್ತರಪಕ್ಷವು,ಸಿದ್ಧಾಂತವು.

Demonstrative, a. ಪ್ರತ್ಯಕ್ಷದ, ದೃಷ್ಟಾಂತದ, ಗೋಚರದ, ನಿಸ್ಸಂದೇಹದ.

Demonstratively, ad. ಸ್ಪಷ್ಟವಾಗಿ, ನಿರ್ಮಲವಾಗಿ; ಬಟ್ಟಬೈಲಾಗಿ. v. *Clearly, plainly.*

Demur, s. n. ಅನುಮಾನ, ಸಂದೇಹ, ಸಂಶಯ. v. *Doubt, hesitation.*

To Demur, v. n. ಸಂದೇಹಿಸ, ಸಂಶಯಪಡ. v. *To doubt, hesitate.*

Demure, a. (*sober*) ಗಂಭೀರವುಳ್ಳ. v. *Serious, sober, decent, silent.* (*modest*) ಮಂದಾಕ್ಷವಾದ. v. *Modest, bashful.*

Demurely, ad. (*modesty*) ಮಂದಾಕ್ಷವಾಗಿ; (*gravely, austerely*) ಗಂಭೀರವಾಗಿ.

Demureness, s. n. (*modestly*) ಮಂದಾಕ್ಷ, ಲಜ್ಜೆ,

ನಾಚಿಕೆ, ಲಜ್ಜೆ; *(austerity, gravity)* ಗಾಂಭೀರ್ಯವು, ಧಾರ್ಮಿಕತನ. v. *Modesty, bashfulness.*

Den, s. n. ಗವಿ, ಬಿಲ, ಗುಹೆ. v. *Cave.*

Deniable, a. ನಿರಸನವಾಗತಕ್ಕ, ನಿಹ್ನುತವಾದ, ಮೊಂಕತಕ್ಕ, ಅಪಲಾಪಮಾಡತಕ್ಕ, ಅಪಹ್ನವಿಸತಕ್ಕ, ನಿಹ್ನವಿಸತಕ್ಕ.

Denial, s. n. ನಿಹ್ನವ, ನಿರಸನವು, ಅಪಲಾಪ, ಪ್ರತಿಷೇಧ. v. *Refusal.*

Denier, s. n. ನಿಹ್ನವಿಸುವವ, ಮೊಂಕುವವ, ಸಾಧಿಸುವವ, ಅಪಲಾಪಮಾಡುವವ, ಅಪಹ್ನವಿಸುವವ.

Denizen, s. n. ಪಟ್ಟಣದವನು, ನಾಗರಿಕನು. v. *Citizen.*

To Denominate, v. a. ಹೆಸರಿಡು, ನಾಮವಿಡು. v. *To name.*

Denominated, a. ಕರೆಯಲ್ಪಟ್ಟ, ಹೆಸರಿಡಲ್ಪಟ್ಟ; *(to be denominated)* ಕರೆಯಲ್ಪಡು, ಹೆಸರಿಡಲ್ಪಡು.

Denomination, s. n. ಹೆಸರಿಡುವಿಕೆ, ನಾಮಕರಣ. v. *Name.*

Denominator, s. n. ಹೆಸರಿಡುವವ, ಕರೆಯುವವ.

To Denote, v. n. ಕಾಣು, ತೋರು, ಕಾಣಬರು.

To Denounce, v. a. ಸಾರು, ಪ್ರಖ್ಯಾತಿಮಾಡು, ಪ್ರಸಿದ್ಧಿಮಾಡು. v. *To proclaim.*

Dense, a. ಮಂದವಾದ, ಮಬ್ಬಾದ, ಕೂಡಿದ, ಗಾತ್ರವಾದ, ದಪ್ಪವಾದ. v. *Compact, thick.*

Density, s. n. ಹತ್ತೊಂದಿಕೆ, ಮಬ್ಬು, ಮಂದವು, ದಪ್ಪವು, ಗಾತ್ರವು.

Dental, a. ದಂತ್ಯದ, ಹಲ್ಲಿನ; *(the dental letters)* ದಂತ್ಯಾಕ್ಷರಂಗಳು.

Denticulated, a. ಹಲ್ಲಿನ, ದಂತ್ಯದ.

Dentifrice, s. n. ದಾಚನೇಪುಡಿ, ಹಲ್ಲಿನಪುಡಿ, ದಂತದಮಾರ್ಜನ.

Denunciation, s. n. ಸಾರುವದು, ಪ್ರಖ್ಯಾಪಿಸುವದು. v. *Denouncement.*

To Deny, v. a. ಸಾಧಿಸು, ನಿರಸನಮಾಡು, ಅಪಲಾಪಿಸು, ಮೊಂಕು, ಅಲ್ಲವೆನು. v. *To contradict, refuse, disown, renounce.*

Deobstruent, a. ಭೇದಿಯ, ಪ್ರವರ್ತಿಯ, ವಿರೇಚನೆಯ.

To Depart, v. n. *(to decamp)* ಬಿಟ್ಟುಹೋಗು, ಉತ್ಕ್ರಮಿಸು; *(to retire)* ಹೊರಟುಹೋಗು, ತೆರಳು, ಹೊರಪಡು, ಹೊರಡು. v. Also *to desist, relinquish, quit, leave, retire.* *(to decease)* ಸತ್ತುಹೋಗು, ಸಾಯು, ಹೊಂದು, ಮರಣವಡೆಯು, ಅಸುಗಳೆಯು, ಪ್ರಾಣಬಿಡು; They are about to *depart* ಅವರುಹೋಗಲಿಕ್ಕಿದ್ದಾರೆ.

Departed, part. ಹೊರಟುಹೋದ, ಹೊರಪಟ್ಟ, ತೆರಳಿದ.

Department, s. n. *(office)* ಉದ್ಯೋಗ, ಉಜ್ಜುಗ, ಕೆಲಸ.

Departure, s. n. ಬಿಟ್ಟುಹೋಗುವಿಕೆ, ಹೊರಡೋಣ. v. *Forsaking.* *(decease)* ಮರಣ, ಸಾವು, ಬರ್ಜ, ಮೃತಿ, ಪಂಚತ್ವ.

To Depend, v. n. *(to hang from)* ಜೋತಾಡು, ತೂಗಾಡು, ನೇತಾಡು, ಜೋಲಾಡು; *(to confide)* ಭರವಸವಿಡು, ನಂಬಿಕೆಯಿಡು; *(have a relation to)* ಸಂಬಂಧವಾಗಿರು. v. *To belong.* *(to be in a state of dependance)* ಆಶ್ರಯಿಸು; *(to be*

undetermined) ಮಲಗತ್ತಿರ್; The law suit is still *depending* ವ್ಯಾಜ್ಯವಿಂನೂ ತೊಗದಿಸುತ್ತದೆ; Who can *depend* on your promise? ನಿನ್ನ ಮಾತನ್ನುಯಾರುನಂಬುವರು, or ನಿನ್ನ ಮಾತನ್ನಾರುನಂಬ್ಯಾರು; It *depends* on circumstances ಕಾಲಾನುಸಾರವಾಗಿಹೋಗುತ್ತದೆ, or ಆಸ್ಥೈಹ್ಯಾಗೋಹಾಗೆನೋಡಿಕ್ಕೊಳ್ಳುವಾ.

Dependance, Dependancy, Dependence, Dependency, s. n. ಆಶ್ರಯವು, ಪರಿಚರ್ಯವು, ಪರಿಚಯವು; *(connexion)* ಹೊಂದುವಿಕೆ, ತೆಗಲುವಿಕೆ, ಸಂಬಂಧ; *(confidence)* ಭರವಸವು; *(being subject to another)* ಪರಾಧೀನವು, ಪರವಶವು; There is no *dependance* to be placed in him ಅವಂನನಂಬಲಾಕೆ, or ಅವಂನ ನೆಚ್ಚಲಾಕೆ. v. *Trust, reliance, obedience.*

Dependant, Dependent, a. *(subject)* ಆಶ್ರಯಿಕೆಯುಳ್ಳ, ಪರತಂತ್ರವಾದ, ಪರಾಧೀನವಾದ, ಪರವಂಶವಾದ, ನಾಥವಂಶವಾದ; *(relative)* ಸಂಬಂಧವಾಗಿರುವ; *(hanging from)* ಜೋಲುಬೀಳುವ.

Dependant, Dependent, Depender, s. n. ಪರಾಧೀನನು, ಉಮ್ಮೇದವಾರನು, ಆಶ್ರಿತನು. v *Client.*

Dependents, s. n. ಪರಿಕರಗಳು, ಆಶ್ರಿತರು.

To Depict, v. a. ವರ್ಣಿಸ, ತಿಳಿಸ, ತೋರಿಸ. v. *To paint.*

Depilation, s. n. ಕೂದಲುದುರಿಸುವಮದ್ದು.

Depilatory, a. ರೋಮನಾಶಕವಾದ.

Deplorable, a. ದೌರ್ಭಾಗ್ಯದ, ದುರದೃಷ್ಟ, ಅದೃಷ್ಟಹೀನವಾದ, ಶ್ರಮೆಯ. v. *Lamentable, calamitous, sad, helpless.* *(situation)* ದುರವಸ್ಥೆಯು.

Deplorableness, s. n. ದುರದೃಷ್ಟವು, ವ್ಯಥೆಯು, ದೌರ್ಭಾಗ್ಯವು.

Deplorably, ad. ದುರದೃಷ್ಟವಾಗಿ, ವ್ಯಥೆಯಾಗಿ.

To Deplore, v. a. ವಿಲಪಿಸ, ಶೋಕಮಾಡ, ದುಃಖಪಡ, ಚಿಂತಿಸ.

Deponent, s. n. ಸಾಕ್ಷಿ. v. *Witness.*

To Depopulate, v. a. ಹಾಳುಮಾಡ, ಅಸಮೃದ್ಧಿಮಾಡ, ಪ್ರಜಾಕ್ಷಯಮಾಡ, ನಿರ್ಮನುಷ್ಯಮಾಡ.

Depopulated, a. ಹಾಳಾದ, ಅಸಮೃದ್ಧಿಯಾದ, ಪ್ರಜಾಕ್ಷಯವಾದ, ನಿರ್ಮನುಷ್ಯವಾದ; *(to be depopulated)* ಹಾಳಾಗ, ನಿರ್ಮನುಷ್ಯವಾಗ.

Depopulation, s. n. ಹಾಳು. v. *Havock, waste.*

Deportment, s. n. ನಡವಡಿಕೆ, ನಡತೆ, v. *Air, behaviour, demeanour.*

To Depose, v. a. ಕಿತ್ತುಹಾಕ, ತೆಗದುಹಾಕ; *(to attest)* ಸಾಕ್ಷ್ಯಕೊಡ.

Deposit, s. n. ಅಮಾನತು.

Depositary, s. n. *(person with whom any thing is lodged)* ಅಮಾನತ್ತಿನವ, ಅಡವಿರಿಸಿಕೊಳ್ಳುವವ.

To Deposite, v. a. ಇಡ, ಇಡತಕ್ಕೆ ಕೊಡ, ಇಕ್ಕಿಬಿಡ, ನ್ಯಾಸಮಾಡ, ಉಪನಿಧಿಮಾಡ.

Deposite, s. n. ಒತ್ತೆ, ಅಡವು, ಉಪನಿಧಿ, ನ್ಯಾಸ. v. *Pawn, pledge.* *(the return of it)* ಪ್ರತಿದಾನ.

Deposited, a. ಇರಿಸಿದ, ಇಡಲ್ಪಟ್ಟ, ನ್ಯಸ್ತ, ನಿಸ್ಸೃಷ್ಟ.

Deposition, s. n. ಮುಖವಚನವು, ವಾಙ್ಮೂಲವು, ಶಪಥೀಯತು; *(the act of degrading)* ಬಹಿಷ್ಕಾರವು, ಮಾನಭಂಗವು.

Depository, s. n. ಉಗ್ರಾಣ, ಭಂಡಾರ.

Depot, s. n. ಶಸ್ತ್ರಶಾಲೆ, ಜಖೀರು, ಕೋಠಿ.

Depravation, Depravity, Depravedness, Depravement, s. n. ಕೇಡು, ಕೆಟ್ಟತನ, ಭ್ರಷ್ಟತನ, ದುರ್ಗುಣ. v. *Corruption, degeneracy.*

To Deprave, v. a. ಕೆಡಿಸು, ಅಪಯೋಗ್ಯನಾ ಮಾಡು. v. *To corrupt.*

Depraved, a. ಕೆಟ್ಟುಹೋದ, ಅಪಯೋಗ್ಯನಾದ, ಭ್ರಷ್ಟನಾದ; *(to be depraved)* ಕೆಟ್ಟುಹೋಗು, ದುರ್ಗುಣವಾಗು.

To Deprecate, v. a. ದುಃಖಾಪಹರಸು, ಮೊರೆಯಿಟ್ಟೇಳು, ಕ್ಷೇಮೋಗಬೇಡ. v. *To implore.*

Deprecation, s. n. ಕ್ಷೇಮೋಗಪರಕೆ, ದುಃಖನಾಶಪ್ರಾರ್ಥನವು.

Deprecator, s. n. ಕ್ಷೇಮೋಗಪೆರಸುವವ, ದುಃಖಾವಪ್ರಾರ್ಥಕನು.

To Depreciate, v. a. ನಿಸ್ಸಾರಾಮಾಡು, ಹಲ್ಕೆಮಾಡು, ಭಂಗ್ಯಾಮಾಡು. v. *To undervalue.*

To Depredate, v. a. ಕೊಳ್ಳೆಯಿಡು, ಹಾಳುಮಾಡು. v. *To rob, spoil, plunder, lay waste.*

Depredation, s.n. ಕೊಳ್ಳೆ, ಸುಲಿಗೆ.

Depredator, s. n. ಸುಲಿಯುವವ, ಕೊಳ್ಳೆಯವ. v. *Robber, plunderer.*

To Depress, v. a. ಮಟ್ಟಾಗಿಸು, ಅಣಗಿಸು, ಕುಂಗಿಸು, ವಿಷಂಣಾ ಮಾಡು. v. *To deject, discourage, sink ;* also *to press, thrust down, let fall, let down.*

Depression, s. n. ಅಣಗುವಿಕೆ, ತಗ್ಗುವಿಕೆ, ಕಳೆಗುಂದಿಕೆ, ವಿಷಂಣತೆ. v. *Dejection.*

Deprivation, s. n. ಅಗಲಿಸುವಿಕೆ, ತಪ್ಪಿಸುವಿಕೆ, ತಡೆಯುವಿಕೆ. v. *Privation.*

To Deprive, v. a. *(to bereave of)* ಅಗಲಿಸು, ಹರಿಸು ; *(to hinder)* ಅಡ್ಡಗಟ್ಟು, ಅಟಂಕಿಸು, ಅಟಕಾಯಿಸು ; *(to deprive of life)* ಪ್ರಾಣಾತೆಗದುಕೊಳ್ಳು, ಕೊಂದುಹಾಕು, ಕೊಲ್ಲು ; *(to put out of office)* ತೆಗೆಯು, ತೆಗದುಹಾಕು.

Deprived, a. *(of reason)* ಬುದ್ಧಿಹೀನ, ಹುಚ್ಚಾದ.

Depth, s. n. ಉದ್ಧ, ಊಬ, ಆಳ, ಗಾಂಭೀರ್ಯ. v. *Deep, deepness ;* also *obscurity.*

Deputation, s. n. ಮಧ್ಯಸ್ತಗಿರಿ, ವಕಾಲತು. v. *Appointment, commission.*

To Depute, v. a. ಆಜ್ಞೆಕೊಟ್ಟುಕಳುಹಿಸು, ನೇಮಿಸಿಕಳುಹು. v. *To send away, despatch.*

Deputy, s. n. ವಕೀಲ, ಗುಮಾಸ್ತ. v. *Agent, factor, commissioner, assistant.*

Effect, s. n. (*that which is produced by an operating cause*) ಕಾರ್ಯ; (*the cause and effect*) ಕಾರ್ಯಕಾರಣಗಳು; (*effect, force, power*) ಶಕ್ತಿ, ಬಲ; (*purpose*) ಉದ್ದೇಶ್ಯ, ತಾತ್ಪರ್ಯ; (*advantage*) ಲಾಭ, ಪ್ರಯೋಜನ; (*completion*) ಸಮಾಪ್ತಿ, ಸಂಪೂರ್ಣತೆ; (*effects, or goods*) ಗೃಹಸಾಮಗ್ರಿ, ಮನೇಬದುಕು; The *effect* of poison is death ವಿಷದಿಂದಮರಣಬರುವದು; What will be the *effects* of this medicine? ಈಯವುಷಧದಿಂದಲೇನಾಗುವದು, or ಈಯವುಷಧದಗುಣವೇನು; To worship idols is in *effect* to blaspheme God ವಿಗ್ರಹಗಳಿಂನಾರಾಧಿಸುವದುದೇವರಂನನಿಂದಿಸಿದಹಾಗಿರುವದು; (*a thing of no effect*) ಪ್ರಯೋಜನವಿಲ್ಲದಕಾರ್ಯ; He spoke in words to this *effect* ಅವನುಹೇಳಿದ್ದೇನೆಂದರೆ, or ಅವನುಹೇಳಿದ್ಧ್ಯಾಗಂದರೆ; (*to be effected*) ಕೈಕೂಡಿಬರುವದು, ಆಗುವದು; The *effect* demonstrates the cause ಕಾರಣವಂನುಕಾರ್ಯವುತೋರಿಸುತ್ತದೆ.

To Effect, v. a. (*effectuate*) ಆಗಮಾಡು, ಉಂಟುಮಾಡು, ಸಿದ್ಧಿಸು, ಜಯಿಸು, ಘಟಿಸು, ಕೈಗೂಡಿಬರಮಾಡು. v. *To perform, complete, fulfil.* (*to take effect*) ಫಲಿಸು, ಹತ್ತು.

Effectual, Effective, Efficacious, a. ಬಲವಾದ, ಪ್ರಯೋಜನವಾದ. v. *Active, operative, useful.*

Effectually, Effectively, Efficaciously, ad. ಬಲವಾಗಿ, ಪ್ರಯೋಜನವಾಗಿ. v. *Powerfully.*

Effeminacy, s. n. ಹೇಡಿತನ, ಹೆಂಗುಗತನ, ಆಡಂಗಿತನ.

Effeminate, a. ಹೇಡಿಯು, ಹೆಂಗುಗನಾದ; (*an effeminate person*) ಹೆಂಗುಗ.

To Effeminate, v. a. ಆಡಂಗಿತನಮಾಡು, ಹೆಂಗುಗತನಮಾಡು.

To Effervesce, v. n. ಉಕ್ಕು, ಹೊಂಗು.

Effervescence, s. n. ಉಕ್ಕುವಿಕೆ, ಹೊಂಗುವಿಕೆ.

Effete, a. ಬೀತ, ಮರತ, ಮುಟ್ಟಿನಿಂತ, ಹೊಲೆಕೆಟ್ಟ.

Efficacy, Efficiency, s. n. ಫಲ. v. *Effect, agency.*

Efficient, a. ಆಗಮಾಡುವ, ಫಲಿತವಾದ, ಪ್ರಯೋಜನವಾಗುವ. v. *Effective.*

Effigy, s. n. ಪ್ರತಿಕೃತಿ, ಪ್ರತಿಮೆ. v. *Picture, statue, image, figure.*

Efflorescence, s. n. ವಿಕಸನ, ಹುವ್ವು, ಪುಷ್ಪಿಸುವಿಕೆ, ಹೂತ.

Effluvium, s. n. ನಿಸ್ಸರದಗಾವು, ಹೊರಡುವಕೇಗು.

Efflux, s. n. ಹರಿಯುವದು, ಒರೆತ, ಊಕೋಣ, ಸ್ರವಿಸುವಿಕೆ. v. *Effusion.*

Effort, s. n. ಸುರಗ, ಉದ್ಯಮ, ಘಟ್ಟಿಗಸಂದಿಗೆ, ಪ್ರಯತ್ನ, ಪ್ರಯಾಸ, ಮುಷ್ಕು. v. *Endeavour, struggle.*

(*to make effort*) ಘಟ್ಟಿಮುಂದಿಗೇಮಾಡ, ಪ್ರಯಾಸಗೊಳ್ಳ, ಪ್ರಯಾಸೆತೆಗದುಕೊಳ್ಳ, ಅತಿಯ, ಮುಕ್ಕರಿಯ, ಪ್ರಯತ್ನಿಸ.

Effrontery, s. n. ಲಜ್ಜಾಹೀನತ್ವ, ನಿರ್ಲಜ್ಜೆ, ಪೋಕರಿತನ.

Effulgence, s, n. ಕಾಂತಿ, ಕಳೆ, ಕದಿರು, ಮಿನುಗು, ಹುಬೆ, ಮಿಂಚು, ಡಾಳ, ಮಿರುಗು, ಹೊಳಪು, ತಳಪು, ಪೊಗರು, ಥೊಳಗು, ಬೆಳಗು, ಛವಿಯು, ಹೊಳರು.

Effulgent, a. ಕಳೆಯ, ಪ್ರಕಾಶದ, ಕಾಂತಿಯ, ಮಿಂಚಿನ, ಜಗಜ್ಜಗಿಸುವ, ಥಳಥಳಿಸುವ.

To Effuse, v. a. ಚೆಲ್ಲ, ತುಳುಕ, ತುಳುಪ.

Effusion, s. n. ಚೆಲ್ಲಿಕೆ, ಸುರಿಯುವಿಕೆ.

Egg, s. n. ಗುಡ್ಡು, ಅಂಡ, ಮೊಟ್ಟೆ, ಪೇಶಿ, ಕೋಶ; (*mundane*) ಬ್ರಹ್ಮಾಂಡ, ಅಂಡ, ಅಂಡಕಟಾಹ; (*a fried egg*) ಕರಿದಗುಡ್ಡು, ಹುರಿದಮೊಟ್ಟೆ; (*a boiled egg*) ಕುಚ್ಚಿದಗುಡ್ಡು, ಬೆಂದಮೊಟ್ಟೆ; (*to lay eggs*) ತತ್ತಿಡ; (*an egg shell*) ಮೊಟ್ಟೆಯಚಿಪ್ಪು, ತತ್ತಿಯೋಡು; (*white of an egg*) ಕೋಳೆ, ಮೋಳೆ; (*yolk of an egg*) ಮೊಟ್ಟೆಯತಿರುಳು; (*a new laid egg*) ಹೊಸಗುಡ್ಡು; (*a rotten egg*) ಕೊಳೆತಗುಡ್ಡು.

To Egg, v. a. ಹುರಿಕಲ್ಪಿಸ, ಉಸಿಗಲ್ಪಿಸ.

Egg-plant, s. n. ಬದನೇಸಸಿ, ವಾರ್ತಾಕಿ, ಹಿಂಗುಲಿ, ಸಿಂಹಿ, ಶಾಂಡಾರಿ, ದುಷ್ಪ್ರಧರ್ಷಣಿ.

Eglantine, s. n. ಮುಳ್ಳುಶಾವಂತಿಗೆ.

Egotism, s. n. ಅಹಂಬ್ರಹ್ಮತ್ವ, ಅಹಂತ್ವ.

To Egotize, v. n. ಅಹಂಬ್ರಹ್ಮತ್ವಮಾಡ, ಆತ್ಮಸ್ತುತಿಮಾಡ.

Egotist, s. n. ಅಹಂಕಾರಿ, ಸ್ವಪ್ರಶಂಸಿ.

Egregious, a. ಅಪಾರ, ವಿಪರೀತ, ಮೀರಿದ. v. *Perfect, complete, consummate, excessive.*

Egregiously, ad. ಅಪಾರವಾಗಿ, ವಿಪರೀತವಾಗಿ.

Egress, Egression, s. n. ಹೊರಡಿಕೆ.

To Ejaculate, v. a. ಒಗೆಯ, ಎಸೆಯ. v. *To throw, to shoot out.*

Ejaculation, s. n. (*a prayer*) ನಾಮಸ್ಮರಣೆ.

To Eject, v. a. (*expel*) ಹೊರಡಿಸ; (*to void*) ಶೌಚಕ್ಕೆಹೋಗ, ಹೊರಕಡೆಗೆಹೋಗ.

Ejection, s. n. ಹೊರಡಿಸುವಿಕೆ. v. *Expulsion.*

Ejectment, s. n. ಹೊರಹಾಕುವಿಕೆ.

Eigh, interj. ಹಾಹಾ.

Eight, a. ಎಂಟು, ಅಷ್ಟಕವು, ವಸುಸಂಖ್ಯೆಯು.

Eighteen, a. ಹದಿನೆಂಟು, ಅಷ್ಟಾದಶವು.

Eightfold, a. ಎಂಟರಷ್ಟು, ಅಷ್ಟಗುಣಿತವು, ಎಣ್ಮಡಿಯು.

Eighth, a. ಎಂಟನೆಯ, ಅಷ್ಟಮವಾದ.

Eighty, a. ಎಂಭತ್ತು, ಅಶೀತಿ.

Either, pro. (*neuter*) ಯಾವದಾದರು, ದಾವದಾದರು, ಏನಾದರು; (*mas.*) ಯಾರಾದರು, ದಾರಾದರು; (*fem.*) ಯಾವಳಾದರು, ದಾವಳಾದರು, &c.; (*in comp.*) ಅಲ್ಲವೆ, ಇಲ್ಲವೆ, ಆದರು; *Either* he or you did it ಅವನಾದರೂನೀನಾದರೂಅದರಂನಮಾಡಿರಬಹುದು; *Either* it is true or false ಇಲ್ಲವೇನಿಜವಾಗಿದ್ದೀತುಯಿಲ್ಲವೇಅಬದ್ಧವಾಗಿದ್ದೀತು; Let none come here to-day, *either* bramins or soodras ಇಂದುಬ್ರಾಹ್ಮಣರನ್ನಾಗಲಿಶೂದ್ರರನ್ನಾಗಲಿಯಾರನ್ನಾಬರಗೊಡಿಸಬೇಡ;

Either stay or go ಇದ್ದರೇಯಿರು ಹೋದರೆ ಹೋಗು; They were so like, a man might declare that *either* had been *either* ಅವರು ಇವರು ಎಂದು ಹೇಳಿ ಕೂಡದ ಹಾಗೆ ಯಿಬ್ಬರ ಹೋಲಿಕೆಯೊಂದೇಯಾಗಿತ್ತು.

To Eke, v. a. (*to increase*) ಪ್ರವರ್ಧಿಸು; (*to do slowly*) ನಿಲಕಡೆಯಾಗಿ ಮಾಡು; (*to spin out by useless additions*) ವ್ಯಾಳ್ಯೆ ಹೆಚ್ಚುವ ಹಾಗೆ ಮಾಡು. v. *To add, increase, lengthen, supply.*

Elaborate, a. ಪ್ರಯಾಸವಾದ.

To Elaborate, v. a. ಬಹುಕಷ್ಟಪಟ್ಟು ಮಾಡು.

Elaborately, ad. ಪ್ರಯಾಸವಾಗಿ, ಜಾಗ್ರತೆಯಾಗಿ.

Elaboration, s. n. ಸರಾಗವಾಗುವದು, ಖಚಿತವಾಗುವದು, ಹಣ್ಣಾಗುವದು.

To Elapse, v. n. ಜರುಗು, ಕಳೆಯು. v. *To glide, pass away.* (*the time which is elapsed*) ಪೂರ್ತಿಕಾಲ, ಜರುಗಿದವೇಳೆ, ಹೋದಕಾಲ.

Elastic, a. ಜಿಗಿಟಿನ, ಜಿಗಿಯಾದ, ನಾರಾದ, ಬಿಗಿಯಾದ.

Elasticity, s. n. ಜಿಗಿ, ಜಿಗಿಟು, ನಾರಾಗಿರುವಿಕೆ, ಬಿಗಿ.

Elate, a. ಹಿಗ್ಗುಳ್ಳ, ಜಗ್ಗುಳ್ಳ, ಕೊಬ್ಬುಳ್ಳ, ಅಹಂಕಾರವುಳ್ಳ. v. *Haughty.*

To Elate, v. a. ಹಿಗ್ಗಿಸು, ತಲೆಯ ಗಟಿಮಾಡು, ಅಹಂಕಾರಮಾಡು, ಉಬ್ಬಿಸು. v. *To elevate, exalt.*

Elated, part. ಹಿಗ್ಗಿದ, ಕೊಬ್ಬಿದ, ಉಬ್ಬಿದ, ಅಹಂಕಾರವಾದ; (*to be elated*) ಹಿಗ್ಗಿರು, ಅಹಂಕಾರವಾಗಿರು, ಉಬ್ಬಿಕೊಳ್ಳು.

Elation, s. n. ಹಿಗ್ಗಿಕೆ, ಕೊಬ್ಬು, ಅಹಂಕಾರವು.

Elbow, s. n. ಮೊಣಕೈಯ್ಯು, ಕಫೋಣಿ, ಕೂರ್ಪರವು; (*to be at one's elbows*) ಪಕ್ಕದಲ್ಲಿರು, ಹತ್ತಿರದಲ್ಲಿರು.

To Elbow, v. a. ಮೊಣಕೈಯಿಂ ಗುದ್ದು.

Elder, s. n. ಹಿರಿಯವನು, ಜ್ಯೇಷ್ಠ; (*an elder brother*) ಅಣ್ಣ; (*an elder sister*) ಅಕ್ಕ.

Elderly, a. ವೃದ್ಧಾಪ್ಯವುಳ್ಳ, ಮುದಿ ಪ್ರಾಯವುಳ್ಳ. v. *Old, advanced in years.*

Elders, s. n. ಹಿರಿಯರು.

Eldest, a. ತಲೆಯ, ಚೊಚ್ಚಲಿನ, ಮೊದಲಿನ, ಜ್ಯೇಷ್ಠ, ಹಿರಿಯ.

Elecampane, s. n. ಪುಂಪರಾಶ್ಮ, ಪಲ್ಗಾಂಜನವು.

Elect, a. ಆರಿಸಿಕೊಂಡ.

To Elect, v. a. ಆರಿಸಿಕೊಳ್ಳು. v. *To choose.*

Election, s. n. ಆರಿಸಿಕೊಳ್ಳುವಿಕೆ. v. *Choice.*

Elective, a. ಆರಿಸಿಕೊಳ್ಳುವ.

Electively, ad. ಆರಿಸಿಕೊಳ್ಳುವಿಕೆಯಾಗಿ.

Elector, s. n. ಆರಿಸಿಕೊಳ್ಳುವವ.

Electricity, s. n. ಮಿಂಚು, ಅಗ್ನಿಕರಣವಿದ್ಯೆ, ಆಕರ್ಷಣವಿದ್ಯೆ. v. *Attraction.*

Electuary, s. n. ಲೇಹ್ಯ.

Elegance, Elegancy, s. n. ನಾಜೂಕು, ಕಾಂತಿ, ಮನೋಹರ, ರಮ್ಯ, ರುಚಿರ, ಚಾರು, ಶೋಭನ, ಸುಂದರ, ಮನೋಜ್ಞ, ಮಂಜು, ಮಂಜುಲ, ರಾಮಣೀಯ್ಯ, ಒಪ್ಪುವಿಕೆ, ನಾಗರೀಕವು. v. *Beauty.*

Elegant, a. ನಾಜೂಕಿನ, ಸೊಬಗಿನ, ವಿಭ್ರಾಜಿಷ್ಣು, ಶೋಭಿಷ್ಣು. v. *Gentle, delicate, soft.* (*an elegant writer*) ಲೇಖರಿ; (*an elegant woman*) ರೂಪವತಿ; (*an elegant speaker*) ಲೇಮಾರಿನವ, ಸಾಧುವಾದಿ, ಮಂಜುಭಾಷಿ.

Elegantly, ad. ನಾಜೂಕಾಗಿ, ಸುಂದರವಾಗಿ, ಚೆಲುವಿಕೆಯಾಗಿ; (*walking elegantly*) ಹಂಸೆಯಗಮನ.

Elegy, s. n. ಆರ್ತಧ್ವನಿ, ಗೋಳು.

Element, s. n. (*station*) ಅನುಕೂಲನಿವಾಸ, ಸ್ವಾಭಾವಿಕಸ್ಥಾನ; (*a constituent element*) ಸಾರ, ಮೂಲ; (*rudiments*) ವಿದ್ಯಾಮೂಲ; Water is the *element* of fishes ಮೀನುಗಳಿಗೆನೀರೆಜೀವನ; Hunting is his *element* ಬೇಟೆಯಾಡುವದೇಅವನಿಗಿಂಪಾಗಿರುವದು, or ಬೇಟೆಯಾಡುವದರಲ್ಲೇಅವನಿಗಾಸಕ್ತಿ; The Hindoo five *elements* ಪಂಚಭೂತಗಳು, as; (*earth*) ಪೃಥಿವಿ, ನೆಲ; (*water*) ಅಪ್ಪು, ನೀರು; (*fire*) ತೇಜಸ್ಸು, ಬೆಂಕಿ; (*air*) ವಾಯುವು, ಗಾಳಿ; (*sky*) ಆಕಾಶ, ಆಗಸ.

Elemental, a. ಭೂತವಾದ, ಮೂಲವಾದ.

Elephant, s. n. ಆನೆ, ಹಸ್ತಿ, ಗಜ, ಕರಿ, ದಂತಿ, ವಾರಣ, ಸಾಮಜ, ನಾಗ, ದ್ವಿದಂತ, ದ್ವಿರದ, ಅನೇಕಪ, ದ್ವಿಪ, ಇಭ, ಪದ್ಮಿಯು, ಕುಂಜರ, ಕುಂಭಿ, ಹರಿ; (*an elephant's proboscis or trunk*) ತುಂಬಿಕೆ, ಸುಂಡ್ಲು; (*the ivory of an elephant*) ದಂತ, ಜಂತವು; (*the place where elephants stand*) ವಾರಿಯು, ಆನೇಲಾಯ; (*the elephant keeper*) ಮಾವುತ, ಮಾವಟಿಗ; (*a herd of elephants*) ಹಾಸ್ತಿಕವು, ಗಜತೆಯು, ಆನೇಹಿಂಡು; (*an elephant's goad*) ಅಂಗುಶ, ಅಂಕುಶ, ಸೃಣಿ; (*a female elephant*) ಪಿಡಿ, ಕರಿಣಿಯು, ಧೇನುಕೆಯು, ವಶೆಯು; (*the elephant on which the king is accustomed to ride*) ಪಟ್ಟದಾನೆ, ಪೂಜಾಗಜವು, ಪಟ್ಟವರ್ಧನ; (*the juice that exudes from the frontal sinuses of an elephant*) ಮದವು, ದಾನವು; (*an elephant in rut*) ಮದ್ದಾನೆ, ಮದೋತ್ಕಟವು, ಮದಕಲವು; (*an elephant out of rut*) ಉದ್ಭಾಂತವು, ನಿರ್ಮದವು; (*an elephant's forehead*) ಅವಗ್ರಹವು, ಗಜಲಲಾಟವು; (*an elephant's temples*) ಗಂಡವು, ಕಟವು; (*an elephant's tusks*) ಕೋರೆ, ಕೊಂಬು, ಜಂತ, ದಂತ, ನಿಗ್ಗವ; (*an elephant's chain*) ಆನೇಸರಪಳಿ, ಶೃಂಖಲವು, ಅಂದುಕವು, ನಿಗಳವು; (*the post to which he is secured*) ಆಳಾನವು, ಗಜಬಂಧನಸ್ತಂಭವು; (*the elephant fly*) ಆನೇತೊಗಚೆ; (*an elephant's frontal globes*) ಕುಂಭಸ್ಥಳವು; (*the hollow between them*) ವಿಧುವು, ಕುಂಭಮಧ್ಯವು; (*his eye ball*) ಈಷಿಕೆಯು; (*corner of his eye*) ನಿರ್ಯಾಣವು, ಗಜಾಪಾಂಗವು; (*his flank*) ಪಕ್ಷಭಾಗವು, ಗಜಪಾರ್ಶ್ವಭಾಗವು; (*his withers*) ಆಸನವು, ಗಜಸ್ಕಂಧದೇಶವು; (*marks on his face and trunk*) ಪದ್ಮಕವು, ಬಿಂದುಜಾಲಕವು; (*part below the frontal globes*) ವಾಹಿತ್ಥವು, ಕುಂಭವು; (*under that part, between the tusks*) ಪ್ರತಿಮಾನವು; (*root of his ear*) ಚೂಳಿಕೆಯು, ಗಜಕರ್ಣಮೂಲವು; (*an elephant's turret*) ಅಂಬಾರಿ, ಹವುದೆ; (*an elephant's trappings*) ಕುಥವು, ಝುಲಾರ, ಪರಿಸ್ತೋಮವು; (*a young elephant*) ಪಿಲ್ಲಮರಿ, ಗುಂವಾನೆ, ಮರಿಯಾನೆ, ಕಲಭವು, ಕರಿಶಾಬಕ; (*a furious elephant*) ಪ್ರಭಿನ್ನಗಜವು, ಗರ್ಜಿತಗಜವು; (*a white elephant*) ಐರಾವತ, ಬಿಳಿಯಾನೆ, ಬೌಜಂತ; (*the water emitted from an elephant's trunk*) ವಮಥುವು, ಕರಶೀಕರ. (*elephant apple*) ಬೇಲದಮರ, ಕಪಿತ್ಥವು.

Elephantiasis, s. n. ಆನೇಕುಷ್ಠ, ರಾಜಕುಷ್ಠ, ಗಜಕುಷ್ಠ.

To Elevate, v. a. ಎತ್ತರಿಸು, ಮೇಲುಮಾಡು. v. *To exalt, raise.*

Elevated, part. ಎತ್ತರದ, ಉದ್ದ.

Elevation, s. n. ಎತ್ತರ, ಮೇಲ್ಭಾಗ, ಉತ್ಸೇಧವು. v. *Exaltation.*

Eleven, a. ಹನ್ನೊಂದು, ಏಕಾದಶ.

Eleventh, a. ಹನ್ನೊಂದನೇ.

Elf, s. n. ಭೂತ, ಭೇತಾಳ, ದೆವ್ವ.

Eligible, a. ಶಕ್ತ, ಯುಕ್ತ, ಯೋಗ್ಯವಾದ.

Eligibility, s. n. ಸಮರ್ಥಿಕೆ, ಯೋಗ್ಯತೆ.

Elision, s. n. ವಿಚ್ಛೇದ, ವಿದಳ.

Elixir, s. n. (*medicine*) ಕಷಾಯ; (*essence*) ಸಾರ.

Elk, s. n. ಇರ್ರಿ, ಹುಲ್ಲೆ.

Ell, s. n. ಮೊಳ.

Ellipsis, s. n. ಪದಗ್ರಸ್ತ.

Elocution, s. n. ವಾಗ್ಝರಿ, ವಾಗ್ಜಾಲವು. v. *Eloquence.*

To Elongate, v. a. ಉದ್ದಮಾಡು, ಸಾಗಿಸು, ಸಾಗಬಡಿಯು.

Elongation, s. n. ಉದ್ದಮಾಡುವಿಕೆ, ಊಹುಮಾಳ್ಕೆ

To Elope, v. a. ಓಡಿಹೋಗು, ಚರಾಷ್ಟಾಗಿಸು, ಅಡವಿಪಾಲಾಗು, ಪಲಾಯನವಾಗು.

Elopement, s. n. ಚರಾಷ್ಟಾಗಿಕೆ, ಯೆಳ್ಳೋಳಾದ್ಯ, ಪಲಾಯನ, ಓಟ.

Eloquence, s. n. ಮಂಜುಳಭಾಷೆ, ಸುಭಾಷೆ, ಚಾತುರ್ಯಗೋಷ್ಠಿ.

Eloquent, a. ಮಂಜುಳಭಾಷೆಯ, ಸುಭಾಷೆಯ; (*an eloquent man*) ವಾಗೀಶನು, ವಾಕ್ಪತಿ.

Eloquently, ad. ಮಂಜುಳಭಾಷೆಯಾಗಿ.

Else, pro. ಇಲ್ಲವೆ, ಅಲ್ಲವೆ; (*in comp.*) ಆದರು; (*nothing else*) ಮತ್ತೇನಿಲ್ಲ; Let any one *else* come ಇಂನು ಯಾವನಾದರು ಬರಲಿ; Come if you mean to come, *else* I will shut the door ನೀಬರಬೇಕಾದರೆ ಬಾ ಇಲ್ಲವೇ ಬಾಗಲು ಮುಚ್ಚುತ್ತೇನೆ; Put them somewhere *else* ಇಂನೆಲ್ಲ್ಯಾದರೂ ಇಡು, or ಮತ್ತೆಲ್ಲ್ಯಾದರ ವುಗಳಂನಿಟ್ಟುಬಿಡು; What *else* need I say? ಇಂನೇನುಹೇಳಲಿ; What *else* is there? ಇಂನೇನದೆ, or ಇಂನ್ಯಾವದದೆ, or ಇಂನೇನುಂಟು; There is none anywhere *else* ಅದುಬಿಟ್ಟಿಂನೆಲ್ಲಿಯೂ ಇಲ್ಲ.

Elsewhere, ad. ಮತ್ತೆಲ್ಲ್ಯಾದರು, ಮತ್ತಾವ ಕಡೆಯಲ್ಲಾದರು.

To Elucidate, v. a. ವಿವರಿಸು, ವಿಮರ್ಶಿಸು, ವ್ಯಾಖ್ಯಾನಿಸು, ಟೀಕಿಸು. v. *To explain, illustrate.*

Elucidation, s. n. ವಿವರಿಕೆ, ವಿಮರ್ಶೆ, ವ್ಯಾಖ್ಯಾನವು. v. *Explanation.*

To Elude, v. a. (*to avoid*) ತಪ್ಪಿಸಿಕೊಳ್ಳು; (*to deceive*) ಠಕ್ಕುಮಾಡು, ಮೋಸಗೊಳಿಸು. v. *To deceive, escape, mock.*

Elusion, s. n. ತಂತ್ರ, ಠಕ್ಕು, ಕೃತ್ರಿಮ. v. *Stratagem.*

Elusive, Elusory, a. ಠಕ್ಕಿನ, ಕೃತ್ರಿಮದ, ತಂತ್ರವಾದ.

Elysian, a. ಸ್ವರ್ಗದ, ಇಂದ್ರಭವನದ, ಇಂಪಾದ. v. *Delightful, delicious.*

Elysium, s. n. ಸ್ವರ್ಗ, ಇಂಪಾದಸ್ಥಾನ.

To Emaciate, v. n. ಕಂಗೆಡ, ಕೃಶವಾಗ, ಸಗ್ಲಾನವಾಗಿಹೋಗ. v. *To pine, languish.*

Emaciated, part. ಕಂಗೆಟ್ಟ, ಗ್ಲಾನ, ಗ್ಲಾನ್ಯುವಾದ, ಕೃಶೀಭೂತವಾದ, ಕ್ಷೀಣವಾದ. v. *Lean, meagre, extenuated.*

Emaciation, s. n. ಬಡತನ, ಕೃಶೀಭೂತವು, ಕಂಗೇಡು. v. *Leanness.*

To Emanate, v. n. ಪ್ರಸರಿಸ, ಹೊರಡ.

Emanation, s. n. ಪ್ರಸರಣ, ಹೊರಡಿಕೆ, ಪ್ರತಿಹರಡುವಿಕೆ.

To Emancipate, v. a. ಶಕ್ಕೀಬಿಡಿಸ, ಬಂಧಕಾರೀರಿಸ, ಕಾವಲೀಬಿಡಿಸ.

Emancipation, s. n. ನಿರ್ಬಂಧ, ವಿಮೋಚನೆ, ಬಿಡುಗಡೆ, ಮೋಚನ.

To Emasculate, v. a. ತಿಪ್ಪುಬಡಿಯ, ಬೀಜಾಬಡಿಯ, ಬಲಹೀನಪಡಿಸ. v. *To castrate.*

To Embalm, v. a. ಹೊಟ್ಟೆಬಗದುಪರಿಮಳಾ ತುಂಬ.

Embankment, s. n. ಕಟ್ಟೆ, ಕರೆ.

Embargo, s. n. ಮಂನಾಯಿಕೆ, ಕಟ್ಟು, ತಡೆ.

To Embark, v. n. ಹಡಗೇರ, ಹಡಗಶೇರ.

Embarkation, s. n. ಹಡಗಶೇರುವಿಕೆ, ಹಡಗೇರೋಣ.

To Embarrass, v. a. ತೊಂದರೆಮಾಡ, ಗಲಿಬಿಲೀ ಮಾಡ, ಚಿಕ್ಕುಮಾಡ. v. *To distress, entangle, perplex, confound.*

Embarrassed, part. ತೊಂದರೆಯಾದ, ಗಲಿಬಿಲಿಯಾದ.

Embarrassment, s. n. ತೊಂದರೆ, ಗಲಿಬಿಲಿ, ಚಿಕ್ಕು. v. *Perplexity.*

Embassador, s. n. ರಾಯಭಾರಿಕ, ಸ್ಥಾನಾಧಿಪತಿ. v. *Ambassador.*

Embassy, Embassage, s. n. ರಾಯಭಾರ, ಸ್ಥಾನಾಧಿಪತ್ಯ.

To Embellish, v. a. ಶೃಂಗರಿಸ, ಅಲಂಕರಿಸ. v. *To adorn, decorate.*

Embellished, part. ಶೃಂಗಾರವಾದ, ಅಲಂಕಾರವಾದ, ಸೊಗಸಾದ.

Embellishment, s. n. ಆಕಲ್ಪ, ವೇಷ, ನೈಪಥ್ಯವು ಪ್ರತಿಕರ್ಮ, ಶೃಂಗಾರವು, ಅಲಂಕಾರವು, ಭೂಷಣವು. v. *Ornament, decoration.* (*embellishment of person*) ಪರಿಕರ್ಮ, ಅಂಗಸಂಸ್ಕಾರ.

Embers, s. n. ಬೆಂಬೂದಿ.

To Embezzle, v. a. (*to appropriate by breach of trust*) ತಿಂದುಬಿಡ, ಎತ್ತಾಕ; (*to waste in riot, &c.*) ದುಲಾಷ್ಟಿತನಮಾಡ.

Embezzlement, s. n. ಸ್ವಾಮಿದ್ರೋಹ, ತಿಂದೋಡಿಕೆ, ಎತ್ತುಗಳತನ.

Embezzler, s. n. ತಿಂದೋಡಿಗ, ದಗಾಖೋರ, ವಂಚಕ, ಎತ್ತುಗಳ್ಳ.

Emblem, s. n. ಸಾಮ್ಯ, ಸಾದೃಶ್ಯ, ಹೋಲಿಕೆ. v. *Symbol.*

Emblematical, a. ಸಾಮ್ಯವಾದ, ಸಾದೃಶ್ಯವಾದ, ಹೋಲಿಕೆಯಾದ.

To Embody, v. a. ಕಲೆಯ, ಒಳಗೆಮಾಡ.

To Embolden, v. a. ಧೈರ್ಯಪಡಿಸ.

Embolism, s. n. ಅಧಿಕಮಾಸ, ಅಧಿಕವರ್ಷ;

Embolus, s. n. ಗಜ, ಸಲಾಕಿ.

To Emboss, v. a. ಪಚ್ಚೆಗೆಮಾಡು, ಉಬ್ಬೆತ್ತು, ಉಬ್ಬೆತ್ತಿಗೆಮಾಡು, ಉಬ್ಬಾಗಿಕೆತ್ತು.

Embossed, part. ಉಬ್ಬೆತ್ತಾದ, ಉಬ್ಬೆತ್ತಿಗೆಯಾದ.

Embossment, s.n. ಉಬ್ಬೆತ್ತಿಕೆ, ಉಬ್ಬೆತ್ತು. v. *Boss.*

To Embowel, v. a. ಕರುಳು ತೆಗೆಯು.

Embrace, s. n. ಆಲಿಂಗನೆ, ಅಭಿಷ್ವಂಗ, ಸಂಶ್ಲೇಷಣ, ಉಪಗೂಹನ, ಆಶ್ಲೇಷಣ, ಪರಿಷ್ವಂಗ; (*conjugal embraces*) ಕ್ರೀಡಾಟ, ಕೂಸ್ತ್ರಾಟ, ಸಂಯೋಗ, ಸಂಗಮ.

To Embrace, v. a. ಅಪ್ಪಿಕೊಳ್ಳು, ಆಲಿಂಗನಮಾಡು, ತಕ್ಕೈಸು, ತಬ್ಬಿಕೊಳ್ಳು; (*to admit, receive*) ಅಂಗೀಕರಿಸು; (*to comprise*) ಅಡಗು, ಹಿಡಿಯು. v. *To comprehend, inclose, contain.* He has *embraced* the Christian religion ಅವನು ಕ್ರೀಸ್ತುಮತತಕ್ಕೊಳ್ಳಗಾದವನು; I will *embrace* the first opportunity of coming to see you ನನಗೆಸಂದರ್ಭವಾದಕೆಸಂಗಡಲೆನಿಂನನೋಡಲಿಕ್ಕೆಬರುತ್ತೇನೆ, or ನನಗೆ ಮೊದಲು ಸಮಯಾನುಕೂಲವಾದಲ್ಲಿ ನಿನ್ನ ದರ್ಶನಕ್ಕೆ ಬರುತ್ತೇನೆ.

Embrasure, s. n. (*aperture in a wall*) ಜೇಕುಗಂಡಿ; (*an embrasure for cannon*) ಕೋಟೆತೆನೆಕಂಡಿ.

To Embrocate, v. a. ನೀವು, ಒರಸು, ತಿಕ್ಕು.

To Embroider, v. a. ಶೃಂಗರಿಸು, ಅಲಂಕರಿಸು, ಗೋಟುಹಾಕು, ಜಂಟೀಮಾಡು, ಜರೀಕೆಲಸಮಾಡು.

Embroidered, part. ಶೃಂಗಾರವಾದ, ಅಲಂಕಾರವಾದ.

Embroiderer, s.n. ಶೃಂಗಾರಮಾಡುವವ, ಅಲಂಕಾರಕ, ಜಂಟೀಕೆಲಸದವ, ಗೋಟುಹಾಕುವವ, ಜರೀಕೆಲಸದವ.

Embroidery, s. n. ಗೋಟು, ಜಂಟಿ, ಜರಿಗೆಯಲಂಕಾರ.

To Embroil, v. a. ಗಲಿಬಿಲೀಮಾಡು, ಘಾಬರೀಮಾಡು, ತೊಂದರೆಪಡಿಸು. v. *To confound, disturb, distract, perplex.*

Embroiler, s. n. ತಂಟಾಖೋರ, ಝಗಳಗಂಟಿ, ಕೊಳ್ಳೀಗೊಂಬು.

Embryo, s.n. ಪಿಂಡಾಯತ, ಭ್ರೂಣವು, ಗರ್ಭವು.

Emendation, s. n. ತಿದ್ದುವಿಕೆ, ತಿದ್ದುಪಾಟು.

Emerald, s. n. ಗಾರುತ್ಮತವು, ಪಚ್ಚೆ, ಗರುಡಪಚ್ಚೆ, ಮರತಕ, ಪಸುವಣ್ಣೆ, ಜಾಗವರಲು, ಮರಕತ, ಅಶ್ಮಗರ್ಭ, ಹರಿನ್ಮಣಿ, ಪಚ್ಚವರಲು.

To Emerge, v. n. ಹೊರಡು, ಮೂಡಿಗೇಳು, ಹುಟ್ಟು. v. *To issue, proceed, rise.*

Emergence, Emergency, s. n. (*sudden occasion*) ಅವಸರ; (*rising*) ಏಳುವಿಕೆ, ಉತ್ಥಾನ.

Emergent, a. ಅವಸರದ, ಅಗತ್ಯದ.

Emeroids, s. n. ಮೂಲವ್ಯಾಧಿ, ಅರ್ಶರೋಗ.

Emetic, s. n. ವಾಂತಿಯೌಷಧ. v. *Vomit.*

Emigrant, s. n. ಪ್ರವಾಸಿ, ಸ್ವಾಸ್ಥ್ಯದವ, ವಲಸೆಯವ.

To Emigrate, v. a. ಪ್ರವಾಸಮಾಡು, ಸ್ವಾಸ್ಥ್ಯಹೋಗು, ವಲಸೆಹೋಗು.

Emigration, s. n. ಪ್ರವಾಸಿಕೆ, ಸ್ವಾಸ್ಥ್ಯಹೋಗುವಿಕೆ, ವಲಸೆಹೋಗುವಿಕೆ. v. *Departure, travelling.*

Eminence, Eminency, s. n. ಎತ್ತರ, ಉಚ್ಚ, ಅತಿಶಯ. v. *Exaltation, grandeur, reputation.*

Eminent, a. ಅಧಿಕದ, ಹೆಚ್ಚಿನ, ದೊಡ್ಡ, ಪ್ರಸಿದ್ಧಿಯುಳ್ಳ, ಪ್ರಖ್ಯಾತಿಯುಳ್ಳ, ಹೆಸರುಳ್ಳ, ಭಾರಿಯಾದ. v. *Exalted, high, lofty.* (*to render eminent*) ದೊಡ್ಡವನಾಗಿ ಮಾಡ, ಪ್ರಖ್ಯಾತೀ ಮಾಡ; (*to become eminent*) ಹೆಸರುಗೊಳ್ಳ, ಪ್ರಖ್ಯಾತಿಯಾಗ.

Eminently, ad. ಅಧಿಕವಾಗಿ, ಹೆಚ್ಚಾಗಿ. v. *Conspicuously.*

Emissary, s. n. ಹೊಂಚುಗಾರ, ಪಾಳಿಗಾರ, ಚಾರನು, ಬೇಹುಗಾರ.

Emission, s. n. ಹೊರಡಿಸುವಿಕೆ. v. *Mission.* (*emissio seminis*) ವೀರ್ಯಪತನ, ಶುಕ್ಲಪತನ, ಮೈಸಡಲುವಿಕೆ, ಇಂದ್ರಿಯಸ್ಖಲನ.

To Emit, v. a. (*to send forth*) ಹೊರಡಿಸ, ಕಳುಹಿಸ, ಪ್ರಸರಿಸ; (*in coitu*) ವೀರ್ಯಪತನಾ ಮಾಡ, ಮೈಸಡ್ಲ, ನಡುವುಸಡ್ಲ; (*a scent*) ಘಮಘಮಿಸ, ಎಸಿಯ.

Emenagogue, s. n. ಮುಟ್ಟಿನೌಷಧ.

Emmet, s. n. ಇರುವು. v. *Ant, pismire.*

Emollient, s. n. ಶಾಂತ್ರವಾದವುಷಧ.

Emolument, s. n. ಆದಾಯ, ಲಾಭ, ನಫೆ. v. *Advantage, profit.*

Emotion, s. n. ದಿಗಿಲು, ಆತುರ, ಸಂಭ್ರಮ, ಕಕ್ಕಸ. v. *Agitation.*

To Empale, v. a. (*a person*) ಮೋಳು ಹೊಡೆಯ, ಶೂಲದಲ್ಲಿ ಹಾಕ; (*to inclose*) ಆಕ್ರಮಿಸ, ಆವರಿಸ, ಆಕಾರಾಮಾಡ.

Emperor, s. n. ಚಕ್ರವರ್ತಿ, ಸಾರ್ವಭೌಮ, ಏಕಛತ್ರಾಧಿಪತಿ.

Emphasis, s. n. ಅವಧಾರಣೆ.

Emphatic, a. ಅವಧಾರಣೆಯ. v. *Forcible, energetic.*

Emphysematous, a. ಉಬ್ಬಿದ, ಬಾತ.

Empire, s. n. ಸಂಸ್ಥಾನ, ರಾಜ್ಯ.

Empiric, s. n. ಠಕ್ಕವೈದ್ಯ, ಭೈಷಜಗಾರ.

To Employ, v. a. (*to busy*) ಕಾಲಾಕಳಿಯ, ಕಾಲಹರಣಾ ಮಾಡ; (*to use*) ಬಳಸಿಕೊಳ್ಳ, ಪ್ರಯೋಜನಕ್ಕೆ ತೆಗೆದುಕೊಳ್ಳ, ಆಳ; (*one's money*) ಬಡ್ಡಿಗೆ ಕೊಡ; (*as servants*) ಉದ್ಯೋಗಾ ಕೊಡ, ಕೆಲಸದಲ್ಲಿಡ; (*to spend*) ಖರ್ಚು ಮಾಡ, ವೆಚ್ಚಾ ಮಾಡ.

Employer, s. n. ಉದ್ಯೋಗಾ ಕೊಡುವವ.

Employment, s. n. ಉದ್ಯೋಗ, ಕೆಲಸ. v. *Business.*

Emporium, s. n. ವರ್ತಕ ಸ್ಥಾನ, ಭಾರೀಪೇಟೆ.

To Empoverish, v. a. ಬಡತನಾ ಮಾಡ; (*a land*) ನಿಸ್ಸಾರಾ ಮಾಡ.

Empoverishment, s. n. ನಿಸ್ಸಾರಾ ಮಾಡುವದು, ನಿರ್ದ್ರವ್ಯಾ ಮಾಡುವದು. v. *Diminution, waste.*

To Empower, v. a. ಅಧಿಕಾರಾ ಕೊಡ, ಉದ್ಯೋಗಾ ಕೊಡ. v. *To authorize, commission.*

Empress, s. n. ರಾಣೆ, ಸಂಸ್ಥಾನೀಕಳು, ಅರಸಿತಿ.

Emptiness, s. n. ಶೂನ್ಯ, ರಿಕ್ತ, ಖಾಲಿ, ಬರಿದು. v. *Folly, vanity, ignorance.*

Empty, a. ಬರಿಯ, ಶೂನ್ಯದ, ಖಾಲಿಯಾದ, ವಶಿಕ, ತುಚ್ಛ, ರಿಕ್ತವಾದ; (*ignorant*) ಶೂನ್ಯಮತಿಯ, ಬುದ್ಧಿಯಿಲ್ಲದ; (*unburdened*) ಭಾರವಿಲ್ಲದ; (*an empty house*) ಹಾಳುಮನೆ, ಒಕ್ಕಲಿಲ್ಲದಮನೆ; (*an empty title*) ಬರಾ ಪ್ರತಿಷ್ಠೆ, ಬರೀ ಪ್ರತಿಷ್ಠೆ, ಬರಾ ಬಡಾಯಿ; (*an empty hand*) ರಿಕ್ತಹಸ್ತ, ಬರೀಕೈ.

To Empty, v. a. ಬರಿದುಮಾಡ, ಖಾಲೀಮಾಡ, ರಿಕ್ತಮಾಡ; (*to empty a tank*) ಬದಿಕೆತೆಗೆಯ, ಭಾವಿಯಕೆಸರುತೆಗೆಯ. v. *To exhaust.*

Empty handed, a. ಬರಿಗೈಯ್ಯವ, ರಿಕ್ತಹಸ್ತವುಳ್ಳ.

Empty headed, a. ಸೂನ್ಯಮತಿಯುಳ್ಳ, ಧಡ್ಡತನದ, ಮಡ್ಡತನದ.

Empyema, s. n. ಕೀವುಗಟ್ಟು.

Empyrean, s. n. ಸತ್ಯಲೋಕ.

Empyreumatical, a. ಛಾಲನಾತದ.

To Emulate, v. a. (*to rival*) ಹುರುಡುಮಾಡ, ಪ್ರತಿಘಟಿಸ, ಪೋಟೀಮಾಡ; (*to imitate*) ಅನುಕರಿಸ.

Emulation, s. n. (*rivalry*) ಹುರುಡು, ಪೋಟಿ, ಜಿಗೀಷೆ; (*envy*) ಹೊಟ್ಟೇಕಿಚ್ಚು, ಈರ್ಷೆಯು, ಅಸೂಯೆ.

Emulous, a. (*desirous of superiority*) ಜಿಗೀಷುವಾದ, ಹುರುಡುಳ್ಳ; (*contentious*) ವಿವಾದಮಾಡುವ, ವಾದಪ್ರೀತಿಯುಳ್ಳ, ಜಗಳಗಂಟಿಯಾದ.

Emunctories, s. n. ನವದ್ವಾರಗಳು.

To Enable, v. a. ಬಲಕರಾಮಾಡ, ಬಲಾಕೊಡ, ಅಧಿಕಾರಾಕೊಡ, ಸಾಮರ್ಥ್ಯವುಂಟುಮಾಡ.

To Enact, v. a. ಕಟ್ಲೇಮಾಡ, ನಡೆಯಿಸ, ಆಗಮಾಡ. v. *To decree, establish, act, perform.*

Enamel, s. n. ಖಚಿತವು, ಕೆತ್ತುವಿಕೆ.

To Enamel, v. a. ಖಚಿಸ, ಕೆತ್ತು.

Enameller, s. n. ಖಚಿಸುವವ, ಕೆತ್ತುವವ, ಹೊದಗುವವ.

To Enamour, v. a. ಒಲಿಸ, ವಲಪಿಸ, ವಿಮೋಹಿಸ, ಪ್ರಮೋಹಿಸ.

Enamoured, part. ಒಲಿದ, ವಶವಾದ, ಪ್ರಮೋಹಿಸಲ್ಪಟ್ಟ.

To Encamp, v. a. ಮೊಕಾಮುಮಾಡ, ದಂಡಿಳಿಯ, ಬಾವಣೀಮಾಡ.

Encampment, s. n. ಬಾವಣಿ, ಶಿಬಿರವು, ಮೊಕಾಮು. v. *Camp.*

To Enchant, v. a. ಅಭಿಮಂತ್ರಿಸ, ಮರುಳುಮಾಡ, ಒಲಿಸ, ವಿಮೋಹಿಸ. v. *To conjure, fascinate.* (*to delight*) ಸಂಭ್ರಮಿಸ, ಸಂತೋಷಪಡಿಸ. v. *To charm.*

Enchanted, part. ಒಲಿಸಿದ, ಭ್ರಮೆಯಾದ.

Enchanter, s. n. ಗಾರುಡಿಗಾರ, ಮಂತ್ರಗಾರ. v. *Magician.*

Enchanting, a. ಪ್ರೀತಿಕರ, ಆಹ್ಲಾದಕರ.

Enchantingly, ad. (*delightfully*) ಇಂಪಾಗಿ, ಆಹ್ಲಾದಕರವಾಗಿ; (*by enchantment*) ಮಂತ್ರವಾಗಿ.

Enchantment, s. n. ಗಾರುಡತನ, ಮಂತ್ರ, ಇಂದ್ರಜಾಲ.

Enchantress, s. n. (*sorceress*) ಮಂತ್ರಗಾರ್ತಿ, ಮಾಟಗಾರ್ತಿ; (*a beautiful woman*) ರೂಪವತಿ, ಸೌಂದರ್ಯವತಿ, ಸೊಬಗುಳ್ಳವಳು.

To Enchase, v. a. ಕೆತ್ತು, ಕೆತ್ತನೆಮಾಡ, ಅಲಂಕರಿಸ.

To Encircle, v. a. ಸುತ್ತಿಗೆಸುತ್ತು, ಮುತ್ತಿಕೊಳ್ಳ. v. *To environ, surround, inclose.*

To Enclose, v. a. ಬಿಡಾಯಿಸ, ಮಲಮೂಪುಮಾಡ, ಆಕ್ರಮಿಸ, ಪ್ರಾಕಾರಹಾಕ, ಬೇಲೀಹಾಕ. v. *To encircle, environ, fence, contain.*

Encloser, s. n. ಆಕ್ರಮಿಸುವವ, ಪ್ರಾಕಾರಹಾಕುವವ.

Enclosure, s. n. (*fence*) ಪ್ರಾಕಾರ, ಅಪಾಶ್ರಯ, ಪರಾಲಂಕೆಪ್ಪ, ಬೇಲಿ; (*bounds*) ಮೇರೆ, ಪ್ರಾಂತ್ಯ, ಸರಹದ್ದು; (*the place enclosed*) ಆಶ್ರಯ.

Encomiast, s. n. ಭಟ್ಟ, ವಂದಿ, ಮಾಗಧ, ಹೊಗಳುವವ, ಕೈವಾರದವ.

Encomium, s. n. ಹೊಗಳಿಕೆ, ಶ್ಲಾಘನೆ, ಸ್ತೋತ್ರ. v. *Praise.*

To Encompass, v. a. ಆಕ್ರಮಿಸ, ಸುತ್ತಿಕೊಳ್ಳ, ಸುರಿಗೇಸುತ್ತ, ಮುತ್ತಿಕೊಳ್ಳ.

Encompassing, s. n. ಪರಿಸರ್ಪ, ಪರಿಕ್ರಿಯೆ.

Encore, ad. ಮತ್ತು, ತಿರಿಗೆ, ಮರಳಿ. v. *Again.*

Encounter, s. n. (*battle*) ಯುದ್ಧ, ಜಗಳ, ಜುದ್ಧ, ಕದನ. v. *Battle, fight, combat, duel.* (*dispute*) ವಾದ, ಹೋರಾಟ; (*accosting*) ಸಂಬೋಧಿಸುವದು, ಅಭಿಮುಖೀಕರಿಸುವದು; (*sudden meeting*) ಸಂದರ್ಶನ, ಎದುರುಬೀಳ್ವಿಕೆ.

To Encounter, v. a. (*to combat*) ಜಗಳವಾಡ, ಕದನವಾಡ, ಲಡಾಯಿಮಾಡ; (*to meet*) ಸಂಧಿಸ, ಎದುರುಬೀಳ.

To Encourage, v. a. ಧೈರ್ಯಕೊಡ, ಭರವಸಾಕೊಡ, ಬೆಂನುಕಟ್ಟ.

Encouragement, s. n. ಆಶ್ರಯ, ಆಧಾರ, ಧೈರ್ಯಕೊಡುವಿಕೆ, ಆಸರೆ, ಉತ್ಸಾಹವು, ಬೆನ್ನುಕಟ್ಟುವಿಕೆ. v. *Incitement.*

Encourager, s. n. ಧೈರ್ಯಕೊಡುವವ, ಬೆಂನುಕಟ್ಟುವವ.

To Encroach, v. a. ಆಕ್ರಮಿಸ, ಮೀರ.

Encroacher, s. n. ಆಕ್ರಮಿಸುವವ, ಮೀರುವವ.

Encroachment, s. n. ಆಕ್ರಮಣ, ಮೀರಿಕೆ.

To Encumber, v. a. ತೊಂದರೆಕೊಳಿಸ, ಅಟಂಕಿಸ. v. *To impede, load, clog, embarrass, entangle, obstruct.*

Encumbrance, s. n. ತೊಂದರೆ, ಅಟಂಕ, ಅಡ್ಡಿ.

Encyclopedia, s. n. ಸಾರಸಂಗ್ರಹದ ಪುಸ್ತಕ.

End, s. n. (*extremity*) ತುದಿ, ಕೊನೆ, ಮೊನೆ, ಅಂತ; (*remnant*) ತರಸು, ಕರೆ; (*end of a month*) ಮಾಸಾಂತ್ಯ; (*conclusion*) ತೀರುವೆ, ಸಮಾಪ್ತಿ, ಮುಗಿವು; (*end of a book*) ಸಮಾಪ್ತಿಯು; (*end of a turban*) ಚುಂಗು, ಜುಂಗು; (*purpose*) ತಾತ್ಪರ್ಯ, ಉದ್ದೇಶ್ಯವು; (*death*) ಕಡೆಗಾಲ; (*the end of the world*) ಯುಗಾಂತ, ಜಗದಂತವು; (*the hair to stand on end*) ಕೂದಲುನಿಗರಿಸ, ರೋಮೋದ್ಗಮವಾಗ, ಪುಲಕಾಂಕುರವಾಗ; (*to make both ends meet*) ಆದಾಯವೆಚ್ಚ ಸರಿಯಾಗಿಮಾಡ, ಹಾಸಿಗೆನೋಡಿ ಕಾಲುನೀಡಿಕೊಳ್ಳ; To the *end* that it may be done ಅದಾಗುವದಹಾಗೆ; (*to be at one's wit's end*) ದಿಕ್ಕುತಪ್ಪಿರುವದು; (*to be all for one's own ends*) ಸ್ವಕಾರ್ಯನಾಗಿಸಡೆಯ, ಸ್ವೋದರಂಭರಿಯಾಗಿರ; (*to no end*) ನಿರರ್ಥಕ, ವ್ಯರ್ಥ, ಬರೀ; (*from beginning to end*) ಮೊದಲಿಂದ ಕಡೇಮಟ್ಟಿಗೂ; (*to stand on end*) ನಿಲಿಯಡ, ನಿಂದಿರಿಸ, ನಿಲ್ಲಿಸ; (*to the end of life*) ಪ್ರಾಣಾಂತದವರಿಗ; (*in the end*) ಕಡೇಲಿ; (*to what end?*) ಯಾವದಕ್ಕೆ, ಏತಕ್ಕೆ.

To End, v. a. ತೀರಿಸು, ಮುಗಿಸು, ಸಂಪೂರ್ಣಮಾಡು, ಸಮಾಪಿಸು.

To End, v. n. ಮುಗಿಯು, ತೀರು, ಪೂರ್ತಿಯಾಗು.

To Endanger, v. a. ಮೋಸದಲ್ಲಿಡು, ಪ್ರಮಾದಾಮಾಡು. v. *To hazard.*

To Endear, v. a. ಪ್ರೇಮಹುಟ್ಟಿಸು, ಪ್ರೀತಿಹುಟ್ಟಿಸು, ಎರಕಪಡಿಸು, ವಾತ್ಸಲ್ಯಪಡಿಸು.

Endearment, s. n. ಪ್ರೇಮ, ಪ್ರೀತಿ, ಎರಕ. v. *Love.*

Endeavour, s. n. ಹರಣ, ಯತ್ನ, ವಿಚಾರಣೆ, ಪ್ರಯತ್ನ.

To Endeavour, v. a. ಘಟ್ಟಿಹಂದಿಗೆಮಾಡು, ಪ್ರಯತ್ನಮಾಡು, ಪ್ರಯಾಸತೆಗೆದುಕೊಳ್ಳು, ವಿಚಾರಿಸು.

Endeavourer, s. n. ವಿಚಾರಿಸುವವ, ಪ್ರಯಾಸತೆಗೆದುಕೊಳ್ಳುವವ.

Ended, part. ಮುಗಿದ, ತೀರಿದ, ಸಂಪೂರ್ತಿಯಾದ.

Endemick, a. ಸುಂಕಿನ, ಹತ್ತುವ, ಸಾಂಕ್ರಾಮಿಕವಾದ.

To Endite, v. a. ತಪ್ಪುಹೊರಿಸು, ಅಪರಾಧಹೊರಿಸು.

Enditement, s. n. ತಪ್ಪುಹೊರಿಸೋಣ.

Endless, a. ಅನಂತ, ಅಂತ್ಯವಿಲ್ಲದ, ಅಪಾರದ, ಮುಗಿವಿಲ್ಲದ.

Endlessly, ad. ಅನಂತವಾಗಿ, ಅಪಾರವಾಗಿ, ಮುಗಿವಿಲ್ಲದೇ, ಕಡೆಯಿಲ್ಲದೇ.

Endlessness, s. n. ಅಪಾರತ್ವ, ಅಪರಿಮಿತತ್ವ. v. *Perpetuity, eternity.*

To Endorse, v. a. ಪೈದಸ್ತಿಗೆಮಾಡು, ಜಬಾಬುಬರೆಯು, ಕೈಬರಹಮಾಡು.

Endorsement, s. n. ಪೈದಸ್ತಿ. v. *Superscription.*

To Endow, v. a. ಮಾನ್ಯಕೊಡು, ಬಹುಮಾನಕೊಡು.

Endowment, s. n. ವರ, ಇನಾಮು, ಉಂಬಳಿ, ಕೊಡಗಿ, ಮಾಂನ್ಯ, ಸ್ವಾಸ್ತ್ಯ; *(endowed with)* ಸಂಯುಕ್ತ, ಸಂಯುತ.

To Endue, v. a. ಸಗಾರಿತಯಾಕೊಡು, ವರಾಕೊಡು.

Endurance, s. n. ಸೈರಣೆ, ತಾಳ್ವಿಕೆ, ತಾಳ್ಮೆ; ನೆಲನಿಲಿಕೆ, ತಿತಿಕ್ಷೆ. v. *Continuance, lastingness.*

To Endure, v. a. ತಾಳು, ಕ್ಷಮಿಸು, ಸೈರಿಸು, ಓರ್ಚು. v. *To undergo, support, sustain. (to last)* ಬಾಳಿಕೆಬರು, ಇರು; I cannot *endure* it ನಾನುತಾಳಲಾರೆ; I cannot *endure* the idleness of that sluggard ಆಮೈಗಳ್ಳನಮಾಂದ್ಯತ್ವವನ್ನುನಾನುಸೈರಿಸಲಾರೆ.

Endurer, s. n. ತಾಳುವವ, ವಹಿಸುವವ, ಸೈರಿಸುವವ, ಓರ್ಚುವವ.

Endwise, ad. ನಿಲ್ಲಿಕೆಯಾಗಿ; *(a pole set endwise)* ನೆಟ್ಟಿಕೊಂಬು.

Enemy, s. n. ಅರದಿ, ದ್ವಿಟ್ಟು, ದ್ವಿಷನು, ವೈರಿ, ಶತ್ರು, ದ್ವೇಷಿಯು, ಹಗೆಯಾಳು, ಪರುವಸಲನು. v. Also *adversary, antagonist.* The Hindoos mention ಚತುರೋಪಾಯ *four means of success against an enemy*; as, ಸಾಮವು *conciliation,* ದಾನವು *presents or gifts,* ಭೇದವು *dividing, creating dissension*; and ದಂಡವು *chastisement.*

Energetic, a. ಬಲಿಷ್ಠವಾದ, ಬಲೀಯವಾದ, ಚೆಸಿಯಾದ, ಸುರುಸುರುವಾದ. v. *Efficacious, forcible.*

Energy, s. n. ಬಲಿಷ್ಠತೆ, ಬಲೀಯ್ಯತೆ, ಚೆಸಿ, ಚುರುಕು. v. *Force, vigour.*

To Enervate, v. a. ದುರ್ಬಲಾಮಾಡು, ಬಲಹೀನಪಡಿಸು. v. *To weaken.*

Enervation, s. n. ದೌರ್ಬಲ್ಯವು, ಬಲಹೀನತ್ವ.

To Enfeeble, v. a. ದುರ್ಬಲಾಮಾಡು, ಬಲಹೀನಾಮಾಡು, ನಿಶ್ಚೈತನ್ಯಾಮಾಡು.

To Enforce, v. a. ಬಲಾತ್ಕಾರಾಮಾಡು, ಸ್ಥಿರಪಡಿಸು, ಬಲೋದ್ಬಂಧೀಮಾಡು. v. *To compel.*

Enforcement, s. n. ಬಲುಗಾಯಿಕೆ, ಬಲವಂತ್ರ. v. *Compulsion.*

To Enfranchise, v. a. ಬಿಡಿಸು, ಬಿಡುಗಡೀಮಾಡು, ವಿಮೋಚನಾಮಾಡು. v. *To liberate.*

To Engage, v. a. *(to fight)* ಜುದ್ಧಾಮಾಡು, ಕಾದು, ಯುದ್ಧಾಮಾಡು, ಝಗಳವಾಡು; *(to attack)* ಹೊಗಬೀಳು; *(one's self in business)* ಕೈಹಚ್ಚು, ತೆಗಳು; *(to engage the attention)* ಮನಸ್ಸೆಳಕೊಳ್ಳು, ಮನಸ್ಸುನಿಲ್ಲಿಸು; *(to employ servants)* ಉದ್ಯೋಗಾಕೊಡು, ಕೆಲಸದಲ್ಲಿಡು; *(to bring over to a party)* ಭಾಗಕ್ಕೆಹಾಕು, ಕಡೆಗೆ ಕರಕೊಂಡುಬರು, ಪಕ್ಷಕ್ಕೆಸೇರಿಸು; *(to agree)* ಒಪ್ಪು, ಸಂಮತಿಸು, ಒಡಂಬಡಿಕೆಯಾಗು; *(to engage, be security for a debt)* ಹೊಣೆಯಾಗು; *(to engage the affections)* ಪ್ರೀತಿಸಂಪಾದಿಸು.

Engaged, part. *(in a business)* ಕೆಲಸದಲ್ಲಿರುವ. v. *Employed.* *(to be engaged)* ಕೆಲಸದಲ್ಲಿರು.

Engagement, s. n. *(battle)* ಯುದ್ಧ, ಜಗಳ, ಜುದ್ಧ; *(adherence to a party)* ಪಕ್ಷಕ್ಕೆಸೇರೋಣ; *(appointment)* ನೇಮಕ; *(an engagement to pay a debt)* ಹೊಣೆ, ಜಾಮೀನು; *(engagement or contract)* ಒಪ್ಪಂದವು; *(engagement of the attention)* ಮನಸ್ಸೆಳೆಯೋಣ, ಮನಸ್ಸುನಿಲ್ಲಿಸೋಣ.

Engaging, a. ಮನಸೆಳೆಯುವ, ಮನೋರಂಮ್ಯವಾದ, ಪ್ರೀತಿಕರವಾದ.

To Engender, v. a. *(beget)* ಹುಟ್ಟಿಸು, ಉತ್ಪತ್ತೀಮಾಡು; *(to be generated)* ಹುಟ್ಟು, ಉತ್ಪತ್ತಿಯಾಗು; *(to bring forth)* ಹೆರು; *(to engender strife)* ಮಿತ್ರಭೇದಾಮಾಡು, ಜಗಳಾಹುಟ್ಟಿಸು.

Engine, s. n. ಯಂತ್ರ, ಸೂತ್ರ; *(an engine, device)* ಉಪಾಯವು.

Engineer, s. n. *(a director of artillery)* ಫಿರಂಗಿ ನಡಿಸುವವ, ಗೊಲಂದಾಜು; *(a director of buildings or works)* ಮರಾಮತುದಾರ, ಇಮಾರತೀದಾರ, ಬೇಲುದಾರ.

English, s. n. ಇಂಗ್ಲೀಷು, ಇಂಗರೇಜು; *(language)* ಫಿರಂಗೀಮಾತು, ಇಂಗರೇಜುಭಾಷೆ.

To English, v. a. ಇಂಗ್ಲೀಷುಮಾಡು, ಇಂಗ್ಲೀಷಿನಲ್ಲಿಟೀಕಿಸು.

To Engrain, v. a. ಅಚ್ಚರಂಗಾಯಿಸು, ಚನ್ನಾಗಿ ಬಣ್ಣಾಹಾಕು.

Engrained, part. ಅಚ್ಚರಂಗಾಯಿಸಿದ.

To Engrave, v. a. ಕಲ್ಲುಕೆತ್ತು, ಕೆತ್ತು. v. *To impress, imprint.*

Engraven, a. ಕಡಿದ, ಕೆತ್ತಿದ.

Engraver, s. n. ಕಲ್ಲಾಯ್ತನು, ಕೆತ್ತನೆಗಾರ, ಕಲ್ಲುಕುಟಿಗ.

Engraving, s. n. ಚಿತ್ರ, ಕೆತ್ತಿಕೆ.

To Engross, v. a. *(to thicken)* ಮುದ್ದೆಮಾಡು, ಘಟ್ಟಿಮಾಡು; *(to increase in bulk)* ದೊಡ್ಡದುಮಾಡು; *(to seize in the gross)* ಆಕ್ರಮಿಸು, ಬಾಯ್ಮಾಡು, ವಶಮಾಡಿಕೊಳ್ಳು; *(to engross the attention)* ಮನಸೆಳೆಯು, ಮನವಾಕರ್ಷಿಸು; *(to engross commodities)* ಸತ್ತಿಗೆಯೆತ್ತು, ಸರಕೊಪ್ಪಂದಾಮಾಡು.

Engrosser, s. n. ವಶವರ್ತಿ, ಆಕ್ರಮಿಸುವವ, ಬಾಯ್ಮಾಡುವವ.

To Enhance, v. a. *(a price)* ಬೆಲೆಹೆಚ್ಚಿಸು, ಕ್ರಯವನ್ನಧಿಕಮಾಡು; *(to raise in esteem)* ಮಾನಹೆಚ್ಚಿಸು, ಗಣ್ಯತೆಹೆಚ್ಚಿಸು.

Enhancement, s. n. ಹೆಚ್ಚಿಕೆ, ಬೆಳೆಯುವಿಕೆ.

Enigma, s. n. ಒಗಟೆ, ಪುದುರು, ಪ್ರಹಳಿಕೆ, ಪ್ರಹೇಳಿಕೆ.

Enigmatical, a. ಒಗಟೆಯಾದ, ಗುಪ್ತವಾದ, ಮರ್ಮದ. v. *Ambiguous, obscure.*

Enigmatist, s. n. ಸುತ್ತುಕಥೆಯು, ಮರೆಮಾತಿನವ, ಒಗಟೆಮಾಡುವವ.

To Enjoin, v. a. ನಿರೂಪಿಸು, ಆಜ್ಞಾಪಿಸು. v. *To command, order, prescribe.*

To Enjoy, v. n. ಅನುಭವಿಸು, ಭೋಗಿಸು, ರಮಿಸು; *(to enjoy one's self)* ಸಂಭ್ರಮಪಡು, ಹರ್ಷಪಡು; *(to enjoy life)* ಸೌಖ್ಯವನುಭವಿಸು, ಸುಖವಾಗಿರು; *(to enjoy health)* ಆರೋಗ್ಯವಾಗಿರು.

Enjoyer, s. n. ಅನುಭವಿಕ, ಅನುಭವಜ್ಞ.

Enjoyment, s. n. ಅನುಭೋಗ, ಉಪಭೋಗ, ಅನುಭವಿಕೆ, ಅನುಭವ.

To Enlarge, v. a ವಿಸ್ತಾರಮಾಡು, ಪ್ರಬಲಮಾಡು, ದೊಡ್ಡದುಮಾಡು, ಹೆಚ್ಚಿಸು. v. *To augment, extend, expand, stretch.* *(set at liberty)* ಬಿಡಿಸು, ಬಿಡುಗಡೆಮಾಡು.

Enlargement, s. n. ಹೆಚ್ಚುವಿಕೆ, ವಿಸ್ತರಿಸುವಿಕೆ. v. *Augmentation.* *(release from confinement)* ಬಿಡುಗಡೆ.

To Enlighten, v. a. ಪ್ರಕಾಶಿಸು, ಬೆಳಕುಕೊಡು. v. *To illuminate.*

Enlightened, part. ಪ್ರಕಾಶಿಸಿದ, ಜ್ಞಾನಿಯಾದ.

Enlightener, s. n. ಪ್ರಕಾಶಿಸುವವ, ಜ್ಞಾನಕೊಡುವವ.

To Enlist, v. a. ಚಾಕರಿಯಲ್ಲಿಬರೆಯು, ಉದ್ಯೋಗದಲ್ಲಿದಾಖಲುಮಾಡು.

To Enliven, v. a. *(to raise, give vigour or sprightliness)* ರಂಜಿಸು, ಉಲ್ಲಾಸಪಡಿಸು; *(to give life)* ಪ್ರಾಣಕೊಡು.

Enmity, s. n. ಪ್ರತಿಕೂಲ, ವೈರಿತ್ವ, ವೈರ, ವಿರೋಧ, ವಿದ್ವೇಷವು, ಶಾತ್ರವವು. v. *Hatred, malice, malevolence, opposition.*

To Ennoble, v. a. ಹೆಚ್ಚಿಸು, ಪ್ರತಿಷ್ಠೆಮಾಡು, ದೊಡ್ಡವನಾಗಿಮಾಡು.

Enormity, s. n. *(depravity)* ಅಪರಾಧ, ಕೇಡು, ಕೆಟ್ಟತನ. v. *Corruption, crime.* *(excess)* ಬಹುಕೆಟ್ಟತನ, ಅತಿದುರ್ಮಾರ್ಗತನವು.

Enormous, a. *(excessive)* ಅಧಿಕಾಪರಾಧಿಯ, ಅಧಿಕಾಧಿಕವಾದ; *(irregular)* ಕ್ರಮವಿಲ್ಲದ.

Enormously, ad. ಬಹುಅಧಿಕಾಧಿಕವಾಗಿ, ವಿಪರೀತವಾಗಿ, ಅಘೋರವಾಗಿ.

Enormousness, s. n. ಅತಿದುರ್ಮಾರ್ಗತನ, ವಿಪರೀತದುರ್ಮಾರ್ಗತನ.

Enough, ad. ಸಾಕು. v. *Sufficiency.* The verse is well *enough* ಆಶ್ಲೋಕ ಠಾಗಿಧೆ, or ಆಶ್ಲೋಕ ಠೀಂಗಾಠಾಂಗಾಅದೆ; Will this be *enough?* ಇದುಸಾಲುವದೇ, or ಸಾಕಾಗುವದೇ; That is *enough* ಅದುಸಾಕು; *Enough* and to spare, more than *enough* ಅಧಿಕ, ಹೆಚ್ಚು; It is true *enough* ಅದುಸರಿಜವೆ, or ಅದುನಿಶ್ಚಯವೆ; Sure *enough* ಸರಿಜವೆ; Be kind *enough* to come ದಯಮಾಡಿಬಾ.

Enpassant, ad. ಮಾರ್ಗದಲ್ಲಿ, ಹಾದಿಯಲ್ಲಿ; *(to call enpassant)* ಮಾರ್ಗದಲ್ಲಿ ದರ್ಶಿಸು.

To Enrage, v. a. ಸಿಟ್ಟೆಬ್ಬಿಸು, ಕ್ರೋಧೋದ್ರೇಕಮಾಡು, ಉಚ್ಚೆಬ್ಬಿಸು, ಕೋಪವೆಬ್ಬಿಸು. v. *To exasperate.*

To Enrapture, v. a. ಸಂಭ್ರಮಪಡಿಸು, ಆನಂದಪಡಿಸು, ಸಂತೋಷಪಡಿಸು.

To Enrich, v. a. ಭಾಗ್ಯವಂತನಾಗಿಮಾಡು, ಸಂಪತ್ತುಕೊಡು. v. *To fertilize.*

To Enrol, v. a. ಬರಹಹಾಕು. v. *To record, enlist.*

Enrolment, s. n. ಬರಹಹಾಕುವಿಕೆ, ಹಾಯಸು, ಲಿಖಿತ, ಬರಹ.

To Ensanguine, v. a. ರಕ್ತಮಯಮಾಡು.

To Enshrine, v. a. ಬಚ್ಚಿಡು, ಜೋಪಾನಮಾಡು.

Ensign, s. n. *(flag)* ಪತಾಕೆ, ನಿಶಾನಿ, ಪಳವಿಗೆ, ಧ್ವಜ, ಬಾವುಟ, ಕೊಡಿ, ಝಂಡೆ. v. *Banner, standard, badge.* *(officer)* ಪತಾಕೆಯವ, ನಿಶಾನಿಯವ, ಪಳವಿಗೆಯವ.

Ensign-bearer, s. n. ಝುಂಡ್ಗೆಯವ.

To Enslave, v. a. ದಾಸನಾಗಿಮಾಡು, ಗುಲಾಮನಾಗಿಮಾಡು.

To Ensnare, v. a. ಬಲೆಗೆಳೆವ, ಬಲೆಹಾಕು, ಬಲೆಬೀಸು.

To Ensue, v. a. ಹತ್ತು, ಹಿಂಬಾಲಿಸು, ಹಿಂಡೊರದು. v. *To follow, succeed.*

To Ensue, v. n. ಲಭ್ಯವಾಗು, ಪ್ರಾಪ್ತವಾಗು, ಸಂಭವಿಸು, ದೊರೆ, ಅನುಸರಿಸು.

Ensurance, s. n. *(on goods)* ಶಿಸ್ತುಪಡುವಿಕೆ.

To Ensure, v. a. ಶಿಸ್ತುಪಡಿಸು, ಬಂದೋಬಸ್ತುಮಾಡು. v. *To secure.*

Ensurer, s. n. ಹೊಣೆಗಾರನು, ಭಾರಕರ್ತ.

To Entail, v. a. ಹತ್ತಿಸು, ತಗಲಿಸು. v. Also *to fix, settle.*

To Entangle, v. a. *(thread, &c)* ತೊಡಕುಬೀಳಿಸು, ಸಿಕ್ಕುಬೀಳಿಸು; *(to puzzle)* ತೊಂದರೆಕೊಲ್ಲಿಸು. v. *To perplex, confound, distract, confuse, twist, involve.*

Entanglement, s. n. ತೊಡಕು, ಸಿಕ್ಕು. v. *Confusion;* *(perplexity)* ತೊಂದರೆ.

To Enter, v. a. ಪ್ರವೇಶಿಸು, ಹೊಗು, ಒಳಗೆಹೋಗು, ನುಸುಳು. v. *To initiate, introduce, pene-*

trate. (to enter upon a work) ಪ್ರಾರಂಭಿಸು, ಯತ್ನಿಸು, ಮುಂಕೊಳ್ಳು, ಕೈಹಚ್ಚು; *(to enter an action)* ಅರ್ಜಿಯಹಾಕು; *(to insert)* ಬರದುಹಾಕು; *(to enter into the merits of a cause)* ಪರಿಶೋಧಿಸು, ಚನ್ನಾಗಿವಿಚಾರಿಸು.

Enterprise, s. n. ಸಾಹಸ, ಕಷ್ಟಕೆಲಸ, ಕೈಗಳಿಕೆ, ಮುಂದುಬೀಳುವಿಕೆ. v. *Achievement, exploit.*

To Enterprise, v. a. ಪ್ರಯತ್ನಿಸು, ವಿಚಾರಿಸು. v. *To attempt, undertake.*

Enterprising, a. ಸಾಹಸದ, ದುಡುಕಿನ.

To Entertain, v. a. *(converse with)* ಸಂಭಾಷಿಸು; *(to entertain one's self)* ಉಲ್ಲಾಸಮಾಡಿಕೊಳ್ಳು, ಬೇಸರಿಕೆಕಳೆದುಕೊಳ್ಳು; *(to entertain a guest)* ಉಪಚರಿಸು, ಪರಾಮರಿಸು, ಆಶ್ರೈಸು, ಆಶ್ರಯಿಸು; *(to amuse)* ಖುಷಾಲುಪಡಿಸು, ವಿನೋದಪಡಿಸು; *(to entertain, admit, believe)* ನಂಬು; *(to keep in service)* ಕೆಲಸದಲ್ಲಿಡು, ಉದ್ಯೋಗಕೊಡು; *(to receive hospitably)* ಉಪಚರಿಸು, ಸಂಶ್ರೈಸು; *(to entertain a suspicion)* ಅನುಮಾನಪಡು, ಅಪನಂಬಿಕೆಯಾಗಿರು,

Entertainer, s. n. *(host)* ಉಪಚರಿಸುವವ, ಆಶ್ರಯಿಸುವವ, ಪರಾಮರಿಕೆಯವ; *(amuser)* ಸಂತೋಷಪಡಿಸುವವ, ಉಲ್ಲಾಸಪಡಿಸುವವ.

Entertainment, s. n. *(conversation)* ಅನುಲಾಪ, ಸಂಭಾಷಣೆ; *(convivial provision)* ವಿಂದು, ಔತಣ; *(amusement)* ತಮಾಷೆ, ಉಲ್ಲಾಸ; *(hospitable reception)* ಉಪಚರಣೆ.

To Enthral, v. a. ಕಿಂಕರಮಾಡು, ಬಂಧಿಸು.

To Enthrone, v. a. ಸಿಂಹಾಸನಾರೂಢನಾಗಿ ಮಾಡು, ಗದ್ದುಗೆಯೇರಿಸು.

Enthusiasm, s. n. ಆವೇಶ, ಆತುರ; *(religious)* ಮರುಳು, ಮೂಢಭಕ್ತಿಯು, ಸ್ವೈರುಂಬುವದು.

Enthusiast, s. n. ಮೂಢಭಕ್ತಿಯವ, ಮರುಳುಹಿಡಿದವ, ಮತ್ತಿದವ.

To Entice, v. a. ನಂಬಿಸು, ಬಲೆಯಲ್ಲಿಕೆಡವು, ಮರುಳುಗೊಳಿಸು, ವಿಮೋಹಿಸು, ಪ್ರಮೋಹಿಸು. v. *To allure, attract.*

Enticer, s. n. ನಂಬಿಸುಹಾಳಿ, ಗಾರುಡಿಗ, ಮರುಳುಗೊಳಿಸುವವ.

Enticement, s. n. ಬಲೆಯಲ್ಲಿಕೆಡುವಿಕೆ, ವಶೀಕರಣ, ವಶ್ಯ, ಪ್ರಮೋಹನೆ, ವಿಮೋಹನೆ.

Entire, a. ಸಂಪೂರ್ಣವಾದ, ಶೇರಾದ, ಪೂರಾವಾದ, ಸಮಗ್ರವಾದ. v. *Complete, full, whole, solid.*

Entirely, ad. ಸಂಪೂರ್ಣವಾಗಿ, ಶೇರಾಗಿ, ಪೂರಾ, ಸಮಗ್ರವಾಗಿ, ದರೋಬಸ್ತಾಗಿ.

Entireness, s. n. ಸಂಪೂರ್ಣತೆ, ಸಮಗ್ರತ್ವವು, ದರೋಬಸ್ತು. v. *Completeness, fulness.*

To Entitle, v. a. *(to name)* ಹೆಸರುಕೊಡು; *(to superscribe or prefix as a title)* ಹೆಸರುಬರೆಯು, ವಿಲಾಸಾಹಾಕು; *(to give a right or claim to)* ಸ್ವಂತಾಮಾಡು, ಸ್ವಾತಂತ್ರ್ಯಕೊಡು.

Entity, s. n. ಸತ್ತೆ, ಇರುವಿಕೆ. v. *Being.*

To Entomb, v. a. ಗೋರಿಯಲ್ಲಿಡು, ಹೂಳು.

Entrails, s. n. ಕರುಳುಗಳು, ಅಂತ್ರವು, ಪುರೀತತ್ತು. v. *Bowels, intestines.*

Entrance, s. n. (*admission*) ನಿರೂಪ, ಅಪ್ಪಣೆ; (*passage by which a place is entered*) ಪ್ರವೇಶಸ್ಥಲ, ಮುಖ, ನಿಸ್ಸರಣ; (*commencement*) ಆರಂಭ, ಉಪಕ್ರಮ, ತೊಡಕು.

To Entrance, v. a. ಬೆರಗಾಗಿಸು, ವಿಸ್ಮರಣೆಮಾಡು, ಪರವಶಮಾಡು; (*to be entranced*) ವಿಸ್ಮೃತಿಯಾಗು, ಪರವಶವಾಗು, ಬೆರಗಾಗು.

To Entrap, v. a. ಬೋನಿನೊಳಗೆ ಬೀಳಿಸು, ಉರುಲಲ್ಲಿ ಸಿಕ್ಕಿಸು. v. *To ensnare, involve.*

To Entreat, v. a. ಬೇಡಿಕೊಳ್ಳು, ಕೈಯೊಡ್ಡು, ಪ್ರಾರ್ಥಿಸು, ಯಾಚಿಸು, ಬೆಸಗೊಳ್ಳು. v. *To beg, solicit, importune, petition.*

Entreaty, s. n. ಬೇಡುವಿಕೆ, ಕೈಯೊಡ್ಡುವಿಕೆ, ಪ್ರಾರ್ಥನೆ. v. *Prayer, solicitation.*

Entry, s. n. ಹುಲಿಮೊಗ, ಜೇಬು, ದ್ವಾರ, ಬಾಗಲು. v. *Entrance.* (*an entry in a register*) ಬರದಿಡುವದು; (*portico, vestibule, &c.*) ಉಪ್ಪಲಿ, ಪಡಸಾಲೆ.

Envelope, s. n. ಕಟ್ಟುವಾಸ, ಮೇಲಿರಸು, ದಸ್ತು.

To Envelope, v. a. ಸುರುಳುಮಾಡು, ಮುದಿರಿಡು, ಸುತ್ತಿಡು, ಮುದುರು. v. *To cover, hide, surround,*

To Envenom, v. a. (*to poison*) ವಿಷಕೊಡು, ನಂಜಿಡು; (*to enrage*) ಸಿಟ್ಟೆಬ್ಬಿಸು, ಕೋಪವೆಬ್ಬಿಸು, ಮನಸುಗೋಳಿಸು.

Enviable, a. ಅಪೇಕ್ಷಿಸತಕ್ಕ, ಇಛಿಸತಕ್ಕ.

Envied, part. ಹೊಟ್ಟೆಕಿಚ್ಚಿಗಾಸ್ಪದವುಳ್ಳ, ಹೊಟ್ಟೆಕಿಚ್ಚು ಹೊಂದಿದ.

Envious, a. ಹೊಟ್ಟೆಕಿಚ್ಚುಳ್ಳ, ಮತ್ಸರವುಳ್ಳ, ಅಸೂಯೆಯುಳ್ಳ, ಈರ್ಷ್ಯೆಯುಳ್ಳ.

Enviously, ad. ಹೊಟ್ಟೆಕಿಚ್ಚಾಗಿ, ಮತ್ಸರವಾಗಿ.

To Environ, v. a. ಆಕ್ರಮಿಸು, ಆವರಿಸು, ಸುತ್ತಿಕೊಳ್ಳು. v. *To encircle, inclose, invest.*

Environs, s. n. (*of a fort*) ಪೇಟೆಗಳು; (*of a city*) ಉಪಪಟ್ಟಣವು; (*of a village*) ಉಪಶಲ್ಯವು, ಉಪಗ್ರಾಮವು, ಗ್ರಾಮಾಂತ.

To Enumerate, v. a. ಗಣಿಸು, ಲೆಖ್ಖಿಸು, ಎಣ್ಣಿಸು. v. *To count, number, reckon.*

Enumeration, s. n. ಗಣನೆ, ಲೆಖ್ಖ, ಎಣ್ಣಿಕೆ.

To Enunciate, v. a. ಹೇಳಿಕೊಡು, ತೋರಿಕೊಡು.

Envoy, s. n. ರಾಜದೂತನು, ಹೇಜೀಬು, ರಾಯಭಾರಿ. v. *Ambassador, delegate.*

Envy, s. n. ಹೊಟ್ಟೆಕಿಚ್ಚು, ಮತ್ಸರ, ವಿರುದ್ಧ, ವಿರೋಧ, ಅಷ್ಟಾರಿ, ಈರ್ಷ್ಯೆ, ಸ್ಪರ್ಧೆ. v. *Malice, rivalry, competition.*

To Envy, v. a. ಹೊಟ್ಟೆಕಿಚ್ಚುಮಾಡು, ವಿರೋಧಿಸು, ಅಸೂಯೆಪಡು.

Epaulet, s. n. ಭುಜಕೀರ್ತಿ, ಜಬ್ಬು, ಭುಜಕುಚ್ಚು.

Ephemera, s. n. (*a fever that terminates in one day*) ಏಕದಿನಜ್ವರ; (*an insect that lives only one day*) ಏಕದಿನಜೀವಿ.

Ephemeris, s. n. (*journal*) ದಿನದವಳಿ, ದಿನಾವರ್ತಿ, ರೋಜುನಾಮೆ.

Epicure, s. n. ತಿನ್ನುಗುಳಿ, ಹೊಟ್ಟೆಬಾಕ.

Epidemic, Epidemical, a. ಮರಕ, ಸುಂಕ್ಷಿಸ, ಸಾಂಕ್ರಾಮಿಕವಾದ, ತೊಡರುವ.

Epigram, s. n. ಚಿತ್ರಕವಿತ್ವ.

Epilepsy, s. n. ಅಪಸ್ಮಾರರೋಗ, ಕಾಕೇಮೋಪು.

Epileptic, a. ಅಪಸ್ಮಾರದ, ಕಾಕೇರೋಗದ.

Episode, s. n. ಅರ್ಧಕಥೆ.

Epistle, s. n. ನಿರೂಪ, ಕಾಗದ, ಪತ್ರಿಕೆ. v. *Letter.*

Epistolary, a. ಪತ್ರಿಕೆಯುಳ್ಳ, ನಿರೂಪದ.

Epitaph, s. n. ಚರಮಲಿಖಿತ, ಚರಮಶ್ಲೋಕ.

Epithalamium, s. n. ಶೋಭನದಹಾಡು, ಕಲ್ಯಾಣಕೀರ್ತನೆ, ಮದುವೇಹಾಡು.

Epithet, s. n. ಹೆಸರು, ಮಾತು, ನಾಮ.

Epitome, s. n. ಕ್ಲುಪ್ತ, ಸಂಕ್ಷೇಪ, ಸಂಗ್ರಹ.

To Epitomise, v. a. ಕ್ಲುಪ್ತಮಾಡ, ಸಂಕ್ಷೇಪಿಸ, ಸಂಗ್ರಹಾಮಾಡ. v. *To abridge, curtail.*

Epoch, Epocha, s. n. ಶಕಪ್ರಾರಂಭ.

Equal, a. *(like)* ಸಮಾನದ; *(in just proportion)* ಬರಾಬರಿ; *(adequate to any purpose)* ಸಾಮರ್ಥ್ಯವುಳ್ಳ; *(even, uniform)* ಸಮಸಮವಾದ, ಸರಿಯಾದ; *(impartial)* ಪರಪಕ್ಷವಿಲ್ಲದ, ನ್ಯಾಯದ; *(to divide into two equal parts)* ಸರಿಯಾಗಿ ಭಾಗಿಸ.

Equal, s. n. ಸಮಾನಿಕನು, ಸರಿಯಾದವನು.

To Equal, v. a. ಸಮಾನಾಮಾಡ, ಸಾದೃಶ್ಯಾಮಾಡ; *(to be equal)* ಸಮಾನವಾಗಿರ, ಸರಿಯಾಗಿರ; *(to be equal to or fit for)* ಯೋಗ್ಯತೆಯಾಗಿರ, ಸಾಮರ್ಥ್ಯವಾಗಿರ.

To Equalise, v. a. ಸರಿಮಾಡ, ಸಮಸಮಾಮಾಡ.

Equality, s. n. ಸರಿಸಮಾನಿಕೆ, ಬರಾಬರಿ, ಸಮಸಮವು. v. *Similitude, likeness, evenness, levelness.*

Equally, ad. ಸರಿಸರಿಯಾಗಿ.

Equanimity, s. n. ಏಕಚಿತ್ತ, ಒಂದೇಮನಸ್ಸು, ಸಮಹೃದಯ, ಸಾತ್ವಿಕಮನವು.

Equator, s. n. ಮಧ್ಯಪ್ರದೇಶ, ನಿರಕ್ಷದೇಶ, ಮಧ್ಯರೇಖೆ.

Equerry, s. n. ಕುದರೇಬಕ್ಷಿಯು.

Equestrian, a. ಅಶ್ವಶಿಕ್ಷಕನಾದ, ಸವಾರನಾದ.

Equidistant, a. ಸಮದೂರದ, ಸಮದಾರಿಯಾದ.

Equilateral, a. ಚೌಕಸುದ್ದದ.

Equilibrium, Equilibration, Equipoise, s. n. ಸಮತೂಕ, ಸರಿತೂಕ.

Equinoctial, a. ಸಮರಾತ್ರಿದಿನವಾದ, ವಿಷುವವಾದ.

Equinox, s. n. ವಿಷುವು, ವಿಷುವವು, ವಿಷುವತ್ತು; *(the vernal)* ಉತ್ತರಾಯಣವಿಷುವು, ವಿಷುಸಂಕ್ರಾಂತಿ; *(the autumnal)* ದಕ್ಷಿಣಾಯನವಿಷುವು, ವಿಷ್ಣುಪದಿ.

To Equip, v. a. ಸಂನಾಹಾಮಾಡ, ಮುಸ್ತೈದೀಮಾಡ, ಸಾರಣೆಮಾಡ, ಸಿದ್ಧಾಮಾಡ. v. *To accoutre, furnish, dress.*

Equipage, s. n. ಸಂನಾಹಿಕೆ, ಸಾರಣೆ. v. *Retinue.*

Equipment, s. n. ಪಯಣಸಂನಾಹವು.

Equipoise, Equiponderance, s. n. ಸಮತೂಕ.

Equitable, a. ಸರಿನ್ಯಾಯದ, ಧರ್ಮವಾದ, ಸತ್ಯವಾದ. v. *Just, candid, impartial.*

Equitably, ad. ಸರಿಯಾಗಿ, ನ್ಯಾಯವಾಗಿ, ಧರ್ಮವಾಗಿ.

Equity, s. n. ನ್ಯಾಯವು, ಧರ್ಮವು. v. *Justice, impartiality, honesty.*

Equivalence, s. n. ಸಾಟಿ, ಸಮಾನವು.

Equivalent, a. ಈಡಿನ, ಜೋಡಾದ, ಅಷ್ಟಂದವಾದ.

Equivocal, a. ಅನುಮಾನದ, ಸಂಶಯದ, ಸಂದಿಗ್ಧದ, ಸಂದೇಹದ, ಅಪ್ರಸ್ತಾಪದ. v. *Doubtful.*

Equivocally, ad. ಸಂಶಯವಾಗಿ, ಅಪ್ರಸ್ತಾಪವಾಗಿ, ಸಂದಿಗ್ಧವಾಗಿ, ಸಂದೇಹವಾಗಿ.

Equivocation, Equivocalness, s. n. ದ್ವ್ಯರ್ಥವಾಗಿಹೇಳುವಿಕೆ, ಎರಡರ್ಥವಾಗಿಹೇಳುವಿಕೆ.

To Equivocate, v. a. ದ್ವ್ಯರ್ಥವಾಗಿಹೇಳ.

Equivocator, s. n. ದ್ವ್ಯರ್ಥವಾದಿ.

Era, s. n. ಶಕ, ಫಸಲಿ, ಸನ್ನು. v. *Epoch.*

To Eradicate, v. a. ನಿರ್ಮೂಲಮಾಡ, ಕಿತ್ತೊಗೆಯ. v. Also *to destroy, end.*

Eradicative, a. ನಿರ್ಮೂಲಮಾಡುವ.

To Erase, v. a. ತೆಗದುಹಾಕ, ಕೆಡಿಸ, ಗಟಿಸ, ಅಳಿಸ, ತುಡುಪ. v. *To destroy.*

Erasement, s. n. ತೆಗದುಹಾಕುವಿಕೆ.

Eraser, s. n. ತೆಗಧಾಕುವವ, ಕೆಡಿಸಿಬಿಡುವವ.

Erasure, s. n. ಒರಸಿಹಾಕುವಿಕೆ, ಅಳಿಯುವಿಕೆ.

Ere, ad. ಮುಂಚಿತವಾಗಿ; *Ere* he came ಅವನು ಬರುವದಕ್ಕೆಮುಂಚ್ಚೆ.

Erelong, ad. ಇಂನುಸ್ವಲ್ಪಹೊತ್ತು, ಸ್ವಲ್ಪಹೊತ್ತುತರುವಾಯ.

Erenow, ad. ಇದಕ್ಕೆಮುಂಚೆ.

Erewhile, ad. ಮುಂಚಿತವಾಗಿ, ಮುಂದಾಗಿ.

Erect, a. ಸೆಟ್ಟಿಗೆನಿಲ್ಲುವ, ನಿಗಿರಿರುವ, ಮೆದರಿರುವ. v. *Upright.*

To Erect, v. a. *(to build)* ಕಟ್ಟಿ. v. *To raise, build, elevate, exalt. (to place perpendicularly)* ಸೆಟ್ಟಿಗಿಡ; *(to exalt)* ಎಬ್ಬಿಸ, ಮೊದಲುಮಾಡ; *(to place the body erect)* ನಿಟ್ರಿಸ, ಸೆಮರ.

Erection, s. n. ಕಟ್ಟುವಿಕೆ, ನಿಟ್ರಿಕೆ. v. *Establishment, settlement. (erectio penis)* ಉದ್ಧಾಪನೆ, ನಿಗರುವಿಕೆ, ಮೆಡೆಯುವಿಕೆ.

Erectness, s. n. ಸರಿಯಾಗಿನಿಲ್ಲುವಿಕೆ, ಬಿರಿರುವಿಕೆ.

Ergot, s. n. ಘಟ್ಟಿ, ಪಾಳ.

To Erode, v. a. ಶಿಥಿಲವಾಗ, ತುಕ್ಕುಹಿಡಿಯ, ಸಂದೇಶ, ವಾಚಕ, ಬಾಯಿಮಾತು. v. *Corrode.*

To Err, v. n. ತಪ್ಪುಮಾಡ, ಮೀರ.

Errand, s. n. ಹೇಳಿಕಳುಹಿಕೆ, ಸಮಾಚಾರ, ಬಾಯಿಮಾತು, ಸಂದೇಶ, ವಾಚಿಕ. v. *Message.*

Errand-boy, s. n. ಚೇಟ್ಟೋಳಿಗದವ, ಕಿಸುಮತುದಾರ.

Errata, s. n. ತಪ್ಪುಗಳು, ಶುದ್ಧಿಪತ್ರವು.

Erratic, Errant, a. ಚಾಂಚಲ್ಯದ, ಕ್ರಮವಿಲ್ಲದ. v. *Wandering, uncertain, irregular.*

Erroneous, a. ತಪ್ಪಿನ, ತುಡುಪಿನ. v. *Mistaken, irregular, false.*

Erroneously, ad. ತಪ್ಪಾಗಿ, ತುಡುಪಾಗಿ. v. Also *falsely.*

Error, s. n. ತಪ್ಪು, ತುಡುಪು, ಮಿಥ್ಯಾಮತಿ. v. *Blunder, mistake, fault, sin.*

Erst, ad. ಪೂರ್ವ, ಮೊದಲು, ಆದಿ. v. *First, once, formerly, before, till.*

To Eruct, v. a. ಢೇಗ, ತೇಗ.

Eructation, s. n. ಢೇಗು, ತೇಗುವಿಕೆ. v. *Belch.*

Erudition, s. n. ಕಲಿಕೆ, ವಿದ್ವಾಂಸತ್ವ, ವಿದ್ವತ್ತು. v. *Learning, knowledge.*

Eruption, s. n. ದದ್ದು, ಬೊಪ್ಪಳೆ, ಬೊಬ್ಬೆ; *(of small pox)* ಬೊಮ್ಮವಡು.

Erysipelas, s. n. ದದ್ದು.

Escalade, s. n. ಲಗ್ಗೆ, ಹಲ್ಲಾ.

Escape, s. n. ಓಡಿಹೋಗುವಿಕೆ, ಪರಭಾರಿಕೆ, ತಪ್ಪಿಸಿಕೊಳ್ಳುವಿಕೆ. v. *Flight.*

To Escape, v. a. ಪಲಾಯನವಾಗ, ಓಡಿಹೋಗ, ತಪ್ಪಿಹೋಗ. v. *To fly.*

Eschar, s. n. ಗಾದೆ, ಬೆಂಡು.

To Eschew, v. a. ತಪ್ಪಿಸಿಕೊಳ್ಳ, ಸೇರದಿರ, ಪ್ರವೇಶಿಸದೇಇರ, ಹೋಗದೇಇರ. v. *To avoid, fly, shun.*

Escort, s. n. ಘಾಂಟು, ಮೇಗಾವಲು, ಪೈಗಸ್ತಿ, ಅಡ್ಡಿಕೆ. v. *Convoy.*

To Escort, v. a. ಟಿಪ್ಪಾಯಿಸ, ಅಡ್ಡಿಗವಿಟ್ಟು ಕಳುಹಿಸ, ಮೇಗಾವಲಿಹಾಕಿಕಳುಹ. v. *To convoy.*

Escritore, s. n. ಸಂದೂಕ, ಕಲಮಧಾನಿ.

Esculent, a. ಆಹಾರವಾಗತಕ್ಕ, ತಿಂಬುವ, ಉಣ್ಣತಕ್ಕ, ತಿನ್ನತಕ್ಕ.

Especially, ad. ಮುಖ್ಯವಾಗಿ, ಪ್ರಧಾನವಾಗಿ, ಮೊದಲಾಗಿ, ವಿಶೇಷವಾಗಿ. v. *Principally, chiefly.*

Esplanade, s. n. ಮೈದಾನ, ಬೈಲು.

Espousals, s. n. ಮದುವೆ, ವಿವಾಹ. v. *Marriage.*

To Espouse, v. a. (*to wed*) ಲಗ್ನಮಾಡ, ಮದುವೆಮಾಡ. v. *To betroth, contract, marry.* (*to contract or betroth*) ನಿಶ್ಚಿತಾರ್ಥಮಾಡ, ಕಪ್ಪಸಾ ತೊಡಿಸ, ವೀಳ್ಯದೆಲೆಶಾಸ್ತ್ರಮಾಡ, ಕುಪ್ಪಡೂಟಾಮಾಡ; (*a quarrel*) ಜಗಳಕ್ಕೆ ಸಹಕಾಲವಾಗ; (*to defend*) ಬೆಂನುಹಾಕಿಕೊಳ್ಳ, ಆಸ್ಪದಾಕೊಡ.

To Espy, v. a. (*see at a distance*) ಮುಂಚೇನೋಡ, ದೂರನೋಡ. v. *To discover.*

To Espy, v. n. (*to watch*) ಸಂಚುನೋಡ, ಹೊಂಚುನೋಡ, ಬೇಗುನೋಡ.

Esquire, s. n. ಧನವಂತ್ರ, ಕಿತಾಂಬು.

Essay, s. n. (*attempt*) ಪ್ರಯತ್ನ, ಉಪಾಯ, ವಿಚಾರಣೆ; (*of metals*) ಶೋಧನೆ; (*treatise*) ಪ್ರಬಂಧವು.

To Essay, v. a. (*to attempt*) ಪ್ರಯತ್ನಿಸ, ವಿಚಾರಿಸ, ಪರೀಕ್ಷಿಸ; (*metals*) ಶೋಧಿಸ.

Essence, s. n. ರಸ, ಸಾರ, ತೈಲ; (*perfume*) ಗಂಧ, ವಾಸನೆ.

To Essence, v. a. ಸುಗಂಧಾಮಾಡ.

Essential, a. ಅಗತ್ಯದ, ಬೇಕಾದ, ಪ್ರಯೋಜನವಾದ.

Essential, s. n. ಸ್ವಭಾವ, ಸಹಜವು, ಪ್ರಕೃತಿ.

Essentially, ad. ಅಗತ್ಯವಾಗಿ, ಬೇಕಾಗಿ, ಅವಶ್ಯಕವಾಗಿ.

Essoine, s. n. ಬಾಟು, ನೆಪ, ನೆವ.

To Establish, v. a, ಸ್ಥಾಪಿಸ, ಸ್ಥಿರಾಮಾಡ, ನೇಮಿಸ, ಸಾಬೂತುಮಾಡ. v. *To fix, settle, confirm, ratify, found, build.*

Established, part. ಸ್ಥಿರವಾದ, ನೇಮಿಸಿದ, ಸಾಬೂತಾದ.

Establisher, s. n. ಸ್ಥಾಪಿಸುವವ, ಶಾಸಕ, ನೇಮಕದವ.

Establishment, s. n. (*settlement*) ಸ್ಥಾಪನೆಯು; (*ratification*) ನಿಶ್ಚಿತಾರ್ಥ; (*settled regulation*) ಸ್ಥಾಪನೆಮಾಡಕಟ್ಟಳೆಯು; (*salary*) ಸಂಬಳವು;

(*income*) ಹುಟ್ಟುವಳಿಯು, ಆದಾಯವು; (*foundation*) ಮೂಲ, ಬುನಾದಿ, ಅಸ್ತಿವಾರ; (*religious establishment*) ಮಠ, ವಿದ್ಯಾಶಾಲೆ; (*an establishment of peons*) ಸಿಬ್ಬಂದಿ; (*a fixed establishment*) ಮುದಾಂಸಿಬ್ಬಂದಿ; (*a temporary establishment*) ಹಂಗಾಮಾಸಿಬ್ಬಂದಿ.

Estate, s. n. (*condition*) ಅವಸ್ಥೆ, ಸಂಸ್ಥಿತಿ, ಪ್ರಕೃತಿ, ದಶೆ, ಸ್ಥಿತಿಗತಿ; (*effects*) ಮನೇಬದುಕು, ಗೃಹಸಾಮಗ್ರಿ; (*possession in land, &c.*) ವೃತ್ತಿ, ಆಸ್ತಿ, ಸ್ಥಿತಿ; (*an hereditary estate*) ತರತರದಿಂದ ಬಂದ ಸ್ವಾಸ್ಥ್ಯ; (*an estate given as a pension*) ಜಹಗೀರು, ಉಂಬಳಿಗೆ, ಉಂಬಳಿ, ಅಗ್ರಹಾರ, ಕೊಡಗೆ; (*estate, rank, quality*) ಕುಲ, ಜಾತಿ.

Esteem, s. n. ಪ್ರೀತಿ, ಮಾನ, ಅಭಿಮಾನ. v. *Veneration, respect.*

To Esteem, v. a. ಅಭಿಮಾನಿಸು, ಮನಸ್ಸಿಡು, ಗಣನೆಗೊಳ್ಳು, ಲಕ್ಷ್ಯಮಾಡು.

Estimable, Esteemed, a. ಅಭಿಮಾನಿಸಿದ, ಗಣನೆಗೊಂಡ, ಲಕ್ಷ್ಯವಿಟ್ಟ, ಪ್ರೀತಿಕರವಾದ.

Estimate, s. n. (*computation*) ಕ್ರಯನಿಷ್ಕರ್ಷೆ, ಅಂಚನಾ, ಡಾಲು; (*a conjectural estimate*) ಸುಮಾರುನಿಷ್ಕರ್ಷೆ, ಡಾಲು, ಮದಿಪು.

To Estimate, v. a. ಮದಿಪುಹಾಕು, ನಿಷ್ಕರ್ಷಿಸು.

Estimation, s. n. (*regard, esteem*) ಅಭಿಮಾನ, ಮಾನ; (*opinion*) ಊಹೆ, ಮತವು, ಎಣಿಕೆ, ತೋರುವಿಕೆ, ನೆನಪು.

Estimator, s. n. ಆಧಾರಾಮಾಡುವವ, ಕ್ರಯಮಾಡುವವ, ಡಾಲುಗಾರ.

To Estrange, v. a. (*to keep at a distance*) ದೂರವಾಗಿರು; (*to alienate*) ಅನ್ಯಾಕ್ರಾಂತಮಾಡು; (*to alienate from affection*) ಮನಸುಮುರಿಯು, ಸ್ನೇಹಒಡೆಯು, ಪ್ರೀತಿಭಂಗಮಾಡು, ಮಿತ್ರಭೇದಮಾಡು.

Estranged, part. ಮನಸುಮುರಿದ, ಮನಒಡೆದ, ಪ್ರೀತಿಭಂಗವಾದ; (*estranged from God*) ದೇವರಿಗೆವಿರೋಧವಾದ; (*to be estranged*) ಪ್ರೀತಿಭಂಗವಾಗು.

Estrangement, s. n. ಪ್ರೀತಿಭಂಗ, ಮನೋಭೇದ, ಮಿತ್ರಭೇದ. v. *Alienation, distance.*

Etc, et cætera, ಮೊದಲುಗೊಂಡು, ಇತ್ಯಾದಿ.

Eternal, a. ನಿಚ್ಚದ, ಅನಂತ, ಸದಾಕಾಲದ, ನಿತ್ಯ, ಸದಾತನ, ಸನಾತನ, ಶಾಶ್ವತ, ಧ್ರುವ, ಸತತ, ಅನಾರತ, ಸಂತತ, ವಿರತ, ಅನಿಶ, ನಿತ್ಯ, ಅನವರತ, ಅಜಸ್ರ. v. *Constant, perpetual, everlasting.* (*without beginning*) ಅನಾದಿಯಾದ; (*without end*) ಅಂತ್ಯವಿಲ್ಲದ.

Eternally, ad. ಅನಂತವಾಗಿ, ಚಿರಾಯುವಾಗಿ, ಸದಾಕಾಲವಾಗಿ. v. *Perpetually, invariably.*

Eternity, s. n. ಚಿರಾಯುಸ್ಸು, ನಿಚ್ಚತನ, ನಿತ್ಯತ್ವ, ಚಿರಂಜೀವಿತ್ವ, ಸ್ಥಿರಂಜೀವಿತ್ವ.

To Eternize, or Eternalize, v. a. ನಿತ್ಯಮಾಡು. v. *To perpetuate, immortalize, make famous.*

Ether, s. n. ನಿರ್ಮಲಾಕಾಶ, ಅಂತರಿಕ್ಷ.

Ethereal, a. ಆಕಾಶದ, ಖೇಚರದ, ಅಂತರಿಕ್ಷದ. v. *Celestial, heavenly.*

Ethics, s. n. ನೀತಿಶಾಸ್ತ್ರ, ಆನ್ವೀಕ್ಷಕಿ. v. *Morality.*

Etiquette, s. n. ಉಪಚರಣೆ, ಮರ್ಯಾದೆ.

Etymology, s. n. ಅವಯವ ವ್ಯುತ್ಪತ್ತಿಯು, ಶಬ್ದ ಲಕ್ಷಣ.

Evacuant, s. n. ವಿರೇಚನೆ, ಭೇದಿ.

To Evacuate, v. a. *(to discharge)* ವಿರೇಚನೆ ಮಾಡ; *(by stool)* ಶೌಚಾಮಾಡ; *(to evacuate a town, &c.)* ಬಿಟ್ಟುಬಿಡ; *(to be evacuated)* ವಿರೇಚನೆಯಾಗ, ಹೊಟ್ಟೆಕಳಿಯ, ಭೇದಿಯಾಗ.

Evacuation, s. n. ವಿರೇಚನವು, ಹೊಟ್ಟೆಕಳಿಯುವಿಕೆ, ಮಲ.

To Evade, v. a. ತಪ್ಪಿಸಿಕೊಳ್ಳ. ಉಪಾಯಿಸ. v. *To elude, escape, avoid, deceive.*

Evanescent, a. ಮಾಯವಾಗುವ, ಅಂತರ್ಧಾನವಾಗುವ. v. *Fleeting, vanishing, weak, feeble.*

Evangelist, s. n. ಸುವಾರ್ತಿಕ, ಸುವಿಶೇಷಕ.

To Evaporate, v. n. ಸುಂಡ, ಉಗಿಹೋಗ, ಆವಿರಿಹೋಗ.

Evaporation, s. n ಸುಂಡುವಿಕೆ, ಆವಿರಿ.

Evasion, s. n. ನೆವ, ನೆಪ, ದಗೆ, ಬಹಾನಾ.

Evasive, a. ನೆವವಾದ, ದಗೆಯಾದ.

Eve, s. n. ಅಸ್ತಮಯ, ಸಾಯಂಕಾಲ, ದಿನಾಂತ.

Even, a. *(level)* ಸಾಫಿನ, ಸುಂಗಾಗಿರುವ; *(an even number)* ಸರಿಲೆಖ್ಖ, ಸಮಾಂಕ; *(to lay even with the ground)* ನೆಲಗತಾಮಾಡ; *(to be even with one, to come even with one)* ಕಲತುಬರ, ಸರಿಗೆಸರಿಮಾಡ; *(even and odd)* ಸಮವಿಷಮ, ಸರಿಬೆಸಿ.

Even, ad. *Even* his enemies speak well of him ಅವನ ಹರಿತು ಶತ್ರುಗಳು ಸಮ್ನಾ ಬಹುವಾಗಿ ಮೆಚ್ಚಿಕೊಳ್ಳುತ್ತಾರೆ, or ಅವನ ಶತ್ರುಗಳು ಕೂಡಾ ಕೊಂಡಾಡುತ್ತಾರೆ; *Even* so ಹಾಗೆಯೆ; *Even* then ಆಗಲೆ; *Even* on ಉದ್ದಕ್ಕೆ; He lives *even* as if there were no God ಅವನು ದೇವರು ಸಹಾಯಿಲ್ಲವೆಂದಿರುತ್ತಿದ್ದಾನೆ.

Even, s. n. *(close of the day)* ಸಾಯಂಕಾಲ, ಸಂಜೆ, ಅಸ್ತಮಾನ.

To Even, v. a. ಸಾಫುಮಾಡ, ಸುಂಗಾಗಿಮಾಡ; *(to be even)* ಸರಿಯಾಗಿರ.

Even-handed, a. ನ್ಯಾಯದ, ಧರ್ಮದ, ಪಕ್ಷಪಾತವಿಲ್ಲದ.

Evening, s. n. ಸಾಯಂಕಾಲ, ಸಂಜೆ, ಅಸ್ತಮಾನ, ದಿನಾಂತ್ಯ, ಪಿಂಸಲು, ಪಿಂಬಗಲು, ಕಡೆವಗಲು, ಸಂಧ್ಯೆ, ಪ್ರದೋಷ, ರಜನೀಮುಖ.

Evenly, ad. ಸಾಫಾಗಿ, ಸುಂಗಾಗಿ. v. *Levelly, uniformly.*

Evenness, s. n. ಸಾಫು, ಸುಂಗಾವು, ಸಮನಿಕೆ. v. *Equality, straightness.*

Event, s. n. ಪ್ರಸ್ತುತ, ಪ್ರಸ್ತ, ಪ್ರಸ್ತಾವ; In the *event* of his coming do you call me ಅವನುಬಂದಾಗ ನನ್ನನ್ನು ಕರೆ, or ಅವನುಬಂದರೆ ನನ್ನನ್ನು ಕರೆ; At all *events* I must go ಖಾಮಖಾಂಹೋಗಬೇಕು, or ಹ್ಯಾಗಾದರೂಹೋಗಬೇಕು.

Eventful, a. *(times)* ವಿಪರೀತ ಕಾಲ, ವಿಶೇಷ ಕಾಲ.

Eventual, a. ಪ್ರಾಪ್ತಿಯ, ಸಂಭವಿಕೆಯ, ಕಡೆಯ, ಅಂತ್ಯದ.

Eventually, ad. ಕಡೆಯಾಗಿ, ಅಂತ್ಯವಾಗಿ.

Ever, ad. ಯಾವಾಗ್ಯೂ, ಯಾವಾಗಲು. v. *Always, eternally.* *(for ever)* ಎಂದೆಂದಿಗೂ; *(whatever)* ಏನಾದರೂ; *(whenever)* ಎಂದಿಗಾದರೂ;

(*wherever*) ಎಲ್ಲಾದರೂ; (*whoever*) (*mas.*) ಯಾರಾದರು, ಯಾವನಾದರು; (*fem.*) ಯಾವಳಾದರು; As soon as *ever* he has done it I will come ನಾನವನದರಂನಮಾಡಿಯಾಗುತ್ತಲೆನಾನುಬರುತ್ತೇನೆ, or ಅದರಂನಮಾಡುವಷ್ಟರಲ್ಲಿಯೇಬರುತ್ತೇನೆ, or ಅದರಂನತೀರಿಸುವದಕ್ಕೊಳಗೆಬರುತ್ತೇನೆ; May he prosper for *ever* ಅವನೆಂದಿಗೂ ಸುಖವಾಗಿರಲಿ.

Ever-green, a. ಸದಾಹಸುರಿನ.

Ever-happy, a. ಸದಾಸುಖವಾದ, ನಿತ್ಯಸುಖವಾದ.

Everlasting, a. ನಿಜವಾದ, ಎಂದಿಗೂಇರುವ, ಯಾವಾಗಲೂಇರುವ, ನಿತ್ಯವಾದ, ಅನವರತವಾದ. v. *Eternal.*

Ever-pleasing, a. ನಿತ್ಯಸಂತೋಷಕರ.

Every, pro. ಸರ್ವ, ಅಷ್ಟು, ಸಮಸ್ತ, ಎಲ್ಲಾ; (*every one*) ಪ್ರತಿಮನುಷ್ಯನು, ಎಲ್ಲರು, ಅವನವನು, ಒಬ್ಬೊಬ್ಬ; (*neuter*) ಒಂದೊಂದು; (*every drop, every bit*) ಎಲ್ಲಾ, ಸಮೂಲವಾಗಿ, ಅಷ್ಟೂ; (*every other day*) ದಿನಬಿಟ್ಟುದಿನ; (*every where*) ಎಲ್ಲೆಲ್ಲಿಯು; (*every thing*) ಸಮಸ್ತ, ಅಷ್ಟು, ಎಲ್ಲಾ.

Evidence, s. n. (*testimony*) ಸಾಕ್ಷಿ; (*false evidence*) ಕಳ್ಳಸಾಕ್ಷಿ, ಸುಳ್ಳುಸಾಕ್ಷಿ, ತಪ್ಪುಸಾಕ್ಷಿ; (*proof*) ದೃಷ್ಟಾಂತ, ನಿದರ್ಶನ.

To Evidence, v. a. ಸಾಕ್ಷಿಕೊಡ, ತೋರಿಸ.

Evident, a. ಸ್ಪಷ್ಟ, ಸ್ಫುಟ, ಪ್ರತ್ಯಕ್ಷ, ಉಲ್ಬಣ, ನಿರ್ಮಲದ, ಪ್ರತ್ಯಕ್ಷವಾದ, ಸಾಕ್ಷೀಭೂತದ. v. *Plain, apparent, notorious.*

Evidently, ad. ನಿರ್ಮಲವಾಗಿ, ದೃಷ್ಟಾಂತವಾಗಿ, ಪ್ರತ್ಯಕ್ಷವಾಗಿ.

Evil, a. ದೋಷದ, ಪಾಪದ, ಕೆಟ್ಟ, ಕೇಡಿನ, ದುಷ್ಟ. v. *Bad, wicked, corrupt.*

Evil, s. n. ಪಾಪ, ದೋಷ, ಕೇಡು, ಕೆಟ್ಟತನ, ದುರ್ಮಾರ್ಗ. v. *Crime, wickedness, injury.* (*king's evil*) ಗಂಡಮಾಲೆ.

Evil-doer, s. n. ದುಷ್ಕರ್ಮಿ, ಪಾಪಿ, ದುರ್ಮಾರ್ಗಿ.

Evil-minded, a. ದುಷ್ಟಬುದ್ಧಿಯ, ಪಾಪಹೃದಯದ, ವಿರೋಧಮನಸ್ಸಿನ, ಕೆಟ್ಟಮನಸ್ಸಿನ, ದ್ರೋಹಮನಸ್ಸಿನ.

Evil-speaker, s. n ಚಾಡೀಖೋರ, ಹಡಿಕ್ಕೇಡಿ, ಮನೆಹಾಳ, ಮನೆಮುರುಕ, ದ್ರೋಹಿ.

To Evince, v. a. ತೋರಿಸ, ರೂಪಿಸ, ಕಾಣಿಸ.

Evitable, a. ತಪ್ಪಿಸಿಕೊಳ್ಳುವ, ಬಿಡತಕ್ಕ.

To Eulogize, v. a. ಹೊಗಳ, ಸ್ತುತಿಸ, ಸ್ತೋತ್ರಮಾಡ.

Eulogium, Eulogy, s. n. ವ್ಯಾಪೃತಿ, ಹೊಗಳಿಕೆ, ಸ್ತೋತ್ರ, ಶ್ಲಾಘನೆ. v. *Encomium, praise.*

Eunuch, s. n. ನಪುಂಸಕ, ವರ್ಷಧರ, ಕ್ಲೀಬನು, ಖೋಜಯನು.

To Evolve, v. n. ತೆರದಿಡ, ಬಿಚ್ಚಿಡ. v. *To unfold, disentangle, open.*

Evolution, s.n. ತೆರೆಯುವಿಕೆ, ಬಿಚ್ಚಿಕೆ. v. *Unfolding, unrolling;* also *military exercise.*

Euphony, s. n. ಮನೋಸುರಾಗ, ಗಾಂಧರ್ವರಾಗ.

Euphorbium, s. n. ಕೋಲುಗಳ್ಳಿ, ವಜ್ರದ್ರು, ಸ್ನುಹಿಯು, ಗುಡ್ಡೆಯು, ಸೇಹುಂಡ, ಸ್ನುಕ್ಕು.

European, s. n. ಫರಂಗಿಯವನು, ಜಾತಿಯವನು, ಟೋಪಿಕಾರನು, ಯೂರೋಪನು, ತಾಮ್ರಮುಖನು.

Euthanasia, s. n. ಅನಾಯಾಸಮರಣ.

Ewe, s. n. ಕುರಿ. v. *Sheep*.

Ewer, s. n. ನೀರುಗಡಿಗೆ, ಜಲಘಟಿ, ಅಳಿಗೆ.

Exacerbation, s. n. ಕೋಪೋದ್ರೇಕ.

Exact, a. ಸರಿಯಾದ, ಯುಕ್ತದ, ನ್ಯಾಯದ, ನೇರವಾದ, ಸಂದಿಲ್ಲದ, ಚೊಕ್ಕಟವಾದ, ನೀಟಾದ, ಠೀಕಾದ. v. *Punctual, strict, honest.*

To Exact, v. a. ದಂಡಾರತೆಕ್ಕೊಳ್ಳು. v. *To demand, extort, enjoin.*

Exaction, s. n. ದಂಡ, ಕಟ್ಟಾಯ.

Exactly, ad. ಸರಿಯಾಗಿ, ನೆಟ್ಟಗೆ, ನೀಟಾಗಿ, ಕರಾರಾಗಿ.

Exactness, s. n. ಯುಕ್ತವು, ಸರಿಯು, ಖಂಡಿತವು.

Exactor, s. n. ದಂಡಾಖೋರ, ಕಟ್ಟಾಯಗಾರ.

To Exaggerate, v. a. ಜಲ್ಲಿಹೇಳು, ಉಪ್ಪಿಕೊಚ್ಚು.

Exaggeration, s. n. ಜಲ್ಲಿ, ಉಪ್ಪಿ, ದವಡಾವುಲು, ಬುರುಡೆ.

Exaggerator, s. n. ಉಪ್ಪಿಕೊಚ್ಚುವವ, ದಬ್ಬಾಳಿಕೆಯವ.

To Exalt, v. a. ಹೆಚ್ಚಿಸು, ಅಧಿಕಿಸು, ಮೇಲ್ಮಾಡು, ಹೊಗಳು. v. *To elevate, raise*; also *to extol, praise. (to exalt one's self)* ಆತ್ಮಸ್ತುತಿಮಾಡು.

Exaltation, s. n. ಔನ್ನತ್ಯ, ಆಧಿಕ್ಯ, ಬೆಳವಿಕೆ, ಸಮುಚ್ಛ್ರಯ. v. *Elevation, grandeur, dignity.*

Exalted, part. ಉನ್ನತವಾದ, ಅಧಿಕವಾದ, ಮೇಲ್ಮಾಡಿದ. v. *Elevated.*

Examination, s. n. ತನಕ, ಸಂಪ್ರಶಿಕೆ, ಪರೀಕ್ಷೆ, ಶೋಧಿಕೆ, ವಿಚಾರಣೆ, ವಿಮರ್ಶನ, ವಿಮರ್ಶೆ, ಪಚ್ಚವಣಾವು; *(of money)* ನೋಟಾನೋಡುವಿಕೆ, ನಾಣ್ಯಪರೀಕ್ಷೆ, ಸರಿನೋಡುವಿಕೆ. v. *Enquiry, trial, investigation, search, interrogation.*

To Examine, v. a. ಸರಿನೋಡು, ವಿಮರ್ಶಿಸು, ಶೋಧಿಸು, ಮಥಿಸಿನೋಡು, ಪರೀಕ್ಷಿಸು, ಸಂಪ್ರಶಿಸು, ಆರೈಯು. v. *To try, enquire, search, sift. (a witness)* ಸಾಕ್ಷಿಕೇಳು; The king wishing to *examine* him furnished his prime minister with all the necessary means ಅರಸನು ಅವನ ಪರೀಕ್ಷಿಸಬೇಕೆಂದು ತನ್ನ ಮಂತ್ರಿಗೆ ಬೇಕಾದ ಸರ್ವ ಸೋಪಸ್ಕರವು ಸಿದ್ಧವು ಮಾಡಿದನು.

Examiner, s. n. ಪರೀಕ್ಷಿಸುವವ, ಶೋಧಕನು.

Examplary, a. ಪಥದ, ಅನುಸರಿಸತಕ್ಕ.

Example, s. n. ಪ್ರತಿ, ಅನುಸರಿಸತಕ್ಕ ನಡತೆ, ಪಥ, ಮೇಲುಪಂಕ್ತಿ, ದಾರಿ, ಜಾಡೆ. v. *Copy, examplar, model, specimen, pattern, instance, prototype. (a proof)* ದೃಷ್ಟಾಂತ, ಉದಾಹರಣೆಯು; That *example* does not occur to my memory now ಈಗ ಆವುದಾಹರಣೆ ನನಗೆ ನೆನಪ್ಪಿಗೆ ಬರಲಿಲ್ಲಾ; *(to make an example of)* ಮೆರಿಸು, ನಾಲ್ವರರಿಯುವ ಹಾಗೆ ಪ್ರಾಯಶ್ಚಿತ್ತವು ಕೊಡು; *(to take example from)* ಪ್ರತಿನೋಡಿಮಾಡು; *(for example)* ಅದು ಹ್ಯಾಗಂದರೆ.

Exanguious, a. ಅರಕ್ತವಾದ, ಶುಷ್ಕವಾದ.

Exanimate, a. ಉಸುರುಹೋದ, ಪ್ರಾಣವಿಲ್ಲದ.

To Exasperate, v. a. ಕೋಪಾವೇಶಮಾಡು, ಕೋಪಾವೇಶಮಾಡು, ಕೋಪೋದ್ರೇಕಮಾಡು. v. *To enrage, provoke, aggravate, irritate.*

To Excavate, v. a. ಟೊಳ್ಳುಮಾಡ, ಡೊಗೆಯ, ಕೊರೆಯ. v. *To dig.*

Excavation, s. n. ಟೊಳ್ಳು, ಟೊತ್ರೆ, ಡೊಗರು. v. *Cavity, hollow.*

To Exceed, v. a. ಮಿಂಚಿಹೋಗ, ಮೀರಿತಪ್ಪ, ಪ್ರಾಸಿಸ, ಮೀರ. v. *To excel, surpass.*

Exceeding, a. ಅಧಿಕವಾದ, ವಿಸ್ತಾರವಾದ, ಬಿತ್ತರವಾದ, ಹೆಚ್ಚಾದ.

Exceedingly, ad. ಅಧಿಕವಾಗಿ, ವಿಸ್ತಾರವಾಗಿ, ಬಹಳವಾಗಿ, ಹೆಚ್ಚಾಗಿ.

To Excel, v. n. ವಿಶೇಷವಾಗಿರ, ಉತ್ತಮವಾಗಿರ. (v. a.) ಹಿಂಥಾಕ, ಮತ್ತುತ್ತಮ ಮಾಡ.

Excellence, Excellency, s. n. ಉತ್ಕರ್ಷ, ಅತಿಶಯ, ಮತಲ್ಲಿಕೆ, ಹಚರ್ಚೆಕೆ, ಪ್ರಕಾಂಡ, ತಲ್ಲಜ, ಉದ್ಘ, ಚೆಲುವಿಕೆ, ಮಹಿಮೆ, ನಾಗರೀಕವು. v. *Goodness, purity, dignity.*

Excellent, a. ಪ್ರಕಾಂಡದ, ಚೆಲುವಿಕೆಯ, ಯೋಗ್ಯವಾದ, ಉತ್ತಮವಾದ. v. *Exquisite.* (*bravo!*) ಶಾಬಾಸು, ಭಲಾ, ಬಲಾ, ವಹವಾ.

Excellently, ad. ಉತ್ತಮವಾಗಿ, ಚಂನಾಗಿ.

Except, ad. ವಿನಾಯಿಸಿ, ಹೊರತಾಗಿ, ಅಲ್ಲದೆ; *Except* you take medicine you cannot live ನೀನೌಷಧವನ್ನುತೆಗದುಕೊಂಡರೆಹೊರತು ಬದುಕಲಾರೆ; *Except* this ಇದಂನಬಿಟ್ಟುಬಿಟ್ಟು.

To Except, v. a. ಬಿಟ್ಟುಬಿಡ, ನಿವರ್ತಿಸ. v. *To object, leave out, exclude, omit.* (*to except against*) ವಿರೋಧಾಪ್ಯೇಳ, ಎದುರಾಡ, ಆಟಂಕಿಸ, ಅಡ್ಡಿಹಾಕ; (*that excepted*) ಅದುಹೊರತಾಗಿ, or ಅದುವಿನಾಯಿಸಿ, or ಅದಲ್ಲದೆ, or ಅದಂನಬಿಟ್ಟುಬಿಟ್ಟು; They perished, not one *excepted* ಒಬ್ಬರುಳಿಯದಹಾಗೆಲ್ಲರೂಮಡಿದರು.

Exception, s. n. ಅಪವಾದವು, ನಿಷೇಧ; (*to take exception*) ನಿವರ್ತಿಸ, ಬಿಟ್ಟುಬಿಡ.

Exceptionable, a. ನಿಷೇಧಿಸತಕ್ಕ, ತೆಗದುಹಾಕತಕ್ಕ.

Excess, s. n. ಅಮಿತಿ, ಅಧಿಕಾಧಿಕ, ಅಗೌಯರ, ಎಡೆಯು, ಅತಿ, ಕರಂ, ನೆರೆ, ಕಿಂನ, ನೀಡು, ಮಿಗೆ, ಎರಂ, ಉರೆ, ವಿಸ್ತಾರವು, ಬಿತ್ತರವು, ಹೆಚ್ಚು, ಅಗುಂದಣೆ, ನೂಳ, ಪೋಂಪುಳಿ, ಪೆಂಪು, ಕಿಂನ, ಮೆಲ್ಲಿ, ನಾಡೆ, ಮೊಕ್ಕಳಂ, ಆಪಂ, ಆವಗಂ, ಅಳುಂಬ.

Excessive, a. ಮಿತಿಯಿಲ್ಲದ, ಅಧಿಕಾಧಿಕ, ಅತ್ಯಂತ್ತದ, ನಿತಾಂತ್ರದ, ಅತಿವೇಲ, ಭೃಶವಾದ, ಅತಿಮಾತ್ರ, ಗಾಢ, ನಿರ್ಭರ, ಅತಿಶಯ, ಅತ್ಯರ್ಥವಾದ.

Excessively, ad. ಅಧಿಕಾಧಿಕವಾಗಿ, ಅಪಾರವಾಗಿ, ಅಮಿತಿಯಾಗಿ.

Exchange, s. n. ಬದಲು; (*an exchange where merchants meet*) ವರ್ತಕರುಕೂಡುವಸ್ಥಾನ; (*a bill of exchange*) ಹುಂಡಿ.

To Exchange, v. a. ಬದಲಾಯಿಸ, ಬದಲುಮಾಡ. v. *To change.*

Exchequer, s. n. ಖಜಾನೆ, ತೋಷೇಖಾನೆ, ಕೋಶವು, ಬೊಕ್ಕಸ, ಭಂಡಾರ. v. *Treasury.*

Excise, s. n. ಕಟ್ಟಿಕಂದಾಯ, ಕಟ್ಟಿವರಿ, ಕಟ್ಟಿತೆರಿಗೆ.

To Excise, v. a. ಕಂದಾಯತೆಗದುಕೊಳ್ಳ, ವರೀತೆಗದುಕೊಳ್ಳ, ಮಾಂನ್ಯಗಾರಿಕೆತೆಗದುಕೊಳ್ಳ.

Exciseman, s. n. ಕಂದಾಯತೆಗದುಕೊಳ್ಳುವವ, ಮಾಂನ್ಯಗಾರಿಕೀತೆಗೆಯುವವ.

Excision, s. n. ಛೇದಘಾತವು, ಸಂಹಾರವು, ಹಾಳು, ನಾಶನವು.

To Excite, v. a. ಉಲ್ಬಣಮಾಡು, ಎತ್ತಿಹಾಕು, ಪ್ರೇರೇಪಿಸು. v. *To animate, instigate, rouse, encourage.*

Exciter, s. n. ಎತ್ತಿಕಟ್ಟುವವ, ಪ್ರೇರೇಪಿಸುವವ, ಉಲ್ಬಣಮಾಡುವವ, ಕೆಣಕುವವ.

Excitement, s. n. ಎತ್ತಿಕಟ್ಟುವಿಕೆ, ಉಲ್ಬಣತೆಯು, ಪ್ರೇರೇಪಣೆ, ಕೆಣಕುವಿಕೆ.

To Exclaim, v. n. ಕೂಗಿಹೇಳು, ಸಾರಿಹೇಳು, ಗೋಳಿಡು, ಬೊಬ್ಬಿಡು. v. *To cry out, lament, vociferate.*

Exclaimer, s. n. ಕೂಗುವವ, ಸಾರಿಹೇಳುವವ, ಬೊಬ್ಬಿಡುವವ. v. *Vociferator.*

Exclamation, s. n. ಬೊಬ್ಬಿಡುವದು, ಘಟ್ಟಿಶಬ್ದ. v. *Clamour.*

To Exclude, v. a. ಹೊರಹಾಕು, ದೊಬ್ಬು. v. *To debar, shut out, banish, reject.*

Exclusion, s. n. ಹೊರಹಾಕುವಿಕೆ. v. *Rejection, exception, expulsion.*

Exclusive, a. ಅಲ್ಲದೆ, ಹೊರತಾಗಿ, ವಿನಾಯಿಸಿ.

To Excommunicate, v. a. ಬಹಿಷ್ಕಾರಹಾಕು, ಕುಲಕ್ಕೆ ಹೊರಡಿಸು.

Excommunication, s. n. ಬಹಿಷ್ಕಾರವು.

To Excoriate, v. a. ತೊಗಲುಸುಲಿಯು. v. *To slay, skin.*

Excoriation, s. n. ತೊಗಲುಸುಲಿಯುವಿಕೆ.

Excrement, s. n. ಮಲ, ಲದ್ದಿ, ಹಿಕ್ಕೆ, ಹೆಂಡೆ, ಅಮೇಧ್ಯ, ಹೇಲು, ಸಗಣಿ, ತೊಪ್ಪೆ, ಪುರೀಷವು.

Excrementitious, a. ಮಲದ, ಲದ್ದಿಯ, ಹಿಕ್ಕೆಯ, ಹೆಂಡೆಯ.

Excrescence, s. n. ವಾಳೆ, ಗಂಟು, ಗೆಡ್ಡೆ. v. *Bump, pimple, wen, swelling, ganglion.*

Excretion, s. n. ಶ್ಲೇಷ್ಮ ಹೊರಡುವಿಕೆ.

Excretory, a. ಶ್ಲೇಷ್ಮ ಹೊರಡಿಸುವ.

To Excruciate, v. a. ವೇಧಿಸು, ಯಾತನೆಪಡಿಸು. v. *To torture.*

To Exculpate, v. a. ನಿರಾಪರಾಧಸ್ಥನ್ನಮಾಡು, ಅಪರಾಧಾಬಡುದುಹಾಕು. v. *To excuse.*

Exculpation, s. n. ನಿರಾಪರಾಧ, ನಿರಾಘ್ಯೇದ.

Excursion, s. n. (*ramble*) ವಿಲಾಸಸಂಚಾರ, ಸವಾರಿ, ವಿಹಾರ, ಪರಿಕ್ರಮ; (*expedition*) ದೂರಪಥ, ಗ್ರಾಮಾಂತರಗಮನ.

Excusable, a. ಮನ್ನಿಸತಕ್ಕ, ಕ್ಷಮಿಸತಕ್ಕ.

Excuse, s. n. ನೆಪ, ನೆವ, ವ್ಯಾಜ, ಮಿಷ.

To Excuse, v. a. ಬಿಟ್ಟುಬಿಡು, ಮನ್ನಿಸು, ಕ್ಷಮಿಸು; I cannot come, *excuse* me ನಾನುಬರಲಾರೆ ನನ್ನನ್ನುಕ್ಷಮಿಸು.

Excuser, s. n. ಮನ್ನಿಸುವವ, ಕ್ಷಮಿಸುವವ.

Execrable, a. ಅಮಂಗಳದ, ವಾಕರಿಕೆಯ, ಅಸಂಹ್ಯದ, ಛೀಥೂಕ್ಕೆಯಾದ. v. *Cursed.*

Execrably, ad. ಅಸಂಹ್ಯವಾಗಿ, ವಾಕರಿಕೆಯಾಗಿ, ಛೀಥೂಕ್ಕೆಯಾಗಿ.

Execration, s. n. ಶಾಪ, ಶಪನೆ. v. *Curse.*

To Execute, v. a. (*to perform*) ಆಗಮಾಡು, ತೀರಿಸು; (*to kill*) ಸಂಹರಿಸು, ಕೊಂದುಹಾಕು; (*to hang*) ಗಲ್ಲಾಕು; (*to execute a work*) ಮಾಡು, ತೀರಿಸಿಬಿಡು,

Execution, s. n. ತೀರ್ಪು, ಮಾಡ್ವಿಕೆ; (*of a malefactor*) ಗಲ್ಲು; (*to do execution*) ಸಂಹರಿಸು, ನಾಶನಮಾಡು; (*to put into execution*) ಆಗಮಾಡಿಸು, ಕೈಹಚ್ಚಿಸು; (*a place of execution*) ಗಲ್ಲಿನ ಸ್ಥಳ; (*great execution*) ವಿಧ್ವಂಸನ, ಹತಾಹತಿ.

Executioner, s. n. ಗಲ್ಲಿಗೆಹಾಕುವವನು.

Executive, a. ನಡಿಸುವ, ಮಾಡಿಸುವ.

Executor, s. n. (*of commands*) ಆಜ್ಞಾಧಾರಕನು; (*of a will*) ಕಾರ್ಯನಿವಾರಿಸುವವನು.

Executrix, s. n. ಕಾರ್ಯನಿವಾರಿಸುವವಳು.

Exemplarily, ad. (*in such a manner as deserves imitation*) ಅನುಸರಿಸತಕ್ಕದ್ದಾಗಿ; (*in such a manner as may warn others*) ಭಯಪಡಿಸತಕ್ಕದಾಗಿ, ಎಚ್ಚರಪಡಿಸತಕ್ಕದಾಗಿ.

Exemplary, a. (*worthy of imitation*) ಅನುಸರಿಸತಕ್ಕ; (*calculated to warn others*) ಭಯಪಡಿಸತಕ್ಕ.

To Exemplify, v. a. (*illustrate by example*) ನಡತೆಯಿಂದ ತೋರಿಸು, ದೃಷ್ಟಾಂತಕಾತರ, ಉದಾಹರಿಸು. v. Also *to transcribe.*

Exempt, Exempted, part. (*from tax*) ಮಾನ್ಯದ; (*from punishment*) ಮನ್ನಿಸಿದ, ಕ್ಷಮಿಸಲ್ಪಟ್ಟ.

To Exempt, v. a. (*from tax*) ಮಾನ್ಯವಾಗಿಮಾಡು; (*from punishment*) ಮನ್ನಿಸು, ಕ್ಷಮಿಸು, ಮಾಫುಮಾಡು.

Exemption, s. n. (*from tax*) ಮಾನ್ಯದೊಕ್ಕಲು; (*from punishment*) ಕ್ಷಮೆ, ಮನ್ನಣೆ, ಮಾಫು.

Exequies, s. n. ಕರ್ಮಾಂತ್ರರ, ಅಪರಕ್ರಿಯೆ, ಉತ್ತರಕ್ರಿಯೆ. v. *Obsequies, funeral rites.* (*to perform*) ಕರ್ಮಾಂತ್ರಗಳನಡಿಸು, ಅಪರಕ್ರಿಯೆಮಾಡು.

Exercise, s. n. (*labour*) ಕಷ್ಟ. ಶ್ರಮ; (*use, practice*) ಅಭ್ಯಾಸ, ಸಾಧನೆ, ಪಳಕ, ಬಳಕೆ, ಅಳವೋಗ; (*task*) ಪಾಠ; (*bodily exercise or recreation*) ವಿಹರಣೆ, ನಡೆದಾಡಿಕೆ, ಸಂಚರಣೆ; (*gymnastic exercise*) ಸಾಮು, ಗರಡೀಸಾಧನೆ, ಸಾಧಕ; (*military exercise*) ಕವಾಯು; (*bow and arrow exercise*) ಧನುರ್ವಿದ್ಯೆ; (*sword exercise*) ಅಸ್ತ್ರವಿದ್ಯಾಶಿಕ್ಷೆ.

To Exercise, v. a. ಅಭ್ಯಸಿಸು, ಸಾಧನೆಮಾಡು, ಪಳಕಮಾಡು, ಆಳು. v. *To employ, busy, discipline, train, perform, practise, exert.* (*to exercise a horse*) ಕೈಯಾಳಿರಿಸು, ಒಲಾಡಿಸು; (*to exercise authority*) ಧುರಂಧರಿಕೆಮಾಡು, ಅಧಿಕಾರತ್ವತೋರಿಸು; (*to take exercise*) ವಿಹರಣೆಮಾಡು; (*to exercise as troops*) ಕವಾಯುಮಾಡಿಸು.

To Exert, v. n. ಕಷ್ಟತಕ್ಕೊಳ್ಳು, ಪ್ರಯಾಸಪಡು, ಹರಪ್ರಯತ್ನಮಾಡು, ಹೆಣಗು, ಹುಮ್ಮಸುಮಾಡು, ಹೂಂಕರಿಸು, ಮುಕ್ಕರಿಯು.

Exertion, s. n. ಹುಮ್ಮತ್ತು, ಹುಮ್ಮಸು, ಕಷ್ಟ, ಉದ್ಯಮವು, ಗನತೆ, ಪ್ರಯತ್ನ. v. *Effort.*

Exhalation, Exhalement, s. n. ಊಷ್ಮ, ಹಬೇಳ್ವಿಕೆ, ಉಗಿಯೇಳ್ವಿಕೆ, ಬಾಷ್ಪವು.

To Exhale, v. a. ಹಬೇಳು, ಉಗಿಯೇಳು.

To Exhaust, v. a. ತೀರಿಸು, ಬರಿದುಮಾಡು. v. *To empty, void, spend. (to exhaust the breath)* ದಂಮ್ಮುಹಿಡಿಯು, ಏದು.

Exhaustion, s. n. ದಣುವು, ತೀರಿಕೆ, ಶೋಷ.

Exhaustless, a. ತೀರಕೂಡದ, ಇಂಗದ, ತೀರಲಿಕ್ಕಸಾಧ್ಯವಾದ, ಒಣಗಿಸಲಾಗದ, ಸುಂದಿಸಕೂಡದ.

To Exhibit, v. a. ಎತ್ತಿತೋರಿಸು, ತೋರಿಸು.

Exhibition, s. n. ಎತ್ತಿತೋರಿಸುವಿಕೆ, ತೋರಿಕೊಡುವಿಕೆ. v. *Show, display.*

To Exhilirate, v. a. ಸಂತೋಷಪಡಿಸು, ಹರ್ಷಪಡಿಸು, ಆಹ್ಲಾನಂದಪಡಿಸು. v. *To cheer.*

Exhiliration, s. n. ಆಹ್ಲಾನಂದ, ಹರ್ಷ, ಸಂತೋಷ, ಖುಷಾಲು.

To Exhort, v. a. ಬೋಧಿಸು, ಬುದ್ಧಿಹೇಳು, ಉಪದೇಶಿಸು.

Exhortation, s. n. ಬುದ್ಧಿಹೇಳುವಿಕೆ, ಬೋಧೆ, ಉಪದೇಶ.

Exhorter, s. n. ಬೋಧಕ, ಉಪದೇಶಕ, ಬುದ್ಧಿಹೇಳುವವ.

Exigence, Exigency, Exigent, s. n. ಆವಶ್ಯಕ, ಅಗತ್ಯ, ಅವಸರ. v. *Demand, necessity, want, need.*

Exile, s. n. ಹೊರಡಿಸುವಿಕೆ, ಪಾರುಮಾಡುವಿಕೆ, ಗಡೀದಾಟಿಕೆ, ಗಡೀಪಾರು. v. *Banishment. (an exile)* ದೇಶಭ್ರಷ್ಟನು, ಗಡೀಪಾರಾದವ.

To Exile, v. a. ಪಾರುಮಾಡು, ಹೊರಡಿಸು, ಗಡೀದಾಟಿಸು, ಗಡೀಪಾರುಮಾಡು. v. *To banish. (to be exiled)* ಪಾರುಮಾಡಲ್ಪಡು, ಹೊರಡಿಸಲ್ಪಡು, ದೇಶಭ್ರಷ್ಟನಾಗು.

To Exist, v. n. ಇರು, ಪ್ರಾಣದಿಂದಿರು, ಬಾಳು. v. *To live, to be.*

Existence, Existency, s. n. ಇರುವಿಕೆ, ಬಾಳ್ವಿಕೆ, ಸತ್ತೆ.

Existent, Existing, a. ಇರುವ, ಪ್ರಾಣದಿಂದಿರುವ, ಸಜೀವ; *(self-existing, one of the attributes of the Deity)* ಸ್ವಯಂಭು.

Exit, s. n. *(death)* ಬರ್ಜ, ಮರಣ, ಸಾವು, ಪಂಚತ್ವ, ಮೃತಿ; *(departure)* ಹೊರಡುವಿಕೆ.

To Exonerate, v. a. ಭಾರವಿಳಿಸು. v. *To disburden, unload, discharge.*

Exoneration, s. n. ಭಾರವಿಳಿಸುವಿಕೆ.

Exorable, a. ಕರುಣದ, ಕಾರುಣ್ಯದ.

Exorbitance, Exorbitancy, s. n. ಮಿತಿಮೀರಿಕೆ, ಅಡ್ಡಾದಿಡ್ಡಿ, ದಬ್ಬಾದುಬ್ಬಿ; ಅನ್ಯಾಯ, ಹದ್ದುಮೀರುವಿಕೆ.

Exorbitant, a. ಮೀರಿದ, ಮಿತಿತಪ್ಪಿದ, ಅಪಾರದ, ಮೇರೆತಪ್ಪಿದ, ಅನ್ಯಾಯವಾದ, ಹದ್ದುಮೀರಿದ, ಅಡ್ಡಾದಿಡ್ಡಿಯಾದ.

To Exorcise, v. a. ಉಚ್ಚಾಟನೆಮಾಡು, ಅಭಿಮಂತ್ರಿಸು.

Exorciser, s. n. ಭೂತಚಿಕಿತ್ಸಕ, ಭೂತವೈದ್ಯ, ಮಂತ್ರಗಾರ. v. *Enchanter.*

Exorcism, s. n. ಉಚ್ಚಾಟನೆ, ಮಂತ್ರ. v. *Enchantment.*

Exordium, s. n. ತಲೆಪಚ್ಚ, ಪೀಠಿಕೆ.

Exotic, a. ಅನ್ಯದೇಶದ. v. *Foreign.*

To Expand, v. a. *(to spread)* ಹರಡು, ಹಾಸು; *(to dilate)* ವಿಸ್ತರಿಸು, ವ್ಯಾಪಿಸು, ಹರಡು. v. *To*

dilate, stretch, spread. (to expand the wings, as a bird) ರೆಕ್ಕೆಬಿಚ್ಚು; *(to expand as a flower)* ವಿಕಸಿಸು, ಅಲರು, ಬಿರಿಯು.

Expanded, part. ಪ್ರವೃದ್ಧ, ಪ್ರಸೃತ.

Expanse, Expansion, s. n. ಉಬ್ಬು, ವಿಸ್ತರಿಕೆ; *(the expanse of heaven)* ಆಕಾಶಮಂಡಲ.

Expansive, a. ವಿಸ್ತಾರವಾಗತಕ್ಕ.

Exparte, s. n. *(evidence)* ಒಂದುಕಡೇಸಾಕ್ಷಿ, ಏಕಪಕ್ಷಸಾಕ್ಷಿ.

To Expatiate upon, v. n. ಪ್ರಗಲ್ಭಿಸು, ಪ್ರಸ್ಫುರಿಸು, ಪ್ರಕಟನೇಮಾಡು, ವಿಸ್ತಾರವಾಗಿ ಮಾತಾಡು.

To Expect, v. a. ಎದುರುನೋಡು, ಕಾದುಕೊಂಡಿರು, ಅಪೇಕ್ಷಿಸು, ದಾರಿಕಾದುಕೊಂಡಿರು, ದಾರಿನೋಡು, ನಿರೀಕ್ಷಿಸು.

Expectant, Expecter, s. n. ಉಮೇದುವಾರನು, ಕಾದುಕೊಂಡಿರುವವನು, ನಿರೀಕ್ಷಿಸಿಕೊಂಡಿರುವವನು, ಎದುರುನೋಡುವವನು.

Expectation, s. n. ಅಪೇಕ್ಷಣೆ, ನಿರೀಕ್ಷೆ, ಎದುರುನೋಡ್ವಿಕೆ, ಆಶೆ. v. *Hope. (to raise expectations)* ಆಶೆಕೊಡು; *(to disappoint expectations)* ಆಶೆಕೆಡಿಸು, ಮೋಟನಾಮಾಡು, ಮನಾಸಂಧಿಸು.

To Expectorate, v. a. ಕ್ಯಾಕರಿಸು.

Expectoration, s. n. ಕ್ಯಾಕರಿಕೆ.

Expectorative, a. ಕ್ಯಾಕರಿಕೆಯ.

Expediency, Expedience, s. n. *(fitness)* ಯುಕ್ತವು, ಯೋಗ್ಯವು; *(haste)* ತ್ವರೆ, ಅವಸರ.

Expedient, a. ಯುಕ್ತ, ಅವಸರದ, ದೀಮಸದ, ಅಗತ್ಯದ. v. *Fit, proper, necessary, suitable.* It is *expedient* ಅದಗತ್ಯವೆ; It is not *expedient* ಅದಗತ್ಯವಿಲ್ಲ.

Expedient, s. n. ಯುಕ್ತಿ, ಉಪಾಯ, ಅನುಕೂಲ್ಯವು.

To Expedite, v. a. *(to hasten)* ಅವಸರಿಸು; *(to facilitate)* ಅನುಕೂಲಿಸು; *(to dispatch)* ಕಳುಹಿಸು.

Expedition, s. n. *(haste)* ಅವಸರ, ತ್ವರಿತ, ವೇಗ, ಶೀಘ್ರಣ; *(a journey)* ಪ್ರಯಾಣ; *(a military expedition)* ದಂಡೂರಡುವಿಕೆ.

Expeditious, a. ತ್ವರಿತದ, ಅವಸರದ, ವೇಗದ, ಶೀಘ್ರಪಾಕಿಯಾದ. v. *Clever, nimble.*

Expeditiously, Expeditely, ad. ತ್ವರೆಯಾಗಿ, ಅತಿತ್ವರೆಯಾಗಿ, ಶೀಘ್ರವಾಗಿ.

To Expel, v. a. ಹೊರಘಾಕು, ಹೊರಡಿಸು. v. *To banish, eject, drive out.*

Expelled, part. ಹೊರಘಾಕಲ್ಪಟ್ಟ, ಬಹಿಷ್ಕೃತವಾದ, ನಿಃಕಾಸಿತ, ಅಪಕೃಷ್ಟ.

To Expend, v. a. ಖರ್ಚುಮಾಡು; *(to be expended)* ಆಗಿಹೋಗು.

Expender, s. n. ಖರ್ಚಿನವ, ದುಲಾಳಿ.

Expenditure, s. n. ಖರ್ಚುಮಾಡೋಣ, ವೆಚ್ಚ.

Expense, s. n. ವೆಚ್ಚ, ಖರ್ಚು, ವ್ಯಯ.

Expensive, a. *(costly)* ಖರ್ಚಿನ, ಭಾರಿಯಾದ; *(extravagant)* ದುಲಾಳಿಯ, ಶಿಗವರಿಯ, ಧುಲಾಯಿನ.

Expensively, ad. ಧುಲಾಲವಾಗಿ, ಖರ್ಚಾಗಿ, ದುಲಾಳಿಯಾಗಿ.

Expensiveness, s. n. *(extravagance)* ದುಲಾಳಿ, ಖರ್ಚು, ಧುಲಾಲು; *(costliness)* ಭಾರಿ.

Experience, s. n. ಅನುಭವಿಕೆ, ವ್ಯಾಸಂಗವು. v. *Practice, knowledge.*

To Experience, v. a. *(to know)* ಅನುಭವಿಸು; *(to try)* ನೋಡು, ವಿಚಾರಿಸು. v. *To practise, try, know.*

Experienced, part. ಅನುಭವವಾದ. v. *Expert.*

Experiment, s. n. ಶೋಧನೆ, ವಿಚಾರಣೆ, ಪರೀಕ್ಷೆ.

Experimentally, ad. ಪರೀಕ್ಷಾರ್ಥವಾಗಿ, ಅನುಭವವಾಗಿ.

Experimental, a. ಅನುಭೋಗವಾದ, ಅಭ್ಯಸಿಸಿದ.

Expert, a. ಜಾಣತನದ, ಶೀಘ್ರಪಾಕವುಳ್ಳ, ಕುಶಲಿಯಾದ. v. *Skilful, dextrous, ready.*

Expertly, ad. ಜಾಣತನವಾಗಿ, ಕುಶಲವಾಗಿ, ಚಟುವಟಿಕೆಯಾಗಿ.

Expertness, s. n. ಜಾಣತನ, ಕುಶಲತನ, ನಿಪುಣತನ, ಶೀಘ್ರಪಾಕತ್ವ, ಚುರುಕುಬುದ್ಧಿ, ಚಟುವಟಿಕೆ. v. *Skill.*

Expiable, a. ನಿವೃತ್ತಿಯಾಗತಕ್ಕ, ನಿವರ್ತಿಕೆಯಾಗತಕ್ಕ, ವಿಮೋಚನೆಯಾಗತಕ್ಕ.

To Expiate, v. a. ನಿವೃತ್ತಿಮಾಡು, ನಿವರ್ತಿಸಿಕೊಳ್ಳು. v. *To atone.*

Expiation, s. n. ನಿವಾರ್ತಿಕೆ, ನಿವರ್ತಿಕೆ, ವಿಮೋಚನೆ, ಪ್ರತಿಕಟೆ.

Expiration, s. n. *(conclusion)* ಮುಗಿವು, ಅಂತವು; *(death)* ಮರಣ, ಸಾವು, ಮೃತ್ಯು, ಕಾಲಾಂತ. v. *Cessation, conclusion.*

To Expire, v. n. *(to die)* ಸಾಯು, ಸತ್ತುಹೋಗು; *(to terminate)* ತೀರಿಹೋಗು, ಆಗಿಹೋಗು.

To Explain, v. a. ಟೀಕಿಸು, ಅರ್ಥಮಾಡು, ತಿಳಿಸು, ವಿವರಿಸಿಹೇಳು, ವಿಶದಿಸು. v. *To illustrate.*

Explainer, s. n. ತಿಳಿಸುವವ, ಅರ್ಥಕೊಡುವವ.

Explanation, Explication, s. n. ಟೀಕು, ಅರ್ಥ, ವಿಮರ್ಶೆ. v. *Illustration, demonstration, interpretation.*

Explanatory, a. ತಿಳಿಸುವ, ವಿವರವಾದ, ವಿಮರ್ಶೆಯಾದ, ಅರ್ಥವಾದ.

Expletive, a. ನಿರರ್ಥಕವಾದ, ಅಪ್ರಯೋಜಕವಾದ.

Explicable, a. ಅರ್ಥವಾಗತಕ್ಕ, ಟೀಕಾಗತಕ್ಕ.

Explicit, a. ನಿರ್ಮಲದ, ವಿಮರ್ಶೆಯ, ವಿವರವಾದ.

Explicitly, ad. ನಿರ್ಮಲವಾಗಿ, ವಿವರವಾಗಿ, ವಿಶದವಾಗಿ.

To Explode, v. a. ತೆಗದುಹಾಕು, ವಿಸರ್ಜಿಸು.

Exploit, s. n. ಪರಾಕ್ರಮಕಾರ್ಯ, ಸಾಹಸಕಾರ್ಯ. v. *Achievement.*

To Explore, v. a. ಶೋಧಿಸು, ವಿಚಾರಿಸು. v. *To try, examine, search into.*

Explosion, s. n. ಠೆಗ್ಗಸುವದು, ಧಗ್ಗಸುವದು, ಮದ್ದುಹಾರುವಿಕೆ.

Explosive, a. ಧಗ್ಗಸುವ, ಠೆಗ್ಗಸುವ.

Export, s. n. ಸರಕುಹತ್ತಿಸುವಿಕೆ.

To Export, v. a. ಸರಕುಹತ್ತಿಸು, ಸಾಮಾನುರವಾನೆಮಾಡು; *(to be exported)* ಸರಕುಹತ್ತಿಸಲ್ಪಡು.

Exports, Exportation, s. n. ಹತ್ತಿಸಿದಸರುಕು, ಸರಕುಹೇರೋಣ.

To Expose, v. a. *(publish)* ಬಹಿರಂಗಮಾಡು, ಪ್ರಸಿದ್ಧಿಮಾಡು, ಹೊರದಿಸು, ಪ್ರಕಟನೆಮಾಡು; *(to put in danger)* ಮೋಸದಲ್ಲಿಡು, ಮೋಸಕೊಳಿಸು, ಪ್ರಮಾದಕೊಳಿಸು; *(to lay open)* ಬಿಚ್ಚು; *(to make contemptible)* ಮಾನಭಂಗಮಾಡು, ಮಾನಾತೆಗೆಯು, ಅವಮಾನಮಾಡು; *(for sale)* ಅಂಗಡಿಯಿಡು, ಅಂಗಡೀಹಾಕು.

Exposition, s. n. ವಿವರಿಕೆ, ಟೀಕು, ಟಿಪ್ಪಣೆ. v. *Interpretation*; also *exposure, situation.*
Expositor, s. n. ಅರ್ಥಕೊಡುವವ, ಟೀಕಿಸುವವ.
To Expostulate, v. a. ವ್ಯಾಜ್ಯವಾಡ, ಹೋರಾಡ, ಬುದ್ಧಿಹೇಳ, ಗದರಿಸ; *(to complain)* ಮೊರೆಯಿಡ, ಗೋಳಿಡ, ಬೊಬ್ಬಿಡ.
Expostulation, s. n. ಹೋರಾಟ, ವ್ಯಾಜ್ಯ, ಮೊರೆಯಿಡುವಿಕೆ. v. *Debate, complaint, altercation.*
Expostulator, s. n. ಮೊರೆಯಿಡುವವ, ಹೋರಾಡುವವ.
Exposure, s. n. *(disclosure)* ಬಹಿರಂಗಮಾಡೋಣ, ಪ್ರಸಿದ್ಧಿಮಾಡೋಣ.
To Expound, v. a. ಟೀಕಿಸ, ತೋರಿಸಿಕೊಡ, ಅನ್ವಯಿಸ, ಅರ್ಥಹೇಳ. v. *To explain, interpret.*
Expounder, s. n. ಅನ್ವಯಕ, ಟೀಕಿಸುವವ.
Express, a. *(apparent)* ನಿರ್ಮಲದ, ಸ್ಪಷ್ಟವಾದ; *(plain)* ಸಂದೇಹವಿಲ್ಲದ; *(like)* ಸರಿಸಮಾನದ, ಸರಿಯಾದ; *(particular)* ವಿಶೇಷದ, ಮುಖ್ಯವಾದ; *(an express order)* ಜರೂರುದತಾಕೀರಿ, ಖಂಡಿತವಾದಪ್ಪಣೆ.
Express, s. n. *(messenger)* ದೂತನು, ಜಂಘಾಕರಿಕ, ಚಾರ, ಜಾಂಘಿಕ; *(to come express)* ಉದ್ದೇಶ್ಯವಾಗಿಬರ, ವಿಶೇಷತಾತ್ಪರ್ಯವಾಗಿಬರ.
To Express, v. a. *(to remark)* ಹೇಳ, ನುಡಿಯ, ವಿವರಿಸ; *(to squeeze out)* ಅಣಾಗಿಸ, ಹಿಂಡ.
Expressed, part. ಹೇಳಿದ, ಅಣಾಗಿಶಿದ.
Expressible, a. *(utterable)* ಹೇಳತಕ್ಕ; *(that may be drawn)* ಅಣಾಗಿಸತಕ್ಕ, ಹಿಂಡತಕ್ಕ.
Expression, s. n. ಮಾತು, ಭಾಷಾವಿಶೇಷ, ಅಣಾಗಿಸುವಿಕೆ. v. *Representation, description, pronunciation, speech.*
Expressive, a. ಅರ್ಥಪುಷ್ಟಿಯಾದ, ಅರ್ಥಗೌರವವುಳ್ಳ.
Expressiveness, s. n. ಅರ್ಥಗೌರವವು, ಅರ್ಥಪುಷ್ಟಿಯು.
Expressly, ad. ನಿರ್ಮಲವಾಗಿ, ತದುದ್ದೇಶ್ಯವಾಗಿ. v. *Plainly, directly.*
Expulsion, s. n. ಹೊರಘಾಕುವಿಕೆ.
Expulsive, a. ಹೊರಘಾಕುವ.
To Expunge, v. a. ತೆಗದುಹಾಕ, ಅಳಿಸ, ಹಿಂಜಿಬಿಡ, ಕೆಡಿಸ, ನಾಶನಮಾಡ. v. *To efface, annihilate.*
Exquisite, a. ರಮ್ಯವಾದ, ನಾಜೂಕಿನ, ಪಸಂದಾದ, ಪೂರ್ತಿಯಾದ. v. *Excellent, consummate, complete.* *(consummately bad)* ಬಹುಕೆಟ್ಟ.
Exquisitely, ad. ಅತಿರಮ್ಯವಾಗಿ, ಬಹುಪಸಂದಾಗಿ, ಸಂಪೂರ್ಣವಾಗಿ. v. *Excellently, completely.*
Exquisiteness, s. n. ಅತಿಯುಕ್ತ, ಸಂಪೂರ್ಣ. ಪಸಂದು. v. *Excellence, delicacy, perfection.*
Extant, a. *(remaining, not annihilated)* ಇರುವ; *(projecting)* ಹೊಟ್ಟೆಯುಬ್ಬಿದ.
Extatic, a. ಅತಿಸಂಭ್ರಮದ, ಬಹುಖುಷಾಲಾದ.
Extempore, Extemporal, Extemporally, Extemporaneous, Extemporary, a. ಮುಂದೇನೋಡದ; *(to speak extemporary)* ಮುಂದಾಗಿಯೋಚಿಸದೇ ಹೇಳ, ಮುಂದಾಲೋಚನೆಮಾಡದೇ ಮಾತಾಡ.
To Extend, v. a. *(to stretch out)* ಹಿಗ್ಗಿಸ, ಬಿರಿ

ಯುಸ; *(to lengthen)* ಉದ್ದಾಮಾಡ; *(the hand)* ಕೈಚಾಚ, ಕೈನೀಡ.

Extension, Extensiveness, Extent, s. n. ಅಗಲ, ವಿಶಾಲ, ವಿಸ್ತಾರ.

Extensive, Extended, a. ಅಗಲವಾದ, ವಿಶಾಲವಾದ, ವಿಸ್ತಾರವಾದ.

Extendible, a. ಉದ್ದಾಮಾಡತಕ್ಕ, ವಿಶಾಲಾಮಾಡತಕ್ಕ.

To Extenuate, v. a. *(to make thin, lean, or small)* ಸಂಗಾಮಾಡ, ಮೆಲ್ಲಿತುಮಾಡ; *(to palliate)* ಅಲಕ್ಷ್ಯಮಾಡ, ಶಿಲಿಕೇಯಾಗಿಬಿಡಿಸ.

Extenuation, s. n. *(palliation)* ಅಲಕ್ಷಿಕೆ, ನಿರ್ಲಕ್ಷ್ಯ. v. *Excuse, mitigation, palliation.* *(thinness)* ಸಂಗಾಡು, ಮೆಲ್ಲಿತು. v. *Thinness, leanness.*

Exterior, s. n. ಹೊರಗಡೆ, ಬಹಿರ್ಭಾಗ, ಹೊರಗೆ. v. *Superficial, outward.*

To Exterminate, v. a. ನಿರ್ಮೂಲಾಮಾಡ, ಕಿತ್ತಾಕ. v. *To extirpate, root out, destroy.*

Extermination, s. n. ಕಿತ್ತಿಹಾಕೆಯುವಿಕೆ, ನಿರ್ಮೂಲ, ಛೇದನೆ, ನಾಶನ, ಹಾಳು. v. *Destruction.*

Exterminator, s. n. ನಿರ್ಮೂಲಕ, ನಾಶನಾಮಾಡುವವ, ನಾಶಕನು, ಧ್ವಂಸಕನು.

External, a. ಬಾಂಹ್ಯದ, ಹೊರಗಿನ. v. *Exterior, outward.*

Externally, ad. ಬಾಂಹ್ಯವಾಗಿ, ಹೊರಗಾಗಿ.

Extinct, a. ಆರಿದ, ನಿಂತುಹೋದ; *(to be extinct)* ಆರ, ನಿಂತುಹೋಗ.

Extinction, Extinguishment, s. n. ಆರಿಕೆ, ಛೇದನೆ, ಹಾಳು, ನಾಶನ, ಧ್ವಂಸವು. v. *Destruction, suppression.*

To Extinguish, v. a. *(to put out)* ಶಾಂತಾಮಾಡ, ಆರಿಸ, ಊದಿಬಿಡ, ಅಗೆಯ, ಅವಿಯ; *(to destroy)* ನಾಶನಾಮಾಡ, ಹಾಳುಮಾಡ, ನಿರ್ಮೂಲಾಮಾಡ, ಧ್ವಂಸಾಮಾಡ.

Extinguisher, s. n. ನಿರ್ಮೂಲಕ, ನಾಶನಾಮಾಡುವವ, ಧ್ವಂಸಕನು, ಅಂತಕನು.

To Extirpate, v. a. ನಿರ್ಮೂಲಾಮಾಡ, ಕಿತ್ತಾಕ. v. *To exterminate, eradicate.*

Extirpation, s. n. ನಿರ್ಮೂಲ, ನಾಶನ, ಹಾಳು, ಧ್ವಂಸವು.

Extirpator, s. n. ನಿರ್ಮೂಲಕ, ನಾಶನಾಮಾಡುವವ, ಧ್ವಂಸಕನು.

To Extol, v. a. ಹೊಗಳ, ಸ್ತೋತ್ರಿಸ, ಕೊಂಡಾಡ, ಸ್ತುತಿಸ, ಮತಿಸ. v. *To praise, celebrate, applaud.*

Extolled, part. ಕೊಂಡಾಡಿದ, ಸ್ತೋತ್ರಿಸಿದ, ಸ್ತುತಿಸಿದ.

Extoller, s. n. ಭಟ್ಟ, ಸ್ತೋತ್ರಮಾಡೋಳುವವ, ಹೊಗಳುವವ.

To Extort, v. a. ಜೋರಾವರ್ಯಮಾಡ, ಕಿತ್ತುಕೊಳ್ಳ, ಬಲಾತ್ಕಾರಾಮಾಡ, ಕಸುಕೊಳ್ಳ. v. *To wrest.*

Extortion, s. n. ಕಸುಕೊಳ್ಳುವಿಕೆ, ದಂಡ, ದ್ರೋಹ, ವಂಚನೆ.

Extortioner, Extorter, s. n. ಕಸುಕೊಳ್ಳುವವ, ಸುಲುಕೊಂಬುವವ, ಮಸಿಮುಡುಕ, ದಂಡದ್ರೋಹಿ.

Extract, s. n. ಪ್ರಸ್ತಾಪ, ಸಾರಾಂಶ, ನಿರ್ಯಾಸವು. v. *Abstract, abridgment, compendium.*

To Extract, v. a. ಪ್ರಸ್ತಾಪಿಸ, ಸಾರಾಂಶಾತೆಗೆಯ, ಸಾರಗ್ರಹಣಾಮಾಡ. v. *To draw.*

Extraction, s. n. ಧೃತಿ, ಸಾರ, ನಿರ್ಹಾರ, ಅಶ್ಯವ

ಕರ್ಷಣ; *(lineage)* ವಂಶ, ಕುಲಾಂತರ; *(noble extraction)* ಕೌಲ, ಕೌಲಕೇಯ, ಕೌಲೀನ, ಕೌಲೇಯಕ, ಕೌಲ್ಯ.

Extraneous, a. ಅಪ್ರಸ್ತಾಪದ, ಸಂಮಂಧವಿಲ್ಲದ, ಹೊಂದದ. v. *Foreign.*

Extraordinarily, ad. ವಿಶೇಷವಾಗಿ, ಅಪೂರ್ವವಾಗಿ, ನೂತನವಾಗಿ.

Extraordinary, a. ಅಪೂರ್ವದ, ವಿಲಕ್ಷಣಾದ, ನೂತನವಾದ, ವಿಶೇಷವಾದ.

Extravagance, Extravagancy, Extravagantness, s. n. ಅತಿವ್ಯಯ, ದುಲಾಬಿತನ, ತೆಸವರಿತನ. v. *Prodigality, profusion, excess.*

Extravagant, a. ತೆಸವರಿಯ, ದುಲಾಬಿಯ, ಝುಲಾಲಿನ, ಅತಿವ್ಯಯವುಳ್ಳ; *(an extravagant man)* ಝುಲಾಲುಗಾರ, ಖರ್ಚುದಾರ; *(extravagant or foolish expense)* ಅಪಾತ್ರವ್ಯಯವು.

Extravagantly, ad. ಝುಲಾಲವಾಗಿ, ಅತಿವ್ಯಯವಾಗಿ.

Extravasated, a. ಸೋರಿದ, ಸುರಿದ.

Extravasation, s. n. ಸುರಿಯುವಿಕೆ, ರಕ್ತದೊಡಿಕೆ, ರಕ್ತಸೋರಿಕೆ.

Extreme, a. *(last)* ಅಂತೆದ, ಕೊಣಾದ; *(great)* ಅಧಿಕಾಧಿಕದ, ಬಹಳ, ಹೆಚ್ಚಾದ.

Extremely, ad. ಬಹುಅಧಿಕವಾಗಿ, ಬಹಳವಾಗಿ.

Extremity, s. n. *(extreme end)* ಅಂತೆ, ಕೊಣ; *(to be in extremity)* ಇಕ್ಕಟ್ಟಿನಲ್ಲಿರ; *(distress)* ಇಕ್ಕಟ್ಟು, ಕಷ್ಟ, ಶ್ರಮೆ, ತೊಂದರೆ; *(reduced to extremity)* ಅವಸ್ಥೆಯಾದ, ದಿಕ್ಕಿಲ್ಲದೇಹೋದ.

To Extricate, v. a. ತಪ್ಪಿಸ, ಸಿಕ್ಕುಬಿಡಿಸ, ತೊಡಕುಬಿಡಿಸ.

Extrinsic, Extrinsical, a. ಬಾಹ್ಯವಾದ, ಬಹಿರಂಗವಾದ, ಹೊರಗಿನ. v. *External.*

Extrinsically, ad. ಬಾಹ್ಯವಾಗಿ, ಹೊರಗಾಗಿ, ಬಹಿರಂಗವಾಗಿ.

Exuberance, s. n. ಸಂಪೂರ್ಣವು, ಹೇರಳವು, ಪುಷ್ಟಿ, ಪರಿಪೂರ್ಣ, ಹೆಚ್ಚುವಿಕೆ, ಅತಿಸಾರ. v. *Luxuriance, abundance.*

Exuberant, a. ಸಂಪೂರ್ಣವಾದ, ಸಮೃದ್ಧಿಯಾದ, ಹೆಚ್ಚಿನ, ಪುಷ್ಟಿಯಾದ. v. *Abundant, luxuriant.*

Exuberantly, ad. ಅಧಿಕಾಧಿಕ್ಯವಾಗಿ, ಅಪಾರವಾಗಿ, ಹೇರಳವಾಗಿ, ಅಪಾರವಾಗಿ, ಪುಷ್ಟಿಯಾಗಿ.

Exudation, s. n. ಉಕ್ಕಿಕೆ, ದ್ರವವು, ಕಶಿವು, ಒರತೆ.

To Exude, v. n. ರಸಸೋರ, ಉಕ್ಕ.

To Exulcerate, v. a. ಸೋರುವ್ರಣಹುಟ್ಟಿಸ.

To Exult, v. n. ಸಂಭ್ರಮಪಡ, ಕುಣಿದಾಡ, ಖುಷಾಲುಪಡ. v. *To rejoice, triumph.*

Exultation, s. n. ಸಂಭ್ರಮ, ಖುಷಾಲು. v. *Triumph, rejoicing.*

Exuviæ, s. n. ಕುಪ್ಪುಸ, ಪೊರೆ.

Eye, s. n. ಲೋಚನ, ನೇತ್ರ, ಅಂಬಕ, ಕಂಣು, ನಯನ, ಚಕ್ಷುಸ್ಸು, ಅಕ್ಷಿ, ಅಚ್ಚೆ, ದೃಕ್ಕು, ದೃಷ್ಟಿ, ಈಕ್ಷಣ; *(a quick eye)* ಗರಿಗಂಣು; *(to look attentively or amorously thro' eyes half shut)* ಅರೆನೋಟನೋಡ; *(prominent eyes)* ಮೆಡ್ಡಗಣ್ಣು; *(having fine eyes, like stag's eyes)* ಹರಿಣನೇತ್ರ, ಎರಳೆಗಂಣ್ಣು; *(corner of the eye)* ಕಂಣುಕೊನೆ; *(the outer corner of the eye)* ಅಪಾಂಗ; *(hollow of the eye)* ಕಂಣುಗುಣಿ;

(pupil of the eye) ಕರಿಯಾಲಿ, ತಾರಕೆ, ಕನೀನಿಕೆ; *(a mote in the eye)* ರವೆ; *(an eye tincture or salve)* ಕಾಡಿಗೆ; *(one-eyed)* ಒಕ್ಕಣ್ಣ; *(squint eyed)* ಅರೆಗಣ್ಣ, ಮೆಳ್ಳಗಣ್ಣುಳ್ಳ, ಓರೆಗಣ್ಣುಳ್ಳ, ಕೇಕರದೃಷ್ಟಿಯುಳ್ಳ; *(a malignant eye)* ಕ್ರೂರದೃಷ್ಟಿ, ಕೆಂಗಂಡಗಣ್ಣು; *(grey eyes)* ಬೆಕ್ಕಿಗಣ್ಣು; *(diseases of the eye)* ಕಣ್ಣುಬೇನೆ; *(eye of the wind)* ಗಾಳಿಯಮುಖ, ಗಾಳಿಯೆದುರು; *(eye of a needle)* ಸೂಜೀಗಣ್ಣು, ಸೂಜೀತೂಬು, ಸೂಜೀವಜ್ಜ; *(eye of a loop)* ಕೊಳಚೆ, ಕುಣಿಕೆ; *(a wink, glance, or signal with the eye)* ಕಣ್ಣುಸನ್ನೆ, ಕಣ್ಣಬೆಮಿಟಿವು; *(to wink with the eye)* ಕಣ್ಣಬೆಮಿಟೆ; *(to deceive the eyes)* ಕಣ್ಣುಕಟ್ಟು; I shall return in the twinkling of an *eye* ರೆಪ್ಪೆಹಾಕುವದರೊಳಗೆ ಬರುತ್ತೇನೆ, or ಕಣ್ಣುಮುಚ್ಚಿ ಕಣ್ಣುತೆರೆಯುವದರೊಳಗೆ ಬರುತ್ತೇನೆ.

To Eye, v. a. ದೃಷ್ಟಿಯಿಡು, ಕಣ್ಣಿಡು, ಕಣ್ಣೋಗಾವಲಾಗಿ ನೋಡು; *(to turn away the eyes)* ಕಣ್ಣುತಿರುಗಿಸು; *(to eye askance)* ಕಟಾಕ್ಷಿಸು, ಕಡೆಗಣ್ಣ ನೋಟನೋಡು. v. *To look, view, see.*

Eye-ball, s. n. ಕಣ್ಣುಗುಡ್ಡೆ.

Eye-brow, s. n. ಕಣ್ಣುಹುಬ್ಬು, ಭ್ರೂವು; *(space between the eye brows)* ಕೂರ್ಚ, ನಡುಹುಬ್ಬು; *(having the eye brows distant)* ಕಲೆಯದ ಹುಬ್ಬುಳ್ಳ; *(having the eye brows joined)* ಕಲತ ಹುಬ್ಬುಳ್ಳ, ಕೂಡುಬ್ಬಿನ.

Eye-glass, s. n. ದೂರ್ಬೀನು, ದುರ್ಬೀ, ದೂರದೃಷ್ಟೀಕೊಳವೆ.

Eye-lash, s. n. ರೆಪ್ಪೆಕೂದಲು.

Eyeless, a. ಕುರುಡ, ಕಣ್ಣಿಲ್ಲದ. v. *Blind.*

Eyelet, s. n. ತೂತು, ಕನ್ನ.

Eyelid, s. n. ಕಣ್ಣೆವೆ, ಕಣ್ಣುರೆಪ್ಪೆ.

Eye-salve, s. n. ಕಲ್ಕ, ಅಂಜನ, ಕಾಡಿಗೆ, ಕಣ್ಣುಕಪ್ಪು.

Eye-servant, s. n. ಬೂಟಾಳು, ಕಣ್ಣುಗಳ್ಳ.

Eyesight, s. n. ದೃಷ್ಟಿ, ಕಣ್ಣುನೋಟ.

Eyesore, s. n. ಕಣ್ಣೆರಸು, ಕಣ್ಣುಚ್ಚು; *(to be an eye sore)* ಕಣ್ಣೆರಸಾಗು.

Eye-witness, s. n. ಕಣ್ಣುಸಾಕ್ಷಿ; I was an *eye witness,* or saw with my own eyes ನಾನು ಕಣ್ಣಾರ ಕಂಡೆ.

F

Fable, s. n. ಕಟ್ಟುಕಥೆ, ಪ್ರಬಂಧವು, ಕಲ್ಪನೆ. v. *Fiction, romance, lie.* *(entertaining fables)* ರಮ್ಯವಾದ ಕಥೆಗಳು.

To Fable, v. a. ಕಥೆಕಟ್ಟು, ಕಥೆಕಲ್ಪಿಸು. v. *To romance, feign, lie.*

Fabler, Fablist, s. n. ಕಥೆಗಾರ.

Fabric, s. n. ಮನೆ, ಗೃಹ, ಹಟ್ಟಿ, ಬಸ.

Fabrication, s. n. ಕಟ್ಟುವಿಕೆ, ಕಟ್ಟುಕಥೆ, ಕಲ್ಪನೆ.

To Fabricate, v. a. ಕಟ್ಟು. v. *To build.* (*to devise falsely*) ಕಲ್ಪಿಸು, ಕಟ್ಟುಕಥೆಮಾಡು. v. *To forge.*

Fabulous, a. ಕಲ್ಪನೆಯ, ಸುಳ್ಳಿನ. v. *Feigned.*

Face, s. n. (*visage*) ಮುಖ, ಮೋರೆ, ಮುಸುಡಿ, ಮೊಗ, ಲಪನ, ತುಂಡ, ವದನ, ಆನನ, ಆಸ್ಯ; (*front*) ಎದಿರಿಗೆ, ಸಂಮ್ಮುಖ. v. *Front, cheek, side, surface, air, aspect, countenance, appearance, mien.* He did it before my *face* ಅವನು ನನ್ನ ಕಣ್ಣು ಮುಂದೆ ಮಾಡಿದ, or ಕಣ್ಣೆದುರಿಗೆ ಮಾಡಿದ; (*face to face*) ಮುಖತಾ, ಎದುರೆದುರು, ರೂಬು ರೂಬು; (*a bold face*) ಧೋಸುಮುಖ, ನಾಚಿಗ್ಗೇಡಿ ಮೋರೆ; (*to make faces*) ಮುರಿಕ, ಅಸಂಗಿಸು, ಇಗಿಲಿಸು; (*to turn the face* ಮೋರೆತಿರುಗಿಸು; (*a cheerful face*) ಕಳೆಮುಖ, ಸಂತೋಷದಮುಖ; (*the face, or best side of a cloth*) ಬಟ್ಟೆಮೇಗಡೆ, ಮುಂದುಗಡೆ.

To Face, v. a. (*to turn about*) ತಿರುಗು; (*to front*) ಮೋರೆಕೊಡು, ಅಭಿಮುಖವಾಗು, ಎದುರಾಗು; (*to oppose with boldness*) ಎದುರಾಡು; (*an instrument*) ಹದನುಮಾಡು; (*to face a coat*) ಅಂರಿ ಹಾಕು.

Facetious, a. ಉಲ್ಲಾಸದ, ಸಂಭ್ರಮದ, ಕುಚೋದ್ಯದ.

Facetiously, ad. ಕುಚೋದ್ಯವಾಗಿ, ಕೂಹಕವಾಗಿ, ಉಲ್ಲಾಸವಾಗಿ.

Facetiousness, s. n. ಉಲ್ಲಾಸ, ಹಾಸ್ಯ, ಕೂಹಕ. v. *Wit, mirth.*

Facile, a. ಸುಲಭದ, ಮೃದುವಿನ, ಸಾಧ್ಯ, ಸುಳುವಾದ. v. *Easy, pliant, flexible.* (*easy of access*) ಸೌಲಭ್ಯದ.

To Facilitate, v. a. ಅನುಕೂಲಿಸು, ಸುಲಭಮಾಡು.

Facility, s. n. ಅನುಕೂಲ, ಸುಲಭಿಕೆ, ಲಾಘವವು; (*with facility*) ಸುಲಭವಾಗಿ. v. *Easily.*

Facing, s.n. ಕಂಬಿ, ಕುದುರಾಕಂಬಿ. v. *Edging, border, front.* (*facing, opposite*) ಎದುರಾಗಿರುವ, ಅಭಿಮುಖದ.

Fact, s. n. (*deed*) ಕೃತ್ಯ, ಕರ್ಮ, ಕೆಲಸ; (*reality*) ಸುಬದ್ಧ, ನಿಶ್ಚಯ, ನಿಜ; (*in fact*) ಸುಬದ್ಧವಾಗಿ, ನಿಶ್ಚಯವಾಗಿ, ನಿಜವಾಗಿ. v. *Really.*

Faction, s. n. (*confederacy*) ಬಂದುಕಟ್ಟು, ಫಿತೂರಿ, ಸಂಘ, ಆಯಕಟ್ಟು; (*tumult*) ತುಮುಲ, ಗಲಿಬಿಲಿ, ಕಲಾಪ, ಕಲಹ; (*machination*) ತಂತ್ರ.

Factious, a. ಪದರಿಕೆಯ, ಕುಡಿಗೇಡಿಯ, ಫಿತೂರಿಯ; (*a factious man*) ಕಲಹಕಂಟಕ, ಕುಡಿಗೇಡಿಯು.

Factiousness, s. n. ಕುಡಿಗೇಡಿತನ, ಇಲ್ಲಾಮಲ್ಲಿತನ.

Factitious, a. ಕೃತ್ರಿಕೃತ್ಯದ, ಕೃಗಾರಿಕೆಯಾದ.

Factor, s. n. ವಕೀಲು, ಗುಮಾಸ್ತ.

Factory, s. n. ವರ್ತಕಬಿಡಾರ, ಕೋಠಿಕರಸ್ಥಳ, ಕಟ್ಟಾ.

Factotum, s. n. ಸಕಲವ್ಯಾಲಿಗದವ, ಸಕಲಕೆಲಸಿ.

Faculty, s. n. (*ability*) ಶಕ್ತಿ, ಯೋಗ್ಯತೆ; (*powers of the mind*) ಧೀಂದ್ರಿಯ, ಬುದ್ಧೀಂದ್ರಿಯ; (*superhuman faculty*) ಅಣಿಮೆ; (*authority*) ಅಧಿಕಾರ, ಕರ್ತೃತ್ವ.

To Fade, v. n. *(to wither)* ಬಾಡ, ಕಂದ, ಕುಂದ; *(to languish)* ನವಿಯ, ಕ್ಷೀಣವಾಗ, ದುರ್ಬಲವಾಗ; *(to fade as colours)* ಬಂಣಹಾರ, ಬಂಣಹೋಗ.

Faded, part. *(as colours)* ಬಂಣಹಾರಿದ; *(as flowers)* ಬಾಡಿದ, ಕಂದಿದ, ಕುಂದಿದ.

Fæces, Fæcula, s. n. *(settlings)* ತಿಟ್ಟಿ, ಮಷ್ಟು, ಬಗ್ಗಡ, ಗಶಿ; *(excrement)* ಅಶುಚಿ, ಹೇಲು, ಮಲ.

Fag, s. n. *(a slave)* ಗುಲಾಮ, ಶ್ರಮಗಾರ.

To Fag, v. n. *(grow weary)* ದಣುವಾಗ, ಶ್ರಮೆಪಡ, ಬೇಸರಗೊಳ್ಳ.

Fagend, s. n. ಅಂಚು, ತರಗು, ಕಂಬಿ.

Fagot, s. n. ಕಟ್ಟಿಗೇಹೊರೆ, ಸಾದೇಹೊರೆ.

To Fagot, v. a. ಹೊರೇಕಟ್ಟಿ, ಕಟ್ಟಿ.

Fail, Failure, s. n. *(deficiency)* ಕೊರತೆ, ಕಡಮೆ, ಅಕರಣೆ; *(want of success)* ಪ್ರಾತಿಕೂಲ್ಯ, ವಿಫಲ; *(extinction)* ನಿರ್ಮೂಲ; *(omission)* ತಪ್ಪಿಕೆ; *(without fail)* ತಪ್ಪದೆ.

To Fail, v. n. *(be deficient)* ಕಡಮೆಯಾಗ; *(to decline)* ಕ್ಷೀಣವಾಗ, ನವಿಯ, ಕುಂಗ, ತಗ್ಗ; *(to decay)* ಇಳಿಥರವಾಗ; *(to forsake)* ಕೈಬಿಡ; *(to fail, not to succeed)* ಕೈಕೂಡಿಬರದೇಹೋಗ, ಅನುಕೂಲವಾಗದೇಹೋಗ; He *failed* in his judgment ಅವನ ಗೊತ್ತು ತಪ್ಪಿಹೋಯಿತು; My strength *fails* me ನನ್ನ ಬಲ ತಪ್ಪಿಹೋಗುತ್ತಾಬರುತ್ತದೆ, or ನನ್ನ ಬಲ ಕುಂಗಿಬರುತ್ತದೆ; Do not *fail* in your promise ನಿನ್ನ ಮಾತು ತಪ್ಪಬೇಡ; He *failed* him in the time of need ಅವನವನ್ನೊಲ್ಲೇಸಮಯದಲ್ಲಿ ಸಡ್ಲಾಬಿಟ್ಟನು, or ಅನವನ್ನಿಕ್ಕಟ್ಟಿನ ವೇಳ್ಯದಲ್ಲಿ ಕೈಬಿಟ್ಟನು.

Failing, s. n. *(omission)* ತಪ್ಪಿಕೆ, ಕೈಬಿಡುವಿಕೆ, ತಪ್ಪು.

Fain, a. *(forced)* ಕಡ್ಡಾಯಮಾಡಲ್ಪಟ್ಟಿ; *(glad)* ಹರ್ಷವಾದ, ಸಂತೋಷವಾದ.

Faint, a. *(feeble)* ನಿಶ್ಚೈತಂನ್ಯದ, ಬಲಹೀನದ; *(not bright)* ಮಬ್ಬಿನ, ಮಸ್ಕಿನ; *(not loud)* ದುಸ್ವರದ, ಜೀರ್ಣಸ್ವರದ, ಗದ್ಗದಸ್ವರದ, ತಗ್ಗತ್ರಿತಿಯ, ಅಪಸ್ವರದ.

To Faint, v. n. ಘಾಳಾಗ, ಮೂರ್ಛೆಯಾಗ, ಕಾಳುಹಲಿದಿಯ.

Faint-hearted, a. ಧೈರ್ಯವಿಲ್ಲದ, ಅದುರುಗುಂದಿಕೆಯ. v. *Cowardly.*

Faint-heartedness, s. n. ಅಧೈರ್ಯ, ಅದುರುಗುಂದಿಕೆ. v. *Cowardice.*

Fainting, s. n. ಮೂರ್ಛೆ, ವಿಸ್ಮೃತಿ, ಕಾಳು, ಘಾಫಳಿ, ಮುಚ್ಚೆ, ಜೋಂಗಳಿ, ಹರವಸ, ಕಶ್ಮಲಫ, ಪ್ರಳಯ, ನಷ್ಟಚೇಷ್ಟತೆ.

Faintly, ad. ಜೀರ್ಣವಾಗಿ, ಬಲಹೀನವಾಗಿ, ಮಸಕಾಗಿ, ಮಂದನಾಗಿ. v. *Feebly, timorously.*

Faintness, s. n. ನಿಶ್ಚೈತಂನ್ಯ, ನಿರ್ವಂಣತೆ, ದುರ್ಬಲ, ಮಾಂದ್ಯ.

Fair, a. *(handsome)* ಕೋಮಲದ, ಚೆಲುವಿಕೆಯ, ಸೌಂದರ್ಯದ. v. *Beautiful, beauteous.* *(honest, just)* ನ್ಯಾಯದ, ಧರ್ಮದ. v. *Equable, candid, open.* *(civil)* ಅತಿವಿನಯದ; *(prosperous)* ಅನುಕೂಲದ; *(white)* ಬಿಳುಪಿನ; *(as weather)* ಮಬ್ಬಿಲ್ಲದ; *(as water)* ನಿಧಾನ, ತೆರೆಯಿಲ್ಲ

ದ, ಶಾಂತವಾದ; (*fair wind*) ಅನುಕೂಲವಾಯುವು, ಒಳ್ಳೇಘಾಳಿ, ತಕ್ಕ ಘಾಳಿ; (*not severe*) ಕಠಿಣವಿಲ್ಲದ; (*fair hair*) ನುಣುಪುಕೂದಲು, ಮಿಂಚುಕೂದಲು; (*fair and square*) ಚೋಖಾಕಿ, ಬಾಕಿಯಿಲ್ಲದ, ಸಾಲಝಾಡಿ, ತಂಟಾಪೈಸಲು; (*clear*) ನಿರ್ಮಲದ, ಮಸಕಿಲ್ಲದ; (*fair words*) ಚಕ್ಕಲು ಮಾತು; (*a fair character*) ಸಜ್ಜನ, ಉತ್ತಮ, ಚರಿತಬಾರಿ; (*fair play*) ಸಚೋಟಿ, ಸಲುವಳಿ; (*by fair means*) ನ್ಯಾಯವಾಗಿ; (*a fair disputant*) ನ್ಯಾಯವಾದಿ; (*a fair one*) ರೂಪವತಿ, ಸುಂದರಿ. v. *Beauty*. (*a fair copy*) ಶುದ್ಧ ಪ್ರತಿ, ಯಥಾ ಮಾತೃಕೆ.

Fair, ad. (*gently*) ಮೆಲ್ಲಗೆ; (*civilly*) ವಿನಯವಾಗಿ; (*on good terms*) ಅನುಕೂಲವಾಗಿ, ಸಮಾಧಾನವಾಗಿ.

Fair, s. n. (*market*) ಸಂತ್ರೆ, ಹಟ್ಟಿವು; (*day*) ಸಂತ್ರೇದಿವಸ.

Fairing, s. n. ರಂಸಲಿ, ಖೇಲನ, ಚಹಯಲು.

Fairly, ad. (*honestly*) ನ್ಯಾಯವಾಗಿ, ಧರ್ಮವಾಗಿ. v. *Candidly, justly, ingenuously, openly, plainly.* (*beautifully*) ಸೌಂದರ್ಯವಾಗಿ, ಚೆಲುವಿಕೆಯಾಗಿ; (*without a blot*) ಶುದ್ಧ ಪ್ರತಿಯಾಗಿ; (*commodiously*) ಚೊಕ್ಕಟವಾಗಿ; (*completely*) ಸಂಪೂರ್ಣವಾಗಿ.

Fairness, s. n. (*handsomeness*) ಚೆಲುವಿಕೆ, ಸೌಂದರ್ಯ; (*whiteness*) ಬಿಳುಪು; (*clearness*) ನಿರ್ಮಲತ್ವ; (*justness*) ನ್ಯಾಯ, ಧರ್ಮ; (*mildness*) ಶಾಂತಿ.

Fair-spoken, a. ಚಕ್ಕಲುಮಾತುಳ್ಳ.

Fairy, s. n. ಯಕ್ಷಿಣಿ, ಹೆಂಣುದೆವ್ವ.

Faith, s. n. (*belief*) ನಂಬಿಕೆ, ವಿಶ್ವಾಸ; (*trust*) ಭರವಸ; (*fidelity*) ಮಾತುಬರಿ, ಆಪ್ತತೆ; (*promise*) ವಾಗ್ದಾನ, ಮಾತುಕೊಡುವಿಕೆ; (*the moosulman faith*) ತುರುಕರ ಮತವು; (*religion*) ಮತವು. v. *Tenet.*

Faithful, a. (*honest*) ಸ್ವಜನತ್ವದ, ಪ್ರಮಾಣಿಕೆಯ; (*of true fidelity*) ಖರವಸದ, ನಂಬತಕ್ಕ; (*a faithful translation*) ಯಥಾಮೂಲ, ಸರಿಟೀಕು; (*the faithful*) ವಿಶ್ವಾಸವುಳ್ಳವರು; (*a faithful man*) ಖರವಸಸ್ತ, ಮಾತುಬರಿಯವ.

Faithfully, ad. ನಂಬಿಕೆಯಾಗಿ; (*with allegiance*) ಆಜ್ಞಾದಾರಿಯಾಗಿ; (*honestly*) ಧರ್ಮವಾಗಿ; (*without fraud*) ವಂಚನೆಯಿಲ್ಲದೆ.

Faithfulness, s. n. ಸಜ್ಜನತ್ವ, ಪ್ರಾಮಾಣಿಕತ್ವ, ಆಜ್ಞಾಧಾರಕತನ, ಆಪ್ತತೆ. v. *Fidelity*.

Faithless, a. ಅಪನಂಬಿಕೆಯ, ಅವಿಶ್ವಾಸದ, ನಂಬಕೂಡದ, ವಂಚನೆಯುಳ್ಳ. v. *Perfidious*.

Faithlessness, s. n. ಅವಿಶ್ವಾಸ, ಅಪನಂಬಿಕೆ. v. *Perfidy, incredulity*.

Falchion, s. n. ವಂಕರಕತ್ತಿ, ಚಂದ್ರಹಾಸ. v. *Sword*.

Falcon, s. n. ಗ್ರಾಹಕ, ನಖದಾರಕ, ಆಪತ್ರಿಕೆ, ಡೇಗೆ.

Falconer, s. n. ಡೇಗೆಬೇಟೆಗಾರ.

Falconry, s. n. ಡೇಗೇಸಾಡು.

Fall, s. n. ಬೀಳುವಿಕೆ, ಪತನ; (*a fall of rain*) ಒಂದುಬಾರೀಮಳೆ; (*death*) ಮರಣ, ಮೃತ್ಯು, ಸಾವು; (*ruin*) ನಾಶನ, ಹಾಳು; (*downfull*) ಬಡತ

ಸಬುಹವದು; (*diminution*) ಬತ್ತುವಿಕೆ, ಕಡಮೆಯಾಗುವಿಕೆ, ಇಳಿವಿಕೆ; (*fall of the voice*) ಸ್ವರವಿಳಿತ, ತಗ್ಗು; (*a water fall*) ನಿರ್ಝರ, ನೀರಿನ ಸೆಲೆ; (*to break the fall of any thing*) ಬೀಳುವಿಕೆತಪ್ಪಿಸು, ಕಂಟಕತಪ್ಪಿಸು; (*to get a fall*) ಜೋತುಕೊಂಡುಬೀಳು; (*to give one a fall*) ಕೆಡವಿಹಾಕು; (*the fall, autumn*) ಶರದೃತು.

To Fall, v. n. ಬೀಳು; (*as rain*) ಕರೆಯು, ಸುರಿಯು; (*as a river*) ಇಳಿಥರವಾಗು, ಕಡಿಮೆಯಾಗು; (*to fall in battle*) ಯುದ್ಧದಲ್ಲಿಸಾಯು, ಯುದ್ಧದಲ್ಲಿಮಡಿಯು; (*to fall in love*) ಪ್ರೀತಿಗೊಳ್ಳು, ಮೋಹಿಸು; (*to fall asleep*) ನಿದ್ರೆಗೈಯ್ಯು, ಜಂಪುಬರು; (*to fall about any thing*) ಕೆಲಸಮೊಪುಬೀಳು, ಕೆಲಸಾತೊಡಗು, ಕೈಹಚ್ಚು; (*to be slain*) ಮಡಿದುಹೋಗು; (*to apostatize*) ಮತಭ್ರಷ್ಟನಾಗು; (*to fall into disgrace*) ಮಾನಹೀನವಾಗು; (*to fall away or off*) ಬಡವನಾಗು; (*to fall into the hands of one*) ಕೈಗೆಸಿಕ್ಕು, ಕೈವಶವಾಗು; (*to fall on*) ಮೇಲೆಬೀಳು, ಅಕ್ಷೆಯೋಗಿಸು; (*to fall upon, attempt*) ಮುಂಕೊಳ್ಳು, ಪ್ರಯತ್ನಮಾಡು; (*to fall back*) ಹಿಂಜರಿಯು, ಹಿಂಗೊಳ್ಳು; (*to fall out with a friend*) ಸ್ನೇಹಾತುಂಡಿಸು, ಕಂಗಾರವಾಗು; (*to fall out of any thing*) ಜಾರಿಬೀಳು, ಸರಿದುಬೀಳು; (*to fall in with one*) ಸಂಮ್ಮತಬೀಳು; His cheeks *fall* in ಅವನದವಡೆಬತ್ತಿಹೋಗುತ್ತದೆ; (*to fall into a passion*) ಕೋಪವಾಗು, ಸಿಟ್ಟಾಗು, ಕೋಪಬರು; It will *fall* out well ಅದುವಸ್ಥಾಗಿಯಾಗುವದು; (*to fall short of provisions*) ಕ್ಷೈತೈರಗಾವಾಗಿಹೋಗು, ಕೊಟ್ಟಿಯುತ್ತಿಸಾಲದೇಹೋಗು; This *falls* under our consideration ಇದುನಮ್ಮಾಲೋಚನೆಯಲ್ಲಿಬಿದ್ದಕಾರ್ಯ, or ಇದುನಮ್ಮಮಂತ್ರಕ್ಕೊಳಗಾದಕಾರ್ಯ, or ಇದುನಮಗಾಲೋಚಿಸತಕ್ಕಕಾರ್ಯವು; (*to fall down, in adoration*) ಸಾಷ್ಟಾಂಗಬೀಳು, ಅಡ್ಡಬೀಳು; (*to fall down, slip*) ಕೆಳಗೆಬೀಳು, ಅಸತುಕೊಳ್ಳು; (*to fall under one's displeasure*) ಕೋಪಕ್ಕೆಗುರಿಯಾಗು; (*to fall together by the ears*) ಕೈಗುದ್ದಾಟೆಬೀಳು, ಗುದ್ದಾಟೆಬೀಳು; (*to fall short of one's expectations*) ಅಪೇಕ್ಷೆಪೂರ್ತಿಯಾಗದಿರು; All that I can say *falls* short of it ನಾನೆಷ್ಟುಹೇಳಿದರೂಸಾಲದು; (*to fall under, to be subject to*) ಕೈವಶವಾಗು.

Fallacious, a. ಹುಸಿಯಾದ, ದಗೆಯ, ಮೋಸದ, ವಂಚನೆಯಾದ. v. *Deceitful.*

Fallaciously, ad. ದಗೆಯಾಗಿ, ಮೋಸವಾಗಿ.

Fallacy, s. n. ಹುಸಿ, ವಂಚನೆ, ಮೋಸ.

Fallen, part. ಬಿದ್ದ, ಜಾರಿದ, ಸ್ರಸ್ತ, ಧ್ವಸ್ತ, ಭ್ರಷ್ಟ, ಸ್ಕನ್ನ, ಪನ್ನ, ಚ್ಯುತ, ಗಳಿತ.

Fallible, a. ಅಸತ್ಯಸಂಕಲ್ಪವುಳ್ಳ, ಮೋಸಹೋಗತಕ್ಕ, ಬದ್ಧವಿಲ್ಲದ.

Falling-sickness, s. n. ಕಾಕಿಸೊಂಪು, ಅಪಸ್ಮಾರರೋಗ, ಮೂರ್ಛೆರೋಗ.

Fallow, a. (*ground*) ಮಾಗಿ, ಬಂಜರು.

To Fallow, v. a. ಮಾಗಿಹೊಡಿಯು, ಬಂಜರುಮಾಡು.

False, a. ಸುಳ್ಳು, ವಿತಥವಾದ, ಅನೃತವಾದ, ತಪ್ಪಿನ, ಅಬದ್ಧದ; (*as coin*) ಸಲ್ಲದ; (*a false report*) ಸುಳ್ಳುವರ್ತಮಾನ, ಗಾದೆ, ತರ್ಕ; (*false hearted*) ಕಪಟಹೃದಯದ; (*false imprison-*

ment) ಅನ್ಯಾಯದಬಂಧನ; *(false coin)* ಸಲ್ಲದಹಣ, ಎಂಗಿ; *(false testimony)* ಅಪದ್ಧಸಾಕ್ಷಿ.

Falsehood, s. n. ಸುಳ್ಳು, ಅನೃತ, ಅಬದ್ಧ, ಹುಸಿ, ಬಾಹುಳಿ, ಕೊದಳು, ನಾಳು, ಪುಸಿ, ಮೃಷೆ, ಸಟೆ, ಸಟೆಪಟೆ. v. *Lie.*

Falsely, ad. ಅಬದ್ಧವಾಗಿ, ಸುಳ್ಳಾಗಿ.

Falsification, s. n. ತಪ್ಪುರುಜುಮಾಡೋಣ. v. *Counterfeit. (confutation)* ಬದಿಧಾಕೋಣ.

Falsifier, s. n. ತಂತ್ರವಾದಿ, ಸುಳ್ಳುಗಾರ, ಖೋಟಾಳಿಕ. v. *Counterfeit, liar, forger.*

To Falsify, v. a. *(to forge)* ತಪ್ಪುರುಜುವುಮಾಡ; *(to confute)* ತೆಗದುಹಾಕ; *(to violate)* ಮಾತು ತಪ್ಪಿಸ; *(to tell lies)* ಸುಳ್ಳಾಡ.

To Falter, v. n. ಮಾತಿಳಿಕೊಂಡೋಗ, ಹಕ್ಕಿಹಕ್ಕಾಡ.

Fame, s. n. ಕೀರ್ತಿ, ಖ್ಯಾತಿ, ಪ್ರಖ್ಯಾತಿ, ಸಮಸ್ಥ, ಯಶಸ್ಸು, ಜಸವು. v. *Renown, reputation.*

Famed, part. ಕೀರ್ತಿಯ. v. *Famous, celebrated.*

Familiar, a. ಸರಸದ, ಅನುಸರಣೆಯ; *(intimate)* ಪರಿಚಿತಿಯ; *(well known)* ರೂಢಿಯಾದ, ವಾಡಿಕೆಯಾದ; *(a familiar spirit)* ಯಕ್ಷಿಣೆ; *(having one)* ಯಕ್ಷಿಣೆಯುಳ್ಳ; *(to procure one)* ಯಕ್ಷಿಣ್ಯುಪಾಸನೆಮಾಡ; *(familiar language)* ಬಳಿಕೆಭಾಷೆ, ವಾಡಿಕೆಮಾತು; *(to be familiar with)* ಅನ್ಯೋನ್ಯವಾಗ, ಸಲಗವಾಗಿರ; *(a familiar)* ಜತೆಗಾರ, ಸಖ, ಎಳೆಯ, ಎಣೆಯ.

Familiarity, s. n. ಸಲಿಗೆ, ಸಲಗ. v. *Friendship, affability.*

To Familiarize, v. a. ಸಲಿಗೆಮಾಡ, ರೂಢಿಮಾಡ, ಪಳಿಕೆಮಾಡ. v. *To facilitate, render familiar.*

Familiarly, ad. ಸಲಿಗೆಯಾಗಿ, ವಾಡಿಕೆಯಾಗಿ.

Family, s. n. *(those who live under the same roof)* ಸಂಸಾರ, ಮನೆತನ, ಕುಟುಂಬ; *(those who are descended from one common ancestor)* ತಲಾಂತ್ರದವರು, ಕೂಟಸ್ಥರು.

Famine, s. n. ಬರಗಾಲ, ದುರ್ಭಿಕ್ಷ, ಕ್ಷಾಮಕಾಲ. v. *Dearth, scarcity, hunger.*

To Famish, v. a. ಕೂಳುಕಾಣದೇಸಾಯಮಾಡ, ಹೊಟ್ಟೆಗೆಕೊಡದೇಕೊಲ್ಲ. v. *To starve.* (v. n.) ಹೊಟ್ಟೆಗಿಲ್ಲದೇಸಾಯ.

Famishment, s. n. ನಿರಾಶನ, ಹೊಟ್ಟೆಕಾಟ, ಹಸಿವಿಯುಪದ್ರ. v. *Hunger.*

Famous, a. ಕೀರ್ತಿಯ, ಪ್ರಖ್ಯಾತಿಯ. v. *Celebrated, renowned. (to be famous)* ಕೀರ್ತಿಯಾಗಿರ, ಕೀರ್ತಿಹೊಂದ.

Famously, ad. ಕೀರ್ತಿಯಾಗಿ.

Famousness, s. n. ಕೀರ್ತಿಯು, ಪ್ರಖ್ಯಾತಿ.

Fan, s. n. ಬೀಸಣಿಗೆ, ವ್ಯಜನ, ಆಲಾವಟ್ಟವು, ಪಂಖ; *(for grain)* ಜಲ್ಲಡೆ, ಜಲ್ಲಿ, ತಟ್ಟೆ; *(for fire)* ಬೀಜಣಿಗೆ; *(for an idol)* ಚಾಮರ, ಜೌರಿ.

To Fan, v. a. *(one's self)* ಬೀಸಿಕೊಳ್ಳ; *(corn)* ತೂರ; *(off flies)* ಸೋಧಿಸ, ಸೊಂಪೆಹೊಡೆಯ.

Fanatic, s. n. ಮರುಳಿನವ, ಲೀಲೆಯವ, ಮೂಢಭಕ್ತಿಯವ, ಮತಾಸಕ್ತಿಯವ.

Fanaticism, s. n. ಮರುಳುತನ, ಮೂಢಭಕ್ತಿತನ. v. *Enthusiasm.*

Fanciful, a. *(imaginative)* ವಿಶೇಷಭಾವನೆಯು

ಳ್ಳ, ವಿಪರೀತನೆನವುಳ್ಳ; *(capricious)* ಚಂಚಲವುಳ್ಳ. v. *Inconstant, whimsical, fantastical.*

Fancy, s. n. *(inclination)* ಇಚ್ಛೆ; *(imagination)* ಭಾವನೆ; *(conception, opinion, thought)* ಊಹೆ, ನೆನಪು; *(caprice)* ಚಂಚಲತೆ.

To Fancy, v. a. *(imagine)* ನೆನಸು, ಊಹಿಸು; *(to like)* ಪ್ರೀತಿಮಾಡು, ಮನಸ್ಸಿಡು, ಮರುಕಗೊಳ್ಳು, ಇಷ್ಟಪಡು, ಎರಕಗೊಳ್ಳು.

Fancymonger, s. n. ಭ್ರಾಂತಿಯವ, ಭ್ರಮೆಯವ.

Fancy-sick, s. n. ಹುಚ್ಚುನೆನಪಿನವ.

Fane, s. n. ಗುಡಿ, ದೇವಾಲಯ. v. *Temple.*

Fang, s. n. *(of a wild boar)* ಕೋರೆ, ಎಯ್ಯಮುಳ್ಳು; *(talons)* ನಖ, ಉಗುರು.

Fanged, a. ಕೋರೆಯ, ಎಯ್ಯಮುಳ್ಳಿನ.

Fanner, s. n. ಬೀಸುವವ, ಪಂಕಧಾರ, ಬೀಸಣಿಗೆಯವ, ಬಿಜ್ಜಣಿಗೆಯವ, ಝುಳಂಬಾಯ್ತನು.

Fantailed-pigeon, s. n. ಸಾಲುಬೆಳವ, ಗರೀಪಾರ್ವಣ.

Fantasm, Fantasy, Fantom, s. n. ಮಾಯೆ, ಭ್ರಾಂತಿ, ಭ್ರಮೆ, ಶೂನ್ಯಪೆಂಪು. v. *Phantom.*

Fantastic, Fantastical, a. ಭ್ರಮೆಯುಳ್ಳ, ಭ್ರಾಂತಿಯುಳ್ಳ, ಶೂನ್ಯಪೆಂಪುಳ್ಳ. v. *Fanciful, capricious, irrational.*

Far, a. ದೂರ, ad. ದೂರವಾಗಿ. v. *Distant, remote.* *(a far country)* ದೂರದೇಶ; Throw it as *far* as you can ಬಲವಿದ್ದಷ್ಟೆಸೆ; There has been rain *far* and near ಅಲ್ಲಿಯೂಇಲ್ಲಿಯೂಕೂಡಾಮಳೆಬಂತು; Carry it *far* away ದೂರಕ್ಕೊಯ್ಯಿ, or ದೂರಕ್ಕೆತೆಗೆದುಕೊಂಡುಹೋಗು; Put it thus *far* ಈ ಪರಿಯಂತರಕ್ಕಿಡಹಾಕು, or ಇಷ್ಟ ಪಟ್ಟಿಗಿಡಹಾಕು; He came from *far* ಅವನು ದೂರದಿಂದ ಬಂದನು; It is very *far* off ಅದು ಬಹಳ ದೂರವದೆ; How *far* is it to that village? ಆ ಊರೆಷ್ಟು ದೂರವದೆ; This is *far* different from that ಇದಕ್ಕೂ ಅದಕ್ಕೂ ಬಹಳ ಹೆಚ್ಚುಕಡಮೆ; This is *far* better than that ಅದಕ್ಕಿಂತಲೂಯಿದು ಬಹು ವಾಸಿ; I went as *far* as Madras ಚೆಂನಪಟ್ಣದವರಿಗೂಹೋದೆ.

Farce, s. n. ಹುಸಿ, ಕಣ್ಣುಕಟ್ಟು, ಭ್ರಮೆ, ಭ್ರಾಂತಿ, ಮರುಳು.

Farcy, a. ಹುಸಿಯಾದ, ಕಣ್ಣುಕಟ್ಟಿನ, ಭ್ರಮೆಯುಳ್ಳ, ಭ್ರಾಂತಿಯುಳ್ಳ.

Fare, s. n. *(passage money by land)* ಬಾಡಿಗೆ; *(on goods, &c. by sea)* ಹಡಗದಬಾಡಿಗೆ, ಆತರ, ತರಪಂಣ್ಯ; *(food)* ಆಹಾರ, ಅಂನ, ಊಟ.

To Fare, v. n. *(to go)* ದಾಟು, ಪ್ರಯಾಣವಾಗಿಹೋಗು; *(to be)* ಇರು; *(to eat)* ತಿನ್ನು, ಭಕ್ಷಿಸು, ಭೋಜಿಸು, ಉಣ್ಣು.

Farewell, s. n. ಕುಶಲಪ್ರಶ್ನೆ; The common expressions at parting are ಕ್ಷೇಮವಾಗಿಹೋಗಿಬಾ, ಸುಖವಾಗಲಿ, ಶುಭವಾಗಲಿ, ಮಂಗಳವಾಗಲಿ; *(to take farewell)* ಅಪ್ಪಣೆತೆಗೆದುಕೊಳ್ಳು, ಅನುಜ್ಞೆತೆಗೆದುಕೊಳ್ಳು.

Farfetched, a. *(simile)* ದೂರದ, ಅಸಂಗತದ.

Farina, s. n. *(of flowers)* ಬಂಡು, ಪರಾಗ, ಪುಷ್ಪರಜ, ಮಲಪುಡಿ, ಅಲಪುಡಿ.

Farinaceous, a. ಹಿಟ್ಟಿನ.

Farm, s. n. ಕಂದಾಯದಭೂಮಿ, ಇಜಾರಾ; *(an arrack farm)* ಕಲಾಲುಗುತ್ತಿಗೆ, ಸಾರಾಯಗುತ್ತಿಗೆ, ಹೆಂಡದಗುತ್ತಿಗೆ, ಹೊಂಬುಗುತ್ತಿಗೆ.

To Farm, v. a. *(to let out)* ಗುತ್ತಿಗೇಕೊಡು; *(to cultivate)* ಕೊಲಾಮಾಡು, ಹಸನುಮಾಡು, ಕೈಸು ಮಾಡು.

Farmer, s. n. ರೈತ, ಒಕ್ಕಲಿಗ, ಇಜಾರದಾರನು, ಮುಸ್ತಾಜರು, ಗ್ರಾಮೀಣ, ಗಾವಿಲ.

Farness, s. n. ದೂರ. v. *Distance.*

Farrago, s. n. ಕಲಬೆರಿಕೆ. v. *Medley.*

Farrier, s. n. ನಾಲುಬಂದಿ, ಲಾಳಗಾರ, ಲಾಳಾಕಟ್ಟುವವ; *(a horse doctor)* ಅಶ್ವವೈದ್ಯನು, ಕುದುರೇಪಂಡಿತ.

Farrow, s. n. ಹಂದೀಬಳಗ. v. *Pig.*

To Farrow, v. a. ಹಂದಿಯೀನು, ಹಂದಿಮರೀಹಾಕು.

Far-spent, a. *(as the day)* ಬಹಳ ಹೊತ್ತಾದ.

Fart, s. n. ಹೂಸು, ಅಪಾನವಾಯುವು, ಠಿಸುಕು; *(a farting fellow)* ಹೂಸುಬುರಕ,

To Fart, v. a. ಹೂಸುಬಿಡು, ಶಬ್ದಿಸು, ಠಿಸುಕು.

Farter, s. n. ಹೂಸುಬುರಕ.

Farther, ad. ಇನ್ನೂದೂರವಾಗಿ, ಅತ್ತತ್ತಲಾಗಿ; Sit a little *farther* ಅತ್ತತ್ತಜರುಗು, ಅತ್ತತ್ತಕೂಡು.

To Farther, v. a. ಅನುಕೂಲಿಸು, ಸಹಾಯಾಕೊಡು. v. *To advance, facilitate, promote.*

Farthest, a. ಎಲ್ಲಕ್ಕೂ ದೂರವಾದ.

Farthing, s. n. ಕಾಸು.

To Fascinate, v. a. ಮರುಳುಮಾಡು, ಪ್ರಮೋಹಿಸು, ವಿಮೋಹಿಸು, ಭ್ರಮೆಗೊಳಿಸು, ಒಲಪಿಸು. v. *To bewitch, enchant.*

Fascinated, part. ಮರುಳಾದ, ಭ್ರಮೆಗೊಳಗಾದ, ವಿಮೋಹಿಸಲ್ಪಟ್ಟ.

Fascinating, a. ಒಲಪಿಸುವ, ವಿಮೋಹಿಸುವ, ಮನಸೆಳೆಯುವ, ಮನೋಹರವಾದ, ಪ್ರೀತಿಕರವಾದ.

Fascination, s. n. ಮರುಳು, ಮಚ್ಚು, ವಿಮೋಹನೆ, ಪ್ರಮೋಹನೆ. v. *Enchantment, amulet, spell.*

Fashion, s. n. *(form)* ರೂಪ, ಆಕಾರ. v. *Form, shape, figure.* *(manner)* ವಿಧ, ಬಗೆ; *(custom)* ಮರಿಯಾದೆ. v. *Habit, practice.*

To Fashion, v. a. ರೂಪಿಸು, ಉಂಟುಮಾಡು.

Fashionable, a. *(customary)* ಮರಿಯಾದೆಯ, ವಾಡಿಕೆಯ, ಪಳಕದ; *(genteel)* ಸೊಗಸಾದ, ನೀಟಿನ, ಮೋಜಿನ, ಸೊಬಗಿನ.

Fast, s. n. ಉಪವಾಸ, ನಿರಾಹಾರ, ಉಪಾಸ, ಉಪೋಷ್ಯ; *(a fast day)* ಉಪವಾಸದ ದಿನ; *(a fast in which the night is spent in watching, and the day in fasting)* ಜಾಗರದ ದಿನ; *(a fast for health)* ಲಂಘನವು.

Fast, a. *(firm)* ಸ್ಥಾಪಿಸಿದ, ಸ್ಥಿರವಾದ; *(fixed)* ಜಡಿದ, ಬಿಗಿದ; *(tied)* ಕಟ್ಟಿದ.

Fast, ad. *(firmly)* ಘಟ್ಟಿಯಾಗಿ, ಬಲವಾಗಿ; *(swiftly)* ತ್ವರಿತಯಾಗಿ, ಶೀಘ್ರವಾಗಿ; *(fast by)* ಸಮೀಪ, ಹತ್ತಿರ; Go as *fast* as you can ನಿನ್ನ ಸಾಮರ್ಥ್ಯವಿದ್ದಮಟ್ಟಿಗೂ ಬೇಗ ಹೋಗಿಬಾ; It sticks *fast* ಅದು ಘಟ್ಟಿಯಾಗಿದೆ.

To Fast, v. n. *(religiously)* ಉಪವಾಸಾ ಮಾಡು; *(from food)* ಹಸುಕೊಂಡಿರು; *(to violate a fast)* ಉಪಾಸಾಕೆಡಿಸು; *(to terminate a fast)* ಪಾರಣೇಮಾಡು.

To Fasten, v. a. ಘಟ್ಟೀಮಾಡು, ಕಟ್ಟು; *(to fasten a door)* ಕದಾಹಾಕು, ಬೀಗಾಹಾಕು; *(to cement)*

ಕೂಡಿಸು, ಸೇರಿಸು, ಅಂಟಿಸು; *(to fasten the eyes upon any thing)* ಕಂಗೆಡು.

Faster, s. n. ನಿರಾಹಾರಿ, ಉಪಾಸಿ, ಉಪವಾಸಿಗನು.

Fasthanded, a. ಬಿಗಿಕೈಯುಳ್ಳ, ಕೈಪಿಡಿತದ, ಲೋಭಿಯಾದ, ಲುಬ್ಧತ್ವವುಳ್ಳ.

Fastidious, a. ಅರೋಚಿಕೆಯ, ಕೊಸಾಕಳಿಯ. v. *Squeamish.*

Fastidiously, ad. ಅರೋಚಿಕೆಯಾಗಿ, ಕೊಸಾಕಳಿಯಾಗಿ.

Fastidiousness, s. n. ಕೊಸಾಕಳಿ, ಅರೋಚಿಕೆ, ಕೊಸಷ್ಟೆ, ಕುಚೇಷ್ಟೆ.

Fasting, s. n. ಉಪವಾಸ, ನಿರಾಹಾರ, ಲಂಘನವು.

Fastness, s. n. ಘಟ್ಟಿತನ, ಸ್ಥಿರತ್ವ, ಬಿಗಿ, ಕ್ಷೇತ್ರ, ಬಲ. v. *Firmness, fixedness, stability.*

Fat, a. ಕೊಬ್ಬಿನ, ಪೀವರ, ಪೀನ, ಸ್ಥೂಲ. v. *Plump, corpulent, gross, coarse, fleshy.*

Fat, s. n. ಕೊಬ್ಬು; *(a vat)* ಪೀಪಾಯಿ.

Fatal, a. *(mortal)* ಮರಣಾಂತದ, ಹಾನಿಕರವಾದ, ಕೊಲ್ಲುವ; *(proceeding by destiny)* ದೈವೋಬರದ, ಅದೃಷ್ಟದ.

Fatalist, s. n. ಅದೃಷ್ಟಪರತಂತ್ರ, ಕರ್ಮಪರವಶನು, ಯದ್ಭವಿಷ್ಯಂತದ್ಭವಿಷ್ಯನು.

Fatality, s. n. *(tendency to danger)* ಹಾನಿಗಾಸ್ಪದ, ಕೇಡಿಗೆಪಾತ್ರತೆ; *(decree of fate)* ಪ್ರಾಪ್ತಿ.

Fatally, ad. ಹಾನಿಯಾಗಿ, ಕೇಡಾಗಿ, ನಾಶನವಾಗಿ.

Fate, s. n. *(destiny)* ಪ್ರಾಪ್ತಿ, ಅದೃಷ್ಟ, ದೈವೋಬರಹ; *(death, destruction)* ಮರಣ, ನಾಶನ, ಸಾವು.

Father, s. n. ತಂದೆ, ಪಿತೃವು, ಅಪ್ಪ, ಪಿತನು, ತಾತ, ಜನಕ, ಅಯ್ಯ. v. *Sire.* *(in law)* ಮಾವ; *(grandfather)* ತಾತ, ಅಜ್ಜ, ಪಿತ್ರಪ್ಪ; *(father and mother)* ತಾಯಿತಂದೆಗಳು. v. *Parents.*

To **Father,** v. a. *(to adopt)* ಸಾಕತಕ್ಕೊಳ್ಳು; *(to ascribe to any one as his offspring)* ತಂದೆಯೆಂಥೇಳು, ನೀನೇಹುಟ್ಟಿಸಿದವನೆನು; *(to impute any thing to another)* ಹೊರಿಸು. v. *To adopt, ascribe, impute, assume, acknowledge.*

Fatherless, a. ತಂದೆಯಿಲ್ಲದ, ತಬ್ಬಲಿಯಾದ.

Fatherly, a. ತಂದೆಯಂತಿನ.

Fathom, s. n. ಮಾರು, ವ್ಯಾಮ.

To **Fathom,** v. a. *(to sound)* ಹಾಳಾನೋಡು, ನೆಲೆತಿಳಿಯು; *(to encompass with the arms)* ಅಪ್ಪಿಕೊಳ್ಳು, ಆಲಿಂಗನೆಮಾಡು, ತಬ್ಬಿಕೊಳ್ಳು; *(to penetrate)* ಶೋಧಿಸು, ನೀಡಿಸು; *(to master)* ಜಯಿಸು, ವಶಮಾಡು.

Fathomless, a. *(bottomless)* ಬುಡವಿಲ್ಲದ, ಆಧಾರವಿಲ್ಲದ; *(embraceless)* ಅಪ್ಪಿಕೊಳ್ಳಕೂಡದ.

Fatigue, s. n. ಆಯಾಸ, ಶ್ರಮೆ, ಕ್ಲಮ, ದಣುವು, ಬಳಲಿಕೆ, ಸುಸ್ತು.

To **Fatigue,** v. a. ಆಯಾಸಗೊಳಿಸು, ದಣಿಯಿಸು. v. *To tire, weary.* *(to be fatigued)* ಆಯಾಸವಾಗು, ಶ್ರಮೆಪಡು, ದಣಿಯು.

Fatigued, part. ಆಯಾಸಪಟ್ಟ, ಕ್ಲಿಷ್ಟ, ಕ್ಲಿಶಿತ.

Fatiguing, a. ಆಯಾಸದ, ದಣಿವುಳ್ಳ, ಶ್ರಮವುಳ್ಳ.

Fatling, s. n. ಕೊಬ್ಬುಳ್ಳದ್ದು.

Fatner, s. n. ಕೊಬ್ಬುಮಾಡುವವ.

Fatness, s. n. ಕೊಬ್ಬು. v. *Corpulence, plumpness, fat;* also *fertility.*

To **Fatten,** v. a. ಕೊಬ್ಬಿಸು; (v. n.) ಕೊಬ್ಬು.

Fault, s. n. ತಪ್ಪು, ಅಪರಾಧ. v. *Error, offence, crime.* (*defect*) ಕುಂದ, ಹೀನ. v. *Blemish, want.* (*to find fault*) ತಪ್ಪುಹಿಡಿಯು.

Faultily, ad. ತಪ್ಪಾಗಿ, ಅಪರಾಧವಾಗಿ.

Faultiness, s. n. ತಪ್ಪು, ಕೇಡು, ಕಲ್ಮಷ. v. *Badness, viciousness, delinquency, wickedness, sinfulness.*

Faultless, a. ತಪ್ಪಿಲ್ಲದ, ನಿರಪರಾಧದ. v. *Blameless, perfect.*

Faulty, a. ಅಪರಾಧದ, ತಪ್ಪಿನ, ಕೇಡಿನ, ಹೀನ.

Favour, s. n. ಆಸರ, ಅನುಕೂಲ, ಸಹಾಯ, ಬೆಂನಾಸಕೆ, ಆಶ್ರಯ. v. *Countenance, aid, help, assistance, support, kindness, friendship.* (*lenity, mildness*) ಕರುಣಾ, ದಯ, ಕೃಪೆ, ಅಂತಃಕರಣ; (*out of favour*) ದಯೆತಪ್ಪಿದ; (*to be in favour*) ದಯೆಹೊಂದ; I received your *favour* ನಿನ್ನ ಕಾಗದ ಮುಟ್ಟಿತು; (*benefit*) ಇನಾಮು, ಬಹುಮಾನ, ಉಡಿಗೆರೆ. v. *Gift.* (*to curry favour*) ಇಚ್ಚಕವಾಡ, ಪುಸಲಾಯಿಸ.

To Favour, v. a. ದಯಮಾಡ, ದಯಪಾಲಿಸ. v. *To support, assist.* (*to help*) ಅನುಕೂಲಿಸ, ಆಶ್ರಯಕೊಡ, ಆದರಿಸ.

Favourable, a. (*kind*) ದಯದ, ಅಂತಃಕರಣದ. v. *Kind.* (*propitious*) ಮನಸಾದ, ಅನುಕೂಲವಾದ, ಕೃಪಾಕಟಾಕ್ಷವುಳ್ಳ.

Favourableness, s. n. ದಯವು, ಅಂತಃಕರಣವು, ಅನುಕೂಲವು. v. *Benignity, kindness.*

Favourably, ad. ದಯವಾಗಿ, ಅಂತಃಕರಣವಾಗಿ, ಅನುಕೂಲವಾಗಿ.

Favoured, part. ದಯಹೊಂದಿದ, ಕೃಪೆಹೊಂದಿದ. v. *Protected.* (*ill favoured*) ಬಡವಾದ; (*well favoured*) ಪುಷ್ಟಿಯಾದ, ದಪ್ಪವಾದ.

Favourer, s. n. ದಯಾಪಾಲಿಸುವವ, ಅನುಕೂಲಿಕ, ಆಶ್ರಯಕೊಡುವವ. v. *Friend.*

Favourite, s. n. (*child*) ಮುದ್ದಿನ ಮಗು; (*one chosen as a companion by his superior*) ಮುಖದಾರ.

Fawn, s. n. ಜಿಂಕೆಮರಿ. v. *Deer.*

To Fawn, v. n. ನಮ್ಮಿಸ, ಬಂಗಿಸ, ಪುಸಲಾಯಿಸ, ಇಚ್ಚಕಮಾಡ. v. *To flatter.*

Fawner, s. n. ನಮ್ಮಿಸಗುಳಿ, ಪುಸಲಾಯಿಸುವವ, ಇಚ್ಚಕದವ. v. *Flatterer.*

Fawning, s. n. ನಮ್ಮಿಸಗುಳಿತನ, ಇಚ್ಚಕ; (*a fawning fellow*) ನಂಬಿಸಗುಳಿ, ಇಚ್ಚಕಗಾರ.

Fawningly, ad. ಇಚ್ಚಕವಾಗಿ, ಆಸ್ವಾದಕ್ಷಮೆಯಾಗಿ.

Fealty, s. n. (*fidelity*) ಪ್ರಮಾಣಿಕ ಧರ್ಮ, ಪ್ರಹಸ್ತರತನ, ಮಾತುಬರಿ, ಅಪ್ತತೆ; (*obedience*) ವಿಧೇಯವು, ಆಜ್ಞಾದಾರಕತನ.

Fear, s. n. ಭಯ ಅಂಜಿಕೆ, ಅದರು, ಭೀತಿ, ಬುಗಿಲು, ಬೆದರು, ದರ, ತ್ರಾಸ, ಭೀತಿಯು, ಸಾಧ್ವಸವು, ಹೆದರಿಕೆ, ಬೆಚ್ಚಿಕೆ, ಬೆಜ್ಜರ. v. *Dread, horror, terror, awe.* (*danger*) ಮೋಸ; (*anxiety*) ಚಿಂತೆ.

To Fear, v. n. (*to be afraid*) ಭಯಪಡ, ಬೆದರ, ಉದ್ವೇಗಿಸ, ಹೆದರ, ಅಂಜ, ಬೆಚ್ಚ, ಅದರ; (*to frighten*) ಭಯಪಡಿಸ, ಬೆದರಿಸ, ಅಂಜಿಸ, ಹೆದರಿಸ, ಅದರಿಸ.

Fearful, a. (*timorous*) ಭೀರುಕ, ಭೀತ, ಭಯ

ದ, ಬುಗಿಲಿನ. v. *Afraid, timid.* (*dreadful*) ಘೋರದ, ಭಯಂಕರದ, ಭೀಷಣವಾದ.

Fearfully, ad. ಘೋರವಾಗಿ, ಭೀಷಣವಾಗಿ, ಭಯಂಕರವಾಗಿ. v. *Dreadfully, terribly.*

Fearfulness, s. n. ಭೀತಿ, ಭಯ, ಬುಗಿಲು. v. *Fear, terror, timidity.*

Fearless, a. ನಿರ್ಭೀತಿಯ, ನಿರ್ಭಯದ, ಧೈರ್ಯದ. v. *Courageous.*

Fearlessly, ad. ನಿರ್ಭೀತಿಯಾಗಿ, ನಿರ್ಭಯವಾಗಿ, ಧೈರ್ಯವಾಗಿ.

Fearlessness, s. n. ನಿರ್ಭೀತಿ, ನಿರ್ಭಯ, ಧೈರ್ಯ. v. *Courage, intrepidity.*

Feasible, a. ಸಾಧಿಸತಕ್ಕ, ಗೆಲ್ಲತಕ್ಕ, ಸಾಧ್ಯದ. v. *Practicable, plausible.*

Feast, s. n. ಹಬ್ಬ; (*a public feast*) ಜಾತ್ರೆ; (*a wedding feast*) ಮದಿವೆಸಂಭ್ರಮ; (*a feast given by the wife's relations to her husband's relations the next day after marriage*) ಮಾವನೆ; (*a feast vice versa on the second day*) ಮರಿಮಾವನೆ.

To Feast, v.a. (*to delight*) ಹರುಷಪಡಿಸು, ಸಂಭ್ರಮಪಡಿಸು; (*to entertain*) ಅವುತನಕ್ಕೊಳ್.

Feaster, s. n. (*one that fares deliciously*) ಭೋಜನಸ್ನೇಹಿ, ಭೋಜನಸುಖಿ; (*one that entertains magnificently*) ಪ್ರಶಸ್ತಸಂಭ್ರಮದವ.

Feat, s. n. ಸಾಹಸದಕಾರ್ಯ, ಕೃತ್ಯ, ಕೆಲಸ, ಕೈಗಾರಿಕೆಯು. v. *Action, deed, exploit, trick.*

Feather, s. n. ಗರಿ, ಮೊಚ್ಚು, ವಾಜವು, ರೆಪ್ಪುಳು; (*plume of birds*) ಹಕ್ಕಿಯಕೋಮ, ತುಪ್ಪುಳು; (*ornament*) ಟೋಪಿತುರಾಯಿ; (*the first feathers on young birds*) ಸೂಸು, ಹೂಂಗರಿ; (*the feathers of an arrow*) ವಾಜ, ಕೈಪೋಡೆ, ಅಂಬಿನಗರಿ; (*long feathers of the wing*) ರಕ್ಕೆಗರಿ, ವಾಜವು, ರೆಪ್ಪುಳು; (*kind*) ಜಾತಿ; Birds of a *feather* commonly flock together ಸಬರಕ್ಕಿತಕ್ಕಕಪುದಿ; (*to change feathers, or moult*) ಗರಿಯುದರಿಸು; (*to bristle up the feathers, as a cock, &c.*) ಗರಿಯೆತ್ತು, ಕೆರಳು, ಪಸರಿಸು.

To Feather, v. n. (*as birds*) ರೆಕ್ಕೆಬರು; (*to tread as a cock*) ಕೂಟಕೂಡು; (*to feather one's nest*) ಸಂಪಾದನೆಮಾಡು.

Feathered, Feathery, a. ಗರಿಯ, ಮೊಚ್ಚಿನ.

Featherless, a. ಮೊಚ್ಚಿಲ್ಲದ, ಗರಿಯಿಲ್ಲದ.

Feature, s. n. ಮುಖದರೂಪ, ಮೋರೆಯಲಕ್ಷಣ, ಮುಖಲಕ್ಷಣ, ಮುಖಭಾವ. v. *Countenance.*

Febrifuge, s. n. ಜ್ವರಹರವಾದ.

February, s. n. ಮಾಘಮಾಸ. v. *Month.*

Feces, Feculence, s. n. (*sediment*) ತೆಟ್ಟು, ಮಷ್ಟು, ಅಡಿಗಂಟು, ಕಸ, ಬಡುಡು, ಗಸಿ; (*excrement*) ಮಲ, ಹೇಲು, ಪುರೀಷವು.

Feculent, a. ಹೇಶಿಕೆಯ, ಮೈಲಿಗೆಯ, ರಿಪ್ಪೆಯ, ಮಷ್ಟಿನ.

Fecundity, s. n. ಫಲಿಸಿಕೆ, ಫಲಿತ, ಫಲಿಕೆ. v. *Fruitfulness.*

Federal, a. ಒಡಂಬಡಿಕೆಯ, ಕರಾರಿನ.

Fee, fea, s. n. (*reward*) ಇನಾಮು, ಬಹುಮಾನ; (*doctor's fee*) ಸಂಭಾವನೆ; (*lawyer's fees*)

ಫೀಜು, ತೆರುಗ; *(established or customary fees)* ಠಸ್ಸೆಸು, ತೆರುಗ, ಲವಾಜಮೆ, ಮಿರಾಸು.

To Fee, v. a. *(to pay)* ಫೀಜುಕೊಡ, ತೆರಗಕೊಡ; *(to bribe)* ಲಂಚಾಕೊಡ.

Feeble, a. ದುರ್ಬಲದ, ಬಲಯೀನದ, ನಿಶ್ಚೈತಂನ್ಯದ. v. *Weak, debilitated, sickly.*

Feebleness, s. n. ದುರ್ಬಲ, ಬಲಯೀನ, ನಿಶ್ಚೈತಂನ್ಯ. v. *Weakness, imbecility.*

Feebly, ad. ದುರ್ಬಲವಾಗಿ, ಬಲಯೀನವಾಗಿ.

Feed, s. n. *(food)* ಆಹಾರ, ಗ್ರಾಸ, ಅಂನ; *(pasture)* ಮೇಯಿಸಿಕೆ.

To Feed, v. a. *(to supply with food)* ಆಹಾರಾಕೊಡ, ಅಂನವಿಡ; *(horses with grain)* ದಾಣೆಕಟ್ಟು; *(with grass)* ಮೇವುಹಾಕ; *(to graze)* ಮೇಯ; *(causal)* ಮೇಯಿಸು; *(to nourish)* ಸಾಕ, ಸಂರಕ್ಷಿಸ; *(to feed birds)* ಕಾಳುಚೆಲ್ಲ; *(to eat)* ಊಟಮಾಡ, ಭೋಜಿಸ, ಉಂಣ, ತಿಂನ.

Feeder, s. n. *(one that gives food)* ಆಹಾರಾಕೊಡುವವ, ಅಂನವಿಡುವವ; *(one that eats)* ಉಂಬುವವ, ತಿಂಬುವವ; *(a nice feeder)* ಸುಖಭೋಜಿ; *(a gross feeder)* ದೊಡ್ಡಹೊಟ್ಟೆಯವ, ತಿನಾಳಿ, ಹೆಚ್ಚುಕಸು.

To Feel, v. a. *(to touch)* ಮುಟ್ಟು, ತಡವ; *(to have a sense of, as painful or pleasing)* ಅರಿಯ, ತಿಳುಕೊಳ್ಳ; *(to feel pain)* ನೋಯ, ನೋವುಕಾಣಿಸ; *(to feel pleasure)* ಸಂತೋಷಪಡ, ಉಲ್ಲಾಸಪಡ; *(to grope)* ತಡಕ; *(to seem)* ಕಾಣ, ತೋರ; *(to try)* ಶೋಧಿಸ, ವಿಚಾರಿಸ; *(to feel the pulse)* ಧಾತುಪರೀಕ್ಷೆನೋಡ, ಕೈನೋಡ; *(to feel for others)* ಮನಸ್ತಾಪಪಡ, ಕಳವಳವಾಗ, ಎರಗ; I *feel* it ನನಗೆನೋವುಹೊಡುತ್ತದೆ; I *feel* cold ನನಗೆಛಳಿಯಾಗುತ್ತದೆ.

Feeler, s. n. ಮುಟ್ಟುವವ, ಸ್ಪರ್ಶಿಸುವವ.

Feeling, s. n. *(touch)* ಮುಟ್ಟುವಿಕೆ, ಸ್ಪರ್ಶವು; *(compassion)* ಕನಿಕರಿಕೆ, ಬಡಮನಸ್ಸು, ಕರುಣೆ. v. *Sensibility, tenderness. (perception)* ತೋರುವಿಕೆ; *(the sense of feeling)* ತ್ವಗಿಂದ್ರಿಯ; *(feeling in the dark)* ತಡಕುವದು.

Feelingly, ad. ಕನಿಕರವಾಗಿ.

Feet, s. n. ಪಾದಗಳು, ಅಡಿಗಳು, ಕಾಲುಗಳು, ಹಜ್ಜೆಗಳು.

Feetless, a. ಕಾಲಿಲ್ಲದ, ಅಡಿಯಿಲ್ಲದ, ಹಜ್ಜೆಯಿಲ್ಲದ.

To Feign, v. a. *(to invent)* ಕಲ್ಪಿಸ, ಉತ್ಪ್ರೇಕ್ಷಿಸ, ವೇಷಧರಿಸ, ಮಾಯಮಾಡ; *(to make shew of)* ವಿಜೃಂಭಿಸ; *(to feign ignorance)* ತಿಳಿಯದವನಾಗಿರ, ಮರಳನಾಗಿರ; *(to feign sickness)* ಬೈರಾಗಿಮಾಡ, ಢೋಂಗಮಾಡ.

Feignedly, ad. ವೇಷವಾಗಿ, ಕಲ್ಪನೆಯಾಗಿ, ಮಾಯವಾಗಿ, ವಂಚನೆಯಾಗಿ.

Feigner, s. n. ಕಲ್ಪಕ, ವೇಷಧಾರಿ, ಮಾಯಗಾರ, ಕಪಟಿ.

Feint, s. n. *(false appearance)* ಮೋಸ, ಮಾಯ, ಮರಳತನ.

To Felicitate, v. a. ಸಂತ್ರಮಪಡಿಸ, ಹರುಷಪಡಿಸ, ಸುರಿಷ್ಟಿತಾಮಾಡ.

Felicity, s. n. ಸುಖ, ಸಂತ್ರಮ, ಕ್ಷೇಮವ, ಇಂಪು, ಆನಂದ. v. *Prosperity, happiness.*

Feline, a. (*belonging to a cat*) ಬೆಕ್ಕಿನ.

Fell, a. (*cruel*) ಕ್ರೂರವಾದ, ನಿರ್ದಯಾತ್ಮವಾದ. v. *Cruel, bloody, ravenous.*

Fell, s. n. ತೊಗಲು, ಚರ್ಮ, ತೊವಲು, ತೋಲು. v. *Skin, hide.* (*a fellmonger*) ಮಾದಿಗ, ಚರ್ಮಕಾರನು, ಮುಚ್ಚಿಗ.

To Fell, v. a. (*to cut down*) ಕಡಿದುಹಾಕ; (*to knock down, level with the ground*) ಕೆಡವ, ಬೀಳಿಸ.

Feller, s. n. ಕಡಿಯುವವ.

Fellness, s. n. ಕ್ರೂರತನ, ನಿರ್ದಯಾತ್ಮತನವು, ಆಕ್ರೋಶ. v. *Cruelty.*

Felloe, s. n. (*circumference of a wheel*) ಚಕ್ರದಕಟ್ಟು.

Fellow, s. n. (*peer*) ಸಮಾನಸ್ಕಂಧ, ಸಮವದ್ದದವನು, ಸಮಾನೀಕನು, ಜೋಡುದಾರ; (*match*) ಜತೆ; (*comrade*) ಎಳೆಯ, ಸಂಗಡಿಗ; (*one of the same kind*) ಜೋಡು; (*a mean wretch*) ನೀಚ; (*speaking with contempt*) ಲುಚ್ಚಮುಂಡೆ, ಲುಚ್ಚ; (*a fine fellow*) ಒಳ್ಳೆಯವ, ಸಭ್ಯ; (*a jolly fellow*) ಹೆಂಚಿತಸ್ವಂಗಾ, ಎಮ್ಮೀತಂಮಂಗಾ; (*a fellow helper*) ಸಹಾಯಕ, ಅನುಕೂಲಸ್ಥ; (*a fellow creature*) ಸಜಾತಿಜೀವಿ; (*a fellow sufferer*) ಸಾಮಕ್ಷವಿ, ಸಹವರ್ತಿ, ಸಹಪಾಟಿ; (*fellow feeling*) ಪರಚಿಂತೆ, ಪರಿತಾಪ; (*a fellow traveller*) ಸಹಚರ, ಸಂಗಾತಿ, ಸಹವಾಸಗಾರ, ಜತೆಗಾರ, ಸಂಗಡಿಗ; (*a fellow citizen*) ಸ್ವಗ್ರಾಮಸ್ಥ; (*a fellow countryman*) ಸ್ವದೇಶಸ್ಥ; (*a fellow servant*) ಜತೆಸೇವಕ; (*a fellow student*) ಸಹಪಾಟಿ.

Fellowship, s. n. ಸಂಗಮ, ಅನ್ಯೋನ್ಯ, ಐಕ್ಯ, ಪಾಲುಗಾರಿಕೆ. v. *Society, partnership, equality.*

Felo-de-se, s. n. (*suicide*) ಆತ್ಮಘಾತಕ.

Felon, s. n. ಪ್ರೋರಿಕಳ್ಳ. v. *Criminal.*

Felon, a. (*cruel*) ಕ್ರೂರವಾದ, ನಿರ್ದಯಾತ್ಮವಾದ, ಕಠಿಣ.

Felonious, a. (*wicked*) ದುಷ್ಟಬುದ್ಧಿಯ, ದ್ರೋಹಿಯ, ಕೆಟ್ಟ. v. *Criminal, villainous.*

Feloniously, ad. ದುಷ್ಟವಾಗಿ, ದುರ್ಮಾರ್ಗವಾಗಿ.

Felony, s. n. ಪ್ರಾರಿಕಳ್ಳತನ, ದೊಡ್ಡಪರಾಧ, ಮಹಾಚೋರತನ.

Felt, s. n. (*cloth*) ನಮದೆ, ಕೈನೇಗೇಬಟ್ಟೆ; (*skin*) ತೊಗಲು, ಚರ್ಮ.

To Felt, v. a. ನಮದುಮಾಡ, ಕೈನೇಗೇಮಾಡ.

Female, a. (*opposed to male*) ಹೆಣ್ಣು; (*a female of the human species*) ಸ್ತ್ರೀ, ಹೆಂಗಸು. v. *Woman.* (*the female sex*) ಹೆಣ್ಜಾತಿ, ಸ್ತ್ರೀಜಾತಿ.

Feme-covert, s. n. ಮದುವೆಯಾದವಳು, ಸಂಸಾರಿ, ಗರತಿ, ಮುತ್ತೈದೆ, ಸುಮಂಗಲಿ, ಸಾವಾಸಗಣೆ.

Feme-sole, s. n. ಕನ್ನಿಕೆ.

Feminine, a. ಹೆಣ್ಣಿನ, ಸ್ತ್ರೀಯ. v. *Female.* (*soft, tender*) ಕೋಮಲವಾದ, ನಾಜೂಕಾದ. v. *Delicate.* (*unmanly*) ಹೆಣ್ಣುಗತನವುಳ್ಳ; (*a feminine noun*) ಸ್ತ್ರೀಲಿಂಗದ ಶಬ್ದ; (*the feminine gender*) ಸ್ತ್ರೀಲಿಂಗ.

Femoral, a. ತೊಡೆಯ, ಊರುವಿನ.

Fen, s. n. ಅಲರ್, ಜಂಬುಲು. v. *Marsh, bog.*

Fence, s. n. (*defence*) ಮರೆ, ಕೆರೆ, ಆಸರ; (*inclosure*) ಅಪಾಶ್ರಯ; (*hedge*) ಬೇಲಿ, ಅಡ್ಡಿ, ಆಸರ, ಮಿಕ್ಕದಡ, ಕಿರ್ಪಸ್ಥ, ಬಿಸ್ತ, ಅಡಸು, ಬಾಡುಗೆ. v. *Mound, hedge, dam, dike.*

To Fence, v. a. (*to inclose*) ಆಕ್ರಮಿಸು, ಆವರಿಸು, ಬೇಲೀಹಾಕು; (*to guard*) ಕಟ್ಟೆಬಿಡು, ಆಸರೇ ಮಾಡು, ಬೆಂಬಲಿಹಾಕಿಕೊಳ್ಳು, ಕಾಪಾಡು; (*to fortify*) ಬಂದೋಬಸ್ತುಮಾಡು, ಆವೇರೀಕಟ್ಟು.

Fenced, a. ಅಡ್ಡಿಯಾದ, ಆಸ್ಪದವಾದ, ಆಕ್ರಮಿಸಿದ, ಬೇಲೀಕಟ್ಟಿದ, ಆವೇರಿಯಾದ.

Fenceless, a. ಅಡ್ಡಿಯಿಲ್ಲದ, ಮರೆಯಿಲ್ಲದ, ಬೇಲಿಯಿಲ್ಲದ, ಆವೇರಿಯಿಲ್ಲದ. v. *Defenceless.*

Fencer, s. n. ಅಸ್ತ್ರಾಭ್ಯಾಸಿ, ಕತ್ತೀಸಾಧಕದವ.

Fencing, s. n. ಕತ್ತೀಸಾಧಕ.

Fencing-house, s. n. ಗರಡೀಮನೆ, ತಾಲಿಂಖಾನೆ.

Fencing-master, s. n. ಅಸ್ತ್ರಶಿಕ್ಷಕ.

Fencing-school, s. n. ಗರಡಿ, ಸಾಧಕಸಾಲೆ.

To Fend, v. a. ಕಟ್ಟಿಬಿಡು, ತಪ್ಪಿಸು. v. *To defend, keep off, exclude.*

Fender, s. n. (*of a carriage*) ಘಾಳೀಮರೆ, ರಥಗುಪ್ತಿ, ವರೂಥವು.

Fennel, s. n. (*anethum pammorium*) ಸದಾಪು.

Fenugreek, s. n. (*trigonella fænum gæcum*) ಮೆಂತ್ಯ.

Feodal, a. (*land*) ಕಟ್ಟುಗುತ್ತಿಗೆಯಾದ.

Ferine, a. ದುಷ್ಟವಾದ, ಕ್ರೂರವಾದ.

Ferment, s. n. ಉಕ್ಕು; (*tumult*) ಗೊಮ್ಮಲು, ಗಲಿಬಿಲಿ, ಗದಿಬಿದಿ.

To Ferment, v. n. ಉಕ್ಕು, ಪೊಂಗು.

Fermentable, a. ಉಕ್ಕತಕ್ಕ, ಪೊಂಗತಕ್ಕ.

Fermentation, s. n. ಉಕ್ಕುವಿಕೆ, ಪೊಂಗುವಿಕೆ.

Fermentative, a. ಉಕ್ಕುವ, ಪೊಂಗುವ.

Fermented, part. ಉಕ್ಕಿದ, ಪೊಂಗಿದ.

Ferocious, a. ಕ್ರೂರವಾದ, ದುಷ್ಟತನವುಳ್ಳ, ಉಗ್ರವಾದ, ಆಗ್ರಹವುಳ್ಳ. v. *Fierce, wild, savage, rapacious, ravenous.*

Ferocity, s. n. ಉಗ್ರತನ, ಆಗ್ರಹ, ಕ್ರೂರತನ.

Ferriage, s. n. ಹರಗೋಲಿನ ಕೂಲಿ, ತರಪಂಗ್ಯ, ಆತರ, ಅಂಬಿಗರ ಕಾಸು.

Ferrule, s. n. ಅಣಸು, ಕಂಣು.

Ferry, s. n. ನದೀದಾಟುವಸ್ಥಳ.

To Ferry, v. a. ದಾಟಿಸು.

Ferry-boat, s. n. ಹರಗೋಲು, ದೋಣಿ.

Ferry-man, s. n. ಅಂಬಿಗ, ನಾವಿಗ, ಓಡಗಾರ.

Fertile, a. ಹಸನಾದ, ಸಾರವುಳ್ಳ, ಪುಷ್ಟಿಯಾದ. v. *Abundant, fruitful, plenteous, rich.*

Fertileness, Fertility, s. n. ಸಾರವು, ಹಸನು, ಫಲಕರತನವು.

To Fertilize, v. a. ಹಸನುಮಾಡು, ಸಾರವತ್ತುಮಾಡು.

Fervency, Fervour, s. n. ಹುರುಪು, ಸುರುಸುರುಪು, ಕುತೂಹಲ, ಆಕಾಂಕ್ಷೆಯು. v. *Heat, eagerness, zeal, glow, warmth.*

Fervent, a. ಹುರುಪಿನ. v. *Hot, zealous, vehement.*

Fervently, ad. ಹುರುಪಾಗಿ, ಸುರುಸುರುಪಾಗಿ, ಕುತೂಹಲವಾಗಿ. v. *Eagerly.*

Fervid, a. ಶೀಘ್ರವಾದ, ತೀವ್ರದ, ಜಾಗ್ರತೆಯ.

Fervour, s. n. ಶೀಘ್ರತೆ, ಹುರುಪು, ತೀವ್ರ, ಬಿಸಿ.

Ferula, s. n. ಸೆಳೆ, ಚುಳಿಕಿ.

Fescue, s. n. ತೋರುವಕಡ್ಡಿ.

Fesels, s. n. ಕಿಟ್ಟಿದಾಂನ್ಯ.

To Fester, v. n. ಉರುಬಾಗ, ಪ್ರಬಲವಾಗ. v. *To rankle, suppurate, corrupt.*

Festival, s. n. ಹಬ್ಬ, ಜಾತ್ರೆ, ಉತ್ಸವ, ಹರ್ಷ, ಉದ್ಧರ್ಷ, ಪರುವು, ಉದ್ಧವವು, ಶುಭಪ್ರಸ್ತ.

Festival, Festive, a. (*pertaining to feasts*) ಹಬ್ಬದ, ಜಾತ್ರೆಯ; (*joyous*) ಉಲ್ಲಾಸದ, ಸಂಭ್ರಮದ. v. *Gay, joyous, cheerful.*

Festivity, s. n. ಹಬ್ಬ, ಜಾತ್ರೆ, ಶುಭ, ಮಂಗಳ, ಕಲ್ಯಾಣ. v. *Gaiety, joyfulness, cheerfulness.*

Fetch, s. n. ತಂತ್ರ, ಉಪಾಯ. v. *Artifice, trick, stratagem.*

To Fetch, v. a. (*to go and bring*) ತೆಗದುಕೊಂಡುಬರ, ಹಿಡಿದುತರ; (*to produce*) ಬೆಳೆಯಾಗ, ಬೆಳೆ, ಬಾಳೆ, ಹಿಡಿಯ; (*to bring out*) ಹೊರಗೆತರ; (*to fetch breath*) ಉಸುರೆಳೆಯ; (*to fetch away*) ತೆಗದುಕೊಂಡುಬರ; It will *fetch* about five or six rupees in the market ಇದುಬಾಜಾರದಲ್ಲೈದಾರುರೂಪಾಯಿಬಾಳುವದು.

Fetcher, s. n. ತರುವವ.

Fetid, a ದುರ್ಗಂಧದ, ಗಡುಡಿನ, ಗಬ್ಬುವಾಸನೆಯ, ಹಸುಕಿನ, ನಾತದ, ಸೊವಡಾದ, ಸೊಂಗಡಾದ; (*to be fetid*) ಗಬ್ಬುವಾಸನೆಯಾಗ, ಹಸುಕುನಾತವಾಗ; (*to render fetid*) ಹಸುಕುನಾತವಾಗಿಮಾಡ.

Fetidness, s. n. ಗಬ್ಬು, ನಾತ, ದುರ್ಗಂಧ, ಹಸುಕುನಾತ, ಹಡುಕು, ಸೊವಡು, ಸೊಂಗಡು, ಗಡುಡು. v. *Stink.*

Fetter, Fetters, s. n. ಸಂಕೋಲೆ, ಶೃಂಖಲೆ, ಬೇಡಿ. v. *Chains.*

To Fetter, v. a. ಸಂಕೋಲೆಯಿಡಾಕ, ಬೇಡಿಯಿಡಾಕ.

Fettered, part, ಸಂಕೋಲೆಯಿಡಾಕಲ್ಪಟ್ಟ, ಬೇಡಿಯಿಡಾಕಿದ.

To Fettle, v. a. ಕಾಲಕಳೆಯ, ಕಾಲಕ್ಷೇಪಮಾಡ, ಮೈಗಳ್ಳತನಮಾಡ.

Fetus, s. n. ಪಿಂಡ, ಗರ್ಭ.

Feud, s. n. ಗಲಸು, ಗದ್ದಲು, ಗಲಿಬಿಲಿ, ಕಲಹ, ಹೋರಾಟ. v. *Quarrel, contention.*

Fever, s. n. ಜ್ವರ; (*a bilious fever*) ಹೂಟಿಪಾಲಕ; (*an intermitting fever*) ಬಿಟ್ಟುಬರುವಜ್ವರ; (*an unintermitting fever*) ಸತತಜ್ವರ; (*a contagious fever*) ಸಾಂಕ್ರಾಮಿಕಜ್ವರ; (*a malignant fever*) ವಿಷಮಜ್ವರ; (*the cold fit of a fever*) ಚಳಿ; (*quartāna fever*) ಚಾತುರ್ಥಿಕಜ್ವರ.

Feverish, a. ಜ್ವರದ.

Few, a. (*things*) ಕೆಲವು; (*a few people*) ಕೆಲಬರು.

Fewel, or Fuel, s n. ಕಟ್ಟಿಗೆ, ಸೌದೆ.

Fewness, s. n. ಸ್ವಲ್ಪಿಕೆ, ಅಲ್ಪತ್ವ. v. *Scarcity.*

Fib, s. n. ಸುಳ್ಳು, ಅನೃತ, ಅಪದ್ಧ, ಸಟೆ, ಸಟೆಪಟೆ, ಹುಸಿ. ಪುಸಿ. v. *Lie, falsehood.*

To Fib, v. n. ಸುಳ್ಳುಹೇಳ, ಅಪದ್ಧವಾಡ, ಹುಸಿಹೇಳ. v. *To lie.*

Fibber, s. n. ಸುಳ್ಳುಗಾರ, ಅಪದ್ಧಖೋರ, ಹುಸಿಗಾರ.

Fibre, s. n. ಕೇಸರ, ಕುಸುಮ, ಕಿಂಜಲ್ಕ.

Fibrous, a. ಕೇಸರದ, ಕುಸುಮದ, ಕಿಂಜಲ್ಕದ.

Fickle, a. ಚಪಲಚಿತ್ತದ, ಸ್ಥಿರವಿಲ್ಲದ, ಚಂಚಲವಾ

ದ, ಅಸ್ತೋಲದ, ಸಂಶಸುಕವಾದ. v. *Inconstant, irresolute, wavering.*

Fickleness, s. n. ಚಪಲಚಿತ್ತತೆ, ಚಾಂಚಲ್ಯ.

Fico, s. n. *(to give the)* ಚಿಟಿಕೆಹಾಕ.

Fiction, s. n. ಕಟ್ಟುಕಥೆ, ಕಲ್ಪನಾಕಥೆ, ಸೂಂನ್ಯಷಿಂಪು. v. *Lie, falsehood, dissimulation, fable, invention.*

Fictitious, a. ಕಟ್ಟುಕಥೆಯ, ಕಲ್ಪನೆಯ. v. *False, counterfeit, imaginary.*

Fiddle, s. n. ಸಾರಂಗಿ, ರವಾಜ.

To Fiddle, v. n. ಸಾರಂಗಿಬಾರಿಸ.

Fiddle faddle, s. n. ಅಲ್ಪಕಾರ್ಯ, ಕೊಂಚಕೆಲಸ, ಚಿಲ್ಲರೆಕೆಲಸ. v. *Trifles, trifling.*

Fiddler, s. n. ಸಾರಂಗಿಯವ, ರವಾಜಿನವ.

Fiddlestick, s. n. ಸಾರಂಗಿಬಿಲ್ಲು, ಕಪುರುವಿಲ್ಲು.

Fiddlestring, s. n. ಸಾರಂಗಿತಂತಿ.

Fidelity, s. n. ಪ್ರತ್ಯಯಪಾತ್ರ, ಮಾತುಬರಿ, ಆಪ್ತತೆ, ವಿಶ್ವಾಸ್ಯತನ. v. *Honesty, veracity, attachment.*

To Fidget, v. n. ಬಡಬಡನೋಡ್ಯಾಡ, ಚಟಚಟಿಸಿನಡಿಯ.

Fief, s. n. ಕಟ್ಟುಗುತ್ತಿಗೆ.

Field, s. n. ಹೊಲ, ಕೇದಾರ, ಕ್ಷೇತ್ರ, ವಪ್ರವ; *(a multitude of fields)* ಕೈದಾರಿಕ, ಕೈದಾರ್ಯ, ಕ್ಷೈತ್ರ, ಕೈದಾರಕ; *(a field fit for corn and rice)* ವ್ರೈಹೇಯ, ಶಾಲೇಯ, ಕ್ಷೇತ್ರಬೆಳೆವ, ಗದ್ದೆ; *(a field of battle)* ಯುದ್ಧರಂಗ, ಯುದ್ಧಸ್ಥಾನ; *(a field day)* ಬಿಸಿಲುದಿವಸ; *(in the field)* ಹೊರಗೆ; *(to take the field as troops)* ಯುದ್ಧಕ್ಕೆಹೊರಡ, ಹೊರಹೋಗ; *(to lose the field)* ದಂಡುಮುರಿಯ, ಭಂಗವಾಗ, ಸೋಲ, ಅಪಜಯವಾಗ; *(to gain the field)* ಜಯಿಸ, ಗೆಲ್ಲ, ಕಡಿಹಾಯ, ಮಾರ್ಮರಿಯ; *(to be in the field)* ಹೊರಗೆಳೆಯ; *(to keep the field against an enemy)* ಮಾರಾಕುನಿಲ್ಲ, ಗಂಡಾಗ, ಮೊಂಡಾಗ; Who won the *field?* ಯಾರುಜಯಿಸಿದರು, or ದಾರಕೈಯ್ಯುಮುಂಚಿತು.

Fieldpiece, s. n. ತೋಫಾ, ಫಿರಂಗಿ.

Fiend, s. n. ದೆವ್ವ, ಗ್ರಹ, ಭೂತ, ಪಿಶಾಚಿ, ಪಿರಿಕಿನಿ, ಮಡುಳು. v. *Devil, demon.*

Fierce, a. ಉಗ್ರವಾದ, ದುಷ್ಟವಾದ, ಕೋಪವುಳ್ಳ, ಮುಂಟಿತನವುಳ್ಳ. v. *Ferocious, fiery, cruel, savage, ravenous, violent, outrageous.*

Fiercely, ad. ದುಷ್ಟವಾಗಿ, ಉಗ್ರವಾಗಿ, ಕೋಪವಾಗಿ, ರೌದ್ರವಾಗಿ. v. *Furiously, violently.*

Fierceness, s. n. ದುಷ್ಟತನ, ಕ್ರೋಧತ್ವ, ಉಗ್ರ, ರೌದ್ರ. v. *Acrimony, heat.*

Fieriness, s. n. ಉಗ್ರ, ಕೋಪ, ಆಕ್ರೋಶ, ರೌದ್ರ, ಕೋಪ, ಉರಿ, ಬಿಸಿ.

Fiery, a. ಕೋಪದ, ಆಗ್ರಹದ, ಉರಿಯಾದ, ಬಿಸಿಯಾದ.

Fife, s. n. ಪಿಲ್ಲಾಂಗೋವಿ, ಕೊಳಲು.

Fifteen, a. ಹದಿನೈದು, ಪಂಚದಶ.

Fifteenth, a. ಹದಿನೈದನೆಯ, ಪಂಚದಶತಮ.

Fifth, a. ಅಯಿದನೆಯ, ಪಂಚಮ.

Fiftieth, a. ಅಯಿವತ್ತನೆಯ, ಪಂಚಾಶತ್ತಮ.

Fifty, a. ಅಯಿವತ್ತು, ಪಂಚಾಶತ್ತು.

Fig, s. n. ಅಂಜೂರು; *(glomerous fig tree)* ಅತ್ತಿ

ಕಂಗು ; I do not care a *fig* about it ನನಗ ದುಕ್ಕೃಗಾ ಪ್ರಾಯವು.

Fight, s. n. ಝಗಳ, ಯುದ್ಧ, ಕಾದ್ಯಾಟ, ಗುದ್ದ್ಯಾಟ. v. *Battle.*

To Fight, v. n. ಝಗಳವಾಡ, ಯುದ್ಧಾ ಮಾಡ, ಗುದ್ದ್ಯಾಡ, ಕಾದ.

Fighter, s. n. ಝಗಳಗಂಟ, ಗುದ್ದ್ಯಾಟದವ. v. *Champion, combatant, warrior.*

Fighting, s. n. ಗುದ್ದ್ಯಾಡೋಣ, ಝಗಳಾಡೋಣ.

Figurable, a. ರೂಪವಾಗತಕ್ಕ.

Figuration, s. n. ಆಕಾರಿಸುವಿಕೆ, ರೂಪಿಸುವಿಕೆ.

Figurative, a. ಸಾಂಮ್ಯದ.

Figuratively, ad. ಸಾಂಮ್ಯವಾಗಿ.

Figure, s. n. (*form*) ರೂಪ; (*semblance*) ತೋರಿಕೆ; (*eminence*) ದೊಡ್ಡಸ್ತಿಕೆ, ಹಿರಿಯತನ; (*statue*) ಗೊಂಬೆ, ಪ್ರತಿಮೆ; (*painting*) ವಿಚಿತ್ರ; (*external form*) ಆಕಾರ; (*an idol*) ವಿಗ್ರಹ. v. *Image.* (*arrangement*) ಕ್ರಮ, ಜೋಂದಿಕೆ. v. *Disposition, modification, order.* (*magnificence, splendour*) ಡಂಭ, ಪಟಾಟೋಪ, ದಶಿದ್ಧಾಳಿಕೆ, ಡಬ್ಬು, ಡಂಭ, ಒಡ್ಡವಣೆ, ಪರಿಕ್ಷವಣೆ; (*number*) ಅಂಕಿ. v. *Cipher.* (*type*) ಸಾಂಮ್ಯ, ಉಪಮೆ; (*horoscope*) ಜನ್ಮಪತ್ರಿಕೆ, ಜಾತಕ.

To Figure, v.a. ಅಂಕೀಹಾಕ; (*to form into any determinate shape*) ರೂಪಿಸ, ನಮೂನೇಮಾಡ; (*to represent by a typical or figurative resemblance*) ಸಾಂಮ್ಯವಾಗಿಹೇಳ, ಸಾಂಮ್ಯದಿಂದರ್ಶೀರಿಸ; (*to carve*) ಚೇರಣಿಸ, ಚಿತ್ರಿಸ; (*to variegate with adventitious forms*) ಚಿತ್ರಾಕಾಮಾಡ; (*to conceive*) ಎಣ್ಣಿ, ನೆನಿಸ; (*to cover or adorn with figures*) ಸಿಂಗರಿಸ, ಅಲಂಕರಿಸ, ಶೃಂಗಾರಮಾಡ.

Figured, a. ವಿಚಿತ್ರವಾದ.

Filament, s. n. ಕುಸುಮ, ಕಿಂಜಲ್ಕ, ಕೇಸರ. v. *Thread, fibre.*

To Filch, v. a. ತಸ್ಕರಾಮಾಡ, ಕಳ್ಳತನಾಮಾಡ. v. *To pilfer, steal.*

Filcher, s. n. ತಸ್ಕರದವ, ಕಳ್ಳನು,

File, s. n. (*of soldiers*) ಪಂಕ್ತಿ, ಸಾಲು; (*the instrument*) ಅರವಣಿಗೆ, ಅರ; (*a catalogue*) ಬರಾವರ್ದ ಪಟ್ಟಿ; (*a file of papers*) ಸರ; (*to draw up in files*) ಪಂಕ್ತಿಯಿಡ; (*to march in files*) ಸಾಲಾಗಿನಡಿಯ.

To File, v. a. (*down prominencies*) ಅರಾವ, ಅರದಿಂದ ಕೆರೆಯ; (*papers*) ಸರಾಪೋಣಿಸ.

Filer, s. n. (*of men*) ಸಾಲಿಗಿಡುವವ; (*of metals*) ಅರದಲ್ಲುಜ್ಜುವವ.

Filial, a. ಪುತ್ರಭಕ್ತಿಯುಳ್ಳ, ಮಗನಹಾಗೆ.

Filing, s. n. ಅರಾಹುಜ್ಜಿಕೆ, ಅರಾಹಿಡಿಕೆ.

Filings, s. n. ರಜ, ಬೀಡು, ಅರಪುಡಿ; (*iron filings*) ಬೀಡು, ಘೂರ್ಣ.

Fill, s. n. ಪೂರ್ತಿ, ತುಂಬಿಕೆ, ತೃಪ್ತಿ; Eat your *fill* ಮನಸ್ಸಾರ ಉಂಗು, or ಹೊಟ್ಟೆತುಂಬ ಉಂಗು. v. *Fulness, satiety, completion, repletion.*

To Fill, v. n. ತುಂಬಿಸ, ಪೂರ್ತೀಮಾಡ; (*to fill out or swell as a bladder*) ಉಬ್ಬು; (*to fill up, to supply*) ಇಡ, ಇರಿಸ, ತೃಪ್ತೀಮಾಡ; (*to fill

Hill, s. n. ಗುಡ್ಡ, ಪರ್ವತ, ಬೆಟ್ಟ. v. *Mountain.* (*the top of a hill*) ಅಗ್ರ; (*a castle or fort on a hill*) ದುರ್ಗ; (*a place or pass between two hills*) ಕಣಿವೆ; (*a sand hill*) ದಿಬ್ಬ.

Hillock, s. n. ದಿಂಣೆ, ದಿಬ್ಬ, ಮಟ್ಟಿ. v. *Molehill.* (*a hillock thrown up by termes, moles, &c.*) ಹುತ್ತ, ವಾಮ, ಊದು, ನಾಕು, ವಲ್ಮೀಕ.

Hilly, a. ಗುಡ್ಡದ, ಬೆಟ್ಟದ.

Hilt, s. n. ದಸ್ತು, ಹಿಡಿ, ಪಿಡಿ, ಕೈಪಿಡಿ. v. *Handle.*

Him, pro. ಅವನನ್ನು.

Himself, his own self, pro. ಅವನೇ, ಇವನೇ, ತನಗೆ ತಾನೆ; He will kill *himself* ಪ್ರಾಣಾಕಳೆ ಕೊಳ್ಳುತ್ತಾನೆ; I am sure he was not *himself* that day ಅವನಾಹೊತ್ತುಸ್ವಭಾವವಾಗಿದ್ದನೆಂದುನೆನಸುತ್ತೇನೆ, or ಅವಸಂದುಸ್ಮರಣೆಯಾಗಿದ್ದಿಲ್ಲವು; The boy threw *himself* into the river ಹುಡುಗ

ಮನೆನಗೆ ತಾನೆ ನದಿಯಲ್ಲಿ ಮುಳುಗಿದನು; *(an admirer of himself)* ಆತ್ಮಸ್ತೋತ್ರಕ; *(pleased with himself)* ಆತ್ಮಸಂತೋಷಿ, ಸ್ವಸಂತೋಷಿ.

Hind, s. n. *(female of a stag)* ಹೆಂಗಾಡುಜಿಂಕೆ, ಹರಿಣಿ; *(a servant for rustic work, or a boor)* ಒಕ್ಕಲಿಗ, ಪಡ್ಡೊಕ್ಕಲಿಗ. v. *Back, backward.*

Hinder, a. ಹಿಂಭಾಗದ, ಹಿಂದಿನ. v. *Posterior.* The *hinder* part ಕುಂಡೆ, ಠಿಕ, ಹಿಂದುಕಡೆ; *(on the hinder part)* ಹಿಂಭಾಗದಲ್ಲಿ, ಹಿಂದಿನ ದೆಸೆಯಲ್ಲಿ; *(the hinder part of the head)* ಹಿಂದಲೆ, ಹೆಡತಲೆ, ಪಿಂದಲೆ.

Hindermost, Hindmost, a. ಹಿಂದಾದ, ಕಡೆಯ, ಅಂಚಿನ. v. *Last.*

To Hinder, v. a. ಆತಂಕಿಸು, ಅಡ್ಡಿಮಾಡು, ಅಭ್ಯಂತರಿಸು, ಅಟಕಾಯಿಸು. v. *To obstruct, prevent.*

Hinderance, s. n. ಆತಂಕ, ಅಭ್ಯಂತರ, ತಡೆ, ತಕರಾರು, ಅಡ್ಡಿ, ವಿಘ್ನ.

Hinderer, s. n. ಆತಂಕಿಸುವವ, ಅಭ್ಯಂತರಮಾಡುವವ.

Hindoo, s. n. ಹಿಂದೂಜನ, ಹಿಂದೂಮನುಷ್ಯ.

Hindostan, s. n. ಹಿಂದುಸ್ಥಾನ.

Hinge, s. n. ಕೀಲು, ಕಟ್ಟು.

To Hinge, v. a. *(fit with hinges)* ಕಟ್ಟುಹಾಕು, ಕೀಲುಹಾಕು.

To Hint, v. a. *(give a signal)* ಸಂಜ್ಞೆಮಾಡು, ಸನ್ನೆಮಾಡು; *(to hint at, mention slightly)* ಜಾಡೆಹೇಳು, ಸೂಚಿಸು.

Hint, s. n. *(signal)* ಆಕಾರ, ಇಂಗ, ಇಂಗಿತ, ಸನ್ನೆ, ಸಂಜ್ಞೆ. v. *Suggestion, intimation.*

Hip, s. n. ಟೊಂಕ, ಚೆಂಪೆ, ನಿತಂಬ, ಜಾರವಾರ, ಕಟಿ; *(the hip bone)* ಟೊಂಕಿಯೆಲುಬು, ಚೆಂಪೆಯೆಲುಬು.

Hip, s. n *(dejection of spirits)* ತಲ್ಲಣಿಯು, ಕಳವಳಿಕೆಯು, ಕುಂದುಕೆಯು, ವಿಷಾದವು.

Hippish, Hipped, a. ಕುಂದಿದ, ತಲ್ಲಣಿಯಾದ, ಜೆಲ್ಲಾಲುವುಳ್ಳ, ವಿಷಂಗಾತ್ರೆಯ. v. *Dejected.*

Hippopotamus, s. n ನೀರುಕುದುರೆ.

To Hire, v. a. *(take on hire)* ಬಾಡಿಗೆಗೆ ತಕ್ಕೊಳ್ಳು; *(to let on hire)* ಬಾಡಿಗೆಕೊಡು; *(to hire or bribe)* ಲಂಚಕೊಡು; *(to hire one's-self)* ಬಾಡಿಗೆಯವನಾಗು, ದುಡಿಯು, ಕೂಲಿಹೋಗು, ಕೂಲಿ ಹಿಡು.

Hire, s. n. ಕೂಲಿ, ಸಂಬಳ, ಭೃತಿ, ಕಿರಾಯಿ, ಭೃತ್ಯ, ಭರ್ಮ, ವೇತನ, ಭಾರಗ್ಯ, ಭಾರಣ, ಮೂಲ್ಯ, ನಿರ್ವೇಶ, ಪಣ. v. *Wages, recompense, reward.* *(the hire of prostitution)* ಭಾಡೇಕಾಸು.

Hired, part. ಕೂಲಿಯಾದ, ಬಾಡಿಗೆಯಾದ.

Hireling, s. n. ಕೂಲಿಯಾಳು, ವಸ್ತಿಕ, ಭೃತಕ, ಭೃತಿಭುಕ್ಕ, ಕರ್ಮಕರ, ವೈತನಿಕ.

Hirer, s n. ಬಾಡಿಗೆಗೆ ತಕ್ಕೊಂಬುವವ.

His, pro. ಅವನ, ತನ್ನ, ಇವನ, ಅವನದು, ಇವನದು, ಆತನ, ಆತನದು; This is *his* ಇದು ಅವನದು; Where is *his* house? ಅವನ ಮನೆಯಲ್ಲಿದೆ; What is *his* name? ಅವನ ಹೆಸರೇನು.

To Hiss, v. n. ಬುಸ್ಸೆನು.

Hiss, s. n. ಬುಸ್ಸು; *(making a hissing or ting-*

ling noise in the ear) ಜೇಂ ; *(hissing or whistling as the wind)* ಜೆಸಜೆರ್.

Hist ! interj. ಸದ್ದು, ಸುಂಮನಿಯಿರು, ಬಾಯಿಮುಚ್ಚು.

Historian, Historiographer, s. n. ಕಥಿಕ, ಪ್ರಬಂಧಕ; *(a faithful historian)* ಸತ್ಯಕಥಕ.

Historical, a. ಕಥೆಯ, ಚರಿತ್ರೆದ, ಪ್ರಬಂಧದ.

Historically, ad. ಕಥೆಯಾಗಿ, ಪ್ರಬಂಧವಾಗಿ.

History, s. n. ಚರಿತ್ರೆ, ಕಥೆ, ಪ್ರಬಂಧ, ಇತಿಹಾಸ. v. *Story, tale, narration, narrative, relation. (one who recites histories)* ಕಥೆಯೋಳುವವ, ಪುರಾಣಿಕ; *(wonderful histories)* ಆಶ್ಚರ್ಯಚರಿತ್ರೆಗಳು, ವಿಚಿತ್ರವಾದಕಥೆಗಳು; *(a fabulous history)* ಕಲ್ಪನಾಕಥೆ, ಸುಳ್ಳುಕಥೆ.

To Hit, v. a. ಬಡಿಯು. v. *To strike, beat. (to hit a blow)* ಟೊಂಗಿದ, ಕುಟ್ಟೆ ಮೊಟ್ಟೆ; *(to hit the mark or butt)* ಗುರಿತಗಲು ; *(to hit the fancy)* ಮೆಚ್ಚಿಸು. v. *To please. (to hit upon)* ಅನುಕೂಲಿಸು. v. *To succeed. (to hit or agree in opinion)* ಒಪ್ಪು, ಒಡಂಬಡಿಕೆಯಾಗು, ಸಂಮತಿಯಾಗು; *(to hit one in the tooth, to upbraid)* ಹಂಗಿಸು.

Hit, s. n. ಪೆಟ್ಟು, ಹೊಡತ, ಅಭಿಘಾತ.

To Hitch, v. a. *(move along by jerks)* ಜಿಗ್ಗಿಸು.

Hither, Hitherward, ad. ಇಲ್ಲಿ, ಇಲ್ಲಿಗೆ, ಈಚೆಲಿ; *(hither and thither)* ಇಲ್ಲಲ್ಲಿ; *(to search for hither and thither)* ಅಲ್ಲಲ್ಲಿಹುಡುಕು.

Hithermost, ad. ಈಚೆಲಿಯೆ, ಎಲ್ಲಾದಕ್ಕೂ ಈಚೆಯೆ.

Hitherto, ad. ಈವರಿಗೂ, ಈಪರಿಯಂತರಕ್ಕೂ.

Hive, s. n. *(swarm of bees)* ಕೊಟ್ಟೆ, ಮಧುಪಟಲವು; *(honey comb)* ಜೇನುಕೊಟ್ಟೆ.

To Hive, v. n. ಕೂಡವಾಸವಾಗಿರು.

Ho ! hoa ! interj. ಓ.

Hoar, a. ನರೆಯ. v. *Hoary. (hoar frost)* ಖನಿಘಾತಹಿಮ.

Hoard, s. n. ಸಂಪತ್ತು, ಬೊಕ್ಕಸ, ಸ್ತೋಮ, ನಿಕ್ಷೇಪ, ಸಂಚಿತವು, ಜಿಂದಗಾನಿ. v *Treasure.*

To Hoard, v. a. ಕೂಡಿಸು, ನಿಕ್ಷೇಪಿಸು. v. *To store, lay by.*

Hoariness, s. n. ನರಿಕೆ.

Hoarse, a. ಗೊಗ್ಗರಿಯ, ಗಂಟ್ಲೊಡದ; *(to be hoarse)* ಗೊಗ್ಗರಬೀಳು, ಗಂಟ್ಲೊಡೆಯು; *(the hoarse barking of a dog)* ಗುತ್ರಿಸು.

Hoarsely, ad. ಗೊಗ್ಗರಿಯಾಗಿ, ಕಮ್ಮಿಲ್ಲದಾಗಿ.

Hoarseness, s. n. ಗೊಗ್ಗರಿ, ಕಮ್ಮುವಿಕೆ ; *(to make a hoarse noise)* ಗುಡುಕಾಯಿಸು, ಕಿತ್ರಿಸು; *(to grow hoarse)* ಗಂಟ್ಲೊಡೆಯು, ಗೊಗ್ಗರಿಬೀಳು.

Hoary, a. ನರೆಯ. v. *White, gray, mouldy. (hoary hairs)* ನರೆಕೂದಲು. v. *Gray-hairs.*

Hoax, s. n. ಚಲ್ಲವತ್ತಿತನ, ಜಲ್ಲಿ, ಮೋಸ.

To Hoax, v. a. ಮೋಸಗೊಳಿಸು, ನಂಬಿಸು.

Hoaxer, ಮೋಸಗಾರ, ನಂಬಿಸುವಳ, ಚಲ್ಲವತ್ತಿನ.

To Hobble, v. n. ಕುಂಟು. v. *To halt, limp.*

Hobblingly, ad. ಯದ್ವಾತದ್ವವಾಗಿ, ಅಬಂಡಕಿಯಾಗಿ. v. *Awkwardly, unskilfully.*

Hobby, s. n. *(a small horse)* ಟಾಕಣ, ಚಿಕ್ಕಕುದುರೆ, ಮಟ್ಟ.

Hobgoblin, s n. ಆವೇಶ, ಪಿಶಾಚಿ, ಭೂತ, ದೆವ್ವ v. *Elf, fairy, demon.*

Hobnail, s. n. ದಪ್ಪತಲೆಯಾದ ಮೊಳೆ.

Hocus-pocus, s. n. ಮೋಸ, ತಂತ್ರ, ದಗೆ.

Hodge-podge, s. n. ಕಲಬೆರಿಕೆ, ಕಿಚ್ಡಿ. v. *Medley*.

Hodiernal, a. ಈ ಹೊತ್ತಿನ, ಇಂದಿನ.

Hoe, s. n. ಸಲಿಕೆ, ಖನಿತ್ರ, ಅವದಾರಣ, ಎಲೆಗುದ್ದಲಿ.

To Hoe, v. a. ಸಲಿಕೆಯಿಂದಗೆಯು, ಎಲೆಗುದ್ದಲಿಯಿಂದಗೆಯು.

Hog, s. n. ಹಂದಿ, ಸೂಕರವು; *(a wild hog)* ಕಾಡುಹಂದಿ, ವರಾಹ, ಸೂಕರ, ಘೃಷ್ಟಿ, ಕೋಲ, ಪೋತ್ರಿ, ಕಿರಿ, ಕಿಟಿ, ದಂಷ್ಟ್ರಿ, ಘೋಣಿ, ಸ್ತಬ್ಧರೋಮ, ಕ್ರೋಡ, ಭೂದಾರ; *(hog-driver)* ಹಂದಿಕಾಯುವವ; *(hog's lard)* ಹಂದಿದುಪ್ಪ; *(hog's bristles)* ಹಂದಿಕೂದಲು, ವರಾಹಕೂರ್ಚ; *(the grunting of hogs)* ಗುರುಗುಟ್ಟೆ; *(hog's sty)* ಹಂದಿಗೂಡು.

Hoggish, a. ದೊಡ್ಡಹೊಟ್ಟೆಯುಳ್ಳ, ಆಸೆಬಡಿಕೆಯ. v. *Brutal, selfish, clownish.*

Hoggishly, ad. ದೊಡ್ಡೊಟ್ಟೆಯುಳ್ಳವನಾಗಿ, ಆಸೆಬಡಿಕನಾಗಿ. v. *Selfishly, greedily.*

Hoggishness, s. n. ದೊಡ್ಡೊಟ್ಟೆ, ಆಸೆಬಡಿಕೆ. v. Also *selfishness, rusticity, brutality, greediness.*

Hogshead, s. n. *(a barrel)* ಪೀಪ.

Hogweed, s. n. ಕೇರುಪುನರ್ನವಿ, ಶೋಥಘ್ನ.

To Hoist, v. a. ಎತ್ತರಿಸು, ಏರಿಸು. v. *To raise.* *(to hoist sail)* ಪಟವೇರಿಸು.

To Hold, v. a. *(contain)* ಹಿಡಿಯು; How much will this *hold*? ಇದೆಷ್ಟು ಹಿಡಿಯುವದು; *(possess, keep)* ಒಳಕೊಳ್ಳು, ದಕ್ಕಿಸಿಕೊಳ್ಳು. v. *To grasp, seize, retain, possess, enjoy.* *(to hold fast)* ಘಟ್ಟಿಯಾಗಿ ಹಿಡಿಯು; *(to catch hold of the skirts of another's garments)* ಸೆರಗು ಹಿಡುಕೊಳ್ಳು; *(to hold back)* ಬಿಗಿಹಿಡಿಯು. v. *To restrain, check.* *(to cause one to hold or grasp)* ಹಿಡಿಸು; *(to hold in, a horse, &c.)* ಬಿಗಿಹಿಡಿಯು. v. *To restrain, check, stop.* *(to hold in, restrain one's self)* ಹಿಡಿಸು, ಪಟ್ಟುಮಾಡು, ಒಳಕೊಳ್ಳು, ತಳಕೊಳ್ಳು; *(to hold forth, to shew)* ಕೈಹಿಡಿದು ತೋರಿಸು, ತೋರಿಸಿಕೊಡು. v. *To exhibit.* *(to harangue)* ಹಿಡಿದುಹೇಳು, ಸ್ಪಷ್ಟವಾಗಿಹೇಳು; *(to hold off, to keep one at a distance)* ತಟ್ಟಿಬಿಡು, ನಿರಾಕರಿಸು; *(to procrastinate, delay coming to an engagement)* ಆಲಸ್ಯಮಾಡು; *(to hold in, continue)* ಹಿಡಿದಿರು; *(to proceed, go forward)* ಸಾಗಿಸು; *(to hold out, stretch out the hands, &c.)* ಕೈಚಾಚು; *(to continue to bear or suffer)* ಸೈರಿಸು, ತಾಳು; *(to offer, propose)* ಮಾತುಕೊಡಹೇಳು; *(to last)* ಇರು, ಬರು, ಬಾಳು; *(not to yield or be subdued)* ಹಂಮುಹಿಡಿಯು, ಹಿಂಜರಿಯದೆಯಿರು, ಮಾರಾಡು ನಿಲ್ಲು; *(to hold together)* ಕಚ್ಚಿಕೊಂಡಿರು, ಏಕವಾಗಿಹಿಡಿದಿರು; *(to hold up, raise aloft)* ಎತ್ತಿಹಿಡಿಯು; *(to support, sustain)* ಉದ್ಧರಿಸು; *(to continue fair weather, not to rain)* ತಳಕೊಳ್ಳು, ನಿಂತುಹೋಗು; *(to continue at full speed)* ಗಕ್ಕದೆಯೋಡು, ನಿಲ್ಲದೆಯೋಡು; *(to hold one's peace)* ಮೌನವಾಗಿರು, ಬಾಯಿಮುಚ್ಚು; *(to hold a council)* ಮಸಲತು

ಮಾಡ; *(to hold a conference or consultation)* ಆಲೋಚನೆ ನಡಿಸಿಕೊಳ್ಳ; It will *hold* good ಅದುಸರಿಯಾಗುವದು; I cannot *hold* with you there ನಿನ್ನಸಂಗಡನಾಹೋಗೆ.

Hold, interj. ತಾಳುತಾಳು.

Hold, (imp.) ಹಿಡಿ; *(take hold)* ಹಿಡಿಕೋ.

Hold, s. n. *(grasp)* ಹಿಡಿಕೆ; *(something to be held or grasped at)* ಹಿಡಿಮುರಿ; *(a support)* ಆಧಾರ, ಆಸ್ಪದ; *(a prison)* ಸೆರೆ, ಬಂದೀಖಾನೆ; *(custody)* ಕಾವಲಿ, ಪಹರೆ; *(power, influence)* ಅಧಿಕಾರ; *(a lurking place)* ಅಡಗಿರುವ ಸ್ಥಳ, ಹಳ್ಳ, ತಗ್ಗು; *(a strong hold or fortress)* ಗಡಿ, ದುರ್ಗಸ್ಥಳ; *(the hold of a ship)* ಹಡಿಗಿನಕೋಠ್ಠಾರ.

Holder, s. n. ಹಿಡಿಯುವವ; *(a great landholder)* ಗೌಡ; *(a holder forth)* ವಾಚ್ಛಾತುರಿಕ. v. *Declaimer.*

Holdfast, s. n. ಬಿಲಕದಕೊಂಡಿ.

Holding, part. ಹಿಡಿಯುತ್ತಾ.

Hole, s. n. ಕುಣಿ, ರಂಧ್ರ, ತೂತು, ಹೋರು, ತೂಬು, ಸುಷಿರ, ವಿವರ, ಬಿಲ, ಕುಹರವು, ಮೊಕ್ಕೆ, ಗರ್ತ, ಅವಟ. v. *Chink, crack. (a hole made in the vessel or in the head by being struck)* ತಗ್ಗು, ಅದುಕು; *(a button hole)* ಗುಂಡಿಬಿಚ್ಚು; *(a hole in a hedge or fence)* ಗಂಡಿ; *(a hole in a wall for water to run through)* ಜೋರುಗಂಡಿ; *(a round hole)* ಗುಂಡಾದಕುಣಿ, ಗೊಟ್ಟಿಕುಣಿ; *(a hole in the roof left for a skylight)* ಗವಾಕ್ಷ, ಕಿಟಿಕಿ; *(a hole left in the wall of the house to admit light)* ಬೆಳಕ್ಕಿಂಡಿ; *(a hole in a garment)* ಛಿದ್ರ, ತೂತು, ತೊಕ, ರಂಧ್ರ, ಶ್ವಭ್ರ, ವಪೆ, ಸುಷಿ; *(a deep hole or pit)* ಕುಣಿ; *(a filthy hole overgrown with bushes)* ಕಾಗ್ಗುಣಿ; *(a loop hole or eyelet hole)* ಕಿಂಡಿ; *(a hole in a wall)* ತೂತು, ಕಿಂಡಿ; *(a hole in a wall made by thieves)* ಕನ್ನ; *(holes made in a board with which women play)* ಗೊಟ್ಟಿಕುಣಿ; *(a key hole)* ಬೀಗದ ಕಿವಿ; *(a hole made by the natives in digging out earth to build their houses)* ಕಪ್ಪೇಕುಣಿ; *(a hole under ground)* ಹಗವು; *(a hole in which beasts secret themselves)* ಡೊಂಗರ, ಬಿಲ; *(a hole in the ground made by rabbits, &c.)* ಹೋರು; *(the hole or mesh in rattan chairs, &c.)* ಮೊತ್ರೆ; *(a fox's hole)* ಹೊರು, ನರಿಯುಬಿಲ; *(anus)* ಗುದ, ಆಸನದ್ವಾರ, ಪೃಷ್ಠದ್ವಾರ; *(a rat's hole)* ಮೊಕ್ಕೆ, ಮೊರಿಕೆ; *(the hole in the head of a hatchet, &c. in which the handle is fixed)* ತೂಬು; *(a hole in a tree or wall occasioned by decay, or age)* ಡೊತ್ರೆ; *(full of holes)* ತಾತಾತೂತು, ಛಿನ್ನಾಛಿದ್ರ; *(a cooking hole)* ಒಲ್ಲಿ, ಹೂಟಿ; *(holes in the skin, &c.)* ತಾತಾತೂತು; *(to make a hole)* ಕುಣೀಮಾಡ. v. *To bore, dig. (to bore a hole)* ತೂತುಕೊರೆಯ; *(to stop up a hole)* ಕುಣೀಮುಚ್ಚು, ಕುಣೀತುಂಬ.

Holiday, s. n. ಆಟದವು.

Holily, ad. ಪರಿಶುದ್ಧವಾಗಿ.

Holiness, s. n. ಪರಿಶುದ್ಧತೆ, ಪವಿತ್ರ, ಶುಚಿತ್ವಪೂರ್ಣತೆ. v. *Purity, piety, sanctity.*

Holla, s. n. ಕೂಗುವಿಕೆ, ಹೂಯಲಿಡುವಿಕೆ.

To Holla, v. n. ಕೂಗು, ಧ್ವನಿಮಾಡು.

Hollow, a. ಟೊಳ್ಳಿನ, ಪೊಳ್ಳಿಯ; *(made hollow by pressure)* ಡೊಗ್ಗು, ನೊಕ್ಕು; *(worn hollow)* ಚಪ್ಪು, ತಗ್ಗು; *(hollow, insincere)* ವಂಚನೆಯ, ಮೋಸದ, ಕಪಟದ; *(resounding)* ಟೊಳ್ಳಿನ; *(a hollow tooth)* ಕಂದೀಹಲ್ಲು.

Hollow, s. n. ಪೊಳ್ಳೆ, ಟೊತ್ರೆ, ಬೋಲು; *(the hollow of a tree)* ಮರದಪೊಳ್ಳೆ, ನಿಷ್ಕುಹ, ಕೋಟರ; *(the hollow of a bamboo, &c.)* ಟೊಳ್ಳು; *(cavity)* ಚಪ್ಪು, ತಗ್ಗು; *(the hollow in a cocoanut, &c. occasioned by rottenness)* ಮೊಟ್ಟಿ; *(the hollow of the hand)* ಅಂಗೈಕುಣಿ; *(a hollow in the top of a tree)* ಟೊತ್ರೆ; *(the hollow of the eye)* ಕಂಗುಣಿ; *(a hollow reed)* ಟೊಳ್ಳುಗಲುಕು; *(the hollow of an egg shell, &c.)* ಬೋಲು; *(a hollow near the temples)* ಕೆಪ್ಪೆ, ಕಂದಾರ್ಕಿಗುಣಿ; *(any thing hollow)* ಬೋಲು, ಟೊಳ್ಳು; *(the hollow of a bone)* ಬೋಲು, ಬೊತ್ರೆ; *(any hollow where water collects)* ತಗ್ಗು, ಚಿಲ್ಲೆ; *(a hollow or falling in of the body by age)* ಡೊಪ್ಪೆ; *(the hollow of a drum, &c.)* ಡಬ್ಬು. v. *Cave, den, pit;* also *canal, passage.*

To Hollow, or make hollow, v. a. ಟೊಳ್ಳುಮಾಡು, ಕೊರೆ, ಕೊರೆಯು, ಡೊಕ್ಕೆಮಾಡು; *(to shout)* ಕೂಗು, ಆರ್ಭಾಟಮಾಡು.

Hollowed, part. ಟೊಳ್ಳಿನ.

Hollowness, s. n. ಪೊಳ್ಳು, ಟೊತ್ರೆ, ಬೋಲು. v. *Hollow. (insincerity)* ದಗೆ, ವಂಚನೆ, ಮೋಸ. v. *Deceit.*

Holocaust, s. n. ದಹನಬಲಿ.

Holy, a. ಪರಿಶುದ್ಧವಾದ, ಭಕ್ತಿಯ, ನಿರ್ಮಲವಾದ. v. *Pure, good, pious, sacred.*

Holy-day, s. n. ಪರಿಶುದ್ಧದಿನ, ಶುಭದಿನ.

Holy-Ghost, s. n. ಪರಿಶುದ್ಧಾತ್ಮ.

Homage, s. n. ಮರ್ಯಾದೆ, ಉಪಚರಣೆ, ಮಾನ, ಸನ್ಮಾನ. v. *Obeisance. (to do homage)* ಸನ್ಮಾನಿಸು.

Home, s. n. ಗೃಹ, ಮನೆ. v. *House, residence. (at home)* ಮನೆಯಲ್ಲಿ; *(driven from house and home)* ವಲಸೆಯ; *(at home and abroad)* ಒಳಗೆ ಹೊರಗೆ; *(to come home)* ಮನೆಗೆಬರು; *(home-bred)* ಕಟ್ಟಿಮೆಯಿಸಿದ, ಮನೆಯಲ್ಲಿಸಾಕಿದ; *(a home argument)* ಬಾಯಿಕಟ್ಟುಮಾತು.

Homeliness, s. n. ಅಕೋಮಲ, ಅಸುಂದರ, ವಿಕಾರ. v. *Rudeness, inelegance, rusticity.*

Homely, a. ಅಕೋಮಲದ, ಅಸುಂದರದ, ಸಾಮಾನ್ಯದ, ವಿಕಾರದ; *(a homely word)* ಶೋಕಾಕೈರಾಮದಮಾತು.

Homelily, ad. ಅಕೋಮಲವಾಗಿ, ಅಸುಂದರವಾಗಿ; *(homely in countenance)* ಮಂಗಮೋರೆ, ಸೊಟ್ಟಮೋರೆ, ವಿಕಾರದಮುಖ.

Homemade, Homespun, a. ಮನೆಯಲ್ಲಿಮಾಡಿದ.

Homestal, Homestead, s. n. ಮನೇಭೂಮಿ.

Homeward, Homewards, ad. ಮನೆಕಡೆಯಾಗಿ.

Homicide, s. n. ಕೊಲೆಪಾತಕ, ಹಿಂಸಕ. v. *Murderer.*

Homicide, s. n. ಕೊಲೆ, ಜೀವಹಿಂಸೆ, ಆತ್ಮಘಾತ. v. *Murder.*

Homicidal, a. ಹಿಂಸೆಯ. v. *Bloody.*

Homogeneal, Homogeneous, a. *(of the same kind)* ಸವರ್ಣದ, ಸಜಾತೀಯದ, ತಜ್ಜಾತೀಯದ, ಸಂಪ್ರಯೋಗದ, ಸಂಬಂಧದ; *(to make homogeneous)* ಸರಿಸಮಾನಾಮಾಡ, ಸವರ್ಣಮಾಡ, ಸಮನಾಗಿಮಾಡ.

Homogeneousness, s. n. ಸಜಾತಿ, ತಜ್ಜಾತಿ, ಸಂಬಂಧ, ಸಂಕಾಶವು, ಸವರ್ಣವು.

Homologous, a. ಅನುಸಂಗ್ಯಾದ, ಸಂಕಾಶದ, ಸನ್ನಿಕ್ಷದ. v. *Congruous, conform.*

Hone, s. n. ಮಸೆಗಲ್ಲು, ಸಾಣೇಕಲ್ಲು.

Honest, a. ಸತ್ಯದ, ಸಜ್ಜನ, ಪಾತಿಗೆತಪ್ಪದ, ಧರ್ಮದ. v. *Upright, sincere, chaste.*

Honestly, ad. ಸತ್ಯವಾಗಿ, ನಿಜವಾಗಿ, ದಿಟವಾಗಿ, ಧರ್ಮವಾಗಿ, ಘನವಾಗಿ, ಗಂಭೀರವಾಗಿ.

Honesty, s. n. ಸತ್ಯವು, ರಿತಿವು, ತಥ್ಯ, ದಿಟ, ನಿಜ, ಯಥಾರ್ಥ, ಧರ್ಮವು. v. *Virtue, justice, truth, purity.*

Honied, a. *(covered with honey)* ಜೇನುಹಾಕಿದ, ಜೇನಿಟ್ಟ.

Honey, s. n. ಜೇನು, ಮಧು; *(the honey of a flower)* ಮಕರಂದ, ಪುಷ್ಪರಸ, ಮಧು, ಬಂಡು; *(purified honey)* ಶೋಧಿಸಿದಜೇನು; *(honey or sugar from dates)* ರಸಾಯನ, ಪಾಕಶೀಕ್ಷ್ಯ; *(honey in the comb or bee-hive)* ತೊಟ್ಟೇಜೇನು; *(a honey comb)* ಜೇನುತೊಟ್ಟೆ; *(the flowing of honey from the comb)* ಜೇನಿಳಿಯುವದು; *(mixed with honey)* ಜೇನುಕಲೆತ, ಮಧುಮಿಶ್ರವಾದ; *(preserved in honey)* ಜೇನಿನಲ್ಲಿಟ್ಟ, ಜೇನಿನಲ್ಲಿಹಾಕಿದ, ಜೇನೂರಿದ; *(cells in a honey comb)* ಜೇನುತಟ್ಟೇಗೂಡು.

Honorary, a. ಘನತೆಯ.

Honor, s. n. ಘನ, ಮಾನ, ಸತ್ಕಾರವು. v. *Dignity, glory.* *(magnanimity)* ಮಹಾನುಭಾವ, ಮಹಾಶಯ, ಮಹಾಮಾನಸ; *(chastity)* ಕಚ್ಚೆಶುದ್ಧಿ, ಇಂದ್ರಿಯಾಧೀನ, ಮಿತವಿಷಯ; *(reverence)* ವಂದನೆ, ಸಂನ್ಮಾನ, ಮರಿಯಾದೆ; *(reputation, good name)* ಕೀರ್ತಿ, ಗೌರವ; *(to defend one's honor)* ಮಾನಾನಿಲ್ಲಿಸಿಕೊಳ್ಳ, ಆಬುರುದಕ್ಕಿಸಿಕೊಳ್ಳ; *(held in honor)* ಸಂನ್ಮಾನಿಸಿದ, ಘನತೆಯುಳ್ಳ; *(void of honor)* ಮಾನಭಂಗದ, ಘನಹೀನದ; *(without honor or reputation)* ಅಸಂನ್ಮಾನಿಕೆಯ, ಅಪಕೀರ್ತಿಯ, ಅಪಹಾರಿನ.

To Honor, v. a. ಘನತೇಮಾಡ, ಸಂನ್ಮಾನಿಸ, ಸತ್ಕರಿಸ. v. *To dignify, reverence.*

Honorable, a. *(illustrious)* ಕೀರ್ತಿಯ, ಪ್ರಾಬಲ್ಯದ; *(generous)* ತ್ಯಾಗದ, ಉದಾರದ; *(requiring respect)* ಹಿರಿಯ, ದೊಡ್ಡ, ಘನವುಳ್ಳ, ಗೌರವವುಳ್ಳ, ಭಾರಿಯಾದ; *(honest, equitable)* ಸತ್ಯದ, ಸಜ್ಜನ; *(honorable parentage)* ಮಹಾಕುಲ, ಕೌಲಕೀಯ, ಕೌಲೀನ.

Honorableness, s. n. *(eminence)* ಘನತೆ, ಗೌರವ, ಭಾರಿತನ; *(magnificence)* ಪ್ರಖ್ಯಾತಿ, ಅಟ್ಟಹಾಸ, ಗಾಂಭೀರ್ಯ; *(generosity)* ತ್ಯಾಗ, ಔದಾರ್ಯ,

ಶೂರುತ್ವ. v. *Honor, magnificence, generosity, eminence.*

Honorably, ad. ಸನ್ಮಾನಿಕೆಯಾಗಿ, ಘನತೆಯಾಗಿ. v. *Magnanimously, reputably.*

Honorary, a. ಘನತೆಯ; (*an honorary distinction, as a star, garter, ribbon, medal, &c.*) ಬಿರುದಿನಬಳೆ, ಕಚ್ಚೆಳೆ.

Honored, part. ಘನತೆಯಾದ, ಘನತೆಹೊಂದಿದ.

Honorer, s. m. ಘನತೆಮಾಡುವವ.

Hood, s. n. ಮುಸುಕು, ತಲೆಮುಸುಕು. v. *Veil, cap.* (*hood of a serpent*) ಹೆಡೆ, ಸ್ಫಟೆ, ಫಣೆ; (*hood of a bandy*) ಟೋಪಾರಿಗೆ, ತೊಂಡ್ಯಫೆಕ್ರಿ.

To Hood or hoodwink the eyes, v. a. ಕಂಣುಕಟ್ಟು, ಕಂಣುಕಟ್ಟುಮಾಡು.

Hoof, s. n. ಗೊರಸೆ; (*a cloven hoof*) ದ್ವಿಖುರದ; (*the fore part of a bullock's hoof*) ಗೊರಸೆಯಮುಂಭಾಗ; (*an instrument for taking out stones and dirt from the hoofs*) ಮುಳ್ಳುಘಟ್ಟಿ; (*an insect that injures hoofs*) ಗೊರಶಿಕುಳ; (*a soft weak hoof*) ಮಿದುವುಗೊರಶೆ; (*the interior part of the hoof*) ಕುದಿ, ನಾಳ್ಗಿರಿ; (*a broad flat hoof*) ಹಾಸುಗೊರಶೆ; (*an instrument for cutting the hoofs of cattle*) ನಾಲುಕತ್ತಿ, ಗೊರಶೆಕತ್ತಿ; (*hoof bound*) ನಾಳಾಕಟ್ಟಿದ; (*a hoof binder*) ನಾಲುಬಂದಿ; (*overgrown hoofs*) ಬಹಳಬೆಳೆದಗೊರಶೆ; (*to pare the hoofs*) ಗೊರಶೆಕೊಯ್ಯು.

Hoofed, a. ಗೊರಸೆಯ.

Hook, s. n. ಕೊಂಡಿ; (*an iron hook*) ಕಬ್ಬಿಣದ ಕೊಂಡಿ; (*fish hook*) ಗಾಲ, ಬದಿಶ, ಮತ್ಸ್ಯವೇಧನ; (*a hook in which meat is hung*) ಗರಡಿ; (*a wooden hook*) ಗೊಕ್ಕೆ, ಕೊಕ್ಕೆ, ಬಂಕ, ಮರಾಗೆ; (*a tenter hook*) ಮುಳ್ಳುಕಂಬಿ; (*a hook to pull things down by*) ಜೋಕ್ಟೆ; (*a reaping hook*) ಕುಡುಗೋಲು; (*a vine dresser's hook*) ಮಚ್ಚುಗತ್ತಿ; (*a pruning hook*) ಕೊಕ್ಕಿ, ಕೊರಡು; (*a weeding hook*) ಕುರಜಿಗೆ, ಕಳೆಕೊಟ್ಟು; (*a machine with hooks for catching hold of any thing under water*) ಪಾತಾಳಗರಡಿ; (*by hook or crook*) ಹ್ಯಾಗಾದರು, ಯಾವಬಗೆಯಿಂದಾದರು. v. *Any how.*

To Hook, v. a. (*catch or draw with a hook*) ಕೊಂಡಿಯಿಂದೆಳೆಯು; (*to hook or join together*) ಕೊಂಡ್ಯತಗಲಿಸು.

Hooked, part. (*catched with a hook*) ಕೊಂಡ್ಯತಗಲಿಸಿದ; (*suspended by a hook*) ಕೊಕ್ಕೆದಂಡೆಹಾಕಿದ; (*drawn with a hook*) ಕೊಂಡಿಹಾಕಿಯೆಳೆದ; (*fastened with a hook*) ಕೊಂಡಿಹಾಕಿದ; (*curvated*) ಡೊಂಕಾದ; (*joined*) ಕಚ್ಚಿದ, ಕತ್ತಿತ; (*the hooked talons of eagles*) ಡೊಂಕುಗುರು; (*the hooked claws of wild beasts*) ಕೊಂಕುನಖ; (*a hooked or roman nose*) ಗಿಳಿಮೂಗು; (*the hooked beak of a hawk or other birds of prey*) ಸೊಂಡ್ಲು.

Hoop, s. n. (*of a barrel, &c*) ಕಟ್ಟು, ಅಗಾಸು. v. *Ring, circle.*

To Hoop, v. a. (*a barrel*) ಕಟ್ಟುಹಾಕು, ಅಗಾಸುಹಾಕು.

To Hoop or Hoot, v. n. ಗಲ್ಲುಮಾಡು, ಕೂಗು, ಸಂದಣೀಮಾಡು. v. *To shout.* (*to hoot, to drive with noise and shouts*) ಹುಯಿಲೆಬ್ಬಿಸು, ಗೋಳಿಡು, ಹುಯಿಲಿಡು.

Hooper, s. n. ಕಟ್ಟುಮಾಡುವವ, ಅಣಿಸುಹಾಕುವವ. v. *Cooper.*

Hooping-cough, s. n. ನಾಯಿಕೆಮ್ಮು.

To Hoot, v. n. ಗಲ್ಲುಮಾಡು. v. *To hoop.* (*to hoot, as an owl*) ಗೂಗೂಯೆನು.

Hoot, s. n. ಗಲ್ಲು, ಗದ್ದಲು, ಸದ್ದು. v. *Clamour.*

Hop, s. n. ಹಾರಿಕೆ. v. *Skip, jump.*

To Hop, v. n. (*skip*) ಎದ್ದುಹಾರು, ಹಾರು; (*to hop on one foot*) ಕುಂಟು.

Hope, s. n. ಕೋರಿಕೆ, ಆಶೆ, ಕಾದುಕೊಳ್ಳುವಿಕೆ, ಮುಂಗೋರಿಕೆ, ನಂಬಿಕೆ. v. *Expectation, desire, confidence.* (*to lose hope*) ಆಶೆಕೆಡು, ಆಶೆಬಿಡು; (*the forlorn hope*) ಪ್ರಾಣಾಂತ್ಯಯೋಗ, ಅಂತ್ಯಬೆಕಿನ್ನ; (*to give hope*) ಆಶೆಯಿಡು; (*to cut off or blast one's hopes*) ನಿರಾಶೆಮಾಡಿಬಿಡು, ಇಚ್ಛೆಕೆಡಿಸು.

To Hope, v. n. ಆಶೆಪಡು, ಕೋರು, ಕಾದುಕೊಂಡಿರು, ನಂಬು, ನಿರೀಕ್ಷಿಸು. v. *To expect.*

Hopeful, a. ಆಶಾಸ್ಪದ, ಶುಭಸೂಚನೆಯ, ಆಶಾಪತ್ತಿಯ, ನಂಬಿಕೆಯುಳ್ಳ.

Hopefully, ad. ಆಶಾಸ್ಪದವಾಗಿ, ಶುಭಸೂಚನೆಯಾಗಿ.

Hopefulness, s. n. ಆಶಾಸ್ಪದ, ಶುಭಸೂಚನೆ ಆಶಾಪತ್ತಿ, ಇಷ್ಟಾಶ್ರಯ.

Hopeless, a. (*having no hope*) ನಿರಾಶೆಯ; (*promising no good*) ವ್ಯರ್ಥದ, ಕೆಲಸಕ್ಕೆಬಾರದ; (*to be hopeless*) ನಿರಾಶೆಯಾಗು.

Hoper, s. n. ಆಶೆಗಾರ, ಆಶೆಮಾಡುವವ.

Hoping, v. *Hopeful.*

Hopingly, v. *Hopefully.*

Hopper, s. n. (*of a mill*) ಬೀಸುವಕಲ್ಲಿನಕಂಗಳು; (*one who hops*) ಕುಂಟುವವ.

Hoppers, s. n. (*game of*) ಕುಂಟಾಟ; (*a kind of crum-pit*) ದೋಣಿ.

Horal, Horary, a. ತಾಸಿನ.

Horde, s. n. ಪಿಂಡಿ, ಗಣ, ಗುಂಪು, ಗೋತ್ರ, ಜಾತಿ. v. *Tribe.*

Horizon, s. n. ಆಕಾಶಗರ್ಭ, ಮೋಡದಂಚು; (*to set below the horizon*) ಅಸ್ತಮಿಸು, ಮರೆಗಿರಿಯೋಗು; (*a cloud obscuring the horizon*) ಮಬ್ಬುಮುಚ್ಚಿಕೆ.

Horizontal, a. ನಿಲುವಿನ.

Horizontally, ad. ನಿಲುವಿಕೆಯಾಗಿ, ನೆಟ್ಟಗೆ.

Horn, s. n. ಕೊಂಬು, ಶೃಂಗ, ಶಿಕೆ, ವದನ, ಅರಿಗೆ, ಸಿಂಗವು; (*the vein of a horn*) ಕೊಂಬುಧಾರಿ; (*two horned*) ಇರ್ಕೊಂಬಿನ; (*to butt with the horns*) ಇರಿಯು; (*butting one another with their horns*) ಡಿಕ್ಕಾಡೋಣ; (*a cup made in the shape of a horn*) ಖಡ್ಗಪಾತ್ರೆ; (*the horn of the moon*) ಬಿದಿಗೆಚಂದ್ರ; (*the horns of a bow*) ಬಿಲ್ಲಿನತುದಿ, ಕೊಪ್ಪು, ಪಿಲ್ಲು; (*a horn, musical instrument*) ಕೊಂಬುಕಾಳೆ; (*to sound a horn*) ಕೊಂಬುಊದಿಯು; (*an ink horn*) ಲಳಿಗೆ, ಗೊಟ್ಟೆ; (*to pull in the horns,* (v. n.) ಕುಂಗು; (v. a.)

ಗರ್ವ-ಭಂಗಮಾದ; (*horn for powder*) ರಂಜಕದ ಕೊಂಬು; (*made of horn*) ಕೊಂಬಿನ.

Hornbook, s. n. ಓನಾಮದ ಹಲಿಗೆ.

Horned, a. ಕೊಂಬಿನ, ಶೃಂಗದ; (*horned cattle*) ಕೊಂಬಿನ ದನ.

Horny, a. (*made of horn*) ಕೊಂಬಿನ.

Hornet, s. n. ಹುರುಟಿಗನ ಹುಳ.

Hornless, a. ಮೋಳ, ಕೊಂಬಿಲ್ಲದ.

Horologue, s. n. ಘಳಿಗೆಬಟ್ಲು, ಘಡಿಯಾರದಬಟ್ಲು, ಘಡಿಯಾರವು.

Horoscope, s. n. (*configuration of planets, at the hour of birth*) ಜಾತಕ, ಜನ್ಮಪತ್ರ, ಲಗ್ನಕುಂಡಲಿ.

Horrible, a. ಭಯಂಕರದ, ಭೀಷ್ಮದ, ದಾರುಣದ. v. *Dreadful, terrible, frightful.*

Horribleness, s. n. ಭಯಂಕರ, ಭೀಷ್ಮ, ಕಂಪಾಯಮಾನ. v. *Dreadfulness.*

Horribly, ad. ಭಯಂಕರವಾಗಿ, ಭೀಕರವಾಗಿ, ಕಂಪಾಯಮಾನವಾಗಿ, ಭೀಷ್ಮವಾಗಿ.

Horrid, a. ಭಯಂಕರದ, ಭೀಷ್ಮದ. v. *Hideous, enormous.*

Horridness, s. n. ಭೀಕರ, ಭಯಂಕರ. v. *Hideousness.* (*enormity*) ಅಘೋರಾಕಾರ.

Horrific, a. ಭಯಂಕರದ, ಕಂಪಾಯಮಾನದ. v. *Horrible.*

Horripilation, s. n. ಕೂಪಾಂಗ, ಉದ್ಧೂಷಣ, ಉಲ್ಲಕಸನ, ಕಾಲವಿಯರ್ಣ, ರೋಮವಿಕ್ರಿಯ, ರೋಮಹರ್ಷಣವು, ರೋಮಾಂಚವು, ರೋಮೋದ್ಗಮವು.

Horrour, s. n. ಥರಥರಿಕೆ, ಭೀಷಣ, ಭೀಷ್ಮ, ಭೀಮವು, ಭಯಾನಕ, ಭಯಂಕರ, ಪ್ರತಿಭಯ; (*the horrour or shuddering of an ague*) ಗಡಗಡನೆ ನಡುಗುವಿಕೆ; (*to conceive horrour*) ಕ್ಯಾಕರಿಸು, ಅಸಂಯಿಸು, ವಾಕರಿಸು. v. *To abhor.* (*to be seized with horrour*) ಭಯಂಕರಪಡು; (*horrour struck*) ಭಯಂಕರಪಟ್ಟ; (*held in horrour*) ವಾಕರಿಸಿಪಟ್ಟ, ಅಸಹ್ಯಪಟ್ಟ.

Horse, s. n. ಕುದುರೆ, ಅಶ್ವ, ತುರಂಗ, ವಾಜಿ, ಘೋಟಕವು, ತುರಂಗ, ಗಂಧರ್ವ, ಹಯ, ಸೈಂಧವ, ಸಪ್ತಿ; (*a blood horse, a horse of noble pedigree*) ಉತ್ತಮಾಶ್ವ, ತೇಜೀಕುದುರೆ, ಜಾತಿ ಕುದುರೆ, ಆಜಾನೇಯವು; (*a roan or sorrel horse*) ಕೆಂಗುದುರೆ, ಕೆಂಪುಕುದುರೆ; (*a piebald horse*) ಬಟ್ಟೆಕುದುರೆ; (*a gray or white horse*) ಬಿಳೇಕುದುರೆ; (*a bay horse*) ಕೆಂಚ ಕುದುರೆ, ಜರದಾಕುದುರೆ; (*a horse trained for the manege*) ವಿನೀತಾಶ್ವ, ಸಾಧುವಾಜಿಯು; (*an arabian horse*) ಅರಬ್ಬೀಟಾಕಣ; (*a cutch horse*) ಕೊಚ್ಛೀಕುದುರೆ; (*a pegue poney*) ಪೈಗೂಟಾಂಕಣ; (*a barbary horse*) ಬಾಬರೀಕುದುರೆ; (*a draught or baggage horse*) ಕೋಲಾರಕುದುರೆ, ಪೃಷ್ಠ್ಯವು-ಸ್ಥೌರಿಯು; (*a fleet horse*) ಮಟ್ಟಸವಾದ ಕುದುರೆ, ಜವನಾಶ್ವವು, ಜವಾಧಿಕಾಶ್ವವು; (*a colt*) ಬಾಲಾಶ್ವ, ಕಿಶೋರವು; (*a mare*) ಹೆಣ್ಣು ಕುದುರೆ, ಬಡಬೆಯು, ಅಶ್ವೆಯು; (*a stud*) ಬಾಡಬವು; (*a day's journey for a horse*) ಆಶ್ವೀನವು, ಕುದುರೇಮಜಲು; (*an unbroke, restive or unmanageable horse*)

ಹರಾಮಕುದುರೆ; (*a well broke, gentle going horse*) ಸಾಧುಕುದುರೆ; (*a saddle horse*) ಸ್ವಾರೀಕುದುರೆ; (*a stumbling horse*) ಠಾಕಟಿಕುದುರೆ; (*a horse's paces, as walk*) ಆಸ್ಕಂದಿತವು; (*trot*) ಧಾರಿತಕವು; (*moving in the longe*) ರೇಚ; (*gallop*) ವಲ್ಗಿತವು; (*vaulting*) ಪ್ಲುತವು; (*his paces generally*) ಧಾರಾಗತಿಯು; (*a shy horse*) ಬೆದರುಕುದುರೆ; (*a chariot horse*) ಬಂಡೀಕುದುರೆ, ರಥ್ಯ; (*a lame horse*) ಕುಂಟುಕುದುರೆ; (*a stone horse*) ಬೀಜದಕುದುರೆ, ಜಘವುಕುದುರೆ, ನರ್ಕುದುರೆ. v. *Stallion.* (*a post horse*) ಬಾಡಿಗೆಕುದುರೆ; (*post horses, also relays of horses*) ಅಂಚೆಕುದುರೆ; (*the trappings or clothes of a horse*) ಕುದುರೇಸಾಮಾನು, ಕುದುರೇಮುಸ್ತೈದು, ಜೀನುಪೋಷಾಕು; (*a horse collar*) ಕಂಠದುರ್ಗ; (*a horse curvetting when touched by the spur*) ಕುದುರೇಕುಣಿತ; (*the neighing of a horse*) ಹೇಷಾರವ, ಹೇಷಾ; (*a herd of horses*) ಕುದುರೇಹಿಂಡು; (*to mount or ride on horseback*) ಕುದುರೆಯೇರು, ಕುದುರೇಹತ್ತು; (*to alight from a horse*) ಕುದುರೆಯಿಳಿಯು; (*to put a horse to full speed*) ಓಟಾಬಿಡು; (*to drive a horse*) ಕುದುರೇಹೊಡೆಯು; (*to break, or exercise a horse*) ಕುದುರೇಸಾಧಕಮಾಡು; (*to dress or curry a horse*) ಮಾಲೀಸುಮಾಡು, ಕರಾರುಮಾಡು; (*to clip the mane of a horse*) ಕುದುರೇಜೂಗುಕತ್ತರಿಸು; (*to comb the mane of a horse*) ಜೂಗುಬಾಚು; (*the mane of a horse*) ಜೂಗು; (*the master of the horse*) ಅಶ್ವಶಾಲಿಕ, ಅಶ್ವಪತಿ; (*to champ the bit, as a horse*) ಗಾಡಕಚ್ಚು, ಲಗಾಂಕಡಿಯು; (*to kick, as a horse*) ಒದೆಯು; (*horse, cavalry*) ಕುದುರೇಸ್ವಾರ, ಕುದುರೆರಾವುತ; (*horse and foot*) ಕುದುರೇಕಾಲಾಳು; (*to shoe a horse*) ನಾಲುಕಟ್ಟು, ಲಾಳಾಕಟ್ಟು; (*the fetlock of a horse*) ಘುಂಘುರಾಲುಕೂದಲು; (*the jugular vein of a horse, where they bleed him*) ಸಸ್ತ್ರದನರ; (*a horse's hoof*) ಶಫವು, ಖುರವು; (*a horse's tail*) ಲಾಂಗೂಲವು, ಬಾಲವು; (*a horse's nose*) ಘೋಣೆಯು, ಪ್ರೋಥ; (*a horse rolling himself*) ಪ್ರಾಸ್ಯತ್ರವು, ಉದಿಕವು, ಹೊರಳು; (*a horselaugh*) ಗಹಗಹಿಕೆ.

To Horse, v. a. (*to mount a horse*) ಕುದುರೇಹತ್ತು, ಕುದುರೆಯೇರು; (*to carry one upon the back*) ಬೆನ್ನುಮೇಲೆಹೊತ್ತುಕೊಂಡುಹೋಗು; (*to ride*) ಕುದುರೆಸ್ವಾರೀಮಾಡು; (*to cover a mare*) ಕುದುರೆತುಂಬಿಸು.

Horseback, s. n. (*mounted on horseback*) ಕುದುರೇಹತ್ತಿದ, ಕುದುರೆಯೇರಿದ; (*to mount or ride on horseback*) ಕುದುರೇಹತ್ತು, ಕುದುರೆಸ್ವಾರಿಹೋಗು.

Horseboat, s. n. ಕುದುರೆಯನಾವೆ.

Horseboy, s. n. ಕುದುರೇಕಾಸ್ತಾರ, ಅಶ್ವಪಾಲಕ.

Horsebreaker, s. n. ಚಬುಕುಸವಾರ, ಕುದುರೆರಾವುತ, ಕುದುರೆಶಿಕ್ಷಕ; (*the art of breaking in horses*) ಕುದುರೆರಿದುಗಿಸೂಗಾ, ಕುದುರೇಶಿಕ್ಷೆ; (*a horse colt*) ಕುದುರೇಮರಿ.

Horsecourser, s. n. ಕುದುರೇಪಂತ್ಯಗಾರ, ಕುದುರೇಜೂಜುಗಾರ.

Horsedealer, s. n. ಕುದುರೆಕಾರವಾನ, ಕುದುರೇವರ್ತಕ, ಕುದುರೇವ್ಯಾಪಾರಿ.

Horsedoctor, s. n. ಅಶ್ವವೈದ್ಯ.

Horse emmet, s. n. *(a large winged ant)* ಕಟ್ಟಿರವು.

Horseflesh, s. n. ಕುದುರೇಮಾಂಸ.

Horsefly, s. n. ಕೊಣಾಚಿ.

Horse-guards, s. n. ಸವಾರುಪಹರೆ, ಕುದುರೇಪಹರೆ.

Horsehair, s. n. ಕುದುರೇಕೂದಲು.

Horselaugh, s. n. ಗಹಗಹಿಕೆ.

Horseleech, s. n. ದೊಡ್ಡಜಿಗಳೆ, ದೊಡ್ಡಟ್ಟೆ.

Horseman, s. n. ಅಶ್ವಶಿಕ್ಷಕ, ಚಬುಕಸವಾರ, ಅಶ್ವಾರೋಹ, ಸಾರಥಿ.

Horsemanship, s. n. ಅಶ್ವಶಿಕ್ಷೆ, ಅಶ್ವವಿದ್ಯೆ.

Horsemeat, s. n. ದಾಣಾ, ಹುಲ್ಲು, ಹುರುಳಿ. v. *Hay, grass, grain.*

Horserace, s. n. ಕುದುರೇಪಂತ್ಯ.

Horseradish, s. n. ನುಗ್ಗಿಬೇರು.

Horseshoe, s. n. ನಾಲು, ಲಾಳ; *(sparks of fire struck by a horse-shoe)* ಕಿಡಿ.

Horsestealer, s. n. ಕುದುರೇಕಳ್ಳ.

Horseway, s. n. ಘಾಟಿ, ರಸ್ತೆ, ಘಾಟೂಮಾರ್ಗ. v. *Highway.*

Horticulture, s. n. ತೋಂಮತಿ, ವ್ಯವಸಾಯ.

Hose, s. n. ಮೋಜಾ, ಪಾಯಿಜೆರಾಡು, ಕಾಲುದಸ್ತು.

Hospitable, a. ಉಪಚರಣೆಯ, ಆದರಣೆಯ; *(a hospitable man)* ಆದರಿಸುವವ, ಉಪಚರಣೆಯವ, ಪರಪಕ್ಷಕ.

Hospitably, ad. ಉಪಚರಣೆಯಾಗಿ, ಆದರಣೆಯಾಗಿ; We were entertained very *hospitably* ನಾವುಬಹಳವಾಗಿಯಾದರಿಸಲ್ಪಟ್ಟೆವು.

Hospital, s. n. ರೋಗಿಗಳಮನೆ.

Hospitality, s. n. ಆದರಣೆ, ಉಪಚರಣೆ, ಪರಪಕ್ಷತ್ವ.

Host, s. n. *(landlord)* ಯಜಮಾನ, ಮನೆಯೊಡೆಯ; *(army)* ಸೈನ್ಯ, ದಳ.

Hostage, s. n. ಗಿರೋವಿರಾವವ, ಓಲು; *(to give a hostage)* ಓಲಿಡ, ಗಿರೋವಿಡ.

Hostess, s. n. ಅಡುಗೋಲಜ್ಜಿ, ಅಂನವಿಡುವವಳು.

Hostile, a. ದ್ವೇಷದ, ವಿರೋಧದ. v. *Adverse.* *(a hostile excursion)* ದಾಡು; *(hostile troops)* ಪರಸೈನ್ಯ, ಶತ್ರುಸೈನ್ಯ; *(in a hostile manner)* ವಿರೋಧವಾಗಿ.

Hostility, s. n. ವಿಪಕ್ಷ, ದ್ವೇಷಿಕೆ, ವಿರೋಧ; *(to commit hostilities)* ಕಾರ್ಯಮಾಡ.

Hostler, s. n. ಕಾಸ್ತಾರ, ಕುದುರೆಯವ. v. *Groom.*

Hot, a. ಬಿಸಿಯ, ಬಿಸಲಿನ, ಕಾಂಕೆಯ, ಶೆಕೆಯ, ಉಷ್ಣದ. v. *Warm.* *(hot water)* ಬಿಸಿನೀರು; *(boiling hot)* ಕೊದಿಯುವ, ಮರಳುವ; *(water somewhat hot)* ಬೆಚ್ಚಾನನೀರು; *(a hot bath)* ಬಿಸಿನೀರಿನಸ್ನಾನ; *(hot, vehement, furious)* ಉಗ್ರದ, ಕೋಪದ. v. *Fierce, violent, vehement, eager, keen, perceptible.* *(lascivious)* ಕಾಮೋದ್ರೇಕದ, ವಿರಹತಾಪದ; *(hot weather)* ಬಿಸಲಿನಕಾಲ, ಶೆಕೆಗಾಲ, ಗ್ರೀಷ್ಮ, ಊಷ್ಮಕ, ನಿದಾಘ, ಉಷ್ಣ, ಅಪಗ

ಮ, ಉಷ್ಣ, ತಪವು; (*a hot day*) ಬಿಸಲಿನ ದಿನ, ಶೆಕೆದಿನ; (*a very hot place*) ಕಾಂಕೆಸ್ಥಳ, ಉಷ್ಣದ ಸ್ಥಳ; (*hot words*) ಕೋಪಮಾತುಗಳು, ಸಿಟ್ಟು ಮಾತುಗಳು; (*in hot blood*) ಕೋಪೋದ್ರೇಕದಿಂದ; (*hot winds*) ಬಿಸಿಗಾಳಿ, ಬೆಂಕಿಗಾಳಿ; (*hot brained, hot headed*) ಕೋಪವುಳ್ಳ, ಸಿಟ್ಟಾದ. v. *Rash, violent, passionate.* (*to drink hot*) ಬಿಸಿಯಾಗಿ ಕುಡಿಯು; (*to make hot*) ಕಾಸು, ಬಿಸಿಮಾಡು; (*to be hot*) ಬಿಸಿಯಾಗು, ಶೆಕೆಯಾಗು, ಉಷ್ಣವಾಗು.

Hotly, ad. ಬಿಸಿಯಾಗಿ, ಉಷ್ಣವಾಗಿ; (*violently*) ಉಗ್ರವಾಗಿ, ಸಿಟ್ಟಾಗಿ, ಬೆಂಕಿಯಾಗಿ; (*lewdly*) ಕಾಮೋದ್ರೇಕವಾಗಿ, ವಿರಹತಾಪವಾಗಿ.

Hotness, s. n. ಉಷ್ಣ, ಶೆಕೆ, ಕಾಂಕೆ, ಕಾವು, ತಾಪ. v. *Heat, fury.*

Hotch-potch, s. n. ಕಲಬೆರಿಕೆ. v. *Hodge-podge, farrago.*

Hovel, s. n. ಕೊಟ್ಟಿಗೆ, ಗುಡಿಸಿ. v. *Cottage, hut, shed.*

To Hover, v.n. (*over head*) ಪಟ್ಟಿವಿಡು; (*to stand in suspense or expectation*) ಕಾದುಕೊಂಡಿರು, ಉಮ್ಮೇದುಮಾಡು.

Hough, s. n. (*the lower part of the thigh*) ಅಡಿತೊಡೆ, ಉಡಿ; (*an hoe*) ಸಲಿಕೆ, ಖನಿತ್ರ, ಅವದಾರಣ, ಎತಿಗುದ್ದಲಿ, ಕೊಟ್ಟು.

To Hough, v. a. (*to hamstring*) ಜಬ್ಬುನರ ಕೊಯ್ಯು; (*to cut up with a hough*) ಕಳೆಕೊಟ್ಟಿನಿಂದ ಕಳೆಕೆತೆಗೆಯು.

Houlet. v. *Owl.*

Hoult. v. *Wood.*

Hound, s. n. ಜೋಲ್ಯಾಸಂಗಿ, ಬೇಟೆನಾಯಿ. v. *Dog.*

Hour, s. n. ತಾಸು. This exactly corresponds with the English hour, and the Canarese sometimes mention the day as made up of 24 ತಾಸುಗಳು, but among the Hindoos in general ದಿವಸವು a day of 24 English hours, is divided into sixty ಘಳಿಗೆಗಳು, each of which is equivalent to 24 minutes; and $7\frac{1}{2}$ ಘಳಿಗೆ, or three English hours, make one ಜಾಮವು or ಯಾಮವು *a watch,* eight of which make up the day. At what *hour* shall I come? ನಾನು ಯಾವವೇಳೆಯಲ್ಲಿ ಬರಲಿ, or ನಾನೆಷ್ಟು ಘಂಟಿಗೆ ಬರಲಿ.

Hour-glass, s. n. ಘಳಿಗೆಬಟ್ಲು.

Hourly, ad. ತಾಸುತಾಸಿಗೆ, ತಾಸುತಾಸಾಗಿ.

House, s. n. ಮನೆ, ಗೃಹ, ಮಂದಿರ, ಗೇಹ, ಉದವಸಿತ, ವೇಶ್ಮ, ಸದ್ಮ, ನಿಕೇತನ, ನಿಶಾಂತ್ರ, ವಸ್ತ್ಯ, ಸದನ, ಭವನವು, ಆಗಾರ, ಧಿಷ್ಣ್ಯ, ಓಕ, ನಿವಸನ, ಸ್ಥಾನ, ಅವಸಥ, ವಾಸ್ತು. v. *Habitation, home, building, edifice, structure.* (*descendants from one ancestor*) ವಂಶ ತಲಾಂತರ; (*a royal house*) ಅರಮನೆ, ರಾಜಸ್ಥಾನ, ದಿವಾಣ; (*a house built of stone*) ಕಲ್ಲುಮನೆ; (*a house built of mud*) ಮಣ್ಣಿಮನೆ; (*a house with a thatched roof*) ಗುಡಿಸಲು, ಹುಲ್ಲುಮನೆ; (*the space within the walls of a house*) ಒತ್ರಲು, ತೊಟ್ಟಿ; (*the space left in the roof to admit light into a house*) ಅಟ್ಟ; (*the master of the*

house) ಮನೆಯಜಮಾನ; *(a court before a house)* ಅಂಗಳ, ಮುಖಸಾಲೆ; *(the top or roof of a house)* ಮಾಳಿಗೆ; *(the entrance of a house)* ಮುಖನಿಸ್ಸರಣ; *(pleasant houses)* ವಸತಿಯಮನೆಗಳು; *(a toll house)* ಕಟ್ಟೆಮನೆ, ಸುಂಕದಮನೆ; *(a store house)* ಉಗ್ರಾಣದಮನೆ; *(a counting house)* ಕಚೇರಿ, ರಾಯಸದಮನೆ; *(a house of office)* ಪಾಯಖಾನೆ, ಬಹಿರ್ಭೂಮಿ, ಬಾಚರ್ಣಂಬಿ. v. *Privy. (a workhouse, workshop)* ಕಾರ್ಖಾನೆ; *(a house of correction)* ಶಿಕ್ಷೆಮನೆ, ಬಂದೀಖಾನೆ. v. *Prison. (the side of a house)* ನಿಟ್ಟು, ಒತ್ತಟ್ಟು; *(the house of the sun, in astronomy)* ಸೂರ್ಯಚತ್ರ, ಸೂರ್ಯಮಂತ್ರ; *(the house or station of a planet)* ರಾಶಿ, ಬಾರ. v. *Constellation. (the house of God)* ದೇವಾಲಯ; *(a pent house)* ಕೊಟ್ಟಿಗೆಮನೆ, ಚಪ್ಪರ, ಕೊಮಾರಕೊಟ್ಟಿಗೆ; *(a ruinous or empty house)* ಹಾಳುಮನೆ, ದೇಗಲ; *(to keep a bad house)* ಅಸಾಂಪ್ರದಾಯಕವಾಗಿರ; *(to keep a good house)* ಸಾಂಪ್ರದಾಯಕವಾಗಿರ; *(from house to house)* ಮನೆಮನೆಗೆ; *(to keep open house)* ಛತ್ರವಿಡ, ಸತ್ರಾಹಾಕ; *(a house made by children)* ಗೊಂಬೇಮನೆ.

To House, v. a. *(to shelter)* ಆಸ್ಪದಾಕೊಡ; *(to take shelter)* ಆಶ್ರಯಿಸ. v. *To harbour, sojourn.*

Housebreaker, s. n. ಕನ್ನಾಹಾಕುವವ. v. *Thief, robber.*

Housebreaking, s. n. ಕಂನಗಳವು. v. *Robbery, theft.*

House-dog, s. n. ಸಾಕಿದನಾಯಿ, ಮನೇಕಾಪಾಡುವನಾಯಿ, ಗೃಹರಕ್ಷಶ್ವಾನ.

Household, s. n. ಮನೆತನ, ಸಂಸಾರ. v. *Family, domestic. (household furniture, household stuff)* ಮನೇಬಡುಕ, ಗೃಹಸಾಮಗ್ರಿ.

Householder, Housekeeper, s. n. ಗೃಹಪತಿ, ಗೃಹಮೇಧಿ, ಗೃಹಯಾಶ್ಯ, ಗೃಹಸ್ತ, ಮನೆಯಜಮಾನ.

Housekeeping, s. n. ಮನೆಯವೃತ್ತಿ, ಮನೆವಾರ್ತೆ.

Houseless, a. ದಿಕ್ಕಿಲ್ಲದ, ಮನೆಯಿಲ್ಲದ.

Housemaid, s. n. ದಾದಿ, ದಾಸಿ.

Housewife, s. n. ಮನೇಗರತಿ.

Housewifery, s. n. ಮನೇಗರತಿತನ.

Housing, s. n. ಆಸ್ಪದ. v. *Shelter. (of a saddle)* ಝುಲ್ಲಿ. v. *Trimming.*

How, ad. *(in what manner)* ಹ್ಯಾಗೆ, ಯಾವವಿಧದಿಂದ, ಯಾವಬಗೆಯಿಂದ; *How* long? ಎಷ್ಟೊತ್ತು, ಎಷ್ಟುದಿನ, ಯಾವಪರಿಯಂತರ; *How* long is this rope? ಈಹಗ್ಗೆಷ್ಟುಉದ್ದವದೆ, or ಈಹಗ್ಗಯೆಷ್ಟುಮಾರದೆ; *How* can it be helped? ಇನ್ನುಮಾಡತಕ್ಕದ್ದೇನು; *How* many? ಎಷ್ಟು; ಏಸು; *How* much? ಎಷ್ಟು; *(howbeit)* ಆದರು; *How* many persons? ಎಷ್ಟುಮಂದಿ; *How* many soever ಎಷ್ಟಾದರು; *How* oft, *how* often ಎಷ್ಟುಸಾರಿ, ಏಸುಸಾರಿ, ಎಷ್ಟಾವರ್ತಿ; *How* do you do? ಹ್ಯಾಗಿದ್ದಿ; *How* many children? ಎಷ್ಟುಮಂದಿಮಕ್ಕಳು, or ಏಸುಮಂದಿಮಕ್ಕಳು; *How* does

he stand affected? ಅವನಚಿತ್ತವೇನು; At *how* much a yard? ಗಜಕ್ಕೆಷ್ಟು; *How* many quires for a rupee? ರೂಪಾಯಿಗೇಸು ದಸ್ತು; *How* great? ಎಷ್ಟುದೊಡ್ಡದು; *How* far? ಎಷ್ಟು ದೂರ; With *how* much trouble ಎಷ್ಟು ಕಟಿಪಟಿಯಿಂದ, or ಎಷ್ಟು ಕಷ್ಟದ ಸಂಗಡ; *How* much greater the crime is, so much greater will be the punishment ಅಪರಾಧಕ್ಕೆತಕ್ಕ ದಂಡನೆ, or ತಪ್ಪಿಗೆತಕ್ಕ ಪ್ರಾಯಶ್ಚಿತ್ತ.

However, ad. ಹ್ಯಾಗಾದರು. v. *But, nevertheless, at least.*

To Howl, v. n. ಮೊರೋಯಿಸ, ಬೊಬ್ಬೆಯಿಡ, ರುಯಲಿಡ, ಮೊರೆಯಿಟ್ಟಳ, ಗೋಳಿಡ.

Howl, s. n. ಮೊರೋಯಿಸುವಿಕೆ, ಮೊರೆಯಿಡೋಣ, ಬೊಬ್ಬೆಯಿಡೋಣ, ಮೊರೆಯಿಟ್ಟಳೋಣ.

Howsoever, v. *However, although.*

Hubbub, s. n. ಸಂದಣಿ, ಗೋಳು, ಗಲಿಬಿಲಿ, ಗುಲ್ಲು, ದಬಗುಬಲು, ಗುಬಾರು.

Hucklebacked, a. ಗೂನುಬೆಂನಿನ. v. *Crooked backed.*

Hucklebone, s. n. ಬೆಂನೆಲುವು. v. *Hipbone.*

Huckster, s. n. ಚಿಲ್ಲರೆದಾರ, ಚಿಲ್ಲರೆವರ್ತಕನು. v *Pedlar.*

To Huddle, v. a. (*do any thing precipitately*) ತೊಂದರೆಯಾಗಿಮಾಡ; (*to huddle on clothes*) ಅಬಂದರೆಯಾಗಿಸುತ್ತಿಕೊಳ್ಳ; (*to huddle together, to bring or throw in confusion*) ಅಬಂದರೆಯಾಗಿಯಿಡ, ಚೆಲ್ಲಾಪಿಲ್ಲಿಯಾಗಿಹಾಕ; (*to move hastily in a crowd*) ಸಂದಣಿಯಾಗಿಹೋಗ.

Huddle, s. n. ಗುಂಪು, ಗಲಿಬಿಲಿ, ಗುಬಾರು, ತೊಂದರೆ. v. *Crowd, tumult, confusion.*

Hue, s. n. (*colour*) ವರ್ಣ, ಬಂಣ; (*legal pursuit*) ಆರ್ಭಾಟೆ; (*to make a hue and cry*) ಆರ್ಭಾಟಮಾಡ.

To Huff, v. a. ಗದರಿಸ, ಅದಮಾಯಿಸ, ಹೂಂಕರಿಸ. v. *To boast, bluster.* (*to treat with insolence*) ಉದ್ದಂಡವಾಗಿಮಾತಾಡ. v. *To bully.* (*to swell with self importance*) ಉಬ್ಬಿಹೋಗ, ಮದೋದ್ರೇಕವಾಗ; (*to go off in a huff*) ಸಿಟ್ಟೇರಿಹೊರಟುಹೋಗ, ಮುಸುಮುಸುಗುಟ್ಟಿಹೋಗ.

Huff, s. n. (*sudden swell of arrogance or anger*) ಮದೋದ್ರೇಕ, ಕೋಪೋದ್ರೇಕ.

Huffer, s. n. ಬಡಬಡವವ, ಉದ್ದಂಡನು, ಗದರಿಸುವವ, ಧೂರ್ತ. v. *Bully.*

Huffish, a. ಉದ್ದಂಡವಾದ, ಹೂಂಕರಿಕೆಯಾದ, ಗದರಿಕೆಯ.

Huffishly, ad. ಉದ್ದಂಡವಾಗಿ, ಹೂಂಕರಿಕೆಯಾಗಿ, ಗದರಿಕೆಯಾಗಿ.

Huffishness, s. n. ಉದ್ದಂಡ, ಗದರಿಕೆ, ಹೂಂಕರಿಕೆ, ಉತ್ಸೇಕವು. v. *Arrogance.*

To Hug, v. a. ಅಪ್ಪಿಕೊಳ್ಳ, ತಕ್ಕೈಸ, ಆಲಿಂಗನೆಮಾಡ. v. *To embrace.* (*to hold fast*) ತಬ್ಬಿಕೊಳ್ಳ, ಘಟ್ಟಿಯಾಗಿತಬ್ಬಿಕೊಳ್ಳ.

Hug, s. n. ಆಲಿಂಗನೆ, ಸಂಶ್ಲೇಷವು, ಆಶ್ಲಿಷ್ಯಂಗ. v. *Embrace.* (*to hug one's self*) ಮೆಚ್ಚಿಕೊಳ್ಳ. v. *To be pleased.*

Huge, a. ಅಗಾಧ, ಅಪಾರದ, ಬ್ರಹ್ಮಾಂಡದ, ಮಹೋನ್ನತದ, ಬಹುದೊಡ್ಡ. v. *Immense, vast.*

Hugely, ad. ಅಗಾಧವಾಗಿ, ಬ್ರಹ್ಮಾಂಡವಾಗಿ, ಅಪಾರವಾಗಿ, ಬಹಳವಾಗಿ, ಹೇರಳವಾಗಿ.

Hugeness, s. n. ಅಗಾಧವು, ಬ್ರಹ್ಮಾಂಡವು, ಬಾಹುಳ್ಯವು, ವಿಸ್ತಾರವು, ಹೇರಳವು.

Huggermugger, s. n. ರಹಸ್ಯ, ಏಕಾಂತಸ್ಥಳ, ಗೋಪ್ಯ.

Hulk, s. n. (*hull or body of a ship*) ಹಡಗಿನ ಹೊಟ್ಟೆ; (*a hulk, any thing bulky*) ದಪ್ಪವಾದದ್ದು, ಘಾತ್ರವಾದದ್ದು.

To Hum, v. n. (*as bees*) ಝೇಂಕರಿಸು. v. *To buzz.* (*to hum and haw*) ಸಂದೇಹಪಡು, ಅನುಮಾನಪಡು. v. *To hesitate.* (*to hum an air*) ಗುಣುಗು, ಮನದಲ್ಲಿ ರಾಗವೆಳೆಯು.

Hum, s. n. ಝೇಂಕಾರ, ಹೂಂಕಾರ. v. *Buzz.* (*the humming noise of a number of people*) ಗಲಿಬಿಲಿ, ಕಲಕಲ, ಸಂದಣೆ, ಗಜಿಬಿಜಿ.

Human, a. ಮಾನುಷನ, ಮನುಷ್ಯನ; (*human nature*) ಮನುಷ್ಯಭಾವ; (*the human race, human kind*) ಮನುಷ್ಯರಾಶಿ; (*a human being*) ನರಮನುಷ್ಯ, ನರಜೀವ.

Humane, a. ದಯದ, ಅಂತಃಕರುಣೆಯ, ಕೃಪೆಯುಳ್ಳ, ಕನಿಕರವುಳ್ಳ. v. *Benevolent, kind.*

Humanely, ad. ಕೃಪೆಯಾಗಿ, ಕನಿಕರವಾಗಿ, ಅಂತಃಕರುಣೆಯಾಗಿ, ದಯವಾಗಿ.

Humanity, s. n. ಅಂತಃಕರುಣೆಯು, ದಯವು, ಕೃಪೆಯು, ಕನಿಕರವು, ಕೋಮಲಮನಸ್ಸು. v. *Benevolence, kindness*; also *human nature.*

To Humanize, v. a. ಕನಿಕರಪಡಿಸು.

Humanly, ad. ಮನುಷ್ಯಭಾವವಾಗಿ, ಕನಿಕರವಾಗಿ, ಕೋಮಲಮನಸ್ಸಾಗಿ, ಮೃದುಮನಸ್ಸಾಗಿ. v. *Humanely.*

Humble, a. (*submissive*) ವಿಧೇಯವಾದ, ವಿನಯದ, ಗರ್ವಹೀನದ, ತಾಳ್ಮೆಯ; (*low, depressed*) ಅಣಗಿಸಿದ, ಕುಂಗಿದ; (*a humble petition*) ಬಿಂನವತ್ತಳೆ, ಅರ್ಜಿ.

To Humble, v. a. (*to make to condescend*) ಕುಂಗಿಸು, ಇಳಿಸು, ಅಣಗಿಸು; (*to make submissive*) ವಿಧೇಯಮಾಡಿಸು, ಸಾಧುವಾಗಿಮಾಡಿಸು; (*to make low*) ನೀಚವಾಗಿಮಾಡು, ಮಾನಭಂಗಿಸು. v. *To crush, tame, subdue.* (*to humble one's-self*) ತಗ್ಗಿಸು, ಕುಗ್ಗು, ನಗ್ಗು, ಗರ್ವಮುರಿ, ಗರ್ವವಣಗಿಸಿಕೊಳ್ಳು; (*to humble one's-self before God*) ನಂಮ್ರವಾಗು, ಸಾಧುವಾಗು.

Humbled, part. ಆತ್ತಗರ್ವ, ಅಕ್ಷಿಪ್ತಮಾನ.

Humbleness, s. n. ವಿನಯತ್ವ, ವಿಧೇಯತ್ವ.

Humbly, ad. ನಂಮ್ರವಾಗಿ, ವಿಧೇಯವಾಗಿ, ಸಾಧುವಾಗಿ; ಗರ್ವಹೀನವಾಗಿ, ತಾಳ್ಮೆಯಾಗಿ.

Humerus, s. n. ತ್ರಿಗಂಡ.

Humid, a. ತೇವದ, ಒದ್ದೆಯ, ತೊಯಿಕೆಯ, ನನೆದ, ಆರ್ದ್ರದ, ಶೀತದ.

Humidity, s. n. ತೇವವು, ಶಿಡಿ, ತೊಯಿಕೆ, ಆರ್ದ್ರವು, ಶೀತವು.

Humiliation, s. n. ಗರ್ವವಣಗಿಸುವಿಕೆ, ದೇಹದಂಡಿಸೋಣ.

Humility, s. n. ನಂಮ್ರತೆ, ವಿಧೇಯತ್ವ, ವಿನಯತ್ವ, ನಿರ್ವೇದವು, ಗರ್ವಹೀನ, ಸೊಡು, ಅಣುಕುವೆ.

Humoral, a. ಸಂನಿಪಾತದ, ಶೈತ್ಯದ, ಶೀತದ.

Humorist, s. n. ಮಸ್ಕರನು, ಸ್ವಮನೋನುಸಾರಕ, ಕ್ಷಣಚಿತ್ತವುಳ್ಳವನು.

Humourous, a. (*capricious*) ಕ್ಷಣಚಿತ್ತದ. v. *Irregular*. (*jocular*) ಚಮತ್ಕಾರ್ಯ, ಕುವಾದದ, ಸರಸದ.

Humourously, ad. (*capriciously*) ಕ್ಷಣಚಿತ್ತವಾಗಿ; (*jocosely*) ಚಮತ್ಕಾರ್ಯವಾಗಿ, ಕುವಾದವಾಗಿ, ಸರಸವಾಗಿ.

Humourousness, s. n. ಕ್ಷಣಚಿತ್ತತ್ವ. v. *Caprice, fickleness.*

Humoursome, a. ಕ್ಷಣಚಿತ್ತಶೀಯ. v. *Peevish, humourous.*

Humour, s. n. (*moisture*) ಶೈತ್ಯ, ಸಂನಿಪಾತ; (*the phlegmatic humour*) ಶ್ಲೇಷ್ಮವು; (*the four humours in the human body*) ಮಲಮೂತ್ರಪುರೀಷಾದಿಗಳು; (*a good humour*) ಉಲ್ಲಾಸಗುಣ, ಸ್ವಸ್ಥಚಿತ್ತ; (*the humour or temper of the mind*) ಸ್ವಭಾವಗುಣ; (*jocularity*) ಕುಚೋದ್ಯ, ಕುಚೇಷ್ಟೆ, ಚಾಷ್ಟಾಳಿಕೆ; He was in a good *humour* to-day ಅವನೀಹೊತ್ತು ಉಲ್ಲಾಸವಾಗಿದ್ದನು; Don't go when he is in an ill *humour* ಅವನು ಸಿಟ್ಟಾಗಿದ್ದಾಗ ನೀ ಹೋಗಬೇಡ; (*a man of humour*) ಕುಚೋದ್ಯಗಾರ; (*humour, caprice*) ಮನೋಚಾಪಲ್ಯ, ಮನೋಚಾಂಚಲ್ಯ, ಚಪಲತೆ. v. *Peevishness.*

To Humour, v. a. ಸಂತೋಷಪಡಿಸು, ಶಾಂತಿಪಡಿಸು. v. *To gratify, soothe, comply, fit.*

Hump, s. n. ಗೂನು; (*hump of an ox*) ಎತ್ತಿನ ಹಿರುಳು; (*hump of a camel*) ಹುಬ್ಬು, ಉಷ್ಟ್ರಪೃಷ್ಠವು; (*hump backed or hunch backed*) ಗೂನುಬೆನ್ನು, ಕುಬ್ಜಗಡುಲ.

To Hunch or crook the back, v. a. ಗೂನುಮಾಡು; (*to hunch or strike with the fists*) ತಿವಿಯು, ಗುದ್ದು.

Hundred, s. n. ನೂರು, ಶತ; (*one in a hundred*) ನೂರರಲ್ಲೊಂದು, ನೂರಕ್ಕೊಂದು; (*a hundred thousand*) ಲಕ್ಷ; (*a man a hundred years old*) ಶತವೃದ್ಧ, ನೂರುವರುಷದವ; (*a hundred fold*) ನೂರ್ಮಡಿ.

Hundreds, s. n. ನೂರುಗಳು, ಶತಗಳು.

Hundredth, a ನೂರಿನ.

Hung, part. ಗಲ್ಲಾಕಿದ, ತೂಗಹಾಕಿದ.

Hunger, s. n. ಹಸಿವು, ಕ್ಷಾರಿಕೆ, ಬುಭುಕ್ಷೆ, ಕ್ಷುತ್ತು, ಕ್ಷುಧವು, ಅಶನಾಯ; His *hunger* is allayed ಅವನ ಹಸಿವಿಯಡಗಿತು.

To Hunger or be hungry, v. n. ಹಸಿವಿಯಾಗು.

Hungry, a. ಹಸಿವಿಯ, ಬುಭುಕ್ಷಿತ, ಕ್ಷುಧಿತ, ಜಿಘತ್ಸು, ಅಶನಾಯಿತ.

Hungrily, ad. ಹಸಿವಿಯಾಗಿ.

Hunks, s. n. ಗೂಗಿ, ಮೋಳೆ, ಲುಬ್ಧ. v. *Miser.*

Hunt, Hunting, s. n. ಬೇಟೆ, ಬೇಟೆಯಾಡುವಿಕೆ, ಗ್ರಾಮಾಧಾನ, ಆಕ್ಷೋದನ, ಮೃಗವ್ಯ, ಆಖೇಟ, ಮೃಗಯೆ.

To Hunt, v. a. ಬೇಟೆಯಾಡು. v. Also *to search for, to pursue.* (*to go a hunting*) ಬೇಟೆಯಾಡ ಹೋಗು.

Hunter, Huntsman, s. n. ಬೇಟೆಗಾರ, ಪಾಪರ್ಧಿಕ, ಜಾಲಿಕ, ವ್ಯಾಧ, ಮೃಗವಧಾಜೀವ, ಮೃಗಯು, ಲುಬ್ಧಕ, ಶಿಕಾರಿ.

Hunter, or Hunting dog, s. n. ಬೇಟೇನಾಯಿ, ಜೋಸಂಗಿನಾಯಿ, ಶಿಕಾರೀನಾಯಿ.

Huntinghorn, s. n. ಬೇಟೇಕೊಂಬು.

Huntinghorse, s. n. ಬೇಟೇಕುದುರೆ, ಶಿಕಾರೀಕುದುರೆ.

Huntress, s. n. ಬೇಟೇಯಾಡುವವಳು, ಬೇಟೆಗಾರ್ತಿ.

Huntsmanship, s. n. ಬೇಟೆಯಾಟ, ಶಿಕಾರು.

To Hurl, v. a. ಒಗೆಯ, ಎಸೆಯ. v. *To throw, shoot, fling.*

Hurled, part. ಒಗೆದ, ಎಸೆದ. v. *Thrown.*

Hurlyburly, s. n. ಗಲಿಬಿಲಿ, ಗಬಾರು, ಗುಲ್ಲು, ಫಕಾಡು. v. *Tumult, confusion.*

Hurricane, s. n. ವಾಯುಗುಲ್ಮ, ದೆವ್ವಘೂಳಿ, ವಾತ. v. *Whirlwind, wind.*

To Hurry, v. a. ಅವಸರಿಸ, ತ್ವರಿತಪಡಿಸ, ತ್ವರೇಮಾಡ, ಶೀಘ್ರಪಡಿಸ. v. *To haste, hasten.*

Hurry, s. n. ಅದರವು, ದಡಗಳಿತೆ, ತ್ವರೆ, ಅವಸರ, ತ್ವರಿತ, ಸಂವೇಗವು, ಸಂಭ್ರಮವು. v. *Tumult, commotion, haste, precipitate.*

To Hurt, v. a. ಖೇದಿಸ, ನಷ್ಟಮಾಡ, ಠಾಕ, ಪೆಟ್ಟುಹತ್ತಿಸ, ಘಾಯಮಾಡ. v. *To harm, pain, injure, wound.*

Hurt, s. n. ನಷ್ಟ, ಘಾಯ, ಪೆಟ್ಟು, ಖೇದ.

Hurt, part. *(injured or wounded)* ನಷ್ಟವಾದ, ಘಾಯವಾದ; *(to be hurt)* ನಷ್ಟವಾಗ, ಘಾಯವಾಗ, ನೋವಾಗ.

Hurtful, a. ನಷ್ಟದ, ಖೇದದ, ಮೋಸದ, ಗೃಹಂಸದ. v. *Harmful, pernicious. (very hurtful)* ಬಹುಮೋಸದ, ಬಹುಅಪಾಯದ.

Hurtfully, ad. ನಷ್ಟವಾಗಿ, ಮೋಸವಾಗಿ, ಖೇದವಾಗಿ, ಅಪಾಯವಾಗಿ.

Hurtfulness, s. n. ನಷ್ಟ, ಮೋಸ, ಖೇದ.

Hurtless, a. ನಷ್ಟವಿಲ್ಲದ, ಮೋಸವಿಲ್ಲದ, ಖೇದವಿಲ್ಲದ. v. *Harmless, innocent.*

Husband, s. n. ಗಂಡ, ಪುರುಷ, ಪತಿ, ಧವ, ಪ್ರಿಯ, ಭರ್ತಾರನು; *(husband's brother)* ದೇವರ, ಭಾವ; *(husband's sister)* ನಾದನಿ, ನನಾಂದಿಯು, ಯಾತರವು; *(husband's brother's wife)* ವಾರಗಿತಿ, ನೆಗೆಣ್ಣು, ಯಾತರವು; *(husband and wife)* ಗಂಡಾಹೆಂಡರು, ಸತಿಪುರುಷರು, ದಂಪತಿ, ಜಂಪತಿ, ಭಾರ್ಯಾಪತಿ.

To Husband, v. a. ಪುರುಷಂನಕೊಡ, ಮದಿವೇಮಾಡ. v. *To marry. (to manage frugally)* ಜೋಕೆಮಾಡ, ಬಿಗಿಹಿಡಿಯ; *(to till)* ಹಸನುಮಾಡ, ಉಳೆ, ಸಾಗುವಳೀಮಾಡ.

Husbandless, a. ವಿಧವೆಯ, ರಂಡೆಯ, ಗಂಡನಿಲ್ಲದ, ಬೋಳಿಯ.

Husbandman, s. n. ರೈತ, ಒಕ್ಕಲಿಗ, ಶೇದ್ಯಗಾರ, ಕ್ಷೇತ್ರಾಜೀವ, ಕರ್ಷಕ, ಕೃಷಿಕ, ಕೃಷೀವಲ.

Husbandry, s. n. ಒಕ್ಕಲುತನ, ವ್ಯವಸಾಯ, ಶೇದ್ಯ, ಕಂಮತ. v. *Tillage. (frugality)* ವಾರಣಾ, ಜೋಕೆ.

Hush, interj. ಸದ್ದು, ಚಪ್ಪು, ಸುಮ್ಮನಿರು.

To Hush, v. a. *(make still or silent)* ಸದ್ದಡಗಿಸ, ಗಲುಗುನಿಲ್ಲಿಸ; *(to hush a child asleep)* ಜೋಡಬಡಿಯ, ತಟ್ಟಿಮಲಗಿಸ.

Husk, s. n. ಹೊಟ್ಟು, ತರಗು, ತುಷ.

To Husk, v. a. *(strip of the outward integument)* ಹೊಟ್ಟುತೆಗೆಯ, ಹೊಟ್ಟೋಗಲಿಸ.

Husked, part. *(covered with a husk)* ಹೊಟ್ಟಿನ.

Hussy, s. n. ಛಿನಾಲಿ, ಹಾಟಗಿತ್ತಿ, ಬಜಾರಿ. v. *Baggage, impudent woman, bunter.*

To Hustle, v. a. ಗಲಗರಿಸ, ಗಲುಗಲುಮಾಡ.

Hut, s. n. ಗುಡಿಶೆ, ಝೋಪಡಿ, ಗುಡಿಸಲು. v. *Hovel, cottage.*

Hutch, s. n. *(corn chest)* ಧಾನ್ಯದಪೆಟ್ಟಿಗೆ. v. *Granary.*

Huzza, s. n. ಗಲ್ಲು, ಆರ್ಭಾಟ, ಹುಯಿಲು.

To Huzza, v. n. ಗಲ್ಲುಮಾಡ, ಆರ್ಭಾಟಮಾಡ, ಹುಯಿಲುಮಾಡ, ಗಾಬರಿಮಾಡ.

Hyacinth, s. n. *(flower)* ಮದ್ದಾನಮಲ್ಲಿಗೆ; *(gem)* ಪದ್ಮರಾಗ.

Hyades, s. n. *(constellation)* ಕುಂತರಾಶಿ.

Hydra, s. n. ಅನೇಕತಲೆಯುಳ್ಳಜೀವ, ರಾವಣ.

Hydraulics, s. n. ಸುರಂಗದಕೆಲಸ, ಜಲಸೂತ್ರದವಿದ್ಯ.

Hydrocele, s. n. *(watery rupture)* ಶೈತ್ಯರೋಗ, ನೀರುಕಟ್ಟು.

Hydromel, s. n. ಜೇನುನೀರು, ಮಧುಜಲ.

Hydrophobia, s. n. ನೀರುಭೀತಿಯ, ಕಾಕಿಸೊಂಮ್ಮ.

Hydropical, a. ಉದರ, ಜಲೋದರಿ. v. *Dropsical.*

Hyena, s. n. ತರಕ್ಷು, ಮೃಗಾದನ.

Hymen, s. n. *(membrane)* ಪೊರೆ. v. *Marriage, virginity.*

Hymeneal, a. *(pertaining to marriage)* ಮಂಗಳದ, ಮದುವೆಯ, ಕಲ್ಯಾಣದ, ವಿವಾಹದ.

Hymn, s. n. ಪದ, ಕೀರ್ತನೆ, ಗೀತ.

To Hymn, v. n. ಕೀರ್ತನೆಹಾಡ, ಪಾಡ.

To Hyp, v. a. ಅಧೈರ್ಯಪಡಿಸ, ಭಯಪಡಿಸ.

Hyperbole, s. n. ಅತ್ಯುಕ್ತಿ.

Hyperbolical, Hyperbolick, a. ಅತ್ಯುಕ್ತಿಯ; *(to speak hyperbolically)* ಅತ್ಯುಕ್ತಿಯಾಗಿ ಮಾತಾಡ.

Hyperborean, s. n. ಉತ್ತರ, ಬಡಗ.

Hypercritic, s. n. ಪರೀಕ್ಷಕ, ಪರೀಕ್ಷಾಧಿಕ. v. *Critic.*

Hypochondriacal, Hypochondriack, a. ಬುದ್ಧಿಶೈಥಿಲ್ಯ, ಚಪಲಚಿತ್ತ. v. *Melancholy, insane.*

Hypocrisy, s. n. ಮಾಜು, ದಗೆ, ಕುಹನ, ಕೈತವ, ಕೈತ, ಜತ್ತುಗ, ಕಪಟತ್ವ, ವಂಚನೆ, ಮೋಸ. v. *Dissimulation.*

Hypocrite, s. n. ಕಪಟಿ, ಮೋಸಗಾರ, ವಂಚನೆಯವ, ದಗಾಖೋರ, ಧರ್ಮಧ್ವಜಿ, ಲಿಂಗವೃತ್ತಿ, ಮಾಯಿ.

Hypocritical, a. ಕಪಟದ, ವಂಚನೆಯ, ಮೋಸದ, ದಗೆಯ, ಮಾಯದ.

Hypocritically, ad. ಕಪಟವಾಗಿ, ಮೋಸವಾಗಿ.

Hypothetical. v. *Conditional.*

Hysterics, s. n. ಮೂರ್ಛಾಗರವು, ಅಪಸ್ಮಾರವು; That woman has got the *hysterics* ಆಸ್ತ್ರೀಗೆ ಮೂರ್ಛಾಗರ ಹಿಡಿದಿದೆ, or ಆಹೆಂಗಸಿಗೆಯಪಸ್ಮಾರವು ಕಾಣಿಸುತ್ತಿದೆ.

I

I (pro.) ನಾನು; *I myself* ನಾನೆ, ನನಗೆನಾನೆ.

To Jabber, v. n. ಅಪ್ರಸ್ತಾಪಮಾಡು, ವಾಚಾಳಕತನಮಾಡು, ಬೈಲುಮಾತಾಡು, ಹರಟೆ.

Jabberer, s. n. ಬಹುಭಾಷಿ, ಹರಟೇಮಲ್ಲ.

Jacent, a. ಮಲಗಿರುವ. v. *Supine.*

Jack, s. n. (*a leathern cup*) ತೊಗಲಿನಪಾತ್ರೆ; (*a coat of mail*) ಜಿರಾಕ್ತ್ರಸು, ಕಬ್ಬಿಣಕವಚ; (*colours of a ship*) ನಿಸಾನಿ, ಝುಂಡೆ. v. *Flag.*

Jackpudding, s. n. ನಕಲಿಗಾರ, ಹಾಸ್ಯಗಾರ, ಮಂಗ, ವಿಕಟಕವಿ. v. *Buffoon.*

Jackall, s. n. ನರಿ, ಜಂಬುಕ. v. *Fulimart.*

Jackanapes, s. n. ಮಂಗಚೇಷ್ಟೆಯವ, ಕಪಿಚೇಷ್ಟೆಯವ. v. *Coxcomb, ape.*

Jackdaw, s. n. ಗೊರವಂಕ.

Jacket, s n. ಅಂಗಿ, ಚೋಗೆ; (*a quilted jacket*) ಕೋದಿಯಂಗಿ, ದಗಲೆ; (*a female's jacket*) ಕುಪ್ಪಸ, ಚೋಳಿ, ರವಿಕೆ.

Jacob's staff, s. n. (*pilgrim's staff*) ದಂಡ, ಕೋಲು, ದೊಣ್ಣೆ.

Jaculation, s. n. (*tossing*) ಹಾಯುವಿಕೆ; (*restlessness*) ತಲ್ಲಡಿಸುವಿಕೆ; (*act of boasting*) ಜಂಭ, ಜೋಲುಹರಟೆ, ಬೈಲುಹರಟೆ.

Jaculation, s. n. (*throwing, darting*) ಎಯಿಸುವಿಕೆ, ಒಗೆಯುವಿಕೆ.

Jade, s. n. (*a sorry horse*) ಮೊಂಡುಕುದುರೆ; (*a mean sorry woman*) ಕುಂಟಿನಿಗ್ರಿ, ಚಿನಾಲಿ, ಬಜಾರಿ. v. *Whore, bunter.*

To Jade, v. a. ಆಯಾಸಪಡಿಸು, ಘೋರಿಸು, ಅಧೈರ್ಯಮಾಡು, ಬೇಸರಿಕೆಕೊಡು. v. *To fatigue, harass, tire, degrade, tyrannize.* (*to grow fatigued, lose spirit*) ಆಯಾಸವಾಗು, ಬೇಸರಿಕೆಯಾಗು, ಮಂದವಾಗು.

Jaded, part. ಆಯಾಸದ, ಬೇಸರಿಕೆಯ. v. *Fatigued, dejected.*

Jadish, a. (*vicious as a horse*) ಹರಾಮಿಯಾದ, ಒದೆಯುವ; (*incontinent*) ಕಾಮವಿಕಾರದ, ಇಂದ್ರಿಯವಿಕಾರದ.

To Jag, v. a. (*make like teeth*) ಕಾಟುಯಿಡು, ಕಚ್ಚುಮಾಡು. v. *To notch.*

Jag, Jaggedness, s. n. ಕಚ್ಚು, ಕಡಕು, ಗೋಟು, ಮೋಟು.

Jaggy, a. ಕಚ್ಚಿನ, ಕಡಕಿನ.

Jail, s. n. ಬಂದೀಖಾನೆ, ಶಿಕೆಮನೆ; (*a jail bird*) ಶಿಕೆಯವ, ಬಂದೀವಾನ.

Jailer, s. n. ಬಂದೀವಾನರ ಯಜಮಾನ, ಕಾರಾಗ್ರಹಾಧಿಪತಿ. v. *Gaol, gaoler, &c.*

Jakes, s. n. ಪಾಯಖಾನೆ, ಶೌಚದಮನೆ. v. *House of office.*

Jack-fruit, s. n. ಹಲಸಿನಹಣ್ಣು.

Jalap, s. n. ತಿಗಡೆ.

Jamb, s. n. (*post of a door*) ನಿಲುವು.

To Jangle, v. n. (*wrangle*) ಜಗಳವಾಡು, ವಾಗ್ವಾದಮಾಡು; (*to make a discordant sound*) ಝುಂಗಿಸು, ಘಲ್ಲಿಸು. v. *To dispute, quarrel.*

Jangler, s. n. ವಾಗ್ವಾದಿ, ವಿವಾದಿ, ವಾದಿಕ.

Janty, a. ಡಂಭಿಷ್ಠ, ಜಂಭಿದ. v. *Gaudy.*

January, s. n. ಪುಷ್ಯಮಾಸ. v. *Month.*

Jar, s. n. (*vessel*) ಗಡಿಗೆ, ಖೂಂಜ, ಅಳಿಂಜರ, ಮರಿಗೆ; (*discord*) ವಾಗ್ವಾದ, ಕಟಿಕಟಿ. v. *Dissension.* (*debate, jar or jarring noise*) ಘಪಾಜಫ, ಘುಗ್ಗ.

To Jar, v. n. (*make a harsh sound*) ಛಟಿಕ್ಕಿಸ, ಫಟಿಕ್ಕಿಸ; (*to be discordant*) ವಾಗ್ವಾದಮಾಡ, ಕಟಿಕಟ್ಟೆಮಾಡ, ಜಗಳವಾಡ; (*to be out of tune*) ಅಪಶ್ರುತಿಯಾಗ.

Jargon, s. n. ಗ್ರಾಂಮ್ಯಭಾಷೆ.

Jasmin, s. n. (*common*) ಅಚ್ಚಮಲ್ಲಿಗೆ; (*the sambac jasmin*) ದುಂಡುಮಲ್ಲಿಗೆ; (*the eared jasmin*) ಸೂಜಿಮಲ್ಲಿಗೆ; (*the double jasmin*) ಸಪ್ರಲಿ, ನವಮಾಲಿಕೆ, ನೈಪಾಲಿ; (*the narrow leaved jasmin*) ಅಡವಿಮಲ್ಲಿಗೆ; (*the wavy-leaved jasmin*) ಮಲ್ಲಿಗೆ.

Jasper, s. n. ಪಚ್ಚೆಕಲ್ಲು.

Javelin, s. n. ಸಾಂಗ, ಬರ್ಚಿ, ಶಲ್ಯ, ಸಾಂಕು, ಪಿಶಿ; (*to dart a javelin*) ಸಾಂಗೆಯ್ಯ, ಸಾಂಗಹಾಕ, ಸಾಂಗಬಿಡ; (*to strike with a javelin*) ಸಾಂಗನಿಂದಿರಿಯ.

Jaundice, s. n. ಕಾಮಿಣೆ, ಪಾಂಡು, ಕಾಮಾಲೆ.

Jaundiced, a. ಕಾಮಿಣೆಯ, ಪಾಂಡುವಿನ, ಕಾಮಾಲೆಯ.

To Jaunt, v. n. (*to wander about*) ವಿಹರಿಸ, ಬೇಡಾಡೋಗ, ತಿರಿಗಾಡ. v. *To wander, ramble.*

Jaunt, s. n. ಬೇಡಾಹೋಗುವಿಕೆ, ವಿಹಾರ. v. *Ramble.*

Jauntiness, s. n. ಸೊಗಸು, ಶಿಂಗಾರ, ನೀಟು. v. *Genteelness.*

Jaw, s. n. ಹಲ್ಲುಗೂಡು, ಹನು, ಗಂಡಸ್ಥಳ. v. *Cheek.* (*the upper jaw*) ಮೇಲ್ದವಡೆಯೆಲುಬು, ದವಡೇಯೆಲುಬು; (*the lower jaw*) ಕೀಳ್ಹನುವಿನೆಲುಬು, ಗದ್ದದೆಲುವು; (*the joint of the under jaw*) ದವಡೇಕೀಲು; (*lantern jawed*) ಬತ್ತುದವಡೆ, ಸುಕ್ಕುಗಲ್ಲ; (*the jaw teeth*) ದವಡೇಹಲ್ಲುಗಳು, ಹನುವಿನದಂತಗಳು; (*the root of the jaws*) ಹನುವಿನಬೇರು; (*pain in the jaws*) ಹನುವಿನನೋವು; (*a lock jaw*) ಹಲ್ಲುಗಿಟಿಕ.

Jaw bone, s. n. ಹಲ್ಲುಸಾಲಿನೆಲುಬು; (*the two jaw bones*) ಮೇಲ್ಕೀಳ್ಹನು.

Jay, s. n. ಕಿಕಿಯು, ದಿವಿಯು; (*the blue jay*) ಕಿಕೀದಿವಿಯು.

Ice, s. n. ಮಂಜುಗಡ್ಡೆ; (*to break the ice*) ಆರಂಭಿಸ, ಮುಂಕೊಳ್ಳ. v. *To begin.*

To Ice, v. n. ಮಂಜುಗಡ್ಡೆಯಾಗ. v. *To freeze.*

Ichnography, s. n. ಮನೇಭೂಮಿ.

Ichor, s. n. ಕೀವು, ಕಲ್ಮಷ. v. *Perus, serum.*

Icicle, s. n. ಶೀತದಗಡ್ಡೆ, ಧಾರೇಕಟ್ಟು.

Idea, s. n. ತೋಚಿಕೆ, ಊಹೆ, ಮನೋಪ್ರತಿಬಿಂಬ, ಭಾವನೆ. v. *Imagination.* (*an absurd idea*) ಅನರ್ಥಾಲೋಚನೆ, ಅಪ್ರಯೋಜಕಬುದ್ಧಿ; (*foolish ideas*) ಹುಚ್ಚಾಲೋಚನೆ, ಅಲ್ಪಬುದ್ಧಿ; (*to entertain an idea*) ನೆನೆಸ, ಊಹಿಸ.

Ideal, a. ಊಹೆಯ, ಮನೋಪ್ರತಿಬಿಂಬದ, ತೋಚುವಿಕೆಯ. v. *Intellectual.*

Ideally, ad. ತೋಚುವಿಕೆಯಾಗಿ.

Identical, a. (*the same, neut.*) ಅದೇ, ತತ್ಸಂಬಂಧದ; (*mas.*) ಅವನೇ; (*fem.*) ಅವಳೇ; He is the *identical* person ಇವನೇ ಆ ಮನುಷ್ಯ.

Identity, s. n. ತತ್ಸಂಬಂಧಿಕೆ, ತತ್ವ.

Idiocy, Idiotism, s. n. ದಡ್ಡತನ, ಮಡ್ಡತನ, ಕಡ್ಡತನ. v. *Folly, stupidity.*

Idiom, s. n. ಧೋರಣೆ, ವಾಕ್ಯೋರಣೆ, ಜಾತೀಯ್ಯವು.

Idiomatical, a. ಜಾತೀಯ್ಯದ, ಧೋರಣೆಯ; This is not *idiomatical* ಇದು ಸಾಂಪ್ರದಾಯಕವಲ್ಲ, or ಇದು ಧೋರಣೆಯಲ್ಲ, or ಇದು ಜಾತೀಯ್ಯವಲ್ಲ.

Idiot, s. n. ದಡ್ಡ, ಮಡ್ಡ, ಮೂರ್ಖ. v. *Fool.*

Idiotism, s. n. ದಡ್ಡತನ, ಮಡ್ಡತನ, ಕಡ್ಡತನ.

Idle, a. (*lazy*) ಸೋಮಾರಿಯ, ಮಾಂದ್ಯದ, ಛಾಂದಸದ, ಆಲಸ್ಯದ; (*unemployed*) ಸುಮ್ಮನಿರುವ, ನಿರುದ್ಯೋಗದ, ಶ್ರೀರಿಕೆಯಾದ. v. *Indolent, lazy, inattentive, inactive, useless, worthless.* (*trifling*) ವ್ಯರ್ಥ, ವೃಥಾ. v. *Vain.* (*an idle promise*) ಅಪ್ರಮಾಣಿಕ ವಾಗ್ದಾನ, ತರ್ಲೆ ಮಾತು; (*to idle, or be idle*) ಸುಮ್ಮನೆಯಿರು, ಕಾಲಾದೊಬ್ಬು, ವೃಥಾ ಕಾಲಕ್ಷೇಪಮಾಡು. v. *To trifle.*

Idleness, s. n. ಮಾಂದ್ಯತ್ವ, ಸೋಮಾರಿತನ, ಸುಸ್ತಿತನ, ಜಾಡ್ಯತನ. v. *Laziness, indolence, sloth, triflingness, uselessness.*

Idler, s. n. ಸೋಮಾರಿ, ಜಾಡ್ಯದವ, ಆಲಸ್ಯದವ, ಕಾಲಕ್ಷೇಪದವ, ಜೋಗಿಭದ್ರ.

Idly, ad. (*inactively*) ಸುಮ್ಮನೆ; (*triflingly*) ಆಲಸ್ಯವಾಗಿ, ಜಾಡ್ಯವಾಗಿ, ಮಾಂದ್ಯವಾಗಿ, ಸುಸ್ತಿಯಾಗಿ. v. *Lazily, carelessly.*

Idol, s. n. ವಿಗ್ರಹ, ಪ್ರತಿಮೆ. The number of the Hindoo gods is three hundred and thirty millions: among this host, the most celebrated idols are such as these, ಶಿವ, ವಿಷ್ಣು, ಬ್ರಹ್ಮ, ಇಂದ್ರ, ಸೂರ್ಯ, ಗಣೇಶ, ಕಾರ್ತಿಕೇಯ, ಅಗ್ನಿ, ಪವನ, ವರುಣ, ಯಮ, ರವಿ, ಸೋಮ, ಮಂಗಳ, ಬುಧ, ಬೃಹಸ್ಪತಿ, ಶುಕ್ರ, ಶನಿ, ರಾಹು, ಕೇತು, ದುರ್ಗೆ, ಕಾಳಿ, ಲಕ್ಷ್ಮಿ, ಸರಸ್ವತಿ, ಸೀತೆ, ಮನಸಾದೇವಿ, ಜರತ್ಕಾರಿ, ಗಜಗೌರಿ, ಕೃಷ್ಣ, ಗೋಪಾಲ, ಗೋಪೀನಾಥ, ಜಗಂನ್ನಾಥ, ಬಲರಾಮ, ರಾಮ, ವಿಶ್ವಕರ್ಮ, ಕಾಮದೇವ, ಸತ್ಯನಾರಾಯಣ, ಸೀತೆ, ರಾಧೆ, ರುಕ್ಮಿಣಿ, ಸತ್ಯಭಾಮೆ, ಸುಭದ್ರ. ಪಾಂಚಾಲಿ, ಕಾಳರಾಯ, ಕಾಳಭೈರವ, ಚಂನಕೇಶವ, ನಾರಸಿಂಹ, ಲಕ್ಷ್ಮೀನಾರಾಯಣ, ರಂಗನಾಯಕ, ದರ್ಭಶಯನ, ವರದರಾಜ, ಆಂಜನೇಯ, ಗರುಡ, ಮುಖ್ಯಪ್ರಾಣ, ಪಾಂಡುರಂಗ, ನಂಜುಂಡ, ಹೆಂಜೆರಿಯ, ಹಿರಂಣ್ಯಾಗರ್ಭ, ಬೀರಭದ್ರ, ನಂದೀಶ್ವರ, ಶೃಂಗೇಶ್ವರ, ಚಂಡೀಶ್ವರ, ವರಾಹಸ್ವಾಮಿ, ವೆಂಕಟೇಶ್ವರ, ಬೊಂಮ್ಮ, ಪೋತೆ, ಕಾಟಿ, ಜಿನ, ಬೌದ್ಧ, ನಾಗೇಶ್ವರ, ಅರ್ಧನಾರೀಶ್ವರ, ಹರಿಹರೇಶ್ವರ, ಭವಾನಿ, ಶಂಕರಿ, ಬನದ ಶಂಕರಿ, ಮಹಂಮ್ಮಾಯಿ, ಜೋಗುಳಾಂಬ, ಭ್ರಮರಾಂಬ, ಮಹಾಕಾಳಿ, ಭದ್ರಕಾಳಿ, ಕಮಕೇಶ್ವರಿ, ಕಾಮಾಕ್ಷಿ, ಮೀನಾಕ್ಷಿ, ಅಂನಪೂರ್ಣೆ, ತ್ರಿದುರ್ಗೆ, ವನದುರ್ಗೆ, ಉಚ್ಚಂಗಿದುರ್ಗೆ, ಹುಲಿಗೇಶ್ವರ, ವಸೂರಿ, ಚೌಡಾಂಬ, ಸುಂಕಲಾಂಬ, ಸುಗ್ಗಲಾದೇವಿ, ಸಾಂಚಾರಿ, ಎಲ್ಲಂಮ್ಮ, ಮರೆಯಂಮ್ಮ, ಪಘುಮಕ್ಕಳರಾಯಿ, ಕರಿಕಾಲಂಮ್ಮ, ಬಿಳೇಕಾಲಂ

ಮ್ಮ, ಕಂಬಿಶಿ, ಕಂಚೀರಮ್ಮ, ಗಂಗಮ್ಮ, ಶೀತಮ್ಮ. ಗೌರಮ್ಮ, ಉಯ್ಯಾಲಗೌರಮ್ಮ, ಸ್ವರ್ಣಗೌರಿ, ಕೊಂತ್ರಮ್ಮ; (*a ceremony of the Hindoos in which it is pretended that the deity is brought into a new formed idol*) ಪ್ರಾಣಪ್ರತಿಷ್ಠೆ; (*an idol seller*) ವಿಗ್ರಹವ್ಯಾಪಾರಕ; (*placing an idol in water*) ಜಲಾಧಿವಾಸ; (*placing an idol in a heap of grain*) ಧಾನ್ಯಾಧಿವಾಸ; (*placing an idol in a heap of milk*) ಕ್ಷೀರಾಧಿವಾಸ. The above are three modes of consecrating an idol. (*placing the idol in a palankeen and parading round a temple with it*) ಪಲ್ಲಕ್ಕಿಸೇವೆ; (*parading the streets with an idol*) ಉತ್ಸವ, ಮೆರವಣಿಗೆ; (*taking a short journey with an idol*) ಪಾರ್ವೇಟೆ; (*purification of an idol after a public feast*) ಅವಭೃತಸ್ನಾನ; (*a play with a cake boiled in steam the second day after the purification of an idol*) ಕಡುಬಿನಕಾಳಗ; (*a ceremony in which an idol is placed by a hole filled with water, mixed with turmerick and fine lime. The officiating bramin with a distinct vessel of the same mixture having sprinkled the idol empties it into the hole, and then the dancing girls fill their vessels and sprinkle the liquid upon each other; and the bramins, &c. &c. fill theirs and sprinkle the mixture over the multitude*) ವಸಂತೋತ್ಸವ, ಓಕುಳಿಯಾಟ; (*idol worship*) ವಿಗ್ರಹಾರಾಧನೆ; (*a stone idol*) ಕಲ್ಲುದೇವರು, ಪಾಷಾಣವಿಗ್ರಹ; (*a wooden idol*) ಮರದದೇವರು; (*a clay idol*) ಮಣ್ಣಿನದೇವರು.

Idolater, Idolist, s. n. ವಿಗ್ರಹಾರಾಧಿ, ವಿಗ್ರಹಾರಾಧಕ, ಅರ್ಚಕ, ಪೂಜಾರಿ.

Idolatrous, a. ವಿಗ್ರಹಾರಾಧನೆಯ.

Idolatrously, ad. ವಿಗ್ರಹಾರಾಧನೆಯಾಗಿ.

Idolatry, s. n. ವಿಗ್ರಹಾರಾಧನೆಯು.

To Idolize, v. *To love, adore, reverence.*

Jealous, a. ಶಂಕೆಯ, ನಂಬಿಕೆಯಿಲ್ಲದ, ಸಂಶಯದ, ಅಸೂಯೆಯ. v. *Emulous, suspicious.* (*a jealous man*) ಸಾಂಶಯಿಕನು, ಸಂದೇಹಿಕನು, ಅಪನಂಬಿಕೆಯವನು; (*a jealous woman*) ನಂಬಿಕೆಯಿಲ್ಲದವಳು, ಅಪನಂಬಿಕೆಯವಳು, ಸಂಶಯಿಕಳು, ಸಂದೇಹಿಕಳು, ಕಕ್ಕುಲಾತಿ; (*to be jealous*) ಅಸೂಯೆಪಡ.

Jealously, ad. ಶಂಕೆಯಾಗಿ, ನಂಬಿಕೆಯಿಲ್ಲದ್ದಾಗಿ, ಅಸೂಯೆಯಾಗಿ.

Jealousy, Jealousness, s. n. ಶಂಕೆ, ಅನುಮಾನ, ಅಸೂಯೆ, ಅಪನಂಬಿಕೆಯು, ಕಸ್ತುರಿ, ವಿಕೃತಿ, ಶಾಂಕಿತನ. v. *Suspicion.* (*to cause jealousy*) ಶಂಕೆಪಡಿಸ, ಅನುಮಾನಪಡಿಸ.

To Jeer, v. a. ಚೆಚ್ಚೇರ ಮಾಡ, ಅಪಹಾಸ್ಯಮಾಡ, ಚಕ್ಕಂದಮಾಡ, ವಿಕಟಾಳಿಮಾಡ. v. *To gibe, scoff, mock, jest, &c.*

Jeerer, s. n. ಚಚ್ಚೇರಗಾರ, ಅಪಹಾಸ್ಯಗಾರ, ಚಕ್ಕಂದಗಾರ, ಹಾಸ್ಯಗಾರ.

Jeeringly, ad. ಕುಚೇಷ್ಟೆಯಾಗಿ, ಚಕ್ಕಂದವಾಗಿ, ಪರಿಹಾಸ್ಯವಾಗಿ, ಹಾಸ್ಯವಾಗಿ.

Jehovah, s. n. ಕರ್ತನು. v. *God.*

Jejune, a. ಬತ್ತಿದ, ಬರಿದಾದ, ಒಣಗಿದ.

Jellied, part. ಬಿಕ್ಕೊಂಡ, ಘಟ್ಟಿಯಾದ, ಒಶಿರೆ. v. *Congealed.*

Jelly, s. n. ಪಾಕ, ಪಾಕು.

Jennet, s. n. ಕುದುರೆ.

Jeopardy, s. n. ಮೋಸ, ಗಂಡಾಂತ್ರ. v. *Hazard, danger, peril. (to be in jeopardy)* ಮೋಸದಲ್ಲಿರ, ಗಂಡಾಂತ್ರದಲ್ಲಿರ, ಅಪಾಯದಲ್ಲಿರ.

To Jerk, v. a. *(move quick)* ಝಟಿಕಾಯಿಸ; *(to strike with a quick smart blow)* ಚಟೂಕತ್ತಾಗಿ ಶಿವಿಯು; *(to strike up)* ಸಂಬೋಧಿಸ, ಅಕ್ಷೇಮುಖೀಕರಿಸ.

Jerk, s. n. *(a smart quick lash)* ಅಕಸ್ಮಾತ್ತಾದ ಚುಚ್ಚುವಿಕೆ; *(a sudden spring)* ಧುಡುಂ; *(a sudden jolt)* ಧಡಕ್ಕು.

Jerken, s. n. ಚೊಗಾಯಿ, ಅಂಗಿ.

Jessamine, s. n. ಜಾಜಿಪುಷ್ಪ. v. *Jasmin.*

Jest, s. n. ಹಾಸ್ಯ, ಚಕ್ಕಂದ; *(one who is the jest of every one, a laughing stock)* ಪರಿಹಾಸ್ಯಕ್ಕಾಸ್ಪದವುಳ್ಳವನು, ಛೀಮಾರಿ; *(in jest)* ವೇಷವಾಗಿ, ಕಪಟವಾಗಿ, ಹಾಸ್ಯವಾಗಿ. v. *Feignedly.*

To Jest, v. n. ಹಾಸ್ಯಮಾಡ, ಚಕ್ಕಂದಾಮಾಡ.

Jester, s. n. ಹಾಸ್ಯಗಾರ, ಕುವಾದಿ, ನಕಲಿಯವನು, ನರ್ಮಕೃತ್ತು, ನರ್ಮಕೃತನು, ವಿಕಟಕವಿ.

Jesting, s. n. ಕುವಾದ, ಕುಚೋದ್ಯ. v. *Merriment. (without jesting, jesting apart)* ವೇಷವಿಲ್ಲದೆ, ನಿಶ್ಚಯವಾಗಿ.

Jestingly, ad. ಕುಚೋದ್ಯವಾಗಿ, ಕುವಾದವಾಗಿ.

Jet, or Jet d'eau, s. n. ಕಾರಂಜಿ.

To Jet, v. n. ಬಗಿಯಾಗಿನಡಿಯು, ಉಬ್ಬಿಬರ. v. *To jut, strut, jolt.*

Jetty, a. ಕಪ್ಪಿನ. v. *Black.*

Jewel, s. n. ಆಭರಣ, ವಸ್ತು, ಭೂಷಣ, ಚಿನ್ನದಾಭರಣ, ಪಸದನ, ಶೋಢ, ಪಚ್ಚವು.

Jeweller, s. n. ಮಣಿಕಾರ, ರತ್ನಗಾರ, ಕುಂದನಗಾರ.

Jew's-harp, s. n. ಮೋಚಕಂಗು.

If, conj. (in comp.) expressed by ರೆ and ತ್ರೆ; *If* he is alive when you get there give him this medicine ನೀಹೋಗುವಾಗ್ಯೆಯವನುಬದುಕಿದ್ದರೆ ಈ ಔಷಧವನವನಿಗೆಕೊಡು; He seems as *if* he were deaf ಅವನುಕಿವುಡನಹಾಗೆಕಾಣಿಸುತ್ತಾನೆ, or ಅವನುಕಿವುಡನಹಾಗಿಧಾನೆ; *If* you had not come then I knew not what I should have done ನೀನಾಗಬಾರದಿದ್ದರೆನನ್ನೇನಾಗು ತಿಳಿಯೋರಿಲ್ಲದು; He doubts *if* two and two be four ಅವನೆರಡೂಯೆರಡೂನಾಲ್ಕುಹವುದೋ ಅಲ್ಲವೋಯೆಂದುಸಂದೇಹಪಡುತ್ತಾನೆ; He is a rich man, *if* not the richest in the town ಅವನುಪಟ್ಟಣದೊಳಗೆಲ್ಲರಿಗಿಂತ್ತಾಭಾಗ್ಯವಂತ್ರನಾಗಿಲ್ಲದೇಯಿದ್ದರೂ ಅವನುಭಾಗ್ಯವಂತ್ರನೆ; I know not *if* I may speak ನಾನುಮಾತಾಡಬಹುದೋಬಾರದೋತಿಳಿಯದು; What *if* he is ! never mind ಅವನಿದ್ದರೂಚಿಂತ್ರೆಯಿಲ್ಲಾ, or ಅವನಿದ್ದರಾಯಿತಲಿಯೇನುಚಿಂತ್ರೆಯಿಲ್ಲ; *If* not ಇಲ್ಲದಿದ್ದರೆ; *If* he is not there ಅವನಲ್ಲಿಯಿಲ್ಲದಿದ್ದರೆ; But *if* ಆದರೆ; But *if* not ಇಲ್ಲವಾಯಿತೆ; And *if* ಮತ್ತಾದರೆ.

Igneous, a ಅಗ್ನಿಯ, ಬೆಂಕಿಯ, ಕಾವಿನ, ಜ್ವಾಲೆಯ, ಕಾಕಿಯ. v. *Fiery.*

Ignoble, a. ನೀಚದ, ಅಯೋಗ್ಯದ, ಕೆಟ್ಟ. v. *Mean, worthless.*

Ignobly, ad. ನೀಚವಾಗಿ, ಅಯೋಗ್ಯವಾಗಿ.

Ignominious, a. ಅಯೋಗ್ಯದ, ನೀಚವಾದ, ಮಾನಹೀನದ. v. *Base.*

Ignominiously, ad. ನಾಚಿಕೆಯಾಗಿ, ನೀಚವಾಗಿ, ಮಾನಭಂಗವಾಗಿ, ಅಪಕೀರ್ತಿಯಾಗಿ.

Ignominy, s. n. ಮಾನಭಂಗ, ನೀಚತನ, ಅಯೋಗ್ಯತನ, ದುಷ್ಕೀರ್ತಿ, ಕಜ್ಜೇರಿ. v. *Disgrace, reproach, shame, baseness, meanness.* (*to brand with ignominy*) ಮಾನಭಂಗಮಾಡು; (*to be branded with ignominy*) ಮಾನಭಂಗವಾಗು.

Ignoramus, s. n. ಮಂದಮತಿಯವ, ಅಜ್ಞಾನಿ, ಪಾಮರ, ಮುಠ್ಠಾಳ, ಜಡ್ಡ. v. *Fool.*

Ignorance, s. n. ಅಜ್ಞಾನ, ಬುದ್ಧಿಜಾಡ್ಯ, ಅವಿದ್ಯೆ, ಮುಠಾಳತನ, ಮೂಢತ್ವ; (*pretended ignorance*) ಮರುಳುತನ.

Ignorantly, ad. ಅಜ್ಞಾನವಾಗಿ, ಬುದ್ಧಿಜಾಡ್ಯವಾಗಿ.

Ignorant, a. ಅಜ್ಞಾನದ, ಅರಿಯದ, ಮೂಢತ್ವದ.

Jig, s. n. (*dance or tune*) ಜಿಂನಾಟ, ಕುಣಿದಾಡುವಿಕೆ.

Jilt, s. n. ಟಕ್ಕಿ, ಒಜಾರಿ, ಮೋಸಗಾರಿ.

To Jilt, v. a. ಟಕ್ಕಿಸು, ಮೋಸಮಾಡು.

Jingle, s. n. ಘಣಾಘಣಾ, ಝಣಾಝಣಾ.

To Jingle, v. n. ಝಣಝಣಿಸು.

To Regale, v. a. ಉಪಶಮನಮಾಡು, ಸಂತೋಷಪಡಿಸು, ಆಪ್ಯಾಯನಮಾಡು.

Regalement, s. n. ಉಪಶಮನೆ, ವಿಶ್ರಾಂತಿ, ಆಪ್ಯಾಯನ. v. *Refreshment, entertainment.*

To Regard, v. a. *(value, esteem)* ಸಂಮಾನಿಸು, ಪ್ರೀತಿಯಿಡು, ಇಚ್ಛೆಯಿಡು; *(to observe, attend to, remark)* ನೋಡು, ವಿಚಾರಿಸು; *(to have a relation to)* ಸಂಬಂಧವಾಗಿರು, ಸಂದರ್ಭವಾಗಿರು, ಹೊಂದಿದ್ದಾಗಿರು; *(to regard one's promise)* ಮಾತುನಡಿಸು.

Regard, s. n. *(respect, reverence, affection)* ಮಾನ, ವಂದನೆ, ಪ್ರೀತಿ, ಮಮತೆ; *(attention)* ಶ್ರವಣ, ಮನಸ್ಸುಕೊಡುವಿಕೆ, ಪರಾಮರಿಕೆ; *(reference, relation)* ಸಂಬಂಧ, ಸಂದರ್ಭ; It *regards* your soul ಇದುನಿನ ಆತ್ಮಸಂಬಂಧವೆ; I say it in *regard* to him ಇದರಂನ ಅವಂನ ಕುರಿತು ನಾಹೇಳುತ್ತೇನೆ; This is better in *regard* to that ಅದಕ್ಕಿಂತ ಇದುವಾಸಿ, ಅದರಂ ನೋಡ ಇದುವೊಳ್ಳೇದು.

Regardable, a. ವಿಚಾರಿಸತಕ್ಕ, ಪರಾಮರಿಸತಕ್ಕ, ಶೋಧಿಸತಕ್ಕ. v. *Observable.*

Regarded, part. *(esteemed)* ಸಂಮಾನಿಸಿದ, ಪ್ರೀತಿಪಟ್ಟ, ಮಮತೆಯಾದ. v. *Observed, noticed, remarked.*

Regardful, a. ಮರ್ಯಾದೆಯ, ಮಾನದ, ಉಪಚರಣೆಯಾದ, ಅನುನಯದ. v. *Attentive, respectful.*

Regardfully, ad. ಮರ್ಯಾದೆಯಾಗಿ, ಮಾನವಾಗಿ, ಉಪಚರಣೆಯಾಗಿ, ಅನುನಯವಾಗಿ. v. *Attentively, respectfully.*

Regardless, a. ಅಜಾಗ್ರತೆಯ, ಮರ್ಯಾದೆಯಿಲ್ಲದ. v. *Careless, inattentive.*

Regency, s. n. *(government, authority)* ಅಧಿಪತ್ಯ, ಅರಸಾಳ್ವಿಕೆ, ರಾಜ್ಯಭಾರ; *(government by a viceroy)* ಪೇಷ್ಕಾರಿಕೆ, ನಾಯಬುತನ.

To Regenerate, v. a. ಪುನರುತ್ಥಾಪಿಸು, ಮರಳಿಬತಕು, ಜ್ಞಾನೋತ್ಪತ್ತಿಮಾಡು. v. *To produce.*

Regenerate, a. ಪುನರುದ್ಭವಿಸಿದ, ಪುನರುದ್ಭವಿಸಲ್ಪಟ್ಟ, ಜ್ಞಾನೋತ್ಪತ್ತಿಯಾದ.

Regeneration, s. n. ಜ್ಞಾನೋತ್ಪತ್ತಿ, ಪುನರ್ಜನ್ಮ, ಜ್ಞಾನಜನ್ಮ.

Regent, s. n. *(governing)* ರಾಜ್ಯಾಧಿಪತಿ, ದೇಶಾಧಿಪತಿ; *(a regent)* ನಾಯಬು, ರಾಜಮಂತ್ರಿ, ಪೇಷ್ಕಾರ. v. *Viceroy, lieutenant.*

Regicide, s. n. *(the act)* ರಾಜಹತ್ಯೆತನ.

Regicide, s. n. *(the individual)* ರಾಜಹತ್ಯಕ.

Regimen, s. n. *(medical prescription for diet)* ಪಥ್ಯ.

Regiment, s. n. ಜಮಾತಿ, ಠಾಣೆ.

Regimental, a. ಜಮಾತಿಯ, ಠಾಣುವೆಯ. v. Also *military.*

Region, s. n. ದೇಶ, ರಾಜ್ಯ, ಸೀಮೆ, ರಾಷ್ಟ್ರ. v. *Land, country, district. (in every region)* ಸಕಲದೇಶದಲ್ಲಿ, or ಸಮಸ್ತಸೀಮೆಯಲ್ಲಿ, or ಸಕಲರಾಷ್ಟ್ರದಲ್ಲಿ.

Register, s. n. ಹಾಸಲ್ದ ಪ್ರಿರ, ನ್ಯಾಯಪದ್ಧತಿಯ ಪುಸ್ತಕ, ದಪ್ತರವು, ಲಾವಣಾಪಟ್ಟಿ.

To Register, v. a. ದಪ್ತರದಲ್ಲಿ ದಾಖಲುಮಾಡ, ಬರದಿಡ, ಲಾವಣಾಮಾಡ. v. *To record.*

Register, s. n. *(a keeper of records)* ದಪ್ತರ ವಿಡುವವ, ಲಾವಣಾಗಾರ.

Registry, s. n. *(a place where registers are kept)* ದಪ್ತರಖಾನೆ, ಲಾವಣಾಮಾಡುವಸ್ಥಳ.

Regorge, v. a. ವಾಂತಿಮಾಡ, ವಮನಮಾಡ, ಉಬ್ಬಳಿಸ. v. *To omit*; also *to swallow.*

To Regrant, v. a. ತಿರಿಗಿಕೊಡ, ಮತ್ತದಯಪಾಲಿಸ.

Regress, s. n. *(passage back)* ಹಿಂಧಾಯುವಿಕೆ, ಹಿಂದಕ್ಕೆಬರುವಿಕೆ; *(egress and regress)* ಮುಂದೆಹಿಂದಕ್ಕೆಹಾಯುವದು, ಹಿಂದೆಮುಂದಕ್ಕೆಹಾಯುವದು.

Regret, s. n. ಅನುತಾಪ, ಮನಸ್ತಾಪ, ಪಶ್ಚಾತ್ತಾಪ, ದುಃಖ, ಚಿಂತೆ. v. *Sorrow, anguish, grief, vexation, lamentation, repentance.*

To Regret, v. a. ಮನಸ್ತಾಪಪಡ, ಪಶ್ಚಾತ್ತಾಪಪಡ, ಚಿಂತ್ರೆಪಡ, ದುಃಖಪಡ, ಖೇದಪಡ.

Regretted, part. ಮನಸ್ತಾಪಪಟ್ಟ, ಪಶ್ಚಾತ್ತಾಪಪಟ್ಟ, ಚಿಂತ್ರೆಪಟ್ಟ, ದುಃಖಪಟ್ಟ.

Regular, a. ಕ್ರಮವಾದ, ಪಾಂಙ್ರವಾದ, ಸರಿಯಾದ, ಪದ್ಧತಿಯ; *(regular troops)* ಮುಸ್ತೈದಿಯಾದ ಜಮಾತಿ, ಬಂದುಕಟ್ಟಾದ ಸೈನ್ಯ.

Regularity, s. n. ಕ್ರಮವು, ಪದ್ಧತಿಯು, ಸರಿಯಾಗಿರುವಿಕೆ; *(without regularity)* ಕ್ರಮವಿಲ್ಲದ, ಸರಿಯಿಲ್ಲದ, ಯದ್ವಾತದ್ವದ, ಅಕಟಾವಿಕಟದ, ಪಾಂಕ್ತವಿಲ್ಲದ.

Regularly, ad. ಕ್ರಮವಾಗಿ, ಪಾಂಕ್ತವಾಗಿ, ಸರಿಯಾಗಿ; *(regularly connected or joined)* ಹೊಂದಿಕೆಯಾಗಿ, ಸಂಬಂಧವಾಗಿ.

To Regulate, v. a. ಸರಿಮಾಡ, ಹೊಂದಿಸ, ದಿಟ್ಟಿಮಾಡ, ನಡಿಸ, ಕ್ರಮಮಾಡ. v. *To adjust, arrange, order, direct.*

Regulated, part. ದಿಟ್ಟಿಮಾಡಿದ, ಸರಿಮಾಡಿದ, ಶಿಟ್ಟಿಗೆಮಾಡಿದ, ಕ್ರಮವಾದ.

Regulation, s. n. ನಡಸುವಿಕೆ, ಪದ್ಧಾವಳಿ, ಕಟ್ಟು, ಮರ್ಯಾದೆ, ನೇಮಕ, ಕ್ರಮ v. *Arrangement, method.* (*a regulation*) ಆಜ್ಞೆ, ಕಟ್ಟಳೆ, ನೇಮಕ, ಹುಕುಮು. v. *Rule, order.*

Regulator, s. n. ನಡಸುವವ, ಕಟ್ಟುಮಾಡುವವ, ಪದ್ಧಾವಳಿಯವ, ನೇಮಕದವ, ದಿಟ್ಟಮಾಡುವವ.

To Regurgitate, v. a. ಹಿಂದಕ್ಕೆಹೊಯ್ಯು.

Rehearsal, s. n. ಹೇಳಿದ್ದೇಹೇಳುವಿಕೆ, ಪೂರ್ವಹೇಳಿದ್ದೇಹೇಳುವಿಕೆ. v. *Repetition, recital.*

To Rehearse, v. a. ವಿವರಶಃಯಾಗಿಹೇಳು, ಹೇಳಿದ್ದೇಹೇಳು, ವಿವರವಾಗಿಹೇಳು, ಸಾಂಗೋಪಾಂಗವಾಗಿಹೇಳು, ಆಖ್ಯಾನವಾಗಿಹೇಳು. v. *To repeat, relate.*

Rehearsed, part. ವಿವರವಾಗಿಹೇಳಿದ, ಉಚ್ಚರಿಸಿದ, ಸಾಂಗೋಪಾಂಗವಾಗಿಹೇಳಿದ.

To Reject, v. a. ತಿರಸ್ಕರಿಸು, ಉಲ್ಲಂಘಿಸು, ತೆಗದುಹಾಕು, ಬೇಡೆಂದೆನ್ನು, ಪ್ರತಿಷೇಧಮಾಡು, ನಿರಸಿಸು. v. *To refuse.*

Rejected, part. ತಿರಸ್ಕರಿಸಿದ, ಉಲ್ಲಂಘಿಸಿದ, ಪ್ರತಿಷೇಧಿಸಿದ.

Rejection, s. n. ಪ್ರತಿಷೇಧ, ತಿರಸ್ಕಾರ, ಉಲ್ಲಂಘನೆ, ನಿರಸನವು.

To Reign, v. n. (*exercise sovereign authority*) ಆಳು, ರಾಜ್ಯನಡಿಸು, ರಾಜ್ಯಭಾರವಹಿಸು. v. Also *to prevail, to flourish.*

Reign, s. n. (*sovereignty*) ರಾಜ್ಯಾಧಿಪತ್ಯ, ರಾಷ್ಟ್ರಾಧಿಪತಿತ್ವ.

Reigning, a. ಆಳುವ, ಪ್ರಭುತ್ವಮಾಡುವ.

To Reimburse, v. a. ಹಿಂದಕ್ಕೆಕೊಡು, ಬದಲುಕೊಡು. v. *To pay, repay.*

Reimbursement, s. n. ಈಡುಕೊಡುವಿಕೆ, ಹಿಂದಕ್ಕೆಕೊಡುವಿಕೆ, ಬದಲುಕೊಡುವಿಕೆ.

To Reimpregnate, v. a. ಪುನಹಾಸಾರಕೊಡು, ಪುನಹಾತುಂಬಿಸು, ಪುನಸ್ಸಂತಾನಕೊಡು.

Rein, s. n. (*of a bridle*) ಲಗಾಮಿನ ಬಾರು.

To Rein, v. a. ಬಿಗಿಹಿಡಿಯು, ಹಿಂದಕ್ಕೆಯಳೆಯು. v. *To bridle*; also *to check, restrain, controul.*

Reins, s. n. ಟೊಂಕ, ನಡುವು. v. *Kidney, waist, loins.*

To Reinstal, Reinstate, Reinvest, v. a. ಮತ್ತು ಗುರುಪಟ್ಟಕೊಡು, ತಿರಿಗಿನೇಮಿಸು, ಪುನರಾವೃತಮಾಡು.

Reinstated, a. ಬಹಲು.

To Rejoice, v. a. (*to be glad*) ಸಂತೋಷಪಡು, ಉಲ್ಲಾಸಪಡು, ಹರ್ಷಪಡು, ಇಂಪಾಗಿರು, ಸಂಭ್ರಮಪಡು, ಹಿಗ್ಗಿಹಿಗ್ಗಿದಾಡು; (*to make glad*) ಸಂಭ್ರಮಪಡಿಸು, ಉಲ್ಲಾಸಪಡಿಸು, ಸಂತೋಷಪಡಿಸು, ಆನಂದಪಡಿಸು. v. *To exhilirate, gladden.* (*to rejoice at another's misfortunes*) ಕೇಡಿಗೆಸಂತೋಷಪಡು, ಪರದುಃಖಕ್ಕೆಸಂತೋಷವಾಗಿರು.

Rejoiced, part. ಸಂತೋಷಪಟ್ಟ, ಆನಂದಪಟ್ಟ, ಉಲ್ಲಾಸಪಟ್ಟ, ಸಂಭ್ರಮಪಟ್ಟ.

Rejoicer, s. n. ಸಂತೋಷಪಡಿಸುವವ, ಸಂಭ್ರಮಪಡಿಸುವವ.

Rejoicing, s. n. ಸಂತೋಷಪಡುವದು, ಹರ್ಷಪಡುವದು, ಉಲ್ಲಾಸಪಡುವದು; (*a rejoicing day*)

ಉತ್ಸಾಹದದಿನ, ಸಂಕ್ರಮದದಿನ, ಮಂಗಳಪ್ರದವಾದದಿನ. v. *Jubilee.*

To Rejoin, v. a. *(join again)* ಮತ್ತೆಕಲಿಯು, ಮತ್ತೆಕೂಡು; *(to meet again)* ಮತ್ತೆಸಂಘಟ್ಟಿಸು, ಮತ್ತೆಕಲೆಬೀಳು; *(to reply)* ಪ್ರತ್ಯುತ್ತರಕೊಡು, ಬದಲುತ್ತರಕೊಡು, ಜವಾಬುಕೊಡು. v. *To answer.*

Rejoinder, s. n. ಬದಲುತ್ತರ, ಪ್ರತ್ಯುತ್ತರ, ಜವಾಬು. v. *Answer, reply.*

To Reiterate, v. a. ಮತ್ತೆಹೇಳು, ಉಚ್ಚರಿಸು, ತಿರಿಗಿತಿರಿಗಿಹೇಳು. v. *To repeat.*

Reiteration, s. n. ಉಚ್ಚರಿಸುವಿಕೆ, ತಿರಿಗಿತಿರಿಗಿಹೇಳುವಿಕೆ.

To Rejudge, v. a. ಮತ್ತೆಪರೀಕ್ಷಿಸು, ತಿರಿಗಿಶೋಧಿಸು, ತಿರಿಗಿವಿಚಾರಿಸು. v. *To re-examine, review.*

Rekindle, v. a. ಮತ್ತೆಉರಿಮಾಡು, ತಿರಿಗಿಯೊತ್ತಿಸು.

Relapse, s. n. ಮರಳಿಕೆ, ತಿರಿಗಿಬರುವಿಕೆ.

To Relapse, v. n. ಮರಳಿಸು, ತಿರಿಗಿಬರು; *(to relapse into error)* ತಪ್ಪಿಸಿಕೊಂಡುಹೋಗು, ಭ್ರಷ್ಟನಾಗು, ಸನ್ಮಾರ್ಗತಪ್ಪಿಹೋಗು; *(to relapse into a distemper)* ರೋಗಮರಳಿಸು, ತಿರಿಗಿದೊತ್ತಿಕೊಂಡುಬೀಳು.

To Relate, v. a. *(recite)* ಹೇಳು, ವಿವರವಾಗಿಹೇಳು, ಚಂನಾಗಿಹೇಳು, ಕಥಿಸು. v. *To tell.* *(to have reference)* ಸಂಮಂಧವಾಗಿರು, ತಗಲಾಗಿರು; *(to ally by kindred)* ನೆಂಟಸ್ತನಮಾಡು, ಕಲಿಗಲಪುಮಾಡು; It *relates* to it, it has a *relation* to it, it is *relative* to it ಇದುಅದರಸಂಮಂಧ, ಇದುಅದಕ್ಕೆಹೇತುವಾದಕಾರ್ಯ; How is he *related* to you? ಬಂಧುತ್ವದಲ್ಲಿಯವನುನಿನಗೇನಾಗಬೇಕು.

Relation, s. n. *(narrative)* ಹೇಳುವಿಕೆ, ವೃತ್ತಾಂತರಹೇಳುವಿಕೆ; *(a true relation)* ಯಥಾರ್ಥಮಾತು, ಕಂಡದ್ದುಕಂಡಂತೆಹೇಳುವಿಕೆ, ಮುತ್ತಾಯದಮಾತು; *(according to the foregoing relation)* ಮೇಲೆಹೇಳಿದಪ್ರಕಾರ, ಹಳಗಿನಸಂಗತಿಯಹಾಗೆ; *(relation, reference, regard, respect)* ಸಂಮಂಧ, ಹೇತುವೆ, ಕಾರಣ, ಸೋಪಾಧಿಕ; What *relation* is there between this and that? ಇದಕ್ಕೆಯದಕ್ಕೆಯೇನುಸಂಮಂಧ, ಇದಕ್ಕೆಯದಕ್ಕೆಯೇನುಸಂಗತಿ; *(relation, relationship, kindred)* ಬಂಧುತ್ವ, ನೆಂಟಸ್ತನ; *(a relation; relative, kinsman)* ನೆಂಟ, ಬಂಧು; Is he your *relative*? ಅವನುನಿನ್ನನೆಂಟನೆ; What *relation* is he to you? ಅವನುನಿನಗೇನಾಗಬೇಕು; He is a distant *relation* ಅವನುನನಗೆದೂರನೆಂಟ.

Relative, s. n. ನೆಂಟ, ಬಂಧುವು, ಬಾಂಧವ.

Relatively, ad. ಸಂಮಂಧಿಯಾಗಿ, ಸಂಬಂಧವಾಗಿ.

Relativeness, s. n. ಸಮಂಧತ್ವ, ಸಂಬಂಧತ್ವ, ಬಂಧುತ್ವ. v. *Relation.*

To Relax, v. a. *(slacken, make less tense)* ಸಡ್ಲಿಸು, ಬಿಗಿತಪ್ಪಿಸು. v. *To loose, open.* *(to remit, make less severe or rigorous)* ಸಡ್ಲಬಿಡು, ಸುಸೂತ್ರಮಾಡು, ಸುಖವುಮಾಡು, ಲಘುವುಮಾಡು; *(to become mild, less rigorous)* ಮಾರ್ಗಕ್ಕೆಬರು, ತಂಪಾಗಿಯಾಗು, ಖರವುಡುಗು, ಇಳಿತ

ರವಾಗ; (*to relax from labour*) ಕೆಲಸನಿಲ್ಲಿಸ, ಮೋಬಾಪುಮಾಡ. v. *To desist, cease.* (*to relax the bowels*) ಹೊಟ್ಟೆಗಡ್ಡಲಿಸ, ಹೊಟ್ಟೆ ಕ್ಷೂದಿಸ ; (*to relax the mind*) ಮನೋಲಯಾ ಸಕ್ತೀರಿಸ, ಮನೋವಿಶ್ರಾಂತಿಗೊಳಿಸ. v. *To recreate.*

Relaxation, s. n. (*slackness, looseness*) ಸಡ್ಲಿಕೆ ; (*cessation of restraint or severity*) ಸುಳುವು, ಸುಸೂತ್ರ, ಅನುಕರ, ಸಡ್ಲಬಿಡುವಿಕೆ ; (*cessation from labour*) ತೀರಿಕೆ, ವಿಶ್ರಮಿಕೆ, ವಿಶ್ರಾಂತಿಕೆ, ಸಾವಕಾಶ. v. *To rest, recess.* (*relaxation of mind*) ಮನೋತೀರಿಕೆ, ಮನೋಲಯಾ ಸಕ್ತೀರಿಕೆ. v. *Recreation.* (*relaxation of care or attention*) ಅಜಾಗ್ರತೆ, ಆಲಸ್ಯ. v. *Indolence.*

Relaxed, part. (*loosened*) ಸಡ್ಲಿಳಿದ; (*relaxed in constitution*) ಬಲಕ್ಷೀಣವಾದ. v. *Languid.* (*relaxed in moral or religious principles*) ಶೋಧ ಮಾಡುವಿಕೆ, ಕಕ್ಷುಲಾರಿ, ದುರ್ಮಾರ್ಗವಾದ.

Relay, s. n. (*of horses*) ಅಂಚೆಕುದುರೆ ; (*a relay of palankeen boys*) ಅಂಚೆಬೋಯಿಗಳು.

To Release, v. a. (*from confinement*) ಬಂಧನ ಪರಿಹರಿಸ, ಕಟ್ಟೆಬಿಡಿಸ ; (*a release from obligation*) ಋಣತೀರಿಸುವಿಕೆ ; (*a release from debt*) ಚೆಲ್ಲುಚೀಟು. v. *Discharge, receipt.*

To Relent, v. n. (*grow tender or compassionate*) ಮನಸುಕರಗ. v. *To soften, melt, relax, yield.*

Relentless, a. ಮನಸುಕರಗದ, ಪಶ್ಚಾತ್ತಾಪಪಡದ. v. *Merciless.*

Reliance, s. n. ಭರವಸ, ದೃಢನಂಬಿಕೆ, ವಿಶ್ವಾಸ. v. *Trust, confidence.*

Relick, Relicks, s. n. ನಿಲುವು, ಉಳಿವು, ಉಳಿಕೆ, ಬಾಕಿ ; (*a relick which recals the memory of any person*) ಹಿರೇರಗುರುತು, ಆನವಾಲು, ಗುರುತುಗಂಟು, ಅಡಿಯಾಳು ; (*a sacred relick*) ಪ್ರಸಾದ.

Relict, s. n. ವಿಧವೆ. v. *Widow.*

Relief, s. n. (*assistance*) ಸಹಾಯ, ಅನುಕೂಲ, ಕೆಲ, ಬಂದ, ಪೂರ್ವಕಳೆ; ಪಕ್ಷವು, ಪಕ್ಷಪಾತ. v. *Help, succour.* (*comfort*) ಸಮದಾಯಿಕೆ, ಆದರಿಕೆ. v. *Consolation.* (*remedy*) ಉಪಾಯ, ಪ್ರಯತ್ನ, ತಂತ್ರ.

To Relieve, v. a. (*assist*) ಸಹಾಯಕೊಡ, ಅನುಕೂಲವಾಗ, ಪಕ್ಷಪಾತವಾಗಿಬರ. v. *To help, succour, support, release.* (*to comfort*) ಸಮಜಾಯಿಸ, ಆದರಿಸ, ಸಮಾಧಾನಪಡಿಸ ; (*to relieve guard*) ಪಾರಿಬದಲಾಯಿಸ, ಪಹರಿಬದಲಾಯಿಸ, ಚೌಕಿಮಾರಿಸ ; (*to relieve from indigence*) ದರಿದ್ರಹರಿತಮಾಡ, ದರಿದ್ರಪರಿಹಾರಮಾಡ.

Relievable, a. (*assistable*) ಅನುಕೂಲವಾಗುವ; (*consolable*) ಆದರಿಸುವ, ಸಮಜಾಯಿಸುವ.

Relieved, part. (*assisted*) ಸಹಾಯಪಡೆದ, ವಗ್ರಾಸಿಪಡೆದ; (*comforted*) ಆದರಿಸಿದ, ಸಮದಾಯಿಸಿದ, ಸುದಾರಿಸಿದ.

Reliever, s. n. (*assistant*) ಸಹಾಯಕ, ಅನುಕೂಲಿಕ ; (*comforter*) ಆದರಿಸುವವ, ಸುದಾರಿಸುವವ, ಸಮದಾಯಿಸುವವ.

To Relight, v. a. (*light anew*) ತಿರಿಗಿಯು ಹಚ್ಚು.

Religion, s. n. ಮತವು. The Hindoos have ಷಣ್ಮತಗಳು six systems of religion : ಶೈವ *the followers of Seeva* ; ಶಾಕ್ತೇಯ *the followers of the goddesses* ; ಗಾಣಾಪತ್ಯ *the followers of Gunaisea* ; ಸೌರ *the worshippers of the Sun*; ಬೌದ್ಧ *the followers of Bowdha* ; ವೈಷ್ಣವ *the followers of Vishnoo.* (*the christian religion*) ಕ್ರೀಸ್ತುಮತವು; (*the mahommedan religion*) ಮ್ಲೇಂಛಮತವು; (*the religion of the magi*) ಯಾಜ್ಞವಲ್ಕ್ಯಮತವು; (*of the same religion*) ಒಂದೇಮತಸ್ತರು; (*observance of religion*) ಮತಾಚರಣೆ; (*the ceremonies of religion*) ಮತಕರ್ಮ, ಮತಾಚಾರ; (*observant of religion*) ಮತಾಚಾರ ಮಾಡುವ, ಮತಾಚಾರನಡಿಸುವ. v. *Religious.* (*of no religion*) ಮತಶೂನ್ಯವಾದ; (*of a bad religion*) ಅಯೋಗ್ಯಮತಸ್ತನಾದ; (*to embrace any religion*) ಮತಾಭಿಮಾನಿಸು, ಮತಕ್ಕೊಳಗಾಗು; (*to apostatise from any religion*) ಮತಭ್ರಷ್ಟನಾಗು.

Religionist, s. n. ಮತಸ್ಥನು.

Religious, a. ದೇವಭಕ್ತಿಯುಳ್ಳ. v. *Pious.* (*a religious life*) ಮತನಡವಳಿ, ಶ್ರದ್ಧೆ, ಭಕ್ತಿಭಾವ; (*a religious order or society*) ಒಂದು ಮತ, ವಂಶ ಘಣೆಕಟ್ಟು; (*a religious man*) ದೇವಭಕ್ತಿ, ದೈವಶ್ರದ್ಧೆ ನೇಮಸ್ಥದವ, ಸದಾಚಾರಿ, ಗುರುಭಕ್ತನು, ಮತಾಭಿಮಾನಿ; (*to observe religious duties*) ಮತಕರ್ಮನಡಿಸು, ಮತಾಚರಣೆಮಾಡು; (*religious*) ಮತಾಭಿಮಾನವುಳ್ಳ. v. *Punctual, strict, exact.*

Religiously, ad. ದೈವಭಕ್ತಿಯಾಗಿ, ದೇವರಾವಿಶ್ವಾಸವುಳ್ಳವನಾಗಿ. v. *Piously, reverently.* (*exactly, strictly*) ಧರ್ಮವಾಗಿ, ಸತ್ಯವಾಗಿ.

Religiousness, s. n. ದೇವಭಕ್ತಿಯು. v. *Religion, piety.*

To **Relinquish**, v. a. ವಿಸರ್ಜಿಸು, ಬಿಟ್ಟುಬಿಡು, ಪರಿತ್ಯಜಿಸು. v. *To leave, desert, quit, abandon, forbear, release.*

Relinquishment, s. n. ವಿಸರ್ಜನವು, ಬಿಟ್ಟುಬಿಡುವಿಕೆಯು, ಪರಿತ್ಯಜವು.

Relinquished, part. ವಿಸರ್ಜಿಸಿದ, ಬಿಟ್ಟುಬಿಟ್ಟ, ಪರಿಹರಿಸಿದ.

Relish, s. n. (*agreeable taste or flavour*) ರುಚಿಕರವು, ಕಂಪಾಗಿರುವದು, ಸೌಕರ್ಯ; (*as slight tasting of victuals, &c.*) ಪಕ್ವನೋಡುವದು, ಅಸ್ವಲ್ಪಂತಿದುನೋಡುವದು. v. *Sip, taste* ; also *liking, delight, cast, manner.* (*having a fine relish*) ರುಚಿಕರವಾದ, ಕಂಪಾಗಿರುವ; (*having no relish*) ರುಚಿಯಿಲ್ಲದ, ಅರುಚಿಯ.

To **Relish**, v. a. (*give a pleasing taste to any thing*) ರುಚಿಕರಮಾಡು, ಕಂಪುಗೆಮಾಡು, ಸೌಕರ್ಯಮಾಡು; (*to have a pleasing taste*) ರುಚಿಕರವಾಗಿರು, ಸೌಕರ್ಯವಾಗಿರು; (*to feel pleasure, like*) ಸಂಮತಿಪಡು, ಸಂತ್ರೋಷಪಡು, ಮನೋರಂಜನವಾಗು.

Relishable, a. (*liked*) ಮನೋರಂಜನವಾಗುವ, ಸಂತ್ರೋಷವಾಗುವ; (*agreeable to the palate*) ರುಚಿಕರವಾದ, ಸೌಕರ್ಯವಾದ.

Reluctance, s. n. ಅಸಂಮತಿ, ಅಸಂತುಷ್ಟ, ಅಸಮರ್ಪಕ. v. *Aversion, unwillingness.*

Reluctant, a. ಅಸಂಮತಿಯ, ಅಸಮರ್ಪಕದ. v. *Averse, unwilling.*

To Rely, v. n. *(put trust in)* ಭರವಸ ಮಾಡ, ನಂಬಿಕೊಳ್ಳ. v. *To confide, trust.*

To Remain, v. n. *(continue, tarry)* ನಿಲ್ಲು, ಆಲಸ್ಯ ಮಾಡ, ಜಂತ್ರಿ ಮಾಡ, ತಡಮಾಡ, ನಾವಕಾಶ ಮಾಡ. v. *To dwell, stay. (to be left as a remainder)* ಉಳಿಯ, ಮಿಗ; *(to endure, last)* ಬಾಳ, ಇರ. v. *To continue. (to remain behind)* ಹಿಂದಿರ, ಹಿಂದಕ್ಕೆನಿಲ್ಲ; *(to remain firm)* ಘಟ್ಟಿಯಾಗಿನಿಲ್ಲು, ಸ್ಥಿರವಾಗಿಯಿರ; *(to remain alone)* ಒಂಟಿಯಾಗಿರ, ಏಕಾಂಗಿಯಾಗಿರ; *(those who remain at home)* ಮನೆಯಲ್ಲಿಂತವರು.

Remainder, Remains, s. n. ಮಿಕ್ಕಿದ್ದು, ಉಳಿದದ್ದು. v. *Rest, residue. (remains, traces, vestiges)* ಗುರುತು, ಖೂನ; *(the body left by the soul)* ದೇಹ, ಶ್ರವ, ಶವ, ಕಳೇಬರ.

Remaining, part. ನಿಲ್ಲುವ, ಮಿಗುವ, ಉಳಿಯುವ.

To Remake, v. a. ಮತ್ತುಕಲ್ಪಿಸ, ತಿರಿಗಿ ಮಾಡ.

To Remand, v. a. *(send back)* ಹಿಂದಕ್ಕೆಕಳುಹಿಸ.

Remark, s. n. ಮಾತು, ವಚನ. v. *Observation. (a remark or annotation)* ಟಿಪ್ಪಣಿ.

To Remark, v. a. *(notice)* ನೋಡ, ಕಾಣ. v. *To observe, remark.*

Remarkable, a. ಅಪುರೂಪದ, ಆಶ್ಚರ್ಯದ, ವಾಡಿಕಿಲ್ಲದ, ಅಪೂರ್ವದ. v. *Rare, uncommon.*

Remarkableness, s. n. ಅಪುರೂಪವು, ಆಶ್ಚರ್ಯವು, ವಾಡಿಕಿಲ್ಲದ್ದು, ಅಪೂರ್ವ.

Remarkably, ad. ಅಪುರೂಪವಾಗಿ, ಆಶ್ಚರ್ಯವಾಗಿ, ವಾಡಿಕೆಲ್ಲದ್ದಾಗಿ; *(exceedingly)* ಬಹಳವಾಗಿ, ಯಥೇಷ್ಟವಾಗಿ, ಬ್ರಹ್ಮಾಂಡವಾಗಿ.

Remarker, s. n. ನೋಡುವವ. v. *Observer.*

Remarked, part. ನೋಡಿದ, ಕಂಡ. v. *Observed.*

Remediable, a. ಗುಣವಾಗತಕ್ಕ, ಯತ್ನವಾಗತಕ್ಕ.

Remediless, a. ಯತ್ನಿಸಕೂಡದ್ದು, ಉಪಾಯಮಾಡಕೂಡದ್ದು. v. *Helpless, irremediable.*

Remedy, s. n. ಉಪಾಯ, ತಂತ್ರ, ಪ್ರಯತ್ನ, ವೈದ್ಯ, ಯತ್ನ, ಚಿಕಿತ್ಸೆ. v. *Cure, medicine, antidote, reparation. (topical remedies)* ಒದಗಿದ ಉಪಾಯಗಳು, ಕೈಗೆಬಂದ ಉಪಾಯಗಳು, ಸಮಯೋಚಿತಗಳು.

To Remedy, v. a. ಗುಣ ಮಾಡ, ವಾಸಿಮಾಡ, ಜೀರ್ಣಾಕ್ಷಿ ಮಾಡ. v. *To heal, repair.*

To Remember, v. a. *(bear in mind)* ಜ್ಞಾಪಕ ಮಾಡ, ನೆನಪುಮಾಡ, ಮನಸ್ಸಿನಲ್ಲಿಯಿರ; *(to commit to memory)* ಪಾಠಮಾಡ, ಸ್ಮರ್ಗತಮಾಡ; *(to put in mind)* ಜ್ಞಾಪಕಕ್ಕೆತರಿಸ, ನೆಪ್ಪಿಗೆತರಿಸ. v. *To remind, mention.*

Rememberer, s. n. ಜ್ಞಾಪಕಮಾಡುವವ, ನೆಪ್ಪುಗಾರ, ನೆನಪಿನವ.

Remembering, s. n. ಜ್ಞಾಪಕಮಾಡುವದು.

Remembered, part. ಜ್ಞಾಪಕಮಾಡಿದ, ನೆನಪಾದ, ನೆಪ್ಪಾದ; *(to be remembered)* ಜ್ಞಾಪಕವಾಗಿರ, ನೆನಪಾಗಿರ, ನೆಪ್ಪಾಗಿರ.

Remembrance, s. n. ಜ್ಞಾಪಕ, ನೆನಪು, ನೆಪ್ಪು. v. *Memory, memorial.*

Remembrancer, s. n. ಜ್ಞಾಪಕಕ್ಕೆ ತರುವವ, ನೆನಪಿಗೆ ತರುವವ, ನೆಪ್ಪಿಗೆ ತರುವವ.

To Remind, v. a. ಜ್ಞಾಪಕಕ್ಕೆ ತರು, ಚಿತ್ತಕ್ಕೆ ತರು.

Reminded, part. ಜ್ಞಾಪಕಕ್ಕೆ ತರಲ್ಪಟ್ಟ, ಚಿತ್ತಕ್ಕೆ ತರಲ್ಪಟ್ಟ.

Remiss, a. ಅಜಾಗ್ರತೆ, ತಾತ್ಸಾರ, ಅಶ್ರದ್ಧೆ. v. *Careless.*

Remissly, ad. ಅಶ್ರದ್ಧೆಯಾಗಿ, ಅಜಾಗ್ರತೆಯಾಗಿ, ತಾತ್ಸಾರವಾಗಿ. v. *Carelessly.*

Remissness, s. n. ಅಜಾಗ್ರತೆಯು, ಅಶ್ರದ್ಧೆಯು, ತಾತ್ಸಾರವು. v. *Carelessness.*

Remission, s. n. ವಿಮೋಚನೆ, ಪರಿಹರಿಕೆ, ಕ್ಷಮಿಸುವಿಕೆ. v. *Pardon.* (*abatement*) ಕಡಿಮೆ, ಕೊರತೆ; (*cessation*) ನಿಲುವಿಕೆ, ತೀರಿಕೆ, ವಿಶ್ರಾಂತಿ. v. Also *relaxation, release.* (*remission made to a renter on account of the depredation of an enemy, &c.*) ಪಾಯಮಾಲಿ.

To Remit, v. a. (*pardon*) ಮನ್ನಿಸು, ವಿಮೋಚನೆಮಾಡು, ಪರಿಹರಿಸು. v. *To forgive.* (*to send back*) ಹಿಂದಕ್ಕೆ ಕಳಿಸು; (*to remit to prison*) ಸೆರೆಯಲ್ಲಿ ಹಾಕಿಬಿಡು, ಬಂಧಕದಲ್ಲಿಯಿಡು; (*to remit money*) ಹುಂಡಿ ಕಳುಹಿಸು, ಹೋಗಿ ಕಳುಹಿಸು. v. *To send;* also *relax, refer, resign, release, restore, slacken, abate.*

Remittance, s. n. (*of money*) ಇರಸಾಲು, ರಸ್ತು, ಚಲಾವಣೆ.

Remnant, s. n. ಮಿಕ್ಕದ್ದು, ಬಾಕಿ, ನಿಲುವು. v. *Remainder.*

Remnant, a. ಮಿಕ್ಕಿದ, ಉಳಿದ, ಬಾಕಿಯಾದ.

Remonstrance, s. n. ಗರ್ಜನ, ತರ್ಜನೆ, ಹದಲಿಕೆ, ಪಿರ್ಯಾದಿ.

To Remonstrance, v. a. ರದ್ದುಬದ್ದು ಮಾಡು, ಗರ್ಜನತರ್ಜನೆಮಾಡು, ಹದ್ದಲಿಸು, ಗದರಿಸು.

Remonstrancer, s. n. ರದ್ದುಬದ್ದು ಮಾಡುವವ, ಖದಾಖದಿ ಜವಾಬುಸವಾಲಿನವ.

Remorse, s. n. (*pain of guilt*) ಬ್ರಹ್ಮಹತ್ಯ, ಅನುತಾಪ, ಪಶ್ಚಾತ್ತಾಪ; (*remorse of conscience*) ಮನೋಕ್ಲೇಶ; (*tenderness*) ಕರುಣ, ಅಂತಃಕರುಣ, ಮಮತೆ. v. *Horror, anguish, repentance, pity.*

Remorseful, a. ಮಮತೆಯ, ಅಂತಃಕರುಣೆಯ. v. *Compassionate.*

Remorseless, a. ನಿರ್ದಯಾಳ್ವದ, ಕಟಿಕತನದ. v. *Merciless, cruel.*

Remote, a. ದೂರವಾದ, ದೂರ ಶೋಪಾಸ್ತಿಯಾದ. v. *Distant, foreign.* (*more remote*) ಅತಿದೂರವಾದ; ಮತ್ತು ದೂರ; (*most remote*) ದೂರಕ್ಕೆ ದೂರ, ಯಲ್ಲಾದಕ್ಕೆ ದೂರ, ಅಷ್ಟಕ್ಕೆ ದೂರ.

Remotely, ad. ದೂರವಾಗಿ.

Remoteness, s. n. ದೂರ, ದೂರ ಶೋಪಾಸ್ತಿ. v. *Distance.*

Removable, a. ಜಂಗಮದ, ಚರದ, ಚರವಾದ.

Removal, Remove, s. n. (*changing one's abode*) ಪಲ್ಲಟೆ, ಸ್ಥಾನಪಲ್ಲಟೆ, ನಿರ್ಗಮ, ಬಿಟ್ಟುಹೋಗುವಿಕೆ, ಕೂಚು; (*departing from a place*)

ಹೊರಡುವದು; ಹೊರಟುಹೋಗುವದು, ಪ್ರಯಾಣ; *(removal from office)* ತೆಗದುಹಾಕುವಿಕೆ, ಬರತರಫುಮಾಡುವಿಕೆ.

To Remove, v. n. *(go from one place to another)* ಸ್ಥಳಬಿಟ್ಟುಹೋಗ, ಸ್ಥಳತಪ್ಪಿಸ, ನಿರ್ಗಮಮಾಡ, ಕೂಚುಮಾಡ; *(depart from a place)* ಹೊರಟುಹೋಗ, ದಾಟಿಹೋಗ, ಯಾತ್ರೆಗಮನ; *(to remove any thing from its place or to a distance)* ಯೆತ್ತಿಡ, ಸ್ಥಳತಪ್ಪಿಸ, ಬಿಡುವುಮಾಡ; *(to remove from office)* ತೆಗದುಹಾಕ, ಬರತರಫುಮಾಡ.

Removed, part. ಬಿಡುವುಮಾಡಿದ, ಬಿಟ್ಟುಹೋದ, ನಿರ್ಗಮಮಾಡಿದ, ಕೂಚುಮಾಡಿದ; *(removed from office)* ಬರತರಫುಮಾಡಿದ, ತೆಗದುಹಾಕಿದ.

Remover, s. n. *(of any thing)* ಯೆತ್ತುವವ, ತೆಗದಿಡುವವ; *(a remover of himself)* ಸ್ಥಳಬಿಡುವವ, ಬಿಟ್ಟೋಗುವವ.

To Remount, v. n. *(on horseback)* ತಿರಿಗಿಯೇರ, ಪುನರಾರೂಢವಾಗ.

To Remunerate, v. a. ಪ್ರತ್ಯುಪಕಾರಮಾಡ, ಈಡಿಗೀಡುಮಾಡ. v. *To reward.*

Remuneration, s. n. ಬದಲಿಗೆಬದಲು, ಪ್ರತಿದಾಯ, ಸೇರವು.

Remunerator, s. n. ಪ್ರತ್ಯುಪಕಾರಮಾಡುವವ.

Rencounter, s. n. *(clash, collision)* ಎಬ್ಬರಿಗೊಬ್ಬರ ಹಾಯಿಕೆ, ದಿಚ್ಚಾದಿಕೆ, ತಾಕುವದು; *(an unpremeditated combat)* ಮುಖಹತ್ತಿಕೆ, ಏಕಾಏಕಿಜಗಳ, ಕೈಕಲುವಿಕೆ; *(an accidental meeting)* ಅನಾಯಾಸದದರ್ಶನ, ಅಕಸ್ಮಾದ್ದರ್ಶನ.

To Rencounter, v. n. *(clash)* ಮುಖಾಮುಖಿಹಾಯ, ದಿಚ್ಚಾದ, ತಲೆಗೆತಲೆತಾಕ, ಕಟಿಬೀಳ; *(to meet unexpectedly)* ಅಕಸ್ಮಾದ್ದರ್ಶನವಾಗ, ಅನಾಯಾಸದರ್ಶನವಾಗ. v. *To encounter, skirmish.*

To Rend, v. a. ಹರಿಯ. v. *To tear, lacerate.*

Render, s. n. ಹರಿಯುವವ. v. *Tearer.*

To Render, v. a. ಹಿಂದಕ್ಕೆಕೊಡ, ತಿರಿಕೊಡ, ಸರಿತಪ್ಪ. v. *To return, restore.* *(to translate)* ಮಾರ್ಫ, ಟೀಕಿಸ, ಪ್ರತಿಭಾಷೆಮಾಡ. v. *To interpret.* *(to render out of Carnátaca into English)* ಕರ್ನಾಟಕಯಿಂಗಿಲೀಷುಮಾಡ, ಕನ್ನಡಯಿಂಗರೀಜುಮಾಡ; *(to yield, give up)* ಒಪ್ಪಿಸ, ಒಪ್ಪಿಕೊಡ. v. *To surrender.* *(to make)* ಮಾಡ; *(to render a reason)* ಕಾರಣಹೇಳ, ಹೇತುವೆಹೇಳ; *(to render necessary)* ಅಕ್ಕರೆಗೆಬರಮಾಡ, ಅಗತ್ಯವಾಗುವಹಾಗೆಮಾಡ; *(to render a thing clear)* ನಿರ್ಮಲಮಾಡ; *(to give)* ಕೊಡ. v. Also *to offer, exhibit.*

Rendezvous, s. n. ಕೂಡಬೀಳ್ವಕೆ, ಕಲೆಬೀಳ್ವಕೆ. v *Assembly, meeting.* *(the rendezvous of an army)* ದಂಡುಕಲೆಯುವಸ್ಥಳ; *(the place of rendezvous)* ಪ್ರದೇಶ, ಜಂಗುಳಿಸ್ಥಳ, ಮಂದೆ.

To Rendezvous, v. n. ಕೂಡಿಬರ, ಕೂಡ, ಜಮೆಯಾಗ, ಜಾತೆಸೆಯಾಗ.

Renegado, s. n. ಮತಭ್ರಷ್ಟ, ಚಲಾಯಿಸಿದ. v. *Apostate, deserter.*

To Renew, v. a. (*renovate*) ಹೊಸ್ತಾಗಿಮಾಡು; (*to renew friendship*) ಪುನಸ್ಸ್ನೇಹಮಾಡು, ಪುನಸ್ಸಂಧಾನಮಾಡು; (*to renew, repeat*) ತಿರಿಗಿಮಾಡು; (*to renew solicitation*) ಮತ್ತು ಮನವಿಮಾಡಿಕೊಳ್ಳು, ಪುನರ್ಪ್ರಾರ್ಥನೆಮಾಡು; (*to renew the mind*) ನೂತನ ಮನಮಾಡು, ಗುಣಮಾಡು.

Renewable, a. ಹೊಸದಾಗಿಮಾಡತಕ್ಕ, ತಿರಿಗಿ ಮಾಡತಕ್ಕ.

Renewal, s. n. ಹೊಸ್ತಾಗಿಮಾಡುವಿಕೆ, ಪುನಸ್ಸೃಷ್ಟಿ, ಪುನರ್ನಿರ್ಮಾಣ. v. *Reparation, repetition.*

Renewed, part. ಹೊಸದಾದ, ಪುನಃಹೊಸದಾದ.

Rennet, s. n. (*for curdling milk*) ಹೆಪ್ಪು.

To Renovate, v. a. ಪುನಸ್ಸೃಷ್ಟಿಮಾಡು, ಪುನಃ ನೂತನವಾಗಿಮಾಡು. v. *To renew.*

Renovation, s. n. ಪುನಸ್ಸೃಷ್ಟಿ, ಯಥಾಸ್ಥಿತಿ.

To Renounce, v. a. ಪರಿತ್ಯಜಿಸು, ವಿಸರ್ಜಿಸು, ಇಲ್ಲೆಂದುಹೇಳು. v. *To disown.* (*to renounce all right to any thing*) ಹೊರದಾಡು.

Renounced, part. ಪರಿತ್ಯಜಿಸಿದ, ವಿಸರ್ಜಿಸಿದ.

Renown, s. n. ಕೀರ್ತಿ, ಪ್ರಸಿದ್ಧಿ, ಖ್ಯಾತಿ, ಪ್ರಖ್ಯಾತಿ, ಘನತೆ, ಪ್ರಸಿದ್ಧಿ, ನಾಮ, ಪ್ರತಿಷ್ಠೆ, ಹೆಸರು, ಪ್ರಭಾವ, ಮೂರ್ತಿವಂತ್ರ. v. *Glory.*

Renowned, part. ಪ್ರಖ್ಯಾತಿಯ, ಕೀರ್ತಿಯ, ಖ್ಯಾತಿಯ, ಪ್ರಸಿದ್ಧಿಯ, ಮಹಿಮೆಯ. v. *Glorious, illustrious.*

Rent, s. n. (*fissure, break*) ಬಿರುಕು, ಛಿದ್ರ, ಕೋರಿ, ಮಳಲರಿವಿ, ಬೆಂಪು. v. *Gag, chasm, laceration.* (*rent, income, revenue*) ಸುವರ್ಣಾದಾಯ, ಹುಟ್ಟುವಳಿ; (*house rent*) ಮನೆಬಾಡಿಗೆ, ಮನೆಗುತ್ತಿಗೆ, ಕೊಡುಕೂಲಿ; (*annual rent*) ಮನೆಚೆರಿಗೆ, ಗುತ್ತಿಗೆ; (*monthly rent*) ತಿಂಗಳಗುತ್ತಿಗೆ, ತಿಂಗಳಬಾಡಿಗೆ.

To Rent, v. a. (*let to a tenant*) ಬಾಡಿಗೆಕೊಡು; (*to hold by paying rent*) ಮನೆಬಾಡಿಗೆತಕ್ಕೊಳ್ಳು.

Rentable, a. ಬಾಡಿಗೆಯ, ಕೊಡುಕೂಲಿಯಾದ.

Rental, Rent-roll, s. n. ಜಮಾಬಂದಿಲೆಖ್ಖ.

Renter, s. n. ಬಾಡಿಗೆತಕ್ಕೊಂಬುವವ.

Rent-free, a. ಬಾಡಿಗಿಲ್ಲದ, ಮಾನ್ಯದ; (*one who lives rent free*) ಮಾನ್ಯದೊಕ್ಕಲು.

Renunciation, s. n. ವಿಸರ್ಜನೆ, ತ್ಯಾಗ, ತ್ಯಜನೆ; (*of the world*) ಪ್ರಪಂಚಬಿಡುವಿಕೆ, ವೈರಾಗ್ಯತ್ವ, ಸಂನ್ಯಸ, ಸಂನ್ಯಾಸ.

Repaid, a. ಹಿಂದಕ್ಕೆಕೊಟ್ಟ, ತಿರಿಗಿಕೊಟ್ಟ, ಬದಲಾಯಿಸಿದ.

To Repair, v. a. ಜೀರ್ಣಿಕೆಮಾಡು, ನೆಟ್ಟಗೆಮಾಡು, ಸೊಪ್ಪನಿಡು; (*to repair a house*) ಮನೆಜೀರ್ಣಿಕೆಮಾಡು; (*to repair a fortification*) ಕೋಟೆಬಂದೋಬಸ್ತುಮಾಡು. v. Also *to amend, mend.* (*to repair to any place*) ಸೇರಿಹೋಗು, ಹೋಗು.

Repair, Reparation, s. n. (*supplying the loss, mending*) ಜೀರ್ಣಿಕೆ, ನೆಟ್ಟಗೆಮಾಡುವಿಕೆ, ಸೊಪ್ಪನಿಡುವಿಕೆ, ಛತ್ರ, ಜೀರ್ಣಪಾನ; (*repair, going to any place*) ಹೋಗೋಣ; (*reparation, amends*) ಬಿಗಾಡು, ತೆತ್ತು, ಲಗ್ಗ. v. *Retribution, compensation.*

Repaired, part. ಜೀರ್ಣಶಿಯಾದ, ನೆಟ್ಟಗೆಮಾಡಿದ.

Repairer, s. n. *(of houses, &c.)* ಜೀರ್ಣಶಿಮಾಡುವವ, ನೆಟ್ಟಗೆಮಾಡುವವ, ಸೊಪ್ಪನಿಡುವವ; *(of injuries)* ಲಿಗಾಡು ಕೇರಿಸುವವ.

Reparable, a. ನೆಟ್ಟಗೆಮಾಗುವ, ನೆಟ್ಟಗೆಮಾಡತಕ್ಕ.

Reparation, s. n. ನೆಟ್ಟಗೆಮಾಡ್ವಿಕೆ, ಸೊಪ್ಪನಿಡಿಕೆ, ಜೀರ್ಣಶಿಮಾಡ್ವಿಕೆ. v. *Repair.*

Repartee, s. n. ಯುಕ್ತ್ಯೋತ್ತರ, ಯುಕ್ತಮಾತು, ಜನರಂಜನಮಾತು.

To Repartee, v. n. ಯುಕ್ತ್ಯೋತ್ತರಕೊಡ, ಯುಕ್ತವಾದ ಮಾತುಕೊಡ.

To Repass, v. a. ಮತ್ತುದಾಟು, ತಿರಿಗಿಹಾಯ.

Repast, s. n. ಭೋಜನ, ಅಶನ, ಊಟ; *(to make a repast)* ಊಟಮಾಡ, ಭೋಜನಮಾಡ. v. *To eat, feed, feast.*

To Repay, v. a. ತಿರಿಗಿಕೊಡ, ಬದಲಾಯಿಸ, ಹಿಂದಕ್ಕೆಕೊಡ, ಸರಿಕಟ್ಟು. v. *To recompense, pay, reward.*

Repayment, s. n. ಮರ್ಯ್ಯಕೊಡುವಿಕೆ, ಈಡುಕೊಡುವಿಕೆ, ಸರಿಕಟ್ಟುವಿಕೆ, ಸಲ್ಲಿಸುವಿಕೆ, ಕಾಯಿಕಾಯಿ.

To Repeal, v. a. ತೆಗದುಹಾಕ, ನಿಲ್ಲಿಸ, ಬಡದುಹಾಕ.

Repeal, s. n. ತೆಗದುಹಾಕುವಿಕೆ, ಬಡದುಹಾಕಿಕೆ, ರದ್ದು; *(the repeal of one law by another)* ಬದಲುಕಿರಾಯಿಕೆ, ಬದಲುಹುಕುಮು.

Repealed, part. ತೆಗದುಹಾಕಿದ, ನಿಲ್ಲಿಸಿದ.

To Repeat, v. a. *(speak again)* ಮತ್ತುಹೇಳ; *(do again or several times)* ಮತ್ತುಮಾಡ, ತಿರಿಗಿತಿರಿಗಿಮಾಡ, ಬಹಳಸಾರಿಮಾಡ; *(to repeat or rehearse by heart)* ಒಪ್ಪಿಸ, ಪಾಠಹೇಳ. v. *To recite.*

Repeater, s. n. ಹೇಳುವವ, ಒಪ್ಪಿಸುವವ, ಪಾಠಹೇಳುವವ. v. *Reciter.*

Repeated, part. *(done or said often)* ಬಹಳಸಾರಿಮಾಡಿದ, ಅನೇಕಾವರ್ತಿ ಹೇಳಿದ; *(recited)* ಹೇಳಿದ, ಒಪ್ಪಿಸಿದ.

Repeatedly, ad. ಮೇಲೆಮೇಲೆಯಾಗಿ, ಪದೆಪದೆಯಾಗಿ, ಹಗಲಲ್ಲ, ನೈರಸಕವಾಗಿ, ಅನೇಕಾವರ್ತಿ, ಮತ್ತುಮತ್ತು. v. *Often.*

To Repel, v. a. ಬಡದುಹಾಕ, ತಟ್ಟು, ದೊಬ್ಬಿಬಿಡ. v. *To repulse.*

Repelled, part. ದೊಬ್ಬಿಬಿಟ್ಟ, ಬಡದುಹಾಕಿದ, ತಟ್ಟಿದ. v. *Repulsed.*

Repeller, s. n. ದೊಬ್ಬಿಬಿಡುವವ, ತಟ್ಟುವವ, ಬಡದುಹಾಕುವವ.

To Repent, v. n. ಮನಸ್ತಾಪಪಡ, ಪಶ್ಚಾತ್ತಾಪಪಡ, ವ್ಯಥೆಪಡ, ಅನುತಾಪಪಡ.

Repentance, s. n. ಮನಸ್ತಾಪ, ಪಶ್ಚಾತ್ತಾಪ, ಅನುತಾಪ, ಧಿಕ್ಪ್ರತೀಕಾ, ಅಡವುಪಮಲುಡುಕು. v. *Penitence.*

Repentant, a. ಪಶ್ಚಾತ್ತಾಪದ, ಮನಸ್ತಾಪದ, ಅನುತಾಪದ.

To Repeople, v. a. ತಿರಿಗಿಬಸ್ತಿಮಾಡ, ಮತ್ತುಜನರನವ್ಯಾಪಿಸ, ಕುಗಿಹೊಯ್ಯ.

Repercussion, s. n. ಫುಟಿಕೆ. v. *Rebound.*

Repertory, s. n. ಸಾಮಾನಿನಮನೆ, ಸಾಮಗ್ರಿಶಾಲೆ, ಅಡಕಲಮನೆ.

Repetition, s. n. ಆಮ್ರೇಡಿತವು, ಪುನರುಕ್ತಿ,

ಮತ್ತುಹೇಳುವಿಕೆ; (*rehearsal*) ಹೇಳುವದು,ಒಪ್ಪಿಸುವದು. v. *Recital.*

To Repine, v. n. ವ್ಯಾಕುಲಪಡ, ವ್ಯಥೆಪಡ, ಗೊಣಗುಟ್ಟ.

Repiner, s. n. ವ್ಯಥೆಪಡುವವ, ಗೊಣಗುಟ್ಟುವವ. v. Also *murmurer.*

Repining, s. n. ವ್ಯಥೆಪಡೋಣ, ಗೊಣಗುಟ್ಟುವಿಕೆ. v. *Grief, regret, vexation.*

Repining, a. ವ್ಯಥೆಪಡುವ, ಗೊಣಗುಟ್ಟುವ, ವೇದನೆಪಡುವ, ಕುಗ್ಗುವ, ಕುದಿವ.

To Replace, v. a. ಬದಲುಇಡ, ಎದುರಿಡ, ಮತ್ತೊಬ್ಬಂಸಯಿಡ,ಈಡಿಡ. v. Also *to substitute.*

Replaced, part. ಯೆದುರಿಟ್ಟ, ಈಡಿಟ್ಟ, ಟಿಕಾಯಿಶಿದ.

To Replant, v. a. ತಿರಿಗಿನಾಟೆ, ಮತ್ತುಹಾಕ.

Repleat, a. ಪೂರ್ತಿಯಾದ, ತುಂಬಿದ, ಪರಿಪೂರ್ತಿಯಾದ.

To Replenish, v. a. ಪೂರ್ತಿಮಾಡ, ಮತ್ತುತುಂಬಿಸ, ಪರಿಪೂರ್ತಿಮಾಡ.

Replenished, Replete, a. ಪೂರ್ತಿಮಾಡಿದ,ಮತ್ತುತುಂಬಿಶಿದ,ಪರಿಪೂರ್ತಿಮಾಡಿದ. v. *Fulfilled.* (*to be replenished*) ಪೂರ್ತಿಯಾಗ, ಮತ್ತುತುಂಬಿಸ, ಪರಿಪೂರ್ತಿಯಾಗ.

Repletion, s. n. ಪೂರ್ತಿ, ತುಂಬಿಕೆ, ಅಜೀರ್ಣ. v. *Indigestion.*

Reply, Replication, s. n. ಪ್ರತ್ಯುತ್ತರ, ಬದಲುತ್ತರ, ಜವಾಬು. v. *Answer.*

To Reply, v. a. ಬದಲುತ್ತರಕೊಡ, ಪ್ರತ್ಯುತ್ತರಕೊಡ, ಜವಾಬುಕೊಡ.

Replier, s. n. ಬದಲುತ್ತರಕೊಡುವವ, ಪ್ರತ್ಯುತ್ತರಹೇಳುವವ, ಪ್ರತಿವಾದಿ.

To Repolish, v. a. ಮತ್ತುಮೆರುಗುಮಾಡ, ತಿರಿಗಿಮಿಂಚೆಡ, ಮತ್ತುಕಾಂತಿಮಾಡ.

Report, s. n. (*rumour of news*) ಜನಶ್ರುತಿ, ಕಿಂವದಂತಿ, ಗುಲ್ಲು, ಅವಾಯಿ, ಸುದ್ದಿ, ವರ್ತಮಾನ. v. *Rumour.* (*public character*) ಕೀರ್ತಿ, ಪ್ರಖ್ಯಾತಿ, ಘನತೆ. v. *Reputation.* (*of good report*) ಕೀರ್ತಿಯುಳ್ಳ, ನಿರ್ಮಲನಡತೆಯ, ಪ್ರಖ್ಯಾತಿಯ; (*of a bad report*) ದುಷ್ಕೀರ್ತಿಯುಳ್ಳ, ದುರ್ಮಾರ್ಗದ, ಅಪಖ್ಯಾತಿಯುಳ್ಳ; (*report, sound, loud noise*) ಶಬ್ದ, ಧ್ವನಿ, ಧ್ವಾನ, ರವ, ಸ್ವನ; (*the report of a cannon*) ಫಿರಂಗಿಶಬ್ದ; (*the report of a musket*) ತುಬಾಕಿಶಬ್ದ; (*false reports*) ಸುಳ್ಳುಸುದ್ದಿ, ನೀಲಿವಾರ್ತೆ; (*a report, or account returned, by those to whom any thing is referred*) ವರದಿ; (*to make a report, especially of affairs to the king*) ವರದಿಹೇಳ.

To Report, v. a. ಸುದ್ದಿಹೇಳ, ವರ್ತಮಾನಹೇಳ, ತಿಳಿಸ. v. *To tell, relate, murmur.*

Reported, part. ಸುದ್ದಿಹೇಳಿದ, ವರ್ತಮಾನತಿಳಿಶಿದ. v. *Related.*

Reporter, s. n. ಹೇಳುವ, ತಿಳಿಸುವವ, ವರದಿಯವ. v. *Relater, reciter.*

To Repose, v. n. (*rest*) ವಿಶ್ರಾಂತಿಮಾಡ, ಮಲಗ, ಶಯನಿಸ, ತೀರಿಸಿಕೊಳ್ಳ. v. *To sleep, recline.* (*to repose confidence*) ಭರವಸಮಾಡ, ನಂಬಿಗೆಮಾಡ. v. *To confide.*

Repose, s. n. *(rest)* ವಿಶ್ರಾಂತಿಕೆ, ಮಲಗುವಿಕೆ, ತೀರಿಕೆ; *(sleep)* ನಿದ್ರೆ, ಶೈನ, ಅಂಧತಮಸ್ಸು. v. *Sleep, rest, quiet.*

Reposed, part. *(at rest)* ತೀರಿಕೆಯಾದ, ಅವಕಾಶವಾದ, ಸಾವಕಾಶವಾದ; *(asleep)* ಮಲಗಿದ, ನಿದ್ರೆಹೋದ.

Reposedness, s. n. ಸುಮ್ಮನಿರುವದು, ತೀರಿಕೆ, ಉಪಶಮನ, ಧಾತೋಪಶಮನ.

To Reposite, v. a. ಕಟ್ಟಿಯಿಡ, ಇಟ್ಟಿಡ, ಭದ್ರಪಡಿಸ. v. *To store, lay in, deposit.*

Reposited, part. ಕಟ್ಟಿಟ್ಟ, ಭದ್ರಪಡಿಸಿದ.

Repository, s. n. ಜೋಪಾನದ ಸ್ಥಳ, ಬಚ್ಚಿಡುವ ಸ್ಥಳ. v. *Magazine, storehouse, treasury, warehouse, granary.*

To Repossess, v. a. ಮತ್ತು ಆಕ್ರಮಿಸ, ಮತ್ತು ಸ್ವವಶಮಾಡ.

Repossessed, part. ಮತ್ತು ಆಕ್ರಮಿಸಿದ, ಮತ್ತು ಸ್ವವಶಮಾಡಿದ, ಮತ್ತುಬರಕೊಂಡ.

To Reprehend, v. a. ಗದರಿಸ, ಯದರಿಸ, ತಪ್ಪುಹೊರಿಸ, ನಿಂದೆಹಾಕ, ದಬಾಯಿಸ. v. *To blame, reproach, reprove, censure, chide.*

Reprehender, s. n. ಗದರಿಸುವವ, ಅಪರಾಧಹೊರಿಸುವವ, ಅಪವಾದಹಾಕುವವ. v. *Censurer.*

Reprehended, part. ಗದರಿಸಿದ, ಯದರಿಸಿದ, ಅಪರಾಧಹೊರಿಸಿದ.

Reprehensible, a. ಗದರಿಸತಕ್ಕ, ತಪ್ಪುಹೊರಿಸತಕ್ಕ, ಅಪರಾಧಹೊರಿಸತಕ್ಕ.

Reprehensibly, ad. ಗದರಿಸತಕ್ಕದ್ದಾಗಿ, ಅಪರಾಧಹೊರಿಸತಕ್ಕದ್ದಾಗಿ.

Reprehension, s. n. ಗದರಿಕೆ, ಯದರಿಕೆ, ದಬಾವಣೆ. v. *Censure, blame, reproof.*

Reprehensive, a. ಗದರಿಸುವ, ಯದರಿಸುವ, ದಬಾಯಿಸುವ.

To Represent, v. a. *(exhibit)* ತೋರಿಸಿಕೊಡ, ಪ್ರತ್ಯಕ್ಷಮಾಡ, ತೋರಿಸ. v. *To shew.* *(to represent, by painting, delineation, imitation, &c.)* ಛಾಯಚಿತ್ರಿಸ, ಚಿತ್ರಿಸ, ರೂಪಬರಿಯ. v. *To paint, describe.* *(to represent to the life)* ತದ್ರೂಪಬರಿಯ, ತದ್ಭಾವಬರಿಯ, ತದ್ವೇಷವಾಗಿಬರಿಯ, ಅದರಂತೆಬರಿಯ; *(to represent by reflection, as a mirror)* ಪ್ರತಿಬಿಂಬಿಸ; *(to represent, by petition, &c.)* ಅರ್ಜಮಾಡ, ಪುಕಾರಮಾಡ; *(to represent on a theatre)* ಕ್ರೀಡೆಯಾಡ, ವೇಷಧರಿಸ; *(to represent to one's self)* ನೆನಸಿಕೊಳ್ಳ; *(to represent, act as the representative of another)* ಗುಮಾಸ್ತನಾಗಿರ.

Representation, s. n. *(image, form)* ರೂಪ, ಹೋಲಿಕೆ, ಅನುರೂಪ, ಸಾದೃಶ್ಯ. v. *Likeness.* *(a memorial)* ಅರ್ಜಿ, ವಿಜ್ಞಾಪನೆ. v. *Petition.* *(exhibition)* ತೋರಿಕೆ, ಪ್ರತ್ಯಕ್ಷಮಾಡುವಿಕೆ; *(representation of the person of another)* ವಕೀಲತನ; *(representation as in a mirror)* ಪ್ರತಿಬಿಂಬ, ಪ್ರತಿಫಲ.

Representative, a. *(exhibiting a similitude)* ಹೋಲುವಿಕೆಯಾದ, ತತ್ಸ್ವರೂಪದ; *(a representative of another person)* ಪ್ರತ್ಯಾಮ್ನವಾದ.

Representative, s. n. ಗುಮಾಸ್ತ, ಮುಕಾಲ್ತಿಕ, ವಕೀಲ; (*to appoint a representative*) ಮುಕಾಲ್ತಿಕಂನ ಯಿಡು, ವಕೀಲಂನ ನೇಮಿಸು; (*a representative, similitude or symbol of any thing*) ಹೋಲಿಕೆಯಾದ, ರೂಪವಾದ; (*a sign*) ನಿಶಾನಿ.

Representer, s. n. (*one who shews or exhibits*) ತೋರಿಸಿಕೊಡುವವ, ಪ್ರತ್ಯಕ್ಷಮಾಡುವವ. v. Also *representative*.

To Repress, v. a. (*check*) ಬಿಗಿಹಿಡಿಯು, ಯಳೆಕೊಳ್ಳು, ತಳ್ಳಿಯು, ಪಟ್ಟುಮಾಡು, ಅಣಗಿಸು, ಕುಂಗಿಸು. v. *To restrain, check, subdue, crush.*

Repression, s. n. ತಳ್ಳಿಕೊಳ್ಳುವಿಕೆ, ಬಿಗಿಹಿಡಿಯುವಿಕೆ, ಅಣಗಿಸುವಿಕೆ.

Repressive, a. ಬಿಗಿಹಿಡಿಯುವ, ಅಣಗಿಸುವ, ತಗ್ಗಿಸುವ, ಕುಂಗ್ಗಿಸುವ.

Reprieve, s. n. (*delay of punishment*) ಬಚಾಯಿಕೆ.

To Reprieve, v. a. ಬಚಾಯಿಸು.

Reprieved, part. ಬಚಾಯಿಸಿದ.

Reprimand, s. n. ಗದರಿಕೆ, ಅದರಿಕೆ, ದಬಾವಣೆ.

To Reprimand, v. a. ಗದರಿಸು, ಆದರಿಸು, ತಪ್ಪುಹೊರಿಸು, ನಿಂದೆಹಾಕು, ದಬಾಯಿಸು. v. *To reprehend, rebuke.*

Reprisal, s. n. ಮುಯ್ಯಿ, ಪ್ರತಿಗೆಪ್ರತಿ, ಸರಿಗೆಸರಿ, ಕಾಯಿಕಾಯಿ; (*to make reprisal*) ಕಾಯಿಕಾಯಿತೀರಿಸು, ಸರಿಸರಿಮಾಡು, ಮುಯ್ಯಿಕೊಡು, ಸರಿಕಟ್ಟು.

To Reproach, v. a. ನಿಂದಿಸು, ದೂರು, ದೂಷಣೆಮಾಡು, ಬೈಯ್ಯು; (*to reproach one another*) ಯದುರುಕಸ್ಕರಿಸು, ಬೈಕೊಳ್ಳು, ಯೆದುರಾಡಿಕೊಳ್ಳು, ಹಂಗಿಸು.

Reproach, s. n. (*censure*) ನಿಂದೆ, ದೂಷಣೆ, ದೂರುವಿಕೆ, ಭರ್ತ್ಸನ, ಅಪಕಾರವಾಕ್ಯ; (*infamy*) ಅಪಕೀರ್ತಿ, ಅಪಖ್ಯಾತಿ, ದುರ್ನಾಮ, ಪಾರುಷ್ಯವು, ಉಪಕ್ರೋಶವು. v. *Shame.*

Reproachable, a. ನಿಂದಿಸುವ, ಬೈಯ್ಯುವ, ದೂಷಿಸುವ.

Reproached, part. ನಿಂದಿಸಿದ, ದೂಷಿಸಿದ, ಬೈದ.

Reproachful, a. (*scurrilous*) ತಿರಸ್ಕಾರದ, ಪರಿಭವದ, ಅನಾದರದ, ಪರಿಭಾವದ, ತಿರಸ್ಕ್ರಿಯದ, ಲಿಂಧೆ, ಅವಮಾನದ, ಅವಹೇಳನದ, ಅಸೂಂಷ್ಟಣದ. v. *Opprobrious.* (*infamous*) ಅಪಕೀರ್ತಿಯ, ದುರ್ನಾಮದ, ದುರ್ಕೀರ್ತಿಯ, ಹಾಳತಮಾರಿಯ. v. *Shameful, vile.*

Reproachfully, ad. (*opprobriously*) ನಿಂದೆಯಾಗಿ, ಅಪದೂಷಣೆಯಾಗಿ; (*shamefully*) ದುಷ್ಕೀರ್ತಿಯಾಗಿ, ಅಪಕೀರ್ತಿಯಾಗಿ, ಅಪಖ್ಯಾತಿಯಾಗಿ.

To Reprobate, v. a. ಬಿಸಟುಹಾಕು, ದೊಬ್ಬಿಹಾಕು, ನೂಕಿಬಿಡು. v. *To reject.*

Reprobate, a. ಭ್ರಷ್ಟನಾಗ, ಕೆಟ್ಟುಹೋದ, ಪದಭ್ರಷ್ಟನಾಗ. v. *Wicked.*

Reprobate, s. n. ಭ್ರಷ್ಟನು, ದುರ್ಮಾರ್ಗಿ, ಪದಭ್ರಷ್ಟ, ಅಯೋಗ್ಯನು. v. *Profligate.*

Reprobated, part. ಬಿಸಾಟುಬಿಟ್ಟ, ತಳ್ಳಿಬಿಟ್ಟ, ದೊಬ್ಬಿಬಿಟ್ಟ. v. *Rejected.*

Reprobateness, Reprobation, s. n. ಬಿಸಾಟುಬಿಡುವಿಕೆ, ತಳ್ಳಿಹಾಕುವಿಕೆ, ದುಷ್ಟತನ. v. *Wickedness.*

To Reproduce, v. a. ಮತ್ತುಹುಟ್ಟಿಸು, ಪುನರ್ಜನಿಸು, ಪುನಃಜನನವಾಗು, ಮತ್ತುಉದ್ಭವಿಸು.

Reproduced, part. ಪುನರ್ಜನಿಸಿದ, ಮತ್ತುಉದ್ಭವಿಸಿದ, ಮತ್ತುಜನನವಾದ.

Reproof, s. n. ವಾಗ್ದಂಡನೆ, ಗದರಿಸುವಿಕೆ, ಭಯಪಡಿಸುವಿಕೆ, ಶಿಕ್ಷಿಸುವಿಕೆ.

To Reprove, v. a. ಗದರಿಸು, ಭಯಪಡಿಸು, ಬೆದರಿಸು, ಮೋರೆಗಂಟಾಕು, ತಟಿಶಿಕೊಳು, ತಪ್ಪುತೋರಿಸು. v. *To reprehend, reproach.*

Reptile, s. n. ಹರಿಯುವಜಂತು, ಉರಗಮನಜಂತು; (*the reptiles of the earth*) ಭೂಮಿಯಹುಳುಗಳು, ಮಂಣುಹುಳುಗಳು; (*noxious reptiles*) ವಿಷಪುಚ್ಛಗಳು, ವಿಷಜಂತುಗಳು.

Republican, s. n. ಸ್ವಯಿಚ್ಛಕ, ಸ್ವಸ್ವಾತಂತ್ರಿಕ.

Republick, s. n. ಜನರಆಳ್ವಿಕೆಯದೇಶ, ಸಜ್ಜೆಯಆಳ್ವಿಕೆದೇಶ, ಅರಸಿಲ್ಲದರಾಜ್ಯ, ಬಹುನಾಯಕವು.

To Repudiate, v. a. ವಿಸರ್ಜಿಸು, ಪರಿತ್ಯಾಗಮಾಡು, ತಳ್ಳಿಬಿಡು, ತಳ್ಳು. v. *To divorce, reject.*

Repugnance, s. n. (*contrariety*) ವಿರೋಧ, ವೈರ, ಪ್ರತಿಕೂಲವು. v. *Inconsistency.* (*reluctance*) ಅಸಂಮತಿ, ಅಸಮರ್ಪಕ, ಅಸಮಾಧಾನ; (*aversion*) ಅಸಂಹ್ಯ, ವಾಕರಿಕೆ, ಉಬ್ಬಳಿಕೆ.

Repugnant, a. (*contrary*) ವಿರೋಧದ, ವೈರದ, ಪ್ರತಿಕೂಲದ. v. *Inconsistent.* (*reluctant*) ಅಸಂಮತಿಯ, ಅಸಮರ್ಪಕದ, ಅಸಮಾಧಾನದ; (*repugnant to friendship*) ಸ್ನೇಹಕ್ಕೆವಿರೋಧದ; (*repugnant to humanity*) ಅಂತಃಕರುಣಕ್ಕೆವಿರೋಧವಾದ; (*repugnant to nature*) ಭಾವಕ್ಕೆವಿರೋಧ; (*to be repugnant, contrary*) ವಿರೋಧವಾಗಿರು, ಹೊಂದದ್ದಾಗಿರು, ಪ್ರತಿಕೂಲವಾಗಿರು; (*to be averse or reluctant*) ಅಸಂಮತಿವಾಗಿರು, ಅಸಮರ್ಪಕವಾಗಿರು.

Repugnantly, ad. (*contrarily*) ವಿರೋಧವಾಗಿ, ಪ್ರತಿಕೂಲವಾಗಿ; (*with repugnance*) ಅಸಮರ್ಪಕವಾಗಿ, ಅಸಂಹ್ಯವಾಗಿ.

Repulse, s. n. ಕೈತಟ್ಟುವಿಕೆ, ಹುಂತ್ರಳ್ಳುವಿಕೆ; (*a violent or shameful repulse*) ಪಲಾದಿಸುವಿಕೆ, ಮೊಖದಮೇಲೆಬಡಿಯುವಿಕೆ; (*to meet with a repulse*) ಮುಖಭಂಗವಾಗು.

To Repulse, v. a. ಕೈತಟ್ಟು, ದೊಬ್ಬಿಹಾಕು, ಬಡಿದುಹಾಕು, ತಳ್ಳಿಹಾಕು. v. *To repel, resist.*

Repulsed, part. ತಳ್ಳಿಹಾಕಿದ, ದೊಬ್ಬಿಹಾಕಿದ, ಕೈತಟ್ಟಿದ; (*to be repulsed*) ದೊಬ್ಬಲ್ಪಡು, ತಳ್ಳಿಹಾಕಲ್ಪಡು, ಕೈತಟ್ಟಿಪಡು.

Repulsion, s. n. ತಟ್ಟಿಹಾಕುವಿಕೆ, ತಳ್ಳಿಹಾಕುವಿಕೆ, ದೊಬ್ಬಿಹಾಕುವಿಕೆ.

Repulsive, Repelling, a. ತಳ್ಳಿಹಾಕುವ, ತಟ್ಟಿಹಾಕುವ, ದೊಬ್ಬುವ; (*the repelling power*) ಉಚ್ಚಾಟನೆ, ಬಡಿಕೊಂಡುಹೋಗುವ.

To Repurchase, v. a. ತಿರಿಗಿಕೊಂಡುಕೊಳ್ಳು, ಮತ್ತುಕ್ರಯಕ್ಕೆತಕ್ಕೊಳ್ಳು.

Reputable, a. ಘನವುಳ್ಳ, ಘನತೆಯ, ಪ್ರತಿಷ್ಠೆಯ, ಮಾನಧನ, ಗಾಂಭೀರ್ಯದ. v. *Honorable, creditable, honest.*

Reputably, ad. ಘನತೆಯಾಗಿ, ಪ್ರತಿಷ್ಠೆಯಾಗಿ, ಗಾಂಭೀರ್ಯವಾಗಿ, ಮಾನಧನವಾಗಿ.

Reputation, Repute, s. n. ಘನವು, ಮಾನವು, ಪ್ರತಿಷ್ಠೆಯು, ಗೌರವವು. v. *Credit, honor.*

To Repute, v. a. ನೆನಸು, ಎಣಿಸು, ಊಹಿಸು, ತೋಚು. v. *To consider, reckon.*

Reputed, part. ಕೀರ್ತಿ ಹೊಂದಿದ, ಹೆಸರು ಪಡೆದ, ಎಣಿಸಲ್ಪಟ್ಟ.

Reputeless, a. ಉದಾಸೀನವಾದ, ಅಪಮಾನವಾದ, ಅವಹೇಳನೆಯಾದ, ಅಪ್ರತಿಷ್ಠೆಯಾದ. v. *Disgraceful.*

Request, s. n. *(entreaty, petition)* ಮನವಿ, ಅರ್ಜಿ, ವಿಜ್ಞಾಪನ, ಕೃತಿಗೊಳಿಸುವಿಕೆ, ಬಿನ್ನಹವು; *(in request, in great demand)* ವಶ್ಯಕರವಾದ, ಅವಶ್ಯಕವಾದ; *(to be in request)* ಅವಶ್ಯಕವಾಗಿರ, ವಶ್ಯಕರವಾಗಿರ.

To Request, v. a. ಮನವಿಮಾಡು, ಬೇಡಿಕೊಳ್ಳು, ಕೇಳು, ಬಿನ್ನಹಮಾಡು, ಅರ್ಜಿಮಾಡು. v. *To petition, beg, entreat.*

Requested, part. ಕೇಳಲ್ಪಟ್ಟ, ಬೇಡಿಕೊಂಡ, ಕೇಳಿಕೊಂಡ.

Requester, s. n. ಬೇಡಿಕೊಂಬುವವ, ಮನವಿಮಾಡಿಕೊಂಬುವವ. v. *Petitioner.*

To Requicken, v. a. ಮತ್ತೆ ಬದುಕಿಸು, ಮತ್ತೆ ಎಬ್ಬಿಸು, ಪುನಹಾ ಬದುಕಿಸು, ಪುನರ್ಜೀವಿಸು, ಪುನರುತ್ಥಾನಮಾಡು. v. *To reanimate.*

Requiem, s. n. ಉಪಶಮನೆ, ವಿಶ್ರಾಂತಿ, ತೀರಿಕೆ, ವಿಶ್ರಮಣ. v. *Rest.*

Requirable, a. ಅವಶ್ಯವಾಗುವ, ಅಕ್ಕರೆಯ.

To Require, v. a. ಅಕ್ಕರೆಯಾಗು, ಕೇಳು, ಬೇಡು. v. *To demand, request. (as occasion may require)* ಸಮಯೋಚಿತವಾದಹಾಗೆ.

Required, part. ವಿಚಾರಿಸಿದ, ಕೇಳಿದ, ಅವಶ್ಯವಾದ, ಅಕ್ಕರೆಯಾದ. v. *Requested.*

Requisite, a. ಬೇಕಾದ, ಅವಶ್ಯವಾದ, ಪ್ರಯೋಜನವಾದ. v. *Necessary, necessaries.*

Requisitely, ad. ಅಕ್ಕರೆಯಾಗಿ, ಅವಶ್ಯವಾಗಿ; ಬೇಕಾಗಿ. v. *Necessarily.*

Requisiteness, s. n. ಬೇಕಾಗುವಿಕೆ, ಅವಶ್ಯಕರ.

Requital, s. n. ಪ್ರತಿಕಾರ, ಬದಲಿಗೆಬದಲು, ಸರಿಗೆಸರಿ. v. *Retaliation, compensation, retribution.*

To Requite, v. a. ಪ್ರತಿಕಾರಮಾಡು, ಸರಿಕಟ್ಟು, ಬದಲುಮಾಡು, ಪ್ರತಿಮಾಡು. v. *To repay, retaliate, reward.*

To Rescind, v. a. ತೆಗೆದುಹಾಕು, ನಿಲ್ಲಿಸು, ರದ್ದುಮಾಡು. v. *To repeal.*

Rescript, s. n. *(royal edict)* ಶಾಸನ, ನಿರೂಪ, ಆಜ್ಞಾಪತ್ರ, ಹುಕುಂನಾಮ, ಫರವಾನ.

To Rescue, v. a. *(from confinement or danger)* ತಪ್ಪಿಸು, ಗಂಡ ತಪ್ಪಿಸು, ಉಳಿಸು, ಸಂರಕ್ಷಿಸು.

Rescue, s. n. ತಪ್ಪಿಸುವಿಕೆ, ರಕ್ಷಣೆ, ಕಾಪಾಡುಕೆ, ನಿಭಾಯಿಸುವಿಕೆ.

Rescuer, s. n. ತಪ್ಪಿಸುವವ, ಸಂರಕ್ಷಿಸುವವ.

Research, s. n. ಹುಡುಕುವಿಕೆ, ವಿಚಾರಣೆ. v. *Inquiry, search.*

To Research, v. a. ಹುಡುಕು, ಶೋಧಿಸು, ಕೆದಕು, ಪರೀಕ್ಷಿಸು, ಹುಡುಕಿನೋಡು. v. *To search, examine, enquire.*

To Resell, v. a. ಪುನಹಾ ಮಾರು, ಮರಳಿಯು ಮಾರು.

Resemblance, s. n. ಅನುರೂಪ, ತೋಡು, ಜೋಳಿಯು, ತಿಂಗಿ, ಸಾಮ್ಯ, ಸದೃಶ, ಹೋಲಿಕೆ, ಪಡಿ, ಸಾಟಿ, ಪಾಂಗು, ಪಾಸಟಿ, ಜವಳಿ, ಜೋಡು, ಯೆಣೆ, ಸದಗರದಿ. v. *Similitude, likeness.*

To Resemble, v. a. *(be like)* ಸಮಾನವಾಗಿರ, ಸದೃಶವಾಗ; *(to compare)* ಸಾಮ್ಯಮಾಡ, ಉಪಮಾನಮಾಡ.

Resembling, part. ಸಾದೃಶ್ಯವಾದ, ಸಮಾನವಾದ, ತದ್ರೂಪವಾದ, ತತ್ಸಮವಾದ.

To Resent, v. a. ಸಿಟ್ಟಾಗ, ಕ್ರೋಧವಿಡ, ಕಂಗಾರವಾಗ, ಕಂಗಾಗ, ಪ್ರತಿಕಾರಮಾಡ.

Resentful, a. ಸಿಟ್ಟಾಗುವ, ಕೋಪವಾಗುವ. v. *Angry, cholerick.*

Resentingly, ad. ಸಿಟ್ಟಾಗಿ, ಕೋಪವಾಗಿ, ಕಂಗಾರವಾಗಿ, ಕಂಗಾಗಿ, ರಂಗಾಗಿ, ಕ್ರೋಧವಾಗಿ, ಈರ್ಷ್ಯವಾಗಿ.

Resentment, s. n. ಘುರುಕಾಯಿಸಿ, ಹೊಚ್ಚು, ರಂಗು, ಕಂಗರ, ಕ್ರೋಧ, ಈರ್ಷ್ಯ. v. *Anger, indignation.* *(a look full of resentment)* ಸಿಡುಮೋರೆ, ಕ್ರೋಧಮುಖ.

Reservation, Reserve, s. n. *(retaining, withholding)* ಇಟ್ಟಿಡುವಿಕೆ; *(saving)* ಬಚ್ಚಿಡುವಿಕೆ, ಕಟ್ಟಿಕಟ್ಟುವಿಕೆ, ಕಟ್ಟಿಡುವಿಕೆ; *(concealment of something in the mind)* ಮನಸ್ಸಿನಲ್ಲಿ; *(exception, condition)* ಶಪಥ, ಷರತ್ತು, ಪ್ರತಿಜ್ಞೆ. v. *Stipulation.* *(mental reservation)* ಕಾಪಟ್ಯ; *(caution or modesty of behaviour)* ಮರ್ಯಾದೆ, ಸಂಕೋಚರ.

Reserve, s. n. ಹಳೇನಾಂಗ್ಯ, ಶಿಲ್ಕು, ಇದಲ್ಪಟ್ಟಿದ್ದು. v. *Store.* *(a reserve kept for one's own particular use)* ಗ್ರಾಸೋಪಾಯಕ್ಕೆಯಿಟ್ಟುಕೊಂಡದ್ದು.

To Reserve, v. a. *(keep back)* ಇಟ್ಟಿಡ, ದಾಪಿರಮಾಡ, ಬಚ್ಚಿಟ್ಟುಕೊಳ್ಳ; *(keep in store)* ಜಖೀರಿಹಾಕ, ಖಜಾನವಿಡ; *(retain the whole or part of any thing)* ಶೇಷವುಳಿಸಿಡ, ಶಿಲ್ಕಿಡ, ನಿಲ್ಲಿಸಿಡ; *(reserve of an army)* ಪರಿಗ್ರಹ.

Reserved, part. *(kept back)* ಶೇಷವಿಟ್ಟ, ಉಳಿಸಿಟ್ಟ, ಶಿಲ್ಕುಯಿಟ್ಟ; *(kept in store)* ಖಜಾನಹಾಕಿಯಿಟ್ಟ.

Reserved, a. *(modest, silent, not impudent)* ಮರ್ಯಾದ, ಸುಮ್ಮಗಾಳಿಯು, ನೆಲಸುಮ್ಮನಾದ; *(sullen)* ಬಿಕ್ಕೊಳ್ಳುವ, ಸಿಡ್ರಿಸಿಕೊಳ್ಳುವ, ಬಿಗಿಸಿ. v. *Morose.*

Reservedly, ad. *(modestly)* ಸುಮ್ಮಗಾಳಿಯಾಗಿ, ಮರ್ಯಾದಯಾಗಿ, ನೆಲಸುಮ್ಮನಾಗಿ.

Reservedness, s. n. *(modesty)* ಮರ್ಯಾದೆ, ಸುಮ್ಮಗಾಳಿಕೆ; *(sullenness)* ಬಿಕ್ಕೊಳ್ಳುವಿಕೆ, ಸಿಡ್ರಿಸಿಕೊಳ್ಳುವಿಕೆ; *(to behave with reservedness)* ಮರ್ಯಾದಾಗಿನಡಿಯು.

Reservoir, s. n. *(of water)* ಕೆರೆ, ಕುಂಟೆ, ತಟಾಕ. v. Also *magazine, store.*

To Reset, v. a. *(a broken bone, &c.)* ಪುನಹಾ ಕಟ್ಟಿಕಟ್ಟು, ಮರಳಿ ಕಟ್ಟಿಕಟ್ಟು.

To Resettle, v. a. ತಿರಿಗಿ ಸ್ಥಾಪಿಸ, ಮರಳಿಯಿಡ. v. *To re-establish.*

To Reside, v. n. ನೆಲೆಯಾಗಿರ, ವಾಸವಾಗಿರ, ಸ್ಥಿರವಾಗಿರ. v. *To dwell, inhabit;* also *to subside.*

Residence, s. n. ವಾಸಸ್ಥಳ, ನಿವಾಸ, ಗೇಹ, ಗೃಹ, ಧವಳಿಕ, ವೇಶ್ಮ, ಸದ್ಮ, ನಿಕೇತನ, ನಿಶಾಂತ, ವಸ್ತ್ಯ, ಸದನ, ಭವನ, ಆಗಾರ, ಮಂದಿರ, ಧಿಷ್ಣ್ಯ, ಓಕ, ನಿವಸನ, ಸ್ಥಾನ, ಅವಸಥ, ವಾಸ್ತು, ಠಾವು. v. *Abode, habitation, dwelling, country.* (*a fixed residence*) ಶಾಶ್ವತ ಸ್ಥಳ, ನೆಲೆಯಾಗಿಹ ಸ್ಥಳ; (*a pleasant residence*) ಪ್ರಶಸ್ತವಾದ ಸ್ಥಳ, ರಂಮ್ಯವಾದ ಸ್ಥಳ, ಇಂಪಾದ ಸ್ಥಳ.

Resident, a. ವಾಸವಾಗಿರುವ, ನೆಲೆಯಾಗಿರುವ.

Resident, s. n. ವಕೀಲ, ಹೇಜೀಬ, ರಾಯಭಾರಿ. v. *Envoy, agent, ambassador.*

Residuary, Residual, a. ಮಿಕ್ಕಾದ, ಉಳಿದ.

Residue, s. n. ಬಾಕಿ, ಮಿಗುವು, ಉಳುವು, ಶಿಲ್ಕು. v. *Rest, remainder.*

To Resign, v. a. (*give up, quit*) ಬಿಟ್ಟುಬಿಡು, ಬಿಡು, ತ್ಯಜಿಸು, ವಿಸರ್ಜಿಸು, ಪರಿತ್ಯಜಿಸು; (*to resign an office*) ಸಾಕುಮಾಡಿಕೊಳ್ಳು; (*to resign one's self to providence*) ದೇವರಿಟ್ಟದ್ದಾಗುವದೆಂದುಯಿರುವದು, ದೇವರಿಗೆ ತಿಯಂದುಯಿರುವದು. v. *Submission.*

Resignation, s. n. (*of office*) ಸಾಕುಮಾಡಿಕೊಳ್ಳುವಿಕೆ; (*to providence*) ದೇವರಿಗೆ ತಿಯಂದುಯಿರುವಿಕೆ, ಶಿವನ ಕರುಣಾವೆಂದನುವಿಕೆ.

Resigned, part. (*to providence*) ಸೈರಣೆಯಾದ, ದೇವರಿಗೆ ತಿಯಂದಂತುವ. v. *Submissive.*

Resin, s. n. ಕರಾಲ, ಯಕ್ಷಧೂಪ.

Resinous, a. ಸಜ್ಜರಸ, ಯಕ್ಷಧೂಪದ.

To Resist, v. a. ಅಡ್ಡಕಟ್ಟು, ಎದುರಾಡು, ತಟ್ಟಿಬಿಡು, ಆತಂಕಿಸು. v. *To oppose, repulse.*

Resistance, s. n. ಅಡ್ಡಕಟ್ಟು, ಮುಖಭಂಗ. v. *Opposition.*

Resisted, part. ತಳ್ಳಿಬಿಟ್ಟ, ನಿಲ್ಲಿಸಿಬಿಟ್ಟ, ಅಡ್ಡಕಟ್ಟಿದ, ಆತಂಕಿಸಿದ, ನಿರೋಧಿಸಿದ, ಅತ್ಯಂತರಿಸಿದ. v. *Repulsed.*

Resistibility, s. n. ತಿರುಗಹಾಕಮಾಡತಕ್ಕದು.

Resistible, a. ತಿರುಗಹಾಕಿಬಿಡತಕ್ಕ.

Resolvable, Resoluble, a. (*capable of being dissolved*) ಕರಗತಕ್ಕ, ಕರಗುವ; (*capable of being explained*) ಅರ್ಥವಾಗತಕ್ಕ.

To Resolve, v. a. (*to determine*) ಸಂಕಲ್ಪಿಸು, ಮನೋನಿರ್ಧಾರಿಸು, ಸಂಕೋರಿಸು. v. *To purpose.* (*to dissolve*) ಕರಗಿಸು. v. *To melt.* (*to analyze*) ವಿವರವಾಗಿಮಾಡು, ಸಾಂಗವಾಗಿಮಾಡು, ವಿಶೋಧಿಸು; (*to inform, resolve a doubt*) ತಿಳಿಸು, ಅನುಮಾನತೀರಿಸು.

Resolve, s. n. ಪ್ರತಿಜ್ಞೆ, ಶರತ್ತು, ಸಂಕಲ್ಪ, ಮನೋರಥ. v. *Resolution.*

Resolved, part. (*determined, steady*) ಸ್ಥಿರಮಾಡಿದ, ದೃಢಮಾಡಿದ, ಪ್ರತಿಜ್ಞೆಮಾಡಿದ. v. *Resolute.* (*melted*) ಕರಗಿದ. v. *Dissolved.* (*analysed*) ವಿಮರ್ಶೆಯಾದ, ವಿವರಣೆಯಾದ; (*explained*) ಬಿಚ್ಚಿದ, ಅರ್ಥಮಾಡಿದ, ಅನ್ವಯಿಸಿದ, ಪದಚ್ಛೇದಮಾಡಿದ, ತಿಳಿಸಿದ; (*resolved upon*) ಖಚಿತಮಾಡಿದ, ಮನೋದೃಢಮಾಡಿದ.

Resolvedly, ad. (*with firmness*) ಬುದ್ಧಿನೆಲಕಡೆಯಾಗಿ, ಸ್ಥಿರತರವಾಗಿ, ಮನೋದೃಢವಾಗಿ. v. *Resolutely.*

Resolvedness, s. n. ಸಂಕಲ್ಪ, ಪ್ರತಿಜ್ಞೆ. v. *Resolution.*

Resolvent, Resolutive, a. ಮನೋನಿಶ್ಚಲಿತದ, ಪ್ರತಿಜ್ಞೆಯುಳ್ಳ, ಸಂಕಲ್ಪವುಳ್ಳ.

Resolver, s. n. *(one that determines)* ಸ್ಥಿರಮಾಡುವವ; *(a dissolver)* ಪ್ರತಿಜ್ಞೆಮಾಡುವವ.

Resolute, a. *(constant to a resolution)* ದೃಢತರವಾದ, ಮನೋಖಚಿತವಾದ, ಬುದ್ಧಿನಿಲಕಡೆಯಾದ. v. *Firm, steady, constant.* *(bold)* ಧೀಕರದ, ಧೈರ್ಯದ, ನಿರ್ಣಯದ, ಗುಂಡಿಗೆಯ, ಗಾಪುಗುಂಡಿಗೆಯ. v. *Brave.*

Resolutely, ad. ಮನೋದೃಢವಾಗಿ, ಪ್ರತಿಜ್ಞೆಯಾಗಿ, ಶರತ್ತಾಗಿ, ಸಂಕಲ್ಪವಾಗಿ. v. *Courageously.*

Resolution, Resoluteness, s. n. *(boldness)* ಧೈರ್ಯ, ಗುಂಡಿಗೆ, ನಿರ್ಣಯ; *(resolution, fixed purpose)* ಮನೋನೇಮಕ, ಸಂಕಲ್ಪ, ಪ್ರತಿಜ್ಞೆ, ಶರತ್ತು, ಅವಧಾರಣಾವು, ಉದ್ದೇಶ್ಯವು; *(resolution of a doubt)* ಅನುಮಾನ ತೀರಿಸುವಿಕೆ, ಸಂದೇಹಬಿಡಿಸೋಣ.

To Resort, v. n. *(frequent)* ಹೊಕ್ಕುಬಳಿಕೆಮಾಡ, ಪಡಿಪಡಿಹೋಗ. v. *To have recourse.*

Resort, s. n. *(concourse)* ತಿರಳು, ಸರುವು, ಜಾರಿತೆ. v. *Assembly, meeting, visit, resource.*

To Resound, v. n. *(sound, echo)* ನಾದಕೊಡ, ಶಬ್ದಕೊಡ. v. Also *to celebrate.* *(to be echoed back)* ಪ್ರತಿಧ್ವನಿಯಾಗ.

Resounding, part. ನಾದಕೊಡುವ, ಶಬ್ದವಾಗುವ, ಧ್ವನಿಕೊಡುವ.

Resource, s. n. *(fund)* ಉಪನಿಧಿ, ಪ್ರತ್ಯಾಸ್ಪದ, ಆಸ್ಪದ; *(remedy)* ಉಪಾಯ, ತಂತ್ರ, ಪ್ರಯತ್ನ; Where is the *resource?* ಆಸ್ಪದವೆಲ್ಲಿ, ಆಧಾರವೆಲ್ಲಿ; *(without resource)* ಆಧರವಿಲ್ಲದ, ನಿರಾಧಾರದ. v. *Helpless.*

To Resow, v. a. ತಿರಿಗಿಬಿತ್ತ, ಪುನಹಾಬಿತ್ತ, ಮರಳಿಬಿತ್ತ.

To Respect, v. a. ಮಾನಮಾಡ, ಸಂನ್ಮಾನಿಸ, ಮಂನಿಸ, ಆದರಿಸ.

Respect, s. n. ಮಾನ, ಮರ್ಯಾದೆ, ಸಂನ್ಮಾನ, ಸಂಕುಬೆತೆ, ನಯ, ವಿನಯ. v. *Attention, honor, regard, reverence.* *(reference, relation)* ಸಂಬಂಧ; *(in respect of)* ನೋಡುವಲ್ಲಿ, ನೋಡ.

Respectable, a. ಘನವುಳ್ಳ, ಸಂನ್ಮಾನದ, ಕೀರ್ತಿಯ, ಪ್ರತಿಷ್ಠೆಯ, ಮಹಾಕುಲ, ಮಹಾಕುಲಿಕ, ಮಹಾಕುಲೀನ.

Respected, part. ಮಾನಹೊಂದಿದ, ಘನತೆಹೊಂದಿದ. v. *Honored.*

Respectful, a. ಮಾನಿತವಾದ, ಅನುನಯವಾದ, ಮರ್ಯಾದೆಯಾದ.

Respectfully, ad. ಮರ್ಯಾದೆಯಾಗಿ, ಅನುನಯವಾಗಿ, ಸಂನ್ಮಾನವಾಗಿ, ಘನತೆಯಾಗಿ, ಭಕ್ತಿಯಾಗಿ, ಮರ್ಯಾದೆಯಾಗಿ; *(to behave respectfully)* ಮಾನವಾಗಿನಡಕೊಳ್ಳ, ಭಕ್ತಿಯಾಗಿನಡಕೊಳ್ಳ, ಮರ್ಯಾದೆತೋರಿಸ.

Respective, a. *(particular)* ಅದರದರ, ಅವನವನ; *(each in his respective place)* ಅವನವನುತಂನತಂನಸ್ಥಳದಲ್ಲಿ.

Respectively, ad. *(particularly)* ಒಂದೊಂದಾಗಿ, ಪ್ರತ್ಯೇಕಪ್ರತ್ಯೇಕವಾಗಿ. v. *Relatively.*

Respiration, s. n. ಉಶ್ವಾಸ.

To Respire, v. n. *(breathe)* ಉಶ್ವಾಸಬಿಡು.

Respite, s. n. ಬಬಾಯಿಕೆ, ನಿಲ್ಲಿಕೆ, ಬಿಡುವು, ಉಪಶಮನ, ಸ್ಥಿಮಿತ. v. *Reprieve.*

Resplendence, s. n. ಪ್ರಕಾಶವು, ಪ್ರಖ್ಯಾತವು, ಅಟ್ಟಹಾಸವು, ಕಳೆಗದಿರು, ಮಿನುಗು, ಹವೆ, ಮಿಂಚು, ದಾಳು, ಮಿರುಗು, ಹೊಳಪು, ತಳಪು, ಹೊಗರ್, ಬೆಳಗು, ಛವಿಯು, ಕಾಂತಿಯು, ಪ್ರಭೆ, ಡಂಬರ. v. *Brightness, splendour.*

Resplendent, a. ಪ್ರಕಾಶದ, ಪ್ರಭೆಯ, ಡಂಬರದ, ಕಾಂತಿಯ, ಪ್ರಖ್ಯಾತದ, ಅಟ್ಟಹಾಸದ, ಹವೆಯ, ಮಿಂಚಿನ. v. *Bright, splendid.*

Resplendently, ad. ಪ್ರಕಾಶವಾಗಿ, ಡಂಬರವಾಗಿ, ಪ್ರಭೆಯಾಗಿ, ಅಟ್ಟಹಾಸವಾಗಿ.

To Respond, v. n. ಉತ್ತರಕೊಡು, ಜವಾಬುಕೊಡು, ಪ್ರತ್ಯುತ್ತರಹೇಳು. v. *To answer, correspond.*

Response, s. n. ಪ್ರತ್ಯುತ್ತರವು, ಬದಲುತ್ತರವು, ಜವಾಬು. v. *Answer.*

Responsible, a. ಉತ್ತರವಾದಿಯಾದ, ಮೋಸುಬೆದಾರನಾದ. v. *Answerable, accountable.* *(a responsible man)* ಮೋಸುಬೆದಾರ, ಉತ್ತರವಾದಿ, ಜವಾಬುದಾರ, ನಯನಷ್ಟಾದಿಗಳಿಗೆ ಕರ್ತ.

Responsibility, s. n. ಜಾಮೀನು, ಒಡಿಯತನ, ಹೊಣೆಗಾರಿಕೆ, ಉತ್ತರವಾದವು.

Responsive, a. ಹೊಂದಿದ, ಹೊತ್ತ, ಲಿಗಾಡಿಗೆ ಒಳಗಾದ.

Rest, s. n. *(quiet, repose)* ಶೀರಿಕೆ, ಉಪಶಮನ, ವಿಶ್ರಾಂತಿ. v. *Tranquillity, sleep.* *(sleep)* ನಿದ್ರೆ, ಅಡ್ಡೊರಗಿಕೆ, ಮಲಗಿಕೆ, ಅಡ್ಡೊರಗುವಿಕೆ, ಅಡ್ಡಬೀಳ್ವಿಕೆ; *(cessation of motion)* ವಿಶ್ರಮ, ಮೆಟ್ಟು, ಅಡಿಮೆಹ, ಸುಂಮನೆಯಿರೋಣ; *(the final rest)* ದೀರ್ಘನಿದ್ರೆ, ಸಾವು; *(rest and motion)* ತಿರುಗುವಿಕೆಯೂ, ನಿಲುವಿಕೆಯೂ, ವಿಶ್ರಮವೂ, ಗಮನವೂ; *(that on which any thing leans or rests)* ಆದರುವು, ಆಸರ; *(to give rest)* ಸಾವಕಾಶಕೊಡು, ಶೀರಿಕೆಕೊಡು, ನಿದ್ರೆಮಾಡು, ಉಪಶಮಿಸಿಕೊಳ್ಳು; *(to take rest)* ನಿದ್ರೆಮಾಡು, ವಿಶ್ರಾಂತಿತಕ್ಕೊಳ್ಳು.

Rest, s. n. *(remainder)* ನಿಲುವು, ಉಳುವು, ಶೇಷ, ಬಾಕಿ; And so with regard to the *rest* ಅದರಹಾಗೆಯೇ ಉಳಿದದಕ್ಕ, or ನಿಂತದಕ್ಕ ಹಾಗೆಯೆ, ಕಡಮೆದಕ್ಕೆಯು ಹಾಗೆಯೆ.

Rest, s. n. *(support on which any thing leans)* ಆದರುವು, ಒರಗಿಕೆ. v. *Prop, pillar, support.*

To Rest, v. a. *(be at quiet)* ನಿಶ್ಶಬ್ದವಾಗಿರು, ವಿಶ್ರಾಂತವಾಗಿರು, ಸುಂಮನಿರು, ಗಪ್ಚುಪ್ಪಾಗಿರು; *(to sleep)* ನಿದ್ರೆಹೋಗು, ಮಲಗು, ಶಯನಿಸು; *(to be without motion)* ಸುಂಮಗಿರು, ಚಲಿಸದಿರು, ನಿಂತುಹೋಗು; *(to cease from labour)* ಶೀರಿಕೆಯಾಗಿರು; *(to rest the head)* ತಲೆವರಗಿಸು, ತಲೆಯಿಡು; *(to rest content)* ಶಾಂತವಾಗಿರು, ಶಮನವಾಗಿರು, ಸಂಮತವಾಗಿರು; *(to rest or lay to rest)* ವಿಶ್ರಾಂತಿಕೊಡು, ಮಲಗಿಸು, ಸುಂಮನೆಯಿರಿಸು; *(to rest on)* ಹೊತ್ತಿರು, ಹೊಂದಿರು, ಒರಗಿರು; *(to cause to rest upon)* ಒರಗಿರಮಾಡು, ಹೊರಿಸು, ಮೇಲೆಹಾಕು, ಮೇಲೆಯಿಡು.

Rested, part. *(reposed)* ವಿಶ್ರಮಿಸಿಕೊಂಡ, ಉಪಶಮಿಸಿಕೊಂಡ, ಶ್ರಮಪರಿಹಾರವಾದ; *(laid upon)* ಹೊತ್ತ, ಹೊರಿಸಿದ, ವರಿಗಿಸಿದ, ಭಾರ.

Restiff, a. ಹಾರಿದ, ಬೆದರಿಕೆ, ಅಡ್ಡಜಾರಿ, ಕತ್ತೆಯಾದ, ಹಟಗೊಟ್ಟಿ. v. *Obstinate, stubborn, reluctant.* *(a restiff horse)* ಕೊಲಕ, ಬೆದರಿಕೆ ಕುದುರೆ.

Restifness, s. n. ಬೆದರಿಕೆತನ, ಹಟಗೊಟ್ಟಿತನ. v. *Stubbornness, obstinacy.*

Restitution, s. n. ಹಿಂದಕ್ಕೆಕೊಡುವಿಕೆ, ವಾಪಸುಕೊಡುವಿಕೆ, ಫಿರಾಯಿಸುವಿಕೆ, ಬದಲಿಗೆಬದಲುಕೊಡುವಿಕೆ.

Restless, a. *(having no rest)* ತತ್ತರವಾದ, ಆರಾಮಿಲ್ಲದ, ವ್ಯಾಕುಲ; *(in mind)* ಸಮಾಧಾನವಿಲ್ಲದ; *(to be restless)* ಅವಿಶ್ರಾಂತವಾಗಿರ, ವ್ಯಾಕುಲವಾಗಿರ, ನಿಲಕಡೆಯಿಲ್ಲದಿರ; *(unsteady, unsettled)* ಚಂಚಲದ, ಅಸ್ಥಿರದ, ಸ್ಥಿಮಿತವಿಲ್ಲದ, ಅವಿಶ್ರಾಂತ, ಉಸುಲಿನ, ದಿಸುಲಿನ. v. *Inconsistent, turbulent.*

Restlessly, ad. ಅವಿಶ್ರಾಂತವಾಗಿ, ಹೊರಳಾಟಿಕೆಯಾಗಿ; *(to tumble about restlessly in bed)* ಹಾಸಿಕೆಯಲ್ಲಿಸಂಕಟಬಡ, ಒದ್ದಾಡ, ಹೊರಳಾಡ.

Restlessness, s. n. *(want of rest or ease)* ನಿರ್ನಿದ್ರೆ, ನಿದ್ರಾಹೀನತೆ, ಜಾಗರ, ಹೊರಳಾಟ, ಸುಸುಲಿಕೆ; *(unsteadiness)* ಚಪಲತೆ, ವ್ಯಾಕುಲತೆ, ಚಂಚಲ. v. *Inconstancy, turbulence.* *(restlessness of mind)* ದಿಸುಲು, ಉಸುಲು, ಮಿಡ್ಕೋಡಿಕೆ, ಅಸ್ಥಿಮಿತತ್ವ.

Restorable, a. *(recoverable)* ತಿರಿಗಿಸಂಪಾದಿಸತಕ್ಕ, ಕೂಡಿಸತಕ್ಕ, ಚಿಕಿತ್ಸೆಮಾಡತಕ್ಕ, ಪಾಕ್ಷೀಯಮಾಡತಕ್ಕ.

Restoration, s. n. ಹಿಂದಕ್ಕೆಕೊಡುವಿಕೆ, ವಾಪಸುಕೊಡುವಿಕೆ. v. *Restitution.* *(restoration of health)* ಸ್ವಸ್ಥ, ಸ್ವಸ್ಥಿತಿ, ಸಾವಾಸವಿಕೆ.

Restorative, a. ಸೌಖ್ಯಮಾಡುವ, ನಿರೋಗಮಾಡುವ, ಸ್ವಸ್ಥವಾಗುವ, ಸ್ಥಿಮಿತಪಡಿಸುವ.

To Restore, v. a. *(give back, send back, bring back)* ತಿರಿಗಿಕೊಡ, ಹಿಂದಕ್ಕೆಕೊಡ. v. *To retrieve, re-establish, recover, repay* *(to restore health)* ಸೌಖ್ಯಮಾಡ, ಸ್ವಸ್ಥಮಾಡ.

Restored, part. ತಿರಿಗಿಕೊಟ್ಟ, ಹಿಂದಕ್ಕೆಕೊಟ್ಟ, ಸಲ್ಲಿಸಿದ; *(restored to health)* ಸ್ವಸ್ಥವಾದ, ಚೇತರಿಸಿಕೊಂಡ, ಸೌಖ್ಯವಾದ, ಲಘುವಾದ; *(to be restored)* ಸೌಖ್ಯವಾಗಿರ, ಸ್ವಸ್ಥವಾಗಿರ. v. *To return.*

Restorer, s. n. ತಿರಿಗಿಕೊಡುವವ, ಹಿಂದಕ್ಕೆಕೊಡುವವ.

To Restrain, v. a. *(curb)* ಬಿಗಿಹಿಡಿಯ, ಹಿಂದಕ್ಕೆಯಳೆಯ. v. *To check, repress, overawe.* *(to limit, confine)* ನಿಬಂಧನೆಮಾಡ, ಕಟ್ಟುಮಾಡ. v. Also *to hinder.* *(to restrain one's self)* ನಿಗ್ರಹಿಸ, ತಾಳ, ಬಿಗಿಕಟ್ಟು; *(to restrain the breath)* ಉಸುರುಬಿಗಿಹಿಡಿಯ, ದಂಮುಹಿಡಿಯ; *(to restrain anger)* ಕೋಪಬಿಗಿಹಿಡಿಯ, ಕೋಪಶಮನಮಾಡ, ಸಿಟ್ಟುತಾಳ.

Restrainable, a. ವಶವಾಗತಕ್ಕ, ಹಿಡಿಯತಕ್ಕ.

Restrained, part. *(checked)* ಬಿಗಿಹಿಡಿದ, ಕಟ್ಟುಮಾಡಿದ, ಅಡಗಿಸಿದ, ಮಟ್ಟುಮಾಡಿದ; *(limited)*

ಮ್ಯೇರೆಮಾಡಿದ, ಕಟ್ಟುಮಾಡಿದ, ನಿಬಂಧನೆಮಾಡಿದ. v. *Restricted.*

Restrainedly, ad. ಮ್ಯೇರೆಯಾಗಿ, ಕಟ್ಟಾಗಿ, ಪಟ್ಟಾಗಿ, ನಿಬಂಧನೆಯಾಗಿ.

Restrainer, s. n. ಬಿಗಿಹಿಡಿಯ.

Restraint, s. n. (*check*) ಬಿಗಿಹಿಡಿಯುವಿಕೆ, ನಿಲಹಿಡಿಯುವಿಕೆ, ಹದ್ದು, ಕೈದು; (*limitation*) ಬಂಧಕ, ಕಟ್ಟು, ಪಟ್ಟು.

To Restrict, v. a. ಪಟ್ಟಿನಲ್ಲಿಯಿಡ, ಕಟ್ಟುಮಾಡ, ಪಟ್ಟುಮಾಡ.

Restricted, part. ಕಟ್ಟುಮಾಡಿದ, ಪಟ್ಟುಮಾಡಿದ.

Restriction, s. n. ಪಟ್ಟು, ಹದ್ದು, ಕಟ್ಟು, ಬಂಧ, ನಿಬಂಧನ. v. *Restraint.*

Restrictive, Restringent, a. ನಿಲಹಿಡಿಯುವ, ಅಟಿಕಾಯಿಸುವ, ಪಟ್ಟುಮಾಡುವ.

Restrictively, ad. ಪಟ್ಟಾಗಿ, ಅಟಿಕಾವಾಗಿ, ಕಟ್ಟಾಗಿ.

Result, s. n. ಫಲ, ನಫ, ಕಿಫಾಯತು. v. *Effect, inference.* (*resolve, decision*) ನಿಕರ, ಪನ್ಯೋನಿರ್ಧಾರ, ಹಾಸಲುಶ್ರೇರಿಕೆ.

To Result, v. n. (*rise as a consequence*) ಸಂಪ್ರಾಪ್ತಿಸ, ಆಗ, ಸಂಭವಿಸ; What was the *result* of your enquiry? ನೀನುವಿಚಾರಿಸುವದರಿಂದಯೇನಾಯಿತು, or ನಿಂನವಿಚಾರಣೆಯಿಂದಯೇನುಬಂತು; No good can *result* from such conduct ಇಂಥಾನಡತೆಯಿಂದಲುನಿನಗೆಯೇನು ಪ್ರಯೋಜನವಾಗದು, or ಈನಡತೆಯಿಂದಲುನಿನಗೇನುಕಿಫಾಯಿತಿಯಾಗದು; If I take this medicine what will be the *result*? ನಾನುಈಔಷಧವಂನುತೆಗದುಕೊಂಡರೆ ನನಗೇನಾಗುವದು; (*to result, to spring or fly back*) ಪುಟಿಯ, ಎದುರೊದಿಯ.

Resumable, a. ಹಿಂದಕ್ಕೆತೆಗದುಕೊಳ್ಳುವ, ಫಿರಾಯಿಸಿಕೊಳ್ಳುವ.

To Resume, v. a. (*take back*) ತಿರಿಗಿಯೆತ್ತಿಕೊಳ್ಳ; (*to resume a discourse*) ಪುನಹಾಆರಂಭಿಸ.

Resumption, s. n. ತಿರಿಗಿತೆಗದುಕೊಳ್ಳುವಿಕೆ, ಹಿಂದಕ್ಕೆತೆಗದುಕೊಳ್ಳುವಿಕೆ.

Resumptive, a. ಹಿಂದಕ್ಕೆತೆಕ್ಕೊಳ್ಳುವ, ತಿರಿಗಿತೆಗದುಕೊಳ್ಳುವ.

Resurrection, s. n. ಪುನರುತ್ಥಾನ, ಪುನರ್ಜನ್ಮ; (*the resurrection day*) ಪುನರುತ್ಥಾನದ ದಿವಸ.

To Resuscitate, v. a. ಪುನರುತ್ಥಾನಮಾಡ, ಪುನರ್ಜನ್ಮಿಸ. v. *To revive.*

Resuscitation, s. n. ಪುನರುತ್ಥಾನ, ಪುನರ್ಜನ್ಮ. v. *Resurrection.*

To Retail, v. a. ಚಿಲ್ಲರೆಯಾಗಿಮಾರ.

Retail, s. n. ಚಿಲ್ಲರೆ, ಚಿಲ್ಲರೆವ್ಯವಹಾರ; Does that merchant deal in the *retail* or whole-sale way? ಆವರ್ತಕನುವಟ್ಟುಗಟ್ಟ್ಯಾಗಿಮಾರುತ್ತಾನೋಚಿಲ್ಲರೆಯಾಗಿಮಾರುತ್ತಾನೋ.

Retailed, part. ಚಿಲ್ಲರೆಯಾಗಿಮಾರಿದ, ವಿಕ್ರಯಿಸಿದ, ಚಿಲ್ಲರೆಯಾಗಿ.

Retailer, s. n. ಚಿಲ್ಲರೆಯಾಗಿಮಾರುವವ, ಚಿಲ್ಲರೆವರ್ತಕ. v. *Pedlar.*

To Retain, v. a. (*withhold*) ನಿಲ್ಲಿಸಿಡ, ಇಟ್ಟುಬಿಡ, ಹಾಕಿಡ; (*to keep in confinement*) ಬಂಧಿಸ,

ಕಟ್ಟಿಮಾಡು, ಅಟಕಾಯಿಸು. v. *To keep, detain, restrain, hinder.* (*to keep in pay, maintain as followers*) ಸಂಬಳದಲ್ಲಿಡು. v. *To hire, pension.*

Retained, part. (*withheld*) ನಿಲ್ಲಿಸಿದ್ದ, ಇಟ್ಟಿದ್ದ, ಹಾಕಿಟ್ಟ; (*kept on pay, maintained*) ಸಂಬಳವಿಟ್ಟ, ಜೀತವಿಟ್ಟ.

Retainer, s. n. ಸಂಬಳದಾಳು, ಜೀತದಾಳು, ಆಶ್ರಯನು, ಹೊಂದಿದವನು. v. *Dependant, pensioner, follower.*

To Retake, v. a. ಹಿಂದಕ್ಕೆ ತೆಗೆದುಕೊಳ್ಳು, ತಿರಿಗಿಸೆಕೊಳ್ಳು.

Retaken, part. ಹಿಂದಕ್ಕೆ ತೆಗೆದುಕೊಂಡ, ತಿರಿಗಿಸೆಕೊಂಡ.

To Retaliate, v. a. ಮತ್ಸರ ತೀರಿಸಿಕೊಳ್ಳು, ಛಲ ತೀರಿಸಿಕೊಳ್ಳು, ಹಗೆತೀರಿಸಿಕೊಳ್ಳು.

Retaliated, part. ಹಗೆತೀರಿಸಿಕೊಂಡ, ಛಲತೀರಿಸಿಕೊಂಡ.

Retaliation, s. n. ಛಲ, ಮುಯ್ಯಿ, ಬದಲಿಗೆಬದಲು, ವೈರಶುದ್ಧಿ, ನಿರ್ಯಾತನವು.

To Retard, v. a. ತಾಮಸ ಮಾಡು, ಆಲಸ್ಯಮಾಡು, ಅಭ್ಯಂತರಿಸು, ಅಟಕಾಯಿಸು, ಅಡ್ಡಕಟ್ಟು, ಆಲಸ್ಯಮಾಡು. v. *To hinder, obstruct, delay.*

Retarded, part. ಆಲಸ್ಯವಾದ, ಅಟಕಾಯಿಸಿದ, ಅಡ್ಡಕಟ್ಟಿದ, ಆಲಸ್ಯಮಾಡಿದ, ಅಭ್ಯಂತರಿಸಿದ.

Retention, s. n. (*withholding*) ಹಾಕಿಬಿಡುವಿಕೆ, ಇಟ್ಟುಬಿಡುವಿಕೆ; (*holding*) ಹಿಡಿಯುವಿಕೆ; (*retention, or retentiveness of memory*) ಮರೆಯದ ನೆನಪು, ಘಟ್ಟಿ ನೆನಪು. v. Also *confinement, restraint, limitation.*

Retentive, a. (*having the power of holding or withholding*) ಹಿಡಿಯುವ, ಗ್ರಹಿಸುವ; (*having memory*) ಮರೆಯದ ನೆನಪುಳ್ಳ, ಬಹುಜ್ಞಾಪಕದ.

Reticular, Reticulated, Retiform, a. ಅಲ್ಲಿಕೆಯ, ಝಾಲರಿಯ, ಜಂಟಿಯ.

Retinue, s. n. ಬುಸುಗ, ಬುಕಾರ, ಜಲ್ಲೆಬು, ಪರಿವಾರಜನರು. v. *Train, equipage.*

To Retire, v. a. ಹಿಂಜರಿಯು, ಬೆಂನುಕೊಟ್ಟುಹೋಗು, ಮರಿಯು. v. *To retreat, recede, resign.* (*to retire from one another*) ಒಬ್ಬರಿಗೊಬ್ಬರು ದೂರದು ಹೋಗು; (*to go into retirement*) ಏಕಾಂತ ಸ್ಥಲಕ್ಕೆ ಹೋಗು; (*to retire from office*) ಉದ್ಯೋಗ ಸಾಕುಮಾಡಿಕೊಳ್ಳು.

Retired, part. (*private, recluse*) ಏಕಾಂತದ, ರಹಸ್ಯದ, ಜಂಜಾಟವಿಲ್ಲದ; (*withdrawn*) ಬಿಟ್ಟುಬಿಟ್ಟ, ದೂರದುಹೋದ, ಪ್ರತ್ಯೇಕವಾದ.

Retirement, s. n. ಬೆಂನುಕೊಟ್ಟುಹೋಗುವಿಕೆ, ಭಗ್ನವಾಗುವಿಕೆ, ಮರಿಯುವಿಕೆ. v. *Retreat,* (*retirement, retiredness of life*) ವಾನಪ್ರಸ್ಥವಾಗಿರುವಿಕೆ, ನಿಶ್ಚಿಂತೆಯಾಗಿರುವಿಕೆ; (*retirement from business*) ಕೆಲಸಬಿಡುವಿಕೆ, ಸಾಕುಮಾಡಿಕೊಳ್ಳುವಿಕೆ; (*retirement, a place of retirement*) ಏಕಾಂತದ ಸ್ಥಲ.

Retort, s. n. (*sharp answer*) ಪ್ರತಿನಿಂದೆ, ಯೆದುರಾಡ್ವಿಕೆ, ರದ್ದುಜವಾಬು. v. *Repartee, raillery.*

To Retort, v. a. ಬದಲಿಗೆಬದಲುಕೊಡು, ಬದಲಿಗೆಬದಲುಹೇಳು, ಪ್ರತ್ಯುತ್ತರಕೊಡು. v. *To repartee, recriminate.*

To Retoss, v. a. ಎದುರುಹಾಕು, ಎದುರುಹೊಗೆಯು.

To Retrace, v. a. ಮೂಲದ ಪರ್ಯಂತರಕ್ಕು ಶೋಧಿಸು, ಆದಮಟ್ಟಿಗೂ ಹುಡುಕು, ಬೇರ್ಬುನಾದಿ ಯುಂಗಡಿಸು.

To Retract, v. a. ಹಿಂದಕ್ಕೆ ತಿರಿಗಿಹಾಕು, ಹೊಂಕ್ಕು.

Retracted, part. ತಿರಗಬಿದ್ದ, ತಿರಿಗಿಕೊಂಡ, ಬದಲಾಯಿಸಿದ, ತಿರಿಗಿಹಾಕಿದ.

Retraction, s. n. ತಿರಿಗಿಬೀಳುವಿಕೆ, ಮಾತುತಪ್ಪುವಿಕೆ.

Retreat, s. n. *(place of privacy)* ಅಡಗು, ತಗ್ಗು, ಹಳ್ಳ. v. *Retirement.* *(the retreat of an army)* ಮುರಿದೋಡುವಿಕೆ, ಪರಾಭವ, ಪಲಾಯನ, ಅಪಕ್ರಮವು, ಪ್ರದ್ರಾವ, ಉದ್ರಾವ, ಸಂದ್ರಾವ, ಸದ್ರಾವ, ವಿದ್ರವ, ದ್ರವ, ಅಪಯಾನ; *(a shameful retreat)* ಹೇಡಿಯಾಗಿಮುರಿಯುವಿಕೆ, ಮುಖಭಂಗವಾಗಿಹೋಗುವಿಕೆ, ಕ್ಯೋಬೆಯಾಗಿಓಡುವಿಕೆ; *(a feigned retreat)* ಕಪಟದ ಮುರಿಯುವಿಕೆ, ವಂಚನೆಯಾಗಿಮುರಿಯುವಿಕೆ, ಜಾಲ, ಮೋಸ.

To Retreat, v. n. *(from an enemy)* ಬೆಂನುಕೊಟ್ಟುಓಡಿಹೋಗು, ಪರಿಭವವಾಗಿಹೋಗು, ಪಲಾಯಿಸು.

Retreated, part. ಮುರಿದ, ಓಡಿದ, ಸೋತ, ಪೋಚೆಯಾದ.

To Retrench, v. a. *(cut off, abridge)* ತಗ್ಗಿಸು, ಇಳಿಸು, ಕಡಿಮೆಮಾಡು. v. *To pare, lop;* also *to confine.*

Retrenched, part. ಕಡಿಮೆಮಾಡಿದ, ತಗ್ಗಿಶಿದ, ಇಳಿಶಿದ.

Retrenchment, s. n. ಇಳಿತರ, ಕಂಮ್ಮಿ, ಕಡಿಮೆ, ತಗ್ಗು.

Retribution, s. n. ಪ್ರತಿಕೊಡುವಿಕೆ, ಬದಲುಕೊಡುವಿಕೆ. v. *Repayment, recompense.*

Retributive, Retributory, a. ಬದಲುಕೊಡುವ, ಪ್ರತಿಕೊಡುವ.

To Retrieve, v. a. *(recover, repay)* ಹಿಂದಕ್ಕೆತಿರಿಗಿಶಿಕೊಳ್ಳು, ಮರಳಿಯಾರ್ಜಿಸು. v. *To re-establish, restore.* *(to retrieve a loss)* ಹೋದದ್ದುತಿರಿಗಿಶಿಕೊಳ್ಳು, ನಷ್ಟವನಿವರ್ತಿಶಿಕೊಳ್ಳು.

Retrievable, a. ಹಿಂದಕ್ಕೆತಿರಿಗಿಸಿಕೊಳ್ಳತಕ್ಕ, ಮತ್ತುಸಂಪಾದಿಶಿಕೊಳ್ಳತಕ್ಕ. v. *Recoverable.*

Retrocession, Retrogradation, Retrogression, s. n. ವಕ್ರಗತಿ, ಹಿಂಜರುವಿಕೆ, ವಿಮುಖವಾಗುವಿಕೆ, ಮುಖಭಂಗ. v. *Contrary, opposite.*

Retrograde, a. ಹಿಂಜರುಗುವಿಕೆಯ, ವಿಮುಖದ.

To Retrograde, v. n. ಹಿಂಜರಿಯು, ವಿಮುಖವಾಗು, ತಿರಿಗಿಕೊಳ್ಳು.

Retrospect, Retrospection, s. n. ಗತವಿಗೋಚಿಸುವಿಕೆ, ಹಿಂದಾದ್ದುಚಿಂತ್ರಿಸುವಿಕೆ.

Retrospective, a. ಗತನೆನಿಸುವ, ಹಿಂದಿನದುಗಣೆಸುವ, ಚಿಕ್ಕಂದಿನದುಯೋಚಿಸುವ; *(to take a retrospective view)* ಹಿಂದಕ್ಕೆನೋಡು, ಗತವುಯೂಕ್ಷಿಸು, ಹೋದದ್ದುದ್ರಿಷ್ಟಿಸು.

To Return, v. a. *(come back)* ಹಿಂದಕ್ಕೆಬರು, ತಿರಿಗಿಬರು; *(to go back)* ಹಿಂದಕ್ಕೆಹೋಗು, ತಿರಿಗಿಹೋಗು; *(to come back to the same state)* ಸ್ವಸ್ವಭಾವಕ್ಕೆಬರು, ಯಥಾಪ್ರಕಾರವಾಗು, ಯಥಾಸ್ಥಿತಿಯಾಗು; *(to give back)* ಹಿಂದಕ್ಕೆಕೊಡು,

ತಿರಿಗಿಕೊಡು. v. *To restore, repay.* (*to begin after a periodical revolution of the moon, &c.*) ಪುನರಾವೃತ್ತಿಯಾಗು, ಪುನರಾಗಮನವಾಗು; (*to return periodically, as an ague*) ಸರ್ತಿಬರು; (*to return to one's senses, after madness, inebriety, anger, or fainting*) ಸ್ಮಾರಕವಾಗು, ಸ್ಮೃತಿಬರು, ಎಚ್ಚರಿಕೆಯಾಗು, ತೆಪ್ಪರಿಸಿಕೊಳ್ಳು, ಯಥಾಪ್ರಕಾರಕುದುರು; (*to return to any former habit*) ಪೂರ್ವಸ್ವಭಾವವಾಗು, ಯಥಾಪ್ರಕಾರವಾಗು; (*to return upon one*) ಪ್ರತಿಚೋಂಕ್ಯಹೇಳು, ಪ್ರತ್ಯುಪದೇಶಹೇಳು, ಬದಲುತಿಪ್ಪನುಹೇಳು; (*to return an answer*) ಬದಲುತ್ತರಕೊಡು, ಪ್ರತ್ಯುತ್ತರಕೊಡು; (*to return thanks*) ಹರಿಕೆವಪ್ಪಿಸು, ಸ್ತೋತ್ರವಂನುಮಾಡು.

Return, s. n. (*to any place*) ತಿರುಗುವಿಕೆ; (*profits arising from merchandize*) ಆದಾಯ, ಲಾಭ, ನಫೆ. v. *Profit, revenue;* also *retribution, repayment, report.* (*a return to a former habit*) ಮೊದಲಿನದತಿಗೆಬರುವಿಕೆ, ಪೂರ್ವದಂತಾಗುವಿಕೆ. v. *Relapse.* (*a return to one's duty*) ಯಥಾಪ್ರಕಾರವುದ್ಯೋಗಕ್ಕೆಬರುವಿಕೆ; (*a return after a periodical revolution*) ಪುನರಾವರ್ತನೆ, ಪುನಃಪ್ರದಕ್ಷಿಣೆ. v. *Period, revolution.* (*return from a journey*) ಹಿಂದಕ್ಕೆತಿರುಗುವಿಕೆ, ಪುನರಾಗಮನ; (*cattle returning from pasture*) ಕಾಲಾಡಿಬರುವಿಕೆ, ಮೇದುಬರುವಿಕೆ.

Returnable, a. ತಿರುಗುವ, ಹಿಂದಕ್ಕೆಕಳುಹಿಸತಕ್ಕ.

Returned, part. ಹಿಂದಕ್ಕೆಕಳುಹಿಸಿದ.

To Reveal, v. a. ತಿಳಿಸು, ಹೇಳು, ಬಾಹಿರಂಗಮಾಡು, ಹೊರಗೆತೆರೆ. v. *To disclose, discover.*

Revealed, part. ತಿಳಿಸಿದ, ಬಹಿರಂಗವಾದ, ಹೊರಗೆಬಂದ.

Revealer, s. n. ಪ್ರಸಿದ್ಧಿಮಾಡುವವ, ಹೊರಗೆಹಾಕುವವ, ತಿಳಿಸುವವ.

To Revel, v. a. ಧೂಮಧಾಂಮಾಡು, ದುಂದುಮಾಡು, ಗೋಲಾರ್ಗೋಲು.

Revel-rout, s. n. ಗೋಲಾರ್ಗೋಲು, ಧಾಂಧೂಂ, ಗೊಲ್ಲೆ, ಕುಮುಲು. v. *Mob.*

Reveller, s. n. ಭೋಗಳಾಡುವವ, ದುಂದುಗಾರ, ಹೊಟ್ಟೆಮುಚ್ಚ.

Revelry, s. n. ದುಂದು, ಭೋಗಳಾಡುವಿಕೆ. v. *Festivity, mirth.*

Revelation, s. n. ತಿಳಿಯಮಾಡುವಿಕೆ, ಪ್ರಸಿದ್ಧಿ; (*revelation in augury*) ಆಕಾಶವಾಣಿ, ಧರ್ಮದೇವತೆ.

Revenge, s. n. ವೈರಶುದ್ಧಿ, ಮುಯ್ಯಿ, ಪ್ರತಿಕೊಡುವಿಕೆ, ಹಗೆತೀರಿಸುವಿಕೆ, ನಿರ್ಯಾತನೆ, ಪ್ರತೀಕಾರ, ವೈರನಿರ್ಯಾತನ; (*to instigate one to revenge*) ಹಗೆತೀರಿಸವುಬ್ಬಗೆಮಾಡುವಿಕೆ; (*a fomenter of revenge*) ಕುರಿಕಲ್ಪಿಸುವವ, ಕಿಡಿಗೇಡಿ, ಮನೆಮುರುಕ, ಕೊಳ್ಳಿಕೊಂಬು, ಕ್ಷುದ್ರ.

To Revenge, v. a. ಹಗೆತೀರಿಸಿಕೊಳ್ಳು, ಬದಲಿಗೆಬದಲುಮಾಡು, ಸರಿಕಟ್ಟು, ಮುಯ್ಯಿಗೊಡು.

Revengeful, Revenging, a. ಮತ್ಸರದ, ಕ್ರೋಧದ, ಛಲದ, ಹಗೆಯ; (*a revengeful mind*) ಮತ್ಸರದಮನಸ್ಸು, ಹಗೆತೀರಿಸಿಕೊಳ್ಳುವಗುಣ.

Revengefully, ad. ಪ್ರತಿಕೊಡುವಿಕೆಯಾಗಿ, ಮತ್ಸರವಾಗಿ, ಛಲವಾಗಿ.

Revengefulness, s. n. ವೈರತ್ವ, ಮತ್ಸರ, ಛಲ, ಈರ್ಷ್ಯ, ದ್ವೇಷ, ರೋಷ.

Revenger, s. n. (*one who takes revenge*) ಛಲತೀರಿಸಿಕೊಳ್ಳುವವ, ಮತ್ಸರತೀರಿಸಿಕೊಳ್ಳುವವ, ಮುಯ್ಯಿಕೊಡುವವ, ಕಾಯಿಕ್ಕಾಯಿಮಾಡುವವ; (*one who avenges or punishes*) ಪ್ರಾಯಶ್ಚಿತ್ತಕೊಡುವವ, ಶಿಕ್ಷಕ; (*the revenger, omnipotence*) ದುಷ್ಟನಿಗ್ರಹ.

Revenue, s. n. ಹುಟ್ಟುವಳಿ, ಆಮದಾನಿ, ಹಾಸಿಲು, ಸುವರ್ಣಾದಾಯ, ಮಹಲು, ಮಹಮೋಜಾ; (*a collector of revenue*) ಆಮಿಲುದಾರ, ತಹಸೀಲುದಾರ, ತರಫುದಾರ; (*the superintendent of the revenue*) ಆಮಿಲುಅಮಿರ್, ಆಸಫ; (*a tribunal or board of revenue*) ಸದರದಿವಾನರು, ಮೊಖಸಲ್ಆಸಫರು; (*an office of revenue*) ತಾಲೂಕುಕಚೇರಿ; (*paying a revenue*, adj.) ಹುಟ್ಟುವಳಿಯ, ಹಾಸೀಲಿನ, ಆಮದಾನಿಯ; (*the settlement of paying the revenue by instalments*) ಕಿಸ್ತುಬಂದಿ, ಕಂದಾಯದಹೊಬ್ಬು; (*a year's revenue*) ವರ್ಷದಪತ್ರಿಗೆ, ಫಸಲೀಸಾಲು; (*the time of settling the old year's account and beginning the new*) ಜಮಾಬಂದಿಕಾಲ, ಅಖೈರುಸಾಲು; (*to collect revenue*) ವಸೂಲುಮಾಡ, ಇರಸಾಲುಮಾಡ.

To Reverberate, v. a. (*beat or throw back*) ಯೆದುರುಹೊಡೆಯ, ಯೆದುರುತಾಕ, ಯೆದುರುಒದಿಯ; (*to reverberate, as sound*) ಪ್ರತಿಶಬ್ದಕೊಡ, ಪ್ರತಿಧ್ವನಿಕೊಡ. v. *To echo.* (*to reverberate, as rays*) ಪ್ರತಿಫಲಿಸ.

Reverberated, part. ಎದುಕೊಡ್ಡ, ಫುಟಿದ; (*as sound*) ಪ್ರತಿಧ್ವನಿಮಾಡ, ಪ್ರತಿಧ್ವನಿಕೊಟ್ಟ; (*any place where sound is reverberated*) ಪ್ರತಿಧ್ವನಿಯಾಗುವ ಸ್ಥಲ.

Reverberation, s. n. ಎದುಕೊಡುವಿಕೆ, ಹಿಂದಾಕುವಿಕೆ; (*reverberation of sound*) ಪ್ರತಿಧ್ವನಿ, ಪ್ರತಿಶಬ್ದ, ಪ್ರತಿನಾದ, ಪ್ರತಿವರ.

To Revere, Reverence, v. a. ಸನ್ಮಾನಿಸ, ಮಾನತೋರಿಸ, ವಂದನೆಮಾಡ, ನಮಸ್ಕಾರಮಾಡ, ಕೈಮುಗಿಯ, ಮರ್ಯಾದಿನಡಿಸ. v. *To venerate, honor.*

Revered, part. ಸನ್ಮಾನಿಸಿದ, ಘನವುಹೊಂದಿದ. v. *Venerated, honored, esteemed.*

Reverence, s. n. ವಂದನೆ, ಸನ್ಮಾನ, ಘನವು, ಮರ್ಯಾದೆ, ನಮಸ್ಕಾರ, ಹುಗಿಲು, ಎರಗುವಿಕೆ, ಮೊಗ್ಗ, ಮಣಿಕೆ, ತುಂಬಿ, ಪೊಡವಡಿಕೆ. v. *Veneration, respect, honour.* (*reverence, act of obeisance*) ನಮಸ್ಕಾರ, ಸಾಷ್ಟಾಂಗ, ಕೈಮುಗಿಯುವಿಕೆ.

Reverencer, Reverer, s. n. ಸನ್ಮಾನಿಸುವವ, ಮಾನತೋರಿಸುವವ, ಮರ್ಯಾದೆನಡಿಸುವವ.

Reverend, a. ಮಾನಹೊಂದಿದ, ಘನವುಹೊಂದಿದ, ವಂದನೆಯಾದ. v. *Venerable, revered.*

Reverend, Reverential, a. ಮಾನತೋರಿಸುವ, ಸನ್ಮಾನಿಸುವ. v. *Respectful.*

Reverently, ad. ಮಾನವಾಗಿ, ಘನವಾಗಿ, ಮರಿಯಾದಿಯಾಗಿ, ವಂದನೆಯಾಗಿ.

To Reverse, v. a. ಹಿಂದುಮುಂದುಹಾಕ, ತಲೆಕೆ

ಳ್ಗೆಮಾಡು, ನಿರ್ಮೂಲಮಾಡು, ತೆಗೆದುಹಾಕು. v. *To overturn, subvert, repeal, contradict.*

Reversed, part. ತಲೆಕೆಳ್ಗೆಯಾದ, ಹಿಂದುಮುಂದಾದ, ತೆಗೆದುಹಾಕಿದ; *(to be reversed)* ಹಿಂದುಮುಂದಾಗು, ತಲೆಕೆಳ್ಗಾಗು, ನಿರ್ಮೂಲವಾಗು.

Reverse, s. n. ಹಿಂದುಮುಂದು, ತಲೆಕೆಳ್ಗು. v. *Inversion. (change)* ಬದಲು, ಪ್ರತಿ, ಬದಲಾಯಿಸುವಿಕೆ; *(the reverses of fortune)* ಆತ್ತೆ, ಕಷ್ಟಬೋಡಿಯುವಿಕೆ, ಅನಿಷ್ಟ; *(an opposite, contrary)* ಬದಲಿನ, ಎದುರಿನ.

Reversible, a. ತೆಗೆದುಹಾಕ ತಕ್ಕ.

Reversion, s. n. *(right of succession)* ಬಾಧ್ಯ, ಬಾಧಕರ. v. *Heritage, succession.*

Reversionary, a. ಬಾಧ್ಯದ, ಬಾಧಕರದ.

To Revert, v. a. ಹಿಂದಕ್ಕೆ ತಿರುಗು, ವಿಮುಖವಾಗು. v. *To return, reverberate.*

Revertible, a. ಹಿಂದಕ್ಕೆತಿರಿಗಿಹೋಗುವ.

Revery, s. n. ವಿಧಾವಿಧ ಧ್ಯಾನ, ಮನೋರಥ, ಗೊತ್ತಿಲ್ಲದ ಕನಸು.

To Review, v. a. *(look back)* ತಿರಿಗಿನೋಡು, ಹಿಂದಕ್ಕೆನೋಡು; *(to see or consider again)* ಮರಳಿನೋಡು, ಪುನರಾಲೋಚಿಸು. v. *To re-examine, survey. (to review an army)* ಪರೀಕ್ಷಿಸು, ಪರಿಕಿಸು, ನಿಗಾದಸ್ತುಮಾಡು, ವಿಚಾರಿಸು, ಮಿಸಲುಮಾಡು; *(the place where an army is reviewed)* ಕವಾಯಿತುಸ್ಥಲ, ಬಾಹಿರಂಗಸ್ಥಲ; *(to review a book)* ಪುಸ್ತಕಪರೀಕ್ಷಿಸು, ಸಂಪ್ರತಿಸು.

Review, s. n. *(retrospection)* ತಿರಿಗಿನೋಡುವಿಕೆ, ಪುನರಾಲೋಚನೆ. v. *Examination, survey. (the review of an army)* ಪರೀಕ್ಷೆ, ನಿಗಾದಸ್ತು, ವಿಚಾರಣೆ, ಮಿಸಲು; *(the review of a book)* ಪುಸ್ತಕಪರೀಕ್ಷೆ, ಸಂಪ್ರತಿಸೋಧನ.

Reviewed, part. ಪುನರಾಲೋಚಿಸಿದ, ತಿರಿಗಿನೋಡಿದ; *(reviewed, as an army)* ನಿಗಾದಸ್ತುಮಾಡಿದ, ಮುಖಾಂಬಿತೆತೆಗೆದುಕೊಂಡ, ಮಿಸಲುಮಾಡಿದ.

Reviewer, s. n. ಪರೀಕ್ಷಿಸುವವ, ವಿಚಾರಿಸುವವ, ವಿಚಾರಣೀಕ.

To Revile, v. a. ನಿಂದಿಸು, ಬೈಯ್ಯು, ದೂಷಿಸು, ದೂರು, ಆಡಿಕೊಳ್ಳು. v. *To reproach.*

Reviled, part. ನಿಂದಿಸಿದ, ದೂಷಿಸಿದ, ದೂರಿದ. v. *Reproached.*

Reviler, s. n. ನಿಂದಿಸುವವ, ದೂಷಕ, ನಿಂದಕ.

Reviling, s. n. ನಿಂದೆ, ದೂಷಣೆ, ಬೈಯ್ಯುವಿಕೆ, ಬೈಗಳು.

Revilingly, ad. ನಿಂದೆಯಾಗಿ, ದೂಷಣೆಯಾಗಿ, ಉದಾಸೀನವಾಗಿ.

To Revise, v. a. *(writing, &c.)* ತಿದ್ದು, ಪರಿಶೋಧಿಸು, ಸರಿನೋಡು, ಸಂಪ್ರತಿಸು. v. *To review.*

Revise, s. n. ತಿದ್ದಿಕೆ, ಸರಿನೋಡುವಿಕೆ. v. *Review.*

Reviser, s. n. ತಿದ್ದುವವ, ಸರಿನೋಡುವವ, ಸಂಪ್ರತಿಕ.

Revised, part. ತಿದ್ದಿದ, ಸರಿನೋಡಿದ, ಸಂಪ್ರತಿಸಿದ.

To Revisit, v. a. ಪುನರ್ದರ್ಶನಮಾಡು, ಪುನರ್ಭೇಟಿತೆಗೆದುಕೊಳ್ಳು.

Revival, Revivification, Reviviscency, s. n. ತೇರಿಕೆ, ಕಳೆಯಾಗುವಿಕೆ, ಕಾಜಾ, ಪುನರಾಚರಣೆ.

To Revive, v. a. *(return to life or vigour)* ತೇರಿಕೆಯಾಗ, ಕಳೆಯಾಗ, ತಾಜಾವಾಗ ; *(to restore life or vigour)* ತೇರಿಕೆಮಾಡ, ಕಳೆಯೇರಮಾಡ, ತಾಜಾಮಾಡ. v. Also *to rouse, quicken, renew.*

Revived, part. ತೇರಿಕೆಯಾದ, ಕಳೆಯಾದ, ತಾಜಾವಾದ.

Reviver, s. n. ತೇರಿಕೆಮಾಡುವವ, ಕಳೆಯಾಗಮಾಡುವವ, ಪುಷ್ಟಿಯಾಗಮಾಡುವವ, ಯಥಾಪ್ರಕಾರಮಾಡುವವ.

Reunion, s. n. ಪುನಸ್ಸಂಗಮ, ಮರಳಿಕಲಿಯುವಿಕೆ, ಮತ್ತುಕೂಡುವಿಕೆ.

To Reunite, v. a. ಮತ್ತೂಕೂಡಿಸ, ಮರಳಿಕಲಿಸ ; v. n. ಮತ್ತೂಕಲಿಯು, ಪುನರಂನ್ಯೋಂನ್ಯವಾಗ ; *(to reconcile)* ಸಮಾಧಾನಪಡಿಸ, ಸಮಜಾಯಿಸ.

Reunited, part. ಮತ್ತುಕಲತ, ಪುನರಂನ್ಯೋಂನ್ಯವಾದ.

Revocable, a. ತೆಗದುಹಾಕತಕ್ಕ, ಬಿಟ್ಟುಬಿಡತಕ್ಕ, ನಿಂದ್ರಿಸತಕ್ಕ.

Revocableness, s. n. ತೆಗದುಹಾಕತಕ್ಕದ್ದು, ಬಿಟ್ಟುಬಿಡತಕ್ಕದ್ದು, ನಿಂದ್ರಿಸತಕ್ಕದ್ದು.

To Revocate, Revoke, v. a. ತೆಗದುಹಾಕ, ಬಿಟ್ಟುಬಿಡ, ನಿಂದ್ರಿಸ, ವಿಸರ್ಜಿಸ. v. *To recall, retract, repeal.*

Revocation, Revokement, s. n. ತೆಗದುಹಾಕುವಿಕೆ, ವಿಸರ್ಜನೆ, ಉಲ್ಲಂಘನೆ. v. *Repeal.*

To Revolt, v. n. ತಿರಿಗಿಬೀಳ, ಮರ್ಕಳಿಸ. v. *To rebel, desert.*

Revolt, s. n. ತಿರಿಗಿಬೀಳ್ವಿಕೆ, ಮರ್ಕಳಿಕೆ, ಮೀರುವಿಕೆ. v. *Rebellion, desertion.*

Revolted, part. ತಿರಗಬಿದ್ದ, ಪೆರ್ಫಟಿಕಾಯಿಸಿದ.

Revolter, s. n. ತಿರಗಬೀಳುವವ, ಉದಾಸೀನಮಾಡುವವ, ಬಿಟ್ಟುಹೋಗುವವ. v. *Rebel, deserter.*

To Revolve, v. n. *(turn round)* ಉರುಳ ; *(revolve in the mind)* ತಿಳಿಮಳಿಗೊಳ, ಡೋಲಾಯಮಾನವಾಗ. v. *To consider, meditate.* *(any thing revolving in an orbit)* ಆವರ್ತನೆಯಾಗುವದು, ಪರಿವರ್ತನೆಯಾಗುವದು.

Revolution, s. n. *(revolving in a circle)* ಪ್ರದಕ್ಷಿಣಾ, ಆವರ್ತನೆ, ಪರಿವರ್ತನೆ ; *(revolutions)* ಬದಲಾಬದಲು ; *(the revolutions of the heavens)* ಗ್ರಹಚಾರ, ಗ್ರಹಚಲನೆ ; *(the revolutions of ages)* ಕಾಲತಿರುಗುವಿಕೆ, ಯುಗಪರಿಕ್ರಮಣೆ ; *(a revolution or change of government)* ಬದಲಾಯ್ವಿಕೆ, ಮನ್ವಂತರ, ಬದಲಾಗುವಿಕೆ, ಪ್ರತಿಪಾಲಟು.

Reward, s. n. ಪ್ರತಿಫಲ, ತಕ್ಕಫಲ, ಕಷ್ಟಾರ್ಜಿತ, ಸಂಭಾವನ. v. *Retribution.*

To Reward, v. a. ಸಂಭಾವಿಸ, ಪ್ರತಿಫಲಕೊಡ, ತಕ್ಕಫಲಕೊಡ, ಪ್ರತಿಕಾರಮಾಡ. v. *To recompense, repay.*

Rewardable, a. ಪ್ರತಿಫಲಕೊಡುವ, ಪ್ರತಿಕಾರಮಾಡುವ, ತಕ್ಕಫಲಕೊಡುವ.

Rewarded, part. ಪ್ರತಿಕಾರಮಾಡಿದ, ಪ್ರತಿಫಲಕೊಟ್ಟ.

Rewarder, s. n. ಪ್ರತಿಫಲಕೊಡುವವ, ಪ್ರತಿಕಾರಮಾಡುವವ.

Rhapsody, s. n. ಅಸಂದರ್ಭಕಲ್ಪನೆ, ಆಕಾಶ ಪಂಚಾಂಗ, ಅಸಂಬದ್ಧಕಲ್ಪನೆ.

Rhetorick, s. n. ಅಲಂಕಾರಶಾಸ್ತ್ರ, ಶೃಂಗಾರ ನಾಟಕ, ರಾಜನೀತಿ, ವಿದ್ಯಾವಿತರಣ. v. *Orator.*

Rhetorical, a. ಅಲಂಕಾರಶಾಸ್ತ್ರದ, ಶೃಂಗಾರ ನಾಟಕದ, ರಾಜನೀತಿಯ. v. *Oratorical.*

Rhetorician, s. n. ಸಾಂಖಿತಿ, ಅಲಂಕಾರ ಶಾಸ್ತ್ರೀ. v. *Orator.*

Rheum, s. n. ದೂಷಿ, ದೂಷಿಕ, ಕಂಣುಪಿಸುರು.

Rheumatick, a. ವಾತರೋಗದ.

Rheumatism, s. n. ವಾತರೋಗ.

Rheumy, a. ದೂಷಿಯ, ದೂಷಿಕದ, ಕಂಣುಪಿಸುರಿನ.

Rhinoceros, s. n. ಏಕಚರ, ಗಂಡಕ, ಖಂಗ, ಖಂಗಿನ, ಖಡ್ಗಮೃಗ.

Rhubarb, s. n. ರೇವಲ್ ಚೆಂನಿ.

Rhyme, s. n. ಎತಿ, ಪ್ರಾಸ, ಛಂದೋಲಕ್ಷಣ, ಶ್ಲೋಕ, ಗಾಥ.

Rhymer, s. n. ಕವಿ, ಅಷ್ಟೇಕ. v. *Poet.*

Rhythmical, a. ಶ್ಲೋಕದ, ಪ್ರಾಸದ.

Rhythmically, ad. ಶ್ಲೋಕವಾಗಿ, ಪ್ರಾಸವಾಗಿ; *(not rhythmical)* ಪ್ರಾಸವಿಲ್ಲದ, ಶ್ಲೋಕವಿಲ್ಲದ.

Rib, s. n. ಪಕ್ಕೆಲುಬು, ಪಾರ್ಶುಕೆಯು, ಪಾರ್ಶ್ವಾಸ್ಥಿಯು; *(the short ribs)* ಮುಡುಸು, ಬತ್ರಿಲುಬು.

Ribbed, a. ಪಕ್ಕೆಲುಬಿನ, ಬತ್ರಿಲುಬಿನ.

Ribaldry, s. n. ಬಂಡುಬೂಂತು, ಅಚ್ಚಾಪಚ್ಚೆ, ದಕಾರ, ಥುಕಾರ.

Riband, Ribbon, s. n. ಲಾಡ, ನವಾರ. v. *Fillet.*

Rice, s. n. *(in the husk)* ನೆಲ್ಲು, ವ್ರೀಹಿ; *(cleaned from the husk)* ಅಕ್ಕಿ, ತಂಡುಲ; *(cooked rice)* ಅಂನ, ಭೋಜನ, ಆಹಾರ; *(fine rice)* ಸಂಣಕ್ಕಿ; *(coarse rice)* ಮಡ್ಡಿಯಕ್ಕಿ, ದಪ್ಪಕ್ಕಿ, ಬಗಡೆಯಕ್ಕಿ; *(rice bread)* ಅಕ್ಕೀತೊತ್ರಿ, ಅಕ್ಕೀರೊಟ್ಟಿ; *(rice soup)* ಅಕ್ಕೀಗಂಜಿ; *(rice plant)* ನೆಲ್ಲುಗದ್ದೆ; *(rice merchant)* ಅಕ್ಕೀವರ್ತಕ; *(the sweepings or refuse of rice)* ಜೊಲ್ಲ, ಜಪಟಿ, ಅದಿಗಂಟ್ಲು; *(bruised rice)* ಕುಟ್ಟಿದಹಿಟ್ಟು, ಹಣೆದಹಿಟ್ಟು. The varieties of rice are, ಮುಲ್ಲಕ್ಕಿ, ಜೋತೆಪಿತ್ರಕ್ಕಿ, ಚಂಸಂಗಿಯಕ್ಕಿ, ಬಗದಾಯಕ್ಕಿ, ಗರುಡಚಂಸಂಗಿಯಕ್ಕಿ, ಬುದುಮೆಚಂಸಂಗಿಯಕ್ಕಿ, ಕಾರಸಂಬಾಳಕ್ಕಿ, ಕಿಂಬತ್ರಿಯಕ್ಕಿ, ಸಂಣಕ್ಕಿ, ಶಿರಂಗಕ್ಕಿ, ಜೀರಾಸಂಣಕ್ಕಿ, ಗಂಧಸರಿಯಕ್ಕಿ, ಕೇಶಕ್ಕಿ, ಮೂಡಕ್ಕಿ, ಕೊಳಸಲಕ್ಕಿ, ಹದಪಲಕ್ಕಿ. For the meaning of these, the student is referred to the other volume of the Carnáṭaca Dictionary, under the word ಅಕ್ಕಿ.

Rich, a. ಭಾಗ್ಯದ, ಐಶ್ವರ್ಯದ, ಸಂಪತ್ತಿನ, ವೈಭವದ, ದ್ರವ್ಯದ, ಸಿರಿಯ, ಶೇಲದ. v. *Opulent, wealthy.* *(a rich man)* ಭಾಗ್ಯವಂತ, ಐಶ್ವರ್ಯವಂತ, ಶ್ರೀಮಂತ, ದ್ರವ್ಯವಂತ; *(the rich and poor)* ದರಿದ್ರರು ಧನಿಕರು, ಬಡವರು ಭಾಗ್ಯಸ್ತರು, ಬಡವರುದೈವವುಲ್ಲವರು. v. Also *precious, estimable, valuable, splendid, fertile, fruitful.*

Riches, s. n. ಸಂಪತ್ತು, ಐಶ್ವರ್ಯ, ದೌಲತು, ವೈಭವ, ಭಾಗ್ಯ, ಸಿರಿ, ಲಕ್ಷ್ಮಿ. The Hindoos mention eight kinds of property ಅಷ್ಟಲಕ್ಷ್ಮಿ,

as the riches of a king, viz. ರಾಜ್ಯಲಕ್ಷ್ಮಿ *territory;* ಧೈರ್ಯಲಕ್ಷ್ಮಿ *courage;* ಸಂಪಲ್ಲಕ್ಷ್ಮಿ *troops, retinue, &c.;* ಸಾಂಮ್ರಾಜ್ಯಲಕ್ಷ್ಮಿ *imperial rule;* ಧನಲಕ್ಷ್ಮಿ *wealth;* ಧಾಂನ್ಯಲಕ್ಷ್ಮಿ *corn;* ಜಯಲಕ್ಷ್ಮಿ *victory;* ವೀರಲಕ್ಷ್ಮಿ *prowess.*

Richly, ad. ಭಾಗ್ಯವಾಗಿ, ಐಶ್ವರ್ಯವಾಗಿ, ದೌಲತ್ತಾಗಿ, ಸಿರಿಯಾಗಿ. v. *Opulently, abundantly, plenteously.*

Richness, s. n. ಪುಷ್ಟಿ, ಸತ್ವ, ಬಲ, ಶೌರ, ನಿಬ್ಬರ, ಸಾರವತ್ತು, ರಸವತ್ತು; *(opulence)* ಪ್ರಭುತ್ವ, ಭಾಗ್ಯತ್ವ, ಐಶ್ವರ್ಯತ್ವ. v. *Fertility, opulence, abundance, finery, splendour.*

Rick, s. n. *(pile of corn, hay, &c.)* ಬಣವೆ, ಅಂಬಾರ, ಗೂಡ್ಡ.

To Rid, v. a. *(disengage, disentangle)* ಶಿಕ್ಕುಬಿಡಿಶಿಕೊಳ್; *(to set free)* ನಿರ್ಬಂಧಮಾಡು, ಬಿಡಿಸು; *(to get rid, escape from)* ಪಟ್ಟುಬಿಡಿಶಿಕೊಳ್, ತಪ್ಪಿಶಿಕೊಳ್; *(to drive away)* ಗದಿಮಿಬಿಡು, ನೂಕಿಬಿಡು, ದೊಬ್ಬಿಬಿಡು; *(to annihilate)* ನಾಶನಮಾಡು, ನಿರ್ಮೂಲಮಾಡು.

Riddance, s. n. *(disencumbrance)* ಶಿಕ್ಕುಬಿಡಿಶಿಕೊಳ್ಳುವಿಕೆ, ತೊಂದರೆಪರಿಹರಿಶಿಕೊಳ್ಳುವಿಕೆ; *(deliverance)* ತಪ್ಪಿಸುವಿಕೆ; *(driving away, clearing away)* ಹೊಡದುಬಿಡುವಿಕೆ, ಗದಿಮಿಬಿಡುವಿಕೆ.

Riddle, s. n. *(enigma)* ಗೊಂಟುಕಥೆ, ಒಗಟು, ಚೆಜ್ಜು, ಬೆಡಗು, ಪ್ರಶ್ನೆ, ಸಮಸ್ಯೆ, ದೃಷ್ಟಕೂಟ, ಪ್ರಹೇಳಿಕೆ, ಪ್ರಹ್ಲಿಕೆ; *(to propound a riddle)* ಗೊಂಟುಕಥೆಹೇಳ್, ಒಗಟುಹೇಳ್; *(the meaning of a riddle)* ಒಗಟುಬಿಚ್ಚುವಿಕೆ, ಬೆಡಗುವಡಯುವಿಕೆ. The following are given as a few specimens of Hindoo riddles, for general information: ಕಂಠದಲಿಕಪ್ಪುಂಟುಕರಕಂಠನಲ್ಲ, ಗಂಟಿದಲಿಶಿಖೆಯುಂಟುವಿಪ್ರನಲ್ಲ, ಪಂಟುಮೈಯೊಳುಕಂಗಳುದೇವೇಂದ್ರನಲ್ಲ, ಯೆಂಟುಘಳಿಗೆಗಿದರಹೆಸರುಹೇಳಿರೀವೆಲ್ಲ. *It is black in the neck, it is not Shiva; It has a lock upon its head, it is not a bramin; It has eyes upon its body, it is not Dévéndra: I desire that all of you in the course of eight hours will tell me what is the name of this:*

ನವಿಲು *a peacock.*

ಕಲ್ಲೊಳಗೆಹುಟ್ಟುವದುದೇವಾಲ್ಯವಲ್ಲ, ಎಲ್ಲಾಮನೆಯಲ್ಲಿಕಾಣಿಲ್ಲದಿಲ್ಲ, ಮೆಲ್ಲಬಾಹುದುಮೆಲ್ಲಬಾರದ್ದುಅಲ್ಲಾಯಿಲೆಯೊಳಗೆಬಲ್ಲಜಾಣರಿಗೆಅರಿದಲ್ಲ *It rises from the stones, but is not a church; it is found in every dwelling and there is no house without it; it knows how to eat and there is nothing that it will not eat: wise people of the world will perceive what this is, will they not.*

ಬೀಸುವಕಲ್ಲು *a handmill.*

ಕಾಲುಗಳುಇಪ್ಪತ್ತು, ಕರ್ಣಮೂವತ್ತು, ಚೆಲುವಿನಮೂಗುಹದಿನೈದುಕರಹತ್ತು, ನಾಲಿಗೆಯುಹದಿನೈದುನಯನಮೂವತ್ತು, ನೆಲೆಬಲ್ಲಜಾಣರುಗಳೆಹೇಳುವದಯಿದನು *It has twenty legs and thirty ears, fifteen handsome noses*

and ten hands, fifteen tongues and thirty eyes: those clever men who know the secret will soon guess what this is.

ಬಾಯಗಲವಾಗಿಐದೆರಳನುಂಗುವಳು, ಬಿಯ್ಯಗರುವಿನಹೆಗಲೇರಿತಿರುಗುವಳು, ಬಾಯಂದುಕರೆದರೆತಾನೆಬರುತಿಹಳು, ರಾಯರಾಣಿಯರಹಸ್ತದಮೊಪ್ಪುತಿಹಳು *It has a wide mouth and swallows five fingers; it journies on the shoulders of strangers; if you call it, it comes to you, and it much becomes the hand of a king or queen.*

ಬಳೆ *a bracelet.*

ಹುಟ್ಟುತಲಿಹಸುರಹುದು, ಪಚ್ಚೆತಾನಲ್ಲಾ, ಬೆಳೆವುತಲಿಕೆಂಪಹುದುಹವಳತಾನಲ್ಲಾ, ಕಟ್ಟಕಡೆಯಲಿಕಪ್ಪುಕಸ್ತೂರಿಯಲ್ಲಾ, ಸೃಷ್ಟಿಯೊಳಗಿನಜನರುಹೇಳಿನ್ನೀವೆಲ್ಲಾ *When born it is green, it is not an emerald; while growing it is red, it is not a coral; ultimately it becomes black, but it is not musk: tell me all created beings what this is.*

ಗುಲುಗುಂಜಿ the *abrus precatorius* or *wild jamaica liquorice root. The seeds of it are used by goldsmiths for weights.*

ಕೊಪ್ಪನಿಕ್ಕಿದಹೆಂಗಳುಕುಪ್ಪಸದಲಿಹಳು, ವಪ್ಪವಾರಾಯರಾಬಳಿಗೆಬರುತಿಹಳು, ವಪ್ಪಾಗಿಕುಪ್ಪಸವಬಿಟ್ಟುಬಾಗುವಳು, ಬಪ್ಪವರಪ್ರಾಣಗಳಮುನಿದುಕೊಲುತಿಹಳು *It is like a woman with a tuft of hair and her bodice on; it approaches the persons of renowned monarchs, and dexterously laying aside its bodice, it bows and in a rage destroys the lives of those that come upon it.*

ಖಡ್ಗ *a sword.*

(a riddle, a sieve) ಜಲ್ಲಡಿ.

To Riddle, v. a. *(solve a riddle)* ವಗಟುಬಿಚ್ಚು, ವಡ್ಡುಹೇಳು, ಗೊಂಟುಅರ್ಥವಿವರಿಸು; *(to separate by a course sieve)* ಜಲ್ಲದಿಂದಿಡಿಯು.

To Ride, v. a. ಏರು, ಹತ್ತು, ಯೇರಿಕೊಳ್ಳು, ಯೇರಿಹೋಗು; *(to ride behind another)* ಒಬ್ಬರಹಿಂದೆಯೊಬ್ಬರುಕೂಡು, ಜತೆಯಾಗಿಕೂಡು; *(to ride backwards)* ತಿರಿಗಿಮರಿಗಿಕೂತ್ರು, ಅಪಸವ್ಯವಾಗಿಕೂತ್ರು; *(to ride at another)* ಹೊಗಹಾಕು; *(to ride fast)* ದೌಡುಬಿಡು, ದೌಡಾಯಿಸು; That man *rides* a horse well ಈಮನುಷ್ಯನುಚೆಂನಾಗಿಕುದುರೆಹತ್ತುತ್ತಾನೆ; He is a good *rider* ಅವನುವೊಳ್ಳೇಯೇರಾಟದವನು; He is a very bad *rider* ಅವನುಕುದುರೆಹತ್ತಲರಿಯನು, ಇವನುಅಧ್ವಾಂನದಯೇರಾಟದವನು; *(to ride at anchor)* ಲಂಗರುಹಾಕಿರು, ಜಗ್ಗಿನಿಂತಿರು, ಕಚ್ಚಿನಿಂತಿರು.

Ride, s. n. ಸ್ವಾರಿ, ದುಡುಂಬೆ, ಬಸುಗೆ.

Rider, s. n. ಏರುವವ; *(a rider or breaker of horses)* ಕುದುರೆಸಾಧಕ, ಕುದುರೆತಿದ್ದುವವ, ಅಶ್ವಶಿಕ್ಷಕ; *(a rider, an inserted leaf)* ಬದಲುವಾಲೆ, ಹಚ್ಚಿದಕಾಗದ, ವತ್ತೋಲೆ.

Ridge, s. n. *(higher part, top)* ಮೋಟು; *(the ridge of a house)* ಕುಂಬೆ, ವಾಲು; *(the ridge of a mountain)* ಶಿಖರ, ಶೃಂಗ; *(a ridge of*

hills) ಸಾಲುಗುಡ್ಡ, ಬಾಲುಗುಡ್ಡ *(the ridge of the back)* ಬೆಂನುಹುರಿ; *(the ridge of the nose)* ಮೂಗಿನ ಕೊಳೆ; *(a ridge tile)* ದೋಣಿಹಂಚು, ದೊಗ್ಗಹಂಚು; *(a ridge of land)* ದಿಬ್ಬೆ, ಸಾಲುದಿಬ್ಬೆ, ಗಡ್ಡೆ; *(the ridge of a road)* ಕಣೆಬೆ.

Ridgy, a. ಮೇಡಿನ, ಮೋಟಿನ, ದಿಬ್ಬೆಯ, ದಿಂಡೆಯ.

To Ridge, v. a. *(to form a ridge)* ಕಂಬೆಮಾಡ, ಕಣೆಬೆಮಾಡ.

Ridicule, s. n. ಪರಿಭಾಷಣೆ, ಪರಿಹಾಸ್ಯ, ಚರ್ಚೆ, ಕುವಾದ, ಕೂಕು, ಲೇವಡಿ, ಹುಲ್ಲಿ. v. *Raillery*.

To Ridicule, v. a. ಪರಿಹಾಸ್ಯಮಾಡ, ಲೇವಡಿಮಾಡ, ಚರ್ಚೆಮಾಡ, ಕೂಕುಯೆಬ್ಬಿಸ, ಚಕ್ಕಂದವಾಡ. v. *To deride, mock, laugh at. (one who ridicules)* ಪರಿಹಾಸ್ಯಗಾರ, ಚರ್ಚಕ, ಅಗಡಿಕ, ಹಾಸ್ಯಗಾರ. v. *Wag, mocker.*

Ridiculed, part. ಪರಿಹಾಸ್ಯಮಾಡಿದ, ಲೇವಡಿಮಾಡಿದ, ಚರ್ಚೆಯ, ಚಕ್ಕಂದದ.

Ridiculous, a. ನಗುವಿನ, ಅಪಹಾಸ್ಯದ, ಲೇವಡಿಯ, ಕೂಕಿನ; *(any thing ridiculous)* ಕುಚೋದ್ಯದ ಕಾರ್ಯ, ಅಪಹಾಸ್ಯದ ಕೆಲಸ.

Ridiculously, ad. ಕುಚೋದ್ಯವಾಗಿ, ಕುವಾದವಾಗಿ, ನಗುಬಾಳ್ವಾಗಿ, ಚಕ್ಕಂದವಾಗಿ; *(to laugh ridiculously)* ಅಪಹಾಸ್ಯವಾಗಿನಗ, ಕೈಯ್ಯಿಕಿಹೊಡದುನಗ, ಘೊಲ್ಲನೆನಗ.

Ridiculousness, s. n. ಕುಚೋದ್ಯವು, ಚಕ್ಕಂದವು. v. *Ridicule.*

Riding, s. n. ಯೇರುವದು, ಹತ್ತುವದು.

Rife, a. ಪ್ರಸಿದ್ಧಿಯಾದ, ಪ್ರಬಲವಾದ, ಪ್ರಕಟವಾದ, ಬಾಹಿರಂಗವಾದ, ವಾಡಿಕೆಯಾದ.

Rifely, ad. ಪ್ರಸಿದ್ಧಿಯಾಗಿ, ಪ್ರಬಲವಾಗಿ, ಪ್ರಕಟವಾಗಿ, ಬಾಹಿರಂಗವಾಗಿ, ವಾಡಿಕೆಯಾಗಿ, ವಿಶೇಷವಾಗಿ.

Rifeness, s. n. ಪ್ರಬಲವು, ಪ್ರಸಿದ್ಧಿಯು, ಪ್ರಕಟವು, ವಾಡಿಕೆಯು.

To Rifle, v. a. ಸುಲುಕೊಳ್ಳ, ಕೊಳ್ಳೆಯಿಡ, ಲೂಟಿಮಾಡ, ಕಸುಕೊಳ್ಳ. v. *To pillage, plunder, rob.*

Rifled, part. ಸುಲುಕೊಂಡ, ಕಸುಕೊಂಡ, ಕೊಳ್ಳೆಯಿಟ್ಟ. v. *Robbed.*

Rifler, s. n. ಕಸುಕೊಳ್ಳುವವ, ಕೊಳ್ಳೆಯಿಡುವವ, ಸುಲುಕೊಳ್ಳುವವ, ಲೂಟಾಯಿಸುವವ. v. *Plunderer.*

Rift, s. n. ಶೀಳಿಕೆ, ಘಣಾವು, ಬಿರುಕು. v. *Cleft, breach, fissure.*

To Rift, v. a. ಶೀಳಮಾಡ, ಬಿರುಕುಮಾಡ. v. *To split. (to burst)* ಉಬಕ. v. Also *to belch.*

To Rig, v. a. ಮುಸ್ತೈದುಮಾಡ, ಧರಿಸ. v. *To dress, accoutre. (to rig a ship)* ಹಡಗ ಮುಸ್ತೈದುಮಾಡ. ಪಠಯೇರಿಸ, ಪಠಕಟ್ಟ.

Rig, s. n. ಕಂಬೆ, ಹಾಲು, ಕಣೆಬೆ. v. *Ridge.*

Rigger, s. n. *(of shipping)* ಘಟಿಕಾದಾರ, ಕಸಾಣಿದಾರ. v. Also *dresser.*

Rigging, s. n. *(of a ship)* ಪಠಸಂಬಾಹ, ಪಠಸಾಹಿತ್ಯ, ಕೊರತನಸಾಹಿತ್ಯ.

Rigged, part. ಮುಸ್ತೈದಾದ, ಧರಿಸಲ್ಪಟ್ಟ. v. *Dressed.*

To Riggle, v. a. *(move backwards and forwards)* ಅಲ್ಲಾಡ.

Right, a. *(fit, proper, just)* ತಕ್ಕ, ಯುಕ್ತ, ಸರಿ, ಉಚಿತ. v. *Becoming, suitable, convenient.* *(true, not erroneous)* ನಿಜ, ಸಹಜ, ಖರ, ನಿಶ್ಚಯ, ನಿರಬದ್ಧ. v. *Perfect, complete.* *(just, honest)* ಸತ್ಯದ, ಧರ್ಮದ, ಧರ್ಮಾಧರ್ಮದ. v. *Righteous.* *(not crooked, straight)* ನೀಟಾದ, ವಂಕ್ಕರೆಯಿಲ್ಲದ, ಡೊಂಕ್ಕಿಲ್ಲದ, ನೆಟ್ಟಗೆ; *(not left)* ಬಲದ; *(the right hand)* ಬಲಕೈಯ್ಯು; *(the right side)* ಬಲಪಾರ್ಶ್ವ, ಬಲಕಡೆ; *(to the right)* ಬಲಪಾರ್ಶ್ವಕ್ಕೆ, ಬಲಕಡಿಗೆ, ದಕ್ಷಿಣಪಾರ್ಶ್ವಕ್ಕೆ; *(right and left)* ಬಲಯಡೆ; *(right and wrong)* ಅಬದ್ಧ ಸುಬದ್ಧ; *(right or wrong)* ವಳ್ಳೇದಾದರು ಕೆಟ್ಟದಾದರು, ತಪ್ಪಾಗಲಿ ವಪ್ಪಾಗಲಿ, ದಾಡಾಪೋದಿ, ದಬ್ಬುಸುದುಬ್ಬುಸು, ಧಡಾಂಧಡಿ; *(from the right)* ಬಲಕಡೆಯಿಂದ; *(right against)* ಯದರಿಗೆ, ಅಡ್ಡವಾಗಿ; *(from right and left)* ಬಲಯಡೆಯಿಂದ, ಯಡಬಲದಿಂದ; *(the right wing of an army)* ದಕ್ಷಿಣಪಕ್ಷವ್ಯೂಹ; *(a right line)* ಸರಿಪಂಕ್ತಿ, ಸಮಪಂಕ್ತಿ; *(very right)* ಬಹುಯುಕ್ತ, ಬಹುಸ್ವಾರಸ್ಯ, ಮಹಾಪಳಿತ, ಸರಿಸರಿ, ಸೈಸೈ, ಶಾಬಾಸು ಶಾಬಾಸು, ಹಾಥಾದು; *(the right way)* ಯುಕ್ತಮಾರ್ಗ, ಸನ್ಮಾರ್ಗ, ವಳ್ಳೆಮಾರ್ಗ, ನೆಟ್ಟನೆಮಾರ್ಗ, ಸರಾಸರಿಹಾದಿ; *(not right)* ಸರಿಯಿಲ್ಲ, ನೆಟ್ಟಗೆಯಿಲ್ಲ; *(to be right, proper, suitable)* ಯುಕ್ತವಾಗಿರ, ಸರಿಯಾಗಿರ, ತಕ್ಕದಾಗಿರ; *(to be straight)* ನೇಟಾಗಿರ, ನೀಟಾಗಿರ; *(to be correct)* ಸರಿಯಾಗಿರ, ನಿರಬದ್ಧವಾಗಿರ, ಸಂಪ್ರತಿಯಾಗಿರ, ಸುಬದ್ಧವಾಗಿರ, ಶುದ್ಧವಾಗಿರ.

Right! *(interjection of approbation)* ಸೈಬಾಸು.

Right, ad. *(properly)* ತಕ್ಕದಾಗಿ, ಸರಿಯಾಗಿ, ಉಚಿತವಾಗಿ; *(in a direct line)* ನೆಟ್ಟಗೆ, ನೀಟಾಗಿ.

Right, s. n. *(justice)* ಧರ್ಮವು, ನೀತಿಯು, ಸತ್ಯವು, ಪ್ರಾಮಾಣ್ಯವು; *(freedom from error)* ಸುಬದ್ಧವು, ನಿರಬದ್ಧವು, ಸಂಪ್ರತಿಯು, ಶುದ್ಧವು; *(due or just claim)* ಸೊತ್ತು, ಹಕ್ಕು, ಕಟ್ಟೆ, ಸ್ವತ್ವ, ದರಕಾರು, ಬಾಧ್ಯತೆ, ಬಾಧ್ಯವು; Give him his *right* ಅವನ ಸೊತ್ತು ಅವನಿಗೆ ಕೊಡು, ಅವನ ಕಷ್ಟವು ಅವನಿಗೆ ಬಿಸಾಡು; *(power, prerogative)* ಅಧಿಕಾರ, ಸ್ವತಂತ್ರ, ಶಕ್ತಿ; *(privilege, immunity)* ಮಾನ್ಯ, ಅಪ್ಪಣೆ; *(the right side)* ಬಲಪಾರ್ಶ್ವ, ಬಲಕಡೆ; *(against right)* ನ್ಯಾಯವಿರೋಧ; *(by right of priority)* ಮೊದಲಿನವನ ನ್ಯಾಯಕ್ಕೆ ತಕ್ಕದ್ದು, ಮೊದಲು ಬಂದವನ ಸೊತ್ತು; *(hereditary right)* ಬಾಧ್ಯಾಬಾಧಕರದ ನ್ಯಾಯ; *(to set to rights)* ನೆಟ್ಟಗೆಮಾಡ, ವಂದಕ್ಕೊಂದುಕೂಡಿಸ. v. *To rectify, adjust.* I am not *right* ನಾವಳು ಸ್ಥಾಗಿಲ್ಲ, ನಂನ ಶರೀರ ಸ್ವಸ್ತವಿಲ್ಲ; *(to be in one's right senses)* ಸ್ವಸ್ತಚಿತ್ತವಾಗಿರ, ಸ್ವಬುದ್ಧಿಯಾಗಿರ; You are *right* ನೀವೇಳುವದು ನ್ಯಾಯವೆ ಸರಿ, ನಿಂನದು ಸರಿ; *(right over against)* ನಿಟ್ಟೆದುರಾಗಿ, ಯಟ್ಟೆದುರಾಗಿ.

To Right, v. a. *(to administer justice)* ನ್ಯಾಯನಡಿಸ, ಧರ್ಮವಿಚಾರಿಸ; *(to relieve from wrong)* ನ್ಯಾಯಮಾಡ; *(to establish in the*

possession of just claims) ಬಾಧ್ಯಸ್ತನಾಗಿಮಾಡ, ಬಾಧ್ಯಸ್ಥರಮಾಡ, ಸೊತ್ತುಕೊಡಿಸ.

Righteous, a. ನೀತಿಯ, ಸತ್ಯದ, ಸನ್ಮಾರ್ಗದ, ಪುಣ್ಯದ, ಸದ್ವೃತ್ತಿಯ, ಸುಕೃತದ. v. *Just, honest, virtuous, holy.*

Righteously, ad. ನೀತಿಯಾಗಿ, ಸತ್ಯವಾಗಿ, ಸನ್ಮಾರ್ಗವಾಗಿ, ಸದ್ವೃತ್ತಿಯಾಗಿ.

Righteousness, s. n. ನೀತಿಯು, ಸತ್ಯವು, ಧರ್ಮವು, ಸನ್ಮಾರ್ಗವು, ಸದ್ವೃತ್ತಿಯು. v. *Rectitude, honesty, virtue, piety, justice.*

Rightful, a. ಪ್ರಾಮಾಣ್ಯಕದ, ನಿಜವಾದ, ನಿಶ್ಚಯದ, ಸಹಜವಾದ. v. *True, lawful.*

Rightfully, ad. ಪ್ರಾಮಾಣಿಕವಾಗಿ, ನಿಜವಾಗಿ, ನಿಶ್ಚಯವಾಗಿ, ಸಹಜವಾಗಿ.

Rightly, ad. *(properly, suitably)* ಯುಕ್ತವಾಗಿ, ತಕ್ಕದ್ದಾಗಿ; *(exactly)* ಚೊಕ್ಕಟವಾಗಿ, ಸರಿಸರಿಯಾಗಿ, ಚಂದವಾಗಿ; *(straightly)* ನೀಟಾಗಿ, ಸರಿಯಾಗಿ, ಡೊಂಕಿಲ್ಲದ್ದಾಗಿ.

Rightness, s. n. ಪ್ರಾಮಾಣಿಕವು, ನಿಜವು, ನಿಶ್ಚಯವು. v. *Rectitude, righteousness, straightness, trueness.*

Rigid, Rigorous, a. *(severe, inflexible)* ಕ್ರೂರದ, ಕಾಠಿಣ್ಯದ, ಕಟ್ಟುದಿತನದ. v. Also *sharp, cruel, rigid. (stiff)* ಬರಸಿನ.

Rigidity, s. n. ಕಟ್ಟುದಿತನ, ಕಾಠಿಣ್ಯವು. v. *Rigidness, stiffness.*

Rigidly, Rigorously, ad. *(severely)* ಕಾಠಿಣ್ಯವಾಗಿ, ಕಟ್ಟುದಿತನವಾಗಿ.

Rigidness, Rigour, s. n. ಕಾಠಿಣ್ಯವು, ಘಟ್ಟಿಯು. v. *Severity, austerity*; also *cold, coldness, shivering, stiffness.*

Rill, Rillet, s. n. ಸರಿವೆ, ಚಿಕ್ಕಹಳ್ಳ. v. *Rivulet.*

To Rill, v. n. ಹರಿಯ. v. *To flow.*

Rim, s. n. ಅಂಚು. v. *Border, margin. (the wooden rim of a drum)* ಕಟ್ಟು, ಮದ್ದವೆದಿಂಮ್ಮೆ.

Rime, s. n. ಬಾಷ್ಪ, ಹಿಮ. v. *Hoar frost;* also *chink.*

To Rime, v. n. *(freeze with hoar frost)* ಹಿಮವಾಗ.

Rimy, a. ಹಿಮದ. v. *Misty, foggy.*

To Rimple, v. a. ಮುದುರುಮಾಡ, ಸುಕ್ಕುಮಾಡ, ಗುಜುಮಾಡ.

Rind, s. n. ಪಟ್ಟೆ, ತೊಬ್ಬಟೆ, ಚಿಪ್ಪು, ತೊಗಲು, ನಾರು, ಚಿರವು. v. *Bark, husk.*

To Rind, v. n. ತೊಗಲುತೆಗೆಯ, ತೊಬಟೆತೆಗೆಯ, ನಾರುಸುಲಿಯ. v. *To peel.*

Ring, s. n. ಉಂಗುರ, ಬಳೆ, ಕಟ್ಟು, ವರ್ತುಲ. v. *Circle. (for the finger)* ಬೆರಳಿನವುಂಗುರ; *(for the toe)* ಕಾಲುವುಂಗುರ; *(a seal ring)* ಮುದ್ರೆವುಂಗುರ; *(the rings of a sword hilt or belt)* ಪಡಿವುಂಗರ, ಬೆಲಕಟ್ಟುವುಂಗರ; *(the rings of a bridle)* ಲಗಾಮುಗಗ್ಗರಿ, ಲಗಾಮಿನಬಳೆ, ಕಡಿ, ಅಂಗುಡಿ; *(a ring worn by women in the nose)* ಮೂಗುತಿ, ಗಾಡಿ, ನತ್ತು, ಕಡ್ಡಿಮೂಗುತಿ, ಹರಳುಕಲ್ಲುಮೂಗುತಿ, ಮುತ್ತಿನಮೂಗುತಿ; *(a camel's nose ring)* ವಂಟೆಯಮುಗದಾಣದುಂಗರ; *(an ankle ring worn by women)* ಪಾಡಗ, ಕಾಲುಕಡಗ, ಪಾಡುಚೆ, ಪಾವುಜೇಬು; *(to display a ring by waving the finger)*

ಉಂಗರವಿಳಿ ಸುತ್ತೋರಿಸ ; *(in rings, in the form of a ring)* ಸುತ್ತಾಗಿ, ವಲಯವಾಗಿ ; *(ring, of bells, &c.)* ಝಣತ್ಕಾರ, ಘಂಟಾನಾದ. v. *Sound.*

To Ring, v. a. ಘಂಟೆಬಡಿಯ, ಝೇಂಕರಿಸ, ಘಣಾಘಣಿಸ ; *(as a bell, &c.)* ನಾದಕೊಡ, ಘಣಾಯಿಸ, ಝೇಂಕರಿಸ. v. *To sound, resound, tinkle;* also *to encircle. (to ring a camel)* ಮಂಟಿಮೂಗುದಾಣವಿಡ, ಮಂಟಿಮೂಗದಾಣಹಾಕ ; *(to ring a hog)* ಹಂದಿಗೆಮೂಗುಚುಚ್ಚ, ಹಂದಿಗೆಮೂಗುತೂರಿಸ ; *(to ring or fit with rings)* ಉಂಗರಹಾಕ, ಉಂಗರಯಿಟ್ಟುಕೊಳ್ಳ.

Ringer, s. n. ಘಂಟೆ ಹೊಡಿಯುವವ.

Ringfinger, s. n. ಉಂಗರದಬೆರಳು.

Ringdove, s. n. ಬೆಳವ, ಪಕ್ಷ.

Ringleader, s. n. ಕೈದಿಗ, ಕೊಳ್ಳೆಕೊಂಬ, ಅಗ್ರಗಂಡ.

Ringlet, s. n. *(of hair)* ಉಂಗರಕೂದಲು, ಅಲಕ, ಸುಳಿಕೂದಲು. v. *Curl, lock of hair;* also *ring, circle.*

Ringworm, s. n. *(disease)* ದರ್ದುರಗುಂಗುರು ; *(to have ringworms)* ದರ್ದುರಗುಂಗುರುವುಳ್ಳ.

To Rinse, v. a. ಗಲಬರಿಸ, ತೊಳೆದುಹಾಕ. v. *To wash.*

Riot, s. n. ಧಾಮಧೂಮ, ಬಾಯಿ, ತುಮುಲು, ಗಲ್ಲು, ಗೊಲ್ಲೆ, ಕೊಲ್ಲೆ. v. *Sedition;* also *revel. (to run out, act without controul)* ಇಚ್ಛಾನಿಧಿಯಾಗಿಯಿರ, ಸ್ವಯಂಭವಿಯಾಗಿರಗ.

To Riot, v. n. *(raise a sedition or uproar)* ಧೂಮಧಾಂಮಾಡ, ತುಮುಲುಹುಟ್ಟಿಸ, ಗೊಳ್ಳಿಚ್ಚಿಸ. v. *To rebel;* also *to revel.*

Rioter, s. n. ಬೊಗಳಾಡುವವ, ಗೊಳ್ಳಿಚ್ಚಿಸುವವ, ಧೂಮಧಾಮಮಾಡುವವ. v. *Reveller;* also *rebel.*

Riotous, a. ತುಮುಲಿನ, ಹೊಟ್ಟೆಮುಚ್ಚನ, ಬಾಯಿಯ. v. *Rebellious, seditious, turbulent, luxurious.*

Riotously, ad. ರದ್ದಾಗಿ, ಗಲ್ಲತ್ತಾಗಿ, ತುಮುಲಾಗಿ. v. *Seditiously, turbulent. (luxuriously)* ಧೂಮಧಾಮಾಗಿ, ಹುಂದಾಗಿ, ಊಟಿಮೋಘಾಗಿ.

Riotousness, s. n. ತುಮುಲು, ರದ್ದು, ಗಲ್ಲತ್ತು, ಸಂದಲಿ. v. *Riot;* also *revelry.*

To Rip, v. a. ಕೀಳಿಸ, ಬಿಗಿಸ ; *(to rip up a sewing)* ಹೊಲಿಗೆಬಿಚ್ಚ ; *(ripped up)* ಕೊಯಿದಿತ್ತ, ಶಿವಿದಿತ್ತ, ಬಿಚ್ಚಿತ್ತ, ಚೆಂಬುಹಾಕಿದ.

Ripe, a. ಪಕ್ವದ, ಪೂರ್ಣದ, ಮಾಗಿದ. v. Also *complete, ready, fit, consummate. (fruit that is too ripe)* ಮಗ್ಗಿದ, ಕುಲ್ಲಿದ ; *(ripe of years)* ಪ್ರಾಯದ, ವಯಸ್ಸಿನ, ಯವ್ವನದ ; *(not ripe)* ಅಪಕ್ವದ, ಕಾಯಿಯ.

To Ripe, Ripen, v. n. *(grow ripe)* ಪಕ್ವವಾಗ, ಮಾಗ, ಕಳಿಯ ; *(to make ripe)* ಪಕ್ವಮಾಡ, ಮಾಗಿಡ.

Ripeness, s. n. ಪಕ್ವವು. v. *Puberty.*

To Rise, v. n. ಏಳ, ಎತ್ತ, ಯೇರ ; *(as the sun)* ಸೂರ್ಯಪುದಯಿಸ, ಸೂರ್ಯೋದಯವಾಗು ; *(to spring up as from a fountain)* ಉಬುಕಾಯಿಸ, ಉಬುಕ ; *(to appear in view, to emerge)* ಕಾಣಿಸಬರ, ತೋರಬ, ಕಾಣಬರ ; *(to*

spring or jump up) ಹಾರಿಬೀಳ್, ನೆಟ್ಟಿಬೀಳ್, ನೆಗದುಬೀಳ್, ಲಗದುಬೀಳ್; *(to rise upon the feet)* ಕಾಲುನ್ನಾರಿಯೇಳ್, ಜಗದೇಳ್; *(to rise from bed)* ಹೊರಳಿಯೇಳ್, ಯೆಚ್ಚರ, ಹಾಸಿಕೆಯಿಂದೇಳ್, ಯೆದ್ದುಕೂತ್ರ; *(to rise from a fall)* ಬಿದ್ದೇಳ್, ಯೆದ್ದೇಳ್; *(to rise at dawn of day)* ಉಷಃಕಾಲದಲ್ಲಿಯೇಳ್, ಅರುಣೋದಯಕ್ಕೆಯೇಳ್, ಉಪ್ಪವಡಿಸ; *(to rise before dawn)* ಬೆಳಗುಂಜಾವಿನಲ್ಲಿಯೇಳ್, ಉದಯಕ್ಕೆಮುಂಚೆಯೇಳ್; *(to rise in growth, as a child or vegetable)* ಬೆಳೆಯ, ಅಭಿವೃದ್ಧಿಯಾಗ. v. *To grow.* *(to rise or ascend)* ಮೇಲಕ್ಕೆಹೋಗ, ಮೇಲಕ್ಕೆಯೇರ, ಊರ್ಧ್ವಕ್ಕೆಯೇರ; *(to rise as stars)* ಉದಯಿಸ, ಪುಟ್ಟ, ಮೂಡ, ಸೂಡ, ಸೂಸ; *(to rise in price)* ಪ್ರಿಯವಾಗ, ಧಾರಣೆಯೆಚ್ಚಾಗ; *(to rise or prosper in the world)* ವರ್ಧಮಾನವಾಗ, ಪುರವೃದ್ಧಿಯಾಗ, ಪ್ರಬಲಿಸ, ಯೆಚ್ಚು ಮುಂದಕ್ಕೆಬರ; *(to rise or make insurrections)* ತಿರಗಬೀಳ್, ಮೇಲೆಬೀಳ್, ಕಂಮ್ಮ, ಅತ್ರ, ಸುತ್ತಿಕೊಳ್. v. *To mutiny.* *(to rise from the dead)* ಪುನರುತ್ಥಾನವಾಗ, ಪುನರ್ಜೀವಿಸ, ಮರಣದಿಂದೇಳ್, ಸಾವಿನಿಂದೆಚ್ಚರ; *(to rise or swell)* ಊದ, ಬಾಯ, ಉಬ್ಬ, ಉಬುಕ; *(to rise, as an assembly)* ಬರಖಾಸ್ತಾಗ, ಕಚೇರಿಯೇಳ್, ಸಭೆಯೇಳ್; *(to rise or have a beginning)* ಹುಟ್ಟ, ಆರಂಭವಾಗ.

Rise, s. n. *(source, spring)* ಮೂಲ, ಹುಟ್ಟುವು, ಪ್ರಾರಂಭ. v. *Beginning, origin.* *(preferment)* ಬೆಳವಿಕೆ, ತಲೆಯೆತ್ತುವಿಕೆ. v. *Elevation, promotion.* *(increase)* ವೃದ್ಧಿ, ಅಭಿವೃದ್ಧಿ, ಹೆಚ್ಚಳ, ವಿಸ್ತಾರ; *(increase of price)* ಹೆಚ್ಚು.

Rise, Rising, s. n. *(springing up or from)* ಹುಟ್ಟುವದು, ಉದ್ಭವಿಸುವದು, ಹೊರಡುವದು, ಬರುವದು; *(appearing)* ಕಾಣಬರುವಿಕೆ, ತೋರುವಿಕೆ; *(rising or starting in sleep)* ನೆಟ್ಟಿಬೀಳುವದು, ಉಲಿಕಿಬೀಳುವದು; *(rising from bed)* ಯೆಚ್ಚತ್ತುಕೊಂಬುವದು; *(rising and falling)* ಯೇಳುವದುಬೀಳುವದು, ಏರುವದುಯಿಳುವದು; *(the rising of the sun)* ಸೂರ್ಯೋದಯವು; *(rising of the morning star)* ಬೆಳಗುಚುಕ್ಕೆ, ಶುಕ್ರೋದಯವು. v. *Dawn.* *(the rising of a star)* ಮೂಡುವದು, ಸೂಡುವದು, ಹುಟ್ಟುವದು, ಉದಯಿಸುವದು; *(the rising of the moon)* ಚಂದ್ರೋದಯವು; *(rising upon the feet)* ಕಾಲೂರಿಯೇಳ್ವದು; *(a rising ground)* ದಿಂಡೆ, ಬೋಗಟೆ, ಬೇಟೆ, ದಿಬ್ಬೆ, ಪಟ್ಟಿ.

Risen, part. ಯೆದ್ದ, ಏರಿದ; *(as the sun)* ಉದಯಿಸಿದ, ಉದ್ಭವಿಸಿದ, ಹುಟ್ಟಿದ; *(newly risen)* ಹೊಸ್ತಗೆಹುಟ್ಟಿದ, ಹೊಸಬಗೆ, ಹೊಸಪರಿ, ನೂತನವಾಗಿಹುಟ್ಟಿದ.

Riser, s. n. ಏಳುವವ, ಏರುವವ; *(an early riser)* ಹೊತ್ತುಂಟೆಯೇಳುವವ, ಹೊತ್ತುವಣ್ಣುತ್ತೆಯೇಳುವವ.

Risibility, s. n. ನಗುವಿಕೆ. v. *Laughing.*

Risible, a. *(having the faculty of laughing)* ನಗುವ; *(exciting laughter)* ನಗಿಸುವ v. Also *ridiculous.*

Risk, s. n. ಗಂಡ, ಗಂಡಾಂತ್ರ, ಮೋಸ, ದುರ್ಘಟಿ,

ದೈವಾಧೀನ, ದೈವಿಕ, ಲಾಭಾಲಾಭ, ಜಯಾಜಯ. v. *Danger, hazard, chance.* (*to run a risk*) ಅಂಗೀಜುಮಾಡು, ಜೀವದಾಸೆಬಿಡು, ಆಶೆ ತೊರಿಯು.

To Risk, v. a. ಜೀವದಾಸೆತೊರೆಯು, ಅಂಗೀಜು ಮಾಡು; (*to risk an experiment*) ಪರೀಕ್ಷೆ ನೋಡು, ಕಣುಗಾಣು.

Risker, s. n. ಪ್ರಾಣಕ್ಕೆಯಂಗೀಜು ಮಾಡುವವ, ಜೀವದಾಸೆತೊರದವ.

Rite, s. n. ಕರ್ಮ, ಮರ್ಯಾದೆ, ವಿಧಿ, ನಿಯಮ; (*religious rites*) ಮತಾಚಾರಪದ್ಧತಿಕುಲಧರ್ಮ, ಮತಕರ್ಮ, ನೇಮನಿಷ್ಠೆ.

Ritual, a. ಕರ್ಮಕ್ಕೆಹೊಂದಿದ, ಮತಾನುಸಾರದ, ಕುಲಪದ್ಧತಿಯ; (*a ritual, book of rites*) ಕರ್ಮಕಾಂಡ, ಆಚಾರವಿಧಿ.

Rivage, s. n. ದಡ, ಅಂಚು, ಗಡ್ಡೆ. v. *Coast, bank.*

Rival, s. n. ಮಿಂಡ, ದುಸುಮಾನ, ಪೋಟೀದಾರ, ಹರೀಫ್, ವಿರೋಧಿ, ಮೇಲಾಳು. v. *Competitor.*

Rival, a. ಪೋಟಾಪೋಟಿಯ, ವಿರೋಧದ, ಹರೀಫತನದ, ದುಸಮಾನಿಯ. v. *Emulous, jealous.*

To Rival, v. a. ಪೋಟಿಮಾಡು, ಮೇಲಾಡು, ಸರಿಯಕ್ಕೈನ್ನು, ಸರಿಬರಿಗೆಡೆಗಾಗು, ವಿರೋಧಮಾಡು. v. *To emulate.*

Rivalship, Rivalry, Rivality, s. n. ಪೋಟಿ, ದುಸ್ಸಮಂತನ. v. *Jealousy, competition, emulation.*

To Rive, v. a. ಸೀಳಿಸು, ವಡಕುಮಾಡು. v. *To split, cleave.*

To Rivel, v. a. ಸುಕ್ಕು, ಮುದುರುಬೀಳು, ಸುಜ್ಜುಬೀಳು, ಮುರಿಮುರಿಯಾಗು.

River, s. n. ನದಿ, ಹಗರಿ, ತೊರೆ, ಹೊಳೆ, ಪೊಳೆ, ಪೊಚ್ಚ, ಸರಿತ್ತು, ತರಂಗಿಣಿ, ಶೈವಲಿನಿ, ತಟಿನಿ, ಹ್ರಾದಿನಿ, ಧುನಿ, ಸ್ರೋತಸ್ವಿನಿ, ದ್ವೀಪವತಿ, ಸ್ರವಂತಿ, ನಿಮ್ನಗೆ, ಆಪಗೆ; (*a large river*) ಮಹಾನದಿ; (*a rapid river*) ಸೆಳವು ನದಿ, ಹೆಗಾದಿಂಡಿ, ಮರದಿಂಡಿ; (*a place where many rivers meet*) ಸಂಗಮ; (*the bank of a river*) ನದೀತೀರ, ನದೀತಟ, ಹಗರಿದಡ; (*the bed of a river*) ಪಾತ್ರ, ಹಳ್ಳ; (*the mouth of a river*) ಸಂಭೇದ, ಸಂಗಮ; (*the depth of a river*) ನದೀವೃದ್ಧ, ನದಿಯಘಾದ, ಆಳ; (*a river overflowing its banks*) ಹೊರಳಿಹರಿಯುವ ನದಿ; (*the swell of a river, by tides, &c.*) ನದಿಬರುವಿಕೆ, ನದಿನೀರುಯೇರ್ವಿಕೆ; (*the winding of a river*) ನದಿಯ ಸಂಚಾರ, ಪ್ರವಾಹವರ್ತನ, ನದಿಯು ಸುತ್ತುವಿಕೆ; (*a river dragon*) ಅಂಬುಕಂಟಕ, ದ್ವೀಪಾಗತಿ, ಕುಂಭೀಲ. v. *Crocodile.* (*a river horse*) ನೀರಿನಕುದುರೆ. v. *Hippopotamus.*

Rivet, s. n. ಮಡಗಮೊಡದಮೊಳೆ. v. *Nail.*

To Rivet, v. a. ನಾಟಿಸು, ಘಟ್ಟಿಮಾಡು, ಮೊಳೆ ಮಡಗಮೊಡಿಯು ನಾಟು, ಹತ್ತಿರ. v. *To fasten.*

Rivetted, part. ನಾಟಿಮೊಡಿದ, ಘಟ್ಟಿಮಾಡಿದ.

Rivulet, s. n. ಹಳ್ಳ, ಕೊಳ್ಳ, ಸರಿವಿ; (*to bring a rivulet into gardens or fields*) ಹಳ್ಳತಿರುಗಿಸು, ಸರಿವಿತಿರ್ವ.

Road, s. n. ಪಂಥ, ಪಥ, ಪದ್ಧತಿ, ಮಾರ್ಗ, ಹಾದಿ, ಏಕಪದಿ, ಘಾಟಿ, ಬಟ್ಟೆ, ದಾರಿ, ಸರಣಿ, ಪಂಥಾನವು, ಅಧ್ವ, ಅಧ್ವಾನವು, ಅಯನ, ವರ್ತ್ಮ, ಪದವಿ, ಸೃತಿ. v. *Way, path, passage.* (*a good road*) ಅತಿಪಂಥ, ಸುಪಂಥ, ಸತ್ಪಥ, ಒಳ್ಳೇಹಾದಿ; (*a bad road*) ವ್ಯಧ್ವ, ದುರಧ್ವ, ವಿಪಥ, ಕದಧ್ವ, ಕಾಪಥ; (*meeting of four roads*) ಶ್ರಿಂಗಾಟಕ, ಚತುಷ್ಪಥ; (*a guide for the road*) ತಲಾರಿ, ಹಾದಿತೋರಿಸುವವ, ಹರಕಾರ; (*an infester of the roads*) ಹಾದಿಕಳ್ಳ, ಹಾದಿಬಟ್ಟೆಸುಲುವವ. v. *Robber.* (*the high road*) ಘಾಟಿ, ಹಾದಿ, ಘಾಟೂಮಾರ್ಗ. v. *Highway.* (*a narrow road*) ಇರಕಟಿದಹಾದಿ, ಕಣಿವೆಹಾದಿ, ಇಕ್ಕಟ್ಟಿನಹಾದಿ. v. *Pass.* (*a long and lonesome road*) ಪ್ರಾಂತರ, ದೂರ, ಶೂನ್ಯಮಾರ್ಗ; (*an impervious road*) ನಡಿಯದಹಾದಿ, ಅಘಟಿತಪಥ, ದುರ್ಘಟಿಮಾರ್ಗ; (*a winding road*) ಸುತ್ತುಹಾದಿ; (*a difficult road*) ಕಾಂತಾರ, ದುರ್ಗಮ; (*a road through a town or village, street*) ಬೀದಿಮಾರ್ಗ; (*to shew the road*) ಹಾದಿತೋರಿಸು. v. *To guide.* (*to block up a road*) ಹಾದಿಕಟ್ಟು; (*to wander from the right road*) ಹಾದಿತಪ್ಪು. v. *To deviate.* (*narrow roads leading from highways*) ಓಣಿಹಾದಿ; (*a desert without the vestige of a road*) ಅಧ್ವಾನಥಾದಿ, ದನದಮಾರ್ಗ; (*a road for shipping*) ರೇವು, ಹಡಗುನಿಲ್ಲುವಸ್ಥಳ; (*a short cut road, a nearer way*) ಕಳ್ಳಹಾದಿ.

To Roam, v. n. ವಿಹರಿಸು, ತಿರಿಗ್ಯಾಡು. v. *To rove, wander.*

Roamer, s. n. ಅಡ್ಡಾಡುವವ, ವಿಹರಿಸುವವ, ತಿರಿಗ್ಯಾಡುವವ. v. *Rambler, rover, wanderer.*

Roan, a. (*horse*) ಬಟ್ಟೆಕಪ್ಪುಕುದುರೆ.

To Roar, v. n. (*as a lion*) ಗರ್ಜಿಸು; (*to roar as the sea*) ಘೋಷಿಸು; (*to roar or make a loud noise*) ಕೂಗು, ಧ್ವನಿಮಾಡು.

Roar, Roaring, s. n. ಗರ್ಜನೆ, ಧ್ವಾನ, ಘೋಷ, ಕಲಕಲ, ಕೂಗು, ರಪಣ, ಉಲಿವು, ಅಬ್ಬರ, ಗೊಬ್ಬೆಬ್ಬೆ. v. *Cry, outcry, clamour, noise.* (*the roaring of the sea*) ಸಮುದ್ರದಘೋಷ, ಕಲ್ಲೋಲ.

To Roast, v. a. ಸುಡು, ಬೇಯಿಸು, ತಪ್ತಮಾಡು.

Roast, Roasted, a. ಸುಟ್ಟ, ಬೇಯಿಸಿದ, ಅಗ್ನಿಪಾಕದ; (*roast meat*) ಶೂಲಿಕ, ತಪ್ತಮಾಂಸ; (*to rule the roast*) ಆಳು, ನಿರ್ವಹಿಸು. v. *To govern, manage.*

To Rob, v. a. ತಸ್ಕರಿಸು, ಕದಿಯು, ಸುಲುಕೊಳ್ಳು, ಲೂಟಿಮಾಡು. v. *To steal, plunder.* (*to cause to rob*) ಕೊಳ್ಳೆಯಿಡಿಸು, ಸುಲಿಗೆಮಾಡಿಸು, ತಸ್ಕರಮಾಡಿಸು, ಕಳ್ಳತನಮಾಡಿಸು.

Robbed, part. ಕಸುಕೊಂಡ, ಸುಲುಕೊಂಡ, ಕೊಳ್ಳೆಯಿಡಲ್ಪಟ್ಟ.

Robber, s. n. ಕಳ್ಳ, ಚೋರ, ತಸ್ಕರ, ಲುಂಟಾಕನು; (*an infamous robber*) ಧೂರ್ತಚೋರ, ದಾಯಕಳ್ಳ, ಚೋರಶಿಖಾಮಣಿ, ಕಳ್ಳಬಂಟ, ಖತೀಕಳ್ಳ; (*a highway robber*) ಹಾದಿಕಳ್ಳ, ಹಾದಿಬಟ್ಟೆಸುಲಿಯುವವ.

Robbery, s. n. ಕಳ್ಳತನ, ಚೋರತ್ವ, ತಸ್ಕರತ್ವ. v. *Plundering, theft.*

Robe, s. n. ನಿಲುವಂಗಿ, ಜಾಮಾ, ಸತ್ಕಾರಾರ್ಥಭೂಷಣಾವಸ್ತ್ರ.

To Robe, or invest with a Robe, v. a. ನಿಲುವಂಗಿತೊಡ, ಜಾಮಾಹಾಕ.

Robust, a. ಬಲವಾದ, ಸ್ಥೂಲದ, ಪುಷ್ಟಿಯ, ಪುಷ್ಟಿಯ. v. *Strong, vigorous.*

Robustness, s. n. ಸ್ಥೂಲವು, ಪುಷ್ಟಿಯು, ಬಲವು. v. *Vigour, strength.*

Rock, s. n. ಬಂಡೆ, ಸಾಪುಬಂಡೆ, ಹಾಸುಬಂಡೆ, ಹಾಶಿ, ಪಾಶಿ, ಶಿಡ್ಡ. v. *Mountain;* also *protection, defence, distaff.*

Rocky, a. ಬಂಡಿಯ. ಕಲ್ಲಿನ, ಗೊರಕಿನ. v. *Rugged.*

To Rock, v. a. ಗದುಕಾಡ, ಕಿರುಗಟ್ಟಿ. v. *To shake, totter, reel, stagger. (to make rock)* ಗತಿಕಿಸ, ಕಿರಕ್ಕನಿಸ, ಕಿರುಕಿತ್ರನಿಸ, ಯಳೆಯ, ಶೆಳೆಯ; *(to rock a cradle)* ತೊಟ್ಲುತೂಗ, ತೊಟ್ಟಿಲಾಡಿಸ, ಉಯ್ಯಾಲಾಡ, ತೊಟ್ಲಾಡ, ಜಂಪಲಾಡ.

Rocker, s. n. ಗತುಕಾಡಿಸುವವ, ಕಿರುಗಟ್ಟಿಸುವವ.

Rocket, s. n. ಆಕಾಶಬಾಣ, ಗಗನಬಾಣ.

Rock-salt, s. n. ಸಿಂಧುಲವಣ, ಸಿಂಧುಜ.

Rod, s. n. *(staff, stick)* ದಂಡ, ಕೋಲು, ದಾಣೆ, ಬಾಣೆಗೆಬಡಿಗೆ, ಟೊಣಪೆ, ಕೋಲುಕಟ್ಟಿಗೆ, ತುಂಟಿಕಟ್ಟಿಗೆ, ಕೈಕೋಲು, ಮುಸಲ, ಗದಿಗೆ; *(for punishment)* ಸಜ್ಜನಕೋಲು, ಬೆತ್ತ, ಚುಳಿಕೆ, ಛಡಿ; *(to beat with rods)* ಛಡಿಸಂಗದ ಹೊಡಿಯ; *(to be beat with rods)* ಛಡಿದೆಬ್ಬೆತಿನ್ನ; *(a certain measure)* ಗಜಗಣಿಕೋಲು.

Roe, Roebuck, s. n. ಇರ್ಲಿ; *(the female of the hart)* ಜಿಂಕೆ. v. *Buck, hart, roe, deer. (the eggs of fish)* ಮತ್ಸ್ಯಾಂಡ.

Rogation, s. n. ಬೇಡಿಕೊಳ್ಳುವಿಕೆ. v. *Supplication.*

Rogue, s. n. *(vagabond)* ಫಟಿಂಗ; *(knave)* ಕಳ್ಳ, ಚೋರ, ತಸ್ಕರ. v. *Rascal, villain, scoundrel, cheat, thief. (a wag)* ಸರಸಗಾರ, ಕುವಾಡಿಗ, ಪೋಕ್ರಾಟಿದವ, ತುಲವ, ಪಲವ.

Roguery, s. n. *(knavery)* ಕಳ್ಳತನ, ಚೋರತ್ವ; *(waggery)* ಸರಸ, ಕುವಾದ, ಪೋಕ್ರಾಟಿಕೆ.

Roguish, a. *(knavish)* ಕಳ್ಳತನದ, ತಸ್ಕರದ. v. *Fraudulent. (waggish, wanton)* ಪೋಕ್ರಾಟಿದ, ಕುವಾದದ, ತಮಾಸೆಯ, ಮಸ್ಕರಿಯ.

Roguishly, ad. *(like a knave)* ಚೋರತ್ವವಾಗಿ, ಚೋರಾಬ್ದವಾಗಿ; *(waggishly, wantonly)* ಪೋಕ್ರಾಟಿಕೆಯಾಗಿ, ಮಸ್ಕರಿಯಾಗಿ, ಕುವಾದವಾಗಿ, ತಮಾಸೆಯಾಗಿ.

Roguishness, s. n. ಧೂರ್ತತನ, ಧೂರ್ತತ್ವ. v. *Roguery, wantonness.*

Roll, s. n. *(catalogue)* ಪಟ್ಟಿ. v. *List, register. (a muster roll)* ಗಣತಿಪಟ್ಟಿ; *(to enter in a muster roll)* ಗಣತಿಯಲ್ಲಿದಾಖಲುಆಗ; *(a roll, of paper, &c.)* ಸುರುಳಿ, ಕಾಗದಸುರುಳಿ; *(a roll of linen, silk, &c.)* ಬಂಡಿಕೆ, ಕುಂಕ್ಕದಿ; *(a roll of bread, leaven or paste)* ಮುದ್ದೆ; *(a roll of thread)* ದಾರದವುಂಡೆ, ನುರಿವುಂಡೆ; *(a roll used for pounding chunam, &c. &c.)* ಕುಬುಗುಂಡು, ಗಾರೆಗುಂಡು, ಖಲಬತ್ತುಗುಂ

ಜು ; *(a roll, along the ground)* ಹೊರಳಿಕೆ, ಉರುಳಿಕೆ, ದಿಂಡುರುಳಿಕೆ ; *(a garden roll)* ನಿಘಳು, ಕಲ್ಲುರುಳು ; *(roll within roll)* ಸುತ್ತಿನೊಳಗಿನಸುತ್ತು, ಸುತ್ತುಸುತ್ತು, ಸುರುಳುಸುರುಳಿ.

To Roll, v. a. *(any thing upon the ground)* ಹೊರಳಿಸು, ಉರಳಿಸು ; v. n. ಹೊರಳು, ಉರಳು, ದಿಂಡುರುಳು ; *(to roll up and down as a child or animal on the ground)* ಹೊರಳಾಡು ; *(to roll in the dust, as a dog his prey)* ಮಣ್ಣಿನಲ್ಲಿಹೊರಳು, ಹೊರಳಾಡು ; *(to roll a stone)* ಕಲ್ಲುಹೊರಳಿಸು, ಗುಂಡುಉರುಳಿಸು, ದುಲ್ಲು, ಉಲ್ಲು ; *(to roll about in pain)* ಗಡಗಡನೆಹೊರಳು, ಗಡಗಟ್ಟಿಹೊರಳು, ವಿಲಿವಿಲಿ ಒದ್ದಾಡು, ವಿಲಿವಿಲಿನೊದ್ದು ಕೊಳ್ಳು, ಆಕಾಟಪಾಗಿಹೊರಳು ; *(to roll any thing round its axis)* ತಿರಿಗಿಸು ; *(to roll, as any thing round its axis)* ತಿರುಗು ; *(to roll up, as a clew, &c.)* ಸುತ್ತು ; *(to roll up papers)* ಸುರಳಿಸುತ್ತು ; *(to roll, as the waves)* ತೆರೆಹೊರಳು ; *(to roll on wheels)* ತಿರಗು ; *(to roll any thing heavy on rollers)* ಉರಳಿಸು ; *(to roll down)* ಹೊರಳಿಬೀಳು, ಉರಳಿಬೀಳು. v. *To slide, tumble.*

Rolled, part. *(on the ground)* ಉರುಳಿದ, ಹೊರಳಿದ ; *(rolled, folded or wrapt up)* ಸುರಳಿಸುತ್ತಿದ, ಮುಡುಚುಸುತ್ತಿದ ; *(rolled as a stone)* ದುಲ್ಲಿಸಿದ ; *(rolled or levelled as ground)* ಲಟ್ಟಿಸಿದ, ಗುಂಡಾದಿಸಿದ, ಸಾಫುಮಾಡಿದ ; *(rolling eyes)* ತಿರಗಡಕಂಣು.

Roller, or Rollingstone, s. n. ದಿಂಡು, ಕಲ್ಲುರುಳು ; *(to level ground with a roller)* ಗುಂಡಾದಿಸು ; *(a roller or swathe)* ಕಟ್ಟು, ಪಟ್ಟಿ, ಧಟ್ಟಿ, ಕಾಶಿಧಟ್ಟಿ, ಘಟಿಕೆ. v. *Bandage, fillet.* *(to swathe with rollers)* ಕಾಶಿಧಟ್ಟಿಹಾಕು, ಕಾಶಿಧಟ್ಟಿಕಟ್ಟು, ಪಟ್ಟಿಕಟ್ಟು.

Rollingpin, s. n. ಲಟಣಿಗೆ, ಲಟ್ಟಿಗೆ.

Romance, s. n. ಕಲ್ಪನಾಕಥೆ, ಕಗ್ಗ. v. *Fable* ; also *lie, fiction.*

To Romance, v. n. ಕಗ್ಗಮಾಡು, ಕಲ್ಪನಾಕಥೆಮಾಡು. v. *To fable, forge, lie.*

Romancer, s. n. ಕಥಿಕ, ಕಗ್ಗಮಾಡುವವ, ಸುಳ್ಳುಹೊಯ್ಯುವವ. v. *Fabler, liar.*

Romantick, a. *(resembling romances)* ಕಗ್ಗದ, ಕಲ್ಪನಾಕಥೆಯ, ಬೂಟಾಳದ, ದಪಾಹೋಲಿನ. v. *Fable* ; also *improbable, false.*

Roof, s. n. ಮಾಳಿಗೆ, ಪಟಲವು, ಮನೇಹೊದಿಕೆ, ಪಟಲ ; *(a thatched roof)* ಕೊಟ್ಟಿಗೆ ; *(a stone roof)* ಕಲ್ಲಿನಮಾಳಿಗೆ, ಬಂಡೆಮಾಳಿಗೆ ; *(an arched roof)* ಲದಾವಿನಮಾಳಿಗೆ ; *(a sharp roof)* ಕೊಟ್ಟಿಗೆಮಾಳಿಗೆ, ಕೊಮಾರಕೊಟ್ಟಿಗೆ ; *(a flat roof)* ಮಾಳಿಗೆಮನೆ ; *(a mud roof)* ಮಂಣಿನಮಾಳಿಗೆ ; *(a chunam roof)* ಗಚ್ಚಿನಮಾಳಿಗೆ ; *(the roof of the mouth)* ಅಂಗಳು, ತಾಲು ; *(a gutter on the roof)* ದೋಣಿ, ಹರಿ, ಸೋರಿ ; *(a gutter tile)* ದೋಣಿಹಂಚು.

To Roof, v. a. ಮಾಳಿಗೆಹಾಕು.

Rook, s. n. ಚಿರಂಜೀವಿ, ಕಾಗಿ, ವಾಯಸ, ಬಲಿಭೋಜ, ಅರಿಷ್ಟ, ಬಲಿಪುಷ್ಟ, ಸಕೃತ್ಪ್ರಜ, ಕಾವಳು, ಕಾಕ, ಕರಟ, ಯೇಕದೃಷ್ಟಿ.

To Rook, v. n. ಸುಲುಕೊಳ್, ಕಸುಕೊಳ್, ಮೋಸಮಾಡು, ದಗೆಮಾಡು. v. *To cheat, rob.*

Rookery, s. n. ಕಾಕಾಶ್ರಯ, ವಾಯಸಸ್ಥಾನ.

Room, s. n. (*place*) ಯೆಡ, ಸ್ಥಳ; (*space*) ಜಾಗ, ಬಿಡುವು, ಶೆರಪು, ವರಪು; (*in his room*) ಅವನ ಬದಲು, ಅವನ ಪ್ರತಿ; (*in the room of that*) ಅದರ ಬದಲು, ಅದರ ಪ್ರತಿ; (*a room or apartment*) ಕೊಠಡಿ. v. *Chamber.* (*a dining room or parlour*) ಭೋಜನಶಾಲ, ಆಕೋಗಣೆಯಮನೆ, ಉಂಬೋಮನೆ.

Roominess, s. n. ವಿಶಾಲ, ವಸತಿ, ಪ್ರಶಸ್ತ. v. *Space.*

Roomy, a. ಪ್ರಶಸ್ತವಾದ, ವಿಶಾಲವಾದ, ವಸತಿಯಾದ, ಮಬ್ಬೆಳಿಕೆ, ವಿಸ್ತರ. v. *Spacious, wide, large.*

Roost, s. n. (*hen roost*) ಕುಕ್ಕುಟಾಸನ, ಪಂಜರ ದಡ್ಡಕಟ್ಟಿಗೆ; (*a roost cock*) ಸಂಬರ, ಕುರುಟುಕೋಳಿ.

To Roost, v. n. ಗೂಡುಸೇರು. v. *To sleep.*

Root, s. n. ಬೇರು, ಮೂಲ, ಬುನಾದಿ; (*the root of a tree*) ಬೇರು, ಮೂಲ; (*bulbous root*) ಗಡ್ಡೆ; (*edible roots*) ಕಂದಮೂಲ, ಗಡೆರಾಯಿ, ಕಾಯಿಗಡ್ಡೆ; (*the root of the tail of a horse, &c.*) ವಾಲಮೂಲ; (*the root of a tooth*) ಬೇರು, ಹಲ್ಲುಬೇರು, ಹಲ್ಲುಬೆಸರು; (*the root of the nose*) ಮೂಗಿನಕಂಠ; (*the root of a mountain*) ಪರ್ವತಮೂಲ.

To Root up, v. a. ಕಿತ್ತಿಹಾಕು, ಬೇರುಸಂಗಡಕೀಳು, ನಿರ್ಮೂಲಮಾಡು; (*an instrument for pulling up trees by the roots*) ಕುಠಾರ, ಮೂಲಶೂಲ; (*to take root*) ಬೇರುಕೊಳ್.

Rooted, part. ಬೇರೂರಿದ, ಬೇರುಹತ್ತಿದ. v. *Firm, deep, strong.*

Rootedly, ad. ಬೇರುಕೊಂಡದ್ದಾಗಿ, ಬೇರುಹತ್ತಿದ್ದಾಗಿ, ಬೇರುಯುಳ್ಳದ್ದಾಗಿ. v. *Deeply, firmly, strongly.*

Rope, s. n. ಪ್ರಗ್ರಹವು, ಹಗ್ಗವು; (*a cable rope*) ಮೋಕು, ಕಾಡಿಮೋಕು; (*a tent rope*) ಡೇರೆಯಹಗ್ಗ; (*a ship rope*) ಹಡಗದಹಗ್ಗ; (*a stretched rope on which any thing is hung*) ಕಟ್ಟಿದಹಗ್ಗ, ತೂಗಾಡುವಹಗ್ಗ; (*a ropemaker*) ಖಂಜರ; (*to make ropes*) ಹಗ್ಗಮಾಡು, ಹಗ್ಗಹೊಸೆಯು, ಹಗ್ಗಹಾಕು; (*a ropedancer*) ಹಗ್ಗದಡೊಂಬರ, ಫೇರಣೆಗಾರ; (*the rope on which he dances*) ಸರಹಗ್ಗ.

Ropiness, s. n. ಜಿಗುಟು, ಬಂಕಟೆ, ಅಂಟು.

Ropy, a. ಜಿಬ್ಬಿನ, ಜಿಗುರಿನ, ಬಂಕಟೆಯ. v. *Glutinous, viscous.*

Rosary, s. n. ಜಪಮಾಲೆ, ಅಕ್ಷಮಾಲೆ; (*a small tassel to the rosary*) ಮೇರುವು.

Rose, s. n. ಗುಲಾಬಿ, ಪುಷ್ಪರಾಜ; (*rose water*) ಗುಲಾಬಿನೀರು, ಪಂನೀರು.

Roseate, a. ಪಂನೀರಿನ, ಗುಲಾಬಿಯ, ಪುಷ್ಪರಾಜಿಯ.

Rosin, s. n. ಅಂಟು. v. *Resin.*

Rosy, Roseate, a. ಪಂನೀರಿನ, ಗುಲಾಬಿಯ; (*of a rosy complexion*) ಕೆಂಧಾರುಮುಖದ.

Rostrum, s. n. *(beak)* ಚುಂಚು; *(pulpit)* ಸಿಂಹಾಸನ. v. *Beak, pulpit.*

To Rot, v. n. ಹುಳಿಯು, ಶಿಥಿಲವಾಗು, ಮಸಿಯಾಗು, ಬೂಜ್ರಾಗು, ಉಪ್ಪಿಂಗಿಡಿಯು, ಕೊಳೆಯು, ಮೊತ್ತೆಬೀಳು, ಜೊತ್ತೆಬೀಳು. v. *To putrefy.*

Rot, s. n. ಮಸಿ, ಜೊತ್ತೆ, ಮೊತ್ತೆ, ಟೊಪ್ಪೆ, ಹಪ್ಪು, ಮಗ್ಗ, ಮಗ್ಗು, ಹುಳುಕು, ಕುಕ್ಕ, ಪುಪ್ಪಿ. v. *Putrefaction.*

Rotary, a. ಚಕ್ರವರ್ತನೆಯ, ಅಕ್ಷವರ್ತನೆಯ, ಪರಿವರ್ತನೆಯ, ಗಿರಿದಿರುಗುವಿಕೆಯ.

Rotation, s. n. ತಿರುಗುವಿಕೆ, ಅಕ್ಷವರ್ತನೆ, ಪರಿವರ್ತನೆ, ಗಿರಿದಿರುಗುವಿಕೆ.

Rote, by Rote, ad. ಕಂಠಪಾಠವಾಗಿ, ನಿರಾಘಾಟವಾಗಿ; *(to repeat by rote)* ಕಂಠಪಾಠವಾಗಿ ಒಪ್ಪಿಸು.

Rotten, a. ಕೊಳೆತ, ಕೆಟ್ಟುಹೋದ, ಪುಪ್ಪಿಯಾದ, ಹುಳಿತ, ಮಸಿಯಾದ, ಮೊಟ್ಟೆಯಾದ. v. *Putrid.*

Rottenness, s. n. ಕೊಳೆವಿಕೆ, ಪುಪ್ಪಿ, ಹುಳಿತಿಂಸುವಿಕೆ, ಮಸಿಗಿಡಿಯುವಿಕೆ.

Rotund, a. ಗುಂಡಾದ, ವರ್ತುಲವಾದ, ವೃತ್ತವಾದ, ದುಂಡಾಗು. v. *Round.*

Rotundity, s. n. ಗುಂಡು, ಬಿಂಬ, ಚೆಂಡು, ವೃತ್ತ. v. *Roundness.*

Rotundo, s. n. ಚಕ್ರಾಕಾರದಮನೆ.

To Rove, v. a. ತಿರುಗಾಡು, ವಿಹರಿಸು, ಅಲ್ಲಾಡು. v. *To ramble, roam, wander.*

Rover, s. n. ತಿರುಗಾಡುವವ, ವಿಹರಿಸುವವ, ಅಲ್ಲಾಡುವವ. v. *Rambler. (a fickle inconstant man)* ಚಪಲನು, ಚಾಂಚಲ್ಯನು. v. *Also robber, pirate. (at rovers)* ಗೊತ್ತಿಲ್ಲದೆ, ಗುರಿಯಿಲ್ಲದೆ. v. *At random.*

Roving, s. n. *(wandering)* ತಿರಿಗಾಡಿಕೆ, ವಿಹರಿಸುವಿಕೆ; *(inconstancy)* ಚಪಲತನ, ಚಂಚಲ.

Rouge, s. n. ಕೆಂಪುಬಣ್ಣ, ಕೆಂಪುವರ್ಣ, ಚೇಪು, ಗುಲಾಲು. v. *Paint.*

Rough, a. *(not level or smooth, as a surface)* ತರಕಾದ, ತರತರಕಲಿನ, ಮಡ್ಡಿಯು, ಸಾಪಿಲ್ಲದ; *(rough ground)* ತರಕಲಭೂಮಿ, ಹಾಳುಭೂಮಿ, ಬೀಳುಭೂಮಿ; *(a rough road)* ಅಧ್ವಾಂಸದದಾರಿ; *(a rough draught)* ಕಚ್ಚಾಖರಡು; *(rough to the taste)* ಗೊಡ್ಡುಳಿಯ, ಕಟ್ಟುಹುಳಿಯ; *(a rough temper)* ಮೊರಟುಗುಣ, ತರಗೆಗುಣ; *(a rough sea)* ಅಲ್ಲಕಲ್ಲೋಲವಾದ ಸಮುದ್ರ; *(a rough diamond)* ಸಾಣೆಹಾಕದ ರತ್ನ, ತರಗೆಗಿಡಿಯದ ರತ್ನ; *(a rough countenance)* ಬಿರುಮೋರೆ, ದೆವ್ವಮೋರೆ, ಬೂತೆಮುಖ, ಗುಡುಗುಮೋರೆ, ಸುಗುಮೋರೆ; *(rough, tempestuous)* ಮಬ್ಬುಮಂದಾರದ, ವಾತರೂಷ; *(rough unpolished manners)* ದನಗಾವಿಯ, ದಾಂದಿಗದ, ಲಾಡಿನ, ಮಡ್ಡಗರಾಸದ, ಗಾವುದಿಯ; *(rough, not smoothed or polished)* ನುಣ್ಚಿತಿಡದ, ಮೆರುಗಿಡದ, ಸಾಪುಮಾಡದ, ತೊಳೆಕಿಡದ; *(harsh to the ear)* ಬಿರಿಬಿಸ, ಕರ್ಕೋರದ; *(a rough statement)* ಖಂಡಿತ್ತ.

To Roughcast, v. a. *(to incrust a wall, &c. with mortar)* ಮಡ್ಡಿಮಾಡು, ಮಡ್ಡಿಸುಣ್ಣಹಾಕು, ಮೊರಡಿಡು.

Roughcast, s. n. ಮಡ್ಡಿಸುಂಗಾ, ಮಡ್ಡಿ. v. *Plaster, mortar.* (*a roughcast or roughdraught or model*) ಕಚ್ಚಾಖರಡು, ನಕಲು.

To Roughdraw, v. a. (*make a roughdraught or rude model*) ನಮೂನಿಮಾಡು, ಕಚ್ಚಾಮಾಡು.

To Roughhew, v. a. ಆಕೃತಿಮಾಡು.

Roughhewn, a. ಆಕೃತಿಯಾದ.

Roughly, ad. ತೆರಕಲಾಗಿ, ಮಡ್ಡಿಯಾಗಿ; (*hairily*) ಮೊರಸುಮೊರಸಾಗಿ, ಬರಸುಬರಸಾಗಿ; (*not smooth of surface*) ಕರಡಾಗಿ, ಮೊದ್ದಾಗಿ; (*not smooth to the taste*) ಸೊಡ್ಡುರುಚಿಯಾಗಿ, ಕಟ್ಟುರುಚಿಯಾಗಿ; (*with roughness of temper*) ಗಡುಸಾಗಿ, ಮೊರಟಾಗಿ, ಕರಡುಮೊರಡಾಗಿ; (*tempestuously*) ಜಂಝಾಮಾರುತವಾಗಿ, ಬಿಂಡವಾಯುವಾಗಿ; (*with unpolished manners*) ದನಗಾವಿಯಾಗಿ, ದಾಂಡಿಗದತನವಾಗಿ, ಮಡ್ಡಿಗರಾಸದವನಾಗಿ, ಗಾವುದಿತನವಾಗಿ; (*not polished or smoothed*) ಸಾಪಿಲ್ಲದಾಗಿ, ತೆರಕಲಾಗಿ, ತೆರತೆರಕಲಾಗಿ.

Roughness, s. n. ತೆರಕು, ಗಡಸು; (*hairiness*) ಮೊರಸುಮೊರಸು, ಬರಸುಬರಸು; (*want of levelness*) ಕರಡು, ತೆರತೆರಕಲು; (*harshness of taste*) ಆಮ್ಲ, ಕಟ್ಟುರುಚಿ, ಸೊಡ್ಡುರುಚಿ; (*harshness of temper*) ಕಾಠಿಣ್ಯವು, ಕ್ರೂರವು; (*harshness of face*) ಬುಡುಗಮೂತಿ, ಬುಡುಗಮೋರೆ; (*tempestuousness*) ಜಂಝಾಮಾರುತ, ವಾತರೂಕ್ಷ; (*rudeness of manners*) ದನಗಾವಿಯು, ದಾಂಡಿತನವು, ಮಡ್ಡಿಯು, ಗಾವುದಿಯು; (*want of smoothness or polish*) ಮೊಡ್ಡು, ಏಕಾಕಾರ; (*harshness of sound*) ಕಠೋರವು, ಅಘೋರವು.

Round, a. ಗುಂಡಾದ, ಚಕ್ರವಾದ, ವಲಯವಾದ, ಮಂಡಲವಾದ, ಬಟ್ಟವಾದ; (*any thing round, as a piece of money, the scales of a fish, a circular heap of sand, &c.*) ವಲಯಾಕೃತಿಯು, ಚಕ್ರಾಕೃತಿಯು; (*round about, round and round*) ಸುತ್ತುಮುತ್ತು; (*turning or wheeling round*) ತಿರುಗುವದು, ಆವರ್ತನವಾಗುವದು; (*to wheel round*) ತಿರುಗು; (*a round face*) ಗುಂಡುಮೋರೆ, ಬುಡುಗುಮೋರೆ; (*a round tent*) ಚಕ್ರಡೇರ; (*to muffle or wrap round*) ಮುಚ್ಚಿಬಿಡು, ಸುತ್ತಿಹಾಕು; (*to drive round*) ಸುತ್ತುತಿರುಗಿಸು; (*to turn round*) ಸುತ್ತಿಕೊಳ್ಳು, ಪ್ರದೇಶವಾಗು. v. *To revolve.* (*to turn round, as a river, road, &c.*) ಸುತ್ತಿಹರಿಯು; (*to turn round a clew*) ಸುತ್ತು.

Round, s. n. ಮಂಡಲ, ಚಕ್ರ, ವಲಯ, ವರ್ತುಳ. v. *Circle, ring, revolution.* (*the round or step of a ladder*) ನಿಚ್ಚಣಿಕೆಹಲ್ಲು, ಕುಸಿಕಟ್ಟಿಗೆ; (*the round or circuit made by a guard or watch*) ಪ್ರಹರಿ, ಗಸ್ತಿತಿರುಗುವಿಕೆ, ಸುತ್ತಿಬರುವಿಕೆ; (*to go the rounds*) ಪ್ರಹರಿತಿರುಗು, ಗಸ್ತಿತಿರುಗು, ಸುತ್ತಿಕೊಂಡುಬರು.

Round, ad. ಗುಂಡಾಗಿ, ಚಕ್ರವಾಗಿ, ವರ್ತುಲವಾಗಿ, ಬಟ್ಟತಾಗಿ; (*on every side*) ಸುತ್ತುಮುತ್ತು; (*in a heap*) ಕುಪ್ಪೆಯಾಗಿ.

To Round, v. a. (*make round*) ಗುಂಡಗೆಮಾಡು; (*to go round*) ಸುತ್ತಿಕೊಳ್ಳು, ಪ್ರದಕ್ಷಿಣ

ಹೋಗು; *(to become round)* ಗುಂಡಾಗು, ವರ್ತುಲವಾಗು.

Rounded, made Round, part. ಗುಂಡಾದ, ವರ್ತುಲವಾದ.

Roundabout, a. ಸುತ್ತ, ಸುತ್ತುಮುತ್ತ.

Roundish, a. ದುಂಡಾನ.

Roundly, ad. *(in a round form)* ಗುಂಡಾಗಿ, ದುಂಡಾಗಿ, ಚಕ್ರವಾಗಿ; *(without reserve)* ಮರ್ಮವಿಲ್ಲದಾಗಿ, ವಂಚನೆಯಿಲ್ಲದಾಗಿ; *(vigorously)* ಪುಷ್ಟಿಯಾಗಿ, ಬಲವಾಗಿ. v. Also *completely.*

Roundness, s. n. ಗುಂಡು, ದುಂಡು, ವಟ್ರೈವು, ಬಟುವು, ಕಂದುಕಭಾವ, ಬಿಂಬಭಾವ. v. Also *smoothness, sincerity.*

To Rouse, v. a. ಪ್ರೇರೇಪಿಸು, ಉಲ್ಲಾಸಮಾಡು, ರೇಗಿಸು. v. *To excite. (to rouse from sleep)* ಎಚ್ಚರಿಸು, ಜಾಗರವಾಗು; *(to rouse a wild beast)* ಎಬ್ಬಿಸು; *(to be excited)* ಪ್ರೇರೇಪಿಸಲ್ಪಡು, ಉಲ್ಲಾಸಯಾಗಮಾಡು; *(to awake from a sleep)* ಎಚ್ಚರಮಾಡು, ಎಬ್ಬಿಸು.

Roused, part. ಎಬ್ಬಿಸಿದ, ಎಚ್ಚರಿಸಿದ.

Rouser, s. n. ಎಬ್ಬಿಸುವವ, ಪ್ರೇರೇಪಕ, ಎಚ್ಚರಿಸುವವ.

Rout, s. n. *(defeat of an army)* ಪಲಾಯನ, ಮುರಿದುಹೋದುವಿಕೆ. v. Also *rabble.*

To Rout, v. a. ದೇಶಭ್ರಷ್ಟಮಾಡಿಸು, ಪಲಾಯನಮಾಡಿಸು, ಮುರಿಯಬಡಿಯು. v. *To defeat.*

Routed, part. ಮುರಿಯಬಡಿಯಲ್ಪಟ್ಟ, ಮುರಿದುಬಿದ್ದುಹೋದ, ತೊಂದರೆಗೊಂಡ, ಓಡಿಹೋದ. v. *Defeated.*

Route, s. n. ರಸ್ತೆ, ಪಥ, ಮಾರ್ಗ. v. *Way, road.*

Row, s. n. ಸಾಲು, ಪಂಕ್ತಿ, ವೀಧಿ, ಓಳಿ, ಆವಳಿ, ಶ್ರೇಣಿ, ರೇಖೆ, ರಾಜಿ, ಆವಳಿಯು; *(a row of warehouses or shops in a market)* ಅಂಗಡಿಸಾಲು, ಶ್ರೇಣಿ, ವೀಧಿ; *(a row of pearls)* ಮುತ್ತಿನಸರ, ಮುತ್ತಿನಲಡಿ. v. Also *rank, line, series, string. (in a row)* ಸಾಲಾಗಿ, ಪಂಕ್ತಿವಾಗಿ, ಶ್ರೇಣಿಯಾಗಿ; *(placed in a row)* ಸಾಲಾಗಿಟ್ಟ, ಪಂಕ್ತಿವಾಗಿಟ್ಟ, ಸೋಲುಪೆಯಿಟ್ಟ; *(to plant trees in a row)* ಸಾಲುತೋಪುಹಾಕು.

To Row, v. a. *(a boat)* ಹರಗೋಲುನಡಿಸು, ಹುಟ್ಟುಹಾಕು.

Rower, s. n. ಅಂಬಿಗ, ಗಂಗೆಮಗ, ಹುಟ್ಟುಹಾಕುವವ.

Rowel, s. n. ರಿಕಾಬಿನಮುಳ್ಳು, ಘೋರಿಮುಳ್ಳು. v. *Spur.*

Royal, a. ಮಹಾರಾಯ, ಪಾಚ್ಛಾ, ಧನತ್ತರ; *(the royal treasury)* ತೋಷಖಾನೆ, ಭಂಡಾರ, ಬೊಕ್ಕಸ, ಖಜಾನೆ; *(a royal favourite)* ರಾಜಪ್ರಿಯನು, ರಾಜವಲ್ಲಭ; *(royal chattels)* ಅರಸಿನಕಾರಖಾನೆ, ರಾಜಸಾಮಗ್ರಿ; *(his royal highness, or his royal majesty)* ಮಹಾರಾಜರಾಜಶ್ರೀ; *(a royal tiger)* ಹೆಬ್ಬುಲಿ, ಬೆಬ್ಬುಲಿ, ಹುಲಿರಾಜ, ಹಿರೇಹುಲಿ.

Royally, ad. ಮಹಾರಾಜತನವಾಗಿ, ಪಾಚ್ಛಾಯಿಶಿಯಾಗಿ, ಧನತ್ತರಾಗಿ, ಧುರಂಧರತ್ವವಾಗಿ.

Royalty, s. n. ಮಹಾರಾಜತ್ವ, ದೌಲತಗಿರಿ, ಪಾಚ್ಛಾಯಗಿರಿ, ಸಲತನತ, ಗಾಂಭೀರ್ಯ, ಅಟ್ಟಹಾಸ.

To Rub, v. a. ಒರಸು, ತಿಕ್ಕಿಹಾಕು, ಕೆರುವಿಡು. v. *To grind, polish, scour, clean.* (*to rub down a horse*) ಕರಾರುಮಾಡು, ತಿಕ್ಕು, ಉಜ್ಜು; (*to rub up, arouse*) ಪ್ರೇರೇಪಿಸು, ಉಲ್ಬಣಮಾಡು. v. *To awaken, excite.* (*to rub or furbish*) ತೊಳಕಿಡು, ಮಿಂಚಿಸು, ಮೆರುಗಿಸು, ಬೆಳಕಿಡು. v. *To polish.* (*to rub, wear or be worn*) ತೆರದುಹೋಗು; (*to rub one's self against any thing*) ತೆರಕೊಳ್ಳು, ತೆರಿಯು, ಒರಕೊಳ್ಳು, ಒರಿಯು; (*to rub through difficulties*) ಕಷ್ಟಕಡೆಹಾಯು; (*to rub as well as one can*) ಆದಮಟ್ಟಿಸಾಹೋಗು, ಶಕ್ತಿಮೀರಿಹೋಗು.

Rub, Rubbing, s. n. ಒರಸುವದು, ತಿಕ್ಕುವದು, ಉಜ್ಜುವದು, ಸೀಂಡುವದು; (*rubbing one another*) ಒತ್ರೇಡುವದು; (*rubbing with the hands*) ಕೈಯ್ಯಿಂದವುಜ್ಜುವದು, ಕೈಯ್ಯಿಂದ ಒರಸುವದು; (*rubbing the skin*) ಮೈಯ್ಯೊರಸುವದು; (*rubbing the teeth*) ಹಲ್ಲುತಿಕ್ಕುವದು; (*rubbing the hands*) ಕೈಯ್ಯೊರಸುವದು; (*to give one rubs*) ಚಕ್ಕಂದವಾಡು, ಪರಿಹಾಸ್ಯವಾಡು; (*a rub, difficulty, cause of uneasiness*) ಚಕ್ಕಂದ, ಚೆಂನಾಟೆ, ಹಾಸ್ಯ, ಮಸ್ಕರಿ. v. *Sarcasm.*

Rubber, s. n. ಒರಸುವವ, ತಿಕ್ಕುವವ, ಅರ, ಒರೆಸುವಮಣೆ. v. *Rasper, burnisher, towel, whetstone.*

Rubbish, s. n. ಕಸ, ಮಂಣುಬುಗ್ಗಿ.

Rubstone, s. n. ಹಡಗಲ್ಲು.

Ruby, s. n. ಮಾಣಿಕ್ಯ, ಲಕ್ಷ್ಮಿಪುಷ್ಟ, ಕೆಂಪು, ಪದ್ಮರಾಗ, ಶೋಣರತ್ನ, ಸೋಣಿತಕ, ಕುರುವಿಂದ, ಕೆಂಪಿನಹರಳು, ಕೆಂಬರಳು, ದನ್ನವರಲು, ಕೆಸುಗಲ್ಲು; (*a brilliant ruby*) ಧಗಧಗಿಸುವ ಮಾಣಿಕ, ಝಗಝಗಿಸುವ ಮಾಣಿಕ; (*a ruby of the finest kind*) ಘನಮಾಣಿಕ್ಯ. v. *Also blain, blotch, carbuncle.* (*ruby, of a ruby colour*) ಕೆಂಧಾರು, ಮಾಣಿಕವರ್ಣ, ಕೆಂಪುವರ್ಣ.

Rudder, s. n. ಕೇನೀಪಾತಕ, ಅರಿತ್ರ, ಪುಟ್ಟಿ.

Ruddiness, s. n. ಅರುಣತ್ವ, ಕೆಂಪು, ಬಿಂಬಫಲವರ್ಣ, ತೊಂಡೆಕೆಂಪು.

Ruddy, a. ಕೆಂಚನ, ಅರುಣವಾದ. v. *Rosy, ruby.*

Rude, a. (*uncivil, brutal*) ಕಾಠಿಂಣ್ಯದ, ಕ್ರೂರದ, ವಿನಯವಿಲ್ಲದ, ಭಂಡತನದ, ಉದ್ಧತ, ಲುಚ್ಛ; (*ignorant, unpolished, unskilful*) ಪಾಮರದ, ಮಡ್ಡಿಯ, ಮಂದಮತಿಯ, ಧಡ್ಡ, ಮಡ್ಡಗರಾಸದ, ದಾಂಡಿಗದ; (*rude work*) ಮಡ್ಡಿಕೆಲಸ, ಕಾಪುದಿಕೆಲಸ, ದನಗಾವಿಕೆಲಸ, ಅಬಂದಶ್ರೇಕೆಲಸ. v. *Inelegant, rustick, rugged, rough, harsh, savage, turbulent.*

Rudely, ad. (*brutally, uncivilly*) ಭಂಡತನವಾಗಿ, ಅಮರ್ಯಾದಿಯಾಗಿ, ಲುಚ್ಛಾತನವಾಗಿ; (*ignorantly*) ಮಂದಮತಿಯಾಗಿ, ಧಡ್ಡತನವಾಗಿ, ಮಡ್ಡಗರಾಸವಾಗಿ, ದಾಂಡಿಗತನವಾಗಿ; (*without exactness*) ಮಡ್ಡಿಮಡ್ಡಿಯಾಗಿ, ರಬ್ಬುಸುರುಬ್ಬಸಾಗಿ; (*to behave rudely*) ಭಂಡತನಮಾಡು, ಲುಚ್ಛಾತನಮಾಡು.

Rudeness, s. n. (*brutishness, incivility*) ಭಂಡತನವು, ಲುಚ್ಛಾತನವು, ಅಮರ್ಯಾದಿಯು; (*ignorance, unskilfulness*) ಮಡ್ಡತನ, ಮಂದಮತಿ

ಯು, ಧಡ್ಡತನ, ಸ್ತಬ್ಧತನ. v. *Inelegance, violence.*

Rudiment, s. n. *(first elements of science)* ಆದಿಯು, ಶ್ರೀಕಾರ, ಬುನಾದಿ, ಓಂಪ್ರಥಮ.

Rudimental, a. ಓಂಪ್ರಥಮದ, ಆದಿಯ, ಶ್ರೀಕಾರದ.

Rue, s. n. *(herb)* ಸದಾಪು, ಮಳೇರಾಳಿಂಗ.

To Rue, v. a. ಗೋಳಾಡು, ದುಃಖಪಡು, ಅಘೋರಿಸು, ವ್ಯಾಕುಲಪಡು, ಚಿಂತಿಸು. v. *To lament, grieve, regret.*

Rueful, a. ದುಃಖದ, ಚಿಂತೆಯ, ಅಘೋರದ. v. *Woeful, mournful.*

Ruefully, ad. ಚಿಂತೆಯಾಗಿ, ದುಃಖವಾಗಿ, ಅಘೋರವಾಗಿ, ವ್ಯಾಕುಲವಾಗಿ, ಮನಮರುಗಾಗಿ.

Ruefulness, s. n. ಮನಮರುಗು, ದುಃಖ, ಚಿಂತೆ, ವ್ಯಾಕುಲ.

Ruffian, s. n. ಕೊಲೆಪಾತಕ, ಖೂನಿ, ಕಾಠಿಣ್ಯದವನು. v. *Assassin, robber, murderer*; also *rude, brutal, savage.*

To Ruffle, v. a. *(discompose)* ಕ್ಲೊಂದಶಿಪಡಿಸು, ಗಾಬರಿಮಾಡು, ಪೀಡಿಸು, ವೇಧಿಸು. v. *To disturb, perplex. (to put out of form, make less smooth)* ಜಿಗಿಜಿಗಿಮಾಡು, ನಲಿಗಿಲಿಮಾಡು. v. *To rumple. (to be contracted into plaits)* ಪದರಪದರಾಗಿರು, ಕುಜ್ಜಾಗಿರು, ಕುಚ್ಚಾಗಿರು. v. *To wrinkle.*

Ruffled, part. *(discomposed)* ಕ್ಲೊಂದಶಿಪಟ್ಟ, ಗಾಬರಿಪಟ್ಟ; *(wrinkled, plaited)* ಜಿಗಿಜಿಗಿ ಮಾಡಿದ, ಗುಜ್ಜಾದ, ಕುಚ್ಚಾದ. v. *Disordered.*

Rug, s. n. ಚಾಪೆ, ಉದ್ದಗಂಬಳಿ. v. *Mat, carpet.*

Rugged, a. *(rough, uneven)* ಸಾಪುಯಿಲ್ಲದ, ಕರಿಕಿನ; *(as ground)* ತಗ್ಗುಮುಗ್ಗಿನ, ಅಧ್ವಾನದ; *(rugged rocky places)* ಗೊರಕಲ್ಲಿನ, ಬಂಡೆಯ, ತಗ್ಗುದಿಂಬೆಯ; *(a rugged road)* ಅಧ್ವಾನದಹಾದಿ, ಗೊರಕಲ್ಲಿನಹಾದಿ, ಕಾಡುಹಾದಿ; *(a rugged temper)* ಮೊರಟುಗುಣ, ಕಠಿನಗುಣ. v. *Surly, morose, rude, brutal.*

Ruggedly, ad. ಕರಕಲಾಗಿ, ಮೊದ್ದಾಗಿ, ಕರಡಾಗಿ.

Ruggedness, s. n. ಕರಡು, ಮೊದ್ದು, ಕರಕರಕಲು. v. *Roughness.*

Ruin, s. n. *(destruction)* ನಾಶನ, ಹಾಳು, ಕೇಡು; *(loss of fortune)* ದಿವಾಳಿಕೆ, ಹಾಳು, ನಷ್ಟ, ಕುಷ್ಟಿ, ಖರಾಬು, ಕೇಡು; *(a ruin, of a building)* ಬಿದ್ದಮನೆ, ದೇಗುಲ, ಶಿವದೇಗುಲ, ಶಿವಹಾಳು.

To Ruin, v. a. ನಾಶನಮಾಡು, ಹಾಳುಮಾಡು, ನಿರ್ಮೂಲಮಾಡು. v. *To demolish, destroy, overthrow. (to make poor or wretched)* ಬಡತನಮಾಡು, ದರಿದ್ರಗೇಡಿತನಮಾಡು; *(to make bankrupt)* ದಿವಾಳಿಮಾಡು.

Ruined, part. *(demolished, overthrown, laid waste)* ಕೆಡಿಸಿದ, ಹಾಳಾದ, ನಾಶನವಾದ, ನಿರ್ಮೂಲವಾದ; *(made poor or wretched)* ದ್ರವ್ಯಸ್ಥಿತಿಹಾಳಾದ, ಬಡತನವಾದ; *(bankrupt)* ದಿವಾಳಾದ, ಹಾಳಿದ್ದ.

Ruinous, a. *(as buildings)* ಹಾಳಾದ; *(destructive)* ಕೇಡಿನ, ನಷ್ಟದ, ನಾಶನದ. v. *Pernicious.*

Ruinously, ad. ಕೇಡಾಗಿ, ನಷ್ಟವಾಗಿ, ನಾಶನವಾಗಿ. v. *Perniciously.*

Rule, s. n. *(government)* ಆಳಿಕೆ, ರಾಜ್ಯಭಾರ

ಸರಕಾರು; *(a canon)* ವಿಧಿ, ನೇಮ, ಸ್ಮೃತಿ, ಶ್ರುತಿ, ವಿಧ, ಪದ್ಧತಿ; *(a rule or ruler by which right lines are drawn)* ಗೆರೆಹೊಯ್ಕಕಟ್ಟಿಗೆ; *(according to rule)* ಪದ್ಧತಿಪ್ರಕಾರ; *(not according to rule)* ಅವಿಧಿಯಾಗಿ, ಅಕ್ರಮವಾಗಿ; *(a mason's rule)* ಗಜ, ಅಳತೆಕೋಲು, ಗೋಡೆಗಜ; *(rule of three)* ತ್ರೈರಾಶಿಕ; *(imperial rule)* ಸಾಂಬ್ರಾಜ್ಯವು.

To Rule, v. a. ಆಳು, ರಾಜ್ಯಭಾರನಿರ್ವಹಿಸು. v. *To govern, regulate, manage. (to rule or draw a line with a ruler)* ಗೆರೆಹೊಡೆ; *(to rule one's self)* ಸ್ವಸ್ವಾಧೀನವಾಗಿರು.

Ruled, part. *(governed)* ಆಳಿದ, ಪರಿಪಾಲನೆಮಾಡಿದ; *(ruled with a ruler)* ಗೆರೆಹೊಡೆಸಿದ, ಗೆರೆಹೊಡೆದ.

Ruler, s. n. ಆಳುವವ, ಭೂಪತಿ, ಅರಸು. v. *Governor. (a ruler for drawing lines)* ಗೆರೆಹೊಯ್ವಕಟ್ಟಿಗೆ.

To Rumble, v. n. ಗುಡುಗುಡಾಯಮಾನವಾಗು, ಗುಡುಗುಡಿಸು; *(the rumbling of the wheels)* ಕಿರಕ್ಕಿಡಿಸು, ಧಡಧಡಿಸು; *(the rumbling of the belly)* ಕಟಿಕುಟಿಸು, ಗಡಗುಡಿಸು.

To Ruminate, v. a. ಬಾಯಿಮೆದಲಿಸು, ಮೆಲುಕುಹಾಕು, ಬಾಯಿಚಪ್ಪರಿಸು. v. *To chew the cud. (to muse)* ಧ್ಯಾನಿಸು, ಚಿಂತಿಸು. v. *To meditate.*

Rumination, s. n. *(chewing the cud)* ಮೆಲುಕುಹಾಕುವದು; *(meditation)* ಧ್ಯಾನಿಸುವದು, ಚಿಂತಿಸುವದು.

To Rummage, v. a. ಹುಡುಕು, ಶೋಧಿಸು. v. *To search*; also *to plunder.*

Rummaged, part. ಹುಡುಕಿದ, ಶೋಧಿಸಿದ. v. Also *plundered.*

Rumour, s. n. ಗುಲ್ಲು, ಗುಬಾರು, ಅವಾಯಿ, ಸುದ್ದಿಸುಕಾಲಿ, ಅವಾಂತರ, ಗಡಬಡಿ, ವರ್ತಮಾನ, ಖಬರು, ವದಂತಿ, ಜನಶ್ರುತಿ. v. *Report, news.*

To Rumour, v. a. ಗುಲ್ಲುಮಾಡು, ಗುಬಾರುಮಾಡು, ಅವಾಯಿಮಾಡು, ಗಡಬಡಿಮಾಡು.

Rump, s. n. ಬೆಂನೆಲುಬು.

To Rumple, v. a. ಗಳಿಗೆಮುರಿಯು, ಗಿಜಿಗಿಜಿಮಾಡು, ನಲುಗಿಸು, ನಲುಗುಮಾಡು. v. *To ruffle.*

Rumple, s. n. ನಲಿಗಿಲಿ, ಮುದುಕು, ಹುಂಗುಹುಂಗು; ಹತ್ತಿಹತ್ತಿ, ಪತ್ಲೆಪಲ್ಲ್ಯ.

Rumpled, part. ನಲಿಗಿಸಿದ, ಗುಜ್ಜುಮಾಡಿದ, ಮುದರಿದ.

To Run, v. a. ಓಡು. v. *To make haste, fly, rush. (to run away, flee)* ಪಲಾಯನವಾಗು, ತಪ್ಪಿಸಿಕೊಂಡುಹೋಗು, ದಾಳಿಡು; *(to flow)* ಹರಿಯು. v. *To stream. (to cause to run)* ಓಡಿಸು, ಪಲಾಯನಮಾಡಿಸು; *(to run up and down)* ಬುಡುಬುಡನೆಹೋದ್ಯಾಡು, ದಡದಡನೆಹೋದ್ಯಾಡು; *(to run or dissolve)* ಕರಗು. v. *To melt. (to run or have a run)* ಧರಬೀಳು, ಗಿರಾಕಿಯಾಗು, ಧರವಾಗು. v. *To prevail. (to run round)* ಸುತ್ತಿಹೋದು; *(to run after, search for eagerly)* ಹಿಂಡಿಹೋಗು, ಬೆಂಬಳಿಸು, ಬೆಂಸುಹತ್ತು; *(to run away with, hurry without consent)* ಎತ್ತಿಕೊಂ

ಡುಹೋಗು, ಕಳ್ಳಕೊಂಡುಹೋಗು, ಕಿತ್ತಿಕೊಂಡುಹೋಗು, ಕಸುಕೊಂಡುಹೋಗು, ಕಸರಿಕೊಂಡುಹೋಗು; *(to run on, proceed in a continued series)* ನಡಕೊಂಡಿರು, ಸಾಗುತ್ತಿರು; *(to run over, as a vessel)* ತುಂಬಿತುಳುಕು, ತೊಂದರಿಯು; *(as a river)* ತೊರಳಿಹರಿಯು; *(as a corn measure)* ತೂರಳಿಚೆಲ್ಲು. v. *To overflow.* *(to count cursorily)* ಮೇಲೆಮೇಲೆನೋಡು, ಅದಾಟಾಗಿ ನೋಡು, ಉಟಂಕಿಸು; *(to consider hastily)* ಮೋದಾಮೋದಿಯಾಗಿ ಹೇಳು; *(to run out, as a leaky vessel)* ಸೋರು, ತಾರು; *(to be at an end)* ತೀರು, ಮುಗಿಯು; *(to expatiate on)* ವಿಸ್ತರಿಸು, ಶಾಖೋಪಶಾಖವಾಗಿ ಹೇಳು; ಕಾಲುಹುಟ್ಟಿಸು, ಉಪಕಲ್ಪಿಸು; *(to run the hazard)* ಅಂಗೀಜುಮಾಡು. v. *To risk.* *(to run one down with ill language)* ಬೈಯ್ಯು, ಬೊಗಳು, ದುರ್ಭಾಷೆಯಾಡು, ವಸ್ತ್ರೋತ್ತರವಾದರು, ಶಪ್ಪಾರಕಾಗು; *(to suffer a child to run ahead)* ಸಲಿಗೆಕೊಡು, ಚಸುಪುಕೊಡು; The sense *runs* thus ಅರ್ಥವೇನಂದರೆ, ಅಭಿಪ್ರಾಯ ಯಾವದಂದರೆ; *(to run aground)* ನೆಲಕ್ಕಿಮುಟ್ಟು, ನೆಲಕ್ಕಿಕಗಲು; Her tongue *runs* perpetually ಅವಳ ನಾಲಿಗೆಸುಂಮನೆಯಿರದು; Your tongue *runs* before your wit ನೀನುತಿಳುವಳಿಕೆಯಿಲ್ಲದೆಮೊದಮೊದಲಂತಿ, ನಿನಗೆಜ್ಞಂಡೆಬಾಯಿಮುಂದೆಆಗಿಅದೆ; His discourse *runs* upon that ಅದರಮೇಲೆಮಾತಾಡುತಾನೆ, ಅದರಂನಹಿಡಿದುಮಾತಾಡುತ್ತಾನೆ; *(to run one off his legs)* ಕೈಕಾಲುಆಡದಹಾಗೆಯಿರು, ಕೈಕಾಲು ಆಡಗೊಡಿಸದಹಾಗೆಯಿರು; *(to run away with an opinion)* ತಂನಆಲೋಚನೆಪ್ರಕಾರಹೋಗು; *(to run down, to overcome in running)* ಹಿಂದೆಹಾಕು, ಮುಂದುಕೊಂಡುಹೋಗು, ಮಿಂಚಿಹೋಗು; *(a distemper that runs in the blood)* ಜನ್ಮರೋಗ, ಹುಟ್ಟಿರೋಗ; The tank *runs* over ಕೆರೆತುಂಬಿತುಳುಕುತ್ತದೆ, ಕೆರೆಕೋರಪೂರ್ತಿಯಾಗಿಯದೆ, ಕೆರೆತುಂಬಿಕೋಡಿಹಾಕ್ತವಾಗಿಅದೆ; *(to run or boil over)* ಉಕ್ಕು, ಉಕ್ಕಿಹೋಗು, ಉಕ್ಕಿಬರು; He *runs* by that name ಅವನಿಗೆಆಹೆಸರುಬಿದ್ದೋಯಿತು; It *runs* to leaves ಅದುಎಲೆಯಿಡುತ್ತದೆ, ಅದುಯಲೆಕಾಯುತ್ತದೆ; He *runs* into vices ಅವನುಪಾಪಕರ್ಮಗಳಲ್ಲಿ ನಡಿಯುತ್ತಾನೆ; His wages *run* ಅವನಸಂಬಳನಡಿಯುತ್ತದೆ; He *run* out upon that subject ಅವನುಅದರಂನಕುರಿತುಬಹಳವಾಗಿಮಾತಾಡಿದನು, or ಅವನುಅದರಂನಹಿಡಿದುಬಹುಘೋರಮಾತಾಡಿದನು; *(to run the hand into the bosom)* ಕೈಯ್ಯನ್ನುಪದಿಯೊಳಗೆಟ್ಟಿಕೊಳ್ಳು; His nose *runs* ಅವನಿಗೆಶಿಂಬಳಯಿಳಿಯುತ್ತದೆ, ಅವನಿಗೆಶಿಂಬಳಸೋರುತ್ತದೆ, ಅವನಮೂಗುವಸರುತ್ತದೆ; His eyes *run* ಅವನಕಂಣುಪಿಸುಕುಕಟ್ಟುತ್ತದೆ, ಅವನಕಂಣುಶಿಲ್ಹಕಾರುತ್ತದೆ; The time *runs* ಹೊತ್ತುಹೋಗುತ್ತದೆ, ಕಾಲಗತಿಸುತ್ತದೆ; *(to run one down with arguments)* ವಿವಾದಮಾಡಿಜಯಿಸು, ಕಕ್ಷಿನಿಲ್ಲಿಸು, ಕಕ್ಷಿಹೊರಿಸು, ಬಡಿದುಹಾಕು, ಕೆಡಗುಹಾಕು; The sedition *runs* very high ದೊಂಬಿಹೆಚ್ಚಾಯಿತು; He has *run* out his race ಅವ

ನಲ್ಲಾನನುಗ್ರತು, ಅವನು ಕದಕ್ಕೇರಿಹೋದನು; (*to run into mischief*) ಮೋಸದಲಿ ಸಿಕ್ಕಿಕೊಳ್ಳ, ಬಾಯಿ ಅರಿಯದೆ ಕೆಲಸದಲ್ಲಿ ಬರ; I run *myself* into charges ನಾನು ಖರ್ಚಿನ ಹೊಳೆಗೆ ಬೀಳುತ್ತೇನೆ, ನನಗೆ ಬರಳ ಖರ್ಚು ಹಿಡಿಯಲದೆ; He *runs* into debt ಅವನು ಸಾಲ ಮಾಡುತ್ತಾನೆ, ಅವನು ಸಾಲಗಾರನಾಗಿ ಹೋಗುತ್ತಾನೆ; A thorn *run* into my foot ನನ್ನ ಕಾಲಿನಲ್ಲಿ ಮುಳ್ಳು ನೆಟ್ಟಿತು; (*to run a pin into one*) ಸೂಜಿಯ ಚುಚ್ಚಿಕೊಳ್ಳ, ಸೂಜಿನೆಡ, ಸೂಜಿನೆಟ್ಟಿಕೊಳ್ಳ; If you *run* on at this rate ನೀನು ಈ ಪ್ರಕಾರ ಮಾಡಿಕೊಂಡು ಇದ್ದರೆ; (*to run over to one*) ಒಬ್ಬನ ಕಡೆ ಹೋಗ; (*to run over a book*) ಪುಸ್ತಕ ಅದಾಟು ನೋಡ; (*to run one's work over again*) ಪುನಹ ಪರಿಕ್ಷಿಸ; (*to run over a thing, to say little of it*) ಅದಾಟೂಗಿರ, ನೋಡಿ ನೋಡದ ಹಾಗಿರ; (*to run out, to run one's self out*) ಗರಿ ಮೀರಿ ಮಾಡ, ಮಿಗಿ ಮೀರಿ ಖರ್ಚು ಮಾಡ; (*to run out into expenses*) ಹೆಚ್ಚಾಗಿ ಖರ್ಚು ಮಾಡ; (*to run out of one's wit*) ಬುದ್ಧಿ ತಪ್ಪಿಹೋಗ, ಮರಿಮಾಂದ್ಯವಾಗ; (*to run out in length*) ಉದ್ಧವಾಗ, ಉದ್ಧವಾಗಿ ಹೋಗ; (*to run upon one*) ಒಬ್ಬನ ಮೇಲೆ ಹಾಯ, ಒಬ್ಬನ ಮೇಲೆ ಬೀಳ; The beam *runs* upon the wall ತೊಲೆ ಗೋಡೆ ಮೇಲೆ ಹೋತ್ತದೆ, ತೊಲೆ ಗೋಡೆ ಮೇಲೆ ಹಾದದೆ; (*to run up a wall*) ಗೋಡೆ ಯೆಬ್ಬಿಸ, ಘರ ಯೆಬ್ಬಿಸ; (*as a creeper*) ಹಬ್ಬಿಕೊಳ್ಳ; I *run* my head against the wall ಗೋಡೆಗೆ ಹಾದೆ, ನನ್ನ ತಲೆ ಗೋಡೆಗೆ ಹಾಯಿತು; It *runs* to seed ತೆನೆ ಹಾಯುತ್ತದೆ, ಚೆಂಡು ಹಾಯುತ್ತದೆ; (*to run mad*) ಹುಚ್ಚಾಗ, ಪಿಶ್ಚು ಹಿಡಿಯ, ಎತ್ತಿಂಬಿಡಿಯ, ಉನ್ಮಾದ ಹಿಡಿಯ; (*to run one into excess*) ಮೀರಿಹೋಗ, ಮಿಗಿ ಮೀರಿಹೋಗ, ಕಟ್ಟು ತಪ್ಪಿಹೋಗ, ಹಟ್ಟು ಮೀರ; (*to run down, depress, browbeat*) ಕೆಳಗೆ ಇಳಿಸ, ದಬಾಯಿಸ, ಲಜ್ಜೆ ಕೆಡಿಸ. v. *To crush, overpower.* (*to hunt down*) ಬೆಂಬತ್ತ, ಮೂಲೆ ಮೂಲೆ ಹೋಗಿಸ.

Run, Running, s. n. ಓಡಿಕೆ; (*to put one to the run*) ಓಡ ಮಾಡ; (*running water*) ಹರಿಯುವ ನೀರು; (*at the long run*) ಅಂತ್ಯದಲ್ಲಿ, ಕಡೆಯಲ್ಲಿ. v. *At length.*

Runagate, s. n. ಓಡಿಹೋಗುವವ, ಪಲಾಯಿಸುವವ, ಫಲಾಯನ ಮಾಡುವವ, ಓಡುವವ. v. *Fugitive.*

Rundle, s. n. ನಿಚ್ಚಣಿಕೆ ಹಲ್ಲು.

Rundlet, s. n. (*small barrel*) ಚಿಕ್ಕ ಪೀಪ, ಕೊಟ್ಟಿ, ರಂಜಣಿಕೆ.

Runner, s. n. ಓಡುವವ; (*swift messenger*) ಅಂಚೆಯವ. v. *Messenger, courier.*

Runnet, s. n. ಹುಳಿ.

Runt, s. n. ಕುಟ್ಟಿ, ಖಿಣಿಜಿ.

Rupee, s. n. ರೂಪಾಯಿ; (*half a rupee*) ಅರ್ಧ ರೂಪಾಯಿ; (*quarter of a rupee*) ಪಾವಲಿ; (*three quarters of a rupee*) ಮೂರು ಪಾವಲಿ.

Rupture, s. n. (*breach of peace*) ರದ್ದುಬದ್ದುಲು, ಬ್ಯಹತ್ತು. v. *Breach, hostility, enmity, war.* (*breach*) ಒಡಿಕೆ, ಸಂದು, ಗೊಂದು, ಪಿಕಿಲಿಕೆ,

ಪಸರ್ತ್ಯಕೆ ; *(to be afflicted with a rupture)* ಬುಡ್ಡೆ, ಬೀರುಯುಳಿಯುವದು.

To Rupture, v. a. ಒಡೆಯು, ಕಿಸಿಯು, ಪಿಕಲು. v. *To break, burst. (to suffer disruption)* ಬುಡ್ಡೆಯುಳಿಯು, ಬೀರುಯುಳಿಯು.

Rural, a. ಗ್ರಾಮದ, ಹಳ್ಳಿಪಳ್ಳಿಯ, ಜಾಂಗಲ. v. *Rustick.*

Ruse, s. n. ಉಪಾಯ, ತಂತ್ರ. v. *Artifice, finesse.*

Rush, s. n. ಟೊಳ್ಳುಗಲುಸು. v. *Reed.*

To Rush, v. n. *(move with violence)* ರೊಗಬೀಳು. v. *To run. (to rush upon)* ಕವಿಯು, ಮೇಲೆಬೀಳು, ಅಭಿಯೋಗಮಾಡು. v. *To assault, attack. (to rush upon one another)* ಒಬ್ಬನಮೇಲೊಬ್ಬನುಬೀಳು, ಒಬ್ಬನಮೇಲೊಬ್ಬನು ರೊಗಬೀಳು, ಧೇಕೊಲಿಸು.

Russet, s. n. *(reddish brown)* ಪಿಂಜರವರ್ಣ.

Rust, s. n. ತುಕ್ಕು, ಕಿಲುಬು, ಕಿಲುಂಬು, ಕಲ್ಮಷ; *(the rust of iron)* ಕಬ್ಬಿಣಾತುಕ್ಕು ; *(the rust of copper, gold, silver, &c.)* ಕಿಲುಬು

To Rust, v. n. *(to gather rust)* ತುಕ್ಕುಹಿಡಿಯು; *(to make rusty)* ತುಕ್ಕುಮಾಡು.

Rustick, Rustical, a. ಹಳ್ಳಿಯ, ಗ್ರಾಮದ; *(rude, untaught, inelegant)* ದನಗಾವಿಯ, ದಾಂಡಿಗದ, ಮಡ್ಡಗರಾಸದ; *(artless, honest, simple)* ಮೋದಕ, ನಿರ್ವಂಚನೆಯ; *(plain, unadorned)* ಅಲಂಕಾರವಿಲ್ಲದ; *(a rustick life)* ಹಳ್ಳಿಬಾಳು, ಗ್ರಾಮದಬಾಳು, ಹಳ್ಳಿಸಂಸಾರ, ಹಳ್ಳಿವಾಡಸಂಸಾರ.

Rustick, s. n. ಗ್ರಾಮಸ್ಥ, ಹಳ್ಳಿಯವ, ಮಡ್ಡ, ಧಡ್ಡ. v. *Clown, countryman, husbandman, farmer. (citizens and rusticks)* ಪಟ್ಟಣದವರು, ಹಳ್ಳಿಯವರು.

Rustically, ad. ದನಗಾವಿಯಾಗಿ, ಮೊರಟುತನವಾಗಿ. v. *Rudely, savagcly.*

To Rusticate, v. n. *(to live in the country)* ಹಳ್ಳಿಸಂಸಾರಮಾಡು; *(to banish to the country)* ಹಳ್ಳಿಯಲ್ಲಿಯಿಟ್ಟುಬಿಡು, ಗ್ರಾಮದಲ್ಲಿಯಿಟ್ಟುಬಿಡು.

Rusticity, Rusticalness, s. n. ಗ್ರಾಮ್ಯತ್ವ, ಗಾವುದಿತನ, ಗವಾರಿತನ, ಅನಾಚಾರವು; *(rudeness, ignorance)* ದನಗಾವಿತನ, ದಾಂಡಿಗತನ; *(artlessness, honesty)* ನಿರ್ವಂಚನೆಯು, ಮೋದಕತನವು.

Rustiness, s. n. ತುಕ್ಕು, ಕಿಲುಬು.

To Rustle, v. n. ಗಲಗಲನಿಸು.

Rustling, s. n. ಮರ್ಮರ.

Rusty, a. ತುಕ್ಕಿನ, ಕಿಲುಬಿನ; *(a rusty sword)* ತುಕ್ಕುಹಿಡಿದಕತ್ತಿ; *(of a rusty colour)* ತುಕ್ಕುವರ್ಣ, ಅಳೆತಿಬಂಗಾ.

Rut, s. n. *(in the ground)* ಜಾವಡಿ, ಬಂಡಿಪಟ್ಟಿ; *(an elephant in rut)* ಮದದಾನೆ; *(rutting time)* ಋತುಕಾಲ.

Ruth, s. n. ಕನಿಕರ, ಅಂತಃಕರಣೆ, ದಯ, ಕೃಪೆ. v. *Pity.*

Ruthful, a. ಕನಿಕರವುಳ್ಳ, ಅಂತಃಕರಣದ, ದಯದ, ಕೃಪೆಯ. v. *Rueful.*

Ruthless, a. ನಿರ್ದಯಾತ್ಮಕದ, ಕ್ರೂರದ, ಪರಿತಾಪವಿಲ್ಲದ. v. *Cruel, barbarous. (a ruthless man)* ನಿರ್ದಯಾತ್ಮಕನು, ಕ್ರೂರನು.

Ruttish, a. ಕಾಮವಿಕಾರದ, ಕಾಮೋದ್ರೇಕದ, ಮೋಹಭ್ರಾಂತಿಯ. v. *Libidinous.*

Rye, s. n. ಚಿಕ್ಕಗೋಧಿ.

S

Sabbath, s. n. ಸಾಬತುದಿವಸ, ಶಿರ್ಕಿದಿವಸ; (*the moosulman's sabbath*) ಜುಮ್ಮ; (*sunday*) ಆದಿತ್ಯವಾರ, ಭಾನುವಾರ.

Sable, a. ಕಪ್ಪಿನ, ಕರಿಯ. v. *Black.* (*the sable or its fur*) ಬೊಚ್ಚುಯಿರುವಚರ್ಮ.

Sabre, s. n. ವಂಕರಕತ್ತಿ, ಚಂದ್ರಾಯುಧ, ಕರವಾಲ. v. *Sword.*

Saccharine, a. (*sugary*) ಸಕ್ರಿಯ, ಸಕ್ಕರಿಯ.

Sacerdotal, a. ಆಚಾರ್ಯನ, ಗುರುವಿನ. v. *Priestly.*

Sachel, s. n. ಚೇಲ. v. *Bag.*

Sack, s. n. ಹಸಿಬೆ, ಗೋಣೀಚೇಲ; (*a corn sack*) ಧಾನ್ಯದಗೋಣೆ, ಹೇರು; (*a large needle for sewing sacks*) ದಬ್ಬಣ.

To Sack, v. a. (*storm, plunder, lay waste*) ಲುಟಾಯಿಸ, ಕೊಳ್ಳೆಯಿಡ, ಹಾಳುಮಾಡ; (*to put in sacks*) ಗೋಣೆಯಲ್ಲಿಹಾಕ.

Sack, s. n. (*storm, pillage*) ಸುಲಿಗೆ, ಲೂಟು, ಸೂರೆ, ಕೊಳ್ಳೆ.

Sacked, part. ಹಾಳಾದ, ಲೂಟಿಮಾಡಿದ, ಸುಲುಕೊಂಡ, ಕೊಳ್ಳೆಯಿಟ್ಟ. v. *Plundered.*

Sacker, s. n. ಸುಲುಕೊಂಬೋಅವ, ಲೂಟಿಮಾಡುವವ, ಕೊಳ್ಳೆಯಿಡೋಅವ. v. *Plunderer.*

Sackbut, s. n. (*musical instrument*) ಅಲಗೋಜಿ, ಸಂನ್ನಮೇಳ.

Sacrament, s. n. ಮಹಾಪ್ರಸಾದ, ಬದ್ಧಕಂಕಣ, ಆಣೆ. v. *Eucharist, oath.*

Sacred, a. ಪರಿಶುದ್ಧದ, ಪವಿತ್ರದ, ಶುಚಿರ್ಭೂತವಾದ; (*inviolable, interdicted from promiscuous use*) ಕಡಿಗೆಮಾಡಿದ, ನಿಃಸಲ್ಲಾದ. ಪಳಕಮಾಡಬಾರದ; (*private*) ಸ್ವಂತದ, ಖಾಸಗಿಯ; (*the sacred writings*) ಸತ್ಯವೇದ; (*a sacred place*) ಗುಡಿ, ದೇವಸ್ಥಾನ. v. *Sanctuary.*

Sacredly, ad. ಪರಿಶುದ್ಧವಾಗಿ, ಪವಿತ್ರವಾಗಿ. v. *Religiously, inviolably.*

Sacredness, s. n. ಪರಿಶುದ್ಧವು, ಪವಿತ್ರವು. v. *Holiness.*

Sacrifice, s. n. ಬಲಿ, ಗಾವು, ಯಜ್ಞ, ಯಾಗ, ಆಹುತಿ, ಕ್ರತು, ಹೋಮ.

To Sacrifice, v. a. ಬಲಿಯರ್ಪಿಸ, ಗಾವುಕೊಡ. v. Also *to kill, to destroy, devote.* (*a place of sacrifice*) ಯಜ್ಞಶಾಲ, ದಹನಬಲಿಯಸ್ಥಳ, ಹೋಮಶಾಲ; (*the sacrifice of an animal or raw flesh offered to the goddess Doorga generally by cutting off the head*) ಬಲಿ; (*a sacrifice offered to the gods*) ಪ್ರೋಕ್ತಪ್ಪ, ಗರಪ್ಪ, ಭೊಂಮ್ಮಪ್ಪ, ಬೀರಪ್ಪ, ಜಟ್ಟಿಂಗ, ಕಾಟೆ, ಕಸವ, in which a priest in the form of a fury takes a sheep brought before the temple and having fixed its hind parts between his legs, he takes hold of its horns and tears it to pieces with his own mouth before the god: this is called ಗಾವು. There is a sacrifice practised among the bramins termed ಯಜ್ಞಬಲಿ, ದಹನಬಲಿ, in which a goat is smothered and the

inside film of fat is dressed and eaten by the bramins. The person who celebrates this sacrifice assumes the honorary title of ಸೋಮಯಾಜಿ; *(the actual or emblematic sacrifice of a horse)* ಅಶ್ವಮೇಧಯಾಗ; this sacrifice is one of the highest order and performed a hundred times entitles the sacrificer to the donation of ಸ್ವರ್ಗ or paradise; it appears to have been originally typical; the horse and other animals being simply bound during the performance of certain ceremonies; the actual sacrifice is an introduction of a later period; *(a burnt sacrifice)* ಹೋಮ; in this clarified butter, &c. are cast into the sacred fire as an offering to the gods, accompanied with prayers or invocatious according to the object of the sacrifice; *(a hole in the ground or an altar for receiving the fire of a burnt sacrifice)* ಹೋಮಕುಂಡ; *(the smoke of a burnt sacrifice)* ಹೋಮಧೂಮ; *(the ashes of a burnt sacrifice)* ಹೋಮಭಸ್ಮ; *(sacrificial fire)* ಹೋಮಾಗ್ನಿ.

Sacrificed, part. ಬಲಿಮಾಡಿದ, ಗಾವುಮಾಡಿದ, ಅರ್ಪಿಸಿದ, ಬಲಿಯಾದ; *(the animal sacrificed)* ಬಲಿಪಶುವು.

Sacrificer, s. n. ಯಾಜ್ಞಿಕ, ಯಾಜಕ, ಬಲಿಯನರ್ಪಿಸುವವ.

Sacrificing, Sacrificial, Sacrificatory, Sacrifick, a. ಬಲಿಯ, ಯಜ್ಞದ, ಗಾವಿನ; *(a sacrificing knife)* ಗಂಡುಗೊಡ್ಲಿ.

Sad, a. ದುಃಖದ, ಚಿಂತ್ರೆಯ, ವ್ಯಾಕುಲದ, ಪೆಚ್ಚಿಯ, ಖೇದದ, ಕ್ಲೇಶದ, ಎದೆಬಡುಕೊಳ್. v. *Sorrowful, melancholy, mournful, dark.* *(bad)* ಕೆಟ್ಟದ್ದು, ಅಯೋಗ್ಯದ, ಅಮಂಗಳದ.

To Sadden, v. a. *(make sad)* ದುಃಖಪಡಿಸ, ಖೇದಪಡಿಸ, ಕ್ಲೇಶಪಡಿಸ; *(to grow sad)* ದುಃಖದಲ್ಲಿ ಬಿದ್ದ, ಚಿಂತಾಕ್ರಾಂತನಾದ.

To Saddle, v. a. ಜೀನುಕಟ್ಟ, ಸಬರಕಟ್ಟ, ಥಡಿಹಾಕ.

Saddle, s. n. ಜೀನು, ಸಬರ, ಥಡಿ, ಪಲ್ಯಯಣ, ಪಲ್ಲಾಣವು; *(the stuffing of a saddle)* ಹತ್ತಿ; *(a saddle cloth)* ಜೀನವಸ್ತ್ರ; *(saddle bags)* ಕಂಟ್ಲೆ, ಖುರಜಿ.

Saddlebacked, a. ಸಬರದಬೆಂನು, ಡಾಗುಬೆಂನು.

Saddle cloth, s. n. ಚೌಕುಕಂತ್ರೆ, ನಂಮದಾಅಸ್ತ್ರವು.

Saddle girth, s. n. ಟೆಂಗು, ತೆಂಗು, ಜೇರಬಂದು.

Saddle horse, s. n. ಥಡಿಕುದುರೆ, ಸ್ವಾರಿಕುದುರೆ, ಏರುವಕುದುರೆ.

Saddler, s. n. ಮುಚ್ಚೆಯನು, ಜೀನುಗಾರ.

Sadly, ad. *(sorrowfully)* ಚಿಂತ್ರೆಯಾಗಿ, ವ್ಯಾಕುಲವಾಗಿ, ದುಃಖವಾಗಿ; *(calamitously)* ಬೇಲತನವಾಗಿ, ಉದಾಸೀನವಾಗಿ.

Sadness, s. n. ಚಿಂತ್ರೆಯು, ದುಃಖವು, ಕ್ಲೇಶವು, ವ್ಯಾಕುಲವು, ಉದಾಸೀನವು, ವಿಕ್ಷಿಪ್ತಮನಸ್ಸೆಯು, ಮಗ್ನತ್ವವು, ತಾಪತ್ರಯವು, ವಿಷಾದವು. v. *Sorrow, melancholy, dejection.*

Safe, a. ಕುಶಲ, ಕ್ಷೇಮ, ಸ್ವಸ್ಥ, ಪರಿಣಾಮ, ಬಚಾವು; *(a safe man)* ನಂಬಿಗೆಯುವ, ಇತಬಾರಿ, ನೆಚ್ಚಿಕೆಯಾದವ, ಮನೆಮನುಷ್ಯ, ಕಂಡುಹೆಯಾ

ಭಯ; (*with a safe conscience*) ಶಂಕಾತಂಕವಿಲ್ಲದ ಮನಸ್ಸಾಗಿ, ಮನೋಸ್ವನವಾಗಿ, ನಿಶ್ಚಿಂತೆಯಾದ ಮನೋಸಾಕ್ಷಿಯಾಗಿ, ನಿರ್ವಿಚಾರವಾಗಿ, ಭಯವಿಲ್ಲದೆ; (*safe and sound*) ಭದ್ರವಾಗಿ, ಕ್ಷೇಮಂಕರವಾಗಿ, ಸುರಕ್ಷಿತವಾಗಿ.

Safeconduct, s. n. ರಹದಾರಿ.

Safeguard, s. n. ಕುಂಮುಕ, ಮೇಲುಸಹಾಯ.

Safely, ad. ಸುರಕ್ಷಿತವಾಗಿ, ಕ್ಷೇಮವಾಗಿ, ಯುಕ್ತವಾಗಿ, ಕುಶಲವಾಗಿ.

Safety, Safeness, s. n. ಕ್ಷೇಮಂಕರ, ರಕ್ಷಣೆ, ಬಚಾಯಿಸಿ, ಭದ್ರವಾಗಿರುವಿಕೆ, ಪರಿಣಾಮತ್ವ.

Saffron, s. n. ಹರಿದ್ರ, ಅರಿಶಿನ, ಹಳದಿ, ಪಸುಂಬೆ, ಕೇಸರ; (*tinged with saffron*) ಅರಿಶಿನಹಚ್ಚಿದ, ಹಳದಿಯದ್ದಿದ, ಕೇಸರಿಹಾಕಿದ; (*saffron water*) ಅರಿಶಿನನೀರು, ವಸಂತ, ಓಕಳಿ.

Sagacious, a. ಶಹಣತನದ, ಜಾಣತನದ, ಜ್ಞಾನವುಳ್ಳ, ಅಭಿಜ್ಞತ್ವದ, ಪ್ರಬುದ್ಧತ್ವದ, ಪ್ರವೀಣತನದ. v. *Sage.* (*a sagacious man*) ಅಭಿಜ್ಞನು, ಸೂಕ್ಷ್ಮಗ್ರಾಹಿ, ಚಮತ್ಕಾರಿ, ಜಾಣನು, ಚತುರನು, ಪ್ರವೀಣನು.

Sagaciously, ad. ಸೂಕ್ಷ್ಮಗ್ರಾಹಿಯಾಗಿ, ಚಮತ್ಕಾರಿಯಾಗಿ, ಚತುರನಾಗಿ, ಜಾಣನಾಗಿ, ಅಭಿಜ್ಞನಾಗಿ.

Sagaciousness, Sagacity, s. n. ಶಹಣತನವು, ಜಾಣತನವು, ಪ್ರವೀಣತನವು, ಅಭಿಜ್ಞತ್ವವು. v. *Foresight, prudence.*

Sage, s. n. (*herb*) ರಣಮಂಡಲದಗಿಡ.

Sage, a. (*wise*) ಬುದ್ಧಿಯುಳ್ಳ, ಜ್ಞಾನವುಳ್ಳ, ಪ್ರೇಕ್ಷದ, ಉಪಲಬ್ಧಿಯ, ಚೇತನಾ. v. *Sagacious, prudent.*

Sage, s. n. ಬುದ್ಧಿವಂತ, ಪಂಡಿತ, ಶಾಸ್ತ್ರಜ್ಞ, ಪ್ರವೀಣ, ನಿಪುಣ, ಅಭಿಜ್ಞ, ಮೇಧಾವಿ, ಶಾಸ್ತ್ರಿ.

Sagely, ad. ಬುದ್ಧಿಯಾಗಿ, ಚಮತ್ಕಾರವಾಗಿ, ಪ್ರಜ್ಞೆಯಾಗಿ, ಶಹಣತನವಾಗಿ.

Sageness, s. n. ಬುದ್ಧಿ, ಮನೀಷಾ, ಧಿಷಣಾ, ಪ್ರಜ್ಞಾ, ಶೇಮುಷಿ, ಮತಿಃ, ಪ್ರೇಕ್ಷ, ಉಪಲಬ್ಧಿ, ಚಿತ್ತ, ಸಂವಿತ್ತ, ಪ್ರತಿಪ, ಜ್ಞಪ್ತಿ, ಚೇತನಾ, ಸೇರ್ಪರಿ, ಜಾಣ, ಶಹಣ, ಓಘು, ಬೆಜ್ಜು. v. *Wisdom, prudence.*

Sagittarius, Sagittary, s. n. (*the sign*) ಧನುಸ್ಸುರಾಶಿ.

Sago, s. n. ಸಬ್ಬಕ್ಕಿ.

Said, (*aforesaid*) ಸದರಹಿ, ಮೊದಲುಹೇಳಿದ, ಮುಂಚೆಹೇಳಿದ; (*spoken*) ಹೇಳಿದ, ಅಂದ; He *said* ಅವ ಹೇಳಿದ, ಅವನಂದ; We *said* ನಾವು ಹೇಳಿದೆವು, ನಾವಂದಿವಿ; You *said* ನೀಹೇಳಿದಿ, ನೀ ಅಂದಿ; They *said* ಅವರು ಹೇಳಿದರು, ಅವರಂದರು.

Sail, s. n. ಪಟ; (*a ship rigged with sails*) ಪಟವೇರಿಸಿದ ಹಡಗ, ಧ್ವಜವೆತ್ತಿದ ಹಡಗ, ಪಟಕಟ್ಟಿದ ಹಡಗ; (*to hoist sail*) ಪಟವೇರಿಸ; (*a fleet of ten sail*) ಹತ್ತುಹಡಗದ ಗುಂಪು; (*to strike sail*) ಪಟವಿಳಿಸ; (*to set a sail*) ಪಟಬಿಡ, ಪಟಕಟ್ಟು.

To Sail, v. n. ಹಡಗ ನಡಿಯ, ಹಡಗಬಿಡ.

Sailing, s. n. ಹಡಗ ನಡಿಯುವದು; (*the art of sailing*) ಕರ್ಣಧಾರತ್ವ, ಅಂಬಿಗಕೆಲಸ.

Sailor, s. n. ನಾವಿಕನು, ಅಂಬಿಗನು, ಗಂಗಿಮಗ, ಹಡಗದವ; (*a bad sailor*) ಮಂದವಾಗಿ ನಡಿಯುವ ಹಡಗ.

Saint, s. n. ಭಕ್ತನು, ಸಂನ್ಯಾಸಿಯು, ಯೋಗಿ, ಮಹಂತ, ದೇವಶಿಷ್ಯ, ಶೀಲ, ಸಿದ್ಧ, ದಾಸ.

To Saint, v. a. ಭಕ್ತನಾಗ, ದಾಸನಾಗ.

Sainted, Saintlike, Saintly, a. ಭಕ್ತಿಯಾಗಿ, ದಾಸತ್ವವಾಗಿ, ಶುದ್ಧನಾಗಿ, ಶೀಲನಾಗಿ, ಭಕ್ತ್ಯಭಾವನೆಯಾಗಿ.

Sake, s. n. (*end, purpose*) ಪ್ರವರ್ತನ, ವಿಷಯ, ಸಮುದಾಚಾರ, ಸಮುದ್ಧಾಷ್ಯ, ಅನುಬದ್ಧ; (*cause, account of any person or thing*) ನಿಮಿತ್ತ, ಹೇತುವೆ, ಕಾರಣ, ಮೂಲ; (*for the sake of*) ಅದರನಿಮಿತ್ತವಾಗಿ, ಅದರಂಸಪರಿಟು, ಅದರವುದ್ದೇಶ್ಯವಾಗಿ; (*for his sake*) ಅವನಿಗೋಸ್ಕರವಾಗಿ, ಅವನಕಾರಣವಾಗಿ, ಅವನದೆಸೆಯಿಂದ; (*for your sake*) ನಿಂನನಿಮಿತ್ತವಾಗಿ, ನಿಂನದೆಸೆಯಿಂದ, ನಿಂನಕಾರಣವಾಗಿ; (*for his own sake*) ಅವನಸ್ವಕಾರಣವಾಗಿ, ತನ್ನನಿಮಿತ್ತ, ಸ್ವಪ್ರಯೋಜನವಾಗಿ; (*for the sake of this*) ಇದರನಿಮಿತ್ತ, ಇದರವುದ್ದಿಶ್ಯ; (*for the sake of gain*) ಲಾಭದನಿಮಿತ್ತವಾಗಿ; He is my *namesake* ಅವನಹೆಸರೂ ನಂನಹೆಸರುವಂತೆ, ನಂನಹೆಸರೇ ಅವನಹೆಸರು.

Sal-ammonia, s. n. ನವಸಾಗರ, ಸಾಲಗಂಧ.

Salacious, a. ವಿರಹದ, ಕಾಮಾತುರದ, ಕಾಮೋದ್ರೇಕದ, ಕಾಮಕೃದ. v. *Lecherous, lustful.*

Salacity, s. n. ಕಾಮವಿಕಾರ, ವಿರಹ, ಮೋಹ.

Salamander, s. n. ವಜ್ರಕೀಟ, ಅಗ್ನಿಕೀಟ, ವಂನಿಆಶಿ.

Salary, s. n. ಸಂಬಳ, ಜೀತ, ಮುಶಾರ, ಕೂಜುಮರಿ, ಗಾಸ, ಭೃತಕ. v. *Stipend, pension, pay.* Have you received your *salary?* ನಿಂನಸಂಬಳ ಪತೆಗದುಕೊಂಡಿಯಾ; What is his *salary?* ಅವನಸಂಬಳವೇನು, ಅವನಗಾಸವೆಷ್ಟು, ಭೃತಕವೆಷ್ಟು; (*to pay a salary*) ಸಂಬಳಕೊಡು.

Sale, s. n. ವಿಕ್ರಯ, ಮಾರ್ರ್ಯಾಟೆ, ಮಾರಿಕೆ; (*public sale*) ದರಖಾಸ್ತು, ಯಾಲ; (*sale to the highest bidder*) ಹೆಚ್ಚುದರಖಾಸ್ತಿಗೆಕೊಡುವದು; (*to put up to sale*) ಯಾಲಾಹಾಡು, ಯಾಲಹಾಕು; (*to bid against at a sale*) ದರಖಾಸ್ತುಹೆಚ್ಚಿಸು, ಎದುರಾಡು; (*the time of sale*) ಯಾಲದವೇಳೆ.

Saleable, a. ಮಾರಾಟಿಕೆಯ, ಮಾರುವ, ತೆರವಾದ, ಪಂಗ್ಯಾದ; (*not saleable*) ಮಾರಾಟಿಕೆಯಾಗದ, ಗಿರಾಕಿಯಾಗದ, ಮಂದವಾಗ, ಬೇರಹೋಗದ; (*to be saleable*) ಮಾರತೆರವಾಗಿರು; (*to make saleable*) ಕ್ರಯತೆರವಾಗಮಾಡು, ಮಿಂಚುಮಾಡು.

Saleableness, s. n. ಮಾರಾಟಿಕೆ, ಸಲುವಳಿಕೆ. v. *Currency.*

Salesman, s. n. ವರ್ತಕ, ವ್ಯಾಪಾರಿಕ. v. *Seller.*

Salient, a. (*leaping, bounding*) ಹಾರುವ, ಎಗರುವ, ನೆಗೆಯುವ. v. Also *projecting, jutting out.*

Saline, Salinous, a. ಉಪ್ಪಿನ, ಕ್ಷಾರದ, ಲವಣದ.

Saliva, s. n. ಉಗುಳು. v. *Spittle.*

Salival, Salivary, Salivous, a. ಉಗುಳಿನ.

To Salivate, v. a. ಬಾಯಿತರಿಸು, ಬಾಯಿಹಿಡಿಸು.

Salivation, s. n. ಬಾಯಿಹಿಡಿಕೆ, ಬಾಯಿಬರುಕೆ.

Sallow, a. (*yellow, sickly*) ಜಾಡ್ಯದ, ಜಡ್ಡಿನ, ಬಿಳುಪುಹರಿದ.

Sallowness, s. n. ಕಾಮ, ಬಿಳುಪುಹರಿಯುವಿಕೆ.

Sally, s. n. *(eruption of the besieged)* ಕೆರಂಗ, ಛಪ್ಪು; *(a sally of fancy)* ಢಂಗು, ತಮಾಷೆ, ವಿನೋದ, ಮೋಜು. v. *Frolick.*

To Sally, v. n. ಛಪ್ಪಾಬೀಳ್, ಛಪ್ಪಾಮಾಡ, ಛಪಾಯಿಸ.

Sallyport, s. n. ದಿಡ್ಡಿ, ಜೇರುಗಂಡಿ.

Salsuginous, a. ಉಪ್ಪಿನ, ಕ್ಷಾರದ, ಲವಣದ. v. *Saline, salt. (a salsuginous place, a salt marsh)* ಉಪ್ಪುನೆಲ.

Salt, s. n. ಉಪ್ಪು, ಕ್ಷಾರ, ಲವಣ; *(purgative salt)* ಕಾಲವಣ; *(rock salt)* ಶಿಂಧುಜ, ಶಿಂಧುಲವಣ, ಕಲ್ಲುಪ್ಪು, ಸೈಂಧವ, ಶಿಕಶಿವಮಣಿಮಂದ; *(sea salt)* ಸಾಮುದ್ರಲವಣ, ಅಕ್ಷೀಬ, ವಸಿರ; *(large grained salt)* ಉಪ್ಪುಕಲ್ಲು, ಉಪ್ಪುಹರಳು; *(mineral salt)* ಕಲ್ಲುಪ್ಪು; *(bad salt)* ವಿಷದ ಉಪ್ಪು; *(salt ground)* ಕ್ಷಾರದ ಭೂಮಿ, ಉಪ್ಪಿನನೆಲ; *(kitchen salt, common salt)* ಅಡಿಗೆ ಉಪ್ಪು, ಬಳಿಕೆಯಾದ ಉಪ್ಪು; *(salt water)* ಉಪ್ಪುನೀರು, ಕ್ಷಾರಜಲ; *(salt marsh)* ಉಪ್ಪಿನ ಮಡಿ; *(a pit from which the salt pans are filled)* ಉಪ್ಪುಸಾರದ ಕುಣಿ; *(a salt pan)* ಉಪ್ಪಿನಮಡಿ, ಉಪ್ಪುಕಟ್ಟೆ, ಉಪ್ಪುಗಟ್ಟೆ; *(to prepare the ground for salt making)* ಮೋಳಿಮಾಡ, ಉಪ್ಪುಬಟ್ಟೆಮಾಡ; *(to convey water into the salt pans)* ಉಪ್ಪುರಸ ಹೊಯ್ಯ, ಉಪ್ಪುರಸ ದಾರಹೊಯ್ಯ; *(the salt appears in the pans)* ಉಪ್ಪುಕಟ್ಟುತ್ತದೆ; *(salt makers)* ಉಪ್ಪಾರರು; *(salt to crystallize)* ಉಪ್ಪುಹರಳುಕಾಗ, ಉಪ್ಪುಕಟ್ಟಿಯಾಗ, ಉಪ್ಪುಅರಳಾಗ; *(a grain of salt)* ಉಪ್ಪುಹರಳು; *(salt to ooze out of a wall, &c.)* ಉಪ್ಪುಅತ್ತ, ಉಪ್ಪುತಿನ.

To Salt, v. a. ಉಪ್ಪುಹಾಕ; *(to salt for preservation)* ಊರಿಡ; *(to oversalt in cooking)* ಕಟ್ಟುಪ್ಪುಮಾಡ, ಕಡುಕ್ಷಾರಮಾಡ.

Salt, a. ಉಪ್ಪಿನ, ಕ್ಷಾರದ, ಲವಣದ.

Saltcellar, s. n. ಉಪ್ಪಿನ ಭರಣಿ.

Saltfish, s. n. ಊರಿಟ್ಟಮೀನು, ಉಪ್ಪಿನಮೀನು.

Salter, s. n. *(one who salts)* ಉಪ್ಪುಹಾಕುವವ, ಊರಿಡುವವ; *(a maker of salt)* ಉಪ್ಪಾರ.

Saltish, a. ಉಪ್ಪಿನ, ಕ್ಷಾರದ, ಲವಣದ. v. *Saline.*

Saltless, a. ಉಪ್ಪಿಲ್ಲದ, ಲವಣವಿಲ್ಲದ; *(saltless bread)* ಸಪ್ಪಟೆರೊಟ್ಟಿ, ಉಪ್ಪಿಲ್ಲದ ರೊಟ್ಟಿ.

Saltly, ad. ಉಪ್ಪಾಗಿ, ಕ್ಷಾರವಾಗಿ.

Saltness, s. n. ಕ್ಷಾರತ್ವ, ಉಪ್ಪಾದ್ದು.

Saltpetre, s. n. ಸೋರುಪ್ಪು, ಸುರಾಖಾರ; *(saltpetre ground)* ಸೋರುಪ್ಪಿನನೆಲ; *(a wall affected with saltpetre)* ಉಪ್ಪಿನಗೋಡೆ, ಉಪ್ಪುಕರಿದಗೋಡೆ.

Salvation, s. n. *(eternal bliss)* ರಕ್ಷಣ್ಯವು, ಸದ್ಗತಿಯು, ಮುಕ್ತಿಯು, ಮೋಕ್ಷಸಾಮ್ರಾಜ್ಯ; *(escape from danger or difficulty)* ಗಂಡಾಂತ್ರ ತಪ್ಪುವಿಕೆ, ಗಂಡಕಡದಾಯುವಿಕೆ.

Salubrious, a. ಆರೋಗ್ಯದ, ಅನುಕೂಲದ. v. *Wholesome.* This place is very *salubrious* to me ಈಸ್ಥಳ ನನಗೆ ಅನುಕೂಲವಾಗಿದೆ, ಈದೇಶ ನನಗೆ ಆರೋಗ್ಯವಾಗಿದೆ.

Salubrity, s. n. ಆರೋಗ್ಯವು, ಅನುಕೂಲವು,

ಅನಾಮಯವು; (*salubrity of air*) ಆರೋಗ್ಯವಾದ ಗಾಳಿ.

Salve, s. n. ಗಾಯದ ಮದ್ದು, ಬಳೆಮರ್ದ, ಮಲಾಮು. v. *Plaster.* (*eyesalve*) ಕಾಡಿಗೆ, ಅಂಜನ. v. *Collyrium.*

Salver, s. n. ತಬುಕ, ತಬಕ, ತಟ್ಟೆ. v. *Plate.*

Salvo, s. n. ನೆಪ, ನೆವವು, ಮೊಂಕಕೆ. v. *Exception, excuse.*

Salutariness, s. n. ಆರೋಗ್ಯವು, ಅನುಕೂಲವು, ಪ್ರಯೋಜನವು. v. *Salubrity, wholesomeness*; also *utility.*

Salutary, a. (*wholesome*) ಅನುಕೂಲದ, ಆರೋಗ್ಯದ; (*advantageous*) ಲಾಭದ, ಪ್ರಯೋಜನದ, ಕೆಲಸದ. v. *Profitable.*

Salutation, s. n. ಕುಶಲಪ್ರಶ್ನೆ, ಅನುನಯ, ಕ್ಷೇಮಲಾಭ, ವಿನಮಿತೆ, ಪ್ರಣತಿ; (*an affectionate salutation*) ಪ್ರಿಯವಾದಕುಶಲಪ್ರಶ್ನೆ.

To Salute, v. a. (*pay compliment*) ಕುಶಲಪ್ರಶ್ನೆಕೇಳು, ಕ್ಷೇಮಲಾಭವಿಚಾರಿಸು, ಅನುನಯಹೇಳು; (*to kiss*) ಮುದ್ದುಕೊಡು, ಚುಂಬಿಸು.

Salute, s. n. ಮುದ್ದು, ಚುಂಬನೆ, ವಂದನೆ, ಶರಣಾರ್ಥಿ. v. *Salutation, kiss.*

Saluter, s. n. ವಂದಿಸುವವ, ಅನುನಯದವ; (*kisser*) ಚುಂಬಿಸುವವ, ಮುದ್ದುಗಾರ.

Same, a. ಅದೆ, ತಜ್ಜಾತೀಯ, ಅದೇ. v. *Equal, like, even, similar, alike.* (*of one or the same likeness, equal*) ಸರಿಸಮಾನ, ಸಾದೃಶ್ಯ, ಅದರಹಾಗೆಯೆ, ಅದರಂತೆ, ಸಮತುಲ್ಯವಾಗಿ; (*at the same time, all at once*) ಒಂದೇಸಾರಿ, ಏಕಾವರ್ತಿ, ಏಕಕಟ್ಟಾಗಿ, ಎಲ್ಲಾಒಂದೇತಾರಿ, ಅಷ್ಟೊಮ್ಮೆಗೆ; (*of the same intention or design*) ಏಕೋದ್ದಿಶ್ಯ, ಏಕಾವಧಿ, ಏಕೋನಿಮಿತ್ತ; (*of the same society*) ಅದೇಸಂಘದ, ಅದೇಕೂಡಿಕಟ್ಟಿನ, ಅದೇಜಾತೀಯ, ತಜ್ಜಾತಿಯ; These are of the *same* species as those ಅವುಹ್ಯಾಗೆಅವೆಯೋಇವುಹಾಗೆಯೇಅವೆ, ಇವುಅವುಯೇಕರಾಶಿ, ಇವುಅವುಒಂದೇರಾಶಿಯಾದವು; These people are all of the *same* house ಈಜನರೆಲ್ಲರುಒಂದೇಮನೆಯವರು; These boys all belong to the *same* school ಈಹುಡುಗರೆಲ್ಲರುಒಂದೇಸಾಲೆಯಹುಡುಗರು; These men are all of the *same* religion ಈಮನುಷ್ಯರೆಲ್ಲರುಒಂದೇಮತಸ್ಥರು; (*of the same name*) ಏಕನಾಮ, ಒಪ್ಪೆಸರು, ಒಂದೇಹೆಸರು; (*of the same sort*) ಒಂದೇವಿಧ, ಏಕತರಹ; (*of the same village*) ಒಂದೇಊರಿನ, ಒಂದೇಗ್ರಾಮದ; (*the same hour*) ಅದೇತಾಸು, ಅದೇಘಳಿಗೆ; (*of the same disposition*) ಒಂದೇಗುಣದ, ಏಕಸ್ವಭಾವದ; (*of the same colour*) ಒಂದೇಬಣ್ಣ, ಏಕವರ್ಣ; He is of the *same* age as she ಇವನುಅವಳುಯೇಕಪ್ರಾಯ; This is of the *same* weight as that ಇದುಅದೇಭಾರ, ಇದುಅದುಒಂದೇತೂಕ, ಎರಡುಒಂದೇತೂಕ; I came at the *same* time as he did ಅವನುಬರುತ್ತಲೇನಾಬಂದೆ, ಅವನುಬರುವಾಗಲೇನಾಬಂದೆ; (*this same*) ಇದೇ, ಇದೇಇದು; I continue in health and my friends do the *same* ನಾನುಸುಖವಾಗಿಯಿದ್ದೇನೆನನಗೆಸ್ನೇಹಿತರುಹಾಗಿಯೆ

ಸುಖವಾಗಿಯಿದ್ದಾರೆ; (the same as that) ಅದರಂತೆ, ಅದರಷ್ಟಂದ, ಅದರ ಹೋಪಾದಿಯಲಿ; (the same as this) ಇದರಂತೆ, ಇದರ ಹಾಂಗೆ, ಇದ್ದೇತರಹ, ಇದರ ರೀತಿ, ಇದರಷ್ಟಂದ, ಇದ ಕೋಲ್ವದಿ, ಇದ ಹೋಪಾದಿಯಲಿ; (the same man) ಅದ್ದೇಮನುಷ್ಯನು, ಅವ ಮನುಷ್ಯನೆ; (in one and the same word) ಆ ಮಾತಿನಲ್ಲಿ, ಅವಂದುಮಾತಿನಲ್ಲಿ, ಆ ಮಾತುವೊಂದರಲ್ಲಿ, ಆ ಮಾತುಮಾತ್ರದಲ್ಲಿ

Sameness, s. n. ಏಕತ್ವ, ಸಮಾನತ್ವ, ತದ್ರೂಪ, ಒಂದೇತರಹ. v. *Equality, similitude, likeness, identity.*

Sample, s. n. ಮಾದರಿ, ಗುರುತು; (of metals) ಮಚ್ಚು; (to taste) ಪದಿಕಟ್ಟು. v. *Specimen.*

Sanative, a. ಮಾಯಿಸುವ, ವಾಸಿಮಾಡುವ. v. *Healing.*

Sanctification, s. n. ಪರಿಶುದ್ಧಮಾಡ್ವಿಕೆ, ಪರಿಶುದ್ಧಿಕೆ, ಶುಚಿರ್ಭೂತವು.

Sanctified, part. ಪರಿಶುದ್ಧಮಾಡಿದ.

Sanctifier, s. n. ಪರಿಶುದ್ಧಮಾಡುವವ; (to be sanctified) ಪರಿಶುದ್ಧವಾದ, ಪರಿಶುದ್ಧಮಾಡಲ್ಪಡ, ಶುಚಿರ್ಭೂತವಾಗ.

To Sanctify, v. a. ಪರಿಶುದ್ಧಮಾಡ, ಶುಚಿಮಾಡ.

Sanctimonious, a. ಪರಿಶುದ್ಧದ, ಶುಚಿರ್ಭೂತದ. v. *Holy.*

Sanctimoniously, ad. ಶುಚಿರ್ಭೂತವಾಗಿ, ಪರಿಶುದ್ಧವಾಗಿ.

Sanctimony, s. n. ಶುಚಿರ್ಭೂತವು, ಪರಿಶುದ್ಧವು.

Sanction, s. n. ನಿಚಿತಾರ್ಥ, ನಿಶ್ಚಿತಾರ್ಥ, ನೇಮಕ. v. *Ratification, decree, law.*

Sanctity, Sanctitude, s. n. ಶುಚಿರ್ಭೂತವು, ಪರಿಶುದ್ಧಿಕೆಯು, ಪವಿತ್ರವು. v. *Holiness.*

Sanctuary, s. n. *(holy place)* ಗುಡಿ, ದೇವಸ್ಥಾನ, ದೇವಾಲಯ; *(an asylum)* ಆಸ್ಪದ, ಆಧಾರ, ಆಶ್ರಯಸ್ಥೂರ.

Sand, s. n. ಉಸುಬು, ಮಳಲು, ಹಳಿಲು, ಮರಲು, ಮಳಡು, ಮಣಲು, ಸಿಕತೆ, ಮರಳು; *(a gold coloured sand which they sprinkle on writings)* ಮಂಡೂಕಾತ್ರಿಕ; *(fine sand)* ಸಣ್ಣನವುಸುಬು; *(quick sand)* ಕಲ್ಲವುಸುಬು, ಕಲ್ಲಹಗೆ; *(large sand)* ಅರಳವುಸುಬು, ಗರಸು; *(level sand)* ಗಾಸವುಸುಬು, ಶಿಕತೆ; *(high heaped sands)* ಉಸುಬಿನದಿಬ್ಬೆ, ಪುಲಿನ; *(a heap of sand)* ಉಸುಬುಹಪ್ಪೆ; *(soft sands in which the feet sink)* ಇಳೆಬೀಳೋವುಸುಬು; *(shining sand)* ಮಿಂಚುವುಸುಬು; *(to write in sand)* ಉಸುಬಿನಲ್ಲಿಬರೆಯು.

Sandal, s. n. ಕಾಲಮರಿ, ಮೆಟ್ಟು, ಚಪ್ಪಲಿ, ಪಾಪಾಸು, ಜೆರ್ರಾಡು, ಪಾದರಕ್ಷೆ. v. *Slipper.*

Sandalwood, s. n. ಸಿರಿಖಂಡ, ಬಾವನ, ಚಂದನಕಟ್ಟಿಗೆ, ಚಂದನಕೊರಡು.

Sandalpowder, s. n. ಶ್ರೀಗಂಧ, ಶಿರಿಗಂಧ, ಶಿರಿಖಂಡ, ಬಾವನ್ನ; *(sandalpowder ground in water)* ಗಂಧ, ಚಂದನ, ಮಲಯಜ; *(dry sandalpowder)* ಗಂಧವಿದಿ, ಬುಕ್ಕಿಟ್ಟು, ಗಂಧಚೂರ್ಣ, ಬುಕ್ಕಾಯಿ; *(red sandal)* ಚಂದನಗಂಧ, ರಕ್ತಚಂದನ.

Sandblind, a. ಆಸೆದ್ರಿಷ್ಟಿಯ, ಬಾಟೆಗಂಗಳಿನ, ಮಬ್ಬುದ್ರಿಷ್ಟಿಯ.

Sanded, a. *(covered with sand)* ಉಸುಬುಮುಚ್ಚಿಕೊಂಡ.

Sandy, a. *(consisting of sand)* ಉಸುಬಿನ, ಮಳಲಿನ, ಮರಳಿನ; *(a sandy place)* ಉಸುಬಿನಸ್ಥಳ; *(a sandy desert)* ಉಸುಬಿನಡವಿ.

Sanguinary, a. ಕ್ರೂರದ, ಕಾಠಿಣ್ಯದ, ಆತ್ಮಘಾತಕದ. v. *Cruel, bloody.*

Sanguine, a. *(having the colour of blood)* ರಕ್ತವರ್ಣದ; *(abounding with blood)* ರಕ್ತದ, ನೆತ್ತರಿನ; *(full of hopes, confident, warm)* ಉತ್ಸಾಹದ, ಉತ್ಸುಕದ, ಉಲ್ಲಾಸದ, ಹುಮ್ಮಳದ, ಆತುರದ. v. *Eager.*

Sanguineness, s. n. ಉತ್ಸುಕವು, ಉಲ್ಲಾಸವು, ಹುಮ್ಮಳವು. v. *Ardour.*

Sanies, s. n. ಕೀವು, ಹಲ್ಲುನೀರು, ಸೂತಿ. v. *Pus.*

Sanious, a. ಕೀವಿನ, ಹಲ್ಲುನೀರುಸೋರುವ, ಸೂತಿಯ.

Sap, s. n. ಸಾರ, ರಸ, ಸತ್ವ. v. *Juice.* *(full of sap)* ರಸಭರಿತ.

To Sap, v. a. *(mine)* ತೋಡ, ಸುರಂಗಹಾಕ. v. *To undermine.*

Sapid, a. ರುಚಿಕರವುಳ್ಳ, ಸ್ವಾದವುಳ್ಳ. v. *Palatable.*

Sapience, s. n. ಬುದ್ಧಿ, ಮನೀಷೆ, ಧಿಷಣಾ, ಧೀ, ಪ್ರಜ್ಞೆ, ಶೇಮುಷಿ, ಮತಿ, ಪ್ರೇಕ್ಷ, ಉಪಲಬ್ಧಿ, ಚಿತ್ತು, ಸಂವಿತ್ತು, ಪ್ರತಿಪತ್ತು, ಜ್ಞಪ್ತಿ, ಚೇತನೆ, ಶಹಾಣತನ, ಜಾಣಪಣಾ, ನೈಪುಣ್ಯ v. *Wisdom.*

Sapient, a. ಬುದ್ಧಿಯುಳ್ಳ, ನಿಪುಣತೆಯುಳ್ಳ, ಶಹಾಣತನವುಳ್ಳ, ಜಾಣತನವುಳ್ಳ. v. *Wise.*

Sapless, a. ರಸವಿಲ್ಲದ, ನಿಸ್ಸಾರದ.

Sapling, s. n. *(young tree)* ಸಸಿ, ಮೊಳಕೆ.

Saponaceous, a. *(soapy)* ಸಬ್ಬಿನ, ಚವುಕಾರದ.

Sapor, s. n. ರುಚಿ, ಸ್ವಾದ. v. *Taste.*

Saporifick, a. ರುಚಿಯ, ಸ್ವಾದದ.

Sapphire, s. n. ಇಂದ್ರನೀಲ, ನೀಲ.

Sappiness, s. n. ರಸಭರಿತತ್ವ, ಸತ್ವ.

Sappy, a. ರಸದ, ಸಾರದ.

Sarcasm, s. n. ನಿಂದನೆ, ಪರಿಹಾಸ, ಆಡಿಕೆ, ದೂಷಣೆ, ಉದಾಸೀನ, ಬಯ್ಯುವಿಕೆ. v. *Reproach.*

Sarcastical, Sarcastick, a. ನಿಂದನೆಯ, ಪರಿಹಾಸದ, ಆಡಿಕೆಯ, ದೂಷಣೆಯ.

Sarcastically, ad. ನಿಂದೆಯಾಗಿ, ದೂಷಣೆಯಾಗಿ, ಪರಿಹಾಸವಾಗಿ.

To Sarcle, v. a. ಕಸಿಮಾಡ, ಕಳೆತೆಗೆಯ, ಹುಂಟಿಗೆಯರಕ.

Sardel, Sardine, Sardius, Sardonyx, s. n. *(precious stone)* ಗೋಮೇಧಿಕ.

Sash, s. n. ಕಾಶಿಧಟ್ಟಿ, ನಡುಕಟ್ಟು, ಪಟಕ. v. *Scarf, belt, fillet.*

Satan, s. n. ಸೈತಾನು, ಪಿಶಾಚಿ, ದೆವ್ವ. v. *Devil.*

To Sate, Satiate, v. a. ಭರಿತಮಾಡ, ತುಂಬಿಸ, ತೃಪ್ತಿಬಡಿಸ. v. *To satisfy, fill, saturate, glut, pall.*

Satiate, Satiated, Sated, a. ತೃಪ್ತಿಯಾದ, ತುಂಬಿಸಲ್ಪಟ್ಟ, ಭರಿತವಾದ; *(to be satiated)* ತೃಪ್ತಿಯಾಗ, ಭರಿತವಾಗ.

Satiating, a. ತೃಪ್ತಿಯಾಗುವ, ಭರಿತವಾಗುವ.

Satiety, s. n. ತೃಪ್ತಿಯು, ಭರಿತವು, ಸಂತೃಪ್ತವು, ಆಪ್ಯಾಯನವು, ಸಾಂದ್ರತ್ವವು, ಸಂತರ್ಪಣವು.

Satin, s. n. ತಾಫ್ತ, ಕೇಳಿಮಿಪಡಿ, ಪಟ್ಟೆ.

Satire, s. n. ನಿಂದಾಸ್ತುತಿ, ಉತ್ಪ್ರಾಸವು, ನಿಂದಾಗರ್ಭೋಕ್ತಿ. v. Also *invective, irony, ridicule.*

Satirical, Satirick, a. ನಿಂದಾಸ್ತುತಿಯ, ಉತ್ಪ್ರಾಸದ.

Satirically, ad. ನಿಂದಾಸ್ತುತಿಯಾಗಿ, ಉತ್ಪ್ರಾಸವಾಗಿ.

Satirist, s. n. ನಿಂದಕ, ದೂಷಕ, ನಿಂದಾಸ್ತುತಿಯವ, ಹಾಸ್ಯಗಾರ, ಸಬ್ಬವಕಾರ.

To Satirize, v. a. ನಿಂದಿಸು, ನಿಂದಾಸ್ತುತಿಹೇಳು, ನಿಂದಾಗರ್ಭೋಕ್ತಿಹೇಳು; *(to satirize one another)* ಬೈದಾಡು, ಕಾಡಿಯಾಡು, ಕಚ್ಚಾಡು, ಮೊಗಲ್ಯಾಡು, ಹೇಬಾಡು.

Satisfaction, s. n. *(of mind)* ಮನೋತೃಪ್ತಿ, ಸಮಾಧಾನ, ಸಂತೃಪ್ತಿ, ಶಮನ, ತಂಪಣೆ, ವಿಶ್ರಾಂತಿ, ಮನಃಪೂರ್ತಿ, ಚಿತ್ತಸ್ವಾಸ್ಥ್ಯ, ನಿಶ್ಚಿಂತೆ, ಉಪಭೋಗ. v. *Content, complacency, gratification.* *(satisfaction for sin)* ಪಾಪಶಾಂತಿ, ಪಾಪೋಪಶಮನ, ಕರ್ಮಪರಿಪಾಕ; *(satisfaction for an injury)* ವಿರೋಧಶಾಂತಿ, ತಿದ್ದುಕೊಳ್ಳುವಿಕೆ, ಮುಯ್ಯಿಕೊಡುವಿಕೆ, ಕಾಯಿಸ್ತಾಯಿ; *(to take satisfaction)* ಕ್ರೋಧತೀರಿಸಿಕೊಳ್ಳು, ವಿರೋಧತೀರಿಸಿಕೊಳ್ಳು, ಛಲತೀರಿಸಿಕೊಳ್ಳು.

Satisfactorily, ad. ಸಂತೃಪ್ತಿಯಾಗಿ, ಸಮಾಧಾನವಾಗಿ.

Satisfactoriness, s. n. ಸಂತೃಪ್ತತ್ವ, ಸಮಾಧಾನತ್ವ. v. *Satisfaction.*

Satisfactory, a. *(giving content, pleasing)* ಸಂತೃಪ್ತಿಯ, ಸಮಾಧಾನವಾಗುವ, ಶಾಂತವಾಗುವ, ತೃಪ್ತಿಪಡಿಸುವ; *(making atonement)* ಪಾಪೋಪಶಮನದ, ಕ್ರೋಧತೀರಿಸುವ.

Satisfied, part. ಸಂತೃಪ್ತಿಯಾದ, ಉಪಶಮನವಾದ, ಸಮಾಧಾನಪಟ್ಟ, ಶಾಂತವಾದ. v. *Content*; also *paid.* I am not *satisfied* with your answer ನಿನ್ನ ಉತ್ತರವು ನನಗೆ ಸಮಾಧಾನವಾಗಲಿಲ್ಲ; *(to be satisfied)* ಸಂತೃಪ್ತಿಯಾಗಿರು, ಶಾಂತಿಪಡು, ತಂಪಣೆಪಡು, ಸಂತೃಪ್ತಿಪಡು.

To Satisfy, v. a. *(give content)* ಶಾಂತಿಮಾಡು, ಸಂತವಿಡು, ಸಂತೃಪ್ತಿಪಡಿಸು, ಸಮಾಧಾನಪಡಿಸು. v. Also *to satiate.* *(to pay, fulfil)* ಈಡೇರು, ತೀರು; *(to recompense)* ಬದಲಿಗೆಬದಲುಕೊಡು, ತಿದ್ದುಕೊಳ್ಳು, ಲಿಗಾಡುತೀರಿಸು, ಮನೋರಥವಿಡೇರಿಸು, ಆಶೆತೀರಿಸು; *(to free from debt or perplexity)* ಸಂಶಯನಿವರ್ತಿಮಾಡು, ಸಂದೇಹವುತೀರಿಸು; *(to convince)* ಸಾದೃಶ್ಯತೋರಿಸು.

To Saturate, v. a. ತಕ್ಕಮಾಡು, ತಕ್ಕಸವಾಗು. v. *To fill, satiate.*

Saturated, part. ತಕ್ಕಮಾಡಿದ. v. *Satiate.*

Saturday, s. n. ಸ್ಥಿರವಾರ, ಶನಿವಾರ, ಮಂದವಾರ, ಪಂಗುವಾರ.

Saturn, s. n. *(planet)* ಶನಿಗ್ರಹ, ಶನಿ, ಶೌರಿ, ಸಪ್ತಮಗ್ರಹ, ಸಗಣೆ.

Saturnine, a. ದುಮುದುಮಾಯಿಸುವ, ಗುಡುಗಿನ. ಗುಂಮಿನ, ಶಿಡುಮೋರೆಯ. v. *Gloomy.*

Satyr, s. n. *(a sylvan god)* ದೆವ್ವ, ಗ್ರಹ, ಭೂತ, ಗರ, ಶಾಕಿನಿ; *(a lustful man)* ವಿರಟಿ, ಕಾಮಿ.

Savage, a. *(unfeeling)* ನಿರ್ದಯಾತ್ಮದ, ಕಾಠಿಣ್ಯದ, ಕ್ರೂರವಾದ. v. *Cruel, fierce.* *(un-*

civilized rustick) ದನಗಾವಿಯ, ಕಾಟಿಕತನದ. v. *Wild, uncultivated.*

Savage, s. n. (*a wild man*) ಕಾಡುಮನುಷ್ಯ, ಕ್ಷಘನ, ಚೆಂಚ ಬಿಲ್ಲ, ಜೀರ, ಶಬರನು; (*a brutal fellow*) ದನಗಾವಿ, ಕಟಿಕ, ರಾಕ್ಷಸ, ದೈತ್ಯ, ದುಷ್ಟ, ದುರ್ಧರ್ಷ; (*a savage beast*) ಅಡವಿಮೃಗ, ಇರಕಳ.

To Savage, or make Savage, v. a. ದುಷ್ಟನಾಗ ಮಾಡ, ಕೊಬ್ಬಿಸ, ಮದವೇರಿಸ.

Savagely, ad. (*cruelly*) ಕ್ರೂರವಾಗಿ, ಕಾಠಿಣ್ಯವಾಗಿ, ದುಷ್ಟವಾಗಿ. v. *Barbarously, wildly.*

Savageness, s. n. (*barbarousness*) ಕ್ರೂರತನ, ದುಷ್ಟತನ. v. *Cruelty.* (*wildness*) ದನಗಾವಿತನ, ಮಡ್ಡಿತನ, ಗಾವುದಿತನ, ಮೊರಟುತನ.

Savanna, s. n. ಸಜ್ಜೈಲು, ನಟ್ಟಡವಿ, ಅಟ್ಟಂಬಡವಿ. v. *Mead.*

Sauce, s. n. ಚಟ್ಣಿ, ವ್ಯಂಜನ; (*to make sauce*) ಚಟ್ಣಿಮಾಡ, ವ್ಯಂಜನಮಾಡ.

Saucebox, s. n. ಘಟಿಂಗಿ, ಗರ್ವಗ್ರಂಥಿ, ಶೆಡಕಿ, ಹದ್ದಿಲ್ಲದವ, ಹದ್ದುಮೀರಿದವ. v. *An impertinent.*

Saucepan, s. n. ಘಾಕಗೆ, ಡೇಕಚ. v. *Pan.*

Saucer, s. n. ತಟ್ಟಿ, ತಬಕು.

Saucily, ad. ಎದೆಗರ್ವವಾಗಿ, ತಲೆಹೊಯಿಕುತನವಾಗಿ, ಪೋಕರಿತನವಾಗಿ. v. *Pertly.*

Sauciness, s. n. ಮಸ್ತು, ಎದೆಗರ್ವತನ, ಮಗರೂರುತನ, ಪೋಕರಿತನ. v. *Impudence, pertness.*

Saucy, a. ಗರ್ವಗ್ರಂಥಿಯ, ಬಿನ್ನಾಳಿಕೆಯ, ಅದಬಿಲ್ಲದ, ಹದ್ದುಮೀರಿದ, ಪೋಗರಿನ, ಮಗರೂರಿಯ, ಮತ್ತಿನ, ತಲೆಹೊಯಿಕುತನದ. v. *Impudent, pert.*

To Save, v. a. (*preserve from evil*) ಗಂಡಾಂತ್ರ ತಪ್ಪಿಸ, ಪ್ರಮಾದತಪ್ಪಿಸ. v. *To preserve.* (*protect*) ಸಂರಕ್ಷಿಸ, ಪೋಷಿಸ, ಕಾಪಾಡ, ಪರಿಪಾಲನೆಮಾಡ, ಪಾಲನೆಮಾಡ; (*set free*) ಬಿಟ್ಟುಬಿಡಿಸ, ಬಂಧವಿಮೋಚನೆಮಾಡ, ಬಂಧಬಿಡಿಸ, ಸ್ವೇಚ್ಛೆಯಾಗಿಹೋಗ ಬಿಡಿಸ; (*to save, not to spend or waste, to lay by*) ನಿಕ್ಷೇಪಿಸ, ಕಟ್ಟಿಡ, ಇಟ್ಟಿಡ, ಮುಡುಪುಕಟ್ಟಿಹಾಕ, ದಾಪಿರವಾಗಿಯಿಡ. v. *To reserve.* (*to spare or excuse*) ಕ್ಷಮಿಸ. v. *To pardon.*

Save, ad. (*except*) ವಿನಾಯಿಸಿ, ಹೊರ್ತಾಗಿ, ಅಲ್ಲದೆ; (*save a few*) ಕೆಲವುಹೊರ್ತಾಗಿ.

Saved, part. (*preserved from evil*) ಗಂಡಾಂತ್ರ ತಪ್ಪಿಸಿದ, ಪ್ರಮಾದತಪ್ಪಿಸಿದ, ಪ್ರಾಣತಪ್ಪಿಸಿದ; (*not spent or wasted, laid by*) ಕಟ್ಟಿಟ್ಟ, ನಿಕ್ಷೇಪಿಸಿದ; (*protected*) ಪೋಷಿಸಿದ, ಕಾಪಾಡಿದ, ಸಂರಕ್ಷಿಸಿದ, ಪಾಲನೆಮಾಡಿದ; (*set free*) ಬಿಡಿಸಿದ, ಬಂಧಕತಪ್ಪಿಸಿದ; (*spared or excused*) ಕ್ಷಮಿಸಿದ, ಮನ್ನಿಸಿದ, ಪರಿಹರಿಸಿದ, ಕ್ಷಮಿಸಲ್ಪಟ್ಟ, ಮನ್ನಿಸಲ್ಪಟ್ಟ, ಪರಿಹರಿಸಲ್ಪಟ್ಟ.

Saver, s. n. (*preserver from evil*) ಗಂಡಾಂತ್ರ ತಪ್ಪಿಸುವವ, ಪ್ರಮಾದತಪ್ಪಿಸುವವ.

Saving, a. (*frugal*) ಮೋತಾಜಿನ, ಮಿತಿಯ, ನಾರಗಾಡ; (*not turning to loss*) ಲಾಭದ, ಆದಾಯದ.

Saving, s. n. (*of expense*) ಮಿಟ್ಟು, ಮಿತಿ, ಕಟ್ಟು,

ಹೋಗಲಾಜು ; (*somewhat preserved from being spent or wasted*) ನಿಕ್ಷೇಪವು, ದಾಪಿರವು, ಬಚ್ಚಿಟ್ಟಿದ್ದು, ಮಿಕ್ಕದ್ದು. v. *Remainder, reservation, exception*) ಹೊರತಾಗಿ, ವಿನಾಯಿಲೆ, ಅಲ್ಲದೆ. v. Also *save, except.*

Savingly, ad. (*parsimoniously*) ಪಟ್ಟಾಗಿ, ಮಿತಿಯಾಗಿ, ಪಿಶುನವಾಗಿ, ಲುಬ್ಧವಾಗಿ.

Savingness, s. n. (*parsimony*) ಮಿತಿ, ಪಟ್ಟು, ಪಿಶುನ, ಲುಬ್ಧ.

Saviour, s. n. ರಕ್ಷಕ, ಸಂರಕ್ಷಕ, ಪರಿಪಾಲಕ.

To Saunter, v. n. ತಿರಿಗ್ಯಾಡ, ತೊಯ್ಲಾಡ, ವಿಹರಿಸ, ಎಡತಾಕ.

Saunterer, s. n. ತಿರಿಗ್ಯಾಡುವವ, ತೊಯ್ಲಾಡುವವ, ವಿಹರಿಸುವವ, ಎಡತಾಕುವವ.

Sauntering, s. n. ತಿರುಗುವದು, ವಿಹರಿಸುವದು, ತೊಯ್ಲಾಡುವದು.

Savour, s. n. ರುಚಿ, ಸ್ವಾದು. v. *Taste, flavour, smell.* (*of a bad savour*) ಅರುಚಿ.

To Savour, v. n. (*have the taste of*) ರುಚಿಯಾಗಿರ; (*to give a taste*) ರುಚಿಕೊಡ; (*to have the smell of*) ವಾಸನೆಯಾಗಿರ.

Savourily, ad. ರುಚಿಯಾಗಿ, ಸ್ವಾದವಾಗಿ.

Savouriness, s. n. ರುಚಿಯು, ಸ್ವಾದವು. v. *Savour*; also *fragrance.*

Savoury, a. ರುಚಿಯ, ಸ್ವಾದಿನ, ಘ್ರಾಣದ. v. *Fragrant.*

Sausage, s. n. ಮಾಂಸಚಕ್ಕಲಿ, ಶೈಷಿಯು.

Saw, (preterite of *See*) I *saw* ನಾನೋಡಿದೆ, ನಾಕಂಡೆ; Thou *sawest* ನೀನೋಡಿದಿ, ನೀಕಂಡಿ; He *saw* ಅವನುನೋಡಿದ, ಅವನುಕಂಡ; We *saw* ನಾವುನೋಡಿದೆವು, ನಾವುಕಂಡೆವು; You *saw* ನೀವುನೋಡಿದಿರಿ, ನೀವುಕಂಡಿರಿ; They *saw* ಅವರುನೋಡಿದರು, ಅವರುಕಂಡರು.

Saw, s. n. ಗರಗಸ, ಕ್ರಕಚವು; (*a hand saw*) ಕೈಗರಗಸ; (*a two hand saw*) ಮರಗರಗಸ; (*the handle of a saw*) ಗರಗಸದಹಿಡಿ; (*belonging to a saw*) ಗರಗಸದ; (*notched like a saw*) ಕರುಕಿನ, ಕಕ್ಕಿನ.

To Saw, v. a. ಗರಗಸದಲ್ಲಿಕೊಯ್ಯ, ಕೊಯ್ಯ.

Sawdust, s. n. ಕೊಯಿದಪುಡಿ, ಕಟ್ಟಿಗೆಕೊಯಿದಪುಡಿ, ಮರದಹೊಟ್ಟು.

Sawyer, s. n. ಮರಕೊಯ್ಯುವವ.

To Say, v. n. ಹೇಳ, ಅನ್ನ, ಬೆಸೆಸ, ನುಡಿಯ, ಎನ್ನ. v. *To speak, tell, relate.* They *say*, it is said ಅಂತೆಂದುಹೇಳುತ್ತಾರೆ; As you would *say* ನೀಹೇಳಿದಹಾಗೆ; You would *say* ನೀಹೇಳಬೇಡಲಿಲ್ಲ, ನೀಹೇಳದೆಯಿರಲಿಲ್ಲ; *Say* thou ನೀಹೇಳು, ನೀಅನು, ನೀಬೆಸೆಸು; That is to *say* ಅದುಯಾವದಂದರೆ, ಅದುಹ್ಯಾಗೆಂದರೆ; (*to say one's prayers*) ಪ್ರಾರ್ಥನೆಮಾಡ.

Saying, Say, s. n. ನುಡಿ, ಮಾತು, ವಚನ; (*a witty saying*) ಶರಣಾರನದಮಾತು, ಚಮತ್ಕಾರದಮಾತು; (*a common saying*) ನಾಮರಿ; (*a foolish saying*) ಹುಚ್ಚುಮಾತು, ಅಯೋಗ್ಯದಮಾತು, ನೀಚಮಾತು.

Scab, s. n. (*disease*) ಕಜ್ಜಿ, ತಿಮರ, ತಿಂಡಿ, ಹುರುಕು, ಕುಷ್ಟವು. v. *Itch.*

Scab, s. n. ಹುಕ್ಕು. ಪೆಗ್ಗಳು, ಹೆಗ್ಗಳು,

Scabbard, s. n. ಒರೆ, ಖಡ್ಗಕೋಶ. v. *Sword, sheath.*

Scabbed, Scabby, a. ಹಕ್ಕಾದ, ಹೆಳೆಕಾದ, ಹಕ್ಕುಕಟ್ಟಿದ.

Scabbedness, Scabbiness, s. n. ಕಜ್ಜಿಯು, ತಿಂಡಿಯು.

Scaffold, s. n. ಇಂದ್ರಕೋಶ, ಮೆಟ್ಟು.

To Scald, v. a. (*by water*) ಸುಡಿಸು, ಬೇಯಿಸು; (*by oil*) ಕಮರು, ಕರಿಯು, ಕಮರಿಸು; (*scalding hot*) ಸುಡು, ಯುಸುಡು; (*to scald as urine*) ಹುರುಕಾಗ, ಉರಿಮೂತ್ರಬಿಡಿಯು, ಹಟ್ಟೆಕೆಗಹುಕೊಳ್; (*to scald as a blister*) ಟಿಪ್ಪಸಟ್ಟೆ, ಗಬಗಬಾಡಿಸು.

Scald, Scaldhead, s. n. ಹುಂಡುಕೋಗ, ಪಸಳಿಕೆ, ಪಸಳು.

Scale, s. n. (*or bason of a balance*) ಪಲ್ಟೆ; (*scale beam*) ದಂಡಿಗೆ, ತಕ್ಕಡಿದಂಡಿಗೆ; (*to rise in the scale*) ತಕ್ಕಡಿಯೇಳ್, ದಂಡಿಗೆತೆಳ್ಕೆಳ್ಗಾಗ. v. *To weigh.* (*scales*) ತ್ರಾಸು, ತಕ್ಕಡಿ, ಚಿಂತ್ರಾಲು. v. *Balances.* (*a scale of a fish*) ಮೀನಿನಪೆರೆ, ಚಟ್ಟೆ, ಮೊಬ್ಬಟೆ, ಕೊಟ್ಟೆ, ಹೊಂಡೆ. v. Also *plate, lamina.* (*scales on the head*) ಹುಂಡು; (*the scale of musical notes*) ಸ್ವರತ್ರಾಸ, ಸಪ್ತಸ್ವರ; (*a scale or filing of iron*) ಕಿಟ್ಟೆಪೆರೆ, ಖಬ್ಬಿಣದಚಟ್ಟೆ, ಖಬ್ಬಿಣದಪೆರೆ; (*a thin plate*) ತಗಡು; (*a scale or degradation*) ಮೆಟ್ಟು, ತರತರ. v. *Series.*

To Scale, v. a. (*fish*) ಮೀನಿನಪೆರೆತೆಗೆಯು; (*to take off any thin lamina*) ಕಿಟ್ಟತೆಗೆಯು, ಪೆರೆತೆಗೆದುಹಾಕ; (*to pare off a surface*) ಚಿಪ್ಪ, ಕಿತ್ತ, ಕೆದರ, ಗೀರ; (*to peel or fall off in scales*) ಸುಲಿದುಹೋಗ, ಪುದರಿಹೋಗ, ಹಕ್ಕಳೆಯುದ್ದುಹೋಗ, ಪೆರೆಯೇಳ್; (*to scale a wall*) ಲಗ್ಗೆಹತ್ತ, ಹಲ್ಲಾಯೇರ, ಏಣಿಹಾಕ.

Scaled, Scaly, a. ಹೊಂಡೆಯಾದ, ಕೊಟ್ಟಾದ, ಮೊಬ್ಬಟೆಯಾದ, ಚಟ್ಟಾದ.

Scaliness, s. n. ಕೊಟ್ಟಾದ್ದು, ಹೊಂಡೆಯಾದ್ದು.

Scallion, s. n. ಉಳ್ಳಿಗೆಡ್ಡೆ. v. *Onion.*

Scalp, s. n. ಪರಟೆ, ಬುತ್ತಿ. v. *Scull.*

To Scalp, v. a. ಚಿಪ್ಪುತೆಗೆಯು, ಪರಟೆತೆಗೆಯು.

Scalpel, s. n. ಚೂರಿ, ಕತ್ತಿ, ಚಾಕು. v. *Penknife.*

Scammony, s. n. ಅದುಂಬರಧೃತಿ.

To Scamper, v. n. ಓಡಿಹೋಗ, ಓಡ, ಚರಕ್ಷಾಗಿಸ. v. *To run, scour.*

To Scan, v. a. (*verse*) ಶ್ಲೋಕಕ್ಕೆಚರಣಾಯೋಗಿಸ; (*examine nicely*) ಶೋಧಿಸ, ಪರೀಕ್ಷಿಸ.

Scandal, s. n. ಅಪಕೀರ್ತಿಭಾಜನ, ಅಪಯಶಸ್ಕರ, ಅಪಖ್ಯಾತಿ, ಅಕ್ಷಾಸರಾಜಕಾರ್ಯ. v. *Infamy, disgrace.* (*reproach*) ದುರ್ನಾಮ, ನಿರ್ಲಜ್ಜ್ಯವು, ಅಪಕೀರ್ತಿಯು.

To Scandalize, v. a. ಅಪಕೀರ್ತಿಭಾಜನಮಾಡ, ಅಪಖ್ಯಾತಿತರ, ನಿಂದೆತರ, ಬಟ್ಟೆತರಿಸ. v. *To reproach, calumniate.*

Scandalizer, s. n. ಹಟ್ಟಿಸುದುಪ, ಅಲ್ಪ, ಪಲುಗ.

Scandalous, a. (*infamous*) ಅಪಕೀರ್ತಿಯ, ಅಪಖ್ಯಾತಿಯ, ಅಕ್ಷಾಸರಾಜಕಾರ್ಯದ. v. *Ignominious, shameful.* (*opprobrious*) ಅಪಯಶಸ್ಕರದ, ದುರ್ನಾಮದ, ಅಪಕೀರ್ತಿಯ.

Scandalously, ad. (*infamously*) ಅಪಕೀರ್ತಿಯಾಗಿ, ಅಯೋಗ್ಯವಾಗಿ. v. *Shamefully.* (*censoriously*) ಆರಾಪೂರವಾಗಿ, ದೂರುದುಂಡುಮೆಯಾಗಿ.

Scandalousness, s. n. ಆಲಾಶ್ಯೋಚವು, ಅಪಕೀರ್ತ್ಯಾರ್ಜನವು, ಅಪಯಶಸ್ಕರವು, ಅಪಖ್ಯಾತಿಯು, ಅಕ್ರಾಸರಾಜಕಾರ್ಯವು.

Scant, a. ನೇರವಾದ, ಪಿಕ್ಕಟವಾದ, ಸಾಲಿಸಾಲಧಾಗಿಯಿರುವ. v. *Scarce.* (*parsimonious*) ಪಿಸುನಿದ, ಲುಬ್ಧದ, ಸ್ವಾಗಿಯ.

Scantily, Scantly, ad. (*not plenteously*) ದುರ್ಲಭವಾಗಿ, ಪ್ರಿಯವಾಗಿ, ದರಿದ್ರವಾಗಿ, ಕದಾಚಿತ್ತಾಗಿ. v. Also *scarcely, narrowly.*

Scantiness, Scantness, s. n. (*narrowness, want of space*) ಪಿಕ್ಕಟಿ, ಇರಕಟ, ಇಕ್ಕಟ್ಟು, ಸಂಕೋಚ, ಸಾಲಿಸಾಲಧಾಗಿಯಿರುವಿಕೆ; (*want of plenty*) ದುರ್ಲಭ, ಪ್ರಿಯ, ದಾರಿದ್ರ, ಕಿಂಚಿತು, ಕದಾಚಿತು.

Scanty, a. (*narrow, wanting amplitude*) ಪಿಕ್ಕಟವಾದ, ಬಿಸವಾದ, ಸಂಕೋಚವಾದ; (*wanting plenty*) ಕದಾಚಿತ್ತಾದ, ದುರ್ಲಭವಾದ, ಪ್ರಿಯವಾದ, ದರಿದ್ರವಾದ. v. *Niggardly, scarce.*

Scantling, s. n. (*a small quantity*) ಸ್ವಲ್ಪವು, ಇಷ್ಟಿಷ್ಟು; (*a small piece*) ಚೆಂಡದಿ, ತುಂಡು, ಪೇಳಿಕೆ.

Scape, s. n. (*escape*) ತಪ್ಪಿಸಿಕೊಳ್ಳುವಿಕೆ.

To Scape, v. a. ತಪ್ಪಿಸಿಕೊಳ್ಳ. v. *To escape.*

Scapula, s. n. ರಂಪು, ಕಷ್ಟೆಲುಬು, ಅಂಸವು. v. *Shoulderblade.*

Scapulary, a. ರಂಪಿನ, ಕಷ್ಟೆಲುವಿನ, ಶಿಕ್ಕೆಲುಬು.

Scar, s. n ಕಲೆ, ಮರಿಕೆ.

To Scar, v. a. ಕಲೆಮಾಡ, ಮರಿಕೆಮಾಡ.

Scaramouch, s. n. ವೇಷಧಾರಿ, ಬಾಚಿಗ, ಬಹುರೂಪಿ. v. *Buffoon.*

Scarce, a. (*not plentiful*) ತುಟ್ಟಿಯಾದ, ದುರ್ಲಭ; (*rare, not common*) ಅಪುರೂಪದ, ವಾಡಿಕೆಯಿಲ್ಲದ; (*to be or become scarce, not plentiful*) ತುಟ್ಟಿಯಾಗ, ದುರ್ಲಭವಾಗಿರ; (*rare*) ಅಪುರೂಪವಾಗಿರ; (*to make scarce*) ತುಟ್ಟಿಯಾಗಮಾಡ, ದುರ್ಲಭವಾಗಮಾಡ; (*to be scarce of provisions*) ಬರವಾಗ, ಕಟ್ಟಿನಿಟ್ಟಾಗ, ದಿಕ್ಕಿತ್ತಾಗ.

Scarce, Scarcely, ad. ಸಾಲಿಸಾಲದಹಾಗೆ. v. *Hardly.*

Scarceness, Scarcity, s. n. ದುರ್ಘಟವು, ದುಸ್ತರವು, ತುಟ್ಟಿಯು. v. *Penury.* (*rareness*) ಅಪುರೂಪವು.

To Scare, v. a. ಗದ್ದಲಿಸ, ಅದ್ದಲಿಸ, ಬಿಟ್ಟೆಬ್ಬಿಳ್ಳಮಾಡ. v. *To frighten.*

Scared, part. ಭಯಪಡಿಸಿದ, ಗದ್ದಲಿಸಲ್ಪಟ್ಟ v. *Frightened.*

Scarecrow, s. n. ಬದನೆಜಾವ, ಬದನೆಬೊಂತೆ.

Scarf, s. n. ಶಲ್ಯ.

Scarfskin, s. n. ಮೇಲುತೊಗಲು, ಮೇಲುದೊಗಲು.

Scarification, s n. ನೆತ್ತರು, ನೆತ್ತರುತೆಗೆಕೆ.

Scarifier, s. n. ನೆತ್ತರು, ನೆತ್ತರುಹೊಡೆಯುವವ. v. Also *lancet.*

To Scarify, v. a. ಶಸ್ತ್ರಹಾಕ, ನೆತ್ತರುಹೊಡೆಯ, ರಕ್ತತೆಗೆಯ.

Scarlet, a. ರಕ್ತದ, ಕೆಂಪಿನ, ಅರುಣವರ್ಣದ. v *Red.*

Scate, s. n. *(fish)* ಶಂಕೋಚ, ಶಂಕುಬೆ, ನೀರುಮಂದಿ, ಶಂಕು.

To Scatter, v. a. ಛಿದ್ರಿಸು. v. *To sprinkle, disperse. (to be dispersed)* ಚದರಾಗು, ಚಲ್ಲಾಗು.

Scattered, part. ಚದರಾದ, ಚಲ್ಲಾಬಿಲ್ಲಾದ; *(scattered leaves or papers)* ಚಲ್ಲಾಪಿಲ್ಲಾದ ಕಾಗದಗಳು; *(to be scattered)* ಚದರಾಗು, ಚಲ್ಲಾಪಿಲ್ಲಾಗು.

Scatterer, s. n. ಚದರಿಸುವವ, ಚಲ್ಲಾಪಿಲ್ಲಿಮಾಡುವವ.

Scatteringly, ad. ಚಲ್ಲಾಬಿಲ್ಲಾಗಿ, ಚದರಾಗಿ.

Scavenger, s. n. ಬೀದಿಬಳಿಯುವವ, ಹಲಾಲಖೋರ.

Scene, s. n. ಪಾಟವ, ಸಜರು, ದ್ರಿಷ್ಟಿ, ನೋಟ, ವಿನೋದ, ತಮಾಷೆ. v. *Display, prospect.*

Scent, s. n. *(power of smelling)* ಘ್ರಾಣೇಂದ್ರಿಯ; *(odour, good or bad)* ವಾಸನೆ, ಘ್ರಾಣ, ಗಂಧ. v. *Smell.*

To Scent, v. a. *(perceive by the nose)* ಮೂಸಿನೋಡು, ಘ್ರಾಣಿಸು. v. *To smell. (to give a scent to)* ವಾಸನೆಕೊಡು, ಪರಿಮಳಮಾಡು. v. *To perfume.*

Scentless, a. ವಾಸನೆಯಿಲ್ಲದ, ನಿರ್ಗಂಧದ.

Sceptre, s. n. ರಾಜಶೆಖು, ಅರಶಿನಮುದ್ರೆ.

Schedule, s. n. ಚೌರಿಕೆ, ಫರ್ದು, ಬಂಡು.

Scheme, s. n. *(purpose)* ಮನೆ, ಸಮುದಾಚಾರ, ಮನೋನೇಮಕ. v. *Design, intention. (project, plan)* ಉಪಾಯ, ಪ್ರಯತ್ನ, ಯತ್ನ, ತಂತ್ರ, ಕರ್ತವ್ಯ.

Schemer, s. n. ಉಪಾಯಸ್ತ, ಪ್ರಯತ್ನಗಾರ. v. *Projector, contriver.*

Schism, s. n. ಮತಭೇದವು. v. *Heresy.*

Schismatick, s. n. ಮತಭೇದಮಾಡುವವ. v. *Heretic.*

Schismatical, ad. ಮತಭೇದದ. v. *Heretical.*

Scholar, s. n. *(disciple)* ಶಿಷ್ಯನು, ಓದುವವ, ಮರಿ, ಅಂತೆವಾಸಿ, ಛಾತ್ರನು; *(a learned man)* ಪಂಡಿತನು, ಶಾಸ್ತ್ರಿ.

Scholarship, s. n. ಶಿಷ್ಯತ್ವ, ಓದಿಕೆ, ಶಿಕ್ಷಿಕೆ. v. *Learning, education. study.*

Scholastic, Scholastical, a. ಓದುವವ, ಓದುವಸಾಲೆಯ.

Scholastically, ad. ಓದುವಸಾಲೆಪದ್ಧತಿಯಾಗಿ.

Scholiast, s. n. ವಾರ್ತಿಕ, ಟಿಪ್ಪಣಿಕ, ಅಂನ್ವಯಿಕ, ಭಾಷ್ಯಕಾರ. v. *Commentator.*

Scholium, s. n. *(note)* ಟಿಪ್ಪಣಿಯು, ಅಂನ್ವಯವು, ಅರ್ಥವು. v. *Commentary.*

School, s. n. ಓದುವಸಾಲೆ, ಓದುವಮಠ, ಓದುವಗುಡಿ; *(school time)* ಓದುವವೇಳೆ; *(a school lesson)* ಹಲಿಗೆಪಾಠ, ಪದ್ಯ, ಹಾಕಿಕೊಟ್ಟಪದ್ಯ; Have you been to *school* to-day? ನೀನುಯೀಹೊತ್ತು ಓದುವಸಾಲೆಗೆ ಹೋಗಿದ್ದ್ಯಾ; What do you learn at *school*? ಸಾಲೆಯಲ್ಲಿನೀನುಯೇನು ಕಲಿಯುತ್ತಿ, or ಸಾಲೆಯಲ್ಲಿನೀನೇನು ಕಲ್ತುಕೊತೀ; Is there any *school* in this place? ಈ ಊರಲ್ಲಿಯೇನಾದರು ಓದುವಸಾಲೆಗಳವೆಯೋ; Where is the *school* kept? ಓದುವಸಾಲೆಯೆಲ್ಲಿ ಅದೆ, or ಓದುವಸಾಲೆಯಲ್ಲಿಹಾಕಿದೆ; Do the boys

come to *school* regularly? ಹುಡುಗರು ಓದುವ ಸಾಲೆಗೆ ಚಂನಾಗಿ ಬರುತ್ತಾರೋ, or ಹುಡುಗರು ತಪ್ಪದ ಹಾಗೆ ಓದುವ ಸಾಲೆಗೆ ಬರುತ್ತಾರೆಯೋ; Are the boys idle or diligent in *school*? ಹುಡುಗರು ಓದೂಸಾಲೆಯಲ್ಲಿ ಜಾಗ್ರತೆಯಾಗಿಯಿದ್ಧಾರೆಯೋ, ಆಡುತ್ತಾರೋ, or ಹುಡುಗರು ಸಾಲೆಯಲ್ಲಿ ವಳುಘಾಗಿ ಓದುತ್ತಾರೋ ಆಟಗೋಳಿತನವಾಗಿದ್ಧಾರೆಯೋ; Is this a charity *school* or is it supported by the parents of the children? ಇದೇನು ಧರ್ಮಸಾಲೆಯೋ ಇಲ್ಲವೆ ತಂದೆತಾಯಿಗಳು ಕೂಲಿಕೊಟ್ಟಿಡೇಳಿಸುವ ಸಾಲೆಯೋ; What books have you in the *school*? ಈ ಓದುವ ಸಾಲೆಯಲ್ಲಿಯೇನೇನು ಪುಸ್ತಕಗಳಿವೆ; How do the boys apportion their time during the hours of *school*? ಹುಡುಗರು ಓದೂಸಾಲೆಯಲ್ಲಿರುವಾಗ ಯಾವಾವ ವೇಳೆಯಲ್ಲಿಯೇನು ಕಲಿಯುತ್ತಾರೆ; How long has this *school* been established? ಈ ಓದುವಸಾಲೆಯೆಷ್ಟುದಿವಸಗಳಿಂದ ಹಾಕಿಯದೆ, ಈ ಓದುವ ಸಾಲೆ ಹಾಕಿಯೆಷ್ಟುದಿವಸವಾಗಿದೆ; How many boys have been in the *school* since the commencement? ಓದುವ ಸಾಲೆ ಪ್ರಾರಂಭಿಸಿದಂದಿನಿಂದಾಯೆಷ್ಟು ಹುಡುಗರು ಕಲಿಯಬಿಟ್ಟಿಧಾರೆ; Do the parents of the children sometimes visit the *school*? ಹುಡುಗರ ತಂದೆತಾಯಿಗಳ್ಯಾವಾಗ್ಯಾದರು ಸಾಲೆಗೆ ಬರುತ್ತಾರೋ; The Schoolmaster must never leave the *school* ಓದಿಸುವಯ್ಯ ಓದುವ ಸಾಲೆಯನು ಯಾವಾಗ್ಯು ಬಿಡದೆ ಇರತಕ್ಕದ್ದು; (*a public school*) ಪಂಡಿತ ಶಾಲೆ. v. *College*. (*a dancing school*) ನರ್ತನಶಾಲೆ, ನಾಟ್ಯಶಾಲೆ; (*a fencing school*) ಗರಡಿಶಾಲೆ, ಗರಡೀಮನೆ.

To School, v. a. ಓದಿಸ, ಕಲಿಸ, ಶಿಕ್ಷಿಸ, ಬುದ್ಧಿಕಲಿಸ, ಹೇಳಿಕೊಡ. v. *To instruct, teach.*

Schoolboy, s. n. ಓದುವ ಹುಡುಗ, ಶಿಷ್ಯ.

Schoolfellow, s. n. ಗೆಳೆಗಾರ, ಸಹಪಾಠಿ.

Schoolhouse, s. n. ಓದಿಸುವ ಮಠ, ಗುಡಿ.

Schooling, s. n. ಓದಿಸುವ ಕೂಲಿ, ಓಜ್ಯೋಕೂಲಿ.

Schoolmaster, s. n. ಓದಿಸುವಯ್ಯ, ಅಯ್ಯನವರು, ಶಿಕ್ಷಕನು, ಪಂತ್ರೋಜಿ, ಓದುಕ, ವಿದ್ಯೆಹೇಳುವವನು.

Schoolmistress, s. n. ಓದಿಸುವವಳು, ಶಿಕ್ಷಕಿ, ಗುರುಪತ್ನಿ.

Science, s. n. ವಿದ್ಯೆ, ಶಾಸ್ತ್ರ, ಹುಂನರ. v. *Knowledge.*

Scientific, Scientifical, a. ವಿದ್ಯದ, ಶಾಸ್ತ್ರದ.

Scientifically, ad. ವಿದ್ಯವಾಗಿ, ಶಾಸ್ತ್ರವಾಗಿ.

Scimitar, s. n. ವಂಕರ ಕತ್ತಿ, ಖಡ್ಗ, ನಿಸ್ತ್ರಿಂಶ ಚಂದ್ರ, ಹಾಸ, ಅಸಿ, ರಿಷ್ಟಿ, ಕೌಕ್ಷೇಯಕ, ಮಂಡಲಾಗ್ರ, ಕರವಾಳ, ಕೃಪಾಣ. v. *Sword.*

To Scintillate, v. n. ಕಿಡಿಹಾಯು. v. *To spark, sparkle.*

Scintillation, s. n. ಕಿಡಿಹಾಯಿಕೆ, ಕಿಡಿ. v. *Spark.*

Scion, s. n. ಅಂಟು, ಬಂಕಟೆ. v. *Twig.*

Scissors, s. n. ಕತ್ತರಿ; (*the two blades of scissors*) ಕತ್ತರಿಯಲೆಗಳು.

To Scoff, v. n. ಕೂಹಕಿಚ್ಚ್ಯಸ, ಕುಚೋದ್ಯಮಾಡ, ಪರಿಹಾಸಮಾಡ, ಚಕ್ಕಂದಮಾಡ, ಹೇಳನೆಮಾಡ. v. *To ridicule, deride, gibe.*

Scoff, s. n. ಚಕ್ಕಂದ, ಹೇಳನೆ, ಪರಿಹಾಸ್ಯ, ಕುಚೋದ್ಯ, ಕುಹಕ, ಕುತರ್ಕ. v. *Gibe, taunt, irony, ridicule.*

Scoffer, s. n. ಚಕ್ಕಂದಮಾಡುವವ, ಪರಿಹಾಸಕ, ಕುಚೋದ್ಯಗಾರ, ಕುಹಕೆಬ್ಬಿಸುವವ.

Scoffing, s. n. ಪಾರಿಹಾಸ್ಯ, ಕುಚೋದ್ಯತೆ, ಚಕ್ಕಂದಿಕೆ.

Scoffingly, ad. ಚಕ್ಕಂದವಾಗಿ, ಕುಚೋದ್ಯವಾಗಿ, ಪರಿಹಾಸ್ಯವಾಗಿ, ಕುಹಕವಾಗಿ.

To Scold, v. n. ಗದರು, ಜದರಿಸು, ಗದ್ದಲಿಸು, ಪದರು. v. *To reproach, revile.*

Scold, s. n. ಕಲಹಕಂಟಿ, ರಂಪಗಾಟಿಕಿ, ಝಗಳಗಂಟಿ, ಗಯ್ಯಾವಳಿ, ಗಾಟಿಗಿತ್ತಿ, ಮಾರಿ.

Scolding, s. n. ಗದರಿಕೆ, ಜದರಿಕೆ, ಪದರಿಕೆ.

Sconce, s. n. *(pensile candlestick)* ಅಡುಕುದೀಪ. v. Also *head, mulct, fort.*

To Sconce, v. a. ಅಪರಾಧತೆಗೆದುಕೊಳ್ಳು. v. *To mulct, fine.*

Scoop, s. n. ಹಳ್ಳಿ, ಸೌಡೆ, ಕಪ್ಪರೆ, ಚಿಪ್ಪು.

To Scoop, v. a. *(lade out)* ಸೌಡೆಹಾಕು, ಉಗ್ಗು *(to cut hollow)* ರಂಪುತೆಗೆಯು, ಟೊಳ್ಳುಮಾಡು, ಕೊರೆಯು, ಕೋದು, ಡೊಗರುಮಾಡು, ಬೆಜ್ಜತೆಗೆಯು. v. *To hollow.*

Scope, s. n. *(aim, intention, drift)* ಆಕೂತ, ಅಭಿಪ್ರಾಯ, ಮನೋಭಾವ, ಅರ್ಥ, ಸಮುದಾಚಾರ; *(the thing aimed at)* ಗುರಿ, ಜುಂಟಿ. v. *Mark, butt.* *(freedom from restraint)* ನಿರ್ಬಂಧಹೀನೆ, ನಿರಪ್ಪಣೆಸ್ಥಳ. v. *Liberty, license, room, space.*

Scorbutick, a. ಹುಂಡಿನ, ಉಹುಕಿನ, ಹುರಿಯ.

To Scorch, v. a. ಬೊಗೆಸೂರಿಸು.

Scorched, part. ಬೊಗೆಸೂರಿಸಿದ.

Score, s. n. *(line drawn)* ಗೀಟು; *(a notch)* ಕಚ್ಚು; *(an account)* ಲೆಖ್ಖ, ಖರ್ಚು; *(to quit scores)* ಲೆಖ್ಖತೀರಿಸಿಕೊಳ್ಳು, ಲೆಖ್ಖಬಗೆಹರಿಸಿಕೊಳ್ಳು; *(reason, motive)* ಕಾರಣ, ನಿಮಿತ್ತ, ಹೇತುವು; Upon the *score* of friendship ಸ್ನೇಹಕ್ಕೋಸ್ಕರ, ಸ್ನೇಹಕ್ಕಾಗಿ; Upon what *score?* ಯಾವದರನಿಮಿತ್ತ; *(to run up a score)* ಸಾಲಮಾಡು, ರಿಣಮಾಡು; *(a score)* ಇಪ್ಪತ್ತು. v. *Twenty.* *(threescore)* ಅರವತ್ತು. v. *Sixty.* *(fourscore)* ಎಂಭತ್ತು. v. *Eighty.*

To Score, v. a. *(mark by a line)* ಕಚ್ಚುಹಾಕು, ಕಚ್ಚುಯಿಡು; *(to set down as a debt, to make debtor)* ಖರ್ಚುಬರೆಯು. v. Also *to charge, impute.*

Scoria, s. n. ಕಿಟ್ಟ, ಕಿಟ್ಟಿ, ಕಲ್ಮಷ, ಲೋಹಕಲ್ಮಷ. v. *Dross.*

Scorious, a. ಲೋಹಕಲ್ಮಷದ. v. *Drossy.*

To Scorn, v. a. ಉದಾಸೀನಮಾಡು, ಛೀಯನು, ಹಳಿಯನು, ಘೂಳಿಸು, ನಾಚಿಕೆಕಳೆಯು, ನಿಂದಿಸು, ಅಶ್ರದ್ಧೆಮಾಡು. v. *To despise, scoff.*

Scorn, s. n. ಅಶ್ರದ್ಧೆ, ಬೇಮಾರಿತನ, ಲಜ್ಜೆಕೇಡು, ನಾಚಿಕೆಕೇಡು, ನಿಂದೆ, ಉದಾಸೀನ. v. *Contempt, scoff.*

Scorned, part. ಛೀಯೆಂದ, ನಾಚಿಕೆಕಳಕೊಂಡ, ಲಜ್ಜೆಕೆಟ್ಟ, ಉದಾಸೀನವಾದ.

Scorner, s. n. ಬೇಮಾಡುವವ, ನಾಚಿಕೆಕೊಂಬು

ವವ, ಲಜ್ಜೆಕಳುವವ, ನಾಚಿಕೆಕೆಡುಕೊಳ್ಳುವವ. v. *Scoffer.* (*a scorner of his relations*) ಕುಲನಿಂದಕ, ಬಂಧುಜನ ದೂಷಕ, ಅಲ್ಪ, ಹಲುಗಾಕೆ; (*one who is scorned*) ಬೇಮಾರಿ, ವಾಳ್ ಕೆಮಾರಿ, ಮೋರಿಗೆ, ಶೌಂಡ, ಲಿಂಡ, ಕುಡುಸು, ಕುಂಡು.

Scornful, Scorning, a. ಉದಾಸೀನದ, ಉಪೇಕ್ಷ್ಯದ, ಉಪೇಕ್ಷೆಯ. v. *Insolent.*

Scornfully, ad. ಅಶ್ರದ್ಧೆಯಾಗಿ, ಅಹಂಕಾರವಾಗಿ, ಉದಾಸೀನವಾಗಿ.

Scorpion, s. n. ಅಳಿ, ಕೇಳು, ಚೇಳು, ವೃಶ್ಚಿಕ, ವಿಷಪುಚ್ಛ, ಕ್ರೂರಕಕ್ಕೇಟಿ, ದ್ರೋಣ, ಪೆಂಜು, ಗೊಂಡಿಕಾಟಿ; (*a black scorpion*) ಎಮ್ಮೆಚೇಳು; (*the tail of a scorpion*) ಕೊಂಡಿ, ಪುಚ್ಛ, ಮಾರಿಸರ; (*the sting of a scorpion*) ಚೇಳುಕಂಟಕ, ಚೇಳು ಕೊಡಿಯ, ಚೇಳು ಮುಚ್ಚ; (*the constellation Scorpio*) ವೃಶ್ಚಿಕರಾಶಿ, ವೃಶ್ಚಿಕಲಗ್ನ.

Scot, s. n. (*proportion of any payment, a tavern reckoning*) ಚಂದ; (*scot and lot*) ಸತ್ರಿಗೆ, ಕೆರಿಗೆ, ಬಿರಾಡ. v. *Tax.* (*scot free*) ಮಾನ್ಯ, ಮಾಫು, ಖರ್ಚಿಲ್ಲದೆ.

To Scotch, v. a. ಕ ಕ್ಕಿಡ. v. *To notch.*

Scoundrel, s. n. ನೀಚ, ಪಾಜಿ, ಅಡಜಾರಿ, ಹೋಕ, ಲುಚ್ಚ, ಕುಲನಾಶಕ, ಹರಾಮಜಾದ. v. *Villain, knave*; also *knavish, villainous, mean.*

To Scour, v. a. (*rub in order to clean*) ಮಳಿಯುಜ್ಜ, ಮುಸಕಿತೊಳೆಯ, ಕಿಕ್ಕ. v. *To scrub, rub, polish, clean, bleach*; also *to purge.* (*to scamper*) ಚರ ಜ್ಞಾಗಿಸ. v. *To rove, run, range.*

Scourer, s. n. ಮುಸಕಿತೊಳೆಯುವವ, ಮುಸಕಿಯುಜ್ಜವವ, ಮಳಿತೊಳೆಯುವವ. v. *Polisher*; also *purge, scamperer.*

Scoured, part. ಉಜ್ಜಿದ, ಕಿಕ್ಕಿದ, ಮಳಿತೊಳೆದ. v. *Polished.*

Scourge, s. n. ಜೇರುಬಂದು, ಕಸಂಬರಾಯಿ, ಕಮಚಿ, ಚಬುಕು, ಕೊರಡೆ, ಬಾರುಕೋಲು, ಚಾಟಿ. v. *Whip.* (*an oppressor, tyrant*) ಕಕೋಟಕ, ಕ್ರೂರ, ದುರ್ಧರ್ಷ, ಘೋರಿಸುವವ, ದುರುಳ, ರಕ್ಕಸ, ದೈತ್ಯ, ಜನಕಂಟಕ; (*punishment*) ದಂಡನೆ, ಬಡಿಕೆ, ಶಿಕ್ಷೆ.

To Scourge, v. a. ಕೊಕ್ಕಕೆಗೆಯ, ಚರ್ಮದಾರಿಸ, ಕೆಳೆಯ, ಹೊಡೆಯ, ಬಡಿಯ, ಕಹಳೆಲು ಮಾಡ. v. *To lash.*

Scourged, part. ದಂಡಿಸಲ್ಪಟ್ಟ, ಪೆಟ್ಟುತಿಂದ, ಹೊಡೆಯಿಸಿಕೊಂಡ, ಡೆಬ್ಬೆತಿಂದ, ಶಿಕ್ಷಿಸಲ್ಪಟ್ಟ; (*to be scourged*) ಪ್ರಾಯಶ್ಚಿತ್ತವಾಗ, ದೆಬ್ಬೆತಿನ, ಹೊಡತತಿನ.

Scourger, s. n. ಹೊಡೆಯುವವ, ಕೊರಡೆಯುವ, ಶಿಕ್ಷಕ.

Scourging, s. n. ಹೊಡಿಯುವಿಕೆ, ಬಡಿಯುವಿಕೆ, ಮಾರಾಮಾರಿ.

Scout, s. n. ಒಳಪನೋಡುವವ, ಪಾಳತಿದಾರ, ಹರಕಾರ, ಬೇಹುಗಾರ, ಶೋಧಗಾರ, ಬಾತಿಮಿಯವ. v. *Spy.*

To Scout, v. n. ಒಳಪನೋಡ, ಪಾಳತಿನೋಡ, ಬೇಹುನೋಡ. v. *To spy, explore.*

To Scowl, v. n. ಕಿಡುಗಟ್ಟು, ಮೋರೆಜೋಲುದಾಕ, ಕಿರಿಕೊಳ್.

Scowl, s. n. ಸೆಡಗು, ಸಿಡುಗಟ್ಟುವಿಕೆ, ಸಿಡುಮುಡಿ, ಮುನಿಸು, ಮೋಡಿ, ಕಂಗು, ಸಪ್ಪದಿಮೋರೆ.

Scrag, s. n. ಯಳ್ಡು, ಬಕ್ಕಲು, ಬಡಬಡಕಲು, ಜೊಪ್ಪೆ, ಬೆಪ್ಪು, ಬಕ್ಕಿ, ಬಾಸಗೆ, ದಂಟು, ಐಡ್ಡಿ.

Scragged, part. ಗೊರಕಲಾದ, ಅಷ್ಟಾವಕ್ರವಾದ. v. *Rugged.*

Scraggedness, s. n. ಅಷ್ಟಾವಕ್ರತನ, ಗೊರಕಲುತನ, ಕೊಂಗಮಂಗತನ. v. *Leanness, ruggedness.*

Scraggy, a. ಬಡಬಡಕಲಾದ, ಬಡಬಕ್ಕಲಾದ, ಸಂಣಾನಾದ. v. *Lean.*

To Scramble, v. n. ಮುಗ್ಗಲಿಪಾಟುಬೀಳ್, ಲೂಟಿಮಾಡ, ಕೊಳ್ಳೆಮಾಡ, ಹೋಟಿಗೆಬೀಳ್.

Scramble, s. n. ಲೂಟಿ, ಕೊಳ್ಳೆ, ದುಂಡು, ಮುಗ್ಗಲಪಾಟು.

Scrambler, s. n. ಲೂಟಿಗಾರ, ದುಂಡುಗಾರ, ಮುಗ್ಗಲಪಾಟುಗಾರ.

Scrap, s. n. ತುಂಡು, ತುನಿಕೆ, ಮುರುಕು, ಚುರುಕು. v. *Fragment, crumb, particle. (a scrap of paper)* ಕಾಗದಚೂರು; *(scrap of victuals)* ಎಂಜಲಗುಳ್ಸು.

To Scrape, v. a. ಕೆರಕ, ಕೆರೆ, ಸೋಕೆ. v. *To erase, scratch. (to scrape together)* ಕೂಡಿಸ, ಕೂಡಿಡ, ಜಮೆಮಾಡ. v. *To accumulate, gather. (to make a harsh noise)* ಕಿರ್ರನ, ಸರ್ರನ, ಜರ್ರನ. v. *To grate.*

Scrape, s. n. *(perplexity)* ತೊಂದರೆ, ಶ್ರಮೆ, ಚಿಕ್ಕು, ಇಕ್ಕಟ್ಟು; *(getting into a scrape)* ಇಕ್ಕಟ್ಟಿನೊಳಗೆಬೀಳ್, ತೊಂದರೆಗೆಸಿಕ್ಕಿಕೊಳ್, ಹೋರೆಬಲೆಯಲ್ಲಿಬೀಳ್, ಪೇಚಿನೊಳಗೆಬರ.

Scraped, part. ಕೆರೆದ, ಕೆತ್ತಿದ, ತೆರೆದ. v. *Erazed.*

Scraper, s. n. *(instrument for scraping)* ಕೆರೆಯುವ ಆಯುಧ, ಅತ್ರೆ, ಕಾಷ್ಟಕುದ್ದಾಲ. v. Also *miser.*

Scraping, or Paring, s. n. ಕೆರೆಯುವದು.

To Scratch, v. a. ಕೆರ; *(to scratch one's self)* ಕೆರಕೊಳ್.

Scratch, s. n. ಕೆರಕು, ಗೀವರು, ಶಿಲ್ಲಿ, ಸಿಗುರಿ. v. *Laceration.*

Scratched, part. ಕೆರಿದ.

Scratcher, s. n. ಕೆರುವವ, ಬರಕೋಅವ.

To Scrawl, v. a. ಕೊಕ್ಕರಿಬಕ್ಕರಿಕೆರೆ. v. *To scribble.*

Scrawler, s. n. ಕೊಕ್ಕರಿಬಕ್ಕರಿಬರಿಯೋಅವ.

To Scream, Screech, v. n. ಕೂಗ, ಕೀಚೆನ. v. *To shriek.*

Scream, s. n. ಕೀಚು, ಕೀರು. v. *Shriek.*

Screen, s. n. ಸೆರಿಕೆ, ದಡಿ; *(a screen or riddle to sift gravel, &c.)* ಜಲಡಿ. ಒಂದಲಿಗೆ.

To Screen, v. a. ದಡಿಕಟ್ಟೆ, ಅಡ್ಡಕಟ್ಟೆ, ಚೆಂಬುರಾಕಿಕೊಳ್. v. *To cover, conceal, shelter;* also *to sift, riddle.*

Screened, part. ಅಡ್ಡಕಟ್ಟಿದ, ದಡಿಗಟ್ಟಿದ. v. *Concealed.*

Screw, s. n. ಮರಸುತ್ತುಮೊಳೆ; *(a turn screw)* ಚೌವು.

To Screw, v. a. *(turn by a screw)* ಮರುಸುತ್ತಿರವ; *(to fasten by a screw)* ಮರುಸುತ್ತಿನ

ಮೊಳೆಹಾಕು, ಬಿರಿಗೆಹಾಕು; (*to oppress by extortion*) ಪಟ್ಟಿಮಾಡು, ಬಹೋದ್ಬಂದಿಮಾಡು, ಕಡ್ಡಾಯಹಾಕು. v. *To extort, oppress.* (*to screw the face*) ಮೋರೆಗಂಟುಯಿಟ್ಟುಕೊಳ್ಳು. v. *To distort.* (*to thumb screw*) ಕಿಟ್ಟಿಹಾಕು; (*to press*) ಹಿಂಡು. v. *To squeeze.*

Screwed, part. ತಿರಿಗಿಸಿದ. v. *Oppressed, extorted, pressed.*

To Scribble, v. a. ಕೊಕ್ಕರಿಬಕ್ಕರೆಂದುಬರೆಯು, ನಿರರ್ಥಕವಾಗಿಗೀಚು.

Scribble, s. n. ಕೊಕ್ಕರಿಬಕ್ಕರಿಬರಹ, ವ್ಯಥಾಗೀಟು.

Scribbler, s. n. ಕೊಕ್ಕರಿಬಕ್ಕರೆಂದುಬರೆಯುವವ, ವ್ಯಥಾಗೀಚುವವ.

Scribe, s. n. ಗುಮಾಸ್ತೆ, ಲೇಖರಿ, ರಾಯಸದವ, ಬರಿಯುವವ.

Scrip, s. n. ಚೀಲ, ಥೈಲಿ. v. *Bag, purse.* (*a small writing*) ಬರಹ.

Scripture, s. n. ಬರಹ, ಬರಹಿಕೆ. v. *Writing.* (*the holy scripture*) ಸತ್ಯವೇದ.

Scriptural, a. ಸತ್ಯವೇದಪ್ರಕಾರ.

Scrivener, s. n. (*writer of contracts*) ಪತ್ರಾಬರೆಯುವವ, ಶಾಸನಾಬರೆಯುವವ.

Scrofula, s. n. ಗಂಡಮಾಲೆ. v. *King's evil.*

Scrofulous, a. ಗಂಡಮಾಲೆಯಾದ.

Scrotum, s. n. ತರಡಿನಚೀಲ, ವೃಷಣದಚೀಲ, ಮುಷ್ಕವು.

To Scrub, v. a. ಒರಸು, ಮಯಿಲಿಗೆಯೊರಸು, ಶುಚಿಮಾಡು. v. *To rub, scour, clean.*

Scrub, s. n. (*a mean fellow*) ನೀಚನು; (*a worn out broom*) ಹಳೆಕಸಬರಿಗೆ, ತಕ್ಕಡಿಕಸಬರಿಗೆ.

Scrubbed, Scrubby, a. ನೀಚದ. v. *Mean, vile.* (*rubbed, scoured*) ಒರಸಿದ, ಉದ್ದಿದ, ತಿಕ್ಕಿದ.

Scruple, s. n. ಅನುಮಾನ, ಸಂದೇಹ. v. *Doubt, irresolution.* (*without a scruple*) ಅನುಮಾನವಿಲ್ಲದೆ, ಸಂಶಯವಿಲ್ಲದೆ, ವಂಚನೆಯಿಲ್ಲದೆ.

To Scruple, v. n. ದಗಿಪಡು, ಅನುಮಾನಪಡು, ಸಂದೇಹಪಡು, ಸಂಶಯಿಸು. v. *To doubt, hesitate.*

Scrupler, s. n. ಅನುಮಾನಪಡುವವ, ಸಂಶಯಿಕ, ಸಂದೇಹಪಡುವವ.

Scrupulous, a. ಅನುಮಾನ, ಸಂದೇಹ, ಶುದ್ಧಿಯ. v. *Cautious.* (*nice, exact*) ನೆಟ್ಟಗೆಯಿರುವ, ಚೊಕ್ಕಟವಾದ, ನೀಟಾದ, ಠೀಕಾದ.

Scrupulously, ad. (*cautiously*) ಅನುಮಾನವಾಗಿ, ಸಂದೇಹವಾಗಿ, ಶುದ್ಧಿಮನಸಾಗಿ; (*exactly*) ನೆಟ್ಟಗೆ, ಚೊಕ್ಕಟವಾಗಿ, ನೀಟಾಗಿ, ಸರಿಯಾಗಿ, ಠೀಕಾಗಿ.

Scrupulousness, s. n. ಅನುಮಾನವು, ಸಂದೇಹವು, ಮನೋಶುದ್ಧಿಯು.

Scrutable, a. ಹಿಡಿಯತಕ್ಕ, ಶೋಧಿಸತಕ್ಕ, ಗ್ರಹಿಸತಕ್ಕ, ಊಹಿಸತಕ್ಕ, ಛೇದಿಸತಕ್ಕ.

Scrutiny, Scrutation, s. n. ಶೋಧನೆ, ವಿಚಾರಣೆ, ಪರಿಕ್ಷೆಹುಡುಕುವಿಕೆ, ಪರಿಶೀಲನೆ. v. *Examination, investigation.*

Scrutineer, Scrutator, s. n. ಶೋಧಿಸುವವ, ವಿಚಾರಿಕ, ಪರಿಕ್ಷಕ. v. *Examiner, enquirer, searcher.*

To Scrutinize, v. a. ವಿಚಾರಿಸು, ಶೋಧಿಸು, ಹುಡುಕು, ಪರಿಕ್ಷಿಸು. v. *To examine, enquire, search.*

Scrutinized, part. ಶೋಧಿಶಿದ, ಪರಿಕ್ಷೆಯಾದ, ವಿಚಾರಿಸಿದ. v. *Examined.*

To Scud, v. n. ಚರ್ಕಾಗಿಸಿ, ಓಡಿಹೋಗ, ಪಲಾಯನವಾಗ. v. *To flee, fly, run, scour.*

Scuffle, s. n. ಕಲಹ, ಝಗಳ, ಗಲಿಬಿಲಿ, ರದ್ದು.

To Scuffle, v. n. ರದ್ದುಮಾಡ, ಗಲಿಬಿಲಿಮಾಡ, ಝಗಳಮಾಡ. v. *To fight.*

To Sculk, v. n. ಅವುತುಕೊಳ್ಳ, ಬಚ್ಚಿಟ್ಟುಕೊಳ್ಳ, ಅಡಗಿಕೊಳ್ಳ. v. *To lurk.*

Sculker, s. n. ಅವುತುಕೊಳ್ಳುವವ, ಬಚ್ಚಿಟ್ಟುಕೊಳ್ಳುವವ, ಅಡಗಿಕೊಳ್ಳುವವ. v. *Lurker.*

Scull, s. n. ತಲೆಮಂಡೆ, ತಲೇಪರಟೆ; *(a scull cap)* ಶಿರತ್ರಾಣ, ತಲೆಗಪ್ಪಡಿ. v. *Helmet.*

Scull, s. n. ದೋಣಿ. v. *Boat.*

Sculler, s. n. ಅಂಬಿಗ, ಗಂಗೆಮಗ. v. *Boatman.*

Scullery, s. n. ಮುಸರಿಸ್ಥಳ.

Scullion, s. n. ಬೋಗರಿ, ಮುಸರಿತೊಳೆಯುವವ.

Sculptor, s. n. ಸಂತ್ರದಾಸದವ, ಚಿತ್ರಿಗೆದಾರ. v. *Carver, engraver.*

Sculpture, s. n. ಚಿತ್ರ, ಚಿತ್ರಿಗೆ.

To Sculpture, v. a. ಕಟೆಯ, ಚಿತ್ರ. v. *To carve, engrave.*

Scum, s. n. ನೊರೆ, ಮೈಲಿಗೆ, ಫೇನವು; *(the green scum upon a pool or ditch)* ಪಾಚು; *(the scum of a boiling pot or milk)* ಕಿನೆ. v. *Foam, dross, refuse.* (*to throw up scum as a boiling pot, milk, &c.*) ಕಿನೆಕಟ್ಟಿ, ಕಿನೆಬರ.

To Scum, v. a. *(skim)* ನೊರೆತೆಗೆಯ, ಕಿನೆತೆಗೆಯ.

Scummer, s. n. *(skimmer)* ಸೌಟು, ನೊರೆತೆಗೆಯುವವಸ್ತು. v. *Ladle.*

Scupper, s. n. *(hole on a ship's deck through which water runs into the sea)* ಹಡಗದ ದೋಣಿ.

Scurf, s. n. ಹಕ್ಕು. v. *Scab.* (*scurf on the head*) ಹುಂಡು, ತಲೆಹೊಟ್ಟು. v. *Dandruff.* (*the scurf of a wound or sore*) ರಣದ ಹಕ್ಕು. v. *Scab.*

Scurfy, a. ಹುಂಡಿಯ, ಹಕ್ಕಿನ.

Scurfiness, s. n. ಹುಂಡು, ಹಕ್ಕು.

Scurrility, s. n. ನಿಂದೆ, ಲುಚ್ಚಾನಿಂದೆ, ದುರ್ವಚಸ್ಸು, ಶಿಟ್ಟು, ಬೈಗಳ. v. *Reproach.* (*indecent buffoonery*) ಭಂಡುಹಾಸ್ಯ.

Scurrilous, Scurril, a. ಭಂಡುಹಾಸ್ಯದ, ಲುಚ್ಚಾನಿಂದೆಯ. v. *Opprobrious*; also *mean, low.*

Scurrilously, ad. ಭಂಡುಹಾಸ್ಯವಾಗಿ, ಲುಚ್ಚಾನಿಂದೆಯಾಗಿ.

Scurvily, ad. *(vilely)* ನೀಚವಾಗಿ, ಅಯೋಗ್ಯವಾಗಿ, ಲುಚ್ಚಾತನವಾಗಿ. v. *Meanly, basely, coarsely.*

Scurvy, a. *(vile)* ನೀಚವಾದ, ಅಯೋಗ್ಯವಾದ, ಲುಚ್ಚದ. v. *Mean, contemptible, worthless, sorry*; also *scabbed.*

Scut, s. n. *(short tail)* ಮೊಂಡಬಾಲ.

Scutcheon, s. n. ಡಾಲು. v. *Shield.*

Scuttle, s. n. ಪುಟಿಕೆ, ಪುಟ್ಟಿ. v. *Basket.* (*a grate*) ಜಾನ, ಪಟ್ಟಿ, ಝಲ್ಲಡೆ; (*a quick pace*) ಶೀಘ್ರನಡಿಗೆ, ಕುಕ್ಕೋಟೆ.

To Scuttle, v. n. ಶೀಘ್ರವಾಗಿನಡೆಯ, ಜಲದಾಗಿನಡೆಯ. v. *To scud.* (*to scuttle a ship, pierce it full of holes*) ರಂಧ್ರರಂಧ್ರಮಾಡ, ತೂತುಮಾಡ.

Sea, s. n. ಸಮುದ್ರ, ಕಡಲು, ಮುನ್ನೀರು, ಅಬ್ಧಿ, ಜಲನಿಧಿ, ಅಕೂಪಾರ, ಪಾರಾವಾರ, ಸರಿತ್ಪತಿ, ಉದನ್ವತ್ತು, ಉದಧಿ, ಸಿಂಧು, ಸಾಗರ, ಅರ್ಣವ, ಕಂಧಿ, ರತ್ನಾಕರ, ಯಾದಃಪತಿ, ಅಪಾಂಪತಿ. The Hindoo fables mention seven seas: ಲವಣಾಸಮುದ್ರ *the salt sea;* ಇಕ್ಷುರಸಸಮುದ್ರ *the sea of syrup;* ಹೆಂಡದ ಸಮುದ್ರ *the sea of ardent spirits;* ತುಪ್ಪದ ಸಮುದ್ರ *the sea of Indian butter or ghee;* ಮೊಸರುಸಮುದ್ರ *the sea of curds;* ಹಾಲುಸಮುದ್ರ *the sea of milk;* ಶೀನೀರಿನಸಮುದ್ರ *the sea of fresh water:* (*a swelling sea*) ಉಕ್ಕಿದ ಸಮುದ್ರ; (*by sea and land*) ಸಮುದ್ರದ ಮೇಲೆಯೂ, ಭೂಮಿಯ ಮೇಲೆಯೂ; (*a shallow in the sea*) ಬೊಗಡಿ, ದರಿಕಟ್ಟೆ, ಕಾಲುನಡಿ, ಕೆಳವುನೀರು, ಉತ್ತಾನ; (*belonging to the sea*) ಸಮುದ್ರದ; (*on the sea shore*) ಸಮುದ್ರದ ದಡದಲ್ಲಿ, ಸಮುದ್ರದ ತೀರದಲ್ಲಿ; (*the bed of the sea*) ಸಮುದ್ರದ ಪಾತ್ರೆ; (*the flowing of the sea*) ಸಮುದ್ರ ಏರುವದು; (*the sound of the sea*) ಸಮುದ್ರದ ಘರ್ಜನೆ.

Sea-air, s. n. ಸಮುದ್ರದ ವಾಯುವು, ಸಮುದ್ರದ ಗಾಳಿಯು.

Seabreeze, s. n. ಸಮುದ್ರದ ಗಾಳಿ.

Seachart, s. n. ಸಮುದ್ರ ಸಂಚಾರ ಪಥದ ನಮೂನೆ.

Seacoast, s. n. ಸಮುದ್ರದ ದಡ.

Seacompass, s. n. ಸಮುದ್ರದಿಶಾಸಾಕ್ಷದವಸ್ತು.

Seafaring, a. ಸಮುದ್ರಸಂಚಾರ; (*a seafaring man*) ಸಮುದ್ರಸಂಚಾರಿಕ.

Seafight, s. n. ಸಮುದ್ರದ ಜಗಳ, ಸಮುದ್ರ ಯುದ್ಧ, ಹಡಗಿನ ಯುದ್ಧ.

Seafowl, s. n. ಸಮುದ್ರದ ಪಕ್ಷಿ.

Seagirt, a. ಸಮುದ್ರಸುತ್ತಿರುವ.

Seagreen, a. ಸಮುದ್ರದ ವರ್ಣ.

Seahorse, s. n. ಸಮುದ್ರದ ಕುದುರೆ.

Seaman, s. n. ನಾವಿಕ, ಗಂಜಿಮಗ, ಅಂಬಿಗ. v. *Mariner.*

Seamark, or Beacon, s. n. ಸಮುದ್ರದ ಕೋಟೆ, ಸಮುದ್ರದ ಮೆಟ್ಟು.

Seamonster, s. n. ಸಮುದ್ರದ ಜೀವಿ.

Seanymph, s. n. ಗಂಗಮ್ಮ, ಸಮುದ್ರಲಕ್ಷ್ಮಿ.

Seaport, s. n. ರೇವು.

Searisque, s. n. ಸಮುದ್ರದ ಮೋಸ, ಸಮುದ್ರದ ಗಂಡಾಂತ್ರ.

Searoom, s. n. ಸಮುದ್ರದ ಹರಿ.

Seashell, s. n. ಸಮುದ್ರದ ಶಂಖು.

Seashore, Seaside, s. n. ಸಮುದ್ರದ ದಡ.

Seasick, a. ಸಮುದ್ರದ ಸಂಕಟ.

Seaserpent, s. n. ಸಮುದ್ರದ ಸರ್ಪ, ನೀರು ಹಾವು.

Seaservice, s. n. ಸಮುದ್ರದ ಉದ್ಯೋಗ, ಹಡಗಿನ ವ್ಯಾಪಾರ.

Seasurrounded, a. (*seagirt*) ಸಮುದ್ರ ಸುತ್ತಿರುವ.

Seawater, s. n. ಸಮುದ್ರದ ನೀರು, ಉಪ್ಪಿನ ನೀರು, ಕ್ಷಾರೋದಕ. v. *Salt water.*

Seal, s. n. ಮುದ್ರೆ, ಮೋಹರು; *(the sealing of a prince)* ,ಅರಶಿನ ಪಟ್ಟಿ, ರಾಜ್ಯಾಭಿಷೇಕ; *(a seal upon a purse, granary, &c.)* ಮೋಹರು; *(a wooden seal for sealing parcels of grain)* ಮುದ್ರೆ ಕೋಲು; *(a sectarian seal)* ಶ್ರೀಮುದ್ರೆ; *(to break open a seal)* ಮುದ್ರೆಯೊಡೆಯ.

To Seal, v. a. ಮುದ್ರೆಹಾಕ. v. Also *to confirm, ratify, settle, close, shut.*

Seal-cutter, s. n. ಮುದ್ರೆಕೆತ್ತುವವ.

Sealed, part. ಮುದ್ರೆಹಾಕಿದ, ಮೋಹರುಹಾಕಿದ.

Sealer, s. n. ಮುದ್ರೆಹಾಕುವವ; *(a public servant who seals the corn)* ಆವಟಿಗ.

Sealingwax, s. n. ಅರಗು.

Seam, s. n. *(sewing which joins the edges of cloth, &c.)* ದಿಂಡು, ಕಚ್ಚು, ಅಪ್ಪಟಿ, ಜಂದಿ. v. Also *scar, cicatrice, grease, lard.*

To Seam, v. a. ದಿಂಡುಹಚ್ಚ, ಅಪ್ಪಡಿಹಚ್ಚ, ಕಚ್ಚುಹಚ್ಚ. v. *To sew;* also *to mark, scar.*

Seamstress, s. n. ಚಿಪ್ಪಗಿತ್ತಿ, ಹೊಲಿಯುವವಳು.

Seamy, a. ದಿಂಡಾದ, ಕಚ್ಚಾ, ಅಪ್ಪಡಿಯಾ.

Seamless, a. ಅಖಂಡ, ಹೊಲಿಗಿಲ್ಲದ, ಕಚ್ಚಿಲ್ಲದ.

To Sear, v. a. ಚೆಟಿಗೆಹಾಕ, ಸುಡ. v. *To burn, cauterize.*

Sear, a. ಒಣಗಿದ. v. *Dry.*

Searcloth, s. n. ಮಲಾಮಿನಬತ್ತಿ. v. *Plaster.*

To Searce, v. a. ಜಲದಿಂದೆಡಿಯ. v. *To sift.*

Searce, s. n. ಜಲದಿ.

To Search, v. a. ಹುಡುಕ, ಶೋಧಿಸ, ಪರೀಕ್ಷಿಸ, ಸಂವೀಕ್ಷಿಸ, ವಿಚಾರಿಸ, ಪರಿಶೋಧಿಸ. v. *To examine, enquire, probe. (to search out)* ಪರಿಶೋಧಿಸ; *(to search for by groping)* ತಡವಾಡ.

Search, s. n. ವಿಚಾರಣೆ, ಸಂವೀಕ್ಷಣೆ, ಪರಿಶೋಧಿಸುವಿಕೆ, ಹುಡುಕುವಿಕೆ. v. *Enquiry, examination, quest, pursuit.*

Searched, part. ಶೋಧಿಶಿದ, ಹುಡುಕಿದ, ಸಂವೀಕ್ಷಿಸಿದ, ವಿಚಾರಿಸಿದ.

Searcher, s. n. ಶೋಧಕ, ಹುಡುಕುವವ, ಸಂವೀಕ್ಷಕ. v. *Examiner, enquirer.*

Season, s. n. *(of the year)* ಋತುವು, ಋತುಕಾಲವು; *(time)* ಸಮಯ, ಕಾಲ, ವೇಳೆ; *(the six seasons of the year)* ಷಡೃತುವುಗಳು; *(the spring season)* ವಸಂತಋತುವು, ಪುಷ್ಪಸಮಯ, ಸುರಭಿ, ಸುಗ್ಗಿ, ಕಮ್ಮ, ಹುವ್ವಿನ ಹಬ್ಬ; *(the hot season)* ಗ್ರೀಷ್ಮಋತುವು, ಬೇಸಗೆ, ಊಷ್ಮಕ, ನಿಧಾಘ, ಉಷ್ಣೋಪಗಮ, ಉಷ್ಣಾಗಮ, ಊಷ್ಮಾಗಮ, ತಪವು; *(the rainy season)* ವರ್ಷಋತುವು, ಪ್ರಾವೃಟ್ಕಾಲ; *(the sultry season)* ಮಳೆಗಾಲ, ಶರದೃತುವು; *(the winter season)* ಹೇಮಂತ್ರಋತುವು; *(the cold season)* ಶಿಶಿರಋತುವು; *(at a proper season, in season)* ತಕ್ಕಸಮಯದಲ್ಲಿ, ತಕ್ಕವೇಳೆಯಲ್ಲಿ. v. *Seasonably. (out of season)* ಅಕಾಲದ. v. *Unseasonably.*

Ship, s. n. ಹಡಗು, ನಾವೆ; (*a ship of war*) ಯುದ್ಧದ ಹಡಗು; (*an armed ship*) ಶಸ್ತ್ರದಿಯಾದ ಹಡಗು, ಸನ್ನಾಹವಾದ ಹಡಗು; (*a large ship*) ದೊಡ್ಡ ಹಡಗು, ಭಾರೀ ಹಡಗು; (*a merchant ship*) ವ್ಯಾಪಾರದ ಹಡಗು, ಸರಕಿನ ಹಡಗು, ವರ್ತಕತನದ ಹಡಗು; (*to go on board a ship*) ಹಡಗೇರ, ಹಡಗು ಏರಿಕೊಳ್ಳ, ಹಡಗಿನಲ್ಲಿ ಪ್ರವೇಶಿಸ; (*to come from on ship board*) ಧಡಕ್ಕೆ ಏರ, ಧಡಕ್ಕೆ ಬರ. v. *To land.* (*to ship or load a ship*) ಹಡಗಿನಲ್ಲಿ ಸರಕು ಹಾಕ, ಹಡಗಿಗೆ ಭಾರ ಏರಿಸ. v. *To load, to freight.* (*to unload a ship*) ಹಡಗಿನ ಸರಕಿಳಿಸ, ಹಡಗಿನ ಭಾರ ಇಳಿಸ; (*to rig a ship*) ಹಡಗು ಸಿದ್ಧಮಾಡ, ಹಡಗಿನ ಪಟಗಳನ್ನೇರಿಸ. v. *To rig.* (*shipping, ships*) ಹಡಗುಗಳು, ನಾವೆಗಳು; (*any station for shipping, as a road, harbour, dock, &c.*) ರೇವು, ಹಣೆಕಡಲು; (*a ship's company*) ಜಹಜಿನವರು, ನಾವಿಕರು, ಹಡಗಿನ ಕಾಮಗಾರಿಜನ. v. *Crew.* (*a ship man*) ಜಹಜಿನವ, ನಾವಿಕ; (*a ship boy*) ಹಡಗಿನಲ್ಲಿಯಿರುವ ಪರಿಚಾರಕ ಹುಡುಗ; (*a ship's boat*) ಹಡಗಿನ ದೋಣಿ; (*the freight or hire of a ship*) ಹಡಗಿನ ಕೂಲಿ, ಗಂಗಿಕೂಲಿ, ದಾಟುಕೂಲಿ, ತರಪಂಗ್ಯ. v. *Freight.* (*the loading of a ship*) ಹಡಗಿನ ಹೊರೆ, ಹಡಗಿನ ಸರಕು ಸಪ್ಪಟೆ, ಹಡಗಿನ ದಿಮಸು, ನಾವೆವರ್ಗು; (*the anchor of a ship*) ಹಡಗಿನ ಲಂಗರು, [illegible]; (*the deck of a ship*) ಹಡಗಿನ ಚಟ್ಟಿ; (*a plank of a ship*) ಹಡಗಿನ ಹಲಿಗೆ; (*to caulk or sheathe a ship*) ಹಡಗಿಗೆ ಅಪಿಡ, ತಗಡುಮಡಾಯಿಸ.

Shipmaster, s. n. ಹಡಗಿನ ಯಜಮಾನ, ಜಹಜಿನ ಧಣಿ.

Shipwreck, s. n. ಹಡಗಿನ ಕೇಡು, ಹಡಗು ಪುಟಾಪುಟಿ.

Shipwrecked, part. ಹಡಗಿನ ಘೋರಮಾರಿನ, ಹಡಗಿನ ಘೋರಾದ, ಹಡಗು ಪುಟಾಪುಟಿಯಾದ; (*to be shipwrecked*) ಹಡಗು ಘೋರಾಗ, ಹಡಗು ನಾಶವಾಗಿಹೋಗ.

To Shipwreck, v. a. ಹಡಗು ಘೋರಾಗ.

Shipwright, Shipcarpenter, s. n. ಹಡಗು ಮಾಡುವವ, ಹಡಗಿನ ಬಡಿಗ.

Shirt, s. n. ಕಫನಿ, ಕಂಶೆ, ಚವಾಬು.

Shirtless, a. ಕಫನಿಯಿಲ್ಲದ, ಕಂಶೆಯಿಲ್ಲದ, ಕವಾಯಿಯಿಲ್ಲದ.

To Shirt, v. a. ಕಫನಿಧರಿಸ, ಕಂಶೆಧರಿಸ.

Shive, s. n. ಪೇಡು. v. *Slice, splinter.*

To Shiver, v. n. (*tremble with cold, &c.*) ಅದರ, ಅಂಜ, ನಡುಗ, ಛೇರಿಪಡ; (*to shiver, break in pieces*) ಛಿಂನಾಭಿನ್ನಮಾಡ, ತುಂಡುತುಂಡುಮಾಡ; (*to fall in pieces*) ಛಿಂನಾಭಿನ್ನವಾದ.

Shiver, s. n. (*tremor*) ಅದರಿಕೆ, ಅಂಜಿಕೆ, ನಡುಗುವಿಕೆ; (*a fragment*) ಪೇಡು, ತುಂಡು. v. *Splinter.* (*in shivers*) ಪೇಡಾದ.

Shivered, part. *(broken in pieces)* ಪೇಡಾದ, ಚೂರಾದ. v. *Shattered.* *(trembled)* ನಡುಗಿದ, ಅಂಜಿಕೆಯಾದ.

Shivering, part. *(trembling)* ನಡುಗುವ, ಅಂಜುವ; *(breaking in pieces)* ತುಂಡಾಗುವ, ಪೇಡಾಗುವ; *(the shivering fit of an ague)* ಛಳಿಜ್ವರ.

Shoal, s. n. ಗುಂಪು, ಸ್ತೋಮ. v. *Crowd.* *(a shallow)* ಮೊಗಡಿ, ನೀರುಕೊಳಗಿನಬೇಟು, ದಿಂಣೆಕಟ್ಟು.

To Shoal, v. n. *(go in crowds)* ಗುಂಪಾಗ, ಗುಂಪುಕಲಿಯ; *(to be or grow shallow)* ದಿಂಣೆಕಟ್ಟಾಗ, ದಿಬ್ಬೆಯಿಡ.

Shoaly, a. *(full of shoals)* ದಿಂಣೆಕಟ್ಟಾದ, ಶಿಶಿಗಟ್ಟಾದ, ಮೊಗಡಿಯಾದ, ಬೇಟಾದ.

Shock, s. n. *(blow)* ಡಿಬ್ಬೆ, ಪೆಟ್ಟು; *(shake)* ಅಳುಕು; *(conflict, mutual impression of violence)* ಢಾಯಿಕೆ, ತಾಕೋಣ; *(conflict of enemies)* ಯುದ್ಧವು, ಧಕ್ಕಾಮುಕ್ಕಿ; *(offence, impression of disgust)* ಅಸಂಹ್ಯ, ವಾಕರಿಕೆ; *(a shock of corn)* ಗೂಡು; *(a shock dog)* ಕೊಳಿನಾಯಿ, ಗ್ರಾಮಶುನಕ, ಗ್ರಾಮಸಿಂಹ.

To Shock, v. a. ಡಿಬ್ಬೆಕೊಡ; *(shake by mutual concussion)* ಕವಿಯ, ಢಾಯ; *(to offend, disgust)* ಅಸಂಹ್ಯಪಡಿಸ, ವಾಕರಿಕೆಪಡಿಸ; *(to be offensive)* ಅಸಂಹ್ಯವಾಗಿರ, ವಾಕರಿಕೆಯಾಗಿರ; *(to build up piles of sheaves)* ಗೂಡುಕಟ್ಟು

Shocked, part. ಅಸಂಹ್ಯಪಡಿಸಿದ. v. *Disgusted, offended.*

Shocking, a. ವಾಕರಿಕೆಯಾದ, ಅಸಂಹ್ಯವಾದ. v. *Hideous, disagreeable.*

Shockingly, ad. ವಾಕರಿಕೆಯಾಗಿ, ಅಸಂಹ್ಯವಾಗಿ.

Shod, part. ನಾಲುಕಟ್ಟಿದ.

Shoe, s. n. ಚೆಪ್ಪಲಿ, ಪಾದರಕ್ಷೆ, ಉಪಾನತು, ಉಪಾನಹವು; *(a coarse rustick shoe)* ಕಾಲುಮರಿ, ಚೆಪ್ಪಲಿ; *(a bramin's shoe)* ಪಾಪಾಸು, ಮೊಚ್ಚೆ; *(a moorman's shoe)* ಪೈಜಾರು, ಪಾಯಿಜಾಂ; *(a wooden shoe)* ಢಾವಿಗೆ, ಪಾವುಕೋಡು, ಪಾದುಕೆ; *(a woman's shoe)* ವಂಟಿಟ್ಟಿಪಾಪಾಸು, ವಂಟಿಟ್ಟಿಚಪ್ಪಲಿ ಎಡೆಕೆರವು; *(a horse shoe)* ನಾಲು, ಖುರಪಟ್ಟಿ; *(a shoe latchet)* ಲಿಂಮದಬಾರು; *(to put on shoes)* ಕೆರಮೆಟ್ಟಿ, ಚೆಪ್ಪಲಿಮೆಟ್ಟು, ಪಾಪಾಸುತೊಡ, ಪೈಜಾರುಹಾಕ; *(to shoe a horse)* ನಾಲುಗಟ್ಟಿ; *(shoer of horses)* ನಾಲ್ಗಾರ, ನಾಲುಬಂದಿಯವ.

Shoemaker, s. n. ಮುಚ್ಚಿಗ, ಚರ್ಮಕಾರ; *(shoemaker's leather cutting knife)* ರಂಪಿಗೆ; *(shoemaker's paring knife)* ಚೆಪ್ಪಳಿ, ಮಾದಿಗನಮಸೆಗತ್ತಿ; *(shoemaker's glue)* ಸರಿ; *(shoemaker's awl)* ಉಳಿ; *(shoemaker's blacking)* ಅಳತಿಕರಕು; *(shoemaker's leather stretching instrument)* ಗಟ್ಟಿಗೆಗುಂಡು; *(shoemaker's cutting board)* ಮೆಟ್ಟುಕೊಂಬು, ಕತ್ತರಿಕೊಂಬು.

Shook, part. ಕದಲಿಸಿದ, ಅಲ್ಲಾಡಿಸಿದ. v. *Shaken.*

Shone, (pret. of *shine*) ಪ್ರಕಾಶಿಸಿದ, ಕಾಂತಿಯಾದ.

To Shoot, v. a. *(throw, dart, hurl)* ಎಸೆಯ; *(to shoot off a musket)* ತುಬಾಕಿಬಿಡ, ಫಿರಂಗಿ

ಹೊಡೆಯ; (*to shoot off a matchlock*) ಜಾವಿಕೆ ತುಬಾಕಿಸುಡ; (*to shoot off a cannon*) ಫಿರಂಗಿ ಹೊಡೆಯ, ತೋಪುಹಾರಿಸ; (*to shoot or kill with a gun*) ತುಬಾಕಿಯಿಂದ ಹೊಡೆಯ, ಗುರಿಯಿಟ್ಟುಹೊಡೆಯ; (*to shoot with bow and arrow*) ತೀರುಹೊಡೆಯ, ಅಂಬೆಶೆಯ, ಬಾಣವೆಸೆಯ, ತೀರುಕಮಾನುಹೊಡೆಯ; (*to germinate, grow up as plants*) ಚಿಗುರ, ಮೊಳೆಯ; (*to shoot forth ears, as corn*) ಮೊಳೆಕೆಯೇಳ, ಹೊಂಟೆಮತೆನೆಹೊರಡ; (*to shoot or jut out*) ಚುಬ್ಬಿಹೊರಡ, ಮೊಜ್ಜೆಬಿಡ, ಗೂನುಬರ, ಹೊಟ್ಟೆಹಾಯ. v. *To project.* (*to shoot as the pain of a wound*) ಚುಚ್ಚ, ಟಿವುಗುಟ್ಟೆ, ಹೋಟ್ಯೇಳ, ಹೂಲಿಡ; (*to shoot or move swiftly along*) ಬಿಸ್ಸನೆ ಹೋಗ, ಬೆತ್ರನೆಹೋಗ.

Shoot, s. n. (*twig, tender branch*) ಚಿಗುರು, ಕಂದಳವು, ಪಲ್ಲವ, ಕಿಸಲಯ, ಕೆಳಿಲು.

Shooter, s. n. ಬಾಣಗಾರ, ವಗುವವ, ಸುಡುವವ. v. *Archer, gunner.*

Shooting, s. n. ಸುಡುವದು, ವಗುವದು, ಎಸೆಯುವದು.

Shop, s. n. ಅಂಗಡಿ, ದುಕಾನವು. ಆಪಣ, ನಿಷದ್ಯ; (*a work shop*) ಕರ್ಮಶಾಲ, ಆವೇಶನ, ಶಿಲ್ಪಶಾಲೆ; (*a wine shop*) ಸಾರಾಯದಂಗಡಿ. v. *Tavern.* (*a butcher's shop*) ಕಟಿಕರಂಗಡಿ; (*a cook's shop*) ಅಡಗೋಲಜ್ಜಿಮನೆ; (*an apothecary's shop*) ಗ್ರಂಧಿಯಂಗಡಿ; (*a grocer's shop*) ಬೆಲ್ಲರಂಗಡಿ; (*a cloth shop*) ಜವಳಿಯಂಗಡಿ; (*a bench before a shop on which goods are exposed for sale*) ಬಂಕ್ಕ; (*a shop book*) ಲೆಖ್ಖದವಹಿ, ಲೆಖ್ಖದಕಡತ. v. *Account book.* (*to open shop*) ಅಂಗಡಿಯಿಡ; (*to shut up shop*) ಅಂಗಡಿಹಾಕ; (*to mind the shop*) ಅಂಗಡಿಮೇಲೆಯಿಡ; (*to break into a shop*) ಅಂಗಡಿಹೊಲ್ಲೆಯಿಡ; (*a shop in a good situation*) ಗರಾಕಿಯಂಗಡಿ.

Shopkeeper, Shopman, s. n. ಅಂಗಡಿಗಾರ, ದುಕಾನದಾರ.

Shoplifter, s. n. ಅಂಗಡಿಕಳ್ಳ.

Shore, s. n. ಧಡ, ಗಡ್ಡೆ, ಕೂಲ, ರೋಧ, ತೀರ, ಪ್ರತೀರ, ತಟ, ದರಿ. v. *Coast.* (*on the sea shore*) ಧಡದಮೇಲೆ, ಧಡದಲ್ಲಿ; (*to go on shore*) ಧಡದಮೇಲೆಯೆಳೆಯ, ಧಡಕ್ಕೆಸೇರ.

To Shore, v. a. ಹೋಟೆಯಿಡ, ಆಧಾರಮಾಡ. v. *To prop, support.*

Shorn, part. ಬೋಳಿಸಿದ, ಕತ್ತರಿಸಿದ.

Short, a. ಪುಟ್ಟಾನ, ಗಿಡ್ಡಾನ, ಉದ್ದವಿಲ್ಲದ. v. *Little, small, narrow.* (*short of stature*) ಕುಜುಬಾದ, ವಾಮನವಾದ, ಗಿಡ್ಡವಾದ, ಕುಂಟಿನಾದ; (*in a short time*) ಸ್ವಲ್ಪವೇಳೆ, ಕೊಂಚಕಾಲ, ಸ್ವಲ್ಪಹೊತ್ತು. v. *Soon.* (*a short discourse*) ಸ್ವಲ್ಪವಾದಪ್ರಸಂಗ; (*short, not adequate*) ಕೊರತೆಯಾದ, ಕಡಮೆಯಾದ; (*a short cut, or passage*) ಕಳ್ಳಹಾದಿ; (*friable*) ಪೆಳಶಿನ, ಪೆಳಸಾದ, ಪೆಡಶಿನ, ಪೆಡುಸಾದ. v. *Brittle.* (*to fall short*) ಸಾಲದಬರ, ಕಡಿಮೆಯಾಗ, ಸಾಲದೆಹೋಗ, ಸಿಗದೆಹೋಗ; (*shortness of breath*) ದಂಮು, ಎದೆಯುಬ್ಬಸ; This is the

short and long of it ಅದರ ಕ್ಷೆಪ್ರಾಯವೆಲ್ಲಾಯಿದೆ; *(to stop short)* ನಡಿವೆನಿಂತ್ಹೋಗ, ಪಾರಮಟ್ಟದಿರ; *(short of sight)* ಚತ್ವಾರಿದ್ರಿಷ್ಟಿ, ಕಂಣುಬಾಳ್ಕೇಶ್ವರ; I will be *short* ನಾನುಸ್ವಲ್ಪದರಲ್ಲಿಕೇರಿಸುತ್ತೇನೆ.ನಾನುಸ್ವಲ್ಪವಾಗಿ ಹೇಳುತ್ತೇನೆ; *(short of capacity)* ಯೋಗ್ಯತೆಸಾಲದ, ಸಾಮರ್ಥ್ಯಸಾಲದ; *(short of money)* ಹಣಸಾಲದ, ಹಣಕಡಮೆ; *(to take one up short)* ಉತ್ತರಕೇಳದಕ್ಕಿಂತಮುಂಚೆಹೇಳುವದು, ಬಾಯೊಳಗಿನಮಾತುಬಾಯೊಳಗೆಯಿರುವಾಗ್ಯೆಹೇಳುವದು; *(to fall short of one's design)* ಎಣಿಸಿದಹಾಗೆಯಾಗದೆಹೋಗುವದು, ಒಂದುಹೋಗಿಯೊಂದುಆಗುವದು; Provision fell *short* ಆಹಾರವುಕಡಿಮೆಯಾಯಿತು, ಖರ್ಚ್ಯೆಸಾಲದಹಾಗೆಬಂತು; He comes *short* of no man in that ಆಕಾರ್ಯದಲ್ಲಿಅವನುಯಾರಿಗ್ಯೂಕಡಿಮೆಯಾದವನಲ್ಲ; *(short of twenty years old)* ಇಪ್ಪತ್ತುವರುಷಪ್ರಾಯಕ್ಕೆಸ್ವಲ್ಪಕಡಿಮೆಯಾಯಿತು.

To Shorten, v. a. ಸಂಕ್ಷೇಪಮಾಡ, ಹ್ರಸ್ವಮಾಡ, ಗ್ರಸ್ತಮಾಡ, ಕುಂಟುಮಾಡ. v. *Abbreviate, abridge, contract.*

Shortened, part. ಸಂಕ್ಷೇಪಮಾಡಿದ, ಹ್ರಸ್ವಮಾಡಿದ, ಗ್ರಸ್ತಮಾಡಿದ.

Shortlived, a. ಸ್ವಲ್ಪದಿವಸಬಾಳಿದ, ಅಲ್ಪಾಯುಷ್ಯವಾದ.

Shortly, ad. *(in short)* ಒಂದೆರಡುಮಾತುಗಳಲ್ಲಿ ಸಂಕ್ಷೇಪವಾಗಿ; *(soon)* ಸ್ವಲ್ಪವೇಳೆಯಾಗಿ, ಕೊಂಚದಿವಸದಲ್ಲಿ, ಸ್ವಲ್ಪದರಲ್ಲಿ.

Shortness, s. n. ವಾಮನತ್ವ, ಪುಟ್ಟತನ, ಗಿಟ್ಟತನ, ಕುಂಟು, ಕುರುಚುತನ.

Shortsighted, a. ಚತ್ವಾರದ್ರಿಷ್ಟಿಯ.

Shortsightedness, s. n. ಚತ್ವಾರದ್ರಿಷ್ಟಿ.

Shortwinded, Shortbreathed, a. ದಂಮಿನ, ಏದೆಯುಬ್ಬುಸದ.

Shot, (pret. *of shoot)* ಗುಂಡುತಗಲಿದ, ಗುಂಡುಬಡಿದ. v. Also *killed.*

Shot, s. n. ರವೆ, ಬಿರಾಣಿ; *(cannon shot)* ಫಿರಂಗಿಗುಂಡು; *(a long shot)* ದೂರದಗುಂಡು; *(a shot which hits the mark)* ಗುರಿಯುಟ್ಟುಎಸೆಯುವಿಕೆ, ಗುರಿಯಿಟ್ಟುಹೊಡೆಯುವಿಕೆ; *(within cannon shot)* ಗುಂಡಿಳಿಕೆಯಲ್ಲಿ, ಫಿರಂಗಿಗುಂಡಳತೆಯಲ್ಲಿ; *(shotfree)* ಮಾಫುಮಾಡಿದ. v. *Exempted.*

To Shove, v. a. ನೂಕ, ದೊಬ್ಬ, ದೊಬ್ಬಿಹಾಕ. v. *To push.*

Shove, s. n. ದೊಬ್ಬಿಕೆ, ನೂಕುವಿಕೆ.

Shoved, part. ದೊಬ್ಬಿಹಾಕಿದ, ನೂಕಿದ. v. *Pushed.*

Shovel, s. n. ಸಲಿಕೆ, ಅತ್ರಿ, ಕಾಷ್ಠಕುದ್ದಾಲ; *(a fire shovel)* ತಂಡಸ.

Should, v. n. If I *should* go ನಾನುಹೋದೆನಾದರೆ; It *should* be so ಅದುಹಾಗಿರತಕ್ಕದ್ದು, ಅದುಹಾಗೆಯಿರಬೇಕಾದ್ದು; Whom *should* I meet but your brother ನನಗೆದುರುಪಟ್ಟೆವನ್ಯಾರಂದರೆನಿನಸಹೋದರನೆ; I *should* be sorry for it ಅದುಹಾಗೆಯಿದ್ದರೆನನಗೆಚಿಂತೆಯಾಗದೆ; As it *should* seem ಸಂದೇಹವಾಗಿತೋರುವಹಾಗೆ.

To Shovel, v. a. ಕೊಚ್ಚೊಗೆಯು.

Shoulder, s. n. *(of a man)* ಹೆಗಲು, ಅಂಸ, ಮುಯ್ಯಿ, ಭುಜ, ತೋಳುದಲೆ; *(the shoulders)* ಭುಜಗಳು, ಬಾಹುಮೂಲಗಳು; *(having high or broad shoulders)* ಎಸಭುಜಗಳುಳ್ಳ; *(having one shoulder higher than the other)* ಡೊಂಕುಹೆಗಲ, ಡೊಂಕುಹೆಗಲಿನ; *(the shoulders of animals)* ಹೆಕ್ಕೆಗಳು; *(a high shouldered horse)* ಎದೆವಿಸ್ತಾರದ ಕುದುರೆ; *(the shoulder blade)* ರಂಪು, ಕಕ್ಷದೆಲುಬು, ಅಂಸವು; *(the cartilage of the shoulder blades)* ರಂಪಿನಬೆನೆಲುವು, ರಂಪಿನಮುರಿಯೆಲುವು; *(two black streaks on the shoulders of an ass)* ಕತ್ತೆಯಸುಳಿದಾರಿ, ಬಾರಿಕೆ, ಕತ್ತೆಬಾರಿಕೆ; *(the space between the shoulder blades)* ಎಡೆಬೆಸ್ಪು; *(a shoulder sword belt)* ದವಾಲಿ, ಕತ್ತಿದವಾಲಿ; *(tender shouldered)* ಹೆಗಲುಬರುವಭುಜವಾದ; *(slip shouldered)* ಜಾರುಭುಜವಾದ, ಡೊಗ್ಗಭುಜವಾದ; *(strong shouldered)* ಬಲವಾದ ಭುಜದ.

To Shoulder, v. a. *(put upon the shoulder)* ಹೆಗಲಿಗೆಹಾಕಿಕೊಳ್ಳು, ಕೊಂಕಳಿಗೆತೆಗಲಿಕೊಳ್ಳು; *(to carry on the shoulders)* ಹೆಗಲಮೇಲೆಹೊರು; *(to push with the shoulders)* ಭುಜದಿಂದ ದೊಬ್ಬು; *(to shoulder a firelock)* ತುಬಾಕಿ ಕೊಂಕ್ಕಳಿಗೆತ್ತು, ಪೈಲುಮಾಡು.

To Shout, v. n. ಕೂಗು, ಬೊಬ್ಬಿಡು, ಜಯಧ್ವನಿಮಾಡು.

Shout, s. n. ಜಯಧ್ವನಿ, ರಣಬೊಬ್ಬೆ, ವೀರಬೊಬ್ಬೆ. v. *Cry.* *(a shout of applause)* ಪ್ರಣಾದ.

Shouter, s. n. ಬೊಬ್ಬೆಯಿಡುವವ, ಸಿಂಹನಾದದವ, ಜಯಧ್ವನಿಮಾಡುವವ.

To Show, v. n. *(exhibit to view)* ತೋರಿಸು, ತೋರಿಸಿಕೊಡು; *(to make known)* ತಿಳಿಸು, ಬಹಿರಂಗಮಾಡು, ಪ್ರಸಿದ್ಧಿಮಾಡು, ಬಿಚ್ಚಿಹೇಳು. v. *To publish, proclaim.* *(to demonstrate)* ಮುಖಾಮುಖಿಮಾಡು, ಸಾದೃಶ್ಯತೋರಿಸು, ದೃಷ್ಟಾಂತಕೊಡು. v. *To prove.* *(to explain)* ವಿವರಿಸು, ಅನ್ವಯಿಸು, ತಿಳಿಯಹೇಳು; *(to tell, teach)* ಕಲಿಸಿಕೊಡು, ತಿಳಿಸಿಕೊಡು, ಹೇಳಿಕೊಡು, ತೋರಿಕೊಡು; *(to appear, have the appearance of)* ತೋಚು, ಕಾಣಿಸು, ತೋರು.

Show, s. n. *(superficial appearance)* ತೋರ್ವಿಕೆ, ವೇಷ, ರೂಪ, ಬೂಟಿಕ; *(diversion)* ತಮಾಷೆ, ಲೀಲೆ, ಆಟ; *(splendid appearance)* ಪ್ರಭೆಯಾದ ತೋರ್ವಿಕೆ, ಮೆರವಣಿಗೆ; *(pomp, magnificent spectacle)* ಡಂಭ, ಜಭಾಟಿ, ಅಟ್ಟಹಾಸ. v. Also *likeness, semblance, phantom.*

Shower, s. n. ಸರಿವೆಮಳೆ, ಒಂದುಬಾರಮಳೆ. v. *Rain.* *(shower after shower)* ಸರಿವೆಸರಿವೆಯಾದಮಳೆ, ಶಿಶಿಶಿಶಿಯಾದಮಳೆ; *(a heavy shower)* ಹಂಭಿಪ್ರೋಣವಾದಮಳೆ, ಪ್ರಳಯವಾದಮಳೆ, ವಿಪರೀತವಾದಮಳೆ, ಧಾರಾವರುಷ, ದಾಶಿ; *(a light shower)* ಸಣ್ಣಮಳೆ, ಸೋನೆ; *(an unintermitting shower of rain)* ಜಡಿಮಳೆ; *(a shower with wind)* ಘಾಳಿಮಳೆ, ಇರಚಲು, ಶೀಕರ; *(a thunder shower)* ಗುಡುಗಿನಮಳೆ, ಸಿಡ್ಲುಮಿಂಚಿನಮಳೆ.

To Shower, v. n. ಮಳೆಗರಿಯು. v. *To rain.* *(to*

pour down or scatter liberally) ಮಳೆಗರಿದಹಾಗೆ ಸುರಿಸ.

Showery, a. ಮಳೆಗರಿಯುವ, ಮಳೆಯಾದ. v. *Rainy.*

Showing, part. ತೋರಿಸುವ, ತೋರಿಸುತ್ತ.

Shown, part. ತೋರಿಸಿದ, ಕಾಣಿಸಿದ, ತೋಚಮಾಡಿದ. v. *Exhibited. (to be shown)* ತೋರಿಸಲ್ಪಡ, ಕಾಣಿಸಲ್ಪಡ.

Showy, Showish, a. ಡಂಬಾಚಾರದ, ಡಾಂಭಿಕದ. v. *Elegant, splendid, brilliant, ostentatious.*

Shred, s. n. ತುಂಡು, ತುನಿಕೆ, ಮುರುಕು. v. *Fragment.*

To Shred, v. a. ತುಂಡುತುಂಡಾಗಿಮಾಡ, ತುಂಡುತುಂಡಾಗಿಕತ್ತರಿಸ.

Shrew, s. n. ಝಗಳಗಂಟಿ, ರಂಪರಾಟಿಕಿ, ರಕ್ಕಸಿ, ಕರ್ಕಸಿ, ಮಾರಿ.

Shrewd, a. *(crafty)* ತಂತ್ರವಾದಿಯಾದ, ತಂತ್ರವಾದ, ಧಾರ್ತ್ಯವಾದದ. v. *Sly, cunning. (malicious)* ಹೊಟ್ಟೆಕಿಚ್ಚಾದ, ಮಚ್ಚರವಾದ, ಘಾತಕತನವಾದ. v. *Bad, dangerous, painful.*

Shrewdly, ad. *(craftily)* ತಂತ್ರವಾದವಾಗಿ, ಚತುರೋಪಾಯವಾಗಿ; *(maliciously)* ಘಾತಕತನವಾಗಿ, ಮತ್ಸರವಾಗಿ.

Shrewdness, s. n. *(craftiness)* ಚತುರೋಪಾಯವು, ತಂತ್ರವಾದವು; *(mischievousness)* ಮಾತ್ಸರ್ಯ, ಘಾತಕತನ.

To Shriek, v. n. ಚೀರ, ಕೀರಿಡ, ಕೀಚಿಡ, ಗುಲ್ಲಿಡ.

Shriek, s. n. ಚೀರು, ಕೀಚು, ಕಿಲರ್, ಕೀರು, ಗುಲ್ಲು.

Shrill, a. ಕೀರುಧ್ವನಿಯ, ಝೇಂಕಾರದ, ಟೀಂಕಾರದ, ಕೀಚು; *(a shrill voice)* ಟೀಂಕಾರಧ್ವನಿ, ಕೀಂಕಾರಧ್ವನಿ, ಕೀಂಕಾರಧ್ವನಿ; *(to make a shrill noise)* ಕೀಚುಕೀಚಿಸ.

Shrilly, ad. ಕೀಂಕಾರವಾಗಿ, ಕೀರುಧ್ವನಿಯಾಗಿ.

Shrillness, s. n. ಕೀಚು, ಕೀರು.

Shrimp, s. n. *(fish)* ಗಲಾವಿಲ, ಗಾಂಗಟಿ, ಗಾಂಗಟಿಯ. v. Also *dwarf.*

Shrine, s. n. ಸಂದುಕ, ಜಾಳಿಗೆ.

To Shrink, v. n. *(become contracted)* ಬಿಕ್ಕೊಳ್, ಮುದರಿಕೊಳ್, ಮುಸಿಯ; *(to shrink, from danger)* ಮುದರಿಕೊಳ್, ಅಂಜರಿಯ.

Shrink, s. n. ಬಿಕ್ಕೊಳ್ಳುವಿಕೆ, ಮುಸಿಯುವಿಕೆ. v. *Contraction.*

To Shrivel, v. n. ಮಡತೆಬೀಳ್, ಸುಕ್ಕಿಹೋಗ, ಸಂಕೋಚಿಸ.

Shrivelled, part. ಮಡತೆಬಿದ್ದ, ಸುಕ್ಕಿಹೋದ. v. *Contracted.*

Shroud, s. n. *(winding sheet)* ಶವದಬಟ್ಟೆ, ಪೆಣದಬಟ್ಟೆ.

To Shroud, v. a. ಗಡಪುಮಾಡ, ಮುಚ್ಚಿಡ. v. Also *to cover, shelter.*

Shrouded, part. ಮುಚ್ಚಿದ, ಗಡಪುಮಾಡಿದ.

Shrub, s. n. ಕೊದರು, ಪೊದೆ, ಚಿಕ್ಕಗಿಡ, ಸ್ತಂಬ, ಗುಲ್ಮ. v. *Bush, tree.*

Shrubby, a. ಪೊದೆಯ, ಕೊದರಿನ, ಗುಲ್ಮದ.

Shrug, s. n. ಕುಕ್ಕರಿಕೆ, ಕುಟಿಕೆ, ಭುಜಹಾರಿಸುವಿಕೆ.

To Shrug, v. n. ಭುಜಹಾರಿಸ, ಕುಕ್ಕರಿಸ, ಕುಸಿಯ.

To Shudder, v. a. ನಡುಗ, ದಿಗುಲುಪಡ, ಕಂಪಾಯಮಾನವಾಗ, ಅದರಿಕೊಳ್. v. *To quake, shake, shiver.*

To Shuffle, v. a. ಟಿಪಾಯಿಸು. v. *To mix, mingle.* (*to shuffle cards*) ಟಿಪಾಯಿಸು, ಲಿಪಾಯಿಸು ; (*to shuffle any thing artfully out of the way*) ಡೋಪಿಕೊಳ್ಳು, ಲಪಟಾಯಿಸಿಕೊಳ್ಳು, ತಸ್ಕರಿಸು, ಚೋರತ್ವಮಾಡು; (*to shuffle, tergiverse*) ಕಾಲದೊಬ್ಬು, ದಿನದೊಬ್ಬು, ನೆಪಹೇಳು. v. *To elude, shift off.* (*to trick*) ದಗೆಮಾಡು, ವಂಚಿಸು, ಮೋಸಮಾಡು. v. *To cheat, defraud.*

Shuffle, s. n. (*mixture*) ಟಿಪಾಯಿಕೆ ; (*an artifice*) ಉಪಾಯ, ತಂತ್ರ, ದಗೆ. v. *Trick, fraud.* (*tergiversation*) ನೆಪ, ನೆವ. v. *Subterfuge, shift.*

Shuffled, part. (*mixed*) ಟಿಪಾಯಿಸಿದ.

Shuffler, s. n. ತಸ್ಕರನು, ಲಪಟಾಯಿಸುವವನು, ವಂಚನೆಕಾರನು. v. *Cheat, knave,* (*a miser*) ಲುಬ್ಧನು, ಮೋಕ್ಷಿ, ಗೂಗೆ.

Shuffling, s. n. (*mingling*) ಟಿಪಾಯಿಸುವಿಕೆ ; (*tricking*) ಚೆಂತ್ರಿಸುವದು, ಠಕ್ಕುಮಾಡುವದು, ಮುಕಾಣೆರಬ್ಬುವದು.

Shufflingly, ad. (*trickingly*) ಲಪಟಾಯಿಕೆಯಾಗಿ, ಚೋರತ್ವವಾಗಿ, ತಸ್ಕರವಾಗಿ.

To Shun, v. a. ತಪ್ಪಿಸಿಕೊಂಡು ಹೋಗು, ವದಗಿಹೋಗು, ಮೋಸೆತಪ್ಪಿಸಿಕೊಂಡು ಹೋಗು, ತಟ್ಟೆಬಿದ್ದುಹೋಗು.

Shunned, part. ದೂರತರವಾದ, ಪರಿವರ್ಜಿತವಾದ, ದೂರವರ್ಜಿತವಾದ.

Shunning, part. ತೊಲಗಿ. ತಪ್ಪಿಸಿಕೊಂಡು.

To Shut, v. a. ಮುಚ್ಚು. v. *To close, fasten.* (*to shut a door*) ಬಾಗಲುಮುಚ್ಚು, ಬಾಗಲುಹಾಕು, ಕದಹಾಕು, ಕದವಿಡು; (*to shut a purse*) ಚೇಲಕಟ್ಟು, ಬಾಯಿಧಾರವೆಳೆಯು; (*to shut up, confine*) ಮುಚ್ಚಿಬಿಡು, ವಳ್ಗೆ ಘೂಕಿಬಿಡು. ಬಂಧಕದಲ್ಲಿಹಾಕಿಬಿಡು. v. *To close, confine, block up, conclude.* (*to shut out*) ಹೊರಗೆದೊಬ್ಬಿಬಿಡು, ಹೊರಗೆಹಾಕಿಮುಚ್ಚು. v. *To exclude, keep out.* (*to shut or be shut*) ಮುಚ್ಚಿಕೊಳ್ಳು, ಮುಕುಳಿತವಾಗು ; (*to shut up shop*) ಅಂಗಡಿಮುಚ್ಚು, ಅಂಗಡಿಹಾಕು ಅಂಗಡಿತೆಗೆಯು; He has *shut* himself up ಅವನು ತಾನು ಮುಚ್ಚಿಟ್ಟುಕೊಂಡಿದ್ದಾನೆ, ಅವನು ತನ್ನ ಮೋಸೆತಪ್ಪಿಸಿಕೊಂಡಿದ್ದಾನೆ ; (*to get shut of a business*) ಪರಿಹರಮಾಡಿಕೊಳ್ಳು.

Shut, part. ಮುಚ್ಚಿದ, ಮುಚ್ಚಿಹಾಕಿದ, ಮುಚ್ಚಲ್ಪಟ್ಟ. v. Also *rid, clear, free.* (*shut up, confined*) ಮುಚ್ಚಿಹಾಕಪಟ್ಟ, ವಳ್ಗೆಹಾಕಿಬಿಟ್ಟ. v. *Imprisoned.* (*the noise made by great gates when shutting*) ಗರಗರ, ಘುರಘುರ.

Shutter, s. n. (*one who shuts*) ಮುಚ್ಚುವವ; (*door*) ಬಾಗಲುಬಿರುಹಲಿಗೆ; (*a window shutter*) ಕಿಟಿಕಿಯಬಿರುಹಲಿಗೆ.

Shuttle, s. n. (*weaving instrument*) ಲಾಳಿ, ಸೂತ್ರಯಂತ್ರ, ಸೂತ್ರವೇಷ್ಟನ.

Shy, a. ಜಾಗ್ರತೆಯ, ಎಚ್ಚರದ. v. *Cautious, wary.* (*not free of behaviour*) ಕಲೆಗಲಪಿಲ್ಲದ, ದೂರತೋಪಾಸ್ತಿಯಾದ. v. *Reserved.* (*suspicious*) ಸಂದೇಹದ, ವಿಸವಸಿಯ.

Sibilant, a. (*hissing*) ಶಿಳ್ಳುಹುಟ್ಟಿಸುವ, ಶಿಳ್ಳಿಡುವ; (*sibilant letters*) ಮೂರ್ಧನ್ಯಾಕ್ಷರ.

Sibilation, s. n. (*hiss*) ಶಿಳ್ಳು.

Sick, a. ಜಡದ, ಜಾಡ್ಯದ, ಜಡ್ಡಿನ, ಸ್ವಸ್ಥ್ಯವಿಲ್ಲದ, ದಣುವಿನ, ಆಯಾಸದ, ರೋಗದ, ಬೇನೆಯ, ವ್ಯಾಧಿಯ; *(sick, disgusted)* ವಾಕರಿಕೆಯ, ಅರೋಚಿಕೆಯ, ಹೇಸಿಕೆಯ; *(disordered in the organs of digestion)* ಅಜೀರ್ಣಯ, ವಾಂತಿಭ್ರಾಂತಿಯ; *(sick and confined to bed)* ರೋಗದಲ್ಲಿಬಿದ್ದ, ಜಡದಲ್ಲಿಬಿದ್ದ, ಬೇನಿಗೆಬಿದ್ದ; *(the food of a sick person)* ಪಥ್ಯ, ಪತ್ರೀವು, ಪರಜು. v. *Regimen.* He fell *sick* ಅವನು ರೋಗದಲ್ಲಿ ಬಿದ್ದ; I am *sick* of it ಅದುನನಗೆಅರೋಚಿಕೆ ಹಿಡಿಯತು, ಅದುನನಗೆ ಬೇಸರಹಿಡಿಯತು, ಅದುನನಗೆ ಮೋರಿಗೆಹಾಕಿಕ್ಕಿತು.

To Sicken, v. n. *(grow sick)* ರೋಗದಲ್ಲಿಬೀಳು, ಜಡದಲ್ಲಿಬೀಳು; *(to make sick)* ರೋಗಬರಮಾಡ, ವಾಂತಿಮಾಡಿಕೊಳ್ಳು, ವಾಕರಿಕೆಕೊಳ್ಳು; *(to be disgusted or weary of)* ಉಬ್ಬಳಿಕೆಯಾಗ, ಅರೋಚಿಕೆಯಾಗ, ತೆವೆಬಿಟ್ಟಿನ, ಮೋರಿಗೆ ಹಾಕಿಕ್ಕ. v. *To be satiated.* *(to decay)* ಬಡತನವಾಗ, ಸವದುಹೋಗ, ಕ್ಷಯವಾಗ, ಇಳಿದುಹೋಗ, ಬಡಕೇಲ. v. Also *to languish.*

Sickle, s. n. ಕುಡುಗೋಲು, ದಾತ್ರ, ಲವಿತ್ರ, ಕುಡ್ಲು.

Sickliness, s. n. ಜಾಡ್ಯತ್ವ, ರೋಗ, ಅಶಕ್ತತನ.

Sickness, s. n. ರೋಗ, ವ್ಯಾಧಿ, ರುಕ್ಕು, ರುಜವು. v. *Disease.*

Side, s. n. ಪಕ್ಕೆ, ಕಡೆ, ಪಾರ್ಶ್ವ, ಕುಚಂಬದಿ, ಪಕ್ಷ, ಭಾಗ, ದಿಶಾ, ಬದಿ; *(the right side)* ಬಲಗಡೆ, ದಕ್ಷಿಣಾದಿಶೆ; *(the left side)* ಯಡಗಡೆ, ವಾಮದಿಶೆ; *(the outside of the hand)* ಹೊರಗೈಯ್ಯಿ, ಮೇಲುಕೈಯ್ಯಿ; *(the inside of the hand)* ವಳಗೈಯ್ಯಿ, ಅಂಗೈಯಿ; *(the side of the neck)* ಹೆಡಕು; *(the side of the face)* ಚಂಪೆ, ಕೆಂವೆ. v. *Jaw, cheek.* *(the side of the head)* ಕಣತಲೆ; *(the side of the body)* ಪಕ್ಕೆ, ಬಗಲು, ಕಿಕ್ಕೆ, ಪಕ್ಕ; *(the side of a mountain)* ಗುಡ್ಡದಪಕ್ಕೆ; *(the side of a house)* ಮನೇಪಕ್ಕೆ; *(near the side, by the side, close to the side)* ಹತ್ತರ, ಬದೀಲಿ; *(a stitch in the side)* ಪಕ್ಕೆಚಳುಕು. v. *Pleurisy.* *(both sides)* ಯರಡುಕಡೆ, ಇರ್ಕಡೆ, ಉಭಯಪಾರ್ಶ್ವ, ಇಕ್ಕೆಲ, ಇರುಬಗೆ; *(from side to side)* ಈಚೆಗೆಆಚೆಗೆ, ಆಕಡಿಗೆಈಕಡಿಗೆ; *(led by the side, as a horse)* ವಾರಿಗೆವೈಪಟ್ಟೆ, ಜೋಡಾಗಿವೈಪಟ್ಟೆ; *(to lead by the side)* ತೆಟ್ಟುಬಿದ್ದುವೈಯ್ಯ, ಬಗಲಾಗಿವೈಯ್ಯ, ವಾರ್ಯಾಗಿವೈಯ್ಯ. v. Also *margin, edge, verge, faction, party, sect.* *(the other side of the river)* ನದಿಆಚೇಕಡೆ, ನದಿಆಚೇಲಿ; He spoke on my *side* ಅವನು ನನ್ನಪಕ್ಷವಾಗಿ ಮಾತಾಡಿದನು; On whose *side* are you? ನೀನುಯಾರಕಡೆಯವ; *(the sea side)* ಸಮುದ್ರತೀರ, ಸಮುದ್ರದಂಡು, ಸಮುದ್ರದಸಾಮೀಪ್ಯ; *(that side)* ಅತ್ತ, ಅತ್ತಲು, ಆಚೇಲಿ, ಆಚೆಕಡೆ, ಅತ್ಲಾಗಿ; *(this side)* ಇತ್ತ, ಇತ್ತಲು, ಈಚೇಲಿ, ಈಚೆಕಡೆ; *(which side)* ಯಾವಕಡೆ, ಎತ್ತ, ಎತ್ತಲು.

Side, Sidelong, a. ಬಗಲಾಗಿ, ವಾರೆಯಾಗಿ. v. *Lateral, oblique.* *(a sidewind)* ಬಗಲುಘಾಳಿ, ಪಕ್ಕೆಘಾಳಿ; *(sideglance)* ವಾರಿನೋಟ, ಕಟಾಕ್ಷ.

To Side, v. n. *(take a party)* ಪಕ್ಷಪಾತಿಯಾಗ, ಪಂಥಕಡೆಗೆಹೋಗ, ಪಕ್ಷಸ್ಥನಾಗ.

Sidelock, s. n. ಜುಲುಪೆ.

Sideways, ad. ಪಾರ್ಶ್ವವಾಗಿ, ಬಗಲಾಗಿ. v. *Obliquely.*

Siege, s. n. ಮುತ್ತಿಗೆ.

To Siege, v. a. ಮುತ್ತಿಗೆಹಾಕ. v. *Besiege.*

Sieve, s. n. ಜಲಡಿ, ಜಾಲಿನಿ, ತಿತಉವು.

To Sift, v. a. ಜಲಡಿಯಿಡಿಯ, ಶೋಧಿಸ, ಜಾಲಿಸ. v. *To separate, examine, try.*

Sifter, s. n. ಜಲಡಿಯಿಡಿಯುವವ.

Sifted, part. ಜಲಡಿಯಿಡಿದ, ಶೋಧಿಸಿದ.

To Sigh, v. n. ಉಶ್ವಾಸಬಿಡ, ಉಸುರುಬಿಡ, ಉಸ್ಸೆನ, ಉಸುರಿಸ. v. *To lament, mourn.* (*to sigh after*) ಜೋರಾಕುಕೊಂಡಿರ, ಆಶೆಪಡ, ಬಗಿಸ, ಆಕಾಂಕ್ಷಿಸ, ಮನಗೊಳ್ಳ. v. *To desire.*

Sigh, s. n. ಉಸುರು, ನಿಟ್ಟುಸುರು, ಮಗದ್ದೇಕಡೆ; (*an ardent sigh*) ದೀರ್ಘಶ್ವಾಸ, ಬಿಸುಸುಯುವ.

Sight, s. n. ದ್ರಿಷ್ಟಿ, ನೋಟ, ಗೋಚರ, ತೋಚುವಿಕೆ, ಅಚ್ಚೆ, ಮಾಲಿ, ದಿಟ್ಟಿ, ಪೆಕ್ಕಣ. v. *Eye, view, show, spectacle, notice, knowledge.*

Sighted, a. ದೃಷ್ಟಿಯುಳ್ಳ, ನೋಟವುಳ್ಳ, ಪಾಟವುಳ್ಳ; (*dimsighted*) ಮಾಲೆಗಣ್ಣ, ಮಂಜುಗಣ್ಣ; (*quicksighted*) ಕಾಗಿಗಣ್ಣ, ಗರುಡದ್ರಿಷ್ಟಿಯವ; (*shortsighted*) ಚಾಟಿಗಣ್ಣ.

Sightless, a. ಕುರುಡ, ಅಂಧಕ, ಕಣ್ಣಿಲ್ಲದ, ನೋಟಯಿಲ್ಲದ, ಕಾಣಬಾರದ. v. *Blind, hideous*

Sightly, ad. ಚೆಲುವಿಕೆಯ, ಸುಂದರದ, ಶೃಂಗರದ, ಸೊಗಸಿನ. v. *Beautiful.*

Sign, s. n. ಗುರುತು, ಇಂಗ, ಕುರುವು, ಕಾನ, ಗೊತ್ತು, ಕುರುಹು, ಕಾಮ; (*miracle*) ಅದ್ಭುತ, ಆಶ್ಚರ್ಯ; (*a sign manual*) ರುಜುವು. v. *To ken, wonder, miracle, symbol, type, constellation.* (*the rising of a new sign in the heavens*) ಲಗ್ನಸಂಕ್ರಮಣ; (*to make a sign*) ಸಂಜ್ಞೆಮಾಡ.

To Sign, v. a. (*mark*) ಗುರುತುಹಾಕ, ಗುರುತುಮಾಡ, ಗೊತ್ತಿಡ; (*with name or mark*) ರುಜುವುಮಾಡ, ಮುದ್ರೆಹಾಕ, ಕೈಬರಹಬರಿಯ, ವಪ್ಪಿತಹಾಕ, ದಸ್ಕತುಮಾಡ. v. *To seal, ratify.*

Signal, s. n. ಸಂಜ್ಞೆ, ಕೋವರಗುರುತು, ಇಶಾರ್ತಿ. v. *Sign.* (*a signal for battle*) ರಣವಾದ್ಯ, ಕಾಚುನಗಾರಿ; (*a signal with the eye*) ಕಣ್ಣುಸಂಜ್ಞೆ, ಕಣ್ಣುಮಿಟಿಕಿಕೊಳ್ಳುವಿಕೆ.

Signal, a. (*eminent, memorable*) ಗುರುತಾದ, ಹೆಸರಾದ, ಪ್ರಖ್ಯಾತಿಯಾದ, ಪ್ರಸಿದ್ಧಿಯಾದ, ಅದ್ಭುತವಾದ. v. *Remarkable, conspicuous.*

To Signalize, v. a. (*make eminent*) ಪ್ರಖ್ಯಾತಿಮಾಡ; (*to signalize one's self*) ಹೆಸರುಪಡೆಯ, ಪ್ರಖ್ಯಾತಿಹೊಂದ, ಕೀರ್ತಿಸಂಪಾದಿಸಿಕೊಳ್ಳ.

Signally, ad. ವಿಚಿತ್ರವಾಗಿ, ಅದ್ಭುತವಾಗಿ, ದಿಗಂತವಿಭ್ರಾಂತವಾಗಿ, ಹೆಸರಾಗಿ.

Signature, s. n. ರುಜುವು, ಗುರುತು, ಕೈಬರಹ, ದಸ್ಕತು, ವಪ್ಪಿತ. v. *Mark, stamp, seal.* (*the royal signature*) ರಾಜಮುದ್ರೆ, ಅರಸಿನದಸ್ಕತು, ಸರಕಾರದರುಜುವು, ಅರಸಿನಸಿಖೆ.

Signet, s. n. ಮುದ್ರೆ, ಶಿಖೆ.

Significance, Significancy, s. n. (*meaning*) ಅರ್ಥವು, ಟೀಕು. v. *Signification.* (*importance*) ಪ್ರಯೋಜನವು, ಕೆಲಸವು; (*force*) ಮಜಬೂತು, ಘಟ್ಟಿಮುಟ್ಟು, ಜೋರು, ಜಬರದಸ್ತು.

Significant, Significative, a. (*having a meaning*) ಅರ್ಥವುಳ್ಳ, ಕಾರಣವುಳ್ಳ, ಹೇತುವೆಯುಳ್ಳ; (*important, momentous*) ಪ್ರಯೋಜನದ, ಕೆಲಸದ, ಅಗತ್ಯದ.

Significantly, ad. (*with force of expression*) ಜಬರದಸ್ತಾಗಿ, ಬಂದುಕಟ್ಟಾಗಿ, ಜೋರಾಗಿ, ಘಟ್ಟಿಮುಟ್ಟಾಗಿ, ಬಂದೋಬಸ್ತಾಗಿ, ಮುಖ್ಯಾರ್ಥವಾಗಿ.

Signification, s. n. ಅರ್ಥ, ಟೀಕು, ಟಿಪ್ಪಣಿ, ಅನ್ವಯ; (*the evident signification*) ಬೈಲಾದರ್ಥ, ಪ್ರಸಿದ್ಧಿಯಾದರ್ಥ; (*the signification of the words*) ಮಾತುಗಳರ್ಥ, ವಚನಾರ್ಥ; You give a different *signification* to him ನೀನು ಹೇಳುವ ಅರ್ಥವು ಅವನು ಹೇಳುವ ಅರ್ಥವು ಬ್ಯಾರೆ, ನಿನ ಅವನ ಅರ್ಥವು ಬಹುಹೆಚ್ಚುಕಡಮೆ; Can you tell me the *signification* of this? ಇದರ ಅರ್ಥವನ್ನು ನೀನು ನನಗೆ ಹೇಳುವಿಯಾ, ಇದರ ಟೀಕನ್ನು ನೀನು ನನಗೆ ಹೇಳಲಾಪಿಯಾ.

Signified, part. (*intimated*) ತಿಳಿಸಿದ, ಸೂಚನೆ ಮಾಡಿದ.

To Signify, v. n. (*have a meaning*) ಅರ್ಥವಾಗ, ಅರ್ಥಕೊಡ; (*to intimate, make known*) ತಿಳಿಸ, ಹೇಳ; What does that *signify*? ಅದೇನು, ಅದರ ಅರ್ಥವೇನು, ಹಾಗಂದರೇನು; It *signifies* nothing ಅದೇನೂ ಅರ್ಥಕೊಡುವದಿಲ್ಲ, ಅದರಿಂದೇನೂ ಸಾರ್ಥಕವಿಲ್ಲ.

Signifying, a. (*having a meaning*) ಅರ್ಥವುಳ್ಳ; (*giving notice*) ಅರುಹಿ, ತಿಳಿಸಿ; (*signifying nothing*) ಏನಿಲ್ಲ, ವಂದಿಲ್ಲ, ಅಕ್ಕರೆಯಿಲ್ಲ, ಏನೂ ಅರ್ಥವಿಲ್ಲ.

Silence, s. n. ಮೌನ, ಸುಮ್ಮನೆಯಿರುವಿಕೆ, ನಿಶ್ಶಬ್ದ. v. *Secresy.* (*keep silence*) ಸುಮ್ಮನೆಯಿರು, ಬಾಯಿಮುಚ್ಚು.

To Silence, v. a. ಸುಮ್ಮನೆಯಿರಿಸ, ಸದ್ದಣಗಿಸ, ಗಲುಗುನಿಲ್ಲಿಸ; (*to silence in argument*) ಬಾಯಿಮುಚ್ಚಿಸ, ಕಕ್ಷಿನಿಲ್ಲಿಸ, ಬಾಯಿಕಟ್ಟೆ.

Silent, a. ಮೌನದ, ಸುಮ್ಮನೆಯಿರುವ, ನಿಶ್ಶಬ್ದದ; (*to be silent*) ಸುಮ್ಮನೆಯಿರ, ಮೌನವಾಗಿರ, ಮೂಗುವಡ; (*a silent man*) ಮೌನಾಪಶಿ, ಸಕ್ಷ್ಯ, ಮೇದಕ; (*be silent*) ಸುಮ್ಮನೆಯಿರು, ಬಾಯಿಮುಚ್ಚು.

Silently, ad. ಮೌನವಾಗಿ, ಸುಮ್ಮನೆ.

Silk, s. n. ರೇಶಿಮೆ; (*raw silk*) ಶಾಂಬು; (*unspun silk*) ಹಸೀರೇಶಿಮಿ, ತೋಡದರೇಶಿಮಿ, ಗಜ್ಜುರೇಶಿಮಿ; (*figured silk*) ಮುಖಮಲ್, ಕಿಂಖಾಪು, ದಮಾಸು, ರೂಪ್ವಿನ ಹಚ್ಚಡ, ರೂಪ್ವಿನ ಶೀರೆ; (*plain silk*) ತಾಪ್ತಿ, ಪಟ್ಟೆಮಗಟೆ; (*a roll or bale of silk*) ಸುರಳಿ, ತಾಪ್ತಿಸುರಳಿ; (*dressed silk*) ತೋಡಿದರೇಶಿಮಿ.

Silk, Silken, a. ರೇಶಿಮಿಯ; (*silk cloth*) ತಾಪ್ತಿ; (*a silk garment*) ರೇಶಿಮಿವಸ್ತ್ರ.

Silkmercer, s. n. ಸೂರ್ತಿವರ್ತಕ, ಪೈಠಣಿವರ್ತಕ, ರೇಶಿಮಿವರ್ತಕ.

Silkweaver, s. n. ರೇಶಿಮಿಬಟ್ಟೆನೆಯ್ಯುವವ.

Silkwinder, s. n. ರೇಶಿಮಿತೋಡುವವ.

Silkworm, s. n. ರೇಶಿಮಿಹುಳ.

Silky, v. *Silken, smooth, soft, pliant.*

Sill, s. n. (*stone or timber at the foot of a door*) ಹೊಸ್ತಲು. v. *Threshold.*

Sillily, ad. ಪಾಮರತ್ವವಾಗಿ, ಅರಮರಿಕೆಯಿಲ್ಲದವನಾಗಿ, ಭ್ರಾಂತಿಗೇಡಾಗಿ, ಯಡ್ಡಾಗಿ, ಯೆಕ್ಕಂಠಾಗಿ. v. *Simply.*

Silliness, s. n. ಹುಚ್ಚುತನ, ಮಂದಮತಿ, ಧಡ್ಡತನ. v. *Stupidity, folly.* (*harmlessness*) ಪಾಮರತ್ವ, ಎಕ್ಕಂಕತನ, ಮರುಳುತನ. v. *Simplicity.*

Silly, a. ಎಕ್ಕಂಕತನದ, ಭ್ರಾಂತಿಗೇಡಿಯ, ಕಿಂಪಾಕ. v. *Foolish, trifling*; also *harmless, simple, weak, helpless.*

Sillyhow, s. n. (*membrane which envelopes the child in the womb*) ಪಿಂಡಕೋಶ, ಜವೆ.

Silver, s. n. ಬೆಳ್ಳಿ, ರೌಪ್ಯ, ರಜತ, ಪಿಂಜರಿ, ದುರ್ವರ್ಣ, ಖರ್ಜೂರ, ಶ್ವೇತ; (*a bar of silver*) ಬೆಳ್ಳಿಘಟ್ಟಿ, ಬೆಳ್ಳಿಗಟ್ಟಿ; (*a silver mine*) ರಜತಖನಿ, ಬೆಳ್ಳಿಪುಸುಬು, ಬೆಳ್ಳಿಗನಿ; (*the dross of silver*) ಬೆಳ್ಳಿಕಿಟ್ಟ, ಮಷ್ಟು, ಬೆಳ್ಳಿಕಸುರು, ಬೆಳ್ಳಿಕಲ್ಮಷ; (*pure silver*) ರಾಜಾಬೆಳ್ಳಿ, ಅಚ್ಚಬೆಳ್ಳಿ, ಚೊಕ್ಕಬೆಳ್ಳಿ; (*unrefined silver*) ಕಂದುಬೆಳ್ಳಿ; (*refined silver*) ಶೋಧಿಸಿದಬೆಳ್ಳಿ, ಊದಿದಬೆಳ್ಳಿ; (*gold and silver*) ಭಂಗಾರಬೆಳ್ಳಿ, ಬೆಳ್ಳಿಭಂಗಾರ, ಚಿಂನಾಬೆಳ್ಳಿ; (*hammered silver*) ತಗಡುಬೆಳ್ಳಿ, ಬೆಳ್ಳಿತಗಡು, ರೇಕಾದಬೆಳ್ಳಿ; (*melted silver*) ಕರಗಿಸಿದಬೆಳ್ಳಿ, ಕಾಸಿದಬೆಳ್ಳಿ; (*silver from the mine*) ಬೆಳ್ಳಿರಜ, ರಜದಬೆಳ್ಳಿ; (*filings or cuttings of silver*) ಬೆಳ್ಳಿರಜವು; (*money of bad silver*) ಖೋಟಾರುಪಾಯಿ, ಸಲ್ಲದರೊಕ್ಕ; (*a globule or particle of silver*) ಬೆಳ್ಳಿಚೂರು, ಬೆಳ್ಳಿಝುಸುಕು; (*quicksilver*) ಪಾದರಸ; (*a silver zone worn by females*) ಡಾಬು, ವಡ್ಡ್ಯಾಣ, ಮೇಖಲೆ; (*a silver chain worn on the wrist*) ಕಡಗಸರಪಳಿ; (*a silver chain worn on the neck*) ಮುರದಿಸರಪಳಿ, ರಾಯಿತಸರಪಳಿ, ಕರಡಿಗೆಸರಪಳಿ; (*a silver ring worn on the great toe*) ಅಣೆಮೆಟ್ಟು, ಮೆಂಟ್ಟಿಕೆ, ಕಾಲುಸುತ್ತು; (*a silver ring worn on the second toe*) ಕಾಲುಂಗರ; (*a silver ring worn on the third*) ಗಣಾಮೆಟ್ಟು; (*a silver ring worn on the fourth*) ಪಿಲ್ಲಿ; (*a silver ring worn on the fifth*) ಮೀನು; (*the highest silver ornament worn on the leg*) ಪಾಗಡ; (*the next under*) ಕಡಗ; (*silver leg-bells*) ಗೆಜ್ಜೆ; (*silver leg-chains*) ಸರಪಳಿ; (*a flat or plaited chain with bells for the leg*) ಉಲ್ಲು; (*a silver ornament worn immediately above the foot*) ಅಂದಿಗೆ, ಪೈಜಣೆ; (*silver rings for the thumb*) ನಾಗರವುಂಗರ, ಡಿಬ್ಬೋಟುಂಗರ; (*silver rings for the first finger*) ವಂಕಿಯುಂಗರ; (*silver rings for the third finger*) ಸತ್ತಿಗೆಯುಂಗರ, ಬಸವನವುಂಗರ, ಕಳಸದವುಂಗರ; (*silver rings for the little finger*) ಗೋಲು; (*a silver girdle worn by men*) ಬೆಳ್ಳಿವುಡುದಾರ; (*a string of silver beads worn on the waist*) ಬುಲ್ಲಿಗೆಜ್ಜೆ.

Silver, a. ಬೆಳ್ಳಿಯ; *(the colour of silver)* ಬೆಳ್ಳಿವರ್ಣ.

To Silver, v. a. *(cover with silver)* ಬೆಳ್ಳಿಮುಲಾಮುಮಾಡು, ಬೆಳ್ಳಿನೀರುಮಾಡು, ಬೆಳ್ಳಿಮುಡಾಯಿಸು.

Silversmith, s. n. ಅಕ್ಕಸಾಲೆ.

Similar, a. ತದ್ರೂಪವಾದ, ಅನುರೂಪವಾದ, ಸಾದೃಶ್ಯವಾದ, ಸಾಮ್ಯವಾದ, ಸಮಾನವಾದ, ಹೋಲಿಕೆಯಾದ. v. *Like.*

Similarity, s. n. ಈಡು, ಸಮಾನತ್ವ, ಪಡಿ, ಪಾಟಿ, ಸಾಟಿ, ಪಾಂಗು, ಪಾಸಟಿ, ಜೋಡು, ಎಣೆ, ತರಂಗ, ಅನುರೂಪ, ಸಾಮ್ಯ, ಸಾದೃಶ್ಯ, ಸಮಾನ, ಹೋಲಿಕೆ, ತದ್ರೂಪ. v. *Resemblance, likeness, equality, sameness.*

Simile, s. n. ಸಾಮ್ಯ, ಉಪಮಾನ, ದೃಷ್ಟಾಂತ, ರೀತಿ. v. *Comparison.*

To Simmer, v. n. *(boil gently)* ಜುಂಮನೆಕಾಯು, ಮಸಳು, ಎಸರುಕಾಯು.

Simony, s. n. ಮಠದಮುದ್ರಿತನ.

Simper, s. n. ಮಂಗನಗೆ, ಎತ್ರಿನಗೆ, ಹಲ್ಲುಗಿಸಿಕೆ. v. *Smile.*

To Simper, v. n. ಹಲ್ಲುಗಿಸಿಯು, ನಗು, ಹಲ್ಲುತೆರಿಯು.

Simple, a. *(not compound)* ತಾಜ, ಅಚ್ಚವಾದ, ತಜ್ಜಾತಿಯಾದ, ಪೂರಾ, ತನ್ಮಯವಾದ, ಅಪ್ಪಟ, ತಾನೆತಾನು; *(single)* ಒಂದೊಂದೆ, ಏಕೈಕ, ಬಿಡಿ, ಬಿಚ್ಚು; *(artless, unskilful, weak in understanding)* ಮರುಳಿನ, ಮೂಢ; ಮಡ್ಡ, ಕಡ್ಡ; *(harmless, undesigning)* ಭೇದ, ಸಾಚ, ನಿಷ್ಕಪಟ, ನಿರ್ಮಳ, ನಿಚ್ಚಳ, ಸಸುವುತನದ. v. *Innocent, guileless.*

Simple, s. n. *(in botany)* ಗಿಡಮೂಲಿಕೆ, ಗಿಡಗಂಟೆ. v. *Herb.*

To Simple, or gather Simples, v. n. ಗಿಡಮೂಲಿಕೆತರು.

Simpleton, s. n. ಹುಚ್ಚುಪುರುಳ, ಯತ್ರಿಮಂಗ, ಪತ್ರಿ, ವತ್ರಿ, ಬಾದಸ್ರು.

Simplicity, s. n. *(plainness, without cunning or deceit)* ನಿರ್ವಂಚನೆಯು, ಸಾಚಾತನ, ನಿಷ್ಕಪಟವು; *(without abstruseness)* ನಿರ್ಮಲವು, ಸ್ಪಷ್ಟವು, ಸುಲಭವು; *(without finery)* ಸಾದ, ಬೋಳ, ಯೇಕತರಹ, ವಂದೇಬಗೆ, ಸಾದೋಡಿಯಾದ; *(singleness, without composition)* ಅಚ್ಚು, ತನ್ಮಯವು, ಅಸಲ್, ಅಪ್ಪಟ, ಚೊಕ್ಕ, ಪಕ್ಕ; *(weakness, silliness)* ಮೂಢತನ, ಮಡ್ಡತನ, ಮರುಳುತನ, ಯೆಡ್ಡುತನ.

Simply, ad. *(without experience)* ತಿಳಿಯದೆ, ಅರಿಯದೆ, ಬಾಯಿಅರಿಯದೆ, ಸದುತರಿಯದೆ; *(without artifice)* ನಿರ್ವಂಚನೆಯಾಗಿ, ನಿಷ್ಕಪಟವಾಗಿ, ನಿಷ್ಕಾಪಟ್ಯವಾಗಿ; *(foolishly)* ಹುಚ್ಚುತನವಾಗಿ, ಯಡ್ಡುತನವಾಗಿ, ಬುದ್ಧಿಹೀನವಾಗಿ, ಬುದ್ಧಿಶೂನ್ಯವಾಗಿ; *(solely, merely)* ಮಾತ್ರ.

Simulation, s. n. ವಂಚನೆಯು, ಕಪಟವು, ವೇಷವು, ಕೃತ್ರಿಮವು. v. *Dissimulation, hypocrisy.*

Simultaneous, a. *(acting together)* ಏಕರೂಪಿನ, ಏಕಸಮ, ಒಂದೇಕುಡಿಪಿನ; *(existing together)* ಏಕಕಾಲದಲ್ಲಿಯಿರುವ, ಕಾಲಕರ್ಮಸಂಯೋಗದ.

Sin, s. n. ಪಾಪ, ದೋಷ, ಕಿಲ್ಬಿಷ, ಕಲ್ಮಷ, ಕಲುಷ, ಅಘ, ದುರಿತ, ದುಷ್ಕೃತ, ಪಂಕ, ವೃಜಿನ, ಏನ, ಅಂಹ. v. *Wickedness, crime, fault.* The most usual sins mentioned by Hindoo writers are, ಬ್ರಹ್ಮಹತ್ಯೆ *the murder of a bramin;* ಸುರಾಪಾನ *drinking spirits;* ಸ್ವರ್ಣಸ್ತೇಯ *stealing gold;* ಗೋಹತ್ಯೆ *killing a cow;* ಗುರುತಲ್ಪಗಮನ *illicit intercourse with the wife of a spiritual guide.* (*original sin*) ಜನ್ಮಾಂತರಪಾಪ, ಜನ್ಮಪಾಪ; (*the pardon of sin*) ಪಾಪವಿಮೋಚನೆ, ಪಾಪನಿವರ್ತನೆ, ಪಾಪಪರಿಹಾರ, ಪಾಪನಿವಾರಣ, ದುರಿತಹರಣ; (*repentance for sin*) ಪಾಪದ ಪಶ್ಚಾತ್ತಾಪ, ಪಾಪದ ಚಿಂತೆ, ಪಾಪದ ಮನಸ್ತಾಪ, ಪಾಪದ ವ್ಯಾಕುಲ; (*abandonment of sin*) ಪಾಪವಿಸರ್ಜನೆ, ಪಾಪಪರಿತ್ಯಾಗ, ಪಾಪಬಿಡುವಿಕೆ; (*abhorrence of sin*) ಪಾಪೋಲ್ಲಂಘನ, ಪಾಪವಿರೋಧ, ಪಾಪಹಗೆಗೊಳ್ವಿಕೆ.

To Sin, v. n. ಪಾಪಮಾಡು, ಪಾಪಕರ್ಮಮಾಡು, ದೋಷವಾಚರಿಸು.

Since, ಲಾಗಾಯತು, ತಾಗಾಯತು. It is a long time *since* it happened ಇದು ಸಂಭವಿಸಿ ಬಹಳ ದಿವಸವಾಯಿತು, ಇದಾಗಿ ಬಹಳ ಕಾಲವಾಯಿತು; (*ever since*) ಅಂದಿನಿಂದ, ಆಹೊತ್ತಿನಿಂದ, ಆಗಿನಿಂದ; (*since the break of day*) ಸೂರ್ಯೋದಯದಿಂದ, ಅರುಣೋದಯದಿಂದ, ಪ್ರಾತಃಕಾಲದಿಂದ; (*one year since*) ಒಂದು ವರುಷದಿಂದಾ, ಒಂದು ಸಂವತ್ಸರದಿಂದ; It is not four days *since* ಅದು ಆಗಿ ನಾಲ್ಕು ದಿವಸವಿಲ್ಲ, ನಾಲ್ಕು ದಿವಸವಿಂನು ಆಗಲಿಲ್ಲ; (*long since*) ಬಹಳ ದಿವಸದಿಂದ, ಬಹುಕಾಲದಿಂದ; *Since* it is so ಅದು ಹಾಗೆಯಿರುವಾಗ್ಯೆ, ಅದು ಹಾಗೆಯಿದ್ದರೆ, ಅದು ಆ ಪರಿಯಲ್ಲಿರುವಾಗಲು.

Sincere, a. ನಿರ್ವಂಚನೆಯ, ನಿಷ್ಕಪಟದ, ಸತ್ಯತ್ವದ, ಯಥಾರ್ಥದ. v. *Honest.* (*unmixed*) ಅಪ್ಪಟ, ಅಚ್ಚವಾದ, ನಿಚ್ಚಳದ, ಸ್ವಚ್ಛವಾದ, ತಾಜ. v. *Pure.* (*a sincere heart*) ನಿಷ್ಕಪಟಹೃದಯ, ನಿರ್ವಂಚನೆಹೃದಯ, ಯಥಾರ್ಥಹೃದಯ.

Sincerely, ad. ನಿಷ್ಕಾಪಟ್ಯವಾಗಿ, ನಿರ್ವಂಚನೆಯಾಗಿ.

Sincerity, s. n. ನಿಷ್ಕಾಪಟ್ಯ, ಯಥಾರ್ಥತ್ವ, ನಿರ್ವಂಚನೆಯು.

Sinew, s. n. ಬಿಗಿನರ, ಬಾರನರ. v. *Tendon, muscle.*

Sinewed, Sinewy, a. ನರದ, ನಾರಾದ. v. *Strong, muscular.* (*the back sinews of the knee joint*) ಮುರಿನರ, ಮೊಣಕಾಲುಮುರಿನರ.

Sinful, a. ಪಾಪದ, ದೋಷದ, ದ್ರೋಹದ. v. *Wicked, impious.* (*a sinful action*) ಪಾಪಿಷ್ಠತನ, ಪಾಪಕರ್ಮ, ದ್ರೋಹಬುದ್ಧಿ, ದ್ರೋಹಚಿಂತನ, ದುಷ್ಕೃತ, ಕಾಗ್ಗತೆ; (*a sinful man*) ಪಾಪಿ, ಕರ್ಮಿ, ದ್ರೋಹಿ.

Sinfully, ad. ಪಾಪಿಷ್ಠತನವಾಗಿ, ಕರ್ಕೋಟಕತನವಾಗಿ.

Sinfulness, s. n. ಪಾಪಿಷ್ಠತನ, ದ್ರೋಹತ್ವ, ಪಾಪಕರ್ಮ, ಅಕೃತ್ಯ. v. *Sin.*

To Sing, v. a. ಹಾಡು, ಪಾಡು, ಗಾನಮಾಡು.

(to sing in harmony with another) ಶೃತಿಸೇರಿಹಾಡ, ಮೇಳವಾಗಿಹಾಡ, ಸಂಮೇಳವಾಗಿಹಾಡ, ಸಂಮಿಳಿತವಾಗಿಹಾಡ.

To Singe, v. a. ಹೊಗೆಹೂರ, ಶಕ್ಷಿತಗಲ. v. *To scorch.*

Singer, s. n. ಗಾಯಕ, ಸಂಗೀತಗಾರ, ಗವಾಯಿ, ಗಾನಿ, ಪಾಠಕ, ಪಾಡುವವ; *(a female singer)* ಸಂಗೀತಗಾರ್ತಿ, ಗಾಯಕಿ, ಪಾಠಕಳು, ಭೋಗದವಳು, ಹಾಡುಗಾರ್ತಿ, ಪಾಡುಗಾರ್ತಿ.

Singing, s. n. ಹಾಡಿಕೆ, ಪಾಡಿಕೆ, ಗಾನ, ಗಾಯನ; ಸಂಗೀತವಿದ್ಯಾಸರು, ಗಾನೋಪದೇಶಕ.

Single, a. ಒಂದೆ, ಏಕ, ತಾನೇತಾನು. v. *Simple.* *(individual)* ಏಕ, ಒಂಟಿಯಾಗಿ. v. Also *alone, solitary.* *(unmarried)* ಏಕಾಂಗಿಯಾದ, ಬ್ರಹ್ಮಚರ್ಯದ, ಮದಿವೆಯಿಲ್ಲದ; *(a single person, an individual)* ವ್ಯಸು, ಏಕಾಂಗಿ; *(an unmarried person)* ಬ್ರಹ್ಮಚಾರಿ, ಮದಿವೆಯಿಲ್ಲದವ. v. *Bachelor.* *(a single life)* ಒಂಟಿಬಾಳ್ವೆ, ಪರದೇಶಿತ್ವ; *(a single moment)* ಒಂದುಕ್ಷಣ; *(a single time)* ಒಂದಾವರ್ತಿ, ಒಂದುವೇಳ್ಯ, ಒಂದುಸಾರಿ. v. *Once.* *(a single horseman)* ಒಂಟಿಕುದುರೆಯವ; *(a single soled shoe)* ಏಕಅಟ್ಟೆಚೆಪ್ಪಲಿ, ಒಂಟಿಅಟ್ಟೆಪಾಪಾಸು.

To Single out, v. a. ಆರಿಸಿತೆಗೆದುಕೊಳ್ಳ. v. *To choose, select.*

Singleness, s. n. ಸಾಚಾತನ, ನಿಷ್ಕಪಟತ್ವ. v. *Simplicity, sincerity.*

Singly, ad. ಬೇರೆಬೇರಾಗಿ, ಒಂಟಿಒಂಟಿಯಾಗಿ.

Singular, a. ಒಂಟಿಯ, ಏಕ, ಏಕಾಕಿನ. v. *Single.* *(uncommon, rare)* ಅಪುರೂಪದ, ಅಪೂರ್ವದ, ಆಶ್ಚರ್ಯದ, ಅಚ್ಚರಿಯದ; *(any thing singular or rare)* ಕಾಲಯೋಷ್ಯ, ಉತ್ಪಾತ, ಅಪೂರ್ವ. v. *Rarity.* *(the singular number, in grammar)* ಏಕವಚನ, ಒಂಟಿಮಾತು; *(to be singular in opinion)* ವಿಪರೀತಆಲೋಚನೆಯಾಗಿರ.

Singularity, s. n. ಏಕಾಂಗತ್ವ; *(peculiarity)* ಒಂದೇಗುಣ, ನೈಜಗುಣ, ನಿಕರವಾದಗುಣ, ಮುಖ್ಯವಾದಗುಣ; *(capriciousness)* ಮನಸುಖರಾಯತ್ವ, ಕ್ಷಣಾರ್ಧಂಗರತ್ವ; *(rarity)* ಅಪರೂಪತ್ವ.

To Singularize, v. a. ಪ್ರಖ್ಯಾತಿಮಾಡ, ಪ್ರಸಿದ್ಧಿಮಾಡ, ಪ್ರಬಲಮಾಡ.

Singularly, ad. ಇಂಗಡಿಂಗಡವಾಗಿ, ಒಂಟೊಂಟ್ಯಾಗಿ, ಬೇರೆಬೇರಾಗಿ, ಬಿಡಿಬಿಡಿಯಾಗಿ. v. *Singly.* *(uncommonly)* ಅಪುರೂಪವಾಗಿ, ಕದಾಚಿತ್ತಾಗಿ.

Sinister, a. *(left)* ಎಡಗೈಯ್ಯ; *(bad, unfair)* ಬದ್ಧಿನ, ಅಪ್ರಮಾಣಿಕದ, ಅಧರ್ಮದ. v. *Dishonest, iniquitous, perverse.*

To Sink, v. n. *(in water)* ಮುಣುಗ; *(to cause to sink under water)* ಮುಣುಗಿಸ; *(to penetrate, enter)* ನೀರುಹತ್ತ, ನೀರುಂಡಿದಿಯ, ನೀರುವ್ಯಾಪಿಸ, ಇಮರ, ಇಗರ, ಅಟ್ಟಿಸ; *(to sink in value)* ಬೆಲೆಯಿಳಿಯ, ಧಾರಣೆತಗ್ಗ; *(to sink from a higher to a lower state)* ಇಳಿಯ, ಇಳಿತರವಾಗ; *(to sink, degrade)* ಕುಂಗಿಸ, ತಗ್ಗಿಸ. v. Also *to depress, oppress.* *(to sink, decrease)*

ಇಳಿಯು, ಕೊರತೆಯಾಗು, ಕಡಿಮೆಯಾಗು. v. *To diminish, lessen. (to sink, as the spirits)* ನಿಶ್ಚೈತನ್ಯವಾಗು, ಧೈರ್ಯಕುಂಗು, ನಿತ್ರಾಣೆಯಾಗು; *(to sink a ship)* ಹಡಗಮುಳುಗಿಸು; *(to sink, as a ship)* ಹಡಗಮುಳುಗು; *(to sink, as feet in the sand)* ಇಳೀಬೀಳು; *(to sink, suppress, conceal)* ಅಡಗಿಸು, ದಬಾಯಿಸು; *(to sink or fall to a level)* ಸಮವಾಗು, ಸರಿಯಾಗು; *(to sink a well)* ಭಾವಿತೋಡು, ಭಾವಿಯಗೆಯು; *(sinking paper)* ಟಿಸಿಕಾಗದ.

Sink, s. n. *(drain, jakes)* ಗೊಜ್ಜಲುಕಾಲಿವೆ, ಜಲಧಾರೆ, ಬಚ್ಚಲು;

Sinless, a. ಪಾಪವಿಲ್ಲದ, ನಿಷ್ಕಳಂಕವಾದ.

Sinner, s. n. ಪಾಪಿ, ಪಾಪಿಷ್ಟನು, ಪಾಪವಂತನು, ಪಾಪಕರ್ಮಿ; All men are *sinners* ಸಮಸ್ತರುಪಾಪವಂತರು, or ಎಲ್ಲರುಪಾಪವಂತರಾಗಿಧಾರೆ.

To Sip, v. a. ಚಪ್ಪರಿಸು, ಗುಟುಕರಿಸು.

Sip, Sipping, s. n. ಚಪ್ಪರಿಸುವಿಕೆ, ಗುಟುಕರಿಸುವಿಕೆ.

Sir, s. n. ಅಪ್ಪ, ಅಯ್ಯ.

Sire, s. n. *(father, q. v.)* ಪಿತರನು, ತಂದೆ, ಜನಿತ್ರನ.

Siren, s. n. ಮಾರಿ.

Sirius, s. n. *(dogstar)* ಚಿತ್ರಾನಕ್ಷತ್ರ.

Sirup, s. n. ಪಾಂಕು, ಪಾಕು, ಪಾಕ; *(a maker of sirups)* ಪಾಕುಮಾಡುವವ, ಪಾಕಹಿಡಿಯುವವ.

Siruped, Sirupy, a. ಪಾಗಾದ, ಪಾಕವಾದ.

Sister, s. n. ಸಹೋದರಿ; *(elder sister)* ಅಕ್ಕ, ಜ್ಯೇಷ್ಠಭಗಿನಿ; *(younger sister)* ತಂಗಿ, ಕನಿಷ್ಠಭಗಿನಿ; *(a foster sister)* ಪಾಲಕಸಹೋದರಿ; *(elder brother's wife)* ಅತ್ತಿಗೆ; *(younger brother's wife)* ನಾದಿನಿ; *(sister in law, the husband's sister)* ಅತ್ತಿಗೆನಾದಿನಿ; *(the wife's sister)* ನಾದಿನಿ.

Sisterly, a. ಸಹೋದರಿಯಾಗಿ, ಒಡಹುಟ್ಟಿದವಳಾಗಿ, ಬೆಂಗುಬಿದ್ದವಳಹಾಗೆ, ಸೋದರಿವಾತ್ಸಲ್ಯವುಳ್ಳವಳಾಗಿ.

To Sit, v. a. ಕೂಡು, ಕುಳ್ಳಿರು, ಕುಳಿತುಕೊಳ್ಳು, ಕುಂತುಕೊಳ್ಳು, ಠಿಷ್ಠಹಾಕು; *(to sit upon a throne)* ಸಿಂಹಾಸನದಮೇಲೆಕೂಡು, ಸಿಂಹಾಸನಾರೂಢನಾಗು; *(to sit in the principal seat)* ಗದ್ದಿಗೆಮೇಲೆಕೂಡು, ಉಚ್ಚಸ್ಥಾನದಲ್ಲಿಕೂಡು; *(to sit in the middle)* ನಟ್ಟನಡುವೆ ಕೂಡು, ಮಧ್ಯದಲ್ಲಿಠಿಷ್ಠಹಾಕು; *(to sit opposite)* ಎದುರಿಗೆಕೂಡು, ಮುಖಾಮುಖವಾಗಿಕೂಡು, ಅಭಿಮುಖವಾಗಿಕೂಡು; *(to sit cross legged)* ಚಕ್ಕಳಪಕ್ಕಳಹಾಕಿಕೊಂಡುಕೂಡು, ಕಾಲುಮೇಲೆಕಾಲುಹಾಕಿಕೊಂಡುಕೂಡು; *(to sit with the knees sticking up)* ಮೊಣಕಾಲುಮೇಲೆಕೂಡು, ಕುಧಿಕಾಲುಮೇಲೆಕೂಡು; *(to sit with the knees laid flat and the legs crossed)* ಪದ್ಮಾಸನಹಾಕಿಕೊಂಡುಕೂಡು; *(to sit in a position to write)* ಚೊಗ್ಗಾಲುಹಾಕಿಕೊಂಡುಕೂಡು, ತೊಡೆಮೊಗ್ಗಿಲೆಕೂಡು; *(to sit together)* ಒಂದಾಗಿ ಕೂಡು, ಜತೆಯಾಗಿಕೂಡು, ಕಲತುಕೊಂಡು ಕೂಡು, ಕೂಡಿಕಲತುಕೊಳ್ಳು; *(to sit with the legs stretched out)* ಕಾಲುಚಾಚಿಕೊಂಡುಕೂಡು; *(to sit easily, having an easy seat and room*

enough) ವಿಸ್ತರಿಸಿಕೊಂಡು ಕೂಡ, ಸಂತೋಷವಾಗಿ ಕೂಡ; (to sit with the legs wide open) ಪಂಗಡಿಸಿಕೊಂಡು ಕೂಡ, ಕಿಸುಕೊಂಡು ಕೂಡ; (to sit up, rise from bed) ಎದ್ದು ಕೂಡ, ಹಾಸಿಗೆಮೇಲೆ ಕೂಡ; (to watch) ಕಾದುಕೊಂಡು ಕೂಡ, ಎದ್ದುಕೊಂಡಿರ, ನಿದ್ರೆ ಕಾಯ; (to sit down, before a town) ಮುತ್ತಿಗೆಹಾಕ, ಬಾವಗೆಮಾಡ, ಘೇರಾಯಿಸಿಕೊಂಡು ಕೂಡ. v. *To besiege*; also *to settle, rest, sit, hatch*. (*to sit still*) ವ್ಯರ್ಥಾ ಕೂಡ, ಸುಮ್ಮನೆ ಕೂಡ. v. *To be idle*. (*as an assembly*) ಗಪ್ಪುಚುಪ್ಪಾಗಿ ಕೂಡ, ನಿಶ್ಶಬ್ದವಾಗಿ ಕೂಡ್ರು; (*a place where people sit together*) ಸಭಾಸ್ಥಾನ, ಚಾವಡಿ, ಹಜಾರುಚಾವಡಿ, ಸಂಘಸ್ಥಳ; The hen *sits* ಕೋಳಿ ಹೊದಗುತ್ತದೆ; Where *sits* the wind? ಯಾವ ಘಾಳಿ ಬೀಸುತ್ತದೆ; This coat *sits* well ಈ ಅಂಗಿ ಹಾಳಿತವಾಗುತ್ತದೆ, ಈ ಅಂಗಿ ಅಳತೆ ಸರಿ ಹೋಗುತ್ತದೆ.

Site, s. n. (*of a habitation*) ವಾಸ್ತು, ಕ್ಷೇತ್ರ, ಭೂಮಿ, ಮನೆ. v. *Situation*.

Sith, v. *Since*.

Sithe, s. n. ಮಚ್ಚುಕತ್ತಿ, ಚಿಕ್ಕ ಕುಡಗೋಲು.

Sitter, s. n. ಕೂಡುವವ, ಠಿಷ್ಟಹಾಕುವವ.

Sitting, s. n. ಕೂಡುವದು, ಕುಳಿತುಕೊಂಬುವದು, ಕುಂತುಕೊಂಬುವದು; (*sitting on a throne*) ಸಿಂಹಾಸನದಮೇಲೆ ಕೂಡುವದು; (*sitting in a corner*) ಮೂಲೆಗೆ ಕೂಡುವದು; (*sitting together*) ಕೂಡಾಕೂಡುವದು. v. Also *session, assembly, incubation*.

Situate, Situated, part. ನೆಲೆಯಾದ, ಸ್ಥಾಯಿಯಾದ, ಸ್ಥಾವರವಾದ; (*to be situate*) ನೆಲೆಯಾಗಿಯಿರ, ಹೊಂದಿಕೊಂಡಿರ, ತಗಲಿಕೊಂಡುಯಿರ.

Situation, s. n. (*place*) ಸ್ಥಳ, ಎಡ, ಜಾಗೆ; (*state, condition*) ಸ್ವಭಾವ, ಪ್ರಕೃತಿ, ಸ್ಥಿತಿ, ನಡೆ, ರೀತಿ, ವಿಸರ್ಗ; (*office*) ಉದ್ಯೋಗ, ಕೆಲಸ; (*in a good situation*) ಒಳ್ಳೇಸ್ಥಳದಲ್ಲಿ, ಒಳ್ಳೇ ಉದ್ಯೋಗದಲ್ಲಿ; (*a rural situation*) ವನದೇಶ, ಗ್ರಾಮನಿವಾಸ, ಜನಸ್ಥಾನ; (*a pleasant situation*) ಪ್ರಶಸ್ತವಾದ ಸ್ಥಳ, ರಂಮ್ಯವಾದ ಸ್ಥಳ, ವಸತಿಯಾದ ಸ್ಥಳ.

Siva. The principal names in Carnáṭaca of this most formidable and perhaps most popular of the Hindoo triad, are as follows : ಶಿವನು - ಇಳೆದೇರನು - ಗೊರವನು - ಅಯಿಮೊಗನು - ಕಂಡುಗೊರಲನು - ಮುಪ್ಪೊಳಲುರಿಕನು - ಅಲರ್ಗಣೆಪಡೆಯನು - ಬಾಂನವೀರನು - ಗೊಂಡೆವಳಯಿಗನು - ಎಣ್ಗಯ್ಯನು - ಪೊಂನೆವೆಟ್ಟುವಿಲ್ಲನು - ಬಗ್ಗದೊವಲುಡಿಯನು - ಬೆಳವೆಟ್ಟೆಳಿಗನು - ಪೆರೆದಲೆಯನು - ಪೆಂಣ್ಡಿರೊಡೆಯನು - ಮಿಡನು - ಸಿಸುಳಿಯನು - ಸಬ್ಬನು - ಬಾಂಬೊಚ್ಚದಲೆಯನು - ಮಿಗಕೈಯ್ಯನು - ಇಂಗಳಗಂಣನು - ನಾತನು - ಪಂದಲೆವಚ್ಚನು - ಗಂದರಗಿವಿಯನು - ಈಸರನು - ದೇಸಿಗನು - ಅರುಮೊಗನ್ನೈಯನು - ಅಮರ್ದುವೆಂಗೊಳೆಯನು. The following are Sanscrit : ಈಶ್ವರ - ಸರ್ವ - ಈಶಾನ - ಶಂಕರ - ಚಂದ್ರಶೇಖರ - ಭೂತೇಶ -

ಖಂಡಪರಶು - ಗಿರೀಶ - ಗಿರಿಶ - ಮೃಡ - ಮೃತ್ಯುಂಜಯ - ಕೃತ್ತಿವಾಸ - ಪಿನಾಕಿ - ಪ್ರಮಥಾಧಿಪ - ಉಗ್ರ - ಕಪರ್ದಿ - ಶ್ರೀಕಂಠ - ಶಿತಿಕಂಠ - ಕಪಾಲಭೃತ್ತು - ವಾಮದೇವ - ಮಹಾದೇವ - ವಿರೂಪಾಕ್ಷ - ತ್ರಿಲೋಚನ - ಕೃಶಾನುರೇತ - ಸರ್ವಜ್ಞ - ಧೂರ್ಜಟಿ - ನೀಲಲೋಹಿತ - ಹರ - ಸ್ಮರಹರ - ಭರ್ಗ - ತ್ರಿಯಂಬ - ತ್ರಿಪುರಾಂತಕ - ಗಂಗಾಧರ - ಅಂಧಕರಿಪು - ಕ್ರತುಧ್ವಂಸಿ - ವೃಷಧ್ವಜ - ವ್ಯೋಮಕೇಶ - ಭವ - ಭೀಮ - ಸ್ಥಾಣು - ರುದ್ರ - ಉಮಾಪತಿ - ಅಷ್ಟಮೂರ್ತಿ - ಅಹಿರ್ಬುಧ್ನ.

The names of his wife Parvati are ಪಾರ್ವತಿ - ಮಾಕಾಳಿ - ಸಬ್ಬಾಣಿ - ಪೆಂದಿನೆ - [illegible] - ಸಿಂಗದೇರವಳು - ಉಮೆ - ಕಾತ್ಯಾಯನಿ - ಗೌರಿ - ಕಾಳಿ - ಹೈಮವತಿ - ಈಶ್ವರಿ - ಶಿವೆ - ಭವಾನಿ - ರುದ್ರಾಣಿ - ಶರ್ವಾಣಿ - ಸರ್ವಮಂಗಳೆ - ಅಪರ್ಣೆ - ಪಾರ್ವತಿ - ದುರ್ಗೆ - ಮೃಡಾಣಿ - ಚಂಡಿಕಾಂಬಿಕೆ - ಆರ್ಯೆ - ದಾಕ್ಷಾಯಣಿ - ಗಿರಿಜೆ - ಮೇನಕಾತ್ಮಜೆ.

The names of Siva's son, the god of wisdom: ವಿನಾಯಕ - ಎಲದುಣಿವಶಿರನು - ಎಡರ್ಗೆದೆವನು - ಒಡೆಯನು - ಸೊಂಡಿಲಮೊಗನು - ಬೆಂಕ್ಕಣೆಗಿವಿಯನು - ಚೆನಕನು - ಮೋರಯನು - ವಿಘ್ನರಾಜನು - ಗಣಾಧಿಪನು - ಲಂಬೋದರನು - ಪ್ರೋಜರ್ಗಂತನು - ಇಲಿದೇರನು - ಬಿಜ್ಜವಳ್ಳನು - ಕರಿಮೊಗನು - ಸರ್ವಮಂಗಳೆಯಣುಗನು - ಏಕದಂತನು - ಗಜವಕ್ತ್ರನು - ಧೂಮಕೇತನು - ಗಜಾನನ.

It is hoped the Student will find all these words in the other Dictionary, under their proper places, with the meaning attached.

Six, s. n. ಆರು, ಷಟ್ಕ.

Sixteen, a. ಹದಿನಾರು, ಷೋಡಶ.

Sixteenth, a. ಹದಿನಾರನೆಯ.

Sixth, a. ಆರನೆಯ; *(a sixth part)* ಆರನೆಪಾಲು, ಆರನೆಭಾಗ.

Sixthly, ad. ಆರನೆಯ.

Sixtieth, a. ಅರುವತ್ತನೆಯ.

Sixty, a. ಅರುವತ್ತು.

Size, s. n. ಪ್ರಮಾಣ, ಪರಿಮಿತಿ, ವಜನು, ಬಗೆ, ಆಕೃತಿ, ಕಿಂಮತು, ಆಯತ. v. *Form, magnitude, bulk.*

Size, s. n. *(viscous substance)* ಸರೇಸ, ಜಿಗಟು. v. *Glue.*

To Size, v. a. *(measure)* ಹಾಳತಮಾಡು, ಪ್ರಮಾಣಬದ್ಧಮಾಡು; *(to cover with glutinous matter)* ಸರೇಸಹಚ್ಚು. v. *To glue.*

Sizeable, a. *(proportionable)* ಹಾಳತವಾದ, ಸರಿಯಾದ; *(not sizeable)* ಹಾಳತವಿಲ್ಲದ, ಸರಿಯಿಲ್ಲದ, ಹಿಡಸದ. v. *Disproportionable.*

Sizy, Siziness, a. ಜಿಗಟಿನ, ಬಂಕಟೆಯ, ಅಂಟಿನ. v. *Viscous.*

Skein, s. n. *(of thread, silk, &c.)* ಲಡಿ, ಹುದಿ, ರತಿ.

Skeleton, s. n. ಎಲುಬುಹಂದರ, ಅಸ್ತಿಪಂಜರ.

Skeptick, s. n. *(one who doubts of every thing)* ಅನುಮಾನಿ, ಸಂದೇಹಿಕ, ಸಂಶಯಿಕ.

Skeptical, a. *(full of doubt)* ಸತ್ವದ, ಸಂಶಯದ, ಅನುಮಾನದ.

Skepticism, s. n. ಅನುಮಾನವು, ಸತ್ವವು, ಸಂದೇಹವು, ಪೇಚುನಷ್ಟ, ಡೋಲಾಯಮಾನ.

Sketch, s. n. (*a rough draft, first plan*) ಆಕಾರ, ಪೂರ್ವಾಕಾರ, ಕ್ರೋಪುರ್, ತರಡು; (*drawing or painting*) ಚಿತ್ರ.

To Sketch, v. n. (*draw*) ಚಿತ್ರಬರಿಯು, ಚಿತ್ರವರಚಿಸು; (*to make a rough plan*) ಆಕಾರಮಾಡು.

Skewer, s. n. ಆಣಿಮೊಳೆ.

To Skewer, v. a. ಆಣಿಮೊಳೆಸುಳಿಗಿಸು, ಆಣಿಮೊಳೆಸುಹಾಕು.

Skiff, s. n. ಚಿಕ್ಕದೋಣಿ. v. *Boat, yawl.*

Skilful, a. ಚಮತ್ಕೃತಿಯಾದ, ನೈಪುಣ್ಯವಾದ, ಪ್ರವೀಣತ್ವದ, ಜಾಣತನದ, ಚಾತುರ್ಯದ, ಚಮತ್ಕಾರದ; (*a skilful man*) ಪ್ರವೀಣ, ನಿಪುಣ, ಅಭಿಜ್ಞ, ವಿಜ್ಞ, ಚಮತ್ಕಾರಿ, ಜಾಣ, ನೆರಜಾಣ, ಜಾಂಘಾಲಿಕ, ಬುದ್ಧಿವಂತ, ಮೇಧಾವಿ, ವಿಜ್ಞಾನ, ಶಿಕ್ಷಿತ, ವೈಜ್ಞಾನಿಕ, ಕೃತಮುಖ, ಕೃತಿ, ಕುಶಲ.

Skilfully, ad. ಚಮತ್ಕಾರವಾಗಿ, ಚಾತುರ್ಯವಾಗಿ, ಚತುರತನವಾಗಿ.

Skilfulness, s. n. ಅಭಿಜ್ಞತ್ವ, ಪ್ರವೀಣತ್ವ, ಪ್ರೌಢಿಮೆ, ಚಾತುರ್ಯ, ಚಮತ್ಕಾರ, ಜಾಣತನ, ಜಾಣ್ವಿಕೆ.

Skill, s. n. ನಿಪುಣ, ಚಮತ್ಕಾರಿಕೆ, ಚಾತುರ್ಯ, ಬುದ್ಧಿ, ಚತುರತನ, ಕುಶಲತ್ವ, ಜಾಣತನ, ಚಮತ್ಕೃತಿ, ಚಾತುರ್ಯ.

Skilled, part. ಚಮತ್ಕೃತಿಯಾದ, ಚತುರತನವಾದ, ಪ್ರವೀಣತ್ವವುಳ್ಳ, ನೈಪುಣ್ಯವುಳ್ಳ, ಕುಶಲವಾದ, ಅಭಿಜ್ಞತ್ವದ; (*skilled in the management of affairs*) ಕಾರ್ಯದಕ್ಷತ್ವವುಳ್ಳ, ಕಾರ್ಯಕರ್ತೃತ್ವದ.

Skillet, s. n. (*sort of saucepan*) ಘಾಕಾಣಿಪಾತ್ರೆ.

To Skim, v. a. (*take off the surface of any liquid*) ಕೇಟೆತೆಗೆಯು; (*to skim the cream of milk*) ಕೆನೆತೆಗೆಯು; (*to skim or glide lightly over*) ಮೇಲೆಮೇಲೆನೋಡು, ಹತ್ತಿಹತ್ತಧಾಗೆನೋಡು, ಅಡಾಟೂಗಿನೋಡು.

Skimmer, s. n. ಘೂಲರಿಸವುಟಿ, ಕೆನೆಸವುಟಿ. v. *Ladle.*

Skin, s. n. ಚರ್ಮ, ಅಜಿನ, ತೊಗಲು, ತೋಲು, ಕಡಾಸ, ನೀಡು, ಕಡವಸ, ಸಂಪ್ಮ, ತೊವಲು, ತ್ವಕ್ಕು, ತ್ವಚವು. v. *Hide, husk, bark, membrane, leather.* (*the cuticle or outward skin*) ಮೇಲುತೊಗಲು; (*the cutis or interior skin*) ಮಂಗಾಳುತೊಗಲು; (*a thin soft skin*) ಮೃದುಚರ್ಮ, ಮೆತ್ತನತೊಗಲು, ಸೂಕ್ಷ್ಮವಾದ ಚರ್ಮ; (*the thin skin which grows over a wound*) ಎಳೆತೊಗಲು, ಹಕ್ಕು, ಮಾಯಿಕೆತೊಗಲು, ಮಾದುಬರುವ ತೊಗಲು; (*a thick skin*) ದಪ್ಪವಾದ ತೊಗಲು, ಮಂದವಾದ ತೊಗಲು; (*a rough skin*) ಪಡ್ಡಿತೊಗಲು, ಬರಸುತೊಗಲು; (*dried skins*) ಒಣಾತೊಗಲು, ಕಡಾಸ; (*a currier's instrument for scraping skins*) ರಂಪಿಗೆಕತ್ತಿ; (*cracked skin*) ಒಡೆದ ತೊಗಲು, ಸೀಳಿದ ತೊಗಲು, ಚಿಗಟಿದ್ದ ತೊಗಲು.

To Skin, v. a. (*slay, peel*) ತೊಗಲುಸುಲಿಯು; (*to cover with the skin*) ತೊಗಲುಹದಾಯಿಸು, ತೊಗಲುಕಟ್ಟು, ತೊಗಲುಹಾಕು; (*to become covered with the skin*) ತೊಗಲಿಡು, ತೊಗಲುಮ

ಚ್ಚಿಕೊಂಡುಬರು, ಕೊಸಲುಮುಚ್ಚು; *(to cover superficially)* ಚರ್ಮಬೆಳೆದುಕೊಂಡುಬರು.

Skinned, a. ಚರ್ಮಸುಲಿದ.

Skinner, s. n. ಚರ್ಮಸುಲಿಯುವವ, ಮಾದಿಗ, ಚರ್ಮಘಾತಕ.

Skinning, part. ಚರ್ಮಸುಲಿಯುವ.

Skinny, a. *(thin, lean)* ಅಸ್ಥಿಚರ್ಮದ, ಎಲುಬುಹಂದರದ.

To Skip, v. n. ನೆಗೆದಾಡು, ಕುಣಿದಾಡು, ಹುರಂತರಾಡು, ಹಾರ್ಯಾಡು. v. *To jump, bound, leap, spring.* *(to miss, pass over)* ಹಾರಿಸು, ಉಲ್ಲಂಘಿಸು, ಬಿಟ್ಟುಬಿಡು.

Skip, Skipping, s. n. ಕುಣಿತ, ಎಗರುವಿಕೆ, ಕುಣಿದಾಡುವಿಕೆ.

To Skirmish, v. n. ಚದರಿಯುದ್ಧಮಾಡು, ಒಡಮುಯುದ್ಧಮಾಡು. v. *To fight.*

Skirmish, s. n. ಹಾಸುಯುದ್ಧ, ಕೈಕೈಜಗಳ.

Skirt, s. n. ಅಂಚು, ಮೇರೆ, ಸೆರಗು. v. *Border, edge, margin.*

Skittish, a. *(fickle)* ಚಪಲವಾದ, ಚಂಚಲವಾದ; *(whimsical, wanton)* ಕಂಗಮಂಗತನವಾದ, ಸೊಗ್ಗರಿಚೇಷ್ಟೆಯಾದ, ಇಷ್ಟಾನಿದಿಯ, ಹದ್ದುತಪ್ಪಿದ, ಕಟ್ಟಿಲ್ಲದ; *(perverse)* ಮೂರ್ಖದ, ಗರ್ವದ, ಅಹಂಕಾರದ, ತಲೆಹೊಯಿಕತನದ; *(easily frightened, as a horse)* ಬೆದುರಿಕೆಯ.

Skittishness, s. n. *(fickleness)* ಚಪಲತೆಯು, ಚಂಚಲವು; *(whimsical wantonness)* ಕಂಗಮಂಗತನ, ಸೊಗ್ಗರಿಚೇಷ್ಟೆ, ಇಷ್ಟಾನಿದಿ; *(perverseness)* ತಲೆಹೊಯಿಕತನ, ಮೂರ್ಖತನ, ಮೊಂಡತನ.

Skittishly, ad. *(ficklely)* ಚಂಚಲವಾಗಿ, ಚಪಲತ್ವವಾಗಿ; *(wantonly)* ಇಷ್ಟಾನಿದಿಯಾಗಿ, ಸ್ವೇಚ್ಛೆಯಾಗಿ, ಕಟ್ಟೊಡ್ಡಾಗಿ; *(perversely)* ಮೊಂಡತನವಾಗಿ, ತಲೆಹೊಯಿಕತನವಾಗಿ.

To Skulk, v. n. ಟೊಕ್ಕು, ಅಡಗಿಕೊಳ್ಳು. v. *To lurk, hide.*

Skulking, s. n. ಟೊಕ್ಕುವದು, ಅಡಗಿಕೊಂಬುವದು, ಪುಸುಕುವದು, ಕುಸುಕುವದು.

Skull, s. n. ತಲೆಡೊಪ್ಪಿ, ಕಪಾಲ, ಮಸ್ತಕವು. v. *Scull.* *(the joinings of the skull)* ತಲೆಚಿಪ್ಪುಕೂಡುವಿಕೆ; *(a fracture in the skull)* ತಲೆಬುರುಡೆಬಿಳಿಕೆ, ತಲೆಯೊಡಕು; *(a skullcap)* ಶಿರಸ್ತ್ರಾಣ. v. *Helmet.*

Sky, s. n. ಆಕಾಶ, ಬಾನ್, ಎಲರ್ವಟ್ಟೆ, ಆಗಸವು, ಅರಿಲ್ವಟ್ಟೆ, ಸಗ್ಗಿಗವಟ್ಟೆ, ವ್ಯೋಮವು, ದಿವವು, ಅಭ್ರ, ವ್ಯೋಮ, ಪುಷ್ಕರ, ಅಂಬರ, ನಭ, ಅಂತರಿಕ್ಷ, ಗಗನ, ಅನಂತ, ಸುರವರ್ತ್ಮ, ವಿಯತ್ತು, ವಿಷ್ಣುಪದವು, ವಿಹಾಯವು, ವಿಹಾಯಸವು, ನಾಕ, ತಾರಾಪಥ, ಶಬ್ದಗುಣ, ಮೇಘದ್ವಾರ, ಮಹಾಬಿಲ, ಮುಗಿಲು. v. *Air, heaven.* *(a serene sky)* ನಿರ್ಮಲಾಕಾಶ, ಪರಂಜಳಾಕಾಶ; *(a cloudy sky)* ಮಬ್ಬುಕವಿದಆಕಾಶ, ಮೇಘಮುಚ್ಚಿದಾಕಾಶ, ಮೇಘಾಡಂಬರ.

Skycoloured, a. ಮೇಘವರ್ಣದ, ಎಳೆನೀಲದ. v. *Azure.*

Skylark, s. n. ಬುಲ್ಬುಲ್, ಟಿಟ್ಟಿಭ, ಚಿವ್ವ, ಟಿವ್ವ, ಚಂಡೂಲ್, ವಲಯ.

Skylight, s. n. ಗವಾಕ್ಷಿ, ಬೆಳಗಂಡಿ.

Skyrocket, s. n. ಆಕಾಶಬಾಣ.

Slab, s. n. ಬಂಡೆ, ಹಾಸುಬಂಡೆ; *(a marble slab)* ಶಿಲೇಮಾನುಬಂಡೆ, ಅಲೇಮಾನುಬಂಡೆ.

To Slabber, v. n. ಜೊಲ್ಲುಸುರಿಯ, ಜೊಲ್ಲುಗಾರ, ಜೊಲ್ಲಿಳಿಯ. v. *To slaver.* *(to smear with spittle)* ಜೊಲ್ಲುಸುರಿಸ, ಜೊಲ್ಲುಮಾಡ, ಬಂಪಟಿಮಾಡ; *(to shed, pour)* ಚೆಲ್ಲ. v. *To spill.*

Slabberer, s. n. ಜೊಲ್ಲಿನವ.

Slabby, a. ಚಿರುಕಾದ, ಚಕುಕಾದ. v. *Glutinous, viscous, wet, puddly.*

To Slack, Slacken, v. a. *(loosen)* ಸಡ್ಲಿಸ; *(to grow less tense)* ಸಡ್ಲವಾಗ; *(to abate)* ಶೆರಪಾಗ; *(to become remiss)* ಸಡ್ಲಬಿಡ, ಶಾಶ್ಕಾರಮಾಡ; *(to make less quick or forcible)* ಆರಿಸ, ನೀರುಚೆಲ್ಲ. v. *To relax, languish, fail, flag, ease, relieve, instigate.* *(to slack thirst)* ದಾಹಶಮನಾಮಾಡ.

Slack, a. *(not tense or compact)* ಸಡ್ಲವಾದ; *(remiss)* ಸಡ್ಲಬಿಡ, ಶಾಶ್ಕಾರವಾದ. v. *Careless.*

Slackly, ad. ಸಡ್ಲವಾಗಿ, ಶಾಶ್ಕಾರವಾಗಿ, ಅಜಾಗ್ರತೆಯಾಗಿ. v. Also *remissly.*

Slackness, s. n. ತಾಮಸ, ಶಾಶ್ಕಾರ, ಅಜಾಗ್ರತೆ. v. *Remissness, negligence.*

Slag, s. n. ಕಿಟ್ಟ, ಕಲ್ಮಷ, ಮೈಲಿಗೆ, ಡೇಲು. v. *Dross.*

Slain, part. ಕೊಂದುಹಾಕಿದ, ಸಂಹ್ವರಿಶಿದ, ಘಾತಿಶಿದ.

To Slake, v. a. ನೀಚಬೆಪಕಿಸ, ನೀರುಚೆಲ್ಲ, ಆರಿಸ. v. *To quench, slacken.*

To Slander, v. a. ನಿಂದಿಸೂರಿಸ, ಅಪದೂರು ಮಾಡ, ವ್ಯಪದೇಶಹಾಕ. v. *To revile.*

Slander, s. n. ಅಪದೂರು, ಕುಹಾನಿ, ವ್ಯಪದೇಶ, ಅಪನಿಂದೆ, ಹರ್ತ್ಸಿಕ, ಕರಳೆ, ಪಿಶುನ, ಬಾಧಿ, ಕೊಂಡೆಯ. v. *Calumny, reproach.*

Slandered, part. ದೂರುಹೊತ್ತ.

Slanderer, s. n. ಅಪದೂರತ್ತಸು, ನಿಂದಕನು, ಚಾಡಿಖೋರನು. v. *Calumniator.*

Slanderous, a. ಅಪದೂರಾದ, ವ್ಯಪದೇಶವಾದ, ನಿಂದೆಯಾದ, ದ್ರೋಹಾಕ್ರೋಶಗಳಿಯ. v. *Reproachful.*

Slanderously, ad. ದ್ರೋಹಾಕ್ರೋಶಗಳಿಯಾಗಿ, ನಿಂದೆಯಾಗಿ, ಅಪದೂರಾಗಿ.

Slant, Slanting, a. ಯಾಶಿಯ, ವಕ್ರಿಯ. v. *Oblique.*

Slantly, Slantwise, ad. ಯಾಶಿಯಾಗಿ, ವಕ್ರಿಯಾಗಿ, ಕೋಶಿಯಾಗಿ.

Slap, s. n. ಕೆಟ್ಟುವಿಕೆ, ಕಿಂಚಿಕೆಟ್ಟುವಿಕೆ, ಚಪ್ಪರಿಸುವಿಕೆ.

To Slap, v. a. ಕೆಟ್ಟಿ, ಕಿಂಚಿಕೆಟ್ಟಿ, ಚಪ್ಪರಿಸ. v. *To strike.*

Slap, Slapdash, ad. *(all at once)* ಏಕಾಯೇಕಿ, ಒಮ್ಮಿಂದೊಂಮೆ, ಲಟಕ್ಕನೆ, ಘಟಕ್ಕನೆ, ಪಟಕ್ಕನೆ.

Slash, s. n. *(wound, cut)* ಕೆರಿಕೆ, ಬಾಚಲು, ಚೀರು, ಜೀರು, ದ್ರೋಗಿಕೆ. v. Also *fissure.*

To Slash, v. a. ಕೆರಿಯ, ಜೀರಿಕೊಳ್ಳ, ಶೀಳ್ಳ, ಜೀಸ, ಬಿಸರ.

Slashed, part. ಬಿರಿದ, ಶೀಳಿದ. v. *Cut, wounded.*

To Slave, v. n. ಗುಲಾಂಚಾಕರಿಮಾಡ, ಬಾಂಡಿಕೆಸಮಾಡ, ಮೈಮುರಿಯ, ಕಾಯಕಷ್ಟಿಸ, ದೊಡ್ಡಿ ಕೆಲಸಮಾಡ. v. *To drudge, toil, labour.*

Slave, s. n. ಗುಲಾಮ, ಬಂದಾಖೋರ, ಪಸಸಮಗ,

ಗಾಡ್ಯಮಗ, ಠಿಣಾಪಾರಕ, ಕಿಂಕರ; (*a manumitted slave*) ಗುಲಾಮತನಬಿಡಿಸ, ಠಿಣಾಶ್ರೀರಿಸ; (*to be a slave to the passions*) ವಿಷಯಾಸಕ್ತಿಯಾಗ, ವಿಷಯಾಧೀನವಾಗ, ವಿಷಯಲಂಪಟಿಯಾಗ.

Slave-merchant, s. n. ಮನುಷ್ಯರವ್ಯಾಪಾರಿ, ಕಿಂಕರವ್ಯಾಪಾರಿ, ದೇಹವಿಕ್ರಯಿಕ.

Slaver, s. n. ಜೊಲ್ಲು, ಜಂಪು, ಶ್ಲೇಷ್ಮ. v. *Spittle.*

To Slaver, v. n. ಜೊಲ್ಲುಸುರಿಯ, ಜೊಲ್ಲುಗಾರ, ಜೊಲ್ಲಿಳಿಯ, ಜೊಂದಿಳಿಯ.

Slaverer, s. n. ಜೊಲ್ಲಿನವ. v. *Driveller, idiot.*

Slavering, s. n. ಜೊಲ್ಲುಸುರಿಯುವದು, ಜೊಲ್ಲುಗಾರುವದು, ಜೊಲ್ಲಿಳಿಯುವದು.

Slavery, s. n. ಗುಲಾಮತನ, ಬಂದಾಮ್ಯೋಹತನ, ಕಿಂಕರತ್ವ, v. *Servitude.*

Slaughter, s. n. ಧ್ವಂಸ, ಸಂಹಾರ, ನಿಪಾತನ, ಸಾಯಿಸೋಣ, ಕೊಲ್ಲೋಣ, ಪ್ರಮಾಪಣ, ನಿಬರ್ಹಣ, ನಿಕಾರಣ, ನಿಶಾರಣ, ಪ್ರವಾಸನ, ಪರಾಸನ, ನಿಷೂದನ, ನಿಹಿಂಸನ, ನಿರ್ವಾಸನ, ಸಂಜ್ಞಪನ, ನಿಗ್ರಂಥನ, ಅಪಾಸನ, ನಿಸ್ತರ್ಹಣ, ನಿಹನನ, ಕ್ಷಣನ, ಪರಿವರ್ಜನ, ನಿರ್ವಾಪಣ, ವಿಶಂಸನ, ಮಾರಣ, ಪ್ರತಿಘಾತನ, ಉದ್ವಾಸನ, ಪ್ರಮಥನ, ಕ್ರಥನ, ಉಜ್ಜಾಸನ, ಆಲಂಭ, ಪಿಂಜ, ವಿಶರ, ಘಾತ, ಉನ್ಮಂಥ, ವಧ.

To Slaughter, v. a. (*to kill*) ಧ್ವಂಸಮಾಡ, ಸಂಹರಿಸ, ಛೇಧಿಸ; (*kill animals for food*) ಕೊಯ್ಯ, ಹೊಡಿಯ, ಕೊಲ್ಲ.

Slaughterhouse, s. n. ಹೆಡಕುಬಡಿಯುವಸ್ಥಳ,

Slavish, a. ಗುಲಾಮಿಯ, ಬಾಂದಿಯ, ಕಾಯಕಷ್ಟದ, ನೀಚದ. v. *Servile, mean.*

Slavishly, ad. ಕರಕರೆಯಾಗಿ, ಬಾನಿಸಿತನವಾಗಿ, ಕೊತ್ತುಕಿಲಸವಾಗಿ, ನೀಚವಾಗಿ.

Slavishness, s. n. ಕಿಂಕರತ್ವ, ಬಾನಿಸಿತನ. v. *Meanness.*

To Slay, v. a. ಕೊಲ್ಲ, ಹಿಂಸಿಸ, ಘಾತಿಸ, ಇರಿಯ, ಕೊಂದುಹಾಕ. v. *To kill, butcher, murder.*

Slayer, s. n. ಹಿಂಸಕ, ಹತ್ಯಮಾಡುವವ, ಕೊಲೆಪಾತಕ, ಕೊರಳುಕೊಯಿಕ, ಪ್ರಾಣಘಾತಕ. v. *Killer, murderer, butcher.*

Sledge-hammer, s. n. ಕೊಡತಿ.

Sleek, a. ಸಾರಾದ, ನುಣುಪಾದ, ಸ್ಯೇರವಾದ, ಮಿಣುಕಾದ, ಮೆರುಗಾದ.

To Sleek, v. a. ಮೆರುಗುಮಾಡ, ಮಿಂಚುಮಾಡ, ಮಿಣುಕುಮಾಡ.

Sleekly, ad. ಮಿಣುಕಾಗಿ. ಮೆರುಗಾಗಿ, ಸ್ಯೇರವಾಗಿ, ನುಣುಪಾಗಿ.

Sleep, s. n. ನಿದ್ರೆ, ಶಯನ, ಜಂಪು, ಮಂಪರ, ನಿದ್ದೆ, ತೂಗು, ಗೊರಿಕೆ, ಗುರಿಕೆ, ಜಾಯಿ; (*dead sleep*) ಗಾಢನಿದ್ರೆ, ಸುಷುಪ್ತಿ, ಘೋರನಿದ್ರೆ; (*unsound sleep*) ಅರನಿದ್ರೆ, ಜಾಗರನಿದ್ರೆ; My hand is *asleep* ನಂನಕೈಜೋಮುಹಿಡಿದದೆ, ನನ್ನಕೈಜೋಮುತುಂಬಿದೆ; (*the hare's sleep, a false promise*) ಅಬದ್ಧಮಾತು, ಸುಳ್ಳುಮಾತು, ಅನೃತಭಾಷೆ, ಅಪ್ರಮಾಣೀಕಮಾತು; (*dog's, or feigned sleep*) ಡುಕ್ಕ, ಟಿಕ್ಕನಿದ್ರೆ, ಸುಳ್ಳುನಿದ್ರೆ; (*the first sleep*) ಮೂರುಸಂಜೆನಿದ್ರೆ; (*the morning sleep*) ಬೆಳಗಿನಝಾ

ಪುನಿದ್ರೆ ; (*the midday sleep*) ಸರಹೊತ್ತುನಿದ್ರೆ ; (*sound sleep*) ಗಾಢಾನಿದ್ರೆ ; (*sleep disturbed with dreams*) ಸ್ವಪ್ನನಿದ್ರೆ ; (*snoring sleep*) ಗುರಿಕೆನಿದ್ರೆ ; (*talking in sleep*) ಕಲವರಿಕೆಯನಿದ್ರೆ ; (*superficial sleep, soon waking, easily disturbed*) ಜಾಗರನಿದ್ರೆ ; (*sleep with the eyes half open*) ಅರಗಂಣ್ಣುನಿದ್ರೆ; (*half a sleep, not a full night's rest*) ಅರನಿದ್ರೆ ; (*disturbed sleep, as where there are young children*) ಶ್ರಮನಿದ್ರೆ ; (*a sleep taken in the day time*) ಸುಖನಿದ್ರೆ ; (*the devotee's sleep or abstraction*) ಯೋಗನಿದ್ರೆ ; (*sleep while awake, or absence of mind*) ಧ್ಯಾನನಿದ್ರೆ ; (*fainting sleep*) ಮೂರ್ಛನಿದ್ರೆ ; (*drowned in sleep*) ನಿದ್ರೆಯಲ್ಲಿಮುಣುಗುವಿಕೆ ; (*overcome with sleep*) ನಿದ್ರೆಮುಚ್ಚಿಕೊಂಡ, ನಿದ್ರಾಕ್ರಾಂತವಾದ, ನಿದ್ರೆಹಿಡಿದ, ನಿದ್ರೆಹತ್ತಿದ; (*to go to sleep*) ನಿದ್ರೆಹೋಗ, ಮಲಗ, ನಿದ್ರೆಗೈಯ್ಯ ; (*to rouse from sleep*) ಹೊಡಿದೆಬ್ಬಿಸ, ಉರಳಿಸಿಯೆಬ್ಬಿಸ ; (*to awake from sleep*) ನಿದ್ರೆಯಿಂದೆಚ್ಚರವಾಗ, ನಿದ್ರೆಯಿಂದೆದ್ದುಕೂಡ, ಏಳ, ಮಲಗೇಳ.

To Sleep, v. n. ನಿದ್ರೆಮಾಡ ; (*to cause to sleep*) ನಿದ್ರೆಮಾಡಿಸ, ಜೋಬಡಿಯ, ಮಲಗಿಸ, ನಿದ್ರೆಹೋಗಮಾಡ; (*to feign sleep*) ಟೆಕ್ಕನಿದ್ರೆಮಾಡ, ಸುಳ್ಳುನಿದ್ರೆಮಾಡ, ಮುಸ್ಕುಬಡುಕೊಂಡಿರುವ ; (*to sleep upon the back*) ಅಂಗತಮಲಗ, ಅಂಗತಬೀಳ.

Sleeper, s. n. ನಿದ್ರೆಗೈಯ್ಯುವವ, ನಿದ್ರೆಹೋಗುವವ; (*a great sleeper*) ನಿದ್ರೆಬೋಕು, ನಿದ್ರಾಸಕ್ತನು, ನಿದ್ರಾಮತ್ತನು.

Sleepily, ad. ನಿದ್ರೆಯಾಗಿ, ಮಬ್ಬಾಗಿ, ಮಂದವಾಗಿ. v. *Lazily, stupidly.*

Sleepiness, s. n. ತೂಕಡಿಕೆ, ನಿದ್ರೆ, ತಂದ್ರಿ, ಪ್ರಮೀಲ. v. *Drowsiness.*

Sleepless, a. ನಿದ್ರೆಹತ್ತದ, ನಿದ್ರೆಯಿಲ್ಲದ, ನಿದ್ರೆಬಾರದ. v. *Wakeful.*

Sleepy, a. ಜಂಪಿನ, ತೂಕಡಿಕೆಯ.

Sleeping, s. n. ನಿದ್ರೆಗಯ್ಯುವದು, ನಿದ್ರೆಹೋಗುವದು ; (*sleeping away an opportunity*) ಸಮಯತಪ್ಪಿಸುವದು, ಸಮಯಕಳೆಯುವದು.

Sleet, s. n. ಮಂಜು, ದುಂಮುದಾರಿ.

Sleeve, s. n. ತೋಳು, ಡೋಳು; (*the edging or border of a sleeve*) ತೋಳಿನ ಸುಮಕಸು; (*a tight sleeve*) ಬಿಗಿತೋಳು, ಬಿಗಿಡೋಳು; (*a full sleeve*) ಗಜ್ಜುತೋಳು, ಗಜ್ಜುಡೋಳು, ಸುರುಕುತೋಳು, ಸುರುಕುಡೋಳು.

Sleeved, a. ತೋಳಿನ.

Sleeveless, a. ತೋಳಿಲ್ಲದ.

Sleight, s. n. (*artifice*) ಉಪಾಯ, ತಂತ್ರ; (*art*) ಜಾಣತನ, ನಿಪುಣತನ, ಚಮತ್ಕಾರ, ಪ್ರವೀಣತ್ವ, ಚತುರತನ. v. *Skill.* (*sleight of hand*) ಕೈಚಳಕ, ಹಸ್ತಲಾಘವ, ಕಂಣುಕಟ್ಟು. v. *Juggle.*

Slender, a. ತೆಳ್ಳಗಿನ, ಬಡಬಕ್ಕಲಾದ, ಸಂಣವಾದ. v. *Thin, small, weak.* (*slender wit*) ಅಲ್ಪಬುದ್ಧಿ, ಕ್ಷುದ್ರಬುದ್ಧಿ.

Slenderly, ad. ತೆಳುಪಾಗಿ, ಬಡಬಕ್ಕಲಾಗಿ. v. Also *slightly, meanly.*

Slenderness, s. n. ಬಡಬಕ್ಕಲುತನ, ತೆಳುಪು, ದುರ್ಬಲ.

Slice, s. n. ಜಬ್ಬೆ, ಚಪ್ಪೆ, ಖಂಡ; *(a slice of meat)* ಮಾಂಸದಜಬ್ಬೆ, ಮಾಂಸದಖಂಡ; *(a slice, for cutting paper)* ಮಿಾನಜಂತ್ರ, ದಂತ್ರಕ್ಷುರಿಕ; *(for mixing)* ಉಟ್ಟಿ, ಮದ್ದೆಕೋಲು.

To Slice, v. a. ಚಪ್ಪೆಕೊಯ್ಯು. v. *To cut, divide.*

To Slide, v. n. ಜಾರ, ಕಿಸಿಯ. v. *To slip.* *(to slide or pass away)* ಮಾಸಿಹೋಗ, ಕಾಣಿಸದೆಹೋಗ. v. *To vanish.* *(to slide or pass unnoticed)* ಜುಮಗ, ಸರಿದುಹೋಗ; *(to slide down a declivity)* ಜಾರ, ಜಾರಿಕೆಬಂಡೆಯಾಡ; *(a slippery declivity down which one slides)* ಜಾರುಗಪ್ಪೆ; Time *slides* ಕಾಲವು ಜಾರಿಹೋಗುತ್ತದೆ; *(to slide the hand into another person's pocket)* ಅರಿಯದದಹಾಕಿಬೊಕ್ಕಣದಲ್ಲಿಕೈಹಾಕಿತೆಗದುಕೊಳ್ಳುವದು.

Slide, s. n. *(slippery passage)* ಜರುಪದಿ, ಜಾರು, ಸೊರಗು.

Slider, s. n. ಜಾರುವವನು, ಜುಮಗವವನು.

Slight, a. *(inconsiderable)* ಅಲ್ಪ, ಸ್ವಲ್ಪ, ಕವಷ್ಟು. v. *Small, superficial, trifling, worthless.* *(weak, unimportant, without force or effect)* ಹಲಕ. ಸುಳುವು, ಸೂಕ್ಷ್ಮವಾದ; *(thin)* ತೆಳುವಾದ, ತೆಳುವಾದ, ದುರ್ಬಲವಾದ; *(slight silk)* ಹಳ್ಳಿಥಾನು, ಬಾಳಿಕೆಬಾರದ ಶಾಪ್ಟೆ; *(slight paper)* ತೆಳುವುಕಾಗದ.

Slight, s. n. *(contempt, neglect)* ಅಶ್ರದ್ಧೆ, ತಾತ್ಸಾರ, ತಿರಸ್ಕಾರ. v. *Scorn, superciliousness;* also *sleight.*

To Slight, v. a. ಉದಾಸೀನಮಾಡ, ತಾತ್ಸಾರಮಾಡ, ತಿರಸ್ಕಾರಮಾಡ, ಅಶ್ರದ್ಧೆಮಾಡ. v. *To despise, neglect.*

Slighted, part. ಉದಾಶೀನಮಾಡಿದ, ತಾತ್ಸಾರಮಾಡಿದ, ತಿರಸ್ಕರಿಸಿದ.

Slighting, part. ತಾತ್ಸಾರಮಾಡುವ, ಅಶ್ರದ್ಧೆಮಾಡುವ.

Slightingly, ad. ತಾತ್ಸಾರವಾಗಿ, ಅಶ್ರದ್ಧೆಯಾಗಿ, ಉದಾಸೀನವಾಗಿ.

Slighter, s. n. ತಾತ್ಸಾರಮಾಡುವವ, ಅಶ್ರದ್ಧೆಮಾಡುವವ, ಉದಾಶೀನಮಾಡುವವ.

Slightly, ad. *(without force or strength)* ದುರ್ಬಲವಾಗಿ, ನಿಶ್ಶೇತಂಸ್ಯವಾಗಿ, ಬಲವಿಲ್ಲದ್ದಾಗಿ, ಸವಿಕೆಯಾಗಿ. v. *Weakly.* *(thinly)* ತೆಳುವಾಗಿ, ತೆಳುವಾಗಿ; *(negligently)* ತಾತ್ಸಾರವಾಗಿ, ಉದಾಸೀನವಾಗಿ, ಅಶ್ರದ್ಧೆಯಾಗಿ, ಅಜಾಗ್ರತೆಯಾಗಿ.

Slightness, s. n. ತೆಳುವು, ತೆಳುವು, ದೌರ್ಬಲ್ಯ. v. *Weakness, thinness.* *(want of attention)* ಅಶ್ರದ್ಧೆ, ತಾತ್ಸಾರವು. v. *Negligence.*

Slily, ad. ವಂಚನೆಯಾಗಿ, ಅಟಮಟಿಕೆಯಾಗಿ, ಠಕ್ಕಾಗಿ.

Slim, ad. ತೆಳುವಾದ, ತೆಳುವಾದ. v. *Slender.*

Slime, s. n. ಜಿಬ್ಬು, ಜಿಗಿ, ಬಂಕ್ಕಟೆ.

Sliminess, s. n. ಜಿಗಟು, ಜಿಬ್ಬು.

Slimy, a. ಜಿಬ್ಬಾದ, ಜಿಗಟಾದ, ಬಂಕಟೆಯಾದ. v. *Glutinous.* *(covered with slime)* ಜಿಗಟುಹಚ್ಚಿದ, ಬಂಕ್ಕಟೆಹಚ್ಚಿದ, ಜಿಬ್ಬುಹಚ್ಚಿದ.

Sliness, s. n. *(designing artifice)* ವಂಚನೆ, ಅಟಮಟಿಸುವಿಕೆ, ಠಕ್ಕು. v. *Cunning.*

Sling, s. n. *(for throwing stones)* ಕವಣೆ, ಬಿರ

ಕವಣೆ; (*a hanging bandage for a broken arm, &c.*) ಉಗ್ಗ; (*a throw, stroke*) ಎಸೆಕೆ, ಒಗೆಕೆ; (*a ball or stone for a sling*) ಕವಣೆಕಲ್ಲು, ಎಸೋಕಲ್ಲು.

To Sling, v. a. ಎಸೆಯುವಿಕೆ, ಒಗೆಯುವಿಕೆ. v. *To throw, cast.* (*to hang loosely by a string, &c.*) ಉಗ್ಗಕಟ್ಟೆ, ಜೋಲುಕಟ್ಟೆ, ಏರಕಟ್ಟೆ; (*to move by a rope*) ತೂಗುಕಟ್ಟೆ, ಜೋಲುಗಟ್ಟೆ, ಏರಗಟ್ಟೆ.

Slinger, s. n. ಕವಣೆಯವ.

To Slink, v. a. ಸರಿದುಹೋಗ, ಜರಿದುಹೋಗ. v. *To sneak, slip away.* (*miscarry*) ಕಂದುಹಾಕ.

To Slip, v. n. (*slide*) ಜಾರ, ಕಿಸಿಯ, ಜುಸುಗ. v. *To slide, to fall.* (*to omit or neglect*) ಬಿಟ್ಟುಬಿಡ, ಮರತುಬಿಡ, ತಪ್ಪಿಬಿಡ; (*to let slip an opportunity*) ವೇಳೆತಪ್ಪಿಸ, ಸಮಯತಪ್ಪಿಸ; (*to slip, pass unexpectedly or imperceptibly*) ಜುನಿಗಿಹೋಗ, ಸರಿದುಹೋಗ, ಕಾಣದೆಹೋಗ; (*to slip, slink or sneak away*) ಸರಿದುಹೋಗ, ಜರಿಗಿಹೋಗ; (*to slip the memory*) ಮರತುಬಿಡ. v. *To forget.* (*to slip, convey secretly*) ಅಟಿಮರಿಶೆಒಯ್ಯ, ಕಾಣದೆ ಒಯ್ಯ; (*to slip or let loose*) ಬಿಡಿಶೆಬಿಡ, ಸಡ್ಲಿಸ; (*to slip or get clear of any thing that holds one*) ಬಿಡಿಶೆಕೊಳ್ಳ, ತಪ್ಪಿಶೆಕೊಳ್ಳ, ತೂಸರಿಕೊಳ್ಳ; (*to slip away, as time*) ವೇಳೆಜರಗ, ಸಮಯಮಿಂಚ; (*to slip into any place*) ಒಳಗೆಹೊಕ್ಕೊಳ್ಳ; It is *slipt* out of joint ಇದರ ಕೀಲು ತಪ್ಪಿತು, ಇದರ ಚೆಸೆತಪ್ಪಿತು; Let not this opportunity *slip* ಈಸಮಯತಪ್ಪಿಸದೆಯಿರು.

Spilt, part. ಚೆಲ್ಲಿದ.

To Spin, v. a. ನೂಲು. v. Also *to flow out, whirl round. (to spin out)* ಆಲಸ್ಯಮಾಡು, ಶ್ರಮಣ ಮಾಡು, ವ್ಯಾಳ್ಯದೊಬ್ಬು. v. *To protract, prolong. (to spin out a discourse)* ಪ್ರಸಂಗಬೆಳೆಸು, ಮಾತುಬೆಳೆಸು, ಸುತ್ತುಕಥೆಮಾಡು.

Spinage, s. n. ಬಸಳೆಪಲ್ಯ.

Spinal, a. *(belonging to the back bone)* ಬೆಂನೆಲುಬಿನ; *(the spinal marrow)* ಬೆಂನೆಲಿಬಿನಸಾರ, ಮೂಳೆ.

Spindle, s. n. *(for spinning)* ಸೂತ್ರತೆ, ಕದುರು, ರಾಟ್ಣಕದುರು, ಖಂಡಿಕೆಕದುರು; *(a spindle case)* ಅಂಜೀಪೆಟ್ಟಿ; *(the whirl of a spindle)* ರಾಟ್ಣ ತಿರಿಗಿಕೆ; *(a spindle maker)* ಕದುರುಮಾಡುವವ; *(spindle shanked)* ಕಾಲುಕೊಂಗಿಯು, ಮರಗಾಲಿನ.

Spine, s. n. ಸರಬೆಲುಬು, ಬೆಂನೆಲುಬು. v. *Backbone.*

Spinner, s. n. ನೂಲುವವ.

Spinning, s. n. ನೂಲುವದು.

Spinning Wheel, s. n. ರಾಟ್ಣ, ತಿರಗಣಿ.

Spiracle, s. n. *(breathing hole)* ಘಾಳಿಬರುವ ಸಂದು, ಉಸುರುಹೋಗುವ ದಾರಿ.

Spiral, a. ನಾಗಮುರಿಯು, ವಂಕಿಯು; *(a spiral lock of hair)* ಉಂಗರಕೂದಲು. v. *Ringlet. (wrapping the turban round the head in a spiral form)* ಚಕ್ರಮುಂಡಾಸಸುತ್ತುವದು, ಮುಂಡಾಸ ಚಕ್ರವಾಗಿಸುತ್ತುವದು; *(the spiral twisting of the intestines)* ಕರುಳುಮುಲಿಹಾಕುವಿಕೆ; *(winding thread in spiral hanks)* ಲಡಿಮಾಡುವದು.

Spirally, ad. ನಾಗಮುರಿಯಾಗಿ, ವಂಕಿಯಾಗಿ; *(writhing spirally as a serpent)* ಸುತ್ತುಸುತ್ತಿಕೊಳ್ಳುವದು.

Spire, s. n. ಶಿಖರ, ಶೃಂಗ, ಕೋಟೆ. v. *Steeple, pyramid;* also *curve, curl, spiral lock of hair, stalk of corn.*

Spirit, s. n. *(soul)* ಆತ್ಮ, ಪ್ರಾಣ, ಜೀವ; *(breath)* ಉಸುರು; *(courage)* ಧೈರ್ಯ, ಶೌರ್ಯ, ನಿರ್ಭೀತಿ; *(magnanimity)* ಮಹಾನುಭಾವ, ಮಹಾಮನಸ; ಮಹಾಶಯ; *(habit, temperament, constitution)* ಭಾವ, ಗುಣ; *(genius, wit)* ಬುದ್ಧಿ, ಜ್ಞಾನ, ನಿಪುಣ, ಜಾಣ, ಚಮತ್ಕಾರವು; *(the Holy Spirit)* ಪರಿಶುದ್ಧಾತ್ಮನು; *(the vital spirit)* ಪ್ರಾಣಾತ್ಮ, ಜೀವಾತ್ಮ; *(spirit, activity, briskness)* ಚುರುಕು, ಕ್ಷಿಪ್ರ, ಜಾಗ್ರತೆ, ಶೀಘ್ರ; *(essence)* ಸತ್ವ, ಸಾರ, ಮೂಲ; *(the spirit of vitriol)* ದ್ರಾವಿ; *(spirit or spirituous liquors)* ಮದ್ಯಪಾನ, ಸಾರಾಯಿ; *(spirit, apparition)* ಭೂತ, ಘಾಳಿ, ದೆವ್ವ, ಪಿಶಾಚ. v. *Ghost.*

spectre, hobgoblin, demon. (*a spirit or man of spirit*) ಧೈರ್ಯಸ್ಥನು, ನಿರ್ಭೀತಿಯವ, ಶೌರ್ಯವಂತ; (*a broken spirit*) ಅಧೈರ್ಯವನ, ಅಡುರುಗುಂಡಿಗೆ, ಗುಂಡಿಗೆಯೊಡೆದ; ಎದೆಯೊಡೆದ; (*high spirited*) ಧೈರ್ಯದ, ನಿರ್ಭೀತಿಯ; (*low spirited*) ಅಧೈರ್ಯದ, ಭೀತಿಯ, ಧೈರ್ಯವಿಲ್ಲದ.

To Spirit, v. a. ಧೈರ್ಯಕೊಡು, ಧೈರ್ಯಮಾಡು. v. *To animate, encourage.*

Spirited, a. ಧೈರ್ಯದ, ನಿರ್ಭೀತಿಯ. v. *Bold, brave, courageous.*

Spiritedness, s. n. ಧೈರ್ಯವು, ಶೌರ್ಯವು, ನಿರ್ಭೀತಿಯು, ಗುಂಡಿಗೆತನ. v. *Courage, spirit, boldness, bravery.*

Spiritless, a. (*cowardly*) ಅಧೈರ್ಯದ, ಧೈರ್ಯವಿಲ್ಲದ; (*dejected*) ವಿಷಣ್ಣಾದ, ವಿಷಾದದ, ಕುಂದಿದ, ಖೇದದ.

Spiritual, a. ಅಶರೀರದ, ನಿರಾಕಾರದ, ಆತ್ಮದ, ಮಾಯಾಪ್ರಪಂಚದ, ದೇವತಾಪರದ, ಅದ್ವೈತದ. v. *Immaterial, incorporeal; intellectual, holy, heavenly.*

Spirituality, s. n. ಆತ್ಮಕಾರ್ಯ, ಪರಲೋಕಸಾಧಕ, ದೇವತಾಕಾರ್ಯ, ಮೋಕ್ಷಾರ್ಥ.

To Spiritualize, v. a. ಅದ್ವೈತಾರ್ಥಮಾಡು, ಜ್ಞಾನಾರ್ಥಮಾಡು.

Spiritually, ad. ಆತ್ಮವಾಗಿ, ಪರಲೋಕಸಾಧಕವಾಗಿ, ಜ್ಞಾನವಾಗಿ, ಆತ್ಮಾರ್ಥವಾಗಿ, ದೇವತಾಭಕ್ತಿಯಾಗಿ, ನ್ಯಾಯಪ್ರಮಾಣವಾಗಿ.

Spirituous, a. ಘಾಟಿನ, ಖಾರಿನ, ಮದಗಟಿನ, ಕೈಪಿನ, ಲಾಹರಿಯ.

To Spirt, v. a. ಪುಕ್ಕಳಿಸು, ಚಿಮ್ಮು. v. *To spurt, start, stream, spring.*

Spiry, a. (*like a spire or pyramid*) ಶಿಖರವಾದ, ಶೃಂಗವಾದ.

Spiss, a. ಮಂದವಾದ, ದಳವಾದ, ದಟ್ಟವಾದ.

Spissitude, s. n. ದಳ, ಮಂದ, ದಟ್ಟ, ಥಪ್ಪ. v. *Thickness, grossness.*

Spit, s. n. (*for roasting*) ಮಾಂಸಶೂಲಿಕ, ಇಸಮಶಿಕಾಲು.

To Spit meat, v. a. ಮಾಂಸಶೂಲಕ್ಕೆ ಚುಚ್ಚು.

To Spit, v. a. (*eject from the mouth*) ಉಗುಳು; (*to spit at*) ಉಗುಳುದಾಕು; (*to spit venom as a serpent*) ವಿಷಬಿಡು, ವಿಷಕಾರು, ವಿಷಗರಿಯು.

Spit-box, s. n. ಪೀಕದಾನಿ.

Spite, s. n. ಹಗೆ, ವಿರೋಧ, ಹೊಟ್ಟೆಕಿಚ್ಚು, ಈರ್ಷ್ಯೆ. v. *Hatred, malevolence.* (*in spite of*) ಆದರೂ, ಇದ್ದರೂ. v. *Notwithstanding.*

To Spite, v. a. (*to treat maliciously*) ವೇಧಿಸು, ಘೋರಿಸು, ಪ್ರತಿಬಂಧಕಮಾಡು. v. *To vex, thwart.* (*to fill with spite*) ಮಚ್ಚರಿಸು, ಹಗೆಮಾಡು.

Spiteful, a. ಅಪಕಾರದ, ಹೊಟ್ಟೆಕಿಚ್ಚಿನ, ಮಚ್ಚರದ. v. *Malicious.*

Spitefully, ad. ಅಪಕಾರವಾಗಿ, ಹೊಟ್ಟೆಕಿಚ್ಚಾಗಿ; ಮಚ್ಚರವಾಗಿ.

Spitefulness, s. n. ಮಚ್ಚರವು, ಅಪಕಾರವು, ಹೊಟ್ಟೆಕಿಚ್ಚುತನ.

Spitted, part. (*as meat*) ಮಾಂಸಶೂಲಕ್ಕೆ ಚುಚ್ಚಿದ.

Spitter, s. n. (*of meat*) ಮಾಂಸಬೇಯಿಸುವವ,

ಮಾಂಸಶಾಪಿಕನು; *(one who spits from his mouth)* ಉಗುಳುವವ.

Spitting dish, s. n. ಉಗುಳುವ ಪಡಗ, ಕಾಳಾಂಜಿ, ಪಡಿಗೆ.

Spittle, s. n. ಉಗುಳು, ಎಂಜಲು.

To Splash, v. a. ನೀರುಚಟ್ಟಿ, ನೀರುಅಪ್ಪಳಿಸು, ಬುರುಚೆಮಾಡು.

Splayfoot, a. ಬಂಕದಿಕಾಲು, ಡೊಂಕು ಪಾದ.

Splaymouth, s. n. ಕಿಸಬಾಯಿ, ಸೊಟ್ಟಬಾಯಿ.

Splashy, a. ಬುರುಚೆಯ.

Spleen, s. n. *(milt)* ಗುಲ್ಮ, ಪ್ಲೀಹ; *(melancholy)* ವಿಷಾದವು, ಕುಂದಿಕೆಯು, ಚಿಂತ್ರೆಯು; *(anger, ill humour)* ಕ್ರೋಧ, ಕೆರಳಿಕೆ, ಸಿಟ್ಟು, ರೌದ್ರ; *(a disease in the spleen)* ಗುಲ್ಮರೋಗ, ಪ್ಲೀಹರೋಗ.

Spleenful, Splenetick, a. ಸಿಟ್ಟಿನ, ಮಚ್ಚರದ, ಹೊಟ್ಟೆಕಿಚ್ಚಿನ. v. *Peevish, fretful, spiteful.*

Splendid, a. ಪ್ರಕಾಶವಾದ, ಡಂಬರದ, ಪ್ರಭೆಯ, ಶೃಂಗಾರದ, ಮಿಂಚಿನ, ಗದರಿನ, ಕಾಂತಿಯ, ಛವಿಯ. v. *Glorious, magnificent, showy, sumptuous, resplendent.*

Splendidly, ad. ಶೃಂಗಾರವಾಗಿ, ಪ್ರಭೆಯಾಗಿ, ಡಂಬರವಾಗಿ, ಮಿಂಚಾಗಿ, ಕಾಂತಿಯಾಗಿ, ಛವಿಯಾಗಿ.

Splendour, s. n. ಮಹಿಮೆಯು, ಪ್ರಭೆಯು, ಡಂಬರವು, ಶೃಂಗಾರವು, ಛವಿಯು, ತೇಜವು, ತೇಜಸ್ಸು. v. *Glory, magnificence, pomp, sumptuousness.*

Splinter, s. n. ಪೇಡು. v. *Fragment. (a splinter of iron)* ಮುರುಕು, ತುಂಡು.

To Splinter, v. a. *(shiver)* ಪೇಡುಮಾಡು, ಮುರಿಯು. v. *To split. (to be shivered)* ಒಡೆದೊಡೆದಾಗು, ಚೂರುಚೂರಾಗು, ಸೀಳುಸೀಳಾಗು, ಸಿಗುಳುಸಿಗುಳಾಗು.

To Split, v. a. ಸೀಳುಮಾಡು, ಒಡಿಯು. v. *To slit, crack, divide. (to be split)* ಸೀಳಾಗು, ಒಡಕಾಗು. v. *To burst, crack. (to split against a rock)* ಗುಡ್ಡಕ್ಕೆ ಹೊಡಿಯು.

Split, part. ಸೀಳಿದ.

Splitter, s. n. ಸೀಳುವ ಆಯುಧ, ಉಳಿ, ಮೇದಾರನ ಕತ್ತಿ; *(a man who splits wood)* ಮೇದಾರನು, ಕೊರಚನು.

Splutter, s. n. ಒದರಾಟ, ಗದಿಬಿಡಿ, ಗಲಗಲ, ಗಲ್ಲತ್ತು, ಗೊಲ್ಲೆ, ಕೊಲ್ಲೆ. v. *Tumult, bustle.*

To Spoil, v. a. *(injure)* ನಷ್ಟಮಾಡು, ಕೆಡಿಸು; *(lay waste, plunder)* ಕೊಳ್ಳೆಯಿಡು, ಲುಠಾಯಿಸು, ಹಾಳುಮಾಡು. v. *To plunder, rob. (to corrupt)* ಕೇಡುಮಾಡು, ಭ್ರಷ್ಟಾಕಾರಮಾಡು. v. *To mar, desolate, destroy. (to grow useless, or corrupted)* ಕೆಟ್ಟುಹೋಗು.

Spoil, s. n. ಲೂಟಿ, ಕೊಳ್ಳೆ. v. *Plunder.*

Spoiler, s. n. *(destroyer)* ಕೆಡಿಸುವವ, ಹಾಳುಮಾಡುವವ. v. Also *robber, plunderer, marrer.*

Spoilful, a. ಕೆಡಿಸುವ, ಕೊಳ್ಳೆಯಾದ, ಸುಲಿಗೆಯಾದ, ಲವಾಲೂಟಿಯಾದ. v. *Wasteful, rapacious.*

Spoilt, part. *(injured)* ನಷ್ಟವಾದ; *(corrupted)* ಕೆಡಿಸಿದ, ಕೇಡಾದ, ಭ್ರಷ್ಟಾದ.

Spoke, s. n. *(of a wheel)* ಚಕ್ರದಿಸಿ, ಕುಂಡಿಕಿವಿ.

Spoken, (part. *of speak*) ಹೇಳಿದ, ಅಂದ; *(ill spoken of)* ದುಷ್ಕೀರ್ತಿಯಾದ, ದುರ್ನಾಮಹೊಂದಿದ.

Spokesman, s. n. ಸಭಾನಾಯಕ. v. *Speaker.*

Spoliation, s. n. ಕೊಳ್ಳೆ, ಸುಲಿಗೆ, ಲವಾಲೂಟಿ, ಧಾಮಧೂಮ. v. *Robbery, privation.*

Sponge, s. n. ಸಮುದ್ರದ ಪಾಚಿ.

To Sponge, v. a *(wet with a sponge)* ಬಟ್ಟೆಯದ್ದಿ ತೊಳೆಯು; *(to wipe out with a sponge)* ಒತ್ತಿದಿಕೊಡ, ಹೀರಿಸ.

Sponger, s. n. ಕಂಗಾಳಿ, ನಂಪಸಮಾಳಿ, ಸ್ವಯಾಕ ಪರ್ಗಾರೆ. v. *Parasite.*

Spongy, a. ಹುಂಜನ, ಉಳ್ಳಿಯ, ಹುಜ್ಜಿನ, ಪಿಶಿಯ, ರುಪ್ಪಿನ.

Spontaneous, a. ಉಚಿತವಾದ, ಮನಃಪೂರ್ವಕದ.

Spontaneously, ad. ಉಚಿತವಾಗಿ, ಮನಃಪೂರ್ವಕವಾಗಿ.

Spontaneousness, s. n. ಉಚಿತವು, ಮನಃಪೂರ್ವಕ.

Spondee, s. n. ಗಗ.

Spool, s. n. ರಾಟ್ಟೆ.

Spoon, s. n. ಸೌಟು.

Sport, s. n. ಆಟ, ಕ್ರೀಡೆ, ವಿಲಾಸ, ಉಲ್ಲಾಸ. v. *Play, pastime, diversion, frolick. (contemptuous mirth)* ಪರಿಹಾಸ್ಯ, ಕುಚೋದ್ಯ; *(hunting, &c.)* ಬೇಟ್ಯಾಟ.

To Sport, v. n. ಆಡ, ಕ್ರೀಡಿಸ, ಪರಿಹಾಸ್ಯಮಾಡ, ಕುಹಕಿಬ್ಬಿಸ; *(hunt, &c.)* ಬೇಟೆಯಾಡ.

Sportful, Sportive, a. ಆಟದ, ಉಲ್ಲಾಸದ, ವಿಲಾಸದ. v. *Merry, gay, playful, frolick.*

Sportsman, s. n. ಬೇಟೆಗಾರ, ಆಟಗಾರ. v. *Hunter, fowler, fisher.*

Spot, s. n. *(mark)* ಮಚ್ಚೆ, ಕಳಂಕ, ಕಲೆ; *(a taint, disgrace)* ಅಪಕೀರ್ತಿ; *(place)* ಸ್ಥಳ, ಸ್ಥಾನ, ತಾವು, ಎಡ; *(a white spot on the forehead of a horse)* ಹುಗಿಬಿಳೇಚುಕ್ಕೆ, ಭಾಷಿಂಗದಮಚ್ಚೆ; *(a spot of ground)* ಒಂದುಚಿಕ್ಕಭೂಮಿ, ಒಂದುಚಿಕ್ಕನೆಲ; *(on the spot)* ಸಂಗಡಲೆ. v. *Immediately.* He died upon the *spot* ಅಲ್ಲೇಸತ್ತುಹೋದ, ಅದೇಸ್ಥಳದಲ್ಲೇಸತ್ತುಹೋದ.

To Spot, v. a. *(mark with spots)* ಮಚ್ಚೆಯಿಡ, ಕಲೆಮಾಡ, ಚುಕ್ಕೆಯಿಡ; *(to stain with spots)* ಕಳಂಕಮಾಡ, ಮಾಸ. v. *To stain*; also *to corrupt, taint, disgrace.*

Spotless, a. *(free from spots)* ನಿಷ್ಕಳಂಕದ, ಮಚ್ಚೆಯಿಲ್ಲದ; *(free from reproach)* ನಿರಪರಾಧದ, ತಪ್ಪಿಲ್ಲದ. v. *Pure.*

Spotted, Spotty, a. *(stained)* ಮಚ್ಚೆಯ, ಕಳಂಕದ, ಕಾಳೆಯಯ.

Spouse, s. n. ಮದಿವೆಯಾದವ; *(husband)* ಗಂಡ, ಪುರುಷ, ಪತಿ; *(wife)* ಹೆಂಡತಿ, ಸತಿ.

Spousal, a. ಮದಿವೆಯ, ವಿವಾಹದ.

Spousals, s. n. ಮದಿವೆ, ವಿವಾಹ, ಶೋಭನ. v. *Nuptials, marriage.*

Spoused, part. ಮದಿವೆಯಾದ, ವಿವಾಹವಾದ. v. *Married.*

Spouseless, a. ಒಂಟಿಯ, ಇಜ್ಜೋಡಿನ, ಜೋಡಗಳಿದ.

Spout, s. n. *(mouth or lip of a vessel)* ದ್ವಮುಖ,

ಧಾರಿ; (*a spout or gutter for conveying water*) ಡೋಣಿ, ಅಲಗಾಣಿಕೆ.

To Spout, v. a. (*as water from a fountain*) ಚಿಲ್ಲನೆ ನೀರುಹೊರಡು, ಧಡಧಡನೆ ನೀರುಬರು.

Sprain, s. n. ಇಲುಕು.

To Sprain, v. a. (*the arm, leg, hand, foot*) ಇಲುಕುಹಿಡಿಯು, ಎಲುವುಹೊರಳು. v. *To twist, dislocate.*

Sprained, part. ಇಲುಕುಹಿಡಿದ.

Sprat, s. n. ಚಿಟಿಮೀನು, ಸಲುಬಳೆ, ಸಳೆಮೀನು.

To Sprawl, v. n. ಬೋರ್ಲಬೀಳು.

Spray, s. n. (*extremity of a branch*) ಕೊಂಬುತುದಿ; (*foam*) ನೊರೆ, ನುರುಗು. v. *Sprig*; also *foam of the sea.*

To Spread, v. n. ಹಾಸು, ಸೆರವು, ಪಡವಿಡು, ಹರಡು, ಪ್ರಸರಿಸು, ವಿಶಾಲವಾಗು. v. *To extend, stretch.* (*to scatter, diffuse*) ಚೆದರಮಾಡು. v. *To strew.* (*to publish*) ಹೊರಗೆತೆರ, ಬಹಿರಂಗಮಾಡು, ಪ್ರಸಿದ್ಧಿಮಾಡು, ಪ್ರಬಲಮಾಡು; (*to be expanded or stretched*) ವಿರಳವಾಗು, ವಿಸ್ತರಿಸು, ವಿಕಸಿಸು; (*to spread the wings*) ಪಸರಿಸು, ರೆಕ್ಕೆಬಿಚ್ಚು; (*to spread on the ground*) ಹಬ್ಬು, ಹರವು; (*to spread out the hands to swim*) ಕೈಬಿಚ್ಚು, ಕೈಪಸರಿಸು; (*to spread one over another*) ಒಂದರಮೇಲೊಂದುಹಾಸು; (*to spread, as a plaster*) ಒರಸು, ಸವರು.

Spread, s. n. (*extent, compass*) ವಿಸ್ತರಿಕೆ; (*expansion*) ವಿಕಸಿಸುವಿಕೆ, ವಿರಳ.

Spread, part. (*as a carpet*) ಹಾಸಿದ; (*as wings*) ರೆಕ್ಕೆಬಿಚ್ಚಿದ, ಪಸರಿಸಿದ; (*diffused*) ವ್ಯಾಪಿಸಿದ; (*published*) ಪ್ರಸಿದ್ಧಿಯಾದ, ಬಹಿರಂಗವಾದ, ಡಂಗುರಹಾಕಿದ; (*as a creeper*) ಹಬ್ಬಿದುದು, ಪದಲ್ತಿದು, ಅಲರ್ದುದು, ಪರ್ಬಿದುದು.

Spreader, s. n. ಹಾಸುವವ, ಸೆರವವ.

Sprig, s. n. ಚಿಗುರು, ಮೊಗ್ಗೆ, ಕಳೆ.

Spriggy, a. ಚಿಗರಿನ, ಮೊಗ್ಗೆಯ.

Spright, s. n. ಭೂತ, ದೆವ್ವ, ಘೋಳಿ, ಪಿಶಾಚಿ. v. *Spirit, apparition.*

Sprightliness, s. n. ಲಘುತರ, ಉಲ್ಲಾಸ, ಹುರುಪು. v. *Briskness, cheerfulness, gaiety, liveliness, vivacity.* (*the sprightliness of youth*) ಯೌವ್ವನೋಲ್ಲಾಸ, ಯೌವ್ವನದಬಿಗಿ; (*in the days of sprightliness and joy*) ಯೌವ್ವನಪ್ರಾಯ, ತಾರ್ವದಲ್ಲಿ, ಹರೆಯತನದಲ್ಲಿ.

Sprightly, a. ಲಘುತರವಾಗಿ, ಉಲ್ಲಾಸವಾಗಿ, ಶೀಘ್ರವಾಗಿ. v. *Brisk, gay, airy, lively.* (*in a sprightly manner*) ಉಲ್ಲಾಸವಾಗಿ, ಚಟಿಕಪುಟಿಕಿನವಿಧವಾಗಿ, ಸಳುಕುಬುಳಿಕಿನವಿಧವಾಗಿ.

Spring, s. n. (*season*) ವಸಂತ, ಗಮ್ಮ, ಸುಗ್ಗಿ, ಹೂವಿನಹಬ್ಬ, ಚಿಗುರುಕಾಲ, ಶಿಶಿರಋತು, ಮಸಳುವಗಾಲ, ಮುಸಲ್ಡೋರುವಗಾಲ, ತಳಿರುವಗಾಲ, ಚಿಗುರುವಗಾಲ; (*the spring of a bandy*) ಬಂಡೀಬಿಲ್ಲು; (*instrument*) ಕೀಲು, ಮರಸುತ್ತು; (*issue of water, fountain*) ಜರೆ, ಬುಗ್ಗೆ. v. Also *jet d'eau, source, origin, beginning.* (*a leap, bound*) ಹಾರುವಿಕೆ, ಕುಪ್ಪಳಿಕೆ; (*the spring of the air*) ಘಾಳಿಯಬೆಸಿ.

To Spring, v. n. (*as water*) ಜಲೆಯೇಳು, ಬುಗ್ಗೆ ಹತ್ತು; (*to spring up or appear*) ತಾನಾಬರು, ಹುಟ್ಟು. v. *To rise, arise.* (*to spring up as plants*) ಮೊಳೆಕೆಬೆಗರಿಡು, ಮೊಳೆಕೆಯೇಳು; (*to spring a leak*) ಬಿಲ್ಲಿಬೀಳು, ನೀರುಹೋಗು; (*to spring a mine*) ಸುರಂಗಹಾಕು; (*to spring, leap, bound*) ಹಾರು, ಹಪ್ಪಳಿಸು; (*to spring upon, attack suddenly*) ತಂಪ್ಪ, ಅಕ್ಷಿಯೋಗಮಾಡು; (*to spring upon one another*) ಅವಿಬಿಕೊಂಡುಬೀಳು, ಕೆಕ್ಕೆಮುರಿಕಿಬೀಳು, ಕವಕೊಂಡುಬೀಳು; (*to spring from ancestors*) ಹುಟ್ಟು, ಪುಟ್ಟು; (*to spring game*) ಹೊರಡಿಸು; (*spring water*) ಜಲೆನೀರು, ಬುಗ್ಗೆನೀರು.

Springe, s. n. ಉರುಲು, ಉರ್ಲು, ಬಲೆ. v. *Gin, noose.*

Springy, a. (*full of springs*) ಜಲೆಯ, ಬುಗ್ಗೆಯ; (*a springy place*) ಜಲೆಭೂಮಿ, ಬುಗ್ಗೆಭೂಮಿ.

To Sprinkle, v. a. ಚಿಮಿಕಿಸು, ಚೆಲ್ಲು, ಬೆಂದ; (*to sprinkle a house with water*) ಥಳಿಹಾಕು, ಕಳಿಕೊಡು; (*to sprinkle earth, especially on the body of a dead relation*) ಮಂಗುಚೆಲ್ಲು; (*to sprinkle with sugar*) ಸಕ್ರಿಚೆಲ್ಲು; (*to sprinkle with salt*) ಉಪ್ಪುಚೆಲ್ಲು, ಉಪ್ಪುಹಾಕು. v. *To scatter, disperse, shed, strew, sow, spill.*

Sprinkled, part. ಚೆಲ್ಲಿದ, ಚಿಮಿಕಿಸಿದ.

Sprinkling, part. ಚೆಲ್ಲುವ, ಚಿಮಿಕಿಸುವ.

Sprit, s. n. ಚಿಗುರು, ಕಳಿಲು, ಮೊಗ್ಗೆ. v. *Sprout.*

Sprite, s. n. ಭೂತ, ದೆವ್ವ, ಪಿಶಾಚಿ, ಭೇತಾಳ. v. *Spirit, demon.*

To Sprout, v. n. ಮೊಳೆಕೆಹೊರಡು, ಸಸಿಹೊರಡು, ಕೊನರು, ಕಳಿರು, ಚಿಗುರು. v. *To spring up, grow.* (*as the stalk of a cabbage*) ಕೊಳ್ಳುಹೊಡಿಯು, ಪಿಟ್ಟೆಹೊರಡು.

Sprout, s. n. ಮೊಳೆಕೆ, ಕೊಳ್ಳು, ಪಿಟ್ಟೆ, ಅಂಕುರವು, ಸಂಗಮೊಗ್ಗೆ, ನವಿ, ಮುಗುಳು, ಮೊಗ್ಗೆ, ಸಜ್ಜುಕ, ಕಳಿಲು; (*sprouts at the roots of trees*) ಕೊಳ್ಳು, ಪಿಟ್ಟೆ.

Spruce, a. (*neat, trim*) ಸೊಗಸಿನ, ನೀಟಿನ.

Spruceness, s. n. ನೀಟು, ಸೊಗಸು, ಅಂದ.

Sprucely, ad. ಸೊಗಸಾಗಿ, ನೀಟಾಗಿ, ಅಂದವಾಗಿ.

Sprung, part. ಹುಟ್ಟಿದ. v. *Descended.*

Spume, s. n. ನೊರೆ, ಸುರುಸು.

To Spume, v. n. ನೊರೆಯಾಗು, ಸುರುಸೇಳು. v. *To froth.*

Spunge, s. n. ಸಮುದ್ರದಪಾಚಿ. v. *Sponge.*

Spun, part. ನೂತ.

Spunk, s. n. (*touchwood*) ಸೌರಿವಿಕಟ್ಟಿಗೆ, ಬೆಂಡುಕಟ್ಟಿಗೆ.

Spur, s. n. ಕಾಲಿನಮುಳ್ಳು, ಹಿಂಮ್ಮಡದ ಕತ್ತರಿ; (*the spur of a cock*) ಚರಣಾಯುಧ.

To Spur a horse, v. a. ಕಾಲತಟ್ಟು. v. Also *to instigate, incite, urge, drive, goad.*

Spurge, s. n. ನೆಲತೆಂಗಡಿ, ಪ್ರವರ್ಣಕಾರಿ.

Spurious, a. (*not genuine*) ಸಲ್ಲದ, ನಂಗಿಯ, ಕೈಗೆದುಹಾಕಿದ, ಯಂಗಿಯಾದ. v. *False, counterfeit.* (*illegitimate*) ಅಡ್ಡಜಾತಿಯ, ದುರ್ಜಾತಿಯ; (*a spurious son*) ಸೂಳೆಮಗ, ಜಾರಮಗ. v. *Bastard.*

To Spurn, v. a. (*kick*) ಒದೆಯು; (*to reject with contempt*) ತಿರಸ್ಕರಿಸು, ಮೋರೆಮೇಲೊದೆಯು. v. *To scorn.*

Spurn, s. n. v. *Kick, insolence, contempt, scorn.*

Spurrer, s. n. (*one who spurs*) ಕಾಲುತಿಟ್ಟುವವ.

To Spurt, v. n. ಚೆಲ್ಲಿಸು. v. *To spring, stream.* (*to spurt any thing out of the mouth*) ಮುಕ್ಕಳಿಸು, ಚಿಮ್ಮು; (*to spurt, as blood from a vein*) ರಕ್ತಚೆಲ್ಲಿಸು.

Spurt, s. n. (*single or sudden effort*) ಊಂಕ್ಸು, ಹುರುಪು.

To Sputter, v. a. (*to throw out spittle, &c. when speaking, &c.*) ಎಂಜಲುಚೆಲ್ಲು. v. Also *to spurt.* (*to speak indistinctly*) ತೊದಬದ ಮಾತಾಡು, ತೊಳ್ ಮೊಕಲಿಸು.

Sputtered, part. (*indistinctly spoken*) ಅಂಬೂಕೃತ, ಸನಿಷ್ಠೀವ.

Sputterer, s. n. ಎಂಜಲುಸಿಡುಸುವವ, ಎಂಜಲುಚೆಲ್ಲಿಸುವವ; (*indistinct speaker*) ತೊದರುವವ, ತೊದಬದಅಂಬುವವ.

Spy, s. n. ಪಾಳತಿಗಾರ, ಹೊಂಚಿನವ, ಬೇಹುಗಾರ, ಚಾರ; (*a spy over the private actions of others*) ಇಲ್ಲಾಮಲ್ಲಿ, ಚಾಡಿಖೋರ. v. *Informer, whisperer.* (*to play the spy*) ಇಲ್ಲಾಮಲ್ಲಿತನ ಮಾಡು; (*any place from whence a spy makes his observations*) ಅಡಪು, ಪಾಳತಿಸ್ಥಳ, ಸಂಚಡ.

To Spy or discover, by the eye at a distance, v. a. ದೂರೆಕಿನೋಡು, ಇಣಿಕಿನೋಡು, ಸುಳುಪುನೋಡು, ದೂರದಿಂದ ನೋಡು; (*to discover by artifice*) ಪಾಳತಿನೋಡು, ಹೊಂಚುನೋಡು.

Spyhole, s. n. ಹೊಂಚುನೋಡುವಡು.

Spying Glass, s. n. ದುರ್ಬೀಣಿ.

Squab, s. n. (*stuffed cushion*) ಗದ್ದಿಗೆ; (*not fledged, newly hatched*) ರೆಕ್ಕೆಬಾರದ, ಗರಿಯಿಲ್ಲದ; (*short of stature and thick*) ಗಿಡ್ಡ, ವಾಮನ, ಮೋರೆಯ, ಪೊಟ್ಟಿ. v. *Clumsy, awkward.*

To Squabble, v. n. ವಾಗ್ವಾದ ಮಾಡು, ಝಗಳಾಡು, ಕಲಹಮಾಡು, ಜೋರಾಡು. v. *To quarrel, wrangle.*

Squabble, s. n. ವಾಗ್ವಾದ, ಝಗಳ, ಕಲಹ. v. *Brawl, quarrel.*

Squabbler, s. n. ತಂಟಾಖೋರ, ಕಲಹಕಂಟಕ, ವಾಗ್ವಾದಿ.

Squadron, s. n. ಸ್ತೋಮ, ಸಂಘ, ಮಂದಿ; (*of horse*) ಕುದರಿಸ್ತೋಮ, (*a squadron of ships*) ಹಡಗಸ್ತೋಮ.

Squalid, a. ಮಲಿನದ, ಮೈಲಿಗೆಯ, ಕೊಳೆಯ, ಯೋಬ್ರಾಶಿಯಾದ. v. *Nasty.*

Squalidness, s. n. ಕೊಳೆಯು, ಮೈಲಿಗೆಯು, ಯೋಬ್ರಾಶಿಯು.

To Squall, v. n. ಕೂಗು, ಹಲುಬು, ಗೋಳಾಡು.

Squall, s. n. ಕೂಗುವಿಕೆ, ಹಲುಬುವಿಕೆ, ಗೋಳಾಡುವಿಕೆ; (*a squall of wind*) ಬಿರುಘಾಳಿ, ದೆವ್ವಘಾಳಿ.

Squaller, s. n. ಕೂಗುವವ, ಅರುಗುವವ.

Squally, a. ಬಿರುಘಾಳಿಯ, ದೆವ್ವಘಾಳಿಯ. v. *Windy.*

To Squander, v. a. ಘುಲಾಯಿತನಮಾಡು, ದುಂದುಮಾಡು, ದುರ್ವ್ಯಯಮಾಡು, ದುಲಾಬಿತನಮಾಡು. v. *To waste, spend.*

Squanderer, s. n. ಕುಲನಾಶಕ, ದುಂದುಗಾರ, ಪುಂಡಾಖೋರ, ತಿಂಡೋಡಿಗ, ಖರ್ಚದಾರ, ಘುಲಾಉಗಾರ. v. *Spendthrift, prodigal.*

Square, a. ಚೌಕಟ್ಟಿನ, ಚಚ್ಚೌಕದ.

Square, s. n. *(figure)* ಚಚ್ಚೌಕ; *(a square)* ಅಂಗಳ, ಪ್ರದೇಶ, ಹೊಸಂತ್ರಿಲು. v. *Area, court;* also *rule, regularity, conformity, proportion, equality, level.*

To Square, v. a. ಚಚ್ಚೌಕಮಾಡು. v. Also *to fit, suit, adjust, regulate.*

Squash, s. n. *(sudden fall)* ಘಲ್ಲನೆ, ಧಡಲ್ಲನೆ, ಹೊಟೆಕ್ಕನೆ; *(any thing soft)* ಮೃದುವಾದ; *(any thing unripe)* ಪಕ್ವವಿಲ್ಲದ್ದು.

To Squash, v. a. ಜಿಗಿಜಿಗಿಮಾಡು, ಲಿಕಿಲಿಕಿಮಾಡು, ಹತ್ರಿಂಡಮಾಡು. v. *To crush.*

Squat, a. *(short and thick)* ಹೊಟ್ಟಿಯ. v. *Squab, compact. (to squat down)* ತುದಿಕಾಲಲ್ಲಿಕೂಡು, ಮೊಣಕಾಲುಮೇಲೆಕೂಡು.

Squeak, Squeal, s. n. ಕೂಗುವಿಕೆ, ಅರಸುವಿಕೆ. v. *Squall, cry.*

To Squeak, v. n. ಅರಸು, ಕೂಯ್ಯನು, ಗುಯುಗುಟ್ಟು, ಕಿರುಚು.

Squeamish, a. ಕೊಸಾಕುಳಿಯ, ಕೊನಷ್ಟಿಯ, ವಯ್ಯಾರದ, ಬಡಿವಾರದ, ಬೆದಿಯದ, ಹತ್ರಿದ. v. *Nice, delicate, dainty, fastidious. (to be squeamish)* ಕೊಸಾಕುಳಿಯಾಗಿರು, ಬಡಿವಾರವಾಗಿಯಿರು, ವಯ್ಯಾರವಾಗಿಯಿರು, ಹತ್ರಿದಿರು, ಬೆದಿಯದಿರು.

Squeamishness, s. n. ಬಡಿವಾರವು, ವಯ್ಯಾರವು, ಕೊಸಾಕುಳಿ, ಕಾನಷ್ಟಿ, ಕುಚೇಷ್ಟೆ.

Squeamishly, ad. ಬಡಿವಾರವಾಗಿ, ವಯ್ಯಾರವಾಗಿ, ಕೊಸಾಕುಳಿಯಾಗಿ.

To Squeeze, v. n. ಹಿಂಡು, ಹಿಸುಕು, ಕಿವುಚು. v. *To press, oppress, crush, harass. (to squeeze gently or tickle with the fingers)* ಚಿಕ್ಕಳಿಗುಲ್ಲಿಡು.

Squeeze, s. n. ಹಿಂಡುವಿಕೆ, ಹಿಸುಕುವಿಕೆ. v. *Compression, pressure.*

To Squint, v. n. *(to look obliquely)* ವಾರೆಯಾಗಿನೋಡು, ವಾರೆನೋಟನೋಡು, ಕಟಾಕ್ಷವಾಗಿನೋಡು.

Squint, a. ಮೆಳ್ಳೆಗಂಣಿನ, ಕಾಲ್ಕೆರದ, ಶ್ಯಾಕರೆಯ; *(a squint eye)* ಅರೆಗಂಣು, ವಾರೆನೋಟ, ಮೆಳ್ಳೆಗಂಣು.

Squinter, s. n. ಅರೆಗಂಣಿನವ, ವಾರೆನೋಟದವ, ಮೆಳ್ಳೆಗಂಣಿನವ.

Squirrel, s. n. ಉಡುತು, ಉಡತೆ.

Squirt, s. n. ಚಿಂಮನಗೋವಿ, ಚಿಕಾರಿ.

To Squirt, v. a. ಚಿಂಮ್ಮನಗೋವಿಯಿಂದಚಿಂಮ್ಮು.

To Stab, v. a. ತಿವಿಯು, ಚುಚ್ಚು, ಇರಿಯು. v. *To pierce, wound. (to stab with a poisoned dagger)* ವಿಷದಲಗಿನಕಠಾರಿಯಿಂದ ತಿವಿಯು.

Stab, s. n. ತಿವತ, ತಿವಿಕೆ, ಇರಿತ.

Stabber, s. n. ತಿವಿಯುವವ.

Stability, s. n. ಸ್ಥಾಪನೆ, ಸ್ಥಿಮಿತ, ಸ್ಥಿರ, ಕ್ಷೇತ್ರ, ಘಟ್ಟಿ, ಶಾಶ್ವತ.

Stable, s. n. *(for horses)* ಕುದುರೆಲಾಯ, ಅಶ್ವಶಾಲೆ, ವಾಜಿಶಾಲೆ, ಮಂದುರೆ.

Stable, a. ಸ್ಥಾಪನೆಯಾದ, ಸ್ಥಿರವಾದ, ಸ್ಥಿಮಿತದ, ಘಟ್ಟಿಯ. v. *Steady, constant, fixed.*

Stack, s. n. *(of corn, hay, &c.)* ಬಣವೆ.

To Stack, v. a. ಬಣವೆಹಾಕ, ಒಪ್ಪೆಹಾಕ.

Staff, s. n. ಕೋಲುಕಟ್ಟಿಗೆ, ತಾಣೆಕೋಲು, ಬಡಿಗೆಕೋಲು, ಯಡಂಗೆ, ಟೆಂಗೆ; *(a pilgrim's staff)* ದಂಡ, ಯೋಗದಂಡ; *(a bishop's pastoral staff)* ಗುರುವಿನಕೋಲು; *(a staff with a hooked head)* ಸೋಂಟೆ, ಜೆರ್ಟೆ; *(a chum staff)* ಕಡಗೋಲು; *(to strike with a staff)* ಕಟ್ಟಿಗೇಲಿಬಡಿಯ, ಕೋಲಲ್ಲಿಬಡಿಯ, ದಂಡದಲ್ಲಿಬಡಿಯ.

Stag, s. n. *(male deer)* ಇರ್ರಿ, ಗಂಡುಜಿಂಕೆ.

Stage, s. n. *(floor raised on which any shew is exhibited)* ಗೊಂಬೆಆಟದಮೆಟ್ಟು, ತೊಗಲುಗೊಂಬೆಮಂಟಪ; *(a resting place on a journey)* ಮೊಕಾಮಿನಸ್ಥಳ, ವಸ್ತಿಯಸ್ಥಳ, ಮಜಲಿ, ಚೌಕಿ; *(a step)* ಪಾದಛಾಯೆ; *(in every stage)* ಪ್ರತಿತರಕ್ಕೆ, ಮೆಟ್ಟುಮೆಟ್ಟಿಗೆ, ಅಡಿಗಡಿಗೆ, ಮಜಲಿಮಜಲಿಗೆ; *(stage play)* ಕ್ರೀಡೆಯಾಟ, ವಿನೋದದಾಟ, ತಮಾಸೆ.

To Stagger, v. n. ತತ್ತರಕೊಡಿಯ, ಜೋಲುಹೊಡಿಯ. v. *To totter.* *(to begin to lose courage)* ಧೈರ್ಯಕೆಡ, ಧೈರ್ಯಕಳಕೊಳ್ಳ, ಅಧೈರ್ಯವಾಗ; *(to be struck with doubt)* ಸಂದೇಹಪಡ, ಅನುಮಾನಪಡ, ಸಂದೇಹಬಿಡ, ಸಂಕೋಚಪಡ. v. *To hesitate, waver.* *(to cause to stagger)* ದಿಗ್ಗಾಮುಗ್ಗಿಮಾಡ; *(to fill with suspicion)* ಅನುಮಾನಪಡಿಸ, ಸಂದೇಹಗೊಳಿಸ. v. *To shock, alarm.*

Stagnant, a. *(motionless, not flowing)* ಬಂಧನೆಯ, ನಿಲಹಾಕಿದ; *(stagnant water)* ನಿಲಹಾಕಿದಜಲ. v. *Pool, marsh.*

To Stagnate, v. n. ನಿಂದಿರ, ಬಂಧನೆಯಾಗ.

Stagnation, Stagnancy, s. n. ನಿಂದಿರುವಿಕೆ, ಬಂಧನೆ.

Staid, part. ಶ್ರಮಸ್ತ, ತಾಳ್ಮೆಯ, ಸಾಧನ, ಕ್ರಾರಿಯ. v. *Grave, sober, regular.*

Stain, s. n. ಮಚ್ಚೆ, ಕಲೆ, ಕಳಂಕ, ಕರಿಕಲೆ. v. *Spot, blemish.*

To Stain, v. a. ಮರಿಕೆಮಾಡ, ಮಚ್ಚೆಮಾಡ, ಮಾಸ. v. *To spot, blot, defile, discolour, disgrace.*

Stained, part. ಮಚ್ಚೆಯಾದ, ಮರಿಕೆಯಾದ.

Stainless, a. ಮಚ್ಚೆಯಿಲ್ಲದ, ಮರಿಕೆಯಿಲ್ಲದ.

Stair, s. n. *(stair case)* ಸೋಪಾನ, ಮೆಟ್ಟು, ಆರೋಹಣ, ಪಡಿಕಟ್ಟು; *(two pair of stairs)* ಎರಡುಸುತ್ತಿನಮೆಟ್ಟುಗಳು, ಎರಡುಅಂತಸ್ತಿನಪಾವಟಿಗ್ಗಳು; *(the steps of a stair)* ಸೋಪಾನದಪಾವಟಿಗೆ. v. *Step.* *(above stairs)* ಮೇಲೆ, ಮೇಲಿನಅಂತಸ್ತು, ಮೇಲುಮಾಳಿಗೆ.

Stake, s. n. ಕಾಲುಗುಂಜಿ, ನಿಟ್ರಾಡು. v. *Pale, palisade.* *(the post to which a beast is tied)* ಗೂಟ, ಗುಂಜೆ; *(a stake at play)* ಜೂಜು, ಪಂಚೆಯಾದ್ವಿಕೆ; *(any thing placed as a palisade)* ಅಪಾಶ್ರಯ, ನೆರಿಕೆ, ತಟ್ಟಿ; *(to be at stake)* ಗಂಡಾಂತ್ರವಾಗಿಯಿರ, ಪ್ರಾಣಗಂಡಾಂತ್ರದಲ್ಲಿಯಿರ; *(a stake for impaling men)* ಬಗಣೆಗೂಟ; *(a stake for taming a beast)* ಸಾಧನಕಂಬ, ಸಾಧುಮಾಡುವಕಂಭ.

To Stake, v. a. *(bet)* ಪಂಥಹಾಕ, ಪಂದೆಹಾಕಿ

ಶೊರ್ತ. v. *To wager.* *(to prop or fasten with posts)* ಕಟ್ಟಿಕಟ್ಟಿ, ನೆರಿಕಿಕಟ್ಟಿ. v. *To fence.* *(to empale)* ಬಗನೆಸೂಲಿಹಾಕು, ಬಗನೆಸೂಲಿಚೊಡೆಯು.

Stale, a. *(old, not new or fresh)* ಹಳೆಥರದ, ಪಾಡಿಕೆಯಾದ, ಬಳಿಶಿದ; *(stale victuals)* ತಂಗಳಂನ, ಹಳಿಶಿದಂನ; *(urine)* ಮೂತ್ರ.

To Stale, v. a. *(to make old)* ಬಳಿಶಿಮಾಡು, ಶ್ರಿಪಾಡಿಕೆಮಾಡು; *(to wear out)* ಹಳೇಥರವಾಗು, ಹಳೇದಾಗು; *(to make water)* ಮೂತ್ರಶ್ರೈಯ್ಯ. ಲಘುಶಂಕೆಮಾಡು, ಕಾಲುಮಡಿಯು.

Stalk, s. n. *(of a plant)* ತೊಟ್ಟು, ಕಾಡೆ, ಕಾಂಬು, ವೃಂತ, ದಂಬು; *(of a grape)* ದ್ರಾಕ್ಷಿಯ ಗೊಂನಿಯ ಕಾಂಬು; *(a stalk of corn)* ದಂಟು.

To Stalk, v. n. ಪಾದಛಾಯಹಾಕು, ದಾಷ್ಟೀಕವಾಗಿ ನಡೆಯು, ಮಂದಯಾನಮಾಡು. v. *To strut.*

Stall, s. n. *(for cattle)* ಅಟ್ಟಿ. v. *Manger, stable.* *(a bench on which goods are exposed to sale)* ಬಂಕು, ಬಂಕದಿ.

To Stall, v. a. *(to put in a stall)* ಅಟ್ಟಿಕ್ಕಿಕಟ್ಟಿ.

Stallion, s. n. ಬೀಜದಕುದುರೆ, ಯೇರಿಸುವಕುದುರೆ, ದುಂಬಿಸುವಕುದುರೆ.

Stamina, s. n. *(first principle, essence)* ಸತ್ವರಸ, ಮೂಲ, ಸತ್ವ; *(the stamina of the human body)* ದೇಹಸಾರ, ಅಸ್ತಿಸಾರ.

To Stammer, v. n. ನತ್ತಿಮಾತಾಡು, ತೊದಲುಮಾತಾಡು. v. *To stutter.*

Stammerer, s. n. ತೊದಲಿನವ, ನತ್ತಿಯವ.

Stammering, s. n. ನತ್ತಿಮಾತಾಡುವದು, ತೊದಲುಮಾತಾಡುವದು.

To Stamp, v. n. *(pound)* ಕುಟ್ಟು, ಚೂರ್ಣಮಾಡು, ಪುಡಿಮಾಡು; *(impress with a mark)* ಗುರುತುಹಾಕು, ಮುದ್ರಿವತ್ತು, ಗೋಟುಹಾಕು; *(to stamp money, to mint)* ನಾಣ್ಯಮಾಡು. v. *To coin;* also *to pound, bray, bruise.* *(to stamp with the foot)* ಪಾದಘಟ್ಟಿಸು; *(to stamp under foot)* ತುಳಿಯು. v. *To trample.*

Stamp, s. n. ಮುದ್ರೆ, ಗುರುತು, ಗೋಟು; *(men of the same stamp with others)* ಅವರಾರ್‌ರೀತ್ಯಾಯಿದ್ದವರು, ಇತರರಹಾಗೆಯಿರುವರು, ಮೋಕಂತ್ರೆಯಿರುವವರು, ಒಂದೇಬಗೆಯವರು, ಒಂದೇಗೋಸ್ತ್ರದು; *(that is not of the right stamp)* ಅದು ಸರಿರೀತಿಯಾದದ್ದಲ್ಲ, ಅದುಯುಕ್ತವಾದ ಥರವಲ್ಲ; *(a stamp on measures and weights denoting their standard)* ರಾಜಮುದ್ರೆ, ಕಟ್ಲೆಮುದ್ರೆ; *(an instrument for stamping, die)* ಚೇಟಿಅಚ್ಚು, ಬಂಗಾರದಚ್ಚು; *(a mark set upon things that pay custom to government)* ಚಪ್ಪೆ; *(an instrument for stamping a heap of corn)* ಮುದ್ರೆಕೋಲು. v. Also *currency, value, authority, form, make, shape, cast.*

Stamped, part. ಮುದ್ರೆಹಾಕಿದ, ಚಪ್ಪೆಹಾಕಿದ.

Stanch, a. *(sound, firm of principle)* ಘಟ್ಟಿಯ, ಧೃಡದ, ಶಾಶ್ವತದ, ಮನೋಧೈರ್ಯದ, ಮನೋಸಂಕಲ್ಪದ, ಮನೋಖಚಿತದ. v. *Trusty, resolute, strong.* *(a stanch commodity)* ಒಳ್ಳೇಸರಕು.

To Stanch, v. a. (*to stop blood*) ರಕ್ತನಿಲ್ಲಿಸು.

Stanched, part. ರಕ್ತನಿಲ್ಲಿಸಿದ. v. *Stopped.*

To Stand, v. a. (*be erect on the feet*) ನಿಲ್ಲು, ನಿಂತುಕೊಳ್ಳು, ಎದುರುನಿಲ್ಲು; (*to stop or halt*) ನಿಲ್ಲು, ತಕ್ಕನೆನಿಲ್ಲು; (*to stand still, to be at rest without motion*) ನಿಂತ್ರುಹೋಗು, ಸುಮ್ಮನೆನಿಲ್ಲು, ಸುಮ್ಮನಾಗು; (*to stand or remain firm*) ಸ್ಥಿರವಾಗಿನಿಲ್ಲು, ಭದ್ರವಾಗಿನಿಲ್ಲು, ಶಾಶ್ವತವಾಗಿನಿಲ್ಲು; (*not to fly, resist*) ಹಿಂದಕ್ಕೆಜರಿಯದೆನಿಲ್ಲು; (*to stand opposite, front to front*) ಅಭಿಮುಖವಾಗಿನಿಲ್ಲು, ಎದುರುನಿಂತುಕೊಳ್ಳು; (*to stand one behind another*) ಒಬ್ಬನಹಿಂದೊಬ್ಬನಿಲ್ಲು; (*to stand side by side*) ಒಬ್ಬನಬಗಲಲ್ಲೊಬ್ಬನಿಲ್ಲು; (*to stand by, or near*) ಬದ್ಯಲಿನಿಲ್ಲು, ಹತ್ತರದಲ್ಲಿನಿಲ್ಲು; (*to stand by, to assist or befriend*) ಅನುಕೂಲಿಸು, ಸಹಾಯಕೊಡು, ಆದರಿಸು, ಬೆಂಬುಹಾಕಿಕೊಳ್ಳು. v. *To assist, maintain, support.* (*to stand aside*) ಓರಿಗೆನಿಲ್ಲು, ಮರೆಯಾಗಿರು; (*to stand amazed*) ಆಶ್ಚರ್ಯಪಡು, ಅಚ್ಯೋದ್ಯಪಡು, ಗಾಬರಿಯಾಗಿಹೋಗು; (*to stand for, be a candidate*) ಉಮೇದುವಾರಿಗೆಕಾದುಕೊಂಡಿರು, ಉದ್ಯೋಗಕ್ಕೆಕಾದುಕೊಂಡಿರು; (*to stand for, represent another*) ಪ್ರತಿಯಾಗಿರು, ಬದಲಿರು. v. Also *to stand by, maintain, support.* (*to stand off, keep at a distance*) ದೂರದಲ್ಲಿರು, ದೂರಲ್ಯೋಪಾಸ್ತಿಯಿರು; (*to stand off, not to comply*) ಸಂಮತಿಪಡದೆಯಿರು, ಒಪ್ಪದೆಯಿರು. (*to stand off, avoid intimacy*) ದೂರಸ್ಥನಾಗು, ಅಪರಿಚಿತಿಯಾಗು, ಅಘಾರ್ಥವಿಲ್ಲದಿರು; (*to stand out, bold resolution*) ಬಡಾಯಿಸು, ಮಾರ್ಮಲೆಯು; (*to stand out, be prominent*) ಚೊಟ್ಟಿಹೊರಡು, ಸ್ಪಾನಿಹೊರಡು; (*to stand to, ply, persevere*) ಅಧ್ಯವಸಾಯಮಾಡು, ಕಡೆಹಾಯಿಸು; (*bold resolution*) ಪ್ರತಿಜ್ಞೆಚೆಲ್ಲಿಸು, ಷರತ್ತುಕ್ರಿರಿಸಿಕೊಳ್ಳು; (*to stand to a promise*) ಸತ್ಯಮಾಡು, ಪ್ರಮಾಣಪೂರ್ತಿಮಾಡು, ಈಡೇರಿಸು, ಖಚಿತಮಾಡು; (*to stand up*) ಎದ್ದುನಿಂತ್ರು, ಏಳು, ಎದ್ದುನಿಲ್ಲು, ಎದ್ದುನಿಂತ್ರುಕೊಳ್ಳು. v. *To rise.* (*to stand upon, to be or rest upon any thing*) ಮೇಲೆನಿಂತ್ರು; (*to stand upon, to insist on*) ತರಾರಿಮಾಡು, ಬಿಡದೇಕೇಳು; (*to stand upon, value, take pride in*) ಜೋರಾಖುಮಾಡು, ಬಡಾಯಿಪಡು; (*to stand higgling, in making a bargain*) ಇಡರೆಡಿಮಾಡು; (*to stand in, cost*) ಹಿಡಿಯು; (*to stand still, be idle*) ಸುಮ್ಮನೆಯಿರು, ಕಾಲದೊಬ್ಬು, ಕಾಲಕ್ಷೇಪಮಾಡು; (*to stand one's ground*) ಮಾಪಡು, ಮಾರಾಂತ್ರುನಿಲ್ಲು, ಮಡೆಗೊಟ್ಟುನಿಲ್ಲು; (*to stand sentry*) ಪಹರೆನಿಲ್ಲು, ಪಹರೆಕೊಡು; (*to stand on end, as the hair of a cat, &c. when frightened*) ನಿತ್ರಿಸಿಕೊಳ್ಳು, ಝುಮಕರಿಸಿಕೊಳ್ಳು, ಜುಂಜರಿಸಿಕೊಳ್ಳು; (*to stand one in stead*) ಪ್ರತಿಯಾಗಿರು; (*to stand in need*) ಅಕ್ಕರೆಯಾಗು. v. *To want.* (*to stand in awe*) ಭಯೋತ್ಕಂಪವಾಗು, ಭಯಪಡು, ಬೆದರಿಕೊಳ್ಳು; (*to stand in the way*) ಹಾದಿಗಡ್ಡನಿಲ್ಲು; (*stand off! stand back!*) ವಾರಿಗಿರು, ಮರೆಯಾಗಿರು; He *stood* his ground ಅವನುಮರೆಗೊಟ್ಟುನಿಂತಿದ್ದ, ಅವ

ಸಮಾರಾಂಭುನಿಂತಿರ್ದ; I'll *stand* your judgment ನಿಂನ ತೀರ್ಪಿನಹಾಗೆಯೆಒಪ್ಪಿಕೊಳ್ಳುವೆನು, ನಿಂನಮಾತಿನಹಾಗೆಯೆಹೋಗುವೆನು; We *stood* off the coast ದಡಕ್ಕೆದೂರಾಗಿಯಿದ್ದೆವು; What do you *stand* in need of? ನಿನಗೇನ ಕ್ಕತೆಯಾಗದೆ, ನಿನಗೇನುಬೇಕಾಗದೆ, ನಿನಗೇನು ಕೊರತೆಯಾಗದೆ; He *stood* upon it ಅವನುಅದರಮೇಲೆಆಶೆಯಿಟ್ಟನು, ಅವನುಅದಂ ನಾಶಿಸಿದನು, ಅವನ ಇಷ್ಟಅದರಮೇಲೆಹೋಯಿತು; It *stands* me in five pagodas ನಾನದಕ್ಕೈಯಿದುವರಹಾಕೊಟ್ಟೆನು; He *stood* by ಅವನುಹತ್ತರನಿಂತನು, ಅವನುಸಮೀಪದಲ್ಲಿ ನಿಂತಿದ್ದನು; (*to stand all hazards*) ನಯನಷ್ಟಕ್ಕೆ ಅನಿಷ್ಟವಾಗಿನಿಲ್ಲ, ಆದಾಯನಷ್ಟಕ್ಕೆಅಧಿಕರ್ನಾಗ; Dont *stand* in my light ನನಗೆಮರೆಯಾಗಿನಿಲ್ಲಬೇಡ, ನನಗೆಕತ್ತಲುಕಟ್ಟಬೇಡ; It *stands* good in law ಅದುನ್ಯಾಯಕ್ಕೆತಕ್ಕದು, ಅದುನ್ಯಾಯದಲ್ಲಿಸಲುವಳಿಯಾದದ್ದು; He *stood* in competition with me ನಾನುವಿಚಾರಿಸುವದ್ದೇ ಅವನುವಿಚಾರಿಸಿದನು, ನಾನು ನೋಡಬೇಕೆಂದಿರುವದಂನ್ನೇಅವನು ನೋಡಯಿಷ್ಟಮಾಡಿಯಿದ್ದನು; I *stand* in fear of him ನಾನುಅವನಿಗೆಭಯಪಡುತ್ತೇನೆ; He *stands* upon his reputation ಅವನುತಂನಅಭಿಮಾನಕ್ಕೆಬಿದ್ದುಸಾಯುವವನು, ಅವನು ಮಾನಕ್ಕೆಅಂಜುವವನು; You *stand* upon trifles ನೀನುಅಲ್ಪಕ್ಕೆಆಶೆಮಾಡುವವನು; We *stood* in for the harbour ನಾವುರೇವಿನಲ್ಲಿಬಿದ್ದೆವು.

Stand, s. n. ಠಾವಣೆ ಸ್ಥಳ, ಜಾಗ್ಯ, ಜಾಗ್ಯೆವು. v. *Station, post.* (*a frame on which vessels, &c. are placed*) ಬಂಕ್ಕಡಿ, ಅಡ್ಡಣಿಗೆ, ಕಾಲುಮಣಿಗೆ. v. *Table;* also *stop, difficulty, interruption.* There is a *stand* in trade ವ್ಯಾಪಾರಮಂದವಾಗಿದೆ, ವ್ಯವಹಾರನಿಂತದೆ; (*to make a stand*) ಹರಕತು ಮಾಡ; (*to be at a stand, or at a loss*) ಭ್ರಮಣೆಯಾಗಿರ; (*as a fever*) ಕಟ್ಟುಸಡ್ಲದಿರ, ಏಕಪ್ರಕಾರವಾಗಿರ.

Standard, s. n. (*ensign, banner*) ಝಾಂಡ, ನಿಶಾಣೆ; (*standard bearer*) ಪತಾಕಿ, ವೈಜಯಂತಿಕ; (*the royal standard*) ಅರಶಿನಝಾಂಡ; (*the victorious standard*) ಜಯಧ್ವಜ, ವೀರಪತಾಕ; (*to erect the standard*) ಝಾಂಡಾಹಾಕ, ನಿಶಾಣೆಹಾಕ, ಬಾವಟೆಯೇರಿಸ; (*the insignia on a standard*) ಬಿರುದಿನಬೊಂಬೆತೊಡರು, ಬಿರುದಿನಹಾಲೆ; (*the standard of weights or measures*) ನಿರ್ಧಾರ, ಕಟ್ಲೆ; (*to stamp weights or measures with standard marks*) ಕಟ್ಟೆಅಳತೆಗೆಮುದ್ರೆಹಾಕ; (*of standard measure or weight*) ಖರೆಅಳತೆ, ಖರೆತೂಕ. v. Also *pattern, model, rate.* (*a standard bearer*) ನಿಶಾಣೆಯವ, ಘಟಿಕಿದಾರ, ಝಾಂಡದವ; (*a stander-by*) ನೋಡಿಕೊಂಡಿಯಿರುವವ. v. *By-stander.*

Standing, part. ನಿಲ್ಲುವ, ನಿಂದಿರುವ; (*not standing to an agreement*) ಅಪ್ರಮಾಣಕ್ಕೆಬೀಳ, ಮಾತುತಿರಘೂಂಕ.

Standing, a. (*lasting*) ಶಾಶ್ವತವಾದ, ಚಿರತರವಾದ. v. Also *settled, established, stagnant.*

Standing, s. n. ನಿಲ್ಲುವದು, ನಿಂದಿರುವದು, ನಿಂತುಕೊಂಬುವದು. v. *Continuance;* also *station, rank, condition, competition. (of long standing)* ಪ್ರಾಚೀನವಾಗಿಯಿರುವ, ಬಹುದಿವಸಗಳಾಗಿಯಿರುವ. v. *Ancient. (of short standing)* ನಿಂನೆಮೊಂನೆಯಾಗಿರುವ, ಸ್ವಲ್ಪದಿವಸದ.

Standish, s. n. *(for ink, &c.)* ಕಲಮದಾನಿ, ಸಂದೂಕ.

Stanza, s. n. ಗಾಯತ್ರಿ, ಗಾಥ.

Staple, s. n. *(emporium)* ವರ್ತಕಪ್ರವರ್ತಕವಾದಪಟ್ಟಣ, ಷಹರು; *(a staple trade)* ಗಿರಾಕಿಯಾದವರ್ತಕ, ಪ್ರಾರ್ಥ್ಯವ್ಯವಹಾರ, ಬಹುಕರದವರ್ತಕ; *(staple commodities)* ಥರವಾದದಿನಸುಗಳು, ಬೇರಹೋಗುವಸರಕು, ಪಿಚ್ಚವಳಿ; *(the staple of a lock or bolt)* ಘಡಿ.

Star, s. n. ನಕ್ಷತ್ರ, ದಕ್ಷತ್ರವು, ತಾರೆ, ತಾರಕ, ಉಡು, ಮೀನು, ಅರಿಲು, ತಾರಗೆ; *(the polar star)* ಧೃತಿಕರ, ಗ್ರಹದಾತ; *(a wandering star)* ತಿರುಗುವನಕ್ಷತ್ರ; *(the morning star)* ಬೆಳಗಿನಚುಕ್ಕಿ; *(the evening star)* ಶುಕ್ರ; *(a wandering star, a planet or comet, as distinguished from a fixed star)* ಗ್ರಹನಕ್ಷತ್ರ; *(a little star)* ಚಿಕ್ಕಚುಕ್ಕಿ; *(a falling star)* ಪಾತನಕ್ಷತ್ರ, ನಕ್ಷತ್ರಪಾತ; *(the star or planet Saturn)* ಶನಿ, ಮಂದ, ಸ್ಥಿರ; *(the star Jupiter)* ಬೃಹಸ್ಪತಿ, ಗುರು; *(the star Mars)* ಅಂಗಾರಕ, ಮಂಗಳ, ಕುಜ, ಸೋಮ; *(the star Venus)* ಶುಕ್ರ, ಭೃಗು, ಭಾರ್ಗ; *(the star Mercury)* ಬುಧ, ಸೌಮ್ಯ; *(a bright star)* ಪ್ರಕಾಶವಾದನಕ್ಷತ್ರ; *(the influence of the stars)* ನಕ್ಷತ್ರಜಾತಕ; *(the ascendant of a star)* ಗ್ರಹಯೋಗ, ಲಗ್ನ; *(the star predominant at the birth of any person)* ಜನ್ಮನಕ್ಷತ್ರ, ರಾಶಿನಕ್ಷತ್ರ; *(a fortunate aspect of the stars)* ಮಹರ್ಷಶಾಯೋಗ; *(to shine or twinkle as stars)* ನಕ್ಷತ್ರಹೊಳೆಯ; *(to rise as stars)* ನಕ್ಷತ್ರವುದಯಿಸ; *(to observe the stars)* ನಕ್ಷತ್ರನೋಡ, ಲಗ್ನನೋಡ; *(a stargazer)* ಜ್ಯೋತಿಷ್ಕ, ಸಿದ್ಧಾಂತಿ. v. *Astronomer. (a star, mark of reference in a book)* ಹಂಸಪಾದ; *(the science of the stars)* ಜ್ಯೋತಿಷಶಾಸ್ತ್ರ. v. *Astronomy.*

Starboard, s. n. *(right side of a ship)* ಹಡಗಿನಬಲಗಡೆ.

Starch, s. n. ಗಂಜಿ.

To Starch, v. a. *(linen)* ಗಂಜಿಯಿಡ, ಗಂಜಿಹಾಕ.

Starched, part. ಗಂಜಿಯಿಟ್ಟ, ಗಂಜಿಹಾಕಿದ.

To Stare, v. n. ಬಿರಿಗಣ್ಣುಬಿಡ; *(to stare at sternly)* ಕಿಕ್ಕರಿಸಿಕೊಂಡುನೋಡ; *(to stare in the face, to be undeniably evident)* ನಿರ್ಮಲವಾಗಿರ, ಸ್ಪಷ್ಟವಾಗಿರ, ಬಟ್ಟಬೈಲಾಗಿರ.

Stare, s. n. *(fixed look)* ಕಿಕ್ಕರಿಕೆ, ಬಿಕ್ಕರಿಕೆ, ಮಿಕ್ಕರಿಕೆ.

Starer, s. n. ದಿಗಿಲುಬಿದ್ದುನೋಡುವವ, ಗಾಬರಿಯಾಗಿನೋಡುವವ.

Staringly, ad. ಬಟ್ಟಬಯಲಾಗಿ, ನಿರ್ಮಲವಾಗಿ, ಸ್ಪಷ್ಟವಾಗಿ.

Stark, a. *(quite)* ಪೂರ, ತುಂಬ, ಸಂಪೂರ್ಣ. v.

Stiff, strong, gross, deep, full, more, quite, simple. (stark mad) ಜೋರಳ್ಳ ಹುಚ್ಚಾದ, ಮೀರಿದ ಹುಚ್ಚಾದ; *(stark blind)* ಪೂರ್ಣಾಂಧವಾದ, ಬಹುಅಂಧತ್ವದ; *(stark naked)* ಹುಟ್ಟುಬಿಡಿಗಂಬರದ, ಬರೆಬತ್ತಲಾದ.

Starless, a. ನಕ್ಷತ್ರವಿಲ್ಲದ, ಚುಕ್ಕೆಯಿಲ್ಲದ.

Starlight, s. n. *(lustre of the stars)* ನಕ್ಷತ್ರದ ಕಾಂತಿ; *(a starlight night)* ನಕ್ಷತ್ರದರಾತ್ರಿ, ಬೆಳಂಜಳ್ಳವಾದರಾತ್ರಿ.

Starlike, a. ನಕ್ಷತ್ರದಹಾಗೆ, ನಕ್ಷತ್ರದಪ್ರಕಾರ.

Starling or Stare, s. n. ಗೊರವಂಕ, ಶಾರಿಕ, ಮೈನ.

Starry, Starred, a. ನಕ್ಷತ್ರದ; *(the starry heavens)* ನಕ್ಷತ್ರದಮಂಡಲ; *(ill starred)* ಅವಯೋಗದ. v. *Unfortunate. (a star shoot, emission from a star)* ನಕ್ಷತ್ರಪಾತ.

To Start, v. a. *(spring up)* ಥಿಡಗ್ಗನೆಯೇಳ್ಳ; *(to start from terror)* ಬೆಚ್ಚಿಬೀಳ್ಳ, ಮಿಟ್ಟಿಬೀಳ್ಳ. v. *To tremble. (to start at his own shadow)* ನೆರಳ್ಗೆ ಗಂಜಿಕೊಳ್ಳ; *(to start, as eyes from the sockets)* ಕಣ್ಣುಬಿದ್ದರ, ಕಣ್ಣಾದರ; *(to start horses at a race)* ಕುದುರೆಪ್ರಮಾಣ, ಲಗ್ಗೆ; *(to start, set out on any pursuit)* ಮುಂಕೊಳ್ಳ, ಹೊರಡ, ಮುಂಬೀಳ್ಳ, ತೊಡಗ. v. *To begin. (to start or deviate from any thing)* ತಪ್ಪಿಹೋಗ, ತಪ್ಪಿಸ; *(to start, rouse)* ಎಬ್ಬಿಸ, ಎಚ್ಚರಮಾಡ; *(to start, produce to view or notice)* ಕಾಣಿಸಿಕೊಡ, ತೋರಿಸಿಕೊಡ; *(to start a subject or opinion)* ಪ್ರಸ್ತಾಪಮಾಡ, ಪ್ರಸ್ತಾಪಿಸ, ಪೂರ್ವೋತ್ತರ ವಿತ್ತ, ಸಂಗತಿತೆಗಿಯ; *(to start or put suddenly out of place)* ಝಟಿಕಾಯಿಸ, ಕೆದಿಯ, ಕೆದಿಹೋಗ; *(to start from sleep)* ನಿದ್ರೆಯಲ್ಲಿ ಬೆಚ್ಚಿಬೀಳ್ಳ; I got the *start* of him ನಾನವನಕ್ಕಿಂತ ಮುಂಚೆ ಹೋದೆನು; *(to start a hare)* ಹೊರಡಿಸ, ಹಾರಿಸಿಬಿಡ; He *started* a question ಅವನು ಸಂಶಯ ಹುಟ್ಟಿಸಿದನು; He *started* a doubt ಅವನು ಸಂದೇಹಪಟ್ಟನು, ಸಂದೇಹಪಡಿಸಿದನು, ಸಂಶಯವಿಟ್ಟನು; *(a horse that starts)* ಚಮಕಾಯಿಸುವ ಕುದುರೆ, ಬೆದರುವ ಕುದುರೆ; He *started* from his subject ಅವನು ವಿಷಯದ ಸಂಗತಿಬಿಟ್ಟು ಮತ್ತೊಂದು ಸಂಗತಿಗೆ ಹಾರಿದ.

Start, s. n. *(quick and sudden spring)* ಬೆಚ್ಚಿಕೆ, ಮಿಟ್ಟಿಬೀಳ್ಳುವಿಕೆ. v. Also *tremor, shock. (a sudden effort)* ಹುಮ್ಮಸ, ಹುರುಪು. v. *Fit, sally. (starting horses at a race)* ಕುದುರೆಪ್ರಮಾಣ ಮಾಡುವದು, ಲಗ್ಗೆಮಾಡುವದು; *(the starting post at a race)* ಲಗ್ಗೆಕಂಬ, ಪಂಥದಕಂಬ, ಸುತ್ತುಕಂಬ, ಪಾದಿ; *(to get the start, gain an advantage)* ಹಿಂದಕ್ಕೆಹಾಕುವಿಕೆ. v. Also *to outstrip.*

To Startle, v. a. ಬೆದರಿಸ, ದಿಗಿಲುಪಡಿಸ, ಮಿಟ್ಟಿಬಡಿಸ, ಮಿಟ್ಟಿಬೀಳಿಸ. v. *To frighten, shock, shrink.*

Startled, part. ದಿಗಿಲುಪಟ್ಟ, ಬೆದರಿಸಲ್ಪಟ್ಟ. v. *Frightened.*

To Starve, v. n. *(perish or be perishing with hunger)* ಸಾಯ, ಹಸಿವಿನಿಂದ ಸಾಯ, ಹೊಟ್ಟೆಗಿಲ್ಲದೆ ಸಾಯ; *(to kill with hunger)* ಉಪವಾಸಕ್ಕೆ ಹಾಕಿಕೊಲ್ಲ, ಉಪವಾಸಹಾಕ; *(to suffer*

extreme poverty) ದಟ್ಟದಾರಿದ್ರ್ಯಶೋಧಿಸ, ಬಡತನಸಶೋಧಿಸ.

Starved, part. *(with hunger)* ಉಪೋಷ್ಯವಾಗಿಕೊಂದ, ಕೂಳಿಲ್ಲದಹಾಗೆಕೊಂದ.

Starving, s. n. ಉಪೋಷ್ಯವಾಗಿಸಾಯುವದು, ಕ್ಷುತ್ಕಾರಾಡಿಸಾಯುವದು; *(snatching greedily as a starved man)* ಗಬರಿಕೊಳ್ಳುವದು, ಗಬಕ್ಕನೆತೆಗದುಕೊಂಬುವದು; *(starving one's self)* ಉಪೋಷ್ಯಬೀಳುವದು, ಕಟಕಟೆಮಾಡುವದು, ಕಟ್ಟುಪೋಷ್ಯಮಾಡುವದು.

Starveling, s. n. ಬಡಬಕ್ಕಲು, ಬಡಬಡಕಲು, ಲಾಗಡು, ದಟ್ಟಿ.

State, s. n. *(condition)* ಅವಸ್ಥೆ, ಬಾಳ್ವೆ, ಸ್ಥಿತಿ, ಇರುವಿಕೆ; *(station, rank)* ತರ, ಗಿರಿ, ಹುದ್ದೆ, ಉದ್ಯೋಗ; *(the public, community, government)* ರಾಜ್ಯ, ದೇಶ, ನಾಡು, ಪ್ರಜೆಗಳು; *(pomp, magnificence)* ದೊಡ್ಡಸ್ಥಿತಿ, ವೈಭವ, ಉಬ್ಬಟೆ, ಉಬ್ಬರ, ಉಂಸತ, ದಬ್ಬು, ಅಟ್ಟಹಾಸ, ಡಂಬಾಚಾರ. v. *Grandeur, dignity.* *(a state, statement or representation)* ಹೇಳಿಕೊಡುವಿಕೆ, ತೋರಿಕೊಡುವಿಕೆ, ಹೇಳೋಣ; *(a state or account)* ಲೆಖ್ಖ; *(affairs of state)* ರಾಜಕಾರ್ಯಕಾರ್ಯಗಳು, ಸರಕಾರದಕಾರ್ಯಗಳು; In this *state* of affairs ಕಾರ್ಯಂಹೀಗಿರುವಾಗ, ಸಂಗತಿಯಿಪ್ರಕಾರಯಿರುವಾಗ; In whatsoever *state* it is ಅದುಹ್ಯಾಗೆಯಿದ್ದರುಯಿರಲಿ; *(according to the statement)* ಹೇಳಿದಪ್ರಕಾರವೆ; *(a good state)* ಸೌಖ್ಯದೆಶೆ, ಉತ್ತಮರೀತ್ಯೆ; *(a bad state)* ದುರ್ದೆಶೆ; *(to be in a good state)* ಚೆಂದವಾಗಿರ, ಕ್ಷೇಮದಲ್ಲಿರ, ಸ್ವಸ್ಥವಾಗಿರ, ಸುರಕ್ಷಿತವಾಗಿರ; *(to be in a bad state)* ಅವಸ್ಥೆಯಾಗಿರ, ಸಂಕಟವಾಗಿರ, ಆಪತ್ತಿನಲ್ಲಿರ; His health is in a bad *state* ಅವನಶರೀರಬಹುಅಶಾಂತವಾಗಿದೆ, ಅವನಶರೀರಬಹುವೈಪರೀತ್ಯವಾಗಿದೆ, ಅವನಶರೀರಕ್ಕೆಬಹುಸಂಕಟವಾಗಿದೆ; That horse is in a very bad *state* ಆಕುದುರೆಬಹುಲಾಗಡಾಗಿಅದೆ; *(a state of confusion)* ಘೋಂಬರೆ, ಗೊಂದಳೆ; *(a chair or bed of state)* ಸಿಂಹಾಸನ, ರಾಜಾಸನ. v. *Throne,* *(ministers of state)* ಮಂತ್ರಿಗಳು, ಪ್ರಧಾನಿಗಳು, ರಾಜ್ಯಾಧಿಕಾರಿಗಳು; *(the pillar of the state)* ಆಧಾರಸ್ತಂಭ, ಜೀವಾಳದಗಟ್ಟಿಕ; *(the states of a country)* ದೇಶದವ್ಯವಹಾರ, ಆಸ್ಥಳದರಾಜ್ಯದಅಧ್ಯಕ್ಷರು.

To State, v. a. *(represent in a memorial)* ತೋರಿಸಿಕೊಡ; *(to state an account)* ಒಟ್ಟಾಗಿಬರದಿಡ, ಒಟ್ಟಾಗಿಬರದುಕೊಡ; *(to state, arrange any thing, or to state the question)* ತರ್ಕದಸಂಗತಿಯನ್ನುಚೆಂದಾಗಿತೋರಿಸ.

Stateliness, s. n. ದೊಡ್ಡಸ್ತಿಕೆ, ಅಟ್ಟಹಾಸ, ಡಾಂಭಿಕ; *(of walk)* ಮಂದಗಮನ, ಪಾದಛಾಯಿಕೆ, ಡಾಂಭೀಕ. v. *Grandeur, loftiness.* *(to walk with stateliness)* ಮಂದವಾಗಿನಡೆಯ, ಪಾದಛಾಯೆಯಾಗಿನಡೆಯ, ಡಾಂಭೀಕವಾಗಿನಡೆಯ.

Stately, ad. ಡಂಬಾಚಾರವಾಗಿ, ದೊಡ್ಡಸ್ತಿಕೆಯಾಗಿ, ಹಿರಿಯತನವಾಗಿ, ಅಹಂಕಾರವಾಗಿ.

Stately, a. ಅಟ್ಟಹಾಸದ, ಡಂಬಾಚಾರದ, ದೊಡ್ಡಸ್ತಿಕೆಯ.

Statesman, s. n. *(one acquainted with the affairs of state)* ಪ್ರಧಾನನು, ಮಂತ್ರಿಯು. v. *Minister.*

Station, s. n. *(situation where any one is placed)* ಸ್ಥಳ, ಎಡೆ, ತಾವು, ಜಾಗೆ. v. *Situation, post, place, residence. (employment, office)* ಉದ್ಯೋಗ, ಕೆಲಸ; *(rank, condition of life)* ತರ, ಗತಿ, ಪದ್ದಿ; *(a station for shipping)* ಹಡಗ ಪ್ರವರ್ತಕಸ್ಥಳ.

To Station, v. a. ಇಕ್ಕು, ಇಡು, ನೇಮಿಸು. v. Also *to place, appoint.*

Stationary, a. ಚಲಿಸದ, ಸ್ಥಿರವಾಗಿರುವ, ಇದ್ದಲ್ಲಿರುವ, ವರ್ತಿಷ್ಣು; *(implements for writing)* ಸಾದಲವಾರಿ.

Stationed, part. ಇಟ್ಟ, ನೇಮಿಸಿದ, ಇಕ್ಕಿದ, ಇರಿಸಿದ; *(horses stationed for posting)* ಅಂಚೆಯಿಟ್ಟ ಕುದುರೆಗಳು; *(to be stationed)* ನೇಮಿಸಲ್ಪಡು, ಇಡಲ್ಪಡು, ಇರಿಸಲ್ಪಡು. v. *To be posted.*

Stationer, s. n. *(seller of paper)* ಕಾಗದ ಮಾರುವವ.

Statuary, s. n. *(the art of carving images)* ಶಿಲ್ಪಕಾರಿಕೆ; *(a carver of statues)* ಶಿಲ್ಪಾಚಾರಿ, ಶಿಲ್ಪಕಾರ, ಶಿಲ್ಪಿಕ. v. *Carver.*

Statue, s. n. *(human)* ಶರೀರದಾಕಾರ; *(an image)* ವಿಗ್ರಹ, ಪ್ರತಿಮೆ, ಪುತ್ತಳಿಕೆ; *(a wooden statue)* ಕಟ್ಟಿಗೆಬೊಂಬೆ, ದಾರುವಿಗ್ರಹ. v. *Image. (a stone statue)* ಶಿಲಾವಿಗ್ರಹ, ಕಲ್ಲಿನ ಪ್ರತಿಮೆ.

Stature, s. n. ಪ್ರಮಾಣ, ಉದ್ದ, ನಿಲುವು; *(middle stature)* ಹಾಳತವಾದ, ತಕ್ಕಷ್ಟು; *(tall of stature)* ಬಹುಪುಷ್ಟವಾದ, ಬಹಳ ಊಬಾದ, ಬಹಳ ಎತ್ತರವಾದ; *(short of stature)* ಗಿಡ್ಡ, ವಾಮನ, ಮೋರಿ, ಕುಬ್ಜ. v. *Dwarf. (elegant of stature)* ಸುಂದರರೂಪು, ಚೆಲುವಾಕಾರ, ಶೃಂಗಾರಾಕಾರ.

Statute, s. n. ಪ್ರಮಾಣ, ಕಟ್ಟಳೆ, ಕಟ್ಟು.

To Stave, v. a. *(to break in pieces)* ತುಂಡುಮಾಡು, ತುನಿಕೆತುನಿಕೆಮಾಡು; *(a cask)* ಪೀಳು, ಒಡಕುಮಾಡು; *(to put off, repel)* ಹೋಕೆಹೋಕೆಂದು ಬಡಿಯು, ಹಳೇಯುನು, ಅದರಿಸು, ತಟ್ಟಿಬಿಡು. v. Also *to put off, delay.*

To Stay, v. n. *(continue in a place)* ಇರು, ವಾಸಿಸು, ನೆಲಕೊಳ್ಳು. v. *To dwell. (to stay away)* ಬಾರದೆಯಿರು; *(to stay by the way, to be long a coming)* ಆಲಸ್ಯಮಾಡು, ತಡಮಾಡು, ಜಂಪ್ಕಮಾಡು. v. *To loiter. (to stay behind)* ಹಿಂದಕೆ ನಿಲ್ಲು; *(to stay for, expect)* ಕಾದುಕೊಂಡಿರು, ನಿರೀಕ್ಷಿಸಿಕೊಂಡಿರು, ಎದುರುನೋಡಿಕೊಂಡಿರು; *(to stay, hinder from proceeding, keep from departure)* ಊಟಂಕಿಸು, ಅಟಕಾಯಿಸು. v. *To restrain, hinder.*

To Stay, v. a. *(prop)* ಹೋಟೆಯಿಡು, ಆಧಾರವಿಡು.

Stay, s. n. *(continuance in a place)* ವಾಸಿಸುವಿಕೆ ಇರುವಿಕೆ, ನೆಲಕೊಳ್ಳುವಿಕೆ; *(without stop or stay)* ಅತ್ಯಂತರವಿಲ್ಲದೆ, ಅಟಕಾವಿಲ್ಲದೆ; *(a prop)* ಹೋಟೆ; *(an obstruction)* ಅಡ್ಡಗಟ್ಟು, ಆತಂಕ, ಅತ್ಯಂತರ; *(cessation of progress)* ನಿಲ್ಲಿಕೆ, ನಿಲುವಿಕೆ, ತಡದಿರುವಿಕೆ.

Stayed, part. ಬುದ್ಧಿಬಟೆತ, ಭಾರಿಯ, ಘಟ್ಟಿಯ. v. *Fixed, serious, sedate.*

Stead, s. n. ಸ್ಥಳ, ಜಾಗೆ, ಎಡೆ. v. *Place*; also *use, help.* (*instead of*) ಬದಲಾಗಿ, ಅಡಲುಬದಲಾಗಿ ; (*to stand one in stead*) ಅನುಕೂಲವಾಗಿರ, ಸಹಾಯವಾಗಿರ; (*to be of no stead*) ಅಪ್ರಯೋಜನವಾಗಿರ, ಕೆಲಸಕ್ಕೆಬಾರದಿರ.

Steadfast, Steady, a. (*constant, resolute*) ದೃಢಬದ್ಧ, ಸ್ಥಾಪಿತ, ಶಾಶ್ವತ, ಅಚಲ, ನಿಶ್ಚಲ, ನಿಜ, ನಿಶ್ಚಯ, ನಿತ್ಯ, ಕದಲದ.

Steadfastly, Steadily, ad. ಸ್ಥಿರವಾಗಿ, ಶೈತ್ರವಾಗಿ, ಖಚಿತವಾಗಿ, ಘಟ್ಟಿಯಾಗಿ, ದೃಢವಾಗಿ, ಶಾಶ್ವತವಾಗಿ.

Steadfastness, Steadiness, s. n. ಸ್ಥಿರವು, ಶೈತ್ರವು, ಖಚಿತವು, ಘಟ್ಟಿಯು, ದೃಢವು, ಶಾಶ್ವತವು. v. *Firmness, constancy, resolution.*

Steak, s. n. (*a slice of flesh*) ಮಾಂಸಖಂಡ, ಮಾಂಸದ ತುಂಡು, ಮಾಂಸದ ತುನಿಕೆ, ಮಾಂಸದಚೂರು.

To Steal, v. a. (*take by theft*) ಸುಲುಕೊಳ್, ಚೋರತ್ವಮಾಡ, ಸುಲಿಯ, ಲಪಟಾಯಿಸ, ಕದಿಯ; (*to steal away*) ಜರಿದುಹೋಗ, ಟಿಸ್ಕಿಹೋಗ, ತಕ್ಕಿಸ ; (*to steal upon*) ತಿಂನಿಷ್ಟೆಯಾಗಿಬರ, ಅರಿಯದಧಾಂಗೆಬರ; (*to steal into one's favour*) ಅನುಸರಣೆಮಾಡ, ಸ್ನೇಹಸಂಪಾದಿಸಿಕೊಳ್, ವಶಮಾಡಿಕೊಳ್; (*to steal upon one unawares*) ಕಾಣದಹಾಗೆಬರ, ಯಾಮರಿಸಿಬರ, ಮರ್ಕೆಲಿಬರ, ಅಕಸ್ಮಾತ್ತಾಗಿಬರ; (*to steal the mind from a thing*) ಅಟಮರಿಸ.

Stealer, s. n. ಚೋರ, ಕಳ್ಳ, ತಸ್ಕರ. v. *Thief.*

Stealingly, ad. ವಂಚನೆಯಾಗಿ, ತಕ್ಕಾಗಿ. v. *Slily, by stealth.*

Stealth, s. n. (*theft*) ಕಳ್ಳತನ, ಚೋರತನ, ತಸ್ಕರತನ; (*the thing stolen*) ಕಳವು; (*secret act*) ತಕ್ಕು, ತಕ್ಕಿಸುವ ಕೆಲಸ ; (*by stealth*) ತಕ್ಕಾಗಿ, ಮೋಸವಾಗಿ, ರಹಸ್ಯವಾಗಿ. v. *Clandestinely.*

Steam, s. n. ಆವರಿ; (*to dress in steam or to cook by steam*) ಆವರಿಯಲ್ಲಿಮಾಡ, ಆವರಿಯಲ್ಲಿಕುದಿಸ.

To Steam, v. n. ಉಗಿಯೇಳ್.

Steed, s. n. ಕುದುರೆ, ಅಶ್ವ. v. *Horse, courser.*

To Steel, v. a. (*make hard or hardy*) ಘಟ್ಟಿಮಾಡ; (*to edge with steel*) ಉಕ್ಕುಮೋರಿಗೆಹಾಕ, ಉಕ್ಕುಮೊನಿಗೆಹಾಕ.

Steel, s. n. ಉಕ್ಕು, ಸಾರಲೋಹ.

Steeled, a. ಉಕ್ಕುಹಾಕಿದ.

Steely, a. ಉಕ್ಕಿನ; (*hard, firm*) ಘಟ್ಟಿಯಾದ, ಕಾಠಿಂನ್ಯವಾದ.

Steep, a. ಪ್ರಪಾತದ, ಪಪಾತದ.

Steep, s. n. ಪತನಸ್ಥಳ, ಪ್ರಪಾತ, ಪಪಾತ. v. *Precipice.*

Steepness, s. n. ಕಮರಿಯು, ಪ್ರಪಾತವು, ಪಪಾತವು. v. *Declivity.*

To Steep, v. a. ತೋಯಿಸ, ನೆನಿಸ, ಅದ್ದ, ನೆನೆಯಿಡ, ಒದ್ದೆಮಾಡ. v. *To soak.*

Steeped, part. ನೆನಿಸಿದ, ತೋಯಿಸಿದ, ಅದ್ದಿದ, ಒದ್ದೆಮಾಡಿದ. v. *Soaked.*

Steeple, s. n. ಶಿಖರ, ಶೃಂಗ.

Steer, s. n. ಎತ್ತು, ವೃಷಭ, ಹೋರಿ. v. *Bullock.*

To Steer, v. a. (*a ship*) ಹಡಗನಡಿಸ.

Steerage, s. n. *(the act or practice of steering)* ಹಡಗ ನಡಿಸುವಿಕೆ ; *(the stem, or hinder part of a ship)* ಹಡಗಿನ ಹಿಂಭಾಗ.

Steersman, s. n. ಹಡಗ ನಡಿಸುವವ.

Stem, s. n. ತುಂಬು, ದಂಟು. v. *Stalk, trunk.* *(family, race)* ವಂಶಾವಳಿ, ಪಾರಂಪರಿ ; *(the fore part of a ship)* ಹಡಗಿನ ಮುಂಭಾಗ.

To Stem, v. a. *(pass thro')* ಕಟ್ಟಾಯ, ಹಾಯ, ದಾಟು; *(stop, resist)* ಅಡ್ಡಕಟ್ಟು, ನಿಲ್ಲಿಸು ; *(to stem a current)* ಕಾಲುವೆಅಡ್ಡಕಟ್ಟು, ನೀರಡ್ಡಕಟ್ಟು.

Stench, s. n. ದುರ್ಗಂಧ, ಗಬ್ಬು, ನಾತ, ಕೆಟ್ಟವಾಸನೆ.

To Stench, v. a. ದುರ್ಗಂಧಮಾಡು, ಗಬ್ಬಿಬ್ಬಿಸು, ಗಬ್ಬುಪಡಿಸು.

Step, s. n. *(progression by one removal of the foot)* ಪಾದಘಾಯ ; *(to go with long steps)* ಲಂಘಿಸಿನಡೆಯ, ಜಿಗದುನಡೆಯ ; *(the step of a stair)* ಮೆಟ್ಟಿಕೆ ; *(the step of a ladder)* ಹಲ್ಲು, ನಿಚ್ಚಣಿಕೆಹಲ್ಲು ; *(a step of promotion)* ಏರ್ವಿಕೆ, ಹೆಚ್ಚುವಿಕೆ, ಅತಿಕ್ರಮಿಸುವಿಕೆ ; *(a light step)* ಸಪ್ಪಳಿಯಿಲ್ಲದ ನಡಿಗೆ; *(step by step)* ಮೆತ್ತ ಮೆತ್ತಗೆ, ತರತರ; *(to ascend step by step)* ಮೆತ್ತಮೆತ್ತಗೆಯೇರು; *(to tread in another's steps)* ಒಬ್ಬರ ಹಾಗೆ ನಡೆಯ, ಒಳಿಕೊಡ್ಡಿನಡೆಯ, ಅನುಕರಿಸು ; *(to make a false step)* ಕಾಲುಜಾರು, ಕಾಲುಜರಗು. v. *To slide, slip, err* ; also *air, gait, action, conduct.* *(the step of a door)* ಎತ್ತುಪಾವಟಿಗೆ, ಪಾವಟಿಗೆ.

To Step, v. n. ಅಡಿಯಿಡು, ಅಡಿಹಾಕು, ಪಾದವಿಡು, ಕ್ರಮಿಸು. v. *To go.* *(to step slowly, gravely)* ಅಡಿಯಮೇಲಡಿಯಿಡು, ಹೆಜ್ಜೆಮೇಲೆಹೆಜ್ಜೆಹಾಕು; *(to step out)* ಕಾಲೆತ್ತಿಹಾಕು, ಏಟುಕಾಲುಹಾಕು; *(to step out of doors)* ಹೊರಗೆಹೋಗು, ಹೊರಗೆಕಾಲಿಡು; *(to step in)* ಒಳ್ಳೆಕೆಬರು, ಒಳ್ಳೆಕೆಕಾಲಿಡು, ಒಳಗೆಪ್ರವೇಶಿಸು ; *(to step back)* ಹಿಂದಕ್ಕೆಹೋಗು, ಹಿಂಜರಿಯ, ಹಿಂದಡಿಯಿಡು, ಹಿಂದಾಗು; *(to step forward)* ಮುಂದಕ್ಕೆಹೋಗು, ಮುಂದಕ್ಕೆಅಡಿಯಿಡು, ಮುಂದಕ್ಕೆನಡಿಯ; *(to step aside)* ವಾರೆಗೆಹೋಗು; *(to step after one)* ಹಿಂಬಾಲಿಸು, ಹಿಂದೆಹತ್ತು, ಹೆಜ್ಜೆಹಿಡಿಯ, ಜಾಡುಹಾಕು; *(to step between)* ಸಂಧಿಮಾಡು, ನಡುವೆತೊಡರು. v. *To mediate, interpose.* *(to step on, go fast)* ವದುಗಾಗಿಹೋಗು, ಕಾಲುಮಾಡು, ಜಲ್ದಾಗಿಹೋಗು; *(to step up)* ಬಳಿಗೆಬರು, ಸಮೀಪಕ್ಕೆಬರು; *(to step ashore)* ಧಡಕ್ಕೆಹೋಗು.

Step-brother, s. n. ಮಲಅಂಣ, ಮಲಸಹೋದರ.

Step-daughter, s. n. ಮಲಮಗಳು.

Step-father, s. n. ಮಲತಂದೆ.

Step-mother, s. n. ಮಲತಾಯಿ, ಮಲಅಂಮ್ಮ.

Step-son, s. n. ಮಲಮಗ.

Steril, a. ಬಂಜರಿನ, ಕಟಿಕ. v. *Barren.* *(steril land)* ಬಂಜರಭೂಮಿ, ಕಟಿಕಭೂಮಿ, ಸವುಳಭೂಮಿ, ಜೀಳುಭೂಮಿ, ಕಾಡುಭೂಮಿ.

Sterility, s. n. ಬಂಜರು, ಕಟಿಕು, ಸವುಳು, ಜೀಳು, ಕಾಡು. v. *Barrenness.*

Sterling, a. ಅಚ್ಚ, ಸಲುವಳಿ, ತಾಜಾದ, ಅಮಿಶ್ರಿತಿಯ. v. *Genuine, standard.*

Stern, s. n. *(of a ship)* ಹಡಗಿನ ಹಿಂಭಾಗ.

Stern, a. (*severe of countenance*) ಕಠೋರದ, ಕಾಠಿಣ್ಯದ, ನಿಷ್ಠುರದ; (*severe of manners*) ಕ್ರೂರದ, ಅಘೋರದ. v. *Harsh, inflexible;* also *hard, severe, afflictive.*

Sternly, ad. (*in look*) ಕಠೋರವಾಗಿ, ಕಾಠಿಣ್ಯವಾಗಿ, ನಿಷ್ಠುರವಾಗಿ; (*in manners*) ಕ್ರೂರವಾಗಿ, ಅಘೋರವಾಗಿ.

Sternness, s. n. (*of look*) ಕಠೋರವು, ಕಾಠಿಣ್ಯವು, ನಿಷ್ಠುರವು; (*of manners*) ಕ್ರೂರತ್ವ, ಅಘೋರತ್ವ.

Stew, s. n. (*fish pond*) ಮತ್ಸ್ಯಸರೋವರ, ಮೀನುಗಳ ಕೊಳನು.

Stew, s. n. (*stewed meat*) ಕುದಿಕೆ, ಬೆಚ್ಚಗೆಮಾಡುವಿಕೆ.

To Stew, v. a. ಬೆಚ್ಚಗೆಮಾಡು, ಮೆಲ್ಲಗೆಕುದಿಸು; (*to be stewing*) ವ್ಯಸನಪಡು, ಚಿಂತೆಮಾಡು, ವಿಲಪಿಸು.

Steward, s. n. ಕಾರಕ, ನಿಮಿತ್ತಕ, ಕಾರಕೂನ, ಉಗ್ರಾಣಿಕ. v. *Agent.*

Stewardship, s. n. ಉಗ್ರಾಣಿಕತ್ವ.

Stick, s. n. ಕಟ್ಟಿಗೆ, ಕಾಷ್ಠ; (*a bit of stick*) ಕಟ್ಟಿಗೆತುಂಡು; (*a bit of stick used for picking the teeth*) ಖಡ್ಡಿ, ಕಡ್ಡಿ; (*small sticks*) ಸಣ್ಣಕಟ್ಟಿಗೆ; (*gathered by poor people for cooking*) ಪುಲ್ಲೆ, ಪುರ್ಲೆ; (*fire sticks*) ಸೌದೆಯಕಟ್ಟಿಗೆ; (*fiddle stick*) ತಾಳೆಬಿಲ್ಲು, ಸಾರಂಗದಬಿಲ್ಲು.

To Stick, v. n. (*adhere*) ಹತ್ತಿಕೊಳ್ಳು, ಅಂಟಿಕೊಳ್ಳು, ಅಂಟು; (*active verb*) ಹತ್ತಿಸು, ಹಚ್ಚು, ಅಂಟಿಸು; (*to stick, to be unable to move*) ಸಿಕ್ಕಿಕೊಳ್ಳು, ಕಚ್ಚಿಕೊಳ್ಳು, ಸಿಗಬೀಳು; (*to stick, as a rope in a pulley*) ಠಟ್ಟಿಕೊಳ್ಳು, ಅಡ್ಡಬೀಳು, ಅಟಕಾಯಿಸು; (*as an arrow in a wound*) ನಾಟು, ನಾಟಿಕೊಳ್ಳು, ನೆಡು, ನೆಟ್ಟುಕೊಳ್ಳು; (*as a sword in the sheath*) ಕಚ್ಚಿಕೊಳ್ಳು, ಸಿಕ್ಕಿಕೊಳ್ಳು; (*to stick or be embarrassed*) ಸಂದೇಹಗೊಳ್ಳು, ಅವಮಾನಪಡು, ತೋಚದಿರು, ತೊಂದರೆಗೊಳ್ಳು. v. Also *to scruple, hesitate.* (*to remain, not to be lost*) ಪಾರಿಗೊಂದಿರು, ಘಟ್ಟಿಯಾಗಿರು; (*to remain constant*) ಎಡಬಿಡದಿರು; (*to stick to, to insist upon a thing*) ಹಿಡಿದಹಿಡಿಬಿಡದಿರು, ಪಟ್ಟುಬಿಡದಿರು; (*to stick into the ground*) ನೆಡಿಸು, ಬಡಿಯು, ಜಡಿಯು; (*to stick into any thing*) ಚುಚ್ಚು, ತಿವಿಯು, ಊರು; (*to stick out, be prominent*) ಹೊರಗೆಹಾಯು, ಸಾಮುಹೊರಡು, ಹೊಟ್ಟೆಹಾಯು, ಬೊಜ್ಜೆಬಿಡು, ಮೋಟೆಹೊರಡು, ಡುಬ್ಬುಹೊರಡು; (*to refuse compliance*) ಬಿಗಿಹಿಡಿದುಕೊಂಡಿರು, ಕಚ್ಚಿಕೊಂಡಿರು, ಸಡ್ಲದಿರು; (*to stick in the stomach*) ಎದೆಗೆನಾಟಿರು, ಎದೆಯಲ್ಲಿರು; (*to stick, stab*) ತಿವಿಯು, ಚುಚ್ಚು, ನೆಡು. v. *To pierce.* (*to stick a nail*) ಆಣಿಹೊಡಿಯು, ಮೊಳೆಜಡಿಯು; He got *stuck* in the mud ಅವನು ಬುರುದೆಯಲ್ಲಿ ಸಿಗಬಿದ್ದನು; It *sticks* fast to it ಘಟ್ಟಿಯಾಗಿ ಕಚ್ಚಿಕೊಳ್ಳುತ್ತದೆ; He *sticks* by me ಅವನು ನನ್ನ ಹೊಂದಿಕೊಂಡಿದ್ದಾನೆ, ಅವನು ನನ್ನಂಟಿಕೊಂಡಿದ್ದಾನೆ, ಅವನು ನನಗೆ ಹತ್ತಿಕೊಂಡಿದ್ದಾನೆ; It *sticks* in my mind ಅದು ನನ್ನ ಮನಸ್ಸಿನಲ್ಲಿ ನೆಟ್ಟಿದೆ, ಅದು ನನ್ನ ಮನಸ್ಸಿಗೆ ಹಿಡಿದಿದೆ, ಅದು ನನ್ನ ಮನಸ್ಸಿನಲ್ಲಿ ಕೊಯ್ಯುತ್ತದೆ; It *sticks*

there ಅದ ಕ್ಕೆ ಹತ್ತಿಕೊಂಡದೆ; It *sticks* by him ಅದು ಅವನಕೊರಳಿಗೆಬಿದ್ದದೆ, ಅದು ಅವನತಲೆಮೇಲೆಬಿದ್ದದೆ; (*a commodity that sticks by one*) ಮಾರಿಕೆಹೋಗದಸರಕು; (*meat that sticks in the stomach*) ಅರಗದಅಂನ, ಅರಗದಾಹಾರ; (*to stick upon a thing*) ಮನಸ್ಸಿಟ್ಟಿರ, ಜೋಕುಕೊಂಡಿರ; (*to stick close to a thing*) ಬಿಡ್ದುಸಾಯ; (*to cause to stick*) ಹತ್ತಿಸ, ಅಂಟಿಸ.

Stickiness, s. n. ಜಿಸಟು, ಬಂಕ್ಕಟೆ, ಅಂಟು.

To Stickle, v. a. (*espouse warmly any person's interest*) ಪಕ್ಷಪಾತವಾಗ, ಒಂದುಕಡೆಗೆಹೋಗ, ಒತ್ತಟ್ಟಿಗೆಆಗ; (*to altercate*) ತರ್ಕಿಸ, ಪೇಚಾಡ, ವಾದಿಸ. v. *To contest, wrangle, trim.*

Stickler, s. n. (*partizan*) ಪಕ್ಷಪಾತಿ; (*wrangler*) ಪೇಚಾಟದವ, ತರ್ಕಿ, ವಾದಿಸುವವ.

Sticky, a. ಜಿಸಟಿನ. ಅಂಟಿನ, ಬಂಕಟಿಯ. v. *Viscous, glutinous.*

Stiff, a. ಘಟ್ಟಿಯ, ಕಠಿಣವಾದ. v. *Hard, strong, rigid.* (*proud, inflexible, obstinate,* or *stiff-necked*) ಮೊರಟಾದ, ಮಸ್ಕರದ, ಮೋಡತನದ, ದಾಂಡಿಗತನದ; (*a stiff gale*) ಬಿರುಘಾಳಿ.

To Stiffen, v. a. (*make stiff*) ಘಟ್ಟಿಮಾಡ; (*to grow stiff*) ಮರಸಾಗ, ಬಿರಸಾಗ, ಘಟ್ಟಿಯಾಗ.

Stiffly, ad. ಘಟ್ಟಿಯಾಗಿ, ಕಠಿಣವಾಗಿ. v. Also *inflexibly.*

Stiffness, s. n. ಘಟ್ಟಿಯು, ಬಿರಸು, ಮರಸು; (*inflexibility of temper*) ಮೊರಟುತನ, ದಾಂಡಿಗತನ, ಮಸ್ಕರವು. v. *Stubbornness, formality, constraint, harshness.*

To Stifle, v. a. ಉಸುರುಗಟ್ಟಿ, ದಂಮ್ಮುಕಟ್ಟಿಸ. v. *To smother, strangle, suffocate.* (*to conceal, suppress*) ಅಣಗಿಸ, ಹತ್ತಿಹಾಕ, ಬಚ್ಚಿಡ; (*to stifle one's resentment*) ಕೋಪಗಿಬಿಡದಿರ. v. *To be silent.*

Stifled, part. ಉಸುರುಗಟ್ಟಿದ, ಬಾಯಿಗಟ್ಟಿದ. v. *Smothered, suffocated.* (*suppressed*) ಅಣಗಿಸಿದ, ಹತ್ತಿಹಾಕಿದ, ಬಚ್ಚಿಟ್ಟ.

Stigma, s. n. ಬರೆಬಟ್ಟೆ, ವಚ್ಚ, ಕಂಕ. v. *Brand.*

To Stigmatize, v. a. ಸೂಡುಹಾಕ, ಮುದ್ರೆಹಾಕ, ಬರೆಹಾಕ. v. *To brand.* (*to render infamous*) ಮಾನಭಂಗಿಸ, ಅಪಕೀರ್ತಿಮಾಡ.

Stigmatized, part. ಮುದ್ರೆಹಾಕಿದ. v. *Branded.* (*rendered infamous*) ಮಾನಭಂಗಮಾಡಿದ, ಅಪಕೀರ್ತಿಮಾಡಿದ.

Stile, s. n. (*of a dial*) ಘಡಿಯಾರದಮುಳ್ಳು. v. *Style.*

Stiletto, s. n. ಕಠಾರಿ, ಬೆಲ್ಲಾಣಾ. v. *Dagger.*

To Still, v. a. ಸಮಜಾಯಿಸ, ತಂಪುಗೊಳಿಸ. v. *To quiet, appease.* (*to make silent*) ಸುಂಮ್ಮಗಿರಿಸ, ಬಾಯಿಮುಚ್ಚಿಸ, ಸುಂಮನಿರಿಸ; (*to make motionless*) ಸದ್ದುಕೊಳಿಸ, ನಿಶ್ಶಬ್ದಮಾಡಿಸ; (*to still a crying infant*) ಸುಂಮನಿರಿಸ, ಲಾಲಿಹೊಡಿಯ; (*to still a boiling pot*) ಉಕ್ಕಾರಿಸ, ತಂಪುಗೊಮಾಡ.

Still, a. *(quiet, calm)* ನಿಶ್ಶಬ್ದವಾದ, ಸದ್ದಡಗಿದ, ಸದ್ದಿಲ್ಲದ; *(silent)* ಮೌನಿಯು, ಸುಮ್ಮನೆ, ಸಪ್ಪಳಿಯುಲ್ಲದ; *(motionless)* ನಿಂತುಹೋದ, ಅಲ್ಲಾಡದ; *(unemployed)* ಸುಮ್ಮನೆಯಿರುವ, ಸೈರು.

Still, s. n. ನಿಶ್ಶಬ್ದವು, ಶಾಂತ್ರಿ, ಸದ್ದು. v. *Silence, calm.*

Still, ad. *(till now)* ಇದುಪರಿಯಂತ್ರರಕ್ಷ, ಈವರಿಗು. v. *Hitherto.* *(till then)* ಆಪರಿಯಂತರಕ್ಷ, ಆವರಿಗು; *(notwithstanding)* ಇದ್ದರು; *(ever)* ಸದಾ, ಸರ್ವದಾ. v. *Always, continually.* *(after that)* ಆಮೇಲೆ, ಆತರುವಾಯ; *(in continuance)* ಯಾವಾಸ್ಯ, ಯಾವಾಗಲು.

Still, Stillatory, s. n. *(vessel for distillation)* ಭಟ್ಟಿ; *(the neck or spout of a still)* ಭಟ್ಟಿಯಂತ್ರ; *(to still, to distil)* ಭಟ್ಟಿಯಿಡ; *(a still house)* ಭಟ್ಟಿಮನೆ, ಧ್ರುತಿಶಾಲೆ.

Stillborn, a. ಶವಶಿಶುವು, ಸಾವುಕೂಸು. v. *Abortion.*

Stilled, part. *(calmed)* ಶಾಂತ್ರಪಡಿಸಿದ, ಸದ್ದುಗೊಳಿಸಿದ, ಸಮಜಾಯಿಸಿದ; *(silenced)* ಸುಮ್ಮನೆಯಿರಿಸಿದ, ಬಾಯಿಮುಚ್ಚಿಸಿದ.

Stillness, s. n. *(calmness, quietness)* ಶಾಂತವು, ನಿಶ್ಶಬ್ದವು, ಸದ್ದು; *(silence)* ಮೌನ, ಮೂಢತ್ವ.

Stilly, ad. *(calmly)* ಶಾಂತವಾಗಿ, ಉಪಶಮನವಾಗಿ; *(silently)* ಮೌನವಾಗಿ, ಸುಮ್ಮನೆ.

To Stimulate, v. a. *(to excite)* ಉಲ್ಬಣಮಾಡ, ಪ್ರೋತ್ಸಾಹಿಸ, ಉರಿಕಲ್ಪಿಸ. v. *To incite, instigate.* *(to prick)* ಚುಚ್ಚು, ತಿವಿಯು; *(one that stimulates)* ಪ್ರೋತ್ಸಾಹಕ, ಉಲ್ಬಣಮಾಡುವವ, ಎಚ್ಚಿಸುವವ.

Stimulated, part. ಪ್ರೋತ್ಸಾಹಿಸಲ್ಪಟ್ಟ, ಉಲ್ಬಣಮಾಡಲ್ಪಟ್ಟ.

Stimulation, s. n. ಉಲ್ಬಣ, ಪ್ರೋತ್ಸಾಹಣೆ, ಚುಚ್ಚುವಿಕೆ, ಉಸಿಕಲ್ಪಿಸುವಿಕೆ, ಉರಿಕಲ್ಪಿಸುವಿಕೆ.

Sting, s. n. ಕೊಂಡಿ, ಮುಳ್ಳು; *(the sting of a bee)* ದುಳಿದಮುಳ್ಳು; *(the sting of a serpent)* ಸರ್ಪದಂಷ್ಟ್ರ; *(the sting of a scorpion)* ಚೇಳಿನಕೊಂಡಿ; *(the stings of conscience)* ಗುಂಡಿಗೆ ಅದರು, ಲಕ್ಷ; *(a stinging jest)* ಚುರುಕಾದ ಹಾಸ್ಯ.

To Sting, v. a. ಕೊಡೆಯು, ಚುಚ್ಚು, ಕಚ್ಚು. v. *To prick, pierce, pain.*

Stingless, a. ಕೊಂಡಿಲ್ಲದ, ಮುಳ್ಳಿಲ್ಲದ, ವಿಷವಿಲ್ಲದ.

Stingily, ad. ಪಿಸುನತನವಾಗಿ, ಮೋಹತನವಾಗಿ. v. *Covetously, avariciously.*

Stinginess, s. n. ಪಿಸುನತ್ವ, ಮೋಹತ್ವ, ಮೋಹತನ, ಜಿಗುತನ.

Stingy, a. ಪಿಸುನತನದ, ಜಿಗುತನದ, ಮೋಹತನದ. v. *Avaricious, covetous.*

Stink, s. n. ಉಲಿಗು, ನೊಂದರು, ಪೂತಿಗಂಧ, ಗಬ್ಬು, ದುರ್ಗಂಧ, ಹಸುಕು, ಹಸುಕುನಾತ, ನೊಂವಡು, ನೊಗಡು, ಕೊಳಸುನಾತ. v. *Stench.*

To Stink, v. n. ನಾರ, ದುರ್ಗಂಧಹೊಡಿಯು, ದುರ್ವಾಸನೆಬರ, ಕೆಟ್ಟನಾತಬಡಿಯು, ಕೊಳಕುವಾಸನೆಬರ.

Stinking, a. ನಾರುವ, ಗಬ್ಬಿನ, ದುರ್ಗಂಧದ, ಕೊ

ಳಕನಾರಿದ; *(stinking meat)* ನಾರುವಮಾಂಸ, ದುರ್ಗಂಧವಾದಮಾಂಸ, ನಾರಿಹೋದ ಮಾಂಸ; *(to make stinking)* ದುರ್ಗಂಧಮಾಡ, ಗಬ್ಬೆಬ್ಬಿಸ; *(to make the breath stinking)* ಬಾಯಿನಾರ, ಬಾಯಿನಾರಮಾಡ; *(to be stinking)* ನಾರಿವಾಗಿರ.

Stinkingly, ad. ನಾರಿವಾಗಿ, ದುರ್ಗಂಧವಾಗಿ, ಕೊಳಕಾಗಿ, ದುರ್ವಾಸನೆಯಾಗಿ, ಗಬ್ಬಾಗಿ.

To Stint, v. a. ಮಟ್ಟುಮಾಡ, ಕಟ್ಟುಮಾಡ, ನಿಬಂಧನೆಮಾಡ.

Stint, s. n. ನಿಬಂಧನೆ, ಮಟ್ಟು, ದಿಟ್ಟಿ, ಕಟ್ಟು. v. *Bound, limit, restraint, proportion, allowance.*

Stinted, part. ಮಟ್ಟುಮಾಡಿದ, ನಿಬಂಧನೆಮಾಡಿದ, ಕಟ್ಟುಮಾಡಿದ.

Stipend, s. n. ಸಂಬಳ, ಜೀತ, ಮೋಜುಮರಿ, ಮುಶಾರಿ. v. *Salary, pay, pension.*

Stiptic, Stiptical, a. ಬದ್ಧಕೋಷ್ಠಿನ, ಮಟ್ಟುಮಾಡುವ; *(a stiptick medicine)* ಕಟ್ಟಿಕೊಳ್ಳುವ ಅವುಷಧ, ಬದ್ಧಮಾಡುವ ಅವುಷಧ.

To Stipulate, v. n. ಮಾತುಮಾಡ, ಪ್ರಮಾಣಮಾಡ, ಕರಾರುಮಾಡ, ನಿಷ್ಕರ್ಷ ಮಾಡ. v. *To bargain, contract.*

Stipulation, s. n. ಕರಾರು, ಬಂದುಕಟ್ಟು, ಒಪ್ಪಂದ. v. *Bargain.*

Stipulator, s. n. ಕರಾರುಮಾಡುವವ, ಮಾತುಮಾಡುವವ, ಶಪಥಮಾಡುವವ.

To Stir, v. a. *(to move, to agitate)* ಕಡೆಯಿಸ, ಕಲಿಸ, ಮಿಶ್ರಮಾಡ. v. Also *to mix. (to move one's self, to be in motion)* ಏಳ, ಉಬಾಯಿಸ, ಮುಂದುಬೀಳ; *(to stir up, to incite, instigate)* ಉಲ್ಬಣೋಮಾಡ, ಪ್ರೇರೇಪಿಸ; *(to stir up sedition)* ಫಿತೂರಿಯೆಬ್ಬಿಸ; *(to stir up vigour)* ದೃಢಮಾಡಿಕೊಳ, ಧೈರ್ಯಮಾಡಿಕೊಳ; There is no wind *stirring* ಗಾಳಿಯಿಲ್ಲ.

Stir, s. n. *(tumult, bustle)* ಸಂದಳಿ, ಗುಮುಲು, ಗಬಾರು, ಗಡಿಬಿಡಿ, ಘಾಬರಿ. v. *Commotion, agitation, disturbance, sedition.*

Stirrer, s. n. *(a causer of motion)* ಕದೆಯಿಸುವವ; *(one who is in motion)* ಉಬಾಯಿಸುವವ, ಹೊರಬಾಯಿಸುವವ, ಏಳುವವ, ಆಯದಿಕ; *(a stirrer up)* ಪ್ರೇರೇಪಕ, ಉಲ್ಬಣೆಮಾಡುವವ.

Stirred, part. *(moved)* ಕಲಶಿದ, ಕುಲುಕಿದ, ಕದಲಿದ; *(excited)* ಪ್ರೇರೇಪಿಶಿದ, ಉಲ್ಬಣೆಮಾಡಿದ; *(provoked)* ಶಿಟ್ಟೆಬ್ಬಿಶಿದ, ಕೊಬ್ಬೆಬ್ಬಿಶಿದ.

Stirrup, s. n. ರಿಕಾಬು, ಅಂಕಿಲ್; *(the stirrup leather)* ಟಂಗಬಾರ್, ಜೀನುಬಂದು, ರಿಕಾಬಿನ ತೊಗಲು.

To Stitch, v. a. ಹೊಲಿಯ, ಟಾಕುಹಾಕ. v. *To sew;* also *to mend, unite, join. (to stitch together)* ಏಕವಾಗಿ ಹೊಲಿಯ, ಕೂಡಿಶಿ ಹೊಲಿಯ, ಅಂಟಿಸ; *(to stitch up)* ಹೊಲಿದುಬಿಡ.

Stitch, s. n. *(in sewing)* ಟಾಂಕು, ಹೊಜ್ಜೆ, ಹೊಲಿಗೆ; *(to sew with close stitches)* ಟಾಂಕು ಹಾಕ; *(to sew with wide stitches)* ದಾಟಿಹೊಲಿಗೆಹೊಲಿಯ; *(a stitch in the side)* ಪಕ್ಕೆಯ ಸೆಳಕು.

Stock, s. n. *(trunk of a tree)* ಮೊಂಡು, ಮೋ

ಟು. v. *Trunk, block, log, post. (the stock of a gun)* ತುಬಾಕಿದ ಸ್ತು; *(a stock, neckcloth)* ಕಂಠದ ಸ್ತು; *(a stock for grafting)* ಅಂಟು; *(a race, lineage)* ವಂಶ, ಅನ್ವಯ, ಸಂತತಿ; *(a capital in trade)* ಮೂಲ ದ್ರವ್ಯ, ಆಯಿವಜು, ಬಂಡವಾಲ, ನಗದಿ. v. *Fund, store. (a stupid man)* ಧಡ್ಡ, ಮೋಸ್ತು. v. *Blockhead. (a handle)* ಹಿಡಿ, ಲಿಡಿ, ಕಾಂಬು; *(a laughing stock)* ನಗೆ ಗೈಡಿ, ನಗಬಾಟ್ಲೆಮಾರಿ; *(a stock of sheep)* ಕುರಿಮಂದಿ; *(to stand stockstill)* ಕಂತ್ರೆದಾಗಿನಿಲ್ಲ, ನಿಲವಕಂತ್ರೆದಾಗಿನಿಲ್ಲ.

To Stock, v. a. ಸಂಗ್ರಹ ಮಾಡ. v. *To fill, store. (to stock up)* ಕಿತ್ತಾಕ. v. *To eradicate.*

Stocking, s. n. ಮೈಜೊರ್ಡು.

Stocks, s. n. *(for confining the legs)* ಕೊಯ್ಗೆ.

Stockstill, a. ನಿಲುವ ಕಂತ್ರವಾಗಿರುವ.

Stoick, s. n. *(philosopher)* ಶಮನಿ.

Stolen, part. ಕದ್ದ, ಕಳ್ವವಾದ, ಕದ್ದುಕೊಂಡ.

Stomach, s. n. ಎದೆಸಂದಿನೆ, ಜೀರ್ಣಕೋಶ. v. *Belly. (appetite)* ಹಸಿವಿ; *(the stomach of birds)* ಹೊಟ್ಟೆ, ಆಹಾರದ ಕೋಶ. v. *Gizzard, crop. (the second stomach of beasts)* ಹೊಟ್ಟೆ. v. *Appetite, inclination, liking, sullenness, resentment, pride, anger.*

Stomacher, s. n. ಎದೆಪದಕ.

Stomachick, a. *(belonging to the stomach)* ಎದೆಸಂದಿನೆ; *(a stomachick medicine)* ಜೀರ್ಣಕಾರಿ.

Sunshine, s. n. ಬಿಸಲು, ಬಿಸಿಲು.

Sunshiny, a. ಬಿಸಲಿನ, ಸೂರ್ಯಕಾಂತಿಯ.

To Sup, v. a. *(drink by mouthfuls)* ಗುಟುಕರಿಸು, ಗುಟುಗುಟುಕಾಗಿಕುಡಿಯು. v. *To sip.* *(to eat supper)* ರಾತ್ರಿಭೋಜನಮಾಡು.

To Superabound, v. n. ಪ್ರಬಲವಾಗು, ಯಥೇಚ್ಛವಾಗು, ಪರಿಪೂರ್ಣವಾಗು. v. *To overbound.*

Superabundance, s. n. ಮಹಾಅಧಿಕವು, ಯಥೇ

ಷ್ಟವು, ಪ್ರಬಲವು, ಅಧಿಕವು, ಪರಿಪೂರ್ಣವು. v. *Exuberance.*

Superabundant, a. ವಿಶೇಷದ, ಯಥೇಷ್ಟದ, ಬ್ರಹ್ಮಾಂಡದ, ಅಧಿಕಾಧಿಕದ, ಪರಿಪೂರ್ಣದ.

Superabundantly, ad. ಅಧಿಕಾಧಿಕವಾಗಿ, ವಿಶೇಷವಾಗಿ, ಹೆಚ್ಚಾಗಿ, ಪರಿಪೂರ್ಣವಾಗಿ, ಬ್ರಹ್ಮಾಂಡವಾಗಿ. v. *Exuberantly.*

To Superadd, v. a. ಹೆಚ್ಚಿಸು, ಅಭಿವೃದ್ಧಿಮಾಡು, ಪ್ರಬಲಿಸು. v. *To augment, increase.*

Superaddition, s. n. ಹೆಚ್ಚಿಕೆ, ಅಭಿವೃದ್ಧಿಕೆ, ಪ್ರಬಲಿಕೆ.

Superadded, part. ಹೆಚ್ಚಿಸಿದ, ಅಭಿವೃದ್ಧಿಯಾದ, ಪ್ರಬಲಿಸಿದ.

To Superannuate, v. n. ವೃದ್ಧಾಪ್ಯತನವಾಗು, ಉಡುಗು, ಮೂಲೆಗೆಬೀಳು.

Superannuation, s. n. ಮೂಲೆಗೆಬೀಳುವಿಕೆ, ಮೂಲೆಗೆ ಕೂಡುವಿಕೆ, ಕೈನಿಲ್ಲುವಿಕೆ.

Superannuated, part. ಮೂಲೆಗೆಬಿದ್ದ, ವೃದ್ಧಾಪ್ಯತನವಾದ.

Superb, a. ಮಹಾಪಸಂದಾದ, ಬಹುಶೃಂಗಾರವಾದ, ಮಹಾಚೆಲುವಾದ. v. *Grand, splendid, magnificent.*

Superbly, ad. ಮಹಾಶೃಂಗಾರವಾಗಿ, ಮಹಾಚೆಲುವಾಗಿ, ಮಹಾಪಸಂದಾಗಿ. v. *Splendidly.*

Supercargo, s. n. ಹಡಗದ ಶೆಟ್ಟಿ.

Supercilious, a. ತಾತ್ಸಾರದ, ಅಹಂಕಾರದ, ತಲೆಹೊಯಿಕತನದ. v. *Haughty, contemptuous.*

Superciliously, ad. ಅಹಂಕಾರವಾಗಿ, ತಲೆಹೊಯಿಕತನವಾಗಿ, ತಾತ್ಸಾರವಾಗಿ.

Superciliousness, s n. ತಲೆಹೊಯಿಕತನವು, ಅಹಂಕಾರವು, ತಾತ್ಸಾರವು.

Supereminence, s. n. ಶ್ರೇಷ್ಠವು, ಪ್ರಾಮುಖ್ಯವು, ಅಧಿಕಾಧಿಕವು. v. *Pre-eminence.*

Superexcellent, a. ಪ್ರಾಮುಖ್ಯದ, ಶ್ರೇಷ್ಠದ, ಅಧಿಕಾಧಿಕದ. v. *Excellent.*

Superficial, a. (*external*) ಹೊರಗಿನ, ಮೇಲುಭಾಗದ; (*shallow, futile, trifling*) ಡಬ್ಬಿನ, ಬೂಪಾಕಾರದ.

Superficially, ad. (*externally*) ಹೊರಗಾಗಿ, ಮೇಲುಭಾಗವಾಗಿ; (*triflingly*) ಡಬ್ಬಾಗಿ, ಬೂಪಾಕಾರವಾಗಿ.

Superficialness, s. n. (*superficies*) ಮೇಲುಭಾಗ, ಮುಖಭಾಗ. v. *Surface.* (*triflingness, futileness*) ಡಬ್ಬು, ಬೂಪಾಕಾರ.

Superfine, a. ಮೇಲುಧರವಾದ, ಅತಿಸಯದ, ಬಹುಸಂಗಾವಾದ. v. Also *superexcellent.*

Superfluity, Superfluousness, s. n. ಜಾಸ್ತಿ, ಹೆಚ್ಚು. v. *Surplus, superabundance.*

Superfluous, a. ಹೆಚ್ಚಿನ, ಜಾಸ್ತಿಯ. v. *Superabundant.*

Superhuman, a. ಅಗೇಮ.

To Superinduce, v. a. ಉಪ್ಪೋದ್ಘಲಮಾಡು.

To Superintend, v. a. ಮೇಲುಕಾವಲಿಯಾಗಿರು, ಮೇಲುಪರಾಮರಿಸು. v. *To oversee.*

Superintendence, s. n. ಮೇಲುಪರಾಮರಿಕೆ, ಮೇಲುಕಾವಲಿ, ನಿಗಾ. v. *Oversight.*

Superintendent, s. n. ಮೇಲುಪರಾಮರಿಕೆಯವ, ಮೇಲುಕಾವಲಿಯವ, ದಾರೋಗಾ.

Y

Yacht, s. n. ಚಿಕ್ಕಹಡಗ, ಡೋಣಿ, ಚಿಕ್ಕನಾವೆ.

Yard, s. n. (*inclosed ground, adjoining to a house*) ಅಂಗಳ, ಮನೆಯಅಂಗಳಹಟ್ಟಿ. v. Also *court, quadrangle.* (*a yard before the house*) ಮನೆಮುಂದಣಾಅಂಗಳ; (*a back yard*) ಹಿತ್ತಲು; (*a yard, measure of length*) ಗಜ; (*a measure of two yards*) ಮಾರು, ಬಾರು. v. *Fathom.* (*sail yards*) ಹಡಗಿನದ, ಪಠ,ಅಡ್ಡಪಟಿ; (*pudendum*) ಅಂಡಗಳು, ವೃಷಣಾಗಳು, ತರುಡುಚೀಲ.

Yarn, s. n. ಹುರುವಣಿ, ಕಂಬಳಿಧಾರ. v. *Warp, woof, thread.*

Yawl, s. n. ಚಿಕ್ಕಡೋಣಿ. v. *Pinnace.*

To Yawn, v. n. ಆಕಳಿಸ. v. *To gape.*

Yawn, Yawning, s. n. ಆಕಳಿಕೆ.

Yawner, s. n. ಆಕಳಿಸುವವ.

Yawning, a. ಆಕಳಿಸುವ.

Ye, pro. ನೀವು.

To Yean, v. a. (*bring forth as sheep, &c.*) ಈನ, ಮರಿಹಾಕ.

Yeaned, part. ಈದ, ಮರಿಹಾಕಿದ.

Yeanling, s. n. ಕುರಿಮರಿ. v. *Lamb.*

Year, s. n. ವರ್ಷ, ಸಂವತ್ಸರ, ವತ್ಸರ, ವರಿಸ, ಬರಿಸ, ಅಬ್ದ, ಹಾಯನ, ಶರತ್ತು, ಸಮೆಯು; (*a solar year*) ಸೌರಮಾನದವರುಷ; (*a lunar year*) ಚಾಂದ್ರಮಾನದವರುಷ; (*this year*) ಈವರುಷ, ನಡೆಯುವವರುಷ; (*leap year*) ಅಧಿಕವರುಷ; (*another year*) ಮತ್ತೊಂದುವರುಷ, ಇಂನೊಂದುವರುಷ; (*next year*) ಬರುವವರುಷ, ಬರುವಸಂವತ್ಸರ; (*last year, the year immediately preceding*) ಹೋದವರ್ಷ, ನಿಂನಿನವರ್ಷ; (*the year before last*) ಆಚೇವರ್ಷ, ಮೊಂನಿನವರ್ಷ; (*the last two years*) ಹೋದಯೆರಡವರ್ಷಗಳು; (*the new year*) ಹೊಸವರುಷ, ಹೊಸಸಂವತ್ಸರ; (*an entire year*) ವರುಷಪೂರ್ತಿ, ವರುಷವೆಲ್ಲಾ, ವರುಷಪೂರ; (*every year*) ವರುಷವರುಷಕ್ಕೆ, ಪ್ರತಿವರುಷ. v. *Yearly.* (*a man a hundred years old*) ನೂರುವರುಷವಯಸುಳ್ಳ; (*laden with years*) ವಾರ್ಧಕದ, ಮುದಿತನದ. v. *Old.* (*one year old*) ಒಂದುವರುಷದ; (*two years old*) ಎರಡುವರುಷದ; (*of few years*) ಕೆಲವುವರುಷದ; (*in the years of youth*) ಚಿಕ್ಕತನದಲ್ಲಿ, ಬಾಲ್ಯದಲ್ಲಿ; (*a plentiful year*) ಫಲವಾದವರ್ಷವು, ಫಲಪ್ರದವರ್ಷವು, ಬೆಳೆಯಾದವರ್ಷ; (*a barren year*) ಫಲವಿಲ್ಲದವರ್ಷ, ಬರಬಿದ್ದವರ್ಷ, ಅರಬುಗಾಡುವರ್ಷವು. The Canarese have an epoch of years which derives its name from an ancient prince named ಶಾಲಿವಾಹನ, and commences about the year of Christ 78; the present year 1823 is, therefore, the 1744-5 of this epoch. The Canarese class the years of this epoch in a

cycle of sixty, giving to each of the sixty the following appropriate names; ಪ್ರಭವ, ವಿಭವ, ಶುಕ್ಲ, ಪ್ರಮೋದೂತ, ಪ್ರಜೋತ್ಪತ್ತಿ, ಆಂಗೀರಸ, ಶ್ರೀಮುಖ, ಭಾವ, ಯುವ, ಧಾತು, ಈಶ್ವರ, ಬಹುಧಾನ್ಯ, ಪ್ರಮಾದಿ, ವಿಕ್ರಮ, ವೃಷ, ಚಿತ್ರಭಾನು, ಸ್ವಭಾನು, ತಾರಣ, ಪಾರ್ಥಿವ, ವ್ಯಯ, ಸರ್ವಜಿತ್ತು, ಸರ್ವಧಾರಿ, ವಿರೋಧಿ, ವಿಕೃತಿ, ಖರ, ನಂದನ, ಜಯ, ವಿಜಯ, ಮನ್ಮಥ, ದುರ್ಮುಖಿ, ಹೇವಿಳಂಬಿ, ವಿಳಂಬಿ, ವಿಕಾರಿ, ಶಾರ್ವರಿ, ಪ್ಲವ, ಶುಭಕೃತ್ತು, ಶೋಭನಕೃತ್ತು, ಕ್ರೋಧಿ, ವಿಶ್ವಾವಸು, ಪರಾಭವ, ಪ್ಲವಂಗ, ಕೀಲಕ, ಸೌಮ್ಯ, ಸಾಧಾರಣ, ವಿರೋಧಿಕೃತ್ತು, ಪರಿಧಾವಿ, ಪ್ರಮಾದೀಚ, ಆನಂದ, ರಾಕ್ಷಸ, ನಳ, ಪಿಂಗಳ, ಕಾಳಾಯುಕ್ತಿ, ಸಿದ್ಧಾರ್ಥಿ, ರೌದ್ರಿ, ದುರ್ಮತಿ, ದುಂದುಭಿ, ರುಧಿರೋದ್ಗಾರಿ, ರಕ್ತಾಕ್ಷಿ, ಕ್ರೋಧನ, ಕ್ಷಯ.

Yearling, s. n. ವರ್ಷಪ್ರಾಯ.

Yearly, ad. *(every year)* ಪ್ರತಿವರುಷಕ್ಕೆ; *(yearly, annual)* ವರುಷವರುಷಕ್ಕೆ; *(perennial)* ಪಂದುವರುಷಬಾಳುವ, ಪಂದುವರುಷತಾಳುವ; *(a yearly pension)* ವರುಷಾಶನ.

To Yearn, v. n. *(feel compassion)* ಕನಿಕರಿಸ, ಕರುಳುಕೊರಳ, ಮನಸ್ಸುಕರಗ. v. *To compassionate*; also *to grieve, vex.*

Yell, s. n. ಕೂಗುವಿಕೆ, ಘರ್ಜನೆ, ಗರ್ಜನೆ. v. *Shriek.*

To Yell, v. n. ಕೂಗ, ಗರ್ಜಿಸ, ಒರಲ. v. *To shriek, howl.*

Yellow, a. ಅರಿಸಿನ, ಹಳದಿ, ಹೊಂಬಣ್ಣ, ಕವಿಲೆಬಣ್ಣ, ಪೀತ, ಗೌರ, ಹರಿದ್ರಾಭ; *(of a deep yellow)* ಅಚ್ಚಹಳದಿ; *(a light yellow)* ಹರಿಣಪಾಂಡರ, ಪಾಂಡು; *(a wood for dying yellow)* ಮಡ್ಡಿಚಕ್ಕೆ, ಪತಂಗ; *(to become yellow)* ಹಳದಿಬಣ್ಣವಾಗ; *(to make yellow)* ಹಳದಿಬಣ್ಣಮಾಡ, ಹಳದಿಬಣ್ಣಹಾಕ; *(the yellow jaundice)* ಹರಿದ್ರಪಾಂಡು.

Yellowish, a. ಹಚ್ಚಾನ.

To Yelp, v. n. ಬಗಳ. v. *To bark.*

Yes, ad. ಹೌದು, ಅಹುದು.

Yest, s. n. *(or leaven used in raising bread)* ಕಾಶೋತ್ರಮ, ಕಾಶೋತ್ರರ, ಮೋಹನ, ಯಂಬಲು, ಪಿಂಡ, ಆಮ್ಲಕರ; *(yest, foam, froth)* ನೊರೆ, ಉಕ್ಕು.

Yesterday, s. n. ನಿಂನೆ; *(yesterday evening, yesternight)* ನಿಂನಿನಸಾಯಂಕಾಲ, ನಿಂನೆರಾತ್ರಿ; *(yesterday morning)* ನಿಂನೆಬೆಳಿಗ್ಗೆ, ನಿಂನೆಯುಂಜಾನೆ.

Yet, ad. ಆದರೆ, ಆದರು. v. *But, still.* *(hitherto)* ಇಂನು, ಈವರಿಗು, ಇಂದುಮಟ್ಟಿಗು; *(over and above)* ಅಲ್ಲದೆ. v. *Beside.* *(once more)* ಮತ್ತು, ಮರಳಿ, ತಿರಿಗಿ, ಪುನಃ, ಇಂನೊಂಮ್ಮೆ; *(after all)* ಆದರು, ಇದ್ದರು. v. *Nevertheless.* He is not come *yet* ಅವನಿಂನುಬರಲಿಲ್ಲ; Is that work not done *yet?* ಆಕೆಲಸವಿಂನುಆಗಲಿಲ್ಲವೋ.

To Yield, v. a. *(produce)* ಕೊಡ, ಫಲಿಸ; *(to grant permission)* ಅಪ್ಪಣೆಕೊಡ, ಅಸ್ತುಪಡ, ರಾಜಿಯಾಗ, ಒಪ್ಪಿಕೊಳ್ಳ; ಮನಸ್ಕರಿಸ; *(to give up the contest)* ಬಿಟ್ಟುಕೊಳ್ಳ.

ಸೋತುಹೋಗು; *(to yield up one's self)* ಶರಣಾಗತನಾಗು, ವಶವರ್ತಿಯಾಗು. v. *To submit.* *(to yield to reason or argument)* ಒಪ್ಪಿಕೊಳ್ಳು, ವಡಂಬಡು, ಸಂಮತಿಸು, ಸೈರ್ಯಿಸು; *(to yield up the ghost)* ಪ್ರಾಣಬಿಡು, ಪಂಚತ್ವಸೈರ್ಯು. v. *To die.* *(to yield, to be inferior in excellence)* ಕೀಳ್ತರವಾಗಿರು. v. Also *to comply, concede, admit.* *(a garden that yields a revenue)* ತೆರಿಗೆತೋಟ, ಹುತ್ತಿಗೆತೋಟ; *(to yield to the times)* ಕಾಲಾನುಸಾರವಾಗಿ ಹೋಗು.

Yielding, a. *(complying)* ಅಸ್ತುಪಡುವ, ರಾಜಿಯಾಗುವ, ಒಪ್ಪಿಕೊಳ್ಳುವ. v. *Passive.*

Yielded, part. *(surrendered)* ಕೊಟ್ಟುಬಿಟ್ಟ, ಒಪ್ಪಿಸಿಕೊಟ್ಟ; *(allowed)* ಸಂಮತಿಪಟ್ಟ, ಅಸ್ತುನಾಮವಾದ, ರಾಜೀಪಟ್ಟ; *(produced)* ಫಲಿಸಿದ, ಕೊಟ್ಟ, ಈತ್ತ, ಹುಟ್ಟುವಳಿಯಾದ.

Yoke, s. n. [illegible]*oxen, &c.)* ನೊಗ; *(a yoke or pair of oxen)* ಗೇದಯತ್ತು, ಜೋಡೆತ್ತು. v. Also *slavery, servitude, link, chain, pair.* *(fit for the yoke)* ನೊಗಕ್ಕೆ ಸರಿಯಾದ, ಗೇಕೆ ಬಂದ.

To Yoke, v. a. ನೊಗಕಟ್ಟು, ನೊಗಹೂರು, ನೊಗಹಾಕು, ಗೇವುಹೂಡು. v. Also *to enslave.*

Yoke-fellow, Yoke-mate, s. n. ಜತೆಗಾರ.

Yolk, s. n. *(of an egg)* ಜನೆ, ಚಂದ್ರ, ಗುಡ್ಡಿನಬೇಸ, ಅಂಡದಮುದ್ರ.

Yon, Yonder, ad. ಅಲ್ಲಿ, ಅಚೇಲಿ, ಅಕಡೆ; *(yon tree)* ಅಲ್ಲಿಯಿರೋಗಿಡ, ಆಗಿಡ; *Yonder he is* ಅಲ್ಲಿಯಿದ್ದಾನೆ.

Of Yore, ad. *(formerly)* ಪೂರ್ವದಲ್ಲಿ, ಮೊದಲೆ.

You, pro. ನೀನು.

Young, Youthful, a. ತರುಣ, ಎಳೆಯ, ಚಿಕ್ಕತನದ, ಯವ್ವನದ; *(new, fresh)* ಹಸೀಯ, ಕೋಮಲದ; *(a young man, a youth, youngster, younker)* ಹುಡುಗ, ಬಾಲಕ, ಚಿಕ್ಕಪ್ರಾಯಸ್ತ, ಯುವನು, ಯುವಾನನು. v. *Boy.* *(a handsome young man)* ಸುಂದರವಾದಯವ್ವನಿಗನು, ಮನೋಹರವಾದಜವ್ವನಿಗನು; *(the young of any animal, a youngling)* ಮರಿ, ಪಿಳ್ಳೆ; *(to be with young)* ಗರ್ಭಿಣಿಯಾಗು, ಬಸುರಾಗು; *(to bring forth young)* ಈನು, ಮರಿಹಾಕು.

Youngly, Youthfully, ad. ಯವ್ವನವಾಗಿ, ಜವ್ವನವಾಗಿ.

Youth, s. n. ಯುವನು, ಜವ್ವನಿಗ, ಕೌಮಾರ; *(the flower of youth)* ತರುಣಯವ್ವನ, ನವಯವ್ವನ; *(early youth)* ಚಿಕ್ಕತನ.

Youthfulness, s. n. ಯೌವನತ್ವ. v. *Youth.*

Your, pro. ನಿಮ್ಮ; *(yours)* ನಿಮ್ಮದು; *(your books)* ನಿಮ್ಮಪುಸ್ತಕಗಳು; *(to your books)* ನಿಮ್ಮಪುಸ್ತಕಗಳಿಗೆ; *(in your books)* ನಿಮ್ಮಪುಸ್ತಕಗಳಲ್ಲಿ.

Z

Zany, s. n. ಪರಿಹಾಸಕ, ನಕಲದಾರ, ಹಾಸ್ಯಗಾರ. v. *Jester, buffoon.*

Zarnick, s. n. ಅರಿದಳ.

Zeal, Zealousness, s. n. ವಾಂತ್ಸಲ್ಯ, ವಚ್ಚೇವು, ಉತ್ಸುಕ, ಮಹೋತ್ಸಾಹ, ಅವುತ್ಸುಕ್ಯ, ರೋಷ, ತಾಪ, ಅಭಿನಿವೇಶವು; (*zeal for God or religion*) ಭಕ್ತಿವೈರಾಗ್ಯ, ಮತಾಭಿಮಾನ, ದೃಢಭಕ್ತಿ. v. *Heat, warmth, ardour.*

Zealot, s. n. ಮೈತುಂಬಿದವ, ಪವಾಡಹಾಕುವವ, ದೃಢಭಕ್ತನು.

Zealous, a. ವಾಂತ್ಸಲ್ಯದ, ದೃಢಭಕ್ತಿಯ, ಮೂಢಭಕ್ತಿಯ, ಭಕ್ತಿವಾಂತ್ಸಲ್ಯದ. v. *Warm, hot, fervent.*

Zealously, ad. ಏಕಭಕ್ತಿಯಾಗಿ, ವಂದೇಮನಸ್ಸಾಗಿ, ಉತ್ಕೃಷ್ಟವಾಗಿ.

Zedoary, s. n. (*plant*) ಕಚೂರಕ, ಕರ್ಚೂರಕ, ದ್ರಾವಿಡಕ, ದ್ರಾವಿಡಭೂತಿಕ.

Zenith, s. n. ಶಿರೋರ್ಧ್ವ, ಧ್ರುವ, ನಂಗಾತ್ರಿಯ ಮೇಲೆ, ಸ್ವಮಧ್ಯ.

Zephyr, s. n. ಬಾರವಾಯು, ಮಂದವಾತ.

Zest, s. n. ರುಚಿ, ಸ್ವಾದು, ರಸವತ್ತು.

Zodiac, s. n. ರಾಶಿಚಕ್ರ, ಗ್ರಹಚಕ್ರ, ಲಗ್ನಮಂಡಲ; (*a sign of the zodiac*) ರಾಶಿ, ಗ್ರಹಚಾರ; (*the rising of a sign in the zodiac*) ಲಗ್ನ; (*the twelve signs of the zodiac*) ದ್ವಾದಶರಾಶಿ; *Aries, the ram* ಮೇಕೆ, ಮೇಷವು; *Taurus, the bull* ಎತ್ತು, ವೃಷಭವು; *Gemini, the twins* ಸ್ತ್ರೀಪುರುಷ, ಮಿಥುನವು; *Cancer, the crab* ಏಂಡ್ರಿಕಾಯಿ, ಕರ್ಕಾಟಕವು; *Leo, the lion* ಸಿಂಗವು, ಸಿಂಹವು; *Virgo, the virgin* ಕಂನೆಯು, ಕಂನ್ಯಕೆಯು; *Libra, the scales* ತ್ರಾಸು, ತುಲವು; *Scorpio, the scorpion* ಚೇಳು, ವೃಶ್ಚಿಕ; *Sagittarius, the archer* ಬಿಲ್ಲು, ಧನುಸ್ಸು; *Capricornus, the goat* ಮೊಸಳೆ, ಮಕರವು; *Aquarius, the waterman* ಗಡಿಗೆ, ಕುಂಭವು; *Pisces, the fishes* ಮೀನು, ಮೀನವು.

Zone, s. n. ಉಡುಧಾರ, ಉಡುವಣೆ, ಕಟಿಸೂತ್ರ. v. *Girdle.* (*a woman's silv*[illegible]*ne*) ಬೆಳ್ಳೇಡಾಬು, ವಡ್ಯಾಣ; (*the hook or clasp of the woman's silver zone*) ಕೊಂಡಿ, ಮರಸುತ್ತು, ಕೀಲು; (*a man's silver zone*) ಬೆಳ್ಳಿವುಡಧಾರ; (*a man's gold zone*) ಬಂಗಾರದವುಡಧಾರ; (*the frigid zone*) ಸೂರ್ಯಗೆದೂರಶೋಪಾಸ್ತಿಯಾದಭೂಮಿ; (*the torrid zone*) ಸೂರ್ಯಗತಿಮುಖವಾದಭೂಮಿ; (*the temperate zone*) ಸೂರ್ಯನಪಾರ್ಶ್ವಭೂಮಿ.

THE END.

Surpassing, part. ಶ್ರೇಷ್ಠವಾದ, ಮುಖ್ಯವಾದ, ಹೆಚ್ಚಾದ. v. *Superexcellent.*

Surplus, Surplusage, s. n. ಮಿಕ್ಕದ್ದು, ನಿಂತದ್ದು, ಉಳಿದ್ದುಬಾಕಿ. v. *Overplus.*

To Surprise, v. a. *(come unexpectedly)* ಅಕಸ್ಮಾತ್ತಾಗಿಬರ, ಅರಿಯದೆಬರ, ತಿಳಿಯದೆಬರ; *(to astonish by something wonderful)* ಆಶ್ಚರ್ಯಪಡಿಸ, ಸೋಜಿಗಪಡಿಸ, ತಬಿಬ್ಬಾಗಿಸ; *(to confound, perplex)* ವಿಭ್ರಮಣೆಪಡಿಸ, ಘಾಬರಿಪಡಿಸ, ತೊಂದರೆಪಡಿಸ.

Surprise, s. n. *(surprising, coming upon unawares)* ಅಕಸ್ಮಾತ್ತು ವಂಪ್ಪೆ ಬೊಂಪ್ಪೆ; *(wonder)* ಆಶ್ಚರ್ಯ, ಬಿಸವಂದ, ಕೌತುಕ, ವಿಸ್ಮಯ, ಅದ್ಭುತ, ಚಿತ್ರ; *(sudden confusion, or perplexity)* ಘಾಬರಿ, ಭ್ರಮಣೆ, ತೊಂದರೆ.

Surprising, part. *(wonderful)* ಆಶ್ಚರ್ಯದ, ಅಪೂರ್ವದ, ಅದ್ಭು *(for*

Surprisingly, ad. ಆಶ್ಚರ್ಯವಾಗಿ, ವಿಸ್ಮಯವಾಗಿ, ಅಪೂರ್ವವಾಗಿ.

Surprised, part. *(taken by surprise)* ಅಕಸ್ಮಾತ್ತಾಗಿ ಸಿಕ್ಕಿಪಟ್ಟ; *(confounded, perplexed)* ಭ್ರಮಣೆಯಾದ, ಘಾಬರಿಯಾದ, ಚಲನೆಯಾದ; *(to be surprised or taken by surprise)* ಅಕಸ್ಮಾತ್ತಾಗಿ ಸಿಕ್ಕಪಡ; *(to be confounded or perplexed)* ವಿಭ್ರಮೆಗೊಳ್ಳ, ಚಿತ್ರಚಾಪಲ್ಯತೆಯಾಗ; *(to be filled with wonder)* ಆಶ್ಚರ್ಯಪಡ, ತಬಿಬ್ಬಾಗ, ಅಪೂರ್ವಪಡ, ವಿಸ್ಮಯಪಡ.

Surrender, s. n. ಕೈಗೆಒಪ್ಪಿಕೊಳ್ಳುವಿಕೆ, ವಶವಾಗುವಿಕೆ. v. *Submission.*

To Surrender, v. a. *(yield, deliver up)* ಕೈಗೆಒಪ್ಪಿಸ, ಆಧೀನಮಾಡ; *(to yield up one's self)* ಒಪ್ಪಿಕೊಳ್ಳ, ಸಿಕ್ಕಿಸಿಕೊಳ್ಳ, ವಶವಾಗ.

Surrendered, part. ಒಪ್ಪಿಸಿದ, ವಶಮಾಡಿದ, ನಿವೇದಿಸಿದ.

Surreptitious, a. ಅನ್ಯಾಯಾರ್ಜಿತದ, ಚೋರಾಂಶಿಯ. v. *Fraudulent, clandestine.*

Surreptitiously, ad. ಅನ್ಯಾಯಾರ್ಜಿತವಾಗಿ, ಚೋರತನವಾಗಿ, ತಸ್ಕರವಾಗಿ. v. *By stealth, clandestinely.*

Surrogate, s. n. ಬದಲಾಗಿಟ್ಟವನು, ಪ್ರತ್ಯಾಮ್ನಾಯಕನು, ಪ್ರತಿನಿಧಿಯಾದವನು. v. *Deputy, delegate.*

To Surround, v. a. ವಳಗೆಮಾಡಿಕೊಳ್ಳ, ಆಕ್ರಮಿಸಿಕೊಳ್ಳ, ಆಕ್ರಾಂತಿಸ; *(to surround, or invest a town)* ಮುತ್ತಿಗೆಹಾಕಿಕೊಳ್ಳ, ಆವರಿಸಿಕೊಳ್ಳ, ಸುತ್ತಿಕೊಳ್ಳ, ಘೇರಾಯಿಸಿಕೊಳ್ಳ.

Surrounded, part. ಸುತ್ತಿಕೊಂಡ, ಆವರಿಸಿಕೊಂಡ, ವಳಗೆಮಾಡಿಕೊಂಡ, ದಳ್ಳಿಸಿದ.

Surrounding, part. ವಳಗೆಮಾಡುವ, ಸುತ್ತಿಕೊಂಬುವ, ಆವರಿಸಿಕೊಳ್ಳುವ.

Surtout, s. n. *(great coat)* ದೊಡ್ಡಂಗಿ, ನಿಲುವಂಗಿ.

To Survey, v. a. ನೋಡ, ಕಾಣ, ನಿರೀಕ್ಷಿಸ, ದೃಷ್ಟಿಸ. v. *To view.* *(to measure)* ಭೂಮಿಯಳತೆಮಾಡ, ಪೈಮಾಷಿಮಾಡ.

Surveying, s. n. *(the science of measuring land)* ಪೈಮಾಷಿ, ಭೂಮಿಯಳತೆ.

Surveyor, s. n. ನೋಡುವವನು, ಪರೀಕ್ಷಿಸುವವನು, ಮೇಗಾವಲಿಯವ, ಕಾದಿರುವವನು. v. *Inspector, over-*

seer, superintendent. (a land surveyor) ಪೈಮಾಷಿಗಾರ, ಭೂಮಿಯಳೆಯುವವ.

Surveyorship, s. n. ಪೈಮಾಷಿಗಿರಿ, ಭೂಮಿಯಳೆವಿಕೆ.

To Survive, v. n. ಬದುಕಿಯಿರು, ಜೀವಧರಿಸಿರು, ಉಳುಕೊಂಡಿರು.

Surviving, part. ಪ್ರಾಣದಿಂದುಳಿದಿರುವ, ಉಳಿದುಕೊಂಡಿರುವ, ಜೀವಧರಿಸಿಯಿರುವ.

Surviver, s. n. ಪ್ರಾಣದಿಂದುಳಿದಿರುವವ, ಜೀವಧರಿಸಿರುವವ, ಬಚಾಯಿಸಿರುವವ.

Susceptible, Susceptive, a. *(capable of receiving)* ಆಗತಕ್ಕ, ಇಂಬುಹಿಡಿಯತಕ್ಕ; *(tender-hearted)* ಮನಸುಕರಗುವ, ಮೆತ್ತನಹೃದಯದ, ಕನಿಕರವುಳ್ಳ.

Susceptibility, s. n. *(capable of admitting or receiving)* ಹಿಡಿಯುವಿಕೆ, ವಕ್ಕಳಿಸಿಕೊಳ್ಳುವಿಕೆ, ಪಡಕೊಳ್ಳುವಿಕೆ.

To Suspect, v. n. ಅನುಮಾನಪಡು, ಸಂದೇಹಮಾಡು, ಯೋಚಿಸು.

Suspected, part. ಅನುಮಾನಕ್ಕೊಳಗಾದ, ಸಂಶಯಕ್ಕಾಸ್ಪದವಾದ.

Suspecter, s. n. ಅನುಮಾನಪಡುವವ, ಸಂಶಯಮಾಡುವವ, ಸಂದೇಹಗೊಂಬುವವ.

To Suspend, v. a. *(hang up, make to hang by any thing)* ತೂಗಹಾಕು, ಜೋಲಾಡಹಾಕು; *(to interrupt)* ನಿಲ್ಲಿಸು, ಮೋಕೂಬುಮಾಡು; *(to delay, hinder)* ಅಭ್ಯಂತರಿಸು, ನಿಲ್ಲಿಸು, ಅಟಕಾಯಿಸು; *(to suspend, from an office)* ನಿಲ್ಲಿಸು, ಮೋಕೂಬುಮಾಡು.

Suspended, part. ತೂಗಹಾಕಿದ, ಜೋಲಾಡಹಾಕಿದ; *(interrupted)* ನಿಲ್ಲಿಸಿದ, ಮೋಕೂಬುಮಾಡಿದ; *(delayed)* ಆಲಸ್ಯಮಾಡಿದ, ಅಟಕಾಯಿಸಿದ, ನಿಲ್ಲಿಸಿದ; *(suspended from an employment)* ಮೊತ್ತೆಳ್ಳಿಮಾಡಿದ, ತೆಗದುಹಾಕಿದ, ನಿಲ್ಲಿಸಿದ.

Suspense, s. n. ಅನುಮಾನ, ಸಂದೇಹ, ಸಂಶಯ. v. *Hesitation, stop.*

Suspension, s. n. *(hanging up or by)* ತೂಗುವಿಕೆ, ಜೋಲಾಡಗೊಳ್ಳುವಿಕೆ; *(interruption)* ಅಭ್ಯಂತರವು, ಅಡ್ಡಗಟ್ಟುವಿಕೆ, ಅಟಕಾವು, ನಿಲ್ಲಿಸುವಿಕೆ; *(delay)* ಆಲಸ್ಯ, ನಿಧಾನ, ಜಂಪ್ತಿ, ದೀರ್ಘ; *(suspension from office)* ಮೊತ್ತೆಳ್ಳಿ, ಉಚ್ಚಾಟನೆ, ಪಲ್ಲಟಿ, ಸ್ಥಾನಭ್ರಷ್ಟತ್ವ.

Suspicion, s. n. ಅನುಮಾನ, ಸಂದೇಹ, ಸಂಶಯ, ಡೋಲಾಯಮಾನ, ಗುಮಾನ, ಕಳಂಕ; *(to remove suspicion)* ಅನುಮಾನತೀರಿಸು, ಸಂದೇಹಪರಿಹರಿಸು, ಸಂಶಯಕಳೆಯು, ಅಡೋಲಾಯಮಾನವಾಗು; *(to create suspicion)* ಅನುಮಾನಪಡಿಸು, ಸಂಶಯಪಡಿಸು.

Suspicious, a. *(having suspicion)* ಅನುಮಾನಗೊಳ್ಳುವ, ಸಂದೇಹಮಾಡುವ, ಗುಮಾನವಾದ; *(causing suspicion)* ಅನುಮಾನಪಡಿಸುವ, ಸಂಶಯಗೊಳ್ಳಿಸುವ. v. *Jealous. (to be suspicious)* ಅನುಮಾನಪಡು, ಸಂದೇಹಗೊಳ್ಳು, ಗುಮಾನಪಡು. v. *To suspect.*

Suspiciously, ad. ಅನುಮಾನವಾಗಿ, ಸಂದೇಹವಾಗಿ.

To Sustain, v. a. ಹೊರು, ಹೊತ್ತುಕೊಳ್ಳು, ಭಾರವಹಿಸು, ಆದರಿಸು, ಆಸ್ಪದಕೊಡು. v. *To sup-*

port, prop. *(to endure, suffer)* ತಾಳ, ಓರ್ಚ, ಸೈರಿಸ, ನಿಧಾನಿಸ; *(to suffer)* ಪಡ, ಅನುಭವಿಸ; *(to maintain, keep)* ಅಂನವಸ್ತ್ರಕೊಡ, ಸಂರಕ್ಷಿಸ, ಸಾಕ, ಸಲಹ, ಬೆಳಿಸ, ಮುಂದಕ್ಕೆತರ; *(to sustain loss)* ನಷ್ಟಪಡ.

Sustainable, a. *(possible to be borne up)* ಹೊತ್ತುಕೊಳ್ಳತಕ್ಕ, ಧರಿಸತಕ್ಕ, ಬೆಳಿಸತಕ್ಕ; *(possible to be endured)* ತಾಳತಕ್ಕ, ಓರ್ಚತಕ್ಕ, ಸೈರಿಸತಕ್ಕ.

Sustained, part. *(borne up)* ಹೊತ್ತುಕೊಂಡ, ಆಧರಿಸಿದ, ಆಸ್ಪದವಾದ. v. *Supported.* *(endured)* ತಾಳಿದ, ಓರ್ಚಿದ, ಸೈರಿಸಿದ. v. *Suffered, experienced, borne.*

Sustainer, s. n. ಆಧರಿಸುವವ, ಸಂರಕ್ಷಿಸುವವ, ಅಂನವಸ್ತ್ರಕೊಡುವವ, ಸಾಕುವವ, ಸಲಹುವವ, ಬೆಳಿಸುವವ, ಆಸ್ಪದವಾಗಿರುವವ. v. *Supporter, sufferer.*

Sustaining, part. ಹೊತ್ತುಕೊಳ್ಳುವ, ತಾಳುವ, ಭಾರಧರಿಸುವ.

Sustenance, s. n. *(victuals, necessaries)* ಆಹಾರ, ಅಂನ, ಗ್ರಾಸ, ಭುಕ್ತಿ, ಭೋನ, ಭೋಜನ, ಅಂಧ, ಓದನ, ತಿಂಡಿ, ಕೂಳು. v. *Food, maintenance.*

Sutler, s. n. ಅಂಗಡಿಕಾರ, ಬೆಲ್ಲರಂಗಡಿಯವ, ಬಾಸಾರಿಗ.

Suture, s. n. *(seam)* ಹೊಲಿಗೆ, ಕಿಚ್ಚೈ; *(sewing up of wounds)* ಕಾಯಿ, ಘಾಯಹೊಲಿಯುವಿಕೆ.

Swab, s. n. ಕುಂಚೆ, ಕೊಂಚೆ.

To Swab, v. a. ಕುಂಚೇಲಿವರಸ, ಕೊಂಚೇಲಿವರಸ, ಕೊಂಚೆಹೊಡಿಯ.

To Swaddle, v. a. *(a child)* ಜೋಳುಬಟ್ಟೆಹೊದಿಸ, ಕಪ್ಪುಟಿಹಾಕ. v. Also *to beat, cudgel.* *(a swaddling band)* ನಡುಪಟ್ಟಿ.

To Swag, v. n. *(hang down)* ಬಾಗ, ಜೋಲ, ಬಗ್ಗ.

To Swagger, v. n. ಜಂಭಕೊಚ್ಚ, ಗಾಢೆಹೇಳ, ಸುಳ್ಳುವಿಜೃಂಭಣೆತೋರ, ಡಬ್ಬುಹೇಳ. v. *To bully.*

Swaggerer, s. n. ಜಂಭಕೊಚ್ಚುವವ, ಗಾಢೆಹೇಳುವವ, ಸುಳ್ಳುವಿಜೃಂಭಣೆತೋರುವವ, ಡಬ್ಬುಹೇಳುವವ.

Swain, s. n. ಕುರುಬ, ಗೊಲ್ಲ, ಗೋವಳ. v. *Youth, shepherd.*

To Swallow, v. a. ನುಂಗ, ತಿಂದುಬಿಡ, ಭಕ್ಷಿಸ, ಉಣ್ಣ; *(to swallow wine)* ಸರಾಯಿಕುಡಿಯ, ಮದ್ಯಪಾನಮಾಡ, ಸುರೆಸೇವಿಸ. v. *To drink.*

Swallow, s. n. *(throat)* ಗಂಟ್ಲು, ಕಂಠಸ್ಥಾನ, ನುಂಗುವಸ್ಥಲ.

Swallowed, part. ನುಂಗಿಬಿಟ್ಟ, ಕಂಠದಲ್ಲಿಸೇರಿಸಿದ, ಗಂಟ್ಲಲ್ಲಿಹೊಸಿಗಿದ; *(to be swallowed)* ನುಂಗಪಡ, ಕಂಠದಲ್ಲಿಸೇರಿಸಪಡ, ಗಂಟ್ಲಲ್ಲಿಹೊಗಿಸಲ್ಪಡ.

Swamp, s. n. ಜಬ್ಬುಳು, ಬುರುದೆ, ಕೊಳ್ಳೆ. v. *Marsh, fen.*

Swampy, a. ಜಬ್ಬುಳಿನ, ಬುರುದೆಯ, ಕೊಳ್ಳೆಯ v. *Marshy.*

Swan, s. n. ಹಂಸೆ, ಅಂಚೆ.

Sward, s. n. *(surface of the ground)* ದರೆ, ನೆಲ, ಭೂಮಿಮುಖ. v. *Grass, herbage.*

Swarm, s. n. *(of bees)* ಮಕ್ಷಿಕಸಮುದಾಯ, ಜೇಂಪ್ಪ, ಗೊಂಪ್ಪ; *(crowd)* ಗುಂಪು, ಸಂದಣೆ, ಗುಂದಳ, ಮುಸರಿಕೆ.

To Swarm, v. n. ಗುಂಪಾಗ, ಸಂದಣೆಗೊಳ್ಳ, ಗೊಂದಣೆಯಾಗ, ಮುಸರ. v. *To throng, crowd.*

Swarthy, Swarth, a. ಕಾಗೆಬಣ್ಣದ, ಕಾಡಿಗೆಕಪ್ಪಿನ, ಇದ್ದಲಿನವರ್ಣದ.

Swarthiness, s. n. ಕಾಗೆಬಣ್ಣ, ಕಾಡಿಗೆಕಪ್ಪು, ಇದ್ದಲಿನವರ್ಣ.

Swath, s. n. ನಡುಪಟ್ಟಿ, ಕಾಶಿದಟ್ಟಿ. v. *Band, swaddling band.*

To Swathe, v. a. ಪಾರೆಕಟ್ಟ, ಕಾಶಿಹಾಕ, ನಡುಪಟ್ಟಿಕಟ್ಟ, ಕಟ್ಟುಬಿಗಿಯು. v. *To swaddle.*

Sway, s. n. *(rule, dominion)* ಆಳಿಕೆ, ಅಧಿಕಾರ. v. *Power, influence.*

To Sway, v. a. *(bias, incline)* ಸ್ವವಶಮಾಡಿಕೊಳ್ಳ, ಸ್ವಾಧೀನಮಾಡಿಕೊಳ್ಳ; *(to rule)* ಆಳ.

To Swear, v. a. ಆಣೆಯಿಡ, ಬಾಸೆಮಾಡ, ಪ್ರಮಾಣಮಾಡ; *(to swear by God)* ದೇವರಮೇಲೆಆಣೆಯಿಡ; *(to swear or administer an oath)* ಪ್ರಮಾಣಮಾಡಿಸ, ಕೈಮುಟ್ಟಿಸ; *(to swear falsely)* ಅಪ್ರಮಾಣಮಾಡ, ಸುಳ್ಳುಬಾಸೆಮಾಡ; *(to swear one another)* ಒಬ್ಬರಿಗೊಬ್ಬರುಆಣೆಮಾಡಿಕೊಳ್ಳ, ಅವನವನು ಪ್ರಮಾಣವನ್ನು ಮಾಡಿಕೊಳ್ಳ; *(any place where one swears)* ಪ್ರಮಾಣಮಾಡುವಸ್ಥಳ.

Swearer, s. n. ದೂಷಿಸುವವ, ನಿಂದೆಮಾಡುವವ, ದೈವದ್ರೋಹಿ, ನಿಂದಕ, ದೂಷಕ. v. *Blasphemer.*

Sweat, s. n. ಬೆವರು, ಘರ್ಮೋದಕ, ಚಮಟೆ. v. *Perspiration.*

To Sweat, v. n. ಬೆವರ, ಚಮಟೆಸುರಿಯು. v. *To perspire, toil, labour.*

Sweater, s. n. ಬೆವರಿನವ, ಚಮಟೆಸುರಿವವ.

Sweaty, a. ಬೆವರಿನ, ಚಮಟೆಯ.

To Sweep, v. a. ಬಳಿಯು, ಕಸಗೂಡಿಯು; *(to sweep together)* ಗುಪ್ಪೆಮಾಡ, ಗುಪ್ಪೆಕೂಡಿಸ; *(to sweep a house)* ಮನೆಬಳಿಯು; *(to sweep the ground)* ನೆಲಬಳಿಯು; *(to order or cause to sweep)* ಬೋಳಿಸ; *(to sweep or carry off)* ಎಳಕೊಂಡುಹೋಗ, ಸೆಳಕೊಂಡುಹೋಗ; *(to sweep, pass with swiftness)* ಬೇಗಬೇಗನಡಿಯು; *(to move pompously, as sweeping the ground with a train)* ದಾಷ್ಟೀಕವಾಗಿನಡಿಯು, ಜಗ್ಗನಿಗ್ಗಾಗಿಗಮನಿಸ.

Sweeper, s. n. ಕಸಬಳಿಯುವವ; *(the broom)* ಕಸಬೋರಿಗೆ.

Sweepings, s. n. ಕಸ, ಜಾದರೆ, ಚೆದುಗ, ಸಂಮಾರ್ಜರೆ, ಸಂಕರವು, ಅವಕರ. v. *Rubbish.* *(sweeping away, as a torrent)* ಎಳಕೊಂಡುಹೋಗುವದು, ಸೆಳಕೊಂಡುಹೋಗುವದು.

Sweet, a. ರುಚಿಯ, ಸ್ವಾದಿನ, ಮನೋಹರವಾದ. v. *Delicious, luscious, grateful, pleasing.* *(mild, gentle)* ಮೆಲ್ಲನದ, ನಿದಾನದ, ಮೃದುಕರದ. v.

Soft, tender. (not sour) ಶೀಯ್ಯಾದ, ಮಧುರವಾದ; *(not salt)* ಹಸಿಯು, ಊರಿದದ್ದು; *(not stinking, as meat)* ವಾಸನೆಸಿಡಿಯದ್ದು, ಹಳಸದ್ದು; *(sweet wine)* ಶೀಯ್ಯಾದದ್ರಾಕ್ಷೀರಸ; *(sweet water)* ಶೀನೀರು, ವಳ್ಳೀನೀರು; *(sweet scented)* ಪರಿಮಳವಾದ, ಸುವಾಸನೆಯಾದ. v. *Odoriferous. (sweet tasted)* ರುಚಿಕರವಾದ, ಸ್ವಾದುವಾದ, ರಸವತ್ತಾದ, ಸವಿಯಾದ. v. *Savoury. (sweet voiced, sweet toned)* ಶ್ರವಣಾನಂದವಾದಧ್ವನಿಯ, ಕಿವಿಗಾನಂದವಾದಶಬ್ದದ. v. *Melodious. (sweet tongued)* ಸುಭಾಷೆಯುಳ್ಳ, ಮಂಜುಭಾಷೆಯ, ಮಧುರವಚನದ. v. *Eloquent. (sweet tempered)* ಪ್ರೀತಿಕರವಾದ, ನಿದಾನಗುಣವುಳ್ಳ, ಜನಸಂಮ್ಮತವಾದ; *(sweetheart)* ವ್ಯಾಮೋಹಿ, ಪ್ರೇಮಪ್ರಿಯವ. v. *Lover. (a sweetmeat)* ಮಿಠಾಯಿ, ಲಡ್ಡುಮುದ್ದೆ; *(a seller of sweetmeats)* ಮಿಠಾಯಿಗಾರ, ಸೀವದಿಯಂಗಡಿಗಾರ. v. *Confectioner. (sweet cane, galingale)* ಖಬ್ಬು, ರಸದಾಳಿ, ಇಕ್ಷುದಂಡ, ಇಕ್ಷುಖಂಡ; *(sweet, sweeting, a term of endearment)* ಪ್ರಾಣ, ಜೀವ, ನನಪ್ರಾಣಾಪದಕ.

To Sweeten, v. a. ಶೀಮಾಡು, ಸಕ್ಕರೆಸುರಿಯು, ಮಾಧುರ್ಯಮಾಡು; *(to make mild, to soothe)* ಸಮಜಾಯಿಸು, ಪುಸಲಾಯಿಸು, ಶಾಂತಿಪಡಿಸು; *(to make less painful)* ಶಾಂತಿಪಡಿಸು, ಮಂಸ್ನಗೆಮಾಡು, ಉಪಶಮನಮಾಡು. v. *To mitigate, alleviate, palliate, soften, reconcile. (to sweeten or grow sweet)* ಶೀಯ್ಯಾಗು, ಮಾಧುರ್ಯವಾಗು.

Sweetened, part. ಶೀಮಾಡಿದ, ಮಧುರವಾದ, ರುಚಿಯಾದ.

Sweetish, a. ಶೀಯ್ಯಾದ, ಮಾಧುರ್ಯವಾದ.

Sweetly, ad. ಶೀಯ್ಯಾಗಿ, ಮಾಧುರ್ಯವಾಗಿ.

Sweetness, s. n. ಶೀಯ್ಯು, ಮಧುರ; *(sweetness of temper)* ಮನೋಹರ್ಷವಾದಗುಣ, ಜನಸಂಮತವಾದನಡಿಕೆ.

To Swell, v. n. *(grow turgid)* ಉಬ್ಬು, ಉಬಕು, ಬಾಯು, ಬಾವೇರು. v. *To protuberate, grow. (to swell with pride)* ಗರ್ವದಿಂದುಬ್ಬು, ಉದ್ರೇಕವಾಗು; *(with rage)* ಕೋಪೋದ್ರೇಕವಾಗು, ಉಗ್ರದಿಂದುಬ್ಬು, ಕೋಪೋತ್ಕೃಷ್ಟನಾಗು; *(to swell, cause to rise or increase)* ಉಬ್ಬಿಸು, ಉಬ್ಬುಕಮಾಡು, ಬಾಯುಮಾಡು, ಬಾವೇರಮಾಡು; *(to raise to arrogance)* ಗರ್ವೋದ್ರೇಕಮಾಡು, ಪ್ರೈಮರಿಸು; *(to swell with wind)* ಗಾಳಿಯಿಂದುಬ್ಬು, ಉಸುರುತುಂಬು.

Swell, or Swelling, s. n. ಉಬ್ಬೋಡು, ಉಬುಕೋಡು. v. *Protuberanee, humour.*

Swelled, part. ಉಬ್ಬಿದ, ಉಬುಕಾದ, ಬಾತ, ಬಾವಾದ.

Swelling, part. ಉಬ್ಬುವ, ಉಬುಕುವ, ಬಾಯುವ; *(having swelling breasts)* ಬಾತಮೊಲೆಯ; *(the swelling of the sea)* ಉಬುಕು, ಉಕ್ಕು; *(a swelling)* ಬಾವು, ಉಬ್ಬು, ಉಬುಕು; *(a swelling on the head)* ಬುಗಟೆ, ತಲೆಬುಗಟೆ; *(a swelling on the breast)* ಮೊಲೆಗಡ್ಡೆ, ಹಾಮೊತ್ತು; *(a swelling of the belly)* ಹೊಟ್ಟೆಪುಬ್ಬರ, ಬಸ್ತಿಪುರುಷಗರ್ಭ.

To Swelter, v. n. *(to be distressed with heat)* ಬೆವರು, ಬೆವರುಸುರಿಯು.

Swept, (part. of *sweep*) ಬಳೆದ, ತೊಳೆದ, ಘೂಸಿದ.

To Swerve, v. n. *(deviate, wander)* ತಪ್ಪಿಹೋಗ, ಬೇರೆಹೋಗ, ಮಾರ್ಗತಪ್ಪ. v. *To stray, rove, ply, bend.*

Swift, a. ತೀವ್ರದ, ತೀಕ್ಷ್ಣದ, ಶೀಘ್ರದ, ವೇಗದ, ತ್ವರಿತದ, ಆಶುಗಮನದ. v. *Nimble, quick, speedy, ready.*

Swiftly, ad. ಬೇಗನೆ, ತೀವ್ರವಾಗಿ, ತೀಕ್ಷ್ಣವಾಗಿ, ಜಾಗ್ರತೆಯಾಗಿ, ತ್ವರೆಯಾಗಿ, ಲಘುವಾಗಿ, ಕ್ಷಿಪ್ರವಾಗಿ, ಅರರವಾಗಿ.

Swiftness, s. n. ಲಘುವು, ವೇಗಾಳೆ, ಕ್ಷಿಪ್ರ, ತೀವ್ರ, ತೀಕ್ಷ್ಣ, ತ್ವರೆ. v. *Nimbleness, velocity, celerity, rapidity, quickness.*

To Swill, Swig, v. a. ಮದ್ಯಪಾನಮಾಡ, ಹೆಂಡಾಕುಡಿಯ, ಸುರೆಸೇವಿಸ. v. *To drink.*

Swiller, s. n. ಮದ್ಯಪಾನಿ, ಹೆಂಡಾಖೋರ, ಹೊಟ್ಟೆಮುಚ್ಚು. v. *Drinker, drunkard.*

To Swim, v. n. ಈಚ, ಈದ, ಜಲವಾಡ. v. *To float, glide.* (*to swim as the head*) ತಲೆತಿರುಗ, ತಿಪ್ಪಟೆಯಾಗ, ಬವಳಿಯಾಗ.

Swimmer, s. n. ಈಚುಗಾರ, ಈಡುವವ; (*a swimming of the head*) ತಲೆತಿಪ್ಪಟೆ, ಶಿರಗುವಿಕೆ. v. *Vertigo, dizziness, giddiness.*

To Swindle, v. a. ಕದಿಯ, ದಗೆಮಾಡ.

Swindler, s. n. ದಗಾಖೋರ, ಕದ್ದುಕೊಳ್ಳುವವ.

Swine, s. n. ಹಂದಿ, ಸೂಕರ, ವರಾಹ, ಘೃಷ್ಟಿ, ಕೋಲ, ಪೋತ್ರಿ. v. *Hog, pig, sow.*

Swineherd, s. n. ಹಂದಿಮಂಡೆ, ಹಂದಿಹಿಂಡು, ಸೂಕರಸ್ತೋಮ, ಘೃಷ್ಟಿಸಮುದಾಯ.

Swing, s. n. (*rope on which they swing*) ಜುವ್ವಾಲೆ; (*the motion of a swing or any thing similar*) ಅಲ್ಲಾಡುವದು, ಹೋಲಾಡುವದು, ತೂಗ್ಯಾಡುವದು.

To Swing, v. n. (*on a rope*) ಜುವ್ವಾಲೆಯಾಡ, ಜೋಂಪಾಲೆಯಾಡ. v. Also *to whirl, wave, brandish.*

Swinging, s. n. ಅಲ್ಲಾಡುವದು, ಊಗಾಡುವದು; (*as Hindoo devotees*) ಶಿಡಿಯಾಡುವದು.

To Swinge, v. a. ತೀಡ, ಶಳೆಯ, ಝಾಡಿಸ. v. *To lash, whip, punish.*

Swingeing, Swingeingly, v. *Huge, great, vast, &c.*

To Swingle, v. *To dangle.*

Swinish, v. *Hoggish.*

Switch, s. n. ಕೋಳು, ಪಂಗಲು. v. *Twig.*

Swoon, s. n. ಮೂರ್ಛೆ, ಬವಳಿ, ಸೊಕ್ಕ. v. *Fainting.*

To Swoon, v. n. ಮೂರ್ಛೆಗೈಯ್ಯ, ಬವರಿಹೊಂದ, ಸೊಕ್ಕೇರ. v. *To faint.*

To Swoop, v. a. (*fall as a hawk on his prey*) ಲಪ್ಪನಹಿಡಿಯ, ಕಚ್ಚ, ಲಬಕ್ಕನ.

Swoop, s. n. ಲಪ್ಪನೆ, ಲಬಕ್ಕನೆ, ಚಿಪ್ಪನೆ, ಚಿಪ್ಪನೆ, ತಿಪ್ಪನೆ, ಚಿಸ್ಸನೆ.

Sword, s. n. ಕತ್ತಿ, ಖಡ್ಗ, ಕ್ಷೇಟಿ, ಪಿಶಿ, ವಾಲ, ಸೀಗಾಣು, ಸುರುಗಿ; (*a sword knot*) ಮೊಖತೆ, ಬಾರು; (*a semicircular sword*) ತೆಬರಗತ್ತಿ, ಕೊಡಗಗತ್ತಿ, ಡೊಂಕುಕತ್ತಿ, ಅಲೆಮಾನಿಗತ್ತಿ; (*a*

two edged sword) ಪಟ್ಟಾಕತ್ತಿ; (a short sword) ಕಿರಿಗತ್ತಿ, ಗುಜ್ಜುಕತ್ತಿ; (a sword with a hilt that covers the hand) ಪಟ್ಟಾಕತ್ತಿ; (a sword ornamented with gems) ವಜ್ರಖಚಿತವಾದಕತ್ತಿ, ರತ್ನಕಚಿತವಾದಕತ್ತಿ; (a stud in a sword belt) ಕತ್ತಿದಸ್ತಿನಕುಸುಳು; (the point of a sword) ಖಡ್ಗದಅಂಚು, ಕತ್ತಿಯಮೊನೆ; (the edge of a sword) ಖಡ್ಗದಹದನು, ಕತ್ತಿಯ ಮೋರೆ, ಕೂಗಾ, ಪಾಲಿ, ಅಶ್ರಿ, ಕೋಟಿ; (armed with a sword) ಖಡ್ಗಧರಿಸಿದ, ಕತ್ತಿಹಾಕಿಕೊಂಡ, ತರವಾರುಮುಸ್ತೈದುಆದ; (to smite with a sword) ಕತ್ತಿಲಿ ಹೊಡಿಯ, ಕತ್ತಿಲಿಕಡಿಯ; (to blandish a sword) ಕತ್ತಿಝುಳಿಪಿಸ, ಕತ್ತಿಝಾಡಿಸ; (to fight with swords) ಖಡ್ಗದಯುದ್ಧಮಾಡ, ಕತ್ತಿಯಜಗಳಮಾಡ; (to sheathe a sword) ಕತ್ತಿಗೆವರೆಹಾಕ, ಖಡ್ಗಕ್ಕೆವರೆಯಿಕ್ಕ; (to unsheathe a sword) ಕತ್ತಿಯಬಿಚ್ಚ, ಕತ್ತಿಯಕಿತ್ತ; (a naked sword) ಬಿಚ್ಚುಗತ್ತಿ.

Sword-cutler, s. n. ಕತ್ತಿಮಾಡುವವ, ಕಂಮ್ಮಾರ.

Swordsman, s. n. (*sword bearer*) ಕತ್ತಿಸಾಧಕದವ, ಕತ್ತಿಕೈಗಾರಿಕೆಯವ.

Sworn, part. ಆಣೆಯಿಟ್ಟ, ಬಾಸೆಮಾಡಿದ.

Sycophant, s. n. ಸಂಮ್ಮಸಗ್ಗಾಳಿ, ಲಾಲೂಚಿಕೆಯವ, ಇಲ್ಲಾಮಲ್ಲಿ. ಇಚಕ್ಕವಾಡುವವ. v. *Parasite, flatterer, informer.*

Sycophantic, a. ಸಂಮ್ಮಸಗ್ಗಾಳಿಯ, ಲಾಲೂಚಿಕೆಯ, ಇಲ್ಲಾಮಲ್ಲಿಯ.

Syllable, s. n. ರೂಪನಿರ್ದೇಶಿ, ಅಕ್ಷರನಿರ್ದೇಶಿ, ಅಕ್ಷರಾರೋಹಣಾ, ಹ್ರಸ್ವದೀರ್ಘಯೋರ್ವೈಮೈಶ್ರ್ಯಾದಿಗಳು, ಕಾಗುಣಿತ.

Syllabical, a. ಕಾಗುಣಿತದ, ಅಕ್ಷರಾರೋಹಣೆಯ.

Syllabus, s. n. ಸಂಕ್ಷೇಪವು, ಕ್ಲಿಪ್ತವು. v. *Summary.*

Syllogism, s. n. ಗುಣಾದಿಂದವಸ್ತುನಿರ್ದೇಶಿ, ಗುಣಾದಿಂದವಸ್ತುನಿರ್ಧಾರ, ತರ್ಕನ್ಯಾಸ, ಊಹೆ.

Syllogistical, a. ಗುಣಾದಿಂದವಸ್ತುನಿರ್ದೇಶಿಯ, ಗುಣಾದಿಂದವಸ್ತುನಿರ್ಧಾರಿಸುವ, ಗುಣಾಪ್ರಮಾಣ್ಯದ.

Syllogistically, ad. ಗುಣಾಪ್ರಮಾಣ್ಯವಾಗಿ, ವಸ್ತುನಿರ್ಧಾರವಾಗಿ.

Sylvan, a. ಅಡವಿಯ, ವನಾಂತ್ರರದ, ಅರಂಣ್ಯದ, ಕಾನನದ. v. *Woody, shady, rustick.*

Symbol, s. n. ಸಾಂಮ್ಯ, ಹೆಗ್ಗುರುತು, ಶ್ರೋರಿಕೆ, ಹುಟ್ಟುಗುರುತು.

Symbolical, a. ಹೆಗ್ಗುರುತಿನ, ಸಾಂಮ್ಯದ, ಶ್ರೋರಿಕೆಯ, ಹುಟ್ಟುಗುರುತಿನ.

Symbolically, ad. ಹೆಗ್ಗುರುತಾಗಿ, ಸಾಂಮ್ಯವಾಗಿ, ಶ್ರೋರಿಕೆಯಾಗಿ, ಮೊದಲಗುರುತಾಗಿ.

To Symbolize, v. a. ಹೆಗ್ಗುರುತುಮಾಡ, ಸಾಂಮ್ಯಮಾಡ, ಶ್ರೋರಿಕೆಮಾಡ, ಮೊದಲಗುರುತುಮಾಡ.

Symmetry, s. n. ಹೊಂದಿಕೆ, ಸರಿ, ಸಮ, ಈಡು, ಜೋಡು. v. *Proportion.*

Symmetrical, a. ಹೊಂದಿಕೆಯ, ಸರಿಯ, ಸಮಾನದ, ಈಡಿನ, ಜೋಡಿನ.

Sympathetical, a. ಪರಚಿಂತೆಯ, ಪರತಾಪದ, ಪರವೇದನೆಯ, ಅನುತಾಪದ, ಅನುಶೋದನೆಯ.

Sympathetically, ad. ಪರಚಿಂತೆಯಾಗಿ, ಪರತಾಪವಾಗಿ, ಪರವೇದನೆಯಾಗಿ, ಅನುತಾಪವಾಗಿ, ಅನುಶೋದನೆಯಾಗಿ.

Sympathy, s. n. ಅನುತಾಪವು, ಅನುಶೋದನೆಯು, ಪರಚಿಂತೆಯು, ಪರತಾಪವು, ಪರವೇದನೆಯು.

To Sympathize, v. n. ಅನುತಾಪಿಸ, ಅನುಶೋದಿಸ, ಅನುಚಿಂತಿಸ.

Symphonious, a. ಮೇಳದ, ಏಕತಾಳದ, ಏಕತಾನದ, ಏಕಸ್ವರದ. v. *Harmonious.*

Symphony, s. n. ಏಕತಾಳ, ಏಕತಾನ, ಏಕಸ್ವರ, ಮೇಳ, ಶ್ರುತಿ, ತೌರ್ಯತ್ರಿಕ, ನಾಟ್ಯ.

Symptom, s. n. ಗುರುತು, ಕುರುಹು, ಕೂನ, ಚಿಹ್ನ, ಅನುಬಂಧ, ಅನುಬಂದ. v. *Sign, token.*

Symptomatick, a. ಗುರುತಿನ, ಕುರುಹಿನ, ಕೂನದ, ಚಿಹ್ನೆಯ.

Symptomatically, ad. ಗುರುತಾಗಿ, ಕುರುಹಾಗಿ, ಕೂನವಾಗಿ, ಚಿಹ್ನೆಯಾಗಿ.

Synagogue, s. n. ಸಭೆ, ಗುಂಪು, ಸಮೂಹ, ಸಂಘ.

Synchronical, Synchronous, a. (*happening at the same time*) ಏಕಕಾಲದಲ್ಲಿಯಾಗುವ, ಒಂದೇ ಮುಹೂರ್ತದಲ್ಲಿ ಸಂಭವಿಸುವ.

Synchronism, s. n. ಒಂದೇಕಾಲದಲ್ಲಿ ಪ್ರಾಪ್ತಿಸುವಿಕೆ.

Syncope, s. n. ಮುಚ್ಚೆ, ಜೋಂಗಳಿ, ಹರವಸ, ಮೂರ್ಛೆ, ವಿಸ್ಮರಣೆ, ವೈಮರವು. v. *Swoon.*

Syndick, s. n. (*the head, agent, or censor, of a public body*) ಯಜಮಾನ, ಪತಿ.

To Syndicate, v. n. (*pass judgment*) ನ್ಯಾಯತೀರಿಸ, ಧರ್ಮವಾಗಿಹೇಳ. v. *To judge.*

Synecdoche, s. n. ಉಪಲಕ್ಷಣ.

Synod, s. n. ಸಭೆ, ಸಂಘ, ದೇವಸಭೆ. v. *Assembly.* (*a conjunction of the planets*) ಯೋಗ.

Synodical, a. (*relating to or done by a synod*) ಸಭೆಯ, ಸಂಘದ, ಸಮೂಹದ, ದೇವಸಭೆಯ.

Synodically, ad. (*by authority of a synod*) ಸಭೆಯ ಅಪ್ಪಣೆಯ ಪ್ರಕಾರ, ಗುಂಪಿನ ಅಜ್ಞೆಯ ಪ್ರಕಾರ.

Synonymous, a. (*having the same meaning*) ಅನ್ವರ್ಥದ, ಸಮಾರ್ಥದ, ಏಕಾರ್ಥದ; (*a synonymous word*) ಸಮಾರ್ಥಶಬ್ದ, ಅನ್ವರ್ಥದ ಶಬ್ದ, ಏಕಾರ್ಥದ ಶಬ್ದ.

Synonymy, s. n. ಸಮಶಬ್ದ, ಏಕಾರ್ಥ, ಸಮಾರ್ಥ.

Synopsis, s. n., ಸಂಕ್ಷೇಪವು, ಸಂಕ್ಷಿಪ್ತವು. v. *Compendium, summary.*

Syntax, s. n. ಮಾತುಹೊಂದಿಸುವ ಲಕ್ಷಣ, ವಚನಹೊಂದಿಸುವ ಲಕ್ಷಣ, ಗದ್ಯಹೊಂದಿಸುವ ಲಕ್ಷಣ.

Syringe, s. n. ಚಿಮ್ಮುಕೊಳವಿ, ಪಿಚಂಕೊಳವಿ.

To Syringe, v. a. ಚಿಮ್ಮನಕೊಳವಿಯಿಂ ಚಿಮ್ಮು, ಪಿಚಂಕೊಳವಿಯಿಂದೆಸೆಯ.

System, s. n. ಪದ್ಧತಿ, ನಿಯಾಮಕ, ಕಟ್ಲೆ, ನಿಷ್ಕರ್ಷೆ, ಕ್ರಮ. v. *Rule, canon, method.*

Systematical, a. ಪದ್ಧತಿಯಾದ, ನಿಯಾಮವಾದ, ಕಟ್ಲೆಯಾದ, ಕ್ರಮವಾದ, ಸಾಲುಸಾಲಾದ, ಸಾಕೋದ್ಧಾರವಾದ.

Systematically, ad. ಪದ್ಧತಿಯಾಗಿ, ಕ್ರಮವಾಗಿ, ಸಾಲುಸಾಲಾಗಿ, ಸಾಕೋದ್ಧಾರವಾಗಿ.

T

Tabby, a. *(brindled)* ಪಟ್ಟೆಯಾದ, ಚಿತ್ರವರ್ಣವಾದ, ಚುಕ್ಕೆಚುಕ್ಕೆಯಾದ. v. *Spotted.*

Tabernacle, s n. ಗುಡಾರ v. *Pavilion, tent.* *(a place of worship)* ದೇವಸ್ಥಾನ.

Table, s. n. *(any flat or level surface)* ಸಮಭೂಮಿ, ಸಮಸ್ಥಳ, ಚದುರನೆಲ; *(a table with legs)* ಮೇಜಿನಮಣೆ, ಚೌಕೀಮಣೆ; *(a table or tray, or cloth spread with victuals)* ಯಡೆ; *(a voider in which they carry dishes to and from table)* ತಳಿಗೆಬಟ್ಟಲು, ಯಿಡುವಪರಾತೆ; *(a table on which shoemakers cut their leather)* ಪಟ್ಟೆದಿಮಣೆ; *(a table of contents to a book)* ಗದ್ಯ, ಪೀಠಿಕೆ, ಸಂಕ್ಷೇಪಶ್ಲೋಕ; *(tables for chess, dice, &c.)* ಚದುರಂಗದಮನೆ, ಪಗಡೆಮನೆ; *(arithmetical tables)* ಅಂಕೆ, ಗಣಿತ; *(astronomical tables)* ಸಿದ್ಧಾಂತಗಣಿತ; *(a table or tablet on which any thing is inscribed)* ಹಲಗೆ, ತಗಡು, ತಃಕ್ತಿ; *(to turn the tables)* ವಿಪರ್ಯಾಸವಾಗ, ಊಚನೀಚವಾಗ, ನೀಚೋಂಚಾಗ, ರಾಜಿಪಾಜಾಗ, ಪಾಜಿರಾಜಾಗ; *(a table decker)* ಬಡಿಸುವವ, ಇಕ್ಕುವವ, ಅಂನಬಡಿಸುವವ, ಪಂಙ್ತಿವಿಚಾರಕ; *(an open table)* ಅಂನಛತ್ರ, ಅಂನದಾನದಮನೆ; *(tables of descents)* ವಂಶಪಾರಂಪರ್ಯ, ತರಾತರಗಳು; *(table cloth)* ಮೇಜಾಪುಪ್ಪಟಿ, ದಸ್ತರು, ಅಗಲಿನವಸ್ತ್ರ; *(table land)* ತಪ್ಪಲು, ಸಾನು.

To Table, v. n. *(board with)* ಕೂಡಾಮಾಡಾವುಣಾ, ಕೂಲಿಕೊಟ್ಟುಂಣಾ.

Table-talk, s. n. ಭೋಜನಾಂತರಪ್ರಸ್ತಾವ.

Tablet, Tablets, s. n. ಹಲಗೆ, ತಗಡು, ತಃಕ್ತಿ.

Tabour, Tabouret, Tabourine, Tabret, s. n. *(tambarine)* ದಂಮಡಿ, ಬಾರಿಸುವಹಲಗೆ, ಕಾಳಗವಳಗೆ, ಅತ್ರಪರ, ತಬಟೆ.

Tabourer, s. n. ದಂಮಡಿಯವ, ದಂಮ್ಮಡಿಬಾರಿಸುವವ.

Tacit, a. ಮೌನದ, ನಿಶ್ಶಬ್ದದ, ನಿರುಕ್ತಿಯ, ಮುಗ್ಧದ. v. *Silent.*

Tacitly, ad. ಮೌನವಾಗಿ, ನಿಶ್ಶಬ್ದವಾಗಿ, ನಿರುಕ್ತಿಯಾಗಿ, ಮುಗ್ಧವಾಗಿ. v. *Silently.*

Taciturnity, s. n. ಮೌನತ್ವ, ನಿಶ್ಶಬ್ದತ್ವ, ನಿರುಕ್ತಿ, ಮುಗ್ಧತ್ವ. v. *Silence.*

To Tack, v. a. *(stitch or join together)* ಜೋಡಾಗಿಹೊಂದಿಸು. v. *To join, unite.* *(to tack or turn a ship)* ಹಡಗ ತಿರಿಗಿಸು.

Tack, s. n. *(small nail)* ಚಿಕ್ಕಮೊಳೆ; *(the tacking of a ship)* ಹಡಗ ತಿರಿಗಿಸುವಿಕೆ.

Tacked, part. *(joined with thread)* ಜೋಡಾಗಿಹೊಲಿದ; *(with small nails)* ಚಿಕ್ಕಮೊಳೆನಾಟಿದ.

Tackle, Tackling, s. n. *(of a ship)* ಹಡಗದ ಸಂನಾಹ, ಹಡಗದಸಾಧನೆ. v. Also *arms, utensils, instruments.*

Tactick, a. *(relating to the art of ranging in battle or the art of war in general)* ಯುದ್ಧಪ್ರಕರಣ, ಯುದ್ಧಸಾಧನ, ಧನುರ್ವಿದ್ಯೆ.

Tadpole, s. n. ಕಪ್ಪೆಮರಿ, ಮಂಡೂಕಶಿಶುವು.

To Tag, v. a. ಕೂಡಿಸು, ಹೊಂದಿಸು, ಏಕಮಾಡು. v. *To tack, join.*

Tag, s. n. *(point)* ಮೊನೆ, ಕೊನೆ, ಮೊನಚು; *(the tag of a lace or string)* ಚಿಲಕಟ್ಟು; *(tagrag and bobtail)* ನೀಚರು, ಚಾಂಡಾಲರು, ಅಂತ್ಯಜರು, ಹೊಲೆಯರು. v. *Rabble, mob.*

Tail, s. n. ಬಾಲ, ವಾಲ; *(the tail of a robe)* ನಿಲುವಂಗಿಜೋಲು, ನಿಲುವಂಗಿಯಂಚು; *(a long tail)* ದೀರ್ಘವಾದಬಾಲ, ಉದ್ದವಾದಬಾಲ, ಊಬಾದಬಾಲ; *(a short tail)* ಮೊಂಡಬಾಲ; *(a scorpion's tail)* ಚೇಳಿನಕೊಂಡಿ; *(the tail of the eye)* ಕಂಗ್ಗೊನೆ, ಕಂಗತ್ತೇರು, ಕಂಗಡಾಯತೆ; *(wagging the tail, as a dog)* ಬಾಲವಲ್ಲಾಡುವದು; *(clapping the tail between the legs)* ಬಾಲಮುದಿಗಿಕೊಳ್ಳು, ಬಾಲಕುಂಡಿಯಲ್ಲಿಸೇರಿಸು; *(to turn tail, to run away)* ಓಡಿಹೋಗು, ಪಲಾಯನವಾಗಿಹೋಗು, ಬೆಂಮುಕೊಡು. v. *To flee, fly.* *(ploughtail)* ಮೇಳಿ, ಮೇಡಿ, ಮಡಿಕೆಹಿಂಭಾಗ.

Tailed, a. ಬಾಲದ, ಬಾಲವುಳ್ಳ, ಬಾಲವಿರುವ.

Tailor, s. n. ಚಿಪ್ಪಿಗ, ದರ್ಜಿಯವ, ಚಿಂಪಿಗ, ವಸ್ತ್ರಘಾತಕ, ಸೂಜಿಮೊನೆಯಲ್ಲಿಹೊಟ್ಟೆಹೊರೆಯುವವ; *(a tailor's needle bag)* ಚಿಪ್ಪಿಗರಸಂಚಿ, ಚಿಡುಸಟ್ಟಿಚೀಲ.

To Taint, v. a. ಕೆಡಿಸು, ಕುಂದಿಸು, ಅಳಿಸು. v. *To corrupt, infect.* *(to stain, sully)* ಮಾಸುವಹಾಗೆಮಾಡು, ಮೈಲಿಗೆಮಾಡು, ಮಲಿನಮಾಡು, ಕತ್ರಗೆಮಾಡು, ಹೊಲಸುಮಾಡು. v. Also *to imbue, impregnate.* *(to taint, be infected)* ಮಾಸು, ಮಲಿನವಾಗು, ಮೈಲಿಗೆಯಾಗು, ಕತ್ರಗಾಗು, ಹೊಲಸಾಗು.

Taint, s. n. ಕೇಡು, ಕುಂದು, ಅಳಿವು, ನಷ್ಟ, ನಶಿ, ನಿಹತಿ. v. *Corruption, infection.* *(stain, soil, spot)* ಕಳಂಕ, ಮೈಲಿಗೆ, ಮಲಿನ, ಕಪ್ಪು, ಹೊಲಸು. v. *Blemish.*

Tainted, part. ಕಳಂಕವಾದ, ಮೈಲಿಗೆಯಾದ, ಮಲಿನವಾದ, ಕಪ್ಪಾದ, ಹೊಲಸಾದ.

Taintless, a. ನಿಷ್ಕಳಂಕದ, ಕಲ್ಮಷವಿಲ್ಲದ, ನಿರ್ದೋಷವಾದ, ಮಾಸದೆಯಿರುವ, ಮಲಿನವಿಲ್ಲದ.

To Take, v. a. *(seize)* ಹಿಡಿಯು, ತೆಗೆದುಕೊಳ್ಳು, ಗ್ರಹಿಸು; *(to receive or accept)* ಅಂಗೀಕರಿಸಿಕೊಳ್ಳು, ತಕ್ಕೊಳ್ಳು; *(to comprehend, understand)* ಗ್ರಹಿಸು, ತಿಳುಕೊಳ್ಳು; *(to succeed or gain ground)* ಕೂಡಿಬರು, ಪ್ರಬಲವಾಗು, ಅಭಿವೃದ್ಧಿಯಾಗು, ಕಳೆತುಬರು. v. *To prosper.* *(to take away, deprive of)* ತಕ್ಕೊಳ್ಳು, ಕಸುಕೊಳ್ಳು; *(to remove)* ತೆಗೆದಿಡು, ಎತ್ತಿಡು; *(to take care, to be cautious)* ಭದ್ರವಾಗಿರು, ಜಾಗ್ರತೆಯಾಗಿರು, ಎಚ್ಚರವಾಗಿರು. v. *To beware.* *(to be vigilant, attentive, careful)* ಎಚ್ಚತ್ತಿರು, ಆಲೈಸು; *(to superintend)* ಮೇಲುಗಾವಲಿರು, ಪಹರೆಯಿರು. v. *To oversee.* *(to take care of the sick, attend as a nurse, &c.)* ಆರೈಕೆಮಾಡು, ಪರಾಮರಿಸು; *(to take care of a horse)* ಕುದುರೆಜೋಕೆಮಾಡು, ಜೋಪಾನಮಾಡು; *(to take down, humble, reduce, depress)* ಅಣಗಿಸು, ತಗ್ಗಿಸು, ಕೆಳಗೆತರು; *(to swallow)* ನುಂಗಿಬಿಡು; *(to take down

from a higher place) ಇಳಿಸಿಕೊಳ್ಳು; *(to take from, derogate)* ಮಾನಕಡಿಮೆಮಾಡು, ಕೀರ್ತಿಕಳಿಯು. v. *To detract, slander;* also *take away, deprive.* *(to take heed, be attentive)* ಜಾಗ್ರತಿಯಾಗಿರು, ಎಚ್ಚತ್ತಿರು. v. *To take care, beware.* *(to take in, comprehend, contain)* ಅಣಗು, ಅಡಗು, ಒಳಕೊಳ್ಳು, ನುಂಗಿಬಿಡು, ಹಿಡಿಯು; *(to admit, permit to enter)* ಒಳಗೆತಕ್ಕೊಳ್ಳು, ನಿರೂಪಕೊಡು; *(to receive)* ಅಂಗೀಕರಿಸು, ಅನುಸ್ವಾದಿಸು, ಗ್ರಹಣಮಾಡು, ಕೈಗೆತೆಗೆದುಕೊಳ್ಳು; *(to receive mentally)* ಗ್ರಹಿಸು, ಮನಸ್ಸಿಗೆತಕ್ಕೊಳ್ಳು. v. *To understand;* also *to win.* *(to take oath)* ಪ್ರಮಾಣಮಾಡಿಕೊಳ್ಳು, ಆಣೆಯಿಟ್ಟುಕೊಳ್ಳು. v. *To swear.* *(to take off, invalidate)* ಬಲಹೀನಮಾಡು, ಬಲಕಡಿಮೆಮಾಡು; *(to remove)* ತಕ್ಕೊಂಡುಹೋಗು, ಒಯ್ಯು; *(to withhold, cut off)* ಹಿಡಿಕೊಂಡಿರು, ಕೊಡದೆಯಿರು; *(to swallow)* ನುಂಗಿಬಿಡು; *(to purchase)* ಕೊಂಡುಕೊಳ್ಳು, ಕ್ರಯಕ್ಕೆತಕ್ಕೊಳ್ಳು, ಬೆಲೆಗೆತೆಗೆದುಕೊಳ್ಳು; *(to copy)* ಪ್ರತಿಬರಿಯು, ಬದಲುಬರಿಯು; *(to take order with)* ಗರ್ವಮಟ್ಟುಮಾಡು. v. *To check.* *(to take course with)* ಪ್ರಯತ್ನಿಸು, ಉಪಾಯನೋಡು, *(to take out, of any place)* ಒಳಗಿಂದಾತೆಗೆದುಕೊಳ್ಳು; *(to take part)* ಪಾಲುತಕ್ಕೊಳ್ಳು, ಹಂಚಿತಕ್ಕೊಳ್ಳು. v. *To partake.* *(to take part with, favour another)* ಅನುಕೂಲಿಸು, ಸಹಾಯಬರು. v. *To stickle.* *(to take place, happen)* ಸಂಭವಿಸು, ಪ್ರಾಪ್ತಿಸು, ಆಗು; *(to take up, borrow)* ಸಾಲತೆಕೊಳ್ಳು, ಋಣಮಾಡು; *(to seize, arrest)* ಪಹರೆಯಲ್ಲಿಡು, ಕಾವಲಿಯಲ್ಲಿಡು; *(to lift)* ಎತ್ತು, ಉಬ್ಬಿಸು; *(to occupy or fill a place)* ಹಿಡುಕೊಳ್ಳು, ಸ್ಥಳಹಿಡುಕೊಳ್ಳು; *(to reform one's life)* ಸನ್ಮಾರ್ಗಕ್ಕೆಬರು, ಗುಣಪಡು, ಜ್ಞಾನಕ್ಕೆತಿರುಗು. v. Also *to begin, stop, engross, engage, have recourse, adopt, assume, compromise, collect, levy.* *(to take upon, assume, claim, appropriate)* ವಹಿಸು, ಹೊತ್ತುಕೊಳ್ಳು, ನಿರ್ವಾಹಕಮಾಡು; *(to take up with, to be contented)* ಸಮಾಧಾನಪಡು, ಸಂತೃಪ್ತಿಪಡು, ಸಂತುಷ್ಟಿಪಡು; *(to lodge with)* ಗೃಹಾವಾಸದಲ್ಲಿರು, ಕೂಡವಕ್ಕಲಿರು, ಪರಕಿಡನಿರು; *(to take by the hand, to assist)* ನಿಲಿಯೆತ್ತು, ಆದರಿಸು, ಕೈಗೊಡು, ಆಸರೆಗೊಡು, ವಶ್ರಾಸೆಗೊಡು, ಅನುಕೂಲಿಸು. v. *To patronize.* *(to take one another by the hand)* ಕೈಕೈಹಿಡಿಯು, ಕೈಕೈಹಿಡಿಕೊಂಡುಹೋಗು; *(to take with, please)* ಮೆಚ್ಚಿಕೊಳ್ಳು, ಸಂತೋಷಪಡು; *(to take an affront)* ಸಿಟ್ಟಾಗು, ಮುನಿಸುಹುಟ್ಟಿ, ಬಿಗದಾಯಿಸಿಕೊಳ್ಳು, ಶರಸಿಕೊಳ್ಳು; *(to take prisoner)* ಸೆರೆಹಿಡುಕೊಳ್ಳು, ಕೈಸೆರೆಹಿಡಿಯು, ಸೆರೆಗೆತೆಗೆದುಕೊಳ್ಳು; *(to cause one to take)* ಹಿಡಿಸು; *(to take a bad presage)* ಅಪಶಕುನವಾಗು; *(to take vengeance)* ಮುಯಿಗೊಡು, ಪ್ರತಿಪ್ರಾಯಶ್ಚಿತ್ತಕೊಡು, ಕಾಯಿಕ್ಕಾಯಿತೀರಿಸು, ಮಚ್ಚರತೀರಿಸಿಕೊಳ್ಳು. v. *To revenge.* *(take, imperative)* ತಕೊ, ಹಿಡುಕೊ, ತೆಗೆದುಕೊ; *(take care, stand by)* ಪಾರ್ಕ್ಯಾಸ, ಅತ್ತತ್ತನಿಂದ್ರು, ಬೈಸ್ಸು, ಹಾದಿಹಾದಿ; *(softly)* ಜೋಕೆಜೋಕೆ, ಶಿದ್ರಶಿದ್ರ, ಮೆಲ್ಲಗೆಮೆಲ್ಲಗೆ; I'll take

advice ನಾನಾಲೋಚನಮಾಡಬೇಕು, ನಾನು ವಿಚಾರಿಸಿಕೊಳ್ಳುವೆನು; He *took* some pepper-water ಅವನು ಸ್ವಲ್ಪ ಮೆಣಸಿನ ಸಾರು ತೆಗೆದುಕೊಂಡ, or ಅವನು ಸ್ವಲ್ಪ ಮೆಣಸಿನ ನೀರು ತೆಗೆದುಕೊಂಡನು; Don't *take* it ill ನೀ ಸಿಟ್ಟಾಗಬೇಡ, or ನೀ ಕೋಪಿಸಿಕೊಳ್ಳಬೇಡ; He *did* not take time ಅವನಾತುರಪಟ್ಟನು, or ಅವನವಸರವಾಗಿ ಮಾಡಿದನು, or ಅವನು ಧಾಯಾಬೋರಕನಾಗಿ ಮಾಡಿದನು, or ಅವನು ಫಡಫಾಚೆ ಮಾಡಿದನು; It *takes* well ಸಸಾರವಾಗಿದೆ, or ಸಾಲಸುದ್ದವಾಗಿದೆ, or ಸಜ್ಜಾಗಿದೆ, or ಅಜ್ಜಾಗಿದೆ; Don't *take* it to heart ಅದರಂನ ಮನಸ್ಸಿನಲ್ಲಿಯಿಡಬೇಡ, or ಮರತುಬಿಡು; We must *take* it in a good sense ನಾವು ಅದರಂನ ಒಳ್ಳೆಯ ಅರ್ಥವಾಗಿ ಗ್ರಹಿಸಬೇಕು, or ನಾವು ಅದರಂನ ಒಳ್ಳೆಯದೆಂದು ಎಣಿಸಬೇಕು; He *took* leave of me ಅವನು ನನ್ನ ಸಂಗಡ ಅಪ್ಪಣೆಯಂನು ತೆಗೆದುಕೊಂಡನು; He *took* ship ಅವನು ಹಡಗವೇರಿದನು, or ಅವನು ಹಡಗದ ಮೇಲೆ ಹೋದನು; I will *take* him along with me ಅವಂನ ನನ್ನ ಸಂಗಡ ಕರಕೊಂಡು ಹೋಗುತ್ತೇನೆ, or ಅವಂನ ನನ ಒಂದಿಗೆ ತೆಗೆದುಕೊಂಡು ಹೋಗುತ್ತೇನೆ; He *took* my picture (or portrait) ಅವನು ನನ್ನ ಮುಖಭಾವವಂನು ಬರದನು, or ಅವನು ನನ್ನ ಭಾವವಂನು ಬರದನು, or ಅವನು ನನ್ನ ಆಕಾರವಂನು ಬರದನು; He *took* it to pieces ಅವನು ಅದಂನ ಕೀಲು ಕೀಲು ವಿಂಗಡಿಸಿದನು, or ಅವನು ತುಂಡು ತುಂಡಾಗಿ ವಿಂಗಡಿಸಿದನು; This boy *takes* delight in his book ಈ ಹುಡುಗ ತನ್ನ ಓದಿಕೆಯಲ್ಲಿ ಆಸಕ್ತಿಯಾಗಿದ್ದಾನೆ, or ಈ ಪೋರ ತನ್ನ ಓದುಗೆಯಲ್ಲಿ ಅತ್ಯಭಿಲಾಸೆಯಾಗಿದ್ದಾನೆ; He *took* it in writing ಅವನು ಬರದಿಟ್ಟುಕೊಂಡನು, or ಅವನು ಗುರುತು ಹತ್ತಿಸಿಕೊಂಡನು; I shall *take* it as a favour if you will send me five pagodas ನೀನು ನನಗೆ ಐದು ವರಹಾ ಕೊಟ್ಟರೆ ಅದು ನನಗೆ ಬಹಳ ಉಪಕಾರವಾಗಿರುತ್ತದೆ, or ನೀವು ನನಗೆ ಐದು ವರಹಾಗಳು ಕೈಗಡವಾಗಿ ಕೊಟ್ಟರೆ ಅದು ಬಹಳ ಉಪಕಾರವೆಂದು ನೆನಸುತ್ತೇನೆ; I *took* pity on him ನಾನು ಅವಂನ ಕನಿಕರಿಸಿದೆನು, or ನನಗೆ ಅವನ ಮೇಲೆ ಕರುಣಾವಾಯಿತು, or ನಾನು ಅವನಿಗೆ ಪಾಪವೆಂದು ಅಂದೆನು; It *took* fire ಅದು ಉರಿದುಹೋಯಿತು, or ಅದಕ್ಕೆ ಬೆಂಕಿಹತ್ತಿತು; It *took* root ಅದು ಬೇರುಬಿದಿಯಿತು, or ಅದು ಬೇರುಹತ್ತಿತು, or ಅದು ಬೇರುಕೊಂಡಿತು, or ಅದು ಬೇರಿಳಿಯಿತು; I *took* towards that place ಆಸ್ಥಳಕ್ಕೆ ಯೆದುರಾಗಿ ಹೋದೆನು; He *took* himself to his heels ಅವನು ಕಾಲುಯೆತ್ತಿಹೋದನು, or ಅವನು ಚಕ್ಕಾಗಿಸಿದನು, or ಯೇಳೋಭಾಗ್ಯಮಾಡಿದನು, or ಅವನು ನಾಲ್ಕರ ಕೆಳಗೆ ಮೂರು ಹಾಕಿದನು; He *took* up with it ಅದಕ್ಕವನು ಸಂಮತಿಸಿದನು, or ಅದಕ್ಕವನು ಸಂಮತಿಪಟ್ಟನು; (*a mare ready to take horse*) ಬೆದೆಯೆದ್ದ ಕುದುರೆ; He *took* offence at what you said ನೀ ಹೇಳಿದ ಮಾತಿಗೆ ಅವನು ಸಿಟ್ಟಾದನು, or ಅವನು ನಿನ್ನ ಮಾತಿಗೆ ಬಿಗಡಾಯಿಸಿದನು; He *takes* pride in it ಅವನು ಅದರಲ್ಲಿ ಅಹಂಕರಿಸಿಯಿದ್ದಾನೆ; He *takes*

bad courses ಅವನು ಕೆಟ್ಟಹಾದಿಗಳಲ್ಲಿ ನಡೆಯುತ್ತಾನೆ, ಅವನು ಅಯೋಗ್ಯ ಪ್ರವರ್ತನೆ ಮಾಡುತ್ತಾನೆ; He *took* a leap ಅವನು ಹಾರಿದನು, or ಅವನು ಯಗರಿದನು, or ಅವನು ಕುಪ್ಪಳಿಸಿದನು; He *took* a journey ಅವನು ಪ್ರಯಾಣಮಾಡಿದನು, or ಅವನು ಪಯಣವಾದನು, or ಅವನು ಹಾದಿಹಿಡಿದನು; He *took* a walk round the tank ಅವನು ಕೆರಿಯ ಮೇಲೆ ವಿಹಾರವಾಗಿ ಹರಿಸಿದನು; It has *taken* effect ಅದು ವಂಟಿತು, ಅದು ಕೂಡಿಬಂತು; The son of God *took* human nature ದೇವರ ಮಗನು ಮನುಷ್ಯಸ್ವಭಾವವನ್ನು ಧರಿಸಿದನು; He *took* me in ಅವನು ನನ್ನನ್ನು ಮೋಸಗೊಳಿಸಿದನು, or ಅವನು ನನ್ನನ್ನು ಮೋಸಮಾಡಿದನು, or ಅವನು ನನ್ನನ್ನು ದಗೆಮಾಡಿದನು; I *take* it for granted ಅದು ಹೌದೆಂದು ಯೆಣಿಸುತ್ತೇನೆ; He *took* to it ಅದರ ಮೇಲೆ ಮನಸ್ಸಿಟ್ಟನು, or ಅದಕ್ಕೆ ವನುಮನಸ್ಸುಮಾಡಿದನು; He *takes* after his father ಅವನು ತನ್ನ ತಂದೆಯ ಹೋಲಿಕೆಯಾಗಿದ್ದಾನೆ, or ಅವನು ತನ್ನ ತಂದೆಯಂತೆ ಹೋಲಿದ್ದಾನೆ; He *took* it asunder ಅವನು ಅದನ್ನ ಸೀಳಬಡಿದನು, or ಅವನು ಅದನ್ನ ಸೀಳಿದನು, or ಅವನು ಅದನ್ನ ಸೀಳು ಮಾಡಿದನು; He *took* it down ಅವನು ಅದನ್ನ ಕೆಳಗಿಳಿಸಿದನು, or ಅವನು ಅದನ್ನ ಇಳುಕಿದನು; He *took* me down ಅವನು ನನ್ನನು ಗದರಿಸಿದನು, or ಅವನು ನನ್ನನು ಕುಂಗಿಸಿದನು, or ಅವನು ನನ್ನ ಮೇಲೆ ಶಿಕ್ಷೆಮಾಡಿದನು; *Take* my word for it ನನ್ನ ಮಾತು ನಂಬಿಕೋ; He *took* a denial ಅವನು ಕೇಳಿದ ಮನವಿ ತಿರಸ್ಕರಿಸಿಬಿಟ್ಟನು; He was *taken* ill ಅವನು ರೋಗದಲ್ಲಿ ಬಿದ್ದಿದ್ದನು, or ಅವನು ಜಾಡ್ಯದಲ್ಲಿ ಬಿದ್ದಿದ್ದನು; He was much *taken* up with it ಅವನು ಅದರಲ್ಲಿ ಬಹಳ ಆಸಕ್ತನಾಗಿಯಿದ್ದನು; He *took* it upon him ಅವನು ಅದನ್ನ ಮೇಲೆ ಹಾಕಿಕೊಂಡನು; I am much *taken* up ನಾನು ಬಹಳ ಕೆಲಸದಲ್ಲಿಯಿದ್ದೇನೆ; You can *take* your choice ನಿನಗೆ ಮನಸಂದಾದ್ದು ತೆಕ್ಕೊ, or ನಿನಗೆ ಸರಿಬಂದದ್ದು ತೆಕ್ಕೊ.

Taken, part. *(seized)* ಹಿಡಿದ, ಆಕ್ರಮಿಸಿದ, ಗ್ರಸ್ತವಾದ.

Taker, s. n. ತೆಕ್ಕೊಂಬುವವ, ಆಕ್ರಮಿಸುವವ, ಗ್ರಹಿಸುವವ. v. *Captor, receiver.*

Tale, s. n. ಕಥೆ, ಗಾಥೆ, ವೃತ್ತಾಂತ, ಇತಿಹಾಸ; It is a well known *tale* ಅದು ಬಹು ಪ್ರಸಿದ್ಧಿಯಾದ ಕಥೆ, ಅದು ಬಹು ಪ್ರಖ್ಯಾತಿಯಾದ ವೃತ್ತಾಂತ; *(a teller of tales)* ಕಥಿಕ, ಕಥೆಹೇಳುವವ, ಪೌರಾಣಿಕನು. v. *Fabulist. (an idle tale)* ಸುಳ್ಳುಕಥೆ, ಗಾದೆ, ಹರಟೆ; *(tale, number reckoned)* ಪಟ್ಟಿ, ಏಕೂಸು, ಉಕ್ತೆಯ, ಅಂತ್ಯ, ಕೋಷ್ವರಿ; *(tale, malignant intelligence)* ಚಾಡಿ, ಕ್ಷತ್ರ.

Talebearer, s. n. ಕೊಳ್ಳಿಕೊಂಪ್ಯ, ಮನೆಮುರುಕ, ಅಲ್ಲಿಯ ಮಾತಿಲ್ಲಿಯು ಇಲ್ಲಿಯ ಮಾತಲ್ಲಿ ಹೇಳುವವ, ಇಲ್ಲಾಮಲ್ಲಿ, ಚಾಡಿಕೋರ. v. *Informer, slanderer.*

Talebearing, s. n. ಚಾಡಿತನ, ಇಲ್ಲಾಮಲ್ಲಿತನ.

Talent, Talents, s. n. *(mental ability, faculty)* ಯೋಗ್ಯತೆ, ಸ್ವರೂಪ, ಸಾಮರ್ಥ್ಯ, ಅಧಿಕಾರ;

(*a man of talent*) ಯೋಗ್ಯತೆಯುಳ್ಳವ, ಅಧಿಕಾರಿ.

Talisman, s. n. ಮಂತ್ರಗಾರ, ಮಂತ್ರಿಸುವವ, ಭೂತವೈದ್ಯ.

Talismanick, a. ಮಂತ್ರದ, ಚಾಟಿಕದ, ಭೂತವೈದ್ಯದ. v. *Magical.*

To Talk, v. n. ಮಾತಾಡ, ನುಡಿಯ, ಸಂಭಾಷಿಸ. v. *To speak, prattle, chat, converse, relate.* The story will *talk* itself asleep ಅಂದಾಡಿಕೊಳ್ಳುವವರ್ತಮಾನವು ಬೇಗ ಬಿದ್ಧೋಗುವದು.

Talk, s. n. ಗೋಷ್ಠಿ, ಸಂಭಾಷಣೆ, ಪ್ರಸಂಗ, ಸಂವಾದ. v. *Conversation, speech, talkativeness.* (*public talk*) ಜನವಾರ್ತೆ, ಜನವದಂತಿ, ಸುಬಾಕು. v. *Rumour.* (*idle talk*) ಜೊಳ್ಳುಹರಟೆ, ವೃಥಾಮಾತು, ವ್ಯರ್ಥವಾದ ಹರಟೆ, ಜೊಳ್ಳುಕೂಗು, ಹಾಳುಹರಟೆ.

Talkative, a. ಜೊಳ್ಳುಹರಟೆಯ, ಹರಟುವ, ಬಾತಾಖಾನಿಯ, ಮಾತಿನ, ಜೊಳ್ಳುಕೂಗಿನ; (*a talkative person*) ಮಾತಾಳಿ; (*a talkative female*) ಮಾತುಗಿ, ಮಾತುಗಿತಿ. v. *Loquacious.*

Talkativeness, s. n. ಹರಟೆಖೋರತನ. v. *Loquacity, prate.*

Talker, s. n. ಕಗ್ಗದವ, ಮಾತಾಡುವವ, ಭಾಷಿಸುವವ, ವಾಚಾಳಿಕ, ಮಾತಾಳಿ; (*an idle talker*) ಜೊಳ್ಳುಕೊಚ್ಚುವವ, ಕಗ್ಗಹೊಸೆಯುವವ, ಬಾತಾಖಾನಿ, ಜೊಳ್ಳುಕೂಗಿನವ, ಹಾಳುಹರಟೆಯವ. v. *Prater, boaster.*

Talking, s. n. ಮಾತಾಡುವದು, ಹರಟುವದು. v. *Speaking.*

Tall, a. (*lofty*) ಚೆಲ್ಲಿ, ನಿಡಿದು, ಉನ್ನತವಾದ, ಉದ್ದನಾದ, ಊಚನಾದ, ಎತ್ತರವಾದ; (*tall of stature*) ಲಂಬೋದರನಾದ, ಊಚನಾದ, ಲಂಬಚೆಡಿಯಾದ, ಕೋಲಾಪಕ್ಷಿಯಾದ, ಕಾಲೆತ್ತರವಾದ.

Tallow, s. n. ಕೊಬ್ಬು, ತೈಲ, ಚುಪ್ಪ, ಸಾರ. v. *Grease, fat.*

Tally, s. n. ಈಡಾದದ್ದು, ಅಚ್ಚಾದದ್ದು, ವತ್ತ್ಯಾಗಾದದ್ದು, ಹೊಂದಿದದ್ದು, ಸರಿಯಾದದ್ದು.

To Tally, v. n. ಸರಿಯಾಗ, ಹೊಂದಿಕೆಯಾಗ, ಸರಿಹೋಗ, ಈಡಾಗ. v. *To fit, suit.*

Talness, s. n. ಊಚ, ಉದ್ದ, ಎತ್ತರ, ಉನ್ನತೆ, ಅಂಬಾರ, ಪ್ರಾಂಶು.

Talon, s. n. ಪಕ್ಷಿನಖ, ಹಕ್ಕಿಯುಗುರು. v. *Nail, claw.* (*to strike the talons into any thing*) ನಖಘಾತಮಾಡ, ನಖಕ್ಷತಮಾಡ, ನಖದಗೆರೆಮಾಡ.

Tamarind, s. n. ಹುಳಿ, ಹುಣಿಸೇಹಂಣು, ಚಿಂಚೆ, ಆಮ್ಲಿಕೆ; (*a tamarind stone*) ಹುಣಿಸೇಪಿಚ್ಚೆ, ಹುಣಿಸೇಬೀಜ, ತಿಂತ್ರಿಣೀಬೀಜ; (*preserved tamarinds*) ಹುಣಿಸೆಯಡೆ, ಅಡೆಮಾಡಿದ ಹುಣಿಸೆಹಂಣು; (*the tamarind tree*) ಹುಣಿಸೇಗಿಡ, ತಿಂತ್ರಿಣೀ, ಆಮ್ಲಿಕೆ, ಚಿಂಚೆ.

Tambarine, s. n. ಡಂಮಡಿ, ಕಾಳಗವಲಸೆ, ಅತ್ತಪಕ, ತಬಟೆ. v. *Tabor.*

Tame, a. ಸಾದಿನ, ಸಾದಾದ. v. *Quiet, gentle, mild;* also *spiritless.* (*tame, domestick*) ಮಚ್ಚಿಕೆಯ,

ಪಕ್ಷವಿಯಾದ, ಪರುಪಳಿಯಾದ; *(a tame fowl)* ಊರಕೋಳಿ, ಸಾಕಿದ ಕೋಳಿ.

To Tame, v. n. ಸಾದುಮಾಡು, ಶಿದ್ದು, ಸಬರಕಟ್ಟು, ಸಾಧಕಮಾಡು. v. Also *to subdue, depress, conquer, crush.*

Tameable, a. ಸಾದಾಗುವ, ಶಿದ್ದುವ, ಸಾಧಕವಾಗುವ.

Tamely, ad. ಸಾದಾಗಿ, ಸಸುವಾಗಿ, ಸಾಧುವಾಗಿ.

Tameness, s. n. ಸಾಧುತ್ವ, ಸಾಧು, ಸಾದು, ಸಸುಪುತನ. v. *Mildness, gentleness, timidity.*

Tamer, s. n. ಸಾಕುವವ, ಸಾಧುಮಾಡುವವ, ಶಿದ್ದುವವ, ಮಚ್ಚಿಕೆಮಾಡಿಕೊಳ್ಳುವವ. v. Also *conqueror.*

Tamil, s. n. ಅರವ, ದ್ರವಿಡ, ತಿಗಳ.

To Tamper, v. a. *(practise with or solicit clandestinely)* ವಿಷಪರಿಕ್ಷೆಮಾಡು; *(to meddle officiously without propriety)* ಇಲ್ಲದ ಪಾರುಪತ್ಯಮಾಡು, ಅಧಿಕಪ್ರಸಂಗಮಾಡು, ದಾಷ್ಟೀಕತನಮಾಡು; *(to tamper with a disease)* ಅಶಾಸ್ತ್ರವೈದ್ಯಮಾಡು, ವಿಕಟಿವಾದಲ ಪುಷಧಮಾಡು.

To Tan, v. a. ಕಶಿಗಟ್ಟು, ತೊಗಲೂರಿಡು, ತೊಗಲುಹದಹಾಕು; *(to imbrown)* ಬಿಸಲು ತಟ್ಟಿಬಾಡಿಸು, ಕಂದಿಸು.

Tanpit, s. n. ತೊಗಲುಹಾಕುವ ಕುಣೆ, ತೊಗಲುಕುಣೆ.

Tang, s. n. ರುಚಿ, ಸ್ವಾದು.

Tangent, s. n. ಚಕ್ರಮಧ್ಯ ಋಜುಪಾರ್ಶ್ವರೇಖೆ, ತ್ರಾಶಿನಸ್ಪಾದಾಕಾರ.

Tangibility, s. n. ಮುಟ್ಟಿಕೂಡುವದು, ಹಿಡಿಯತಕ್ಕದು, ಸ್ಪರ್ಶಿಸಲ್ಪಡತಕ್ಕದ್ದು.

Tangible, a. ಮುಟ್ಟಿಕೂಡುವ, ಸ್ಪರ್ಶಿಸತಕ್ಕ, ಹಿಡಿಯಕೂಡುವ.

To Tangle, v. a. ಶಿಕ್ಕುಬೀಳಿಸು, ಶಿಕ್ಕುಮಾಡು, ತೊಡಕುಕಿಡಿಸು. v. *To entangle, entwine, embroil.*

Tangled, part. ಶಿಕ್ಕುಬಿದ್ದ, ತೊಡಕುಪಡದ್ದ, ಹಿಂಜಿದ.

Tank, s. n. ಬಾವಿ, ಕೂಪ, ಕೊಳ, ಕುಂಟೆ, ಪುಷ್ಕರಣಿ, ಕೊಕ್ಕರಣೆಯು. v. *Pond, cistern, bason, reservoir.* *(a large tank)* ಕೊಂಡ, ಕುಂಟೆ, ಕೊಟ್ಟೆ; *(a tank digger)* ಬಾವಿವಡ್ಡ, ಬಾವಿಅಗುವವ, ಕೂಪಕಾರಕ; *(the wall of a tank)* ಬಾವಿಕಲ್ಲುಕಟ್ಟಣೆ; *(to empty a tank)* ಬಾವಿಬರಿದುಮಾಡು, ನೀರುಹೊಡದುಬಿಡು; *(to empty a tank of its mud)* ಬಾವಿಹೊರದಾಕು, ಹೂಳುತೆಗೆಯು; *(the sluice of a tank)* ಕೆರೆತೂಬು, ಮೋರಿ.

Tankard, s. n. ಕವಳಿಗೆ, ಜೋಡು; *(a tankard with a spout)* ನಾಲಿಗೆಕವಳಿಗೆ, ಕೊಟಿಕವಳಿಗೆ.

Tanned, part. ಹದಮಹಾಕಿದ, ಕಶಿಹಾಕಿದ; *(tanned leather)* ಕಶಿಹಾಕಿದ ತೊಗಲು, ಹದಮಹಾಕಿದ ತೊಗಲು.

Tanner, s. n. ಹದಮಹಾಕುವವ, ತೊಗಲುಕಟ್ಟುವವ; *(a tanner's house, a tan house)* ಮುಚ್ಚಿಗರಮನೆ, ತೊಗಲುಕೆಲಸ ಮಾಡುವರಮನೆ.

To Tantalize, v. a. ಆಸೆತೋರಿಸು, ದಣಿಮಾಡು.

Tantalization, s. n. ಆಸೆತೋರಿಸುವದು, ದಣಿ.

Tantamount, s. n. ಬರಾಬರಿಯು, ಸಾಟಿ, ಸಮಾನವು, ಈಡಾದದ್ದು. v. *Equivalent.*

To Tap, v. a. *(touch lightly, strike gently)* ತಟ್ಟು. v. *To pat.* *(to tap, for the dropsy)* ಜಲರೋಗದ ಜಲತೆಗೆಯ, ಹೊಟ್ಟೆನೀರಿಳಿಕಿಸು; *(to tap a barrel)* ತಿರಗಣೆಯಿಡು, ಚೆಂಬುಗೋವಿಡು.

Tap, s. n. *(gentle blow)* ತಟ್ಟಿಕೆ; *(a pipe at which the liquor of a vessel is let out)* ಚೆಂಬುಗೋವಿ, ತಿರಗಣೆ.

Tape, s. n. ಲಾಡಿ. v. *Ribband, fillet.*

Taper, s. n. ಮೇಣದಬತ್ತಿ. v. *Candle.*

Taper, Tapering, a. ಜುಂಗಿನ, ಪತಾಕದ, ಧ್ವಜಾಕಾರದ, ಸೋನೆಯಾದ, ಗೋಪುರಾಕಾರದ.

To Taper, v. n. ಸೋನೆಯಾಗು, ಗರಿಕೇರು, ಜುಂಗಾಗು, ಅರಳೆಲೆಯಾಗು.

Tapestry, s. n. ಮುಷಾಜರ್, ಪುಟೆದಾರಿ, ಪುಟ್ಟೇದಾರಿ, ಸೂಸಿ.

Tar, s. n. ಕೀಲೆಂಣೆ, ರಾಳದಯಂಣೆ; *(seaman)* ಗಂಗೆಮಗ, ಅಂಬಿಗ, ಹಡಗದವ.

To Tar, v. a. ಕೀಲುಯಂಣೆಹಾಕು, ರಾಳಪೂಸು.

Tarred, part. ರಾಳಹಾಕಿದ, ಕೀಲುಪೂಸಿದ.

Tardily, ad. ಮಂದವಾಗಿ, ಜಾಡ್ಯವಾಗಿ, ನಿಧಾನವಾಗಿ, ಸುಸ್ತಿಯಾಗಿ. v. *Sluggishly, slowly.*

Tardiness, s. n. ಮಂದತನ, ಜಾಡ್ಯತನ, ಸುಸ್ತಿತನ, ಸೋಮಾರಿತನ, ಆಲಸ್ಯತನ, ಸ್ತಬ್ಧತ್ವ, ವಿಲಂಬವು. v. *Sluggishness, slowness, delay.*

Tardy, a. ನಿಧಾನದ, ಮಂದವಾದ, ಸೋಮಾರಿಯಾದ, ಸುಸ್ತಿಯ, ಜಾಡ್ಯದ. v. *Slow, sluggish, dilatory.* *(a tardy man)* ಆಲಸ್ಯಗಾರನು, ಸೋಂಬನು, ಆಂಬನು, ಸೋಮಾರಿ.

Tare, s. n. *(a corn weed)* ಕಳೆ.

Targe, Target, s. n. ಡಾಲು, ಗುರಿಪತ್ರ, ಮೊಖಹಾಳೆ. v. *Shield, buckler.*

Tariff, s. n. *(commercial regulation)* ತಾಕೀದು, ಕಟ್ಳೆ, ಅಪ್ಪಣೆ; *(to establish a tariff)* ತಾಕೀದುನೇಮಿಸು, ಕಟ್ಳೆಮಾಡು.

To Tarnish, v. a. ಮಾಸಿಸು, ಕಾಂತಿಕೆಡಿಸು. v. *To soil, sully.* *(to lose brightness)* ಕಾಂತಿಹಾರು, ಕಳೆಕುಂದು, ಮಾಸಿಹೋಗು.

Tarnished, part. ಮಸಿಕಿದ, ಮಯಿಲಿಗೆಯಾದ.

Tarpawling, Tarpauling, s. n. ಕೀಲುಚಾಪೆ, ತಟ್ಟು.

To Tarry, v. n. *(wait, stay)* ನಿಲ್ಲು, ನಿಂದಿರು; *(to be long in coming)* ಆಲಸ್ಯಮಾಡು. v. *To delay.* *(to wait for)* ನಿರೀಕ್ಷಿಸಿಕೊಂಡಿರು, ಕಾದುಕೊಂಡಿರು.

Tart, a. ಹುಳಿಯ, ಆಮ್ಲದ, ಗೊಡ್ಡುಳಿಯ, ಕಡ್ಡುಳಿಯ. v. *Acid, sour.* *(sharp, severe)* ಕಠಿನ, ನಿಷ್ಠೂರ.

Tartar, s. n. *(of wine)* ಪಾಚು, ಮಷ್ಟು, ಗಾರೆ.

Tartarick, a. ಪಾಚಿನ, ಗಾರೆಯ.

Tartarean, a. ನರಕದ. v. *Hellish, infernal.*

Tartary, s. n. ಟಾಟರಿದೇಶ, ತುರಾಂದೇಶ.

Tartly, ad. *(surlily)* ಕಠಿಣವಾಗಿ, ನಿಷ್ಠೂರವಾಗಿ; *(acrimoniously)* ಉಗ್ರವಾಗಿ, ತಿಕ್ತವಾಗಿ; *(with sourness of countenance)* ಸಿಟ್ಟುಮೋರೆಯಾಗಿ, ಚುಟುಗುಮೋರೆಯಾಗಿ.

Tartness, s. n. ಆಮ್ಲತ್ವ, ಹುಳಿಯು. v. *Sourness.* *(sourness of temper)* ಸಿಟ್ಟುಗುಣ.

Task, s. n. ಕೆಲಸ, ಕಷ್ಟ. v. *Labour, employment,*

business. (*a daily task*) ದಿನಕೆಲಸ, ಪರಕ; (*a task or lesson*) ಪಾಠ, ಪದ್ಯ; Have the boys learnt their *tasks* perfectly ಹುಡಗರು ತಮಪಾಠಗಳ ಚಂನಾಗಿಕಲಿತಿದ್ದಾರೋ.

To Task, v. a. ಮೊಕರರುಮಾಡ, ಕೆಲಸನೇಮಿಸ; (*to take to task*) ಗದರಿಸ, ಬುದ್ಧಿಹೇಳ. v. *To chide, reprove; rail.*

Taskmaster, s. n. ಕೆಲಸಕ್ಕಿರಿಸಿಕೊಂಬುವ, ಮೊಸಲುದಾರ.

To Taste, v. a. (*to distinguish by the palate, to eat a little*) ರುಚಿನೋಡ, ಸ್ವಾದುನೋಡ, ಸವಿನೋಡ, ಸ್ವಾದಿಸ; (*to taste repeatedly*) ಪದೆಪದೆರುಚಿನೋಡ, ಕ್ಷಣಕ್ಷಣಕೆರುಚಿನೋಡ; (*to have the taste, relish or smack of*) ರುಚಿಕೊಡ, ಸವಿಕೊಡ, ಸ್ವಾದುಕೊಡ; (*to taste, enjoy intellectually*) ಮನೋಹರವಾಗ, ಮಾಧುರ್ಯವಾಗ; (*to taste, feel or have the perception of*) ಸವಿತಿಳಿಯು, ಸವಿಕಾಣು. v. *To feel, try, perceive.* Does it *taste* well? ಅದುವಲ್ಲೇರುಚಿಯಾಗಿದೆಯೋ, ಅದುವಲ್ಲೇಸವಿಕಾಣಿಸುತ್ತಿದೆಯೋ.

Taste, s. n. (*the act of tasting*) ರುಚಿನೋಡುವದು, ಸವಿನೋಡುವದು, ಸ್ವಾದುನೋಡುವದು; (*flavour*) ರುಚಿ, ಸ್ವಾದು; ಸವಿ. v. *Relish.* (*the sense of tasting*) ಜಿಹ್ವೇಂದ್ರಿಯ; (*intellectual perception*) ಸೂಕ್ಷ್ಮಬುದ್ಧಿ, ಕುಶಲತನ; (*a taste, as a specimen*) ಪರೀಕ್ಷೆ, ರುಚಿ. v. Also *essay, trial, experiment.* Hindoo writers mention six kinds of taste; as, *Sweet* ಮಧುರ, ಸಿಹ್ಯು, ಸೀ, ಸವಿ; *Sour* ಆಮ್ಲ, ಹುಳಿ; *Salt* ಲವಣ, ಉಪ್ಪು; *Bitter* ತಿಕ್ತ, ಕಹಿ, ಖಯ್ಯ, ಕೈ; *Acrid or pungent* ಕಾರ, ಕಟು, ಖಾರ; *Astringent* ಕಷಾಯ, ಒಗರು, ತುವರ; (*having an exquisite taste or palate*) ಬಾಯಿಸವಿಯರಿತ, ತಿನ್ನಗರಿತ; (*to give one a taste of any thing*) ಸವಿನೋಡಕೊಡ; *Taste* thou ನೀನುರುಚಿನೋಡು; It *tastes* of copper ಅದುಕಿಲುಬಿಯದೆ, ಅದುಕಿಲುಬಾಗಿಯದೆ; It is out of *taste* ಅದುರುಚಿತಪ್ಪಿಯದೆ, ಅದುಸವಿಹೋಗಿಯದೆ; It has no *taste* ಅದುರುಚಿಯುಲ್ಲ, ಅದರಲ್ಲಿಸವಿಯುಲ್ಲ; It has a pleasant *taste* ಅದುವಲ್ಲೇರುಚಿಕೊಡುತ್ತದೆ, ಅದುಬಹುಸವಿಯಾಗದೆ, ಅದುಬಹಳಸ್ವಾದಾಗದೆ; It has a sour *taste* ಅದುಹುಳ್ಳಗದೆ, ಅದುಹುಳಿಯಾಗದೆ; It *tastes* very sweet ಅದುಬಹುಸಿಯ್ಯಾಗದೆ, ಅದುಬಹುಸೀಕಾಣಿಸುತ್ತದೆ.

Tasted, a. ರುಚಿನೋಡಿದ, ಸವಿನೋಡಿದ; (*having any peculiar taste*) ರುಚಿಯುಳ್ಳ.

Taster, s. n. ರುಚಿನೋಡುವವನು, ಸವಿನೋಡುವವನು.

Tasteful, a. (*savoury*) ಸ್ವಾದು, ಇಂಪಾದ, ಸವಿಯುಳ್ಳ, ಸೊದುಳ್ಳ, ಇನಿದ, ಇನಿಯ. v. *Delicious.*

Tasteless, a. (*having no relish*) ರುಚಿಯಿಲ್ಲದ, ಸವಿಯಿಲ್ಲದ. v. *Insipid.* (*having no power of perceiving taste*) ಅರೋಚಿಕೆಯ; (*without intellectual relish*) ಗಂಧಗಂಧವರಿಯದ, ಸ್ವಾರಸ್ಯತಿಳಿಯದ; (*tasteless water*) ಸಪ್ಪದನೀರು.

Tastelessness, s. n. (*insipidity*) ಅರುಚಿಯು,

(*want of intellectual relish*) ರುಚಿಯರಿಯದಿರುವಿಕೆ, ಸ್ವಾರಸ್ಯತಿಳಿಯದಿರುವಿಕೆ, ಮಂದಮತಿ; (*want of power of perceiving taste*) ಜಿಹ್ವೇಂದ್ರಿಯಮರ್ದನ.

Tatter, s. n. ಹರಕು, ಛಿನ್ನ, ಛಿದ್ರ, ಪೆಂತ್ರೆ, ನಿರ್ವ್ಯಥನ, ಒಡಕು, ರಂಧ್ರ, ಸ್ವಕ್ತ್ರ, ವಶಿಷ್ಟ, ಸುಷಿ, ತೂತು. v. *Rag.*

To Tatter, v. a. ಚೂರುಚೂರುಮಾಡು, ಹರಿಯು, ಛಿನ್ನಾಛಿದ್ರಮಾಡು, ಪೆಂತ್ರೆ ಮಾಡು. v. *To rend, tear.* (*in tatters*) ಹರಕಾಗಿ, ಚೂರುಚೂರಾಗಿ.

Tattered, part. ಹರಿದ, ಚೂರುಚೂರಾದ; (*a tattered garment*) ಹರಿದಬಟ್ಟೆ, ಪೆಂತ್ರೆಬಟ್ಟೆ.

Tatterdemalion, s. n. ಕೊಂಚಟಿಯದ.

Tattle, s. n. ಹರಟೆ, ಪದರಾಟೆ, ವಟಿಸಟ್ಟಿಕೆ, ಚೊಲ್ಲಹಾಕು, ಜೊಲ್ಲುಹರಟೆ.

To Tattle, v. n. ಹರಟೆಮಾಡ, ಚೊಲ್ಲುಹಾಕ. v. *To prate.*

Tattler, s. n. ಹರಟೆಯವ, ವಟಿಸಟುವವ, ಬಾಲಾಖೂನಿ. v. *Prater.* (*idle tattlers and slanderers*) ಕಳ್ಳಿಖೋರರು, ಮನೆಮುರಕರು, ಹಂಟ್ಲಿಗಾರರು.

Tavern, s. n. ಸಾರಾಯದಂಗಡಿ, ಹೆಂಡದಂಗಡಿ, ಗಂಜಾಗೃಹ, ಮದಿರಾಗೃಹ; (*a haunter of taverns*) ಹೆಂಡಬಾಕ; (*a drunken company in a tavern*) ಹೆಂಡಗಾರರಸಂಘ; (*a tavern keeper*) ಹೆಂಡದಂಗಡಿಯವ, ಸಾರಾಯದಂಗಡಿಯವ. v. *Host.*

Taught, (part. of *teach*) ಕಲಿಸಿದ, ಕಲಿಸಲ್ಪಟ್ಟಿಯಾದ; (*to be taught*) ಕಲಿಯಲ್ಪಡ, ಉಪದೇಶಿಸಲ್ಪಡ.

To Taunt, v. a. ಪರಿಹಾಸ್ಯಮಾಡ, ಕುವ್ವಾಡಮಾಡ, ಕುಂಗಿಸು. v. *To ridicule, deride, gibe, revile, reproach, insult.*

Taunt, s. n. ಪರಿಹಾಸ್ಯ, ಕುವ್ವಾಡ, ನಿಂದನೆ, ಪಿಂಕುಳಿ. v. *Ridicule, reproach, insult.*

Taunter, s. n. ಪರಿಹಾಸ್ಯಗಾರ, ನಿಂದಿಸುವವ, ಕುಂದಿಸುವವ.

Tauntingly, ad. ಪರಿಹಾಸ್ಯವಾಗಿ, ನಿಂದನೆಯಾಗಿ, ಕುವ್ವಾಡವಾಗಿ, ನಿಷ್ಠುರವಾಗಿ, ಪಿಂಕುಳಿಯಾಗಿ.

Tautological, a. ಆಮ್ರೇಡಿತ, ಆಡಿದ್ದಾಡುವ, ಅಂದದನುವ.

Tautologist, s. n. ಆಡಿದ್ದಾಡುವವ, ಪುನರುಕ್ತಿಕ.

Tautology, s. n. ಆಮ್ರೇಡಿತವು, ಆಡಿದ್ದಾಡಿಕೆ, ಅನುಲಾಪ, ಪುನರುಕ್ತಿದೋಷ.

To Taw, v. a. (*dress white leather*) ಬಿಳಿ ತೊಗಲುಮಾಡ.

Tawdriness, s. n. ಅಂದವಿಕಾರ, ಅಂದಕೇಡಿತನ, ಶೃಂಗಾರಕೇಡಿತನ.

Tawdry, a. ಅಂದವಿಕಾರದ, ಶೃಂಗಾರಕೇಡಿಯ, ವಿಕಾರದ, ರುಚ್ಛುಚ್ಚಾದ.

Tawny, a. ಮಂಗನಕೆಂಪಿನ, ಜೇನುಬಣ್ಣದ, ಕಂದುಬಣ್ಣದ, ಕಡಾರ, ಕಪಿಶ, ಪಿಂಗ, ಪಿಶಂಗ, ಪಿಂಗಳ.

Tax, s. n. ಪಟ್ಟಿಗೆ, ಕೆರಿಗೆ, ದಸ್ತೂರಿ, ಸುಂಕ, ಪಟಿಕೆ, ವರ್ತನೆ. v. *Toll, tribute, custom;* also *charge, censure.* (*taxes*) ಇರಸಾಲು, ಕಟ್ಟುವಳಿ, ಸುವರ್ಣದಾಯ. v. *Revenue.* (*to collect*

taxes) ಹೊಸವಸೂಲುಮಾಡ; (a capitation or poll tax) ತಲೆದೆರಿಗೆ, ತಲೆಪತ್ತಿಗೆ; (a tax upon lands) ಹೊಲತೆರಿಗೆ, ಜಿರಾಯತಿಬಾಬು; (a tax upon effects) ಚಿಲ್ಲರತಿರಿಗೆ, ಚಿಲ್ಲರಪತ್ತಿಗೆ, ಮೊಹತರಪಿ, ಮೊತರಫಾ; (a tax levied on spirituous liquors) ಆಬುಕಾರಿ; (a tax-gatherer) ಸುಂಕದವ, ತಹಶೀಲುದಾರ, ಆಮೀಲುದಾರ, ಶ್ಯಾನಭೋಗ, ಪೋತ್ತಾರ; (any office or place where taxes are received) ಸುಂಕಬಾವಡಿ, ಚಪ್ಪೈಬಾವಡಿ.

To Tax, v. a. ಪತ್ತಿಗೆತೆಗೆದುಕೊಳ್ಳ, ತೆರಿಗೆತೆಗೆದುಕೊಳ್ಳ; (to charge, censure, accuse) ಹೊರಿಸ, ಹಾಕ.

Taxable, a. ಪತ್ತಿಗೆಯ, ಪತ್ತಿಗೆತೆಗೆದುಕೊಳ್ಳತಕ್ಕ.

Taxation, s. n. (act of imposing taxes) ಕಟ್ಟಿಪತ್ತಿಗೆ, ಪತ್ತಿಗೆನಿರ್ಣಯಿಸುವದು.

Taxed, part. ಪತ್ತಿಗೆನಿರ್ಣಯವಾದ, ತೆರಿಗೆನಿರ್ಣಯವಾದ.

Taxer, s. n. ಸುಂಕದವ, ಪತ್ತಿಗೆನಿರ್ಣಯಿಸುವವ, ಜಮಾಬಂದಿಕಟ್ಟುವವ, ಕೊಖ್ಖಿಕಟ್ಟುವವ.

Tea, s. n. ಚಾಖ, ಚಾಯಲೆ, ಚೀನಾಯಲೆ; (a tea pot) ಚಾಖನೀರಿನಪಾತ್ರೆ, ಕಷಾಯಪಾತ್ರೆ.

To Teach, v. a. ಕಲಿಸ, ಉಪದೇಶಿಸ, ಬೋಧಿಸ, ತರಬೇತಿಮಾಡ, ಶಿಕ್ಷಿಸ. v. *To instruct, inform, tell.* (to teach and learn) ಕಲಿಸ, ಕಲಿತುಕೊಳ್ಳ; (to teach and demonstrate) ಕಲಿಸತೋರಿಸಿಕೊಡ; (to teach to read) ಓದಕಲಿಸ, ಓದಿಸ; (to teach good manners) ಬುದ್ಧಿಕಲಿಸ, ಮರ್ಯಾದೆತಿಳಿಸ.

Teachable, a. ಕಲಿಯತಕ್ಕ, ತರಬೇತಿಯಾಗತಕ್ಕ. v. *Docile.*

Teachableness, s. n. ಗ್ರಾಹಿಕತ್ವ, ಸ್ವಛಂದತ್ವ, ಸಾಧ್ಯಗುಣ. v. *Docility.*

Teacher, s. n. ಗುರುವು, ಓದಿಸುವವ, ಬೋಧಕ, ಅಯ್ಯ, ಉಪಾಧ್ಯಾಯ, ಬುದ್ಧಿಹೇಳುವವ, ಉಪದೇಶಿಕ, ಉಪಾಧ್ಯ. v. *Preceptor, lecturer.*

Teak, s. n. ತೇಗ, ಪಾದಗ.

Team, s. n. (of two horses, oxen, &c.) ಜೋಡು.

Tear, Tears, s. n. ಕಣ್ಣೀರು, ಶೋಕಜಲ, ಶ್ರಮಬಿಂದುವು; (a tear just starting) ಕಣ್ಣೀರುಗಮ್ಮಿಕೆ; (a torrent of tears) ಕಣ್ಣೀರುಧಾರೆ; (tears of blood) ರಕ್ತಾಶ್ರುಧಾರೆ; (to shed tears) ಕಣ್ಣೀರುಚೆಲ್ಲ, ಕಣ್ಣೀರುಸುರಿಸ. v. *To weep, cry.* (apt to shed tears) ನೀರುಗಣ್ಣಿನ, ಅಳುಗಣ್ಣಿನ; (eyes flowing with tears) ನೀರುಸುರಿಯುವಕಣ್ಣು.

Tear, s. n. (rent, fissure) ಶೀಳಿಕೆ, ಹರಿಕೆ.

To Tear, v. a. ಹರಿಯ; (to wound with the nails, &c.) ಉಗುರಿಂದಶೀರ, ಉಗುರಿಂದಗೀರ, ನಖಘಾತಮಾಡ, ಬಗಿಯ. v. *To scratch,* and under *nail.* (to split or make an oblong fissure) ಶೀಳುಮಾಡ; (to tear a garment) ವಸ್ತ್ರಹರಿಯ; (to tear the veil of chastity) ಕೊಳ್ಳಿಕೆಡಿಯ, ಹೊಂಕ್ಕಿಪೊಡೆಯ; (to tear, or be torn) ಹರಿಯ, ಹರಿದುಹೋಗ; (to tear in pieces) ತುಂಡುತುಂಡಾಗಿಹರಿಯ, ಚೇಳಿಕೆಚೇಳಿಕಾಗಿಹರಿಯ.

Tearer, s. n. ಹರಿಯುವವ, ಶೀಳುಮಾಡುವವ.

Tearful, a. ಕಂಣೀರಿನ, ನೀರುಕಂಣಿನ. v. *Weeping.*

To Tease, v. a. *(fret, vex)* ಪೀಡಿಸು, ವೇಧಿಸು, ಶ್ರಮೆಪಡಿಸು, ಕಕ್ಕಲಾತಿಮಾಡು, ಬೇಸರಕೊಡು. v. *To plague, importune, torment. (to tease cotton, &c.)* ಪಿಂಜು.

Teased, part. *(vexed)* ಪೀಡಿಸಿದ, ವೇಧಿಸಿದ, ಕಕ್ಕಲಾತಿಮಾಡಪಟ್ಟ.

Teaser, s. n. *(tormentor)* ಪೀಡಿಸುವವ, ವೇಧಿಸುವವ, ಬೇಸರುಕೊಡುವವ, ಕಕ್ಕಲಾತಿಮಾಡುವವ, ಪೆರರಕಾಡುವವ, ಅವಸಿಗ, ಅವಸರದವ, ಪೆರರಕಾಡುವಾತ; *(of cotton)* ಪಿಂಜಾರ.

Teat, s. n. ಕೆಚ್ಚಲು. v. *Breast, nipple, pap, dug, udder. (to suck the teat)* ಮೊಲೆತಿನ್ನು; *(cracks in the teats)* ಮೊಲೆಬೀರತೆ; *(sore teats)* ಘಾಯಿಹೊಯಿದ ಕೆಚ್ಚಲು, ಹುಣ್ಣುಮೊಲೆ, ದೃಷ್ಟಿಮೊಲೆ.

Technical, a. ಸ್ವಜಾತಿಯ, ಪಾರಿಭಾಷಿಕ.

Tedious, a. *(slow, long, drawling)* ಮಂದವಾದ, ಆಲಸ್ಯದ, ನಿಧಾನದ. v. *Tardy, prolix. (irksome, wearisome)* ಬೇಸರದ.

Tediously, ad. *(slowly)* ಮಂದವಾಗಿ, ನಿಧಾನವಾಗಿ, ಆಲಸ್ಯವಾಗಿ.

Tediousness, s. n. *(prolixity)* ಬಸರಾಗುವದು, ಗರ್ಭಿಣಿಯಾಗುವದು, ಈಲಾಗುವದು; *(slowness)* ಆಲಸ್ಯವು, ನಿಧಾನವು, ಸುಸ್ತಿಯು, ಜಂತ್ರವು; *(wearisomeness, the causing of disgust)* ಬೇಸರವು, ಬೆರತ್ರಯವು.

To Teem, v. n. *(to be pregnant)* ಗರ್ಭನಿಂದಿರು, ಹೊಟ್ಟೆಕಟ್ಟು, ಬಸರಾಗು; *(to bring forth)* ಈನು, ಹೆರು, ಹುಟ್ಟಿಸು. v. *To breed, bring forth, produce;* also *to abound.*

Teemer, s. n. ತಳೆಯುವದ, ತಳೆಯ. v. *Breeder.*

Teeth, s. n. ಹಲ್ಲುಗಳು, ದಂತ್ರಗಳು; *(the back teeth)* ಕೋರೆಹಲ್ಲು, ದವಡೆಹಲ್ಲು. v. *Grinder. (sharp teeth)* ಹದನಾದಹಲ್ಲು, ಪಡಿಯಾದ ಹಲ್ಲು, ಮಸೆಹಲ್ಲು; *(foul teeth)* ಉಡ್ಡದಹಲ್ಲು, ತಿಕ್ಕದಹಲ್ಲು, ಹಳಸ ಹಲ್ಲು, ಪಾಚೆಹಲ್ಲು; *(clean teeth)* ಸುಲಿಪಲ್ಲು, ತೊಳೆದಹಲ್ಲು; *(loose teeth)* ಸಂಡುಹಲ್ಲು, ಅಲ್ಲಾಡುವಹಲ್ಲು, ಜಾರೆತಪ್ಪಿದಹಲ್ಲು; *(rotten, decayed teeth)* ಹುಳುಕ ಹಲ್ಲು, ಉಬ್ಬಿಹಲ್ಲು; *(nitre on the teeth)* ಹಲ್ಲುಗಾರೆ, ಹಲ್ಲುಜಗಿ.

To Teeth, v. n. ಹಲ್ಲುಬರು, ಬಾಯಿಕೂಡು.

Tegument, s. n. ಶಿಪ್ಪೆ, ಹೊಟ್ಟು, ಮುಚ್ಚಳ. v. *Cover, shell, husk.*

To Teh-he, v. n. ಹಲ್ಲುಕಿಸಿಯು, ನಗು.

Teint, s. n. ವರ್ಣ, ಬಂಣ. v. *Colour.*

Telescope, s. n. ದೂರಬಿಂಬಿ.

To Tell, v. n. *(utter)* ಹೇಳು, ತಿಳಿಸು, ಅರಿಕೆಮಾಡು. v. *To speak, relate, inform. (to number, count)* ಎಂಣಿಸು, ಕೂಡಿಸು; *(to tell or tell of, discover, betray)* ಪದಕೆಬಾಯಿಮಾಡು, ಚುಚ್ಚಿಹೇಳು. v. *To blab.*

Teller, s. n. ಹೇಳುವವ, ತಿಳಿಸುವವ, ಅರಿಕೆಮಾಡುವವ. v. *Speaker, relater. (a story teller, liar)* ಅಬದ್ಧಿಕ, ಹುಸಿಯುವ, ಸುಳ್ಳವ; *(narrator)* ವೃತ್ತಾಂತಿಕ, ಕಥಿಕ, ಇತಿಹಾಸಕ.

Telltale, s. n. ವದಕಬಾಯವ. v. *Blab.*

Temerity, s. n. ಮೋಡಾಮೋಡಿ, ಧುಡಂಪ್ರವೇಶ, ಅಲೋಚನ ಹೀನತೆ. v. *Rashness, imprudence, precipitancy.*

To Temper, v. a. (*mingle*) ಕಲಬರಿಕೆಮಾಡ, ಕಲಿಸ. v. *To mix, compound.* (*to moderate*) ಹವಣುಮಾಡ, ಬರಾಬರಿಮಾಡ, ಹಾಳ್ತೆಮಾಡ; (*to soften, mollify*) ಶಾಂತಿಪಡಿಸ; (*to temper, harden*) ಕಠಿನಮಾಡ, ಘಟ್ಟಿಮಾಡ, ಖಡಾಖೋಡುಮಾಡ.

Temper, s. n. (*of mind, disposition, constitution*) ಭಾವ, ಗುಣ; (*to bring the constitution to a proper temper*) ದೇಹದ ಮಾರ್ಗ ಆರೋಗ್ಯಮಾಡ; (*an equable temper*) ಸಮಚಿತ್ತ, ಏಕಚಿತ್ತ; (*an excellent temper*) ಸುಸ್ವಭಾವ, ಅಮಸರಗೇಡಿಗುಣ, ಸರಸಗುಣ, ಸೌಮ್ಯಗುಣ; (*of an excellent temper, good tempered*) ಸುಸ್ವಭಾವದ, ಅಮಸರಗಾಢಗುಣದ, ಸೌಮ್ಯಗುಣದ; (*a bad temper*) ಪರಟಿಕೆನ, ವಕ್ಕರತನ, ಮೂರುಗುಣ, ಎಡಗೊಟ್ಟಿಗುಣ, ದುಸ್ವಭಾವ; (*of a bad temper, ill tempered*) ದುಸ್ವಭಾವದ, ಪಕ್ಕರತನದ, ಎಡಗೊಟ್ಟಿಗುಣದ; (*temper, calmness*) ಶಾಂತಿ, ಕ್ಷಮೆ, ನಿಧಾನ; (*moderation*) ಮಿತಿ, ಪಟ್ಟು; (*to lose temper*) ಶಿಟ್ಟಾಗ, ಕೋಪವಾಗ.

Temperament, s. n. ಭಾವವು, ಸ್ವಭಾವವು, ಗುಣ, ಗುಣಪಾಕ, ನೈಜ. v. *Temper, constitution, mixture.*

Temperamental, a. ಭಾವದ, ಸ್ವಭಾವದ, ಗುಣದ. v. *Constitutional.*

Temperance, Temperateness, s. n. (*in eating, drinking, &c.*) ಮಿತಿ, ಪಟ್ಟು. v. *Abstinence.*

Temperate, a. (*moderate, salutary, not excessive*) ಪಟ್ಟಿನ, ಮಿತಿಯ, ಹಾಳ್ತೆ, ತಕ್ಕಷ್ಟು, ಸಾಧಾರಣದ; (*not passionate, calm*) ಶಾಂತದ, ಕ್ಷಮೆಯ, ನಿಧಾನದ; (*abstemious*) ಮಿತಿಯ, ಪಟ್ಟಿನ; (*temperate weather*) ಸಾಧಾರಣಕಾಲ, ಸಮಕಾಲ, ಸೌಮ್ಯಕಾಲ.

Temperately, ad. (*moderately*) ಸಾಧಾರಣವಾಗಿ; (*abstemiously*) ಮಿತಿಯಾಗಿ, ಪಟ್ಟಾಗಿ; (*without violence of passion*) ಶಾಂತವಾಗಿ, ಕ್ಷಮೆಯಾಗಿ, ನಿಧಾನವಾಗಿ.

Temperature, s. n. ಸ್ವಭಾವಿಕೆ, ಗುಣ; (*temperature of weather*) ಉಷ್ಣ, ಪ್ರಮಾಣವು, ಕಾಲಸ್ವಭಾವ, ಕಾಲಪ್ರಕೃತಿ.

Tempered, a. ಕಲಸಿದ, ಕಲಬೆರಿಕೆಯಾದ. v. *Mixed.* (*good tempered*) ಸುಸ್ವಭಾವದ, ಅಮಸರಗುಣದ, ಸೌಮ್ಯಗುಣದ; (*ill tempered*) ದುಸ್ವಭಾವದ, ವಕ್ಕರಗುಣದ, ಎಡಗೊಟ್ಟಿಗುಣದ.

Tempest, s. n. ದಿವ್ವಘೂಳಿ, ಬಿರಿಘೂಳಿ, ಪ್ರಚಂಡಗಾಳಿ, ಜಂಝಾಮಾರುತ, ವಾತ್ಯೆ. v. *Storm, hurricane, whirlwind*; also *tumult, commotion.*

Tempestuous, a. ಬಿರಿಘೂಳಿಯ, ದಿವ್ವಘೂಳಿಯ, ಪ್ರಚಂಡವಾಯುವಿನ, ಜಂಝಾಮಾರುತದ. v. *Stormy, turbulent, tumultuous.*

Temple, s. n. (*place of worship*) ಗುಡಿ, ದೇವಾಲಯ, ದೇವಸ್ಥಾನ, ದೇಗುಲ, ದೈವರಮನೆ; (*a christian temple*) ಕ್ರಿಸ್ತಗುಡಿ, ಕ್ರೈಸ್ತರದೇ

ವಾಲಯವು; (*a mahomedan temple*) ಮಸೀದಿ, ದರ್ಗಾ; (*an idol's temple*) ಪ್ರತಿಷ್ಠೆಯ ಗುಡಿ, ಪ್ರತಿಷ್ಠಾಲಯವು; (*the temple of Mecca*) ಮಕ್ಕಾಮಸೀದ, ಮಹಮ್ಮದಿನ ಗೋರಿ.

Temple, s. n. (*side of the forehead*) ಮಲುಕು, ಕಣತೆ.

Temporal, Temporary, a. (*measured by time, not eternal*) ಅನಿತ್ಯದ; (*temporal goods*) ಬದುಕು ಬಾಳು, ದೇಹೋಪಕರಣಗಳು, ಶರೀರ ಉಪಯೋಗ, ಉಪಜೀವನವು; (*temporal affairs*) ಲೌಕಿಕದ ಕಾರ್ಯ, ಪ್ರಪಂಚದ ಕಾರ್ಯ; (*temporal, belonging to the temples of the head*) ಮಲುಕಿನ, ಕಣತಿನ; (*the two temporal veins*) ಕಣತೆಯ ನರಗಳು.

To Temporize, v. a. (*accommodate one's self to the times*) ಕಾಲಾನುಸಾರ ನಡಿಯು. v. Also *to delay, procrastinate*.

Temporizer, s. n. ಕಾಲಾನುಸಾರ ನಡಿಯುವವ.

To Tempt, v. a. ಆಶೆಗೊಳಿಸು, ಪ್ರಮೋಹಿಸು, ಆಶೆಯಿಡು, ಬಲೆಕೆಡವು, ಸಂಚಿಸು, ಶೋಧಿಸು, ಬುಜ್ಜಗಿಸು. v. *To seduce, entice, allure.*

Tempter, s. n. ಸಂಚಿಸುವವ, ಆಶೆಗೊಳಿಸುವವ, ತಂತ್ರಗಾರ. v. *Seducer.* (*the tempter*) ಸೈತಾನು, ಪಿಶಾಚಿ. v. *Devil, satan.*

Tempted, part. ಸಂಚಿಸಿದ, ಬುಜ್ಜಗಿಸಿದ.

Temptation, s. n. ವಂಚನೆ, ಪ್ರಮೋಹ, ದ್ರೋಹ, ಘಾತಕತನ, ದ್ರೋಹಚಿಂತನೆ; (*the temptations of the devil*) ಪಿಶಾಚ ತಂತ್ರಗಳು, ಪಿಶಾಚ ಶೋಧನೆಗಳು.

Tempting, a. (*alluring*) ಮೋಹನದ, ಮಚ್ಚಿನ, ಮರುಳಿನ, ಆಕರ್ಷಣದ, ವಶೀಕರಣದ, ಪ್ರಮೋಹಿಸುವ, ವಿಮೋಹಿಸುವ.

Ten, a. ಹತ್ತು, ದಶ; (*one of ten*) ಹತ್ತರಲ್ಲಿ ಒಂದು; (*ten thousand*) ಹತ್ತುಸಾವಿರ, ದಶಸಹಸ್ರ; (*the ten commandments*) ಹತ್ತುಕಲ್ಪನೆ; (*to divide or distinguish by tens*) ಸವಹಾಕು, ಹತ್ತಕ್ಕೆಗೊಟೆಹಾಕು.

Tenable, a. ಅಸಾಧ್ಯವಾದ, ದುರ್ಘಟದ; (*a tenable fort*) ಅಸಾಧ್ಯವಾದ ಕೋಟೆ, ಜಯಿಸಬಾರದ ಕಿಲ್ಲೆ.

Tenacious, a. (*grasping, holding fast, retentive*) ಹಿಡಿಯುವ, ಬಿಗಿಹಿಡಿಯುವ, ಕಟ್ಟಿಕೊಳ್ಳುವ; (*covetous, sparing*) ಪಿಸುಣದ, ಸ್ವಾರ್ಥಿಯ, ಲುಬ್ಧದ, ಕೃಪಣದ. v. *Parsimonious, avaricious.* (*cohesive*) ಜಿಬ್ಬಿನ, ಅಂಟಿನ, ಜಿಪುರಿನ, ಬಂಕಟೆಯಾದ.

Tenant, s. n. (*of a house*) ಬಾಡಿಗೆಕೊಡುವವ; (*of land*) ರೈತ, ಆಸಾಮಿ, ಒಕ್ಕಲು.

Tenancy, s. n. ರೈತಾಕಿ, ಒಕ್ಕಲತನ.

To Tenant, v. a. ಗುತ್ತಿಗೆಕೊಡು, ಕೆರಿಗೆಕೆರ, ಒಕ್ಕಲಾಗು.

Tenantable, a. ಗುತ್ತಿಗೆಕೊಡ ತಕ್ಕ, ಬಾಡಿಗೆಕೊಡತಕ್ಕ, ಕೆರಿಗೆಕೆರ ತಕ್ಕ.

Tenantless, a. ರೈತಾಕಿಲ್ಲದ, ಒಕ್ಕಲಿರದ, ಹಾಳಾದ.

To Tend, v. n. (*to incline toward a certain point or place*) ನಿರೀಕ್ಷಣೆಮಾಡು, ಅಭಿಮುಖವಾಗಿಬಗ್ಗು, ಬಾಗಿರು, ಮೂಲಕ್ಕೆ ಪಾಕಷಣವಾಗು; (*to tend upwards*) ಮೇಲಕ್ಕೆಹೋಗು;

(to contribute towards) ಅನುಕೂಲವಾಗ, ಸಹಾಯವಾಗ. v. *To assist.* (*to tend the sick, &c.*) ಆರೈಕೆಮಾಡ, ಪರಾಮರಿಸ; (*to tend sheep*) ಹರಿಕಾಯ.

Tendance, s. n. ಹರಿಕಾಯುವಿಕೆ, ಪರಾಮರಿಸುವಿಕೆ. v. *Attendance, care.*

Tendency, s. n. (*course or inclination toward any place or object*) ಅಭಿಮುಖವಾಗಿ ವಾಲುವಿಕೆ, ಬಾಗುವಿಕೆ, ಅನುಸರಿಕೆ, ಅನುಗಮನ; (*drift*) ಅರ್ಥ, ಮುಖ್ಯಾರ್ಥ, ಸ್ಪಷ್ಟಾರ್ಥ; (*medicine of an universal tendency*) ಏಕಮೂಲಿಕಾಪ್ರಯೋಗ, ಸಕಲರೋಗಕ್ಕೆ ತಕ್ಕ ಔಷಧ, ಸಿದ್ಧಕ್ರಿಯ, ಅಮೋಘ್ಯಮದ್ದು; (*the tendency of a sore to corruption*) ಕೊಳೆತು ಕೆಡೋಣವದು.

Tender, a. (*delicate, gentle*) ಸೂಕ್ಷ್ಮದ, ಮೃದುವಾದ, ನಳನಳಿಕೆಯ. v. *Soft, mild.* (*tender hearted*) ಆರ್ದ್ರಹೃದಯದ, ಕನಿಕರಮನಸ್ಸಿನ, ಕನಿಕರವುಳ್ಳ, ಕರಗುಮನಸ್ಸಿನ. v. *Compassionate, amorous.* (*tender flesh*) ಮೆತ್ತನಮಾಂಸ, ಚೆಚ್ಚೆ; (*of a tender or delicate constitution*) ನಾಜೂಕುದೇಹದ, ಅತಂತ್ರಶರೀರದ; (*tender, as young herbage, &c.*) ಎಳೆಯ, ಹಸನ, ಕೋಮಲವಾದ, ಸುಳಿಯುಳ್ಳ; (*tender, sore, painful, as a wound*) ಪ್ರಮಾದ, ನಾಜೂಕಿನ, ಹುಂಗೆನ, ನೋವಿನ, ಆಯದ; (*the tender or infant age*) ಕೋಮಲ, ಎಳೆಯಪ್ರಾಯ, ಚಿಕ್ಕಪ್ರಾಯ, ಬಾಲತ್ವ. v. *Infancy.*

Tender, s. n. (*offer*) ದರಖಾಸ್ತು. v. *Proposal.*

To Tender, v. a. (*offer*) ಅಂದಿಕೊಡ, ಕೈಚಾಚಿಕೊಡ, ಮುಂದಿಟ್ಟುಬಿಡ. v. *To propose, exhibit.* (*to tender an oath*) ಪ್ರಮಾಣಮಾಡಹೇಳ.

Tendered, part. ಕೊಟ್ಟ, ಅರ್ಪಿಸಿದ. v. *Proposed, offered.*

Tenderly, ad. ಸಂಪ್ರವಾಗಿ, ಮೃದುವಾಗಿ, ನಾಜೂಕಾಗಿ, ಕೋಮಲವಾಗಿ, ಕನಿಕರವಾಗಿ, ಆರ್ದ್ರಹೃದಯವಾಗಿ. v. *Softly, delicately, kindly, mildly.*

Tenderness, s. n. ಸೂಕ್ಷ್ಮತ್ವ, ಮೃದುತ್ವ, ಕೋಮಲ. v. *Softness, mildness, kindness.* (*soreness*) ಹುಂಗುಂಗು; (*tenderness of age*) ಬಾಲತ್ವ, ಎಳೆಪ್ರಾಯ, ಚಿಕ್ಕತನ; (*tenderness of meat*) ಚೆಚ್ಚೆ, ಮೆತ್ತನ; (*tenderness of heart*) ಕನಿಕರಗುಣ, ಆರ್ದ್ರಹೃದಯ, ಮೃದುವಾದ ಮನಸ್ಸು, ಕಾರುಣ್ಯ, ಕರುಣೆ, ಘೃಣೆ, ಕೃಪೆ, ದಯೆ, ಅನುಕಂಪೆ, ಅನುಕ್ರೋಶ.

Tendon, s. n. ನರ, ಸ್ನಸೆ, ಸ್ನಾಯು, ವಸ್ನಸೆ.

Tendril, s. n. (*of a vine, &c.*) ತೆಕ್ಕಿಲು.

Tenement, s. n. (*hired house*) ಬಾಡಿಗೆಮನೆ.

Tenet, s. n. (*principle*) ಮತವು, ಮನೋಗತಿ. v. *Opinion.*

Tenour, s. n. (*sense contained*) ಅರ್ಥ, ಅಭಿಪ್ರಾಯ. v. *Meaning, signification.* (*the constant mode or course of any thing*) ಹೋಗುವ ಬಗೆ, ಹೋಗುವ ರೀತಿ. v. *Series, manner.* (*of one tenour*) ಒಂದೆಪ್ರಕಾರ, ಒಂದೇಬಗೆ.

Tense, a. (*stretched, not lax*) ಬಿಗಿಯ, ಬಿಗಿತ.

Tense, s. n. (*in grammar*) ಕಾಲಲಕ್ಷಣ; (*the*

present tense) ಭವಿಷ್ಯತ್ಕಾಲ ; *(the preterite tense)* ಭೂತಕಾಲ ; *(the future tense)* ವರ್ತಮಾನಕಾಲ.

Tenseness, Tension, Tensure, s. n. ಬಿಗಿ, ಬಿರಿ, ಪಿಕ್ಕಟಿ.

Tent, s. n. ಗುಡಾರ, ಡೇರ, ರಾವುಟಿ ; *(a royal tent)* ರಾಯನ ಡೇರೆಯು, ಅರಸಿನ ಗುಡಾರವು; *(a wall or screen surrounding a tent)* ಕನಾತು, ಪರದೆ ; *(a tent rope)* ಡೇರೆಹಗ್ಗ, ರಾವುಟಿ ಹಗ್ಗ ; *(a curtain before the door of a tent)* ಡೇರೆತೆರೆ ; *(a square tent)* ನಾಲ್ಕುಮೂಲೆಗುಡಾರ; *(a round tent)* ಸುತ್ತುಗುಡಾರ, ಸುತ್ತುಡೇರೆ ; *(a single pole tent)* ಒಂಟಿಗಂಬದ ಡೇರಾ; *(a two pole tent)* ಎರಡುಗಂಬದ ಡೇರಾ, ಎರಡುಗಂಬ್ಬದ ಗುಡಾರ; *(to pitch a tent)* ಡೇರಾ ಹಾಕ, ಗುಡಾರ ಹೊಡೆಯ. v. *To encamp.* *(to pitch a tent close by another)* ಗುಡಾರಕ್ಕೆ ಗುಡಾರ ಹೊಂದಿಸಿಹೊಡೆಯ, ಡೇರಾಕೆ ಡೇರಾ ಹೊಂದಿಸಿಹಾಕ; *(one who pitches tents)* ಡೇರಾಹಾಕುವವ, ಗುಡಾರ ಹೊಯ್ಯುವವ, ಕಲಾಸಿ ; *(a tent pole)* ಡೇರಾದ ಕಂಬ; *(a tent pin)* ಡೇರಾದ ಮೇಕು, ಬಿಗಿಗೂಟ.

Tented, part. *(covered with tents)* ಡೇರೆದಮಯವಾದ.

Tenter, s. n. *(hook)* ಕತ್ತರಿಮೊಳೆ, ಕೊಂಡಿಮೊಳೆ ; *(to keep one upon the tenters)* ತಿರಿಗಿಸಿತಿರಿಗಿಸಿಕೊಳ್ಳ, ಸ್ವಸ್ಥಸೇರಬಿಟ್ಟಿರವ, ಒಂದಕ್ಕೆಯಮಂದಕ್ಕೆಯಕೇಯ; *(to stretch by tenter hooks)* ಕೊಂಡಿಗೆಹಾಕಿಯೆಳೆಯ; *(to be in the tenters)* ದಿಕ್ಕುದಿಶೆತಿಳಿಯದಹಾಗಿರ, ತೋಚದಹಾಗಿರ

Tenth, a. ಹತ್ತನೆಯ; *(a tenth part)* ಹತ್ತನೆ ಪಾಲು. v. *Tythe.*

Tenthly, ad. ಹತ್ತನೆಯದು.

Tenuity, s. n. ತೆಳುವು, ನಾಜೂಕು, ನಯ, ಸಣ್ಣ. v. *Thinness.*

Tenuous, a. ತೆಳುವಿನ, ನಾಜೂಕಿನ, ನಯದ. v. *Thin.*

Tenure, s. n. ಷರಾಪರ್ತು, ಒಡಂಬಡಿಕೆ, ಕಟ್ಟು. v. *Term* or *terms, condition.*

Tepid, a. ಉಗುರುಬೆಚ್ಚಗಾದ, ಮಂದೋಷ್ಣವಾದ. v. *Lukewarm.*

Tergiversation, s. n. ಚಂಚಲತ್ವ, ಚಪಲತ್ವ. v. *Fickleness, evasion, trick.*

Term, s. n. *(name)* ಶಬ್ದ, ವಚನ, ಮಾತು. v. *Word, language.* *(condition, stipulation)* ಷರಾಪರ್ತು, ಒಡಂಬಡಿಕೆ, ಕಟ್ಟು ; *(a limited space of time)* ಅಂತು, ವಾಯಿದೆ ; *(to give a longer term)* ಹೆಚ್ಚಿನವಾಯಿದೆಕೊಡ; *(to ask for a longer term)* ಹೆಚ್ಚಿನ ವಾಯಿದೆಕೇಳ; *(law terms or phrases)* ಖಚೇರಿಮಾತುಗಳು, ರಾಜಸ್ಥಾನದ ಮಾತುಗಳು, ದರಬಾರ ಮಾತುಗಳು ; *(astrological terms)* ಸಿದ್ಧಾಂತಪ್ರಮೇಯ, ಜ್ಯೋತಿಷದಸಂಜ್ಞೆ ; *(to express one's self in elegant terms)* ಲಕ್ಷಣಯುಕ್ತವಾಗಿಮಾತಾಡ, ಶಿಕ್ಷಿತವಾಗಿಮಾತಾಡ. v. Also *limit, boundary, termination.*

To Term, v. a. ಕರಿಯ, ಹೆಸರಿಡ. v. *To name, call.*

Termagant, s. n. ಗಾಗಳಿಗಾರ್ತಿ, ಕಟಿಕಟಿಗಾರ್ತಿ-ವಳಸು. v. *Scold, shrew.*

To Terminate, v. a. *(bound)* ಮೇರೆಮಾಡು, ಕಟ್ಟುಮಾಡು, ಕೊಲಮೇರೆಯಿಂಗದಿಸು; *(to conclude)* ಮುಗಿಸು, ತೀರಿಸು, ಸಮಾಪ್ತಿಸು, ಪೂರಗಾಣಿಸು; *(to have an end)* ಮುಗಿಯು, ತೀರಿಹೋಗು, ಸಮಾಪ್ತವಾಗು.

Terminated, part. *(bounded)* ಮೇರೆಯಾದ, ಕಟ್ಟಾದ, ಪ್ರಾಂತ್ಯವಾದ; *(concluded)* ಸಮಾಪ್ತವಾದ, ಮುಗಿದ. v. *Finished.*

Termination, s. n. *(bound, limit)* ಮೇರೆ, ಪ್ರಾಂತ್ಯ, ಕೊಲಮೇರೆ; *(conclusion)* ಸಮಾಪ್ತವು, ಮುಗಿಯುವಿಕೆ, ಅವಸಾನ, ಅವಸಾಯ, ಅಂತ್ಯ.

Termless, a. *(boundless)* ಮೇರೆಯಿಲ್ಲದ, ಮಟ್ಟಿಲ್ಲದ, ಪ್ರಾಂತ್ಯವಿಲ್ಲದ.

Terrace, s. n. *(flat roof)* ಮಾಳಿಗೆ; *(a terrace before the house)* ಪ್ರಘಾಣ, ಪ್ರಘಣ, ಅಳಿಂದ, ಪಡಸಾಲೆ, ಚಾವಡಿ, ಜಗಲಿ.

To Terrace, v. a. ಮಾಳಿಗೆಕಟ್ಟು.

Terraqueous, a. ಭೂಮಿಯ, ನೆಲದ.

Terrene, Terrestrial, a. ಮಣ್ಣಿನ, ಭೂಮಿಯ, ಪ್ರಪಂಚದ. v. *Earthly.*

Terrible, Terrifick, a. ಭಯಂಕರದ, ರೌದ್ರದ, ಭೀಷಣಾದ, ಪ್ರತಿಭಯದ, ಘರುಷಣಾದ; *(a terrible accident)* ಬಹುಗಂಡಾಂತರ, ಮಹಾಕಠಿನದೈವಗತಿಯು, ಭಯಂಕರದದೈವಯೋಗವು, ಘೋರವಾದಪ್ರಾಪ್ತಿಯು, ಭಯಂಕರವಾದಪ್ರಮಾದವು, ದಾಡ್ಡಪಾಯವು; *(a terrible blow)* ಭಾರವಾಶಿಯಾದ ದೆಬ್ಬೆ.

Terribleness, s. n. ಭಯಂಕರವು, ದಾರುಣವು, ಭೀಕರವು, ಭೀಷ್ಮವು, ಘೋರವು, ಭೀಮವು, ಭಯಾನಕವು, ಪ್ರತಿಭಯವು.

Terribly, ad. ಭಯಂಕರವಾಗಿ, ಅತಿಭಯವಾಗಿ, ಅತಿಘೋರವಾಗಿ.

To Terrify, v. a. ಭಯಪಡಿಸು, ಹೆದರಿಸು, ಬೆದರಿಸು. v. *To frighten.*

Terrified, part. ಭಯಪಟ್ಟ, ಬೆದರಿಸಲ್ಪಟ್ಟ, *(to be terrified)* ಭಯಪಡು, ಹೆದರಿಕೊಳ್ಳು.

Territory, s. n. ದೇಶವು, ರಾಜ್ಯವು. v. *Country, district, land.*

Terrour, s. n. ಭಯಂಕರವು, ಗರ್ಭ-ನಿರ್ಭೇದವು, ಭೀಷಣವು, ಅಳುಕು, ಪೆಳರು, ದರ, ತ್ರಾಸ, ಭೀತಿ, ಭೀಯು, ಸಾಧ್ವಸ, ಭಯ; *(great terrour)* ಅತಿಭಯಂಕರವು, ಅತಿಭೀಷಣವು.

Tertian ague, s. n. ಐಕಾಹಿಕಜ್ವರ. v. *Fever.*

Terse, a. ನೆಟ್ಟಗೆ, ಸಾಪಾದ. v. *Smooth, neat.*

Tesselated, part. ಚಿತ್ರಗಂಣಿನ, ಹೂಪ್ಪಳಿಯ, ಗಟ್ಟಿಮಡಿಯ, ಮನೆಮನೆಯ, ಕೊಳಕೊಳದ.

Test, s. n. *(trial)* ಶೋಧನೆ, ವಿಚಾರಣೆ, ಅಜಮಾಯಿಷಿ; *(a vessel for trying metals, a cupel)* ಮೂಸೆ. v. Also *distinction, discrimination, judgment. (to bring to the test)* ಪರಿಕ್ಷೆಮಾಡು, ನೋಡು; *(to be brought to the test, to stand the test)* ಪಾಟಿಖರಖರೆವಾಗು, ನಿಜವಾಗು, ಪರಿಕ್ಷೆಗೆಬರು; *(he must stand the test)* ಅವನುಪರಿಕ್ಷೆಕೊಡನಿಲ್ಲಬೇಕಾದ್ದು; *(tested gold)* ಶೋಧಿಸಿದ ಬಂಗಾರ, ಕಡಾಣೆ, ಕುಂದನ.

Testaceous, a. ಶಂಖದ, ಕಪ್ಪೆಚಿಪ್ಪಿನ.

Testament, s. n. ಖಂಡಪತ್ರ, ದಾನಪತ್ರ; *(to make a testament)* ಒಡಂಬಡಿಕೆಮಾಡ, ಕರಾರುಮಾಡ; *(acting contrary to the commands of a testament)* ಒಪ್ಪಂದಕೆವಿರೋಧವಾಗಿನಡೆಯುವದು; *(the old testament)* ಹಳೇಯೊಡಂಬಡಿಕೆಯಪುಸ್ತಕವು; *(the new testament)* ಹೊಸಒಡಂಬಡಿಕೆಯಪುಸ್ತಕವು.

Testamentary, a. ಖಂಡಪತ್ರದ, ದಾನಪತ್ರದ.

Testator, s. n. ಖಂಡಪತ್ರಬರೆಯುವವ.

Testatrix, s. n. ಖಂಡಪತ್ರಬರೆಯುವವಳು.

Tester, s. n. *(cover or top of a bed)* ಪಲಂಘೋರು, ಛೇವಿ.

Testicle, Testicles, s. n. ತರಡು, ಬೀಜಗಳು, ವೃಷಣಾಗಳು, ಮುಷ್ಕವು; *(swelled testicles)* ಗಾಡುಬುಡ್ಡೆ.

Testification, s. n. ಸಾಕ್ಷಿ, ದೃಷ್ಟಾಂತ. v. *Testimony.*

Testificator, s. n. ಸಾಕ್ಷಿಕೊಡುವವ. v. *Testifier.*

To Testify, v. a. ಸಾಕ್ಷಿಕೊಡ, ಸಾಕ್ಷಿತೋರಿಸ. v. *To prove.*

Testified, part. ಸಾಕ್ಷಿಕೊಟ್ಟ, ದೃಷ್ಟಾಂತತೋರಿಸಿದ. v. *Proved.*

Testifier, s. n. ಸಾಕ್ಷಿ. v. *Witness.*

Testimonial, s. n. ಶಿಫಾರಸು; *(a written testimonial given by a plaintiff upon a cause being finally settled, that he is satisfied)* ರಾಜಿನಾಮೆ.

Testimony, s. n. ಸಾಕ್ಷಿ, ದೃಷ್ಟಾಂತ. v. *Proof, evidence.*

Testily, ad. ಸಿಡುಮೋರೆಯಾಗಿ, ಸಿಟ್ಟಾಗಿ. v. *Morosely.*

Testiness, s. n. ವಸವಸೆಯು, ಕದಾಪ, ಸಿಡ್ಲಮೋರೆಯು. v. *Moroseness.*

Testy, a. ವಸವಸೆಯ, ಕದಾಪದ, ಸಿಡ್ಲಮೋರೆಯ. v. *Peevish.*

Tete a Tete, s. n. ಇಷ್ಟಾಲಾಪ, ಇಷ್ಟಾಗೋಷ್ಠಿ, ದೀರ್ಘಸಂಭಾಷಣೆ.

Tether, s. n. ಕಾಲುಬಂಧು, ಕಂಗೊರೆಹಗ್ಗ.

To Tether, v. n. ಕಟ್ಟಿಹಾಕ, ಕಂಗೊರೆಯಿಡ.

Tetrachord, s. n. *(an instrument with four strings, as a lute, &c.)* ತಂಬೂರಿ, ಚತುಸ್ತಂತ್ರಿ.

Tetter, s. n. ಎಂಜಲದದ್ದು, ಗಜಕರ್ಣ, ಹೊಡಿದಾವರೆ. v. *Ringworm.* *(scurf, scab)* ಕಜ್ಜಿ, ಉಡುಗಜ್ಜಿ.

Text, s. n. ಉಪಕ್ರಮಪ್ರಮೇಯ, ಪ್ರಸ್ತಾಪಶ್ಲೋಕ, ಇತಿಹಾಸಶ್ಲೋಕ; *(an exposition of a text)* ಶ್ಲೋಕಾರ್ಥ, ಶ್ಲೋಕದಅಭಿಪ್ರಾಯ, ಟೀಕು. v. *Commentary.*

Textile, a. *(woven)* ನೇದ; *(capable of being woven)* ನೆಯ್ಯತಕ್ಕ.

Texture, s. n. ನೇಯಿಕೆ, ನೆಯ್ಯುವವಿಧ, ನೆಯ್ಯುವಬಗೆ; *(of a thin texture)* ಬಡುನಯವಾದ, ದಪ್ಪಿಲ್ಲದ, ಗಟ್ಟಿಯಿಲ್ಲದ, ಹಬ್ಬಕ್ಕಲಾದ.

Than, ad. ಅಪೇಕ್ಷೆ. This word cannot be generally used in this sense, but in composition with Sanscrit terms it certainly denotes, in comparison, the English adverb *than*; as, ಕೃಷಿಕೃ

ಷ್ಯಾಪೇಕ್ಷೆಯಾವಾಣಿಜ್ಯವ್ಯಾಪಾರವೇಉತ್ತಮವು commercial employment is better *than* that of an agriculturist; ತಾರ್ಕಿಕವಿದ್ಯಾಭ್ಯಾಸಾಪೇಕ್ಷೆಯಾಆತ್ಮವಿದ್ಯಾಭ್ಯಾಸವೇಪರಮೋತ್ತಮವು it is better to study divine knowledge *than* the controversial sciences; ಆಕಾರ್ಯವಾಗುವಪಕ್ಷದಲ್ಲಿಯೀಕಾರ್ಯವಾದರೆ ಉತ್ತಮವಾಗಿರುವದು it is better that this circumstance should be *than* that; ನಿನ್ನಪಕ್ಷದಲ್ಲವನುಶಹಣನಾಗಿಕಾಣಿಸುತ್ತಾನೆ he seems a wiser man *than* you; ಇದರಪಕ್ಷದಲ್ಲದನಧಿಕವಾಗಿದೆ that is greater *than* this, or that is more *than* this. The English adverb *than*, is however generally expressed in Carnátaca by ಇಂತ್ತ, ಇಂತ್ತಲು, ಅಂತ್ತ, ಅಂತ್ತಲು, &c. &c. the several applications of which are explained under the word *best*, in addition to which the following examples are subjoined: ದೇವತೆಗಳಿಗಿಂತಾದೇವರತ್ಯಧಿಕನಾಗಿರುವನು the (supreme) God is far greater *than* the demi-gods; ಆಕಾಶಕ್ಕಿಂತಾಭೂಮಿಯೇನುದೊಡ್ಡದಾದದ್ದೋ is the earth greater *than* the sky? ಬಲದಲ್ಲಿಯುಛಲದಲ್ಲಿಯುಸುರರಿಗಿಂಮಿಗಿಲಾದವರಸುರರು in prowess and in stratagem the giants are greater *than* the demi-gods; ಇಂದುವಿಗಿಂತಧಿಕಕಳೆಯುಳ್ಳಸುಂದರಾಂಗಿಯು ಚಂದ್ರಹಾಸನಕಡೆಗೈತಂದಳು a woman far fairer *than* the moon came to Chundruhāsā; ಇವನಿಗವನೇನುತ್ತಮ what is he better *than* him; ಅವನಿಗಿಂತ್ರಿವನುತ್ತಮನಾಗಿಕಾಣುತ್ತಾನೆ he appears a better man *than* him; ಇದೇನುಇದಕ್ಕದುವುತ್ತಮವಾಗಿಕಾಣುತ್ತದೆ what is this (good for) that seems better *than* this; ನಕ್ಷತ್ರಗಳಿಂನ್ನೋದಚಂದ್ರನುತ್ತಮನಲ್ಲವೆ is not the moon better *than* the stars?

To Thank, v. a. ಶರಣುಮಾಡ, ವಂದಿಸ, ದಂಡವತ್ತುಮಾಡ; *(to thank God)* ದೇವರಿಗೆಪ್ರಣಾಮಿಸ, ದೇವರಾವಂದನೆಮಾಡ.

Thankful, a. ಉಪಕಾರತಿಳಿಕೊಂಬುವ, ಉಪಕಾರನೆನಸುವ, ಮಂನ್ನಿಸುವ, ಕೃತಜ್ಞ.

Thankfully, ad. ಮಂನ್ನಣೆಯಾಗಿ.

Thankfulness, s. n. ಕೃತಜ್ಞತೆ, ಉಪಕಾರನೆನಸುವಿಕೆಯು.

Thankless, a. ಉಪಕಾರನೆನಸದ, ಉಪಕಾರವೆಣಿಸದ, ಕೃತಘ್ನ. v. *Ungrateful.*

Thanklessness, s. n. ಉಪಕಾರನೆನಸದಿರುವಿಕೆ, ಕೃತಘ್ನತೆಯು v. *Ingratitude.*

Thanksgiving, s. n. ವಂದನೆಯು, ತ್ರಾಂಡಿ, ತ್ರಾಂಡಿತ್ರಾಂಡಿ.

Thankworthy, a. ನೆನಸಯೋಗ್ಯವಾದ.

That, pro. (dem.) ಅದು. v. Also *who, which, because.* Where is *that* which was here? ಇಲ್ಲಿಯಿದ್ದದ್ದೆಲ್ಲಿ; *(for that reason)* ಅದುಕಾರಣ, ಅದುನಿಮಿತ್ತ್ಯ, ಅದಕ್ಕೋಸ್ಕರವಾಗಿ, ಅದರಹುಸಕಾಗಿ, ಅದರಕಾರಣವಾಗಿ; He is so ill *that* he cannot walk ಅವನುನಡೆಯಕೂಡದಂಥಾಜಾಡ್ಯವಾಗಿದ್ದಾನೆ, or ಅವನಿಗೇಳಕೂಡದಂಥಾಕಷ್ಟವಾಗಿಯಿದೆ; There is no doubt *that*

there will be rain ಮಳೆಬರುವದಕ್ಕೇನಾದರು ಸಂದೇಹವಿಲ್ಲ ; *(from that time)* ಅಂದಿನಿಂದ; *(after that time)* ಆ ತರುವಾಯ ; After *that* (when) he is gone I will come ಅವನು ಹೋದ ತರುವಾಯ ನಾ ಬರುವೆನು; *(at that time)* ಆ ವೇಳ್ಯದಲ್ಲಿ, ಆ ಕಾಲದಲ್ಲಿ, ಆಗಲು; *(to that time)* ಆ ವರಿಗೆ, ಆ ಪರಿಯಂತ್ರ. v. *Till, until.* I came *that* I might see you ನಿಂನ ನೋಡುವದಕ್ಕೇ ನಾ ಬಂದೆ; *(on that account)* ಆ ಕಾರಣಾ, ಅದರ ನಿಮಿತ್ಯ, ಆ ಕುರಿತ; *(that way)* ಆ ಪ್ರಕಾರ, ಹಾಗೆ; *(that is to say, viz. to wit)* ಅ ಹ್ಯಾಗಂದರೆ, ಅದ್ಯೇನಂದರೆ; We are now of *that* age in which we ought duly to think of it ಈಗ ನಾವು ಅದಂನ ಚಂನಾಗಿ ನೆನೆಯತಕ್ಕ ಪ್ರಾಯವುಳ್ಳವರಾಗಿ ಯಿದ್ದೇವೆ; It will come to *that* ಹಾಗೆ ಬರುವದು, ಹಾಗಾಗುವದು; What of *that?* ಅದಕ್ಕೇನು; Yet for all *that* ಹಾಗೆ ಯಿದ್ದರು; The sun shines *that* we may see ನಾವು ನೋಡುವ ಹಾಗೆ ಸೂರ್ಯನು ಪ್ರಕಾಶಿಸುತ್ತಾನೆ; I see *that* it is so ಅದು ಹಾಗೆ ಅದೆಯೆಂದು ನನಗೆ ಕಾಣಿಸುತ್ತದೆ; So *that* he may feel it ಅವನ ಮನಸ್ಸಿಗೆ ತಗಲುವ ಹಾಗೆ, or ಅವನ ಮನಸ್ಸು ನೋಯುವ ಹಾಗೆ; *(to that end)* ಅದಕ್ಕೋಸ್ಕರವಾಗಿ, or ಅದಕಾಗಿ or ಅದರ ಕುರಿತವಾಗಿ; *(from that side)* ಆ ಪಾರ್ಶ್ವದಿಂದ, ಆ ಪಕ್ಕೆಯಿಂದ, ಆ ಕಡೆಯಿಂದಾ.

Thatch, s. n. ಕಾಶಿಹೊದ್ದಿಕೆ, ಚಪ್ಪರ, ಮನೇಹೊದಿಕೆ, ಪಟಿಲ ; *(the wood of a thatch)* ಜೋವೆ, ವಳಜಿ.

To Thatch, v.a. ಚಪ್ಪರಹೊದ್ದಿಸ, ಗುಡಿಸಲುಹಾಕ.

Thatched, part. ಚಪ್ಪರಹೊದ್ದಿಶಿದ, ಗುಡಿಸಲುಹಾಕಿದ; *(a thatched house)* ಕೊಟ್ಟಿಗೆಮನೆ, ಹುಲ್ಲುಹೊದ್ದಿಶಿದಮನೆ.

Thatcher, s. n. ಚಪ್ಪರಹೊದ್ದಿಸುವವ, ಗುಡಿಸಲುಹಾಕುವವ.

To Thaw, v. a. ಕರಗಿಸ, ಅಲ್ಲಕಲ್ಲಕಮಾಡ. v. *To dissolve, melt. (to melt as ice)* ಕರಗ.

The. There is no distinct word in the Carnáṭaca language to represent the definite article *the.* The nervous and concise idiom of the language renders it unnecessary. It is incorporated in the relative participles which will be noticed under the word *Who.* *The* boy who came ಬಂದ ಹುಡುಗ; *The* man who was here ಇಲ್ಲಿದ್ದ ಮನುಷ್ಯ; *The* book which I read ನಾನೋದಿದ ಪುಸ್ತಕ ; *The* trees of the garden ತೋಟದಲ್ಲಿರುವ ಗಿಡಗಳು ; *The* school there ಅಲ್ಲಿರುವೋದುವ ಸಾಲೆ; *The* sun shines ಸೂರ್ಯ ಪ್ರಕಾಶಿಸುತ್ತಾನೆ; *The* more I admonish the less he minds ನಾನೆಷ್ಟು ಹೇಳಿದರೂ ಅವನು ಮರಕು ಮರಕು ಹೋಗುತ್ತಾನೆ; *The* more you give the more he demands ಅವನಿಗೆ ಎಷ್ಟು ಕೊಟ್ಟರೂ ಅವನು ಇನ್ನಿಷ್ಟು ಬೇಡುತ್ತಾನೆ; *The* higher we are the lower we ought to be in our own eyes ನಾವೆಷ್ಟು ಹೆಚ್ಚಿದರೂ ಅಷ್ಟು ತಗ್ಗಿ ನಡಿಯಬೇಕಾದ್ದು or ನಾವೆಷ್ಟು ಹೆಚ್ಚಿದರೂ ನಮ್ಮ ಮನಸ್ಸಿನಲ್ಲಿ ನಾವು ಅಲ್ಪವಾಗಿಯಿದ್ದೇವೆಂದು ನೆನಸತಕ್ಕದ್ದು.

Theatre, s. n. ನಾಟಕಶಾಲೆ, ವಿನೋದಮಂಟಪ.

Theatrical, a. ವೇಷಗಾರಿಕೆಯ, ವೇಷಧಾರಕನ, ತಮಾಷೆಯ.

Thee, pro. ನಿಂನನು; Who saw *thee*? ನಿಂನನು ಯಾರುನೋಡಿದರು.

Theft, s. n. ಕಳ್ಳತನ, ಚೋರತನ.

Their, pro. ಅವರ, ತಂಮ; *Their* house ಅವರ ಮನೆ; *Theirs* ಅವರದು, ತಮದು.

Them, pro. (*mas.*) ಅವರಂನ, ತಂಮಂನ, ಅವರುಗಳಂನ; (*neut.*) ಅವುಗಳಂನ; Call *them* here ಅವರಂನಯಿಲ್ಲಿಗೆಕರಕೊಂಡುಬಾ; Bring *them* to me ಅವುಗಳಂನನನಬಳಿಗೆತಾ; Let *them* do it themselves ಅವರ ಸ್ವಕ್ಕವತೆಮಾಡಲಿ; Let *them* go themselves ಅವರುಹೋಗಲಿ, ಅವರ ಸ್ವಕ್ಕವತೆಹೋಗಲಿ; They *themselves* did it ಅವತೆಮಾಡಿದರು.

Theme, s. n. ಮೂಲ, ವಾಂಜ್ಞಾಲ, ಹೇರುವು, ಕಲ್ಪನೆ.

Then, ad. (*at that time*) ಆಗ, ಆಗಲು, ಆವೇಳ್ಯದಲ್ಲಿ; (*after that*) ಆತರುವಾಯ, ಆಮೇಲೆ. v. *Afterward.* (*now and then*) ಈಗ, ವಂದೊಂದುವೇಳ್ಯ. v. *Sometimes.* (*till then*) ಆವರಿಗು, ಅಪರಿಯಂತ್ರ; (*then, for this or that reason*) ಅದುಕಾರಣಾ.

Thence, ad. (*from that place*) ಅಲ್ಲಿಂದ; (*from that time*) ಅಂದಿನಿಂದ; (*for that reason*) ಅದುಕಾರಣಾ, ಅದುನಿಮಿತ್ಯ.

Thenceforth, Thenceforward, ad. ಅಂದಿನಿಂದ.

Theologian, Theologist, s. n. ವೇದಶಾಸ್ತ್ರಸಂಪಂನ, ಗುರುವು, ಪಾದರಿ.

Theological, a. ವೇದಶಾಸ್ತ್ರದ, ವೇದಶಾಸ್ತ್ರಸಂಬಂಧ.

Theologically, ad. ವೇದಶಾಸ್ತ್ರಪ್ರಕಾರ.

Theology, s. n. ವೇದಶಾಸ್ತ್ರವು, ದೇವವಿದ್ಯವು.

Theorem, s. n. ಪ್ರಮೇಯ. ಮೂಲಸಿದ್ಧಾಂತ.

Theoretick, Theoretical, a. ಕ್ರಮದ, ಶಾಸ್ತ್ರದ, ವಿಧಿಯಲಕ್ಷಣಾದ. v. *Speculative.*

Theoretically, ad. ಕ್ರಮವಾಗಿ, ಶಾಸ್ತ್ರಿಯವಾಗಿ, ಲಕ್ಷಣಾವಾಗಿ.

Theory, s. n. ಕ್ರಮ, ಲಕ್ಷಣಾ, ಶಾಸ್ತ್ರ ಪ್ರಮಾಣಾ, ವಿಧಿ, ಖ್ಯಾಲು, ಅಭಿಪ್ರಾಯವು. v. *Speculation.*

Theorist, s. n. ಕ್ರಮದವ, ಖ್ಯಾಲಿಯವ, ಶಾಸ್ತ್ರಜ್ಞ. v. *Speculator.*

There, ad. ಅಲ್ಲಿ; (*lo!*) ಅಗೋ, ಅದಿಗೋ. v. *Behold.* (*here and there*) ಇಲ್ಲಿಲ್ಲಿ, ಅಲ್ಲಲ್ಲಿ; (*dispersed here and there*) ಅಲ್ಲಲ್ಲಿಚೆದರಿಶಿದ.

Thereabout, Thereabouts, ad. (*near that place*) ಇಷ್ಟರಲ್ಲಿ, ಇಷ್ಟರೊಳಗೆ, ಅಷ್ಟರಲ್ಲಿ, ಅಷ್ಟರೊಳಗೆ; (*near that quantity, number or state*) ಅಷ್ಟು, ಅಷ್ಟರೊಳಗೆ, ಸುಮಾರು.

Thereafter, ad. ಆಪ್ರಕಾರವಾಗಿ.

Thereat, ad. ಅದುಕಾರಣಾ; (*at that place*) ಆಸ್ಥಳದಲ್ಲಿ, ಆಕಡೆಯಲ್ಲಿ.

Thereby, ad. ಅದರಿಂದ.

Therefore, ad. ಆದದರಿಂದ.

Therefrom, ad. ಅಲ್ಲಿಂದ.

Therein, ad. ಅದರಲ್ಲಿ, ಅದರೊಳಗೆ.

Thereof, ad. ಅದರಿಂದ, ಅದರೊಳಗಿಂದ.

Thereon, Thereupon, ad. ಸಂಗಡಲೆ.

Thereout, ad. ಅದರೊಳಗಿಂದ, ಅದರದಿಸೆಯಿಂದ.

Thereto, **Thereunto**, ad. ಅದಕ್ಕೆ.

Thereunder, ad. ಅದರ ಕೆಳಗೆ.

Therewith, ad. ಅದರ ಸಂಗಡ, ಸಂಗಡಲೆ.

Therewithal, ad. (*with that*) ಅದರ ಸಂಗಡ; (*over and above*) ಇದಲ್ಲದೆ, ಅದಲ್ಲದೆ; (*at the same time, also*) ಮತ್ತು. v. *Likewise.*

These, pro. (*neut.*) ಇವು, ಇವುಗಳು; (*mas. and fem.*) ಇವರು, ಇವರುಗಳು; (*to these, neut.*) ಇವಕ್ಕೆ, ಇವುಗಳಿಗೆ; (*mas. and fem.*) ಇವರಿಗೆ, ಇವರುಗಳಿಗೆ; (*from all these*) ಇವುಗಳೆಲ್ಲಾದರಿಂದ; (*these two, mas. & fem.*) ಈ ಇಬ್ಬರು, (*neut.*) ಇವೆರಡು, ಈಯೆರಡು; (*in these times*) ಈ ಕಾಲದಲ್ಲಿ.

Thesis, s. n. ಪ್ರಮೇಯ.

They, pro. (*mas. & fem*) ಅವರು, ಅವರುಗಳು, ತಾವು; (*neuter*) ಇವು, ಇವುಗಳು; Who are *they?* ಅವರ್ಯಾರು, ಅವರು ಯಾರು.

Thick, a. (*dense, gross, as cloth*) ಹೊದರುಳ್ಳಂತ; (*as flour*) ಥಪ್ಪ, ದಸ್ಕಿನ. v. *Coarse.* (*large, not slender*) ದಳದ, ದಂಮಾಸದ; (*muddy, feculent*) ಕಲಕ, ವಂಡು, ಚೆಕ್ಕಾನ, ಮಂದವಾದ. v. *Opaque, turbid.* (*viscous*) ಜಿಬ್ಬಿನ, ಅಂಟಿನ, ಜಿಪುರಿನ, ಬಂಕಟೆಯಾದ, ಜಿಬ್ಬಜಬ್ಬಾದ; (*thick, as any liquid*) ಮಂದವಾದ, ಘಟ್ಟಿಯಾದ; (*coagulated, congealed*) ಗಡ್ಡೆಯಾದ, ಕಂಗಾಲಿಯಾದ, ಘೃಯ್ಯಂದಿಯಾದ; (*thick milk, sour*) ಮಜ್ಜಿಗೆ; (*a thick wood*) ಮಲೆ, ಜೊಂಡುಂಬುವಮಲೆ, ಘೋರಾರಣ್ಯ, ಗಾಂಢಾರಣ್ಯ. v. *Thicket.* (*thick, frequent, repeated*) ಬಯಿರೆಸಕ, ಪಡೆಪಡೆ, ಶ್ಯೇಪೆಶ್ಯೇಪೆ, ಸಾರಿಸಾರಿ, ಸರ್ತಿಸರ್ತಿ; (*close, without interval*) ಜತ್ತಾದ, ವತ್ತಾದ, ಮೆಡೆಬಿಡದ, ಅಂಟಿದ; (*close packed*) ಅಡಕಿಟ್ಟ, ಅಡಕವಾಗಿಟ್ಟ, ಅಡಕಿದ, ಅಣಕವಾಗಿಟ್ಟ; (*crowding, crowded into a narrow compass*) ದಟ್ಟವಾದ, ಸಂಮರ್ದವಾದ, ಕಿರಿಕೆವಾದ, ಗ್ಯಜಿಗಿಸಸ್ತಾದ; (*thick and entangled as branches, &c.*) ಸಾಂದ್ರವಾದ, ಮೇದುರವಾದ, ಗುಬುರಾದ, ದಟ್ಟವಾದ; (*a branch thick of berries*) ಫಲಕಿರಿಕೆವಾದಕೊಂಬೆ, ಜಗ್ಗವ; (*to go through thick and thin*) ತೂರಿಕೊಂಡುಹೋಗ, ನುಗ್ಗಿಕೊಂಡುಹೋಗ, ಸರಾಸರಿಯಾಗಿಹಾಯು; (*a thick forest*) ಗಾಂಢಾರಣ್ಯ; (*a thick air*) ಉಂಮ್ಮರ, ಉಬ್ಬಸ, ಉಗೆ, ಉಕ್ಕೆ, ಉಬ್ಬೆ, ದುಂಮುದಾರಿ, ಶ್ಯೆದರೆ; (*a thick skull*) ಥಡ್ಡ, ಪಾಷಾಣ, ಮಂದಮತಿ, ಕೋಣ; (*thick of hearing*) ಕಿವುಡ; (*to speak thick*) ಗೊಗ್ಗರಿಮಾತಾಡ; (*to be very thick, as friends*) ಬಹುಅಂನ್ಯೋನ್ಯವಾಗಿರ, ಪ್ರಾಣಪ್ರಾಣವಾಗಿರ, ಕಟ್ಟಿಗಲದಿರ, ಜೋಡುಗೂಡಿರ.

Thick, ad. (*quick, repeatedly, frequently*) ಮೇಲೆಮೇಲೆ, ಶಿರಿಶಿರಿ, ಸರವಿಸರವಿ, ತಂಡೋಪತಂಡ; (*raining thick and threefold*) ಕುಂಭದ್ರೋಣವಾಗಿಸುರಿಯು; (*to a great depth*) ದಳವಾಗಿ, ಮಂದವಾಗಿ.

To Thicken, v. a. (*make dense or gross*) ಮಂದಮಾಡ, ಘಟ್ಟಿಮಾಡ; (*to condense*) ದಳಮಾಡ, ಗಾಢಮಾಡ, ಅಡಕಮಾಡ, ಅಣಕಮಾಡ; (*to become dense*) ಮಂದವಾಗ, ಘಟ್ಟಿಯಾಗ;

(to become condensed) ಅಗಾಕವಾಗ, ಅಡಕವಾಗ.

Thicket, s. n. ಪೊದೆ, ಕುಂಜ, ಗುಬುರು, ಕುತ್ತುರು, ಪೊದರು.

Thickness, s. n. *(density, coarseness, grossness)* ಮಂದಾರ, ಮೊಬ್ಬು; *(largeness of circumference)* ಗಾಢ, ಘನ, ಘನತರ; *(closeness, want of intervals)* ದಟ್ಟಿ, ಸಂಮರ್ದ; *(thickness or coarseness of cloth)* ಕೊಂತ್ರ, ಕೊರಗ, ಕಟ್ಟಿ.

Thick-set, a. *(close planted)* ಒತ್ತಾದ, ಅಡವಾದ.

Thick-skulled, a. ಮಂದಮತಿಯ, ಮಡ್ಡಿಯಾದ, ಧಡ್ಡ. v. *Dull, stupid.*

Thief, s. n. ಕಳ್ಳನು, ಚೋರ, ತಸ್ಕರ, ಲುಂಟಾಕನು; *(an infamous thief)* ರಾಯಗಳ್ಳ; *(a thief catcher)* ಕಳ್ಳನ ಹಿಡಿಯುವವ.

To Thieve, v. a. ಕಳ್ಳತನಮಾಡ, ಚೋರತನಮಾಡ, ತಸ್ಕರಮಾಡ. v. *To steal.*

Thievery, s. n. ಕಳ್ಳತನವು, ಚೋರತನವು, ತಸ್ಕರವು. v. *Theft.*

Thievish, a. *(given to stealing)* ಕಳ್ಳತನದ, ಚೋರತನದ, ತಸ್ಕರದ.

Thievishly, ad. ಕಳ್ಳತನವಾಗಿ, ಚೋರತನವಾಗಿ, ತಸ್ಕರವಾಗಿ.

Thievishness, s. n. ಕಳ್ಳತನವು, ಚೋರತ್ವವು.

Thigh, s. n. ತೊಡೆ, ಪೆಸದನ, ಚಪ್ಪವು; *(the inside of the thigh)* ಒಳತೊಡೆ.

Thimble, s. n. ಬೆರಳುಟೊಳಿಪಿ, ಸೂಜಿಲಾತ್ರ.

Thin, a. *(as paper, &c.)* ತೆಳ್ಪಿನ, ತೆಳುಪಿನ; *(small, fine, delicate)* ನಾಜೂಕಿನ, ಸಣ್ಣ; *(lean)* ಬಡಬಕ್ಕಲ, ಬಡಬಡಲ, ಕಿಲ್ಲಾನ; *(not dense or coarse)* ನಯ, ಪರಂಜಳ, ನಿರ್ಮಲ; *(not thick, liquid)* ಅಳ್ಳಕಾದ, ನೀರುನೀರು; *(not numerous)* ವಿರಳವಾಗಿ, ಅಟೊಟಾಗಿ, ಒಬ್ಬೊಬ್ಬಾಗಿ; *(a thin woman)* ಕಿಲ್ಲಾನಹೆಂಗಸು; *(a thin man)* ಕಿಲ್ಲಾನಮನುಷ್ಯ, ಬಡಬಕ್ಕಲ ಮನುಷ್ಯ; *(thin paper)* ತೆಳುವು ಕಾಗದ, ನಯವಾದ ಕಾಗದ; *(thin milk)* ತೆಳುವಾದ ಹಾಲು, ನೀರಿಸಂಕ್ರಹಾಲು; *(thin of hair)* ಉಬೆದ, ಸವದುರೋದ, ತೆಗಳೆದ; *(a thin plate of metal)* ತಗಡು, ತೇಕು.

To Thin, v. a. *(make thin)* ತೆಳುವುಮಾಡ; *(to make liquid)* ಅಳ್ಳಕಮಾಡ, ನೀರುನೀರುಮಾಡ; *(to make less numerous)* ಬಿಡುವುಮಾಡ, ತೆರಪುಮಾಡ.

Thine, pro. ನಿನ್ನದು.

Thing, s. n. ವಸ್ತುವು; My *things* ನನವಸ್ತುಗಳು.

To Think, v. a. ನೆನಸ, ಊಹಿಸ, ಆಲೋಚನೆಮಾಡ, ಧ್ಯಾನಿಸ, ಚಿಂತಿಸ. v. *To consider, meditate, reason, judge, conclude, imagine, fancy, believe.* *(to cause to think)* ಆಲೋಚನೆಮಾಡಿಸ, ಊಹೆಸಿಯೋಗಿಸ; *(methought)* ನನಗೆ ತೋಚಿತು; He *thinks* much to do it ಅದನ ಮಾಡಲವನಿಗೆ ಅಗಾಧವಾಗಿ ಕಾಣುತ್ತದೆ; He *thinks* light of it ಅದನ ಅಲಕ್ಷ್ಯವಾಗಿಯೆಣಿಸುತ್ತಾನೆ; He *thinks* too well of himself ಅವನಿಗೆ ತಾನೆಂಬ ಅಹಂಬ್ರಂಹ್ಮತ್ವವದೆ; I *think* it long till he comes ಅವನು [illegible]

ಗ ಬರುವ ಮೋಹವುಂಟಾಯಿತ್ತೇನೆ; As you *think* of it ನಿನಗೆ ತೋರುವ ಹಾಗೆ, or ನಿನ್ನ ಮನಸ್ಸಿಗೆ ಬಂದ ಹಾಗೆ; (*a free thinker*) ಮನಸ್ವೀ, ಸ್ವೇಛೆಯಾಗಿ ನಡೆಯುವವ, ಸ್ವಬುದ್ಧಿಯಾಗಿ ಹೋಗುವವ.

Thinker, s. n. ನೆನಸುವವ, ಆಲೋಚನೆ ಮಾಡುವವ, ಊಹಿಸುವವ, ಧ್ಯಾನಿಸುವವ.

Thinking, part. ಧ್ಯಾನಿಸುವ, ಆಲೋಚನೆ ಮಾಡಿಸುವ, ಊಹಿಸುವ; (*thinking deeply*) ಗಾಢಾಲೋಚನೆ ಮಾಡುವದು, ದೀರ್ಘವಾಗಾಲೋಚಿಸುವದು; (*thinking well or justly*) ಯುಕ್ತವಾಗಿ ನೆನಸುವದು; (*thinking malevolently*) ಕೇಡಾಲೋಚಿಸುವದು, ಅಪಕಾರವಾಗಿಯನೆನಸುವದು.

Thinking, s. n. ಆಲೋಚಿಸುವದು, ಧ್ಯಾನಿಸುವದು, ಊಹಿಸುವದು, ಯೋಚಿಸುವದು.

Thinly, ad. ಬಡಬಕ್ಕಲಾಗಿ, ಬಡಬಡಕಲಾಗಿ, ತೋಳಿಯಾಗಿ; (*not densely*) ತೆಳುವಾಗಿ, ನಯವಾಗಿ; (*thinly dressed*) ಒಂಟಿಬಟ್ಟೆಹಾಕಿದ.

Thinness, s. n. ಬಡಬಡಕತನ, ತೋಳಿತನ. v. *Slenderness.* (*want of thickness or spissitude*) ಅಲ್ಪಕ, ತೆಳುವು, ತೆಳಿವೆ.

Third, a. ಮೂರನೆಯ; (*a third*) ಮೂರರಲ್ಲಿ ಒಂದು.

Thirdly, ad. ಮೂರನೇದು.

Thirst, s. n. ದಾಹ, ನೀರಡಿಕೆ, ಉದನ್ಯೆ, ಪಿಪಾಸೆ, ತೃಷ್ಣೆ, ತರ್ಷ; (*extrême thirst*) ಬಹುನೀರಡಿಕೆ, ಘೋರದಾಹ, ಅತಿದಾಹ; (*to quench thirst*) ದಾಹಶಾಂತಿಪಡಿಸ, ನೀರಡಿಕೆತೀರಿಸ.

To Thirst, or be Thirsty, v. n. ನೀರಡಿಕೆಯಾಗ, ದಾಹವಾಗ, ನೀರಡಿಸ.

Thirstiness, s. n. ನೀರಡಿಕೆ, ದಾಹವು.

Thirsty, a. ನೀರಡಿಕೆಯ, ದಾಹದ; (*blood thirsty*) ಬ್ರಹ್ಮದ್ವೇಷಿಯ, ರಕ್ತಪ್ರಿಯವುಳ್ಳ, ಕ್ರೂರವಾದ; (*a blood thirsty tyrant*) ಬ್ರಹ್ಮದ್ವೇಷಿಹೋರ, ಜೀವದಂಡಿಗ, ಪ್ರಾಣದಂಡಿಗ.

Thirteen, s. n. ಹದಿಮೂರು.

Thirteenth, a. ಹದಿಮೂರನೆಯ.

Thirty, a. ಮೂವತ್ತು.

Thirtieth, a. ಮೂವತ್ತನೆಯ.

This, pro. (*dem.*) ಇದು; (*in comp.*) ಈ; (*this and that*) ಇದು, ಅದು; (*this day*) ಈಹೊತ್ತು, ಇಂದು; (*this night*) ಇಂದಿನರಾತ್ರಿ; (*this world*) ಈಭೂಲೋಕ, ಈಜಗತ್ತು, ಈಭೂಮಿ; (*this and the other world*) ಇಹವುಪರವು.

Thistle, s. n. (*the jamaica yellow thistle, argemone mexicana*) ಬ್ರಹ್ಮದಂಡೆ.

Thither, Thitherward, ad. ಅಲ್ಲಿಗೆ.

Thong, s. n. ಬಾರು. v. *Strap.*

Thorn, s. n. ಮುಳ್ಳು; (*a dry thorn*) ಒಣಗಿದಮುಳ್ಳು; (*a thorn hedge*) ಮುಳ್ಳಿನಬಾರು; (*thorn apple*) ಕಾಡುಲಾಪುಷ್ಪ, ಮದ್ದುಗಣಿಕೆ, ದತ್ತೂರಿಗಿಡ; (*to fence a wall, &c. with thorns*) ಬೇಲಿಕಟ್ಟು; (*an instrument for cutting thorns*) ಗುದ್ಲಿ.

Thorny, a. ಮುಳ್ಳಿನ.

Thorough, a. ಹಾಯಿಕೆ. v. *Through.* (*complete*) ಪೂರ್ತಿಯಾದ, ತೀರ. v. *Perfect.*

Thoroughfare, s. n. ಪಥ, ದಾರಿ, ಹಾದಿ, ಮಾರ್ಗ, ಘಾಟಿ, ಬಟ್ಟೆ. v. *Passage, pass.*

Thoroughly, ad. ಪೂರ್ತಿಯಾಗಿ, ಪೂರ್ಣವಾಗಿ, ತೀರಾಗಿ. v. *Completely, perfectly.*

Those, pro. *(dem.) (neut.)* ಅವು, ಅವುಗಳು; *(mas. and fem.)* ಅವರು, ಅವರುಗಳು; *(of those, neut.)* ಅವುಗಳಲ್ಲಿ; *(mas. and fem.)* ಅವರಲ್ಲಿ.

Thou, pro. ನೀನು.

Though, Although, ad. ಆದರೂ, ಆಸ್ತ್ಯ. v. *Nevertheless, notwithstanding.*

Thought, s. n. ನೆನಪು, ನೆನವು, ನೆಪ್ಪು, ನೆನಿಪೆ, ಚಿಂತ್ರೆ. v. *Reflection, contemplation, meditation, conception, opinion, judgment, conjecture, suspicion, sentiment, imagination, fancy*; also *intention, purpose, design, care, solicitude. (attention, concern)* ಜಾಗ್ರತೆ, ಎಚ್ಚರವು; *(a bad thought)* ಕುಚ್ಚುನೆನಪು, ಕುಚ್ಚಾಲೋಚನೆ; *(a good thought)* ಒಳ್ಳೆಯೋಚನೆ, ಸುಯೋಚನೆ; *(to be lost in thought)* ಪರವಶವಾಗಿರ, ಮೈಮರೆಯ; *(as quick as thought)* ಮನೋವೇಗವಾಗಿ.

Thoughtful, a. ಆಲೋಚನೆಯ, ಧ್ಯಾನದ. v. *Contemplative*; also *careful, attentive, anxious, solicitous.*

Thoughtfully, ad. ಯೋಚನೆಯಾಗಿ, ಮನಲಶ್ರಾಗಿ.

Thoughtfulness, s. n. ಚಿಂತ್ರೆ, ಆಲೋಚನೆಪರತ್ವ. v. *Thought, anxiety.*

Thoughtless, a. ನಿಶ್ಚಿಂತ್ರೆಯ, ಅಜಾಗ್ರತೆಯ, ಆಲೋಚನೆಯಿಲ್ಲದ.

Thoughtlessly, ad. ನಿಶ್ಚಿಂತ್ರೆಯಾಗಿ, ಅಜಾಗ್ರತೆಯಾಗಿ, ಎಚ್ಚರಿಕೆಯಿಲ್ಲದೆ.

Thoughtlessness, s. n. ನಿಶ್ಚಿಂತ್ರೆಯು, ಅಜಾಗ್ರತೆವು. v. *Carelessness.*

Thousand, s. n. ಸಾವಿರ, ಸಹಸ್ರ; *(a thousand-fold)* ಸಹಸ್ರದಷ್ಟು; *(a thousand years)* ಸಾವಿರವರುಷ, ಸಹಸ್ರಸಂವತ್ಸರ; *(ten thousand)* ಹತ್ತುಸಾವಿರ; *(a thousand thousand)* ಸಾವಿರಸಾವಿರ, ಸಹಸ್ರಸಹಸ್ರ; *(many thousands)* ಅನೇಕಸಾವಿರ, ಅನೇಕಸಹಸ್ರ.

Thousandth, a. ಸಾವಿರದ.

Thral, Thraldom, s. n. ಗುಲಾಮತನ, ಬಂದಾಖೋರತನ, ಬಾದಿತನ. v. *Slavery, servitude.*

To Thrash, v. a. ಹೊಡೆಯ, ಬಡಿಯ. v. *To beat. (to thrash corn)* ಧಾನ್ಯತುಳಿಸ, ತೆನೆತುಳಿಸ; *(a thrasher of corn)* ತೆನೆತುಳಿಸುವವ; *(a thrashing floor)* ತೆನೆತುಳಿಸುವಸ್ಥಳ, ಕಣ.

Thrashed, part. *(as corn)* ತುಳಿಶಿದ.

Thread, s. n. ಧಾರ, ಎಳೆ; *(a long thread for weaving)* ಉಂಕೆಯೆಳೆ ಕಿಚ್ಚಾಡೆಳೆ, ಹುರಿಯೆಳೆ; *(gold thread)* ಜರತಾರು; *(a single thread, not of many plies)* ಒಂಟಿಎಳೆ, ಏಕತಾರಿ; *(a thread of two plies)* ಜೋಡೆಳೆ; *(a thread of three plies)* ಮುಪ್ಪುರಿಯೆಳೆ, ಹೊಸೆದಧಾರ; *(a thread of silk)* ರೇಶಿಮೆ, ರೇಶಿಮೆಧಾರ; *(a cotton thread)* ಹತ್ತಿಧಾರ; *(spinned thread)* ಕಕ್ಕದಿ ಧಾರ; *(to spin thread)* ಧಾರನೂಲ; *(a seller of thread)* ಶೇಳುಮಾರುವವ; *(weak thread)*

ಪಿಸಿಧಾರ; *(rotten thread)* ಚೊಳ್ಳೆರೆಧಾರ; *(strong thread)* ಬಲವಾದಧಾರ, ಬಲವಾದನೂಲು; *(twisted thread prepared for sewing)* ಹುರಿನೂಲು, ಹೊಸೆದಧಾರ; *(waxing thread)* ಮೇಣಾಕ್ಷೀಹುವದು.

To Thread, v. a. *(pearls, beads, &c.)* ಪೋಣಿಸು; *(to thread a needle)* ಸೂಜಿಕಣ್ಣಿನಲ್ಲಿ ಧಾರಪೋಣಿಸು.

Threadbare, a. ದುಸ್ತುಹೋದ, ಯಳೆವಡದ, ಹುಂಡುಹೋದ. v. *Worn, bare; trite. (a threadbare garment)* ದುಸ್ತುಹೋದಬಟ್ಟೆ, ಯಳೆವಡದಬಟ್ಟೆ, ಹುಂಡುಹೋದಬಟ್ಟೆ.

Threat, s. n. ಬೆದರಿಕೆ, ಗದರಿಕೆ, ಜೆದರಿಕೆ.

To Threaten, v. a. ಬೆದರಿಸು, ಗದರಿಸು, ಜೆದರಿಸು, ಭಯಪಡಿಸು. v. *To terrify.*

Threatened, part. ಬೆದರಿಸಪಟ್ಟ, ಗದರಿಸಿದ, ಜೆದರಿಸಿದ, ಭಯಪಟ್ಟ.

Threatener, s. n. ಬೆದರಿಸುವವ, ಜೆದರಿಸುವವ, ಗದರಿಸುವವ.

Threatening, a. ಬೆದರಿಸುವ, ಗದರಿಸುವ, ಜೆದರಿಸುವ; *(a threatening answer)* ಗದರಿಸುವಉತ್ತರವು; *(a threatening letter)* ಭಯಪಡಿಸುವಕಾಗದ, ಬೆದರಿಸುವಕಾಗದ.

Threateningly, ad. ಬೆದರಿಕೆಯಾಗಿ, ಜೆದರಿಕೆಯಾಗಿ.

Three, s. n. ಮೂರು, ತ್ರಯ; *(one of three)* ಮೂರರಲ್ಲೊಂದು; *(threefold)* ಮೂರಷ್ಟು; *(threescore)* ಅರವತ್ತು; *(three persons)* ಮೂವರು, ಮೂರುಮಂದಿ; *(three days)* ಮೂರುದಿವಸ, ತ್ರಿದಿನ; *(in threes)* ಮೂರುಮೂರಾಗಿ.

Threshold, s. n. ಹೊಸ್ತಿಲು, ದೇಹಳಿ, ಹೊಸ್ತಿಲು, ಹೊಸಂತಿಲು, ಪ್ರದಾವಪ್ರದೇಶ.

Thrice, ad. ಮೂರುಸರ್ತಿ, ಮೂರುಬಾರಿ.

Thrift, Thriftiness, s. n. *(gain, profit, advantage)* ಆದಾಯವು, ಲಾಭವು, ಸಂಭಾವು; *(frugality)* ಮಿತಿ, ಮಟ್ಟು, ಉಳ್ಳುತನ, ಜಾಗ್ರತನ, ಕಟ್ಟು, ಗೃಹಕತನ.

Thriftily, ad. ಮಟ್ಟಾಗಿ, ಮಿತಿಯಾಗಿ, ಕಟ್ಟಾಗಿ.

Thrifty, a. ಮಿತಿಯ, ಮಟ್ಟಾದ, ಕಟ್ಟಾದ.

To Thrill, v. a. ಬೈರಂಗಿಯಿಡಿಯ, ತೂತುಮಾಡು. v. *To drill, pierce, bore.*

To Thrive, v. n. *(as a plant)* ಸಪ್ಪನೆಯಾಗು, ಜುವ್ವನೆಯಾಗು, ಕಬಾಯವಾಗಿಯಾಗು, ಮಿಳಿರು; *(to prosper)* ಶ್ರೀಕೂಡಿಬರು, ದೈವಸಹಾಯವಾಗಿರು, ಸುಖವಾಗು, ಜಯವಾಗು.

Thriver, s. n. ದೈವಸಹಾಯಹೊಂದಿದವ, ಬೆಳೆಯುವವ, ಶಲೆಯತ್ತುವವ, ಮುಂದಕ್ಕೆಬರುವವ.

Thriving, a. ನಡವಳಿಕೆಯುಳ್ಳ, ವರ್ಧಿಷ್ಣು, ಪುಷ್ಟಳಿಯಾದ, ಸುಖವಾದ, ಇಷ್ಟಾರ್ಥಸಿದ್ಧಿಯಾದ, ಮಂಗಳವಾದ. v. *Prosperous.*

Throat, s. n. ಗಂಟಲು, ಕಂಠ, ಗಳ, ಕೊರಳು, ಗೋಣು, ಸುತ್ತಿಗೆ; *(the fauces)* ಕಂಠದಮುಖ; *(the windpipe)* ಗಂಟಲಕೊಳವೆ, ಗೋಮಾಳೆ. v. *Gullet. (to cut the throat)* ಕುತ್ತಿಗೆಕೊಯ್ಯು; *(a cut throat)* ಆತ್ಮಘಾತುಕ, ಪ್ರಾಣಹಿಂಸಕ.

To Throb, v. n. ಬಿಕ್ಕಿಬಿಕ್ಕಿಅಳು, ಸಕ್ಕಹಿಡಿದುಅಳು. v. *To palpitate.*

Throb, s. n. ಸಕ್ಕಹಿಡಿಕೆ, ಬಿಕ್ಕು, ಬಿಕ್ಕಿಯಳುವಿಕೆ.

Throe, s. n. *(pain of child bearing)* ಬೇನೆ, ಪ್ರಸೂತಿವೇದನೆ.

Throne, s. n. ಸಿಂಹಾಸನ, ಆಸನ, ಗದ್ದಿಗೆ, ಟಿಪ್ಪಣೆ, ಪಟ್ಟವಣೆ, ಸದರು; *(a royal throne)* ರಾಜಸಿಂಹಾಸನ; *(the glorious throne)* ಮಹಿಮೆಯಾದ ಸಿಂಹಾಸನ; *(sitting on a throne, reigning)* ಆಳುವಿಕೆ; *(to sit on a throne)* ಸಿಂಹಾಸನದಮೇಲೆಕುಳ್ಳಿರು; *(to reign)* ಆಳು; *(to mount the throne)* ಪಟ್ಟಾಭಿಷೇಕವಾಗು; *(to abdicate the throne)* ರಾಜ್ಯಭಾರವನ್ನು ಪರಿತ್ಯಜಿಸು; *(to depose from a throne)* ಪಟ್ಟಾಕೀಳು, ಕಿತ್ತುಹಾಕು.

To Throne, v. a. ಸಿಂಹಾಸನದಮೇಲೆಕುಳ್ಳಿರಿಸು. v. *To enthrone.*

Throng, s. n. ಜಂಗುಳಿ, ಗುಂಪು, ಸ್ತೋಮ, ಸಂಘ, ಸಮೂಹ. v. *Crowd.*

To Throng, v. n. ನೂಕಿಕೊಂಡುಹೋಗು, ದೊಬ್ಬಿಕೊಂಡುಹೋಗು, ನೂಕು, ದೊಬ್ಬು, ಮಂದಿಹೆಚ್ಚಾಗು. v. *To crowd.* *(a place thronged with people)* ಇಡುಕಾದಸ್ಥಳ, ಮಂದಿಹೆಚ್ಚಾದುದು, ಇಟ್ಟಳು, ಸಂದಣಿ.

Throttle, s. n. ಗಂಟ್ಲಿಕೊಳವಿ. v. *Windpipe.*

To Throttle, v. a. ಕುತ್ತಿಗೆಹಿಸುಕು, ಗೋಮಾಳೆ ಮುರಿಯು. v. *To choak.*

Through, ad. *(from side to side, or end to end)* ಹಾಯಿಕೆ, ಕಡೆಗೆಕಡೆಗೆ; *(by means of, through that)* ಅದರನಿಮಿತ್ತ, ಅದಕ್ಕೋಸರ; *(to pass through)* ಹಾದುಹೋಗು; *(to pass through the town)* ಊರುಹಾದುಹೋಗು; *(to pass through a river)* ನದೀದಾಟು, ನದೀಹಾಯು; *(through me)* ನನ್ನಿಂದ, ನನ್ನನಿಮಿತ್ತ, ನನ್ನಮುಖಾಂತ್ರವಾಗಿ; *(to perish through famine)* ಹಸಿವಿಯಲ್ಲಿಸಾಯು, ಹೊಟ್ಟೆಯಿಲ್ಲದೆಸಾಯು; *(through the whole year)* ವರುಷವೆಲ್ಲಾದರಲ್ಲಿ, ಸಂವತ್ಸರವೆಲ್ಲಾದರಲ್ಲಿ; *(to run through with a sword)* ತಿರಾಯು, ತಿವಿಯು, ಹಾದುತಿವಿಯು; *(to dig through walls, rocks, &c.)* ಕನ್ನವಿಡು, ಡೊಗರುಮಾಡು; I am wet *through* ತೊಪ್ಪತೋಯಿದೆನು, or ನಾನು ತೋದುಮುದ್ದೆಯಾದೆನು.

Throughout, ad. ಪೂರಾಗಿ, ತೀರಾಗಿ.

To Throw, v. a. ಒಗೆಯು, ಎಸೆಯು, ಬಿಸುಡು, ಬಿಸಾಡು, ಬಿಸಾಟುಬಿಡು. v. *To shoot, dart, hurl, fling, cast.* *(to throw stones)* ಕಲ್ಲೆಸೆಯು; *(to throw stones at a dog)* ನಾಯಿಗೆಕಲ್ಲೆಸೆಯು, ನಾಯಿಗೆಕಲ್ಲೊಗೆಯು; *(to cause to throw)* ಒಗಿಸು, ಎಸಿಸು, ಒಗಿಸು, ಎಸೀಸು; *(to throw away)* ಬಿಸಾಟುಬಿಡು. v. *To reject.* *(to throw by)* ಅತ್ತಿರಿಡು, ಎಡೆಮಾಗಿಡು, ಇಂಬಾಗಿಡು; *(to throw down)* ಕೆಡವು, ಕೆಳಗೆಹಾಕು, ನೆಲಕ್ಕೆಕೆಡವು; *(overturn)* ನಿರ್ಮೂಲಮಾಡು, ಹಾಳುಮಾಡು, ಕಿತ್ತುಹಾಕು, ನಾಶನಮಾಡು. v. *To subvert, demolish, overthrow.* *(to throw one on another)* ಒಂದೊಂದರಮೇಲೆಹಾಕು; *(to throw forward)* ಮುಂದಕ್ಕೆಹಾಕು; *(to throw one's-self into danger)* ಅಂಗೀಜುಮಾಡು, ಆಶೆತೊರೆಯು, ಗಂಡಾಂತ್ರಕ್ಕೆಹೋಗು; *(to throw out, leave behind, distance)* ಹಿಂದಕ್ಕೆಹಾಕು. v. *To outstrip, surpass.* *(to throw up, leave, quit)* ನಾಶಮಾಡಿಕ್ಕೊಳ್ಳು, ಬಿ

ಟ್ಟುಬಿಡು. v. *To resign*; also *to vomit*. (*to throw, in wrestling*) ಕೆಡವು, ನೆಲಕ್ಕೆಕೆಡವು; (*to throw a spear*) ಸಾಂಗಂಪವಗಿಯು. v. *To dart*. (*to throw into prison*) ಕಾರಾಗೃಹದಲ್ಲಿಡು, ಸೆರೆಮನೆಯಲ್ಲಿಹಾಕು, ಪಹರೆದಲ್ಲಿಯಿಡು. v. *To imprison*. (*to throw in*) ಒಳಗೆಹಾಕು; (*to throw off clothes*) ಬಟ್ಟೆಗಳುಬಿಚ್ಚಿಹಾಕು; (*to throw together*) ಕೂಡಿಸು, ಕೂಟಿಮಾಡು; (*to throw lots*) ಚೀಟಿಹಾಕು; (*to throw all about*) ಚೆಲ್ಲಾಬಿಲ್ಲಿಮಾಡು; He *threw* his cloak about his shoulders ಅವನುಅಂಗವಸ್ತ್ರವವಲ್ಲೆವಾಟಿಹಾಕಿಕೊಂಡನು; He has *thrown* up his office ಅವನುತನ್ನಉದ್ಯೋಗವನ್ನುಸಾಕುಮಾಡಿಕೊಂಡ, or ಅವನುತನಕೆಲಸವನ್ನುಬಿಟ್ಟ; He *threw* words of contempt ಅವನುನಿಸ್ಸಾರವಾದಮಾತುಗಳನ್ನುಹೇಳಿದನು; He *threw* himself upon his bed ಅವನುತನ್ನಹಾಸಿಗೆಮೇಲೆಒರಗಿಕೊಂಡನು; (*to throw into one's teeth*) ಹಂಗಿಸು.

Throw, s. n. ಒಗವಿಕೆ, ಎಸೆಯುವಿಕೆ. v. Also *throe*. (*a throw at dice*) ಕೆತ್ರಹಾಕುವಿಕೆ; (*a fortunate throw*) ಡೆಳಿರುಗುವಿಕೆ, ಪಂದೆಬೀಳುವಿಕೆ.

Thrower, s. n. ಒಗಿಯುವವ, ಎಸೆಯುವವ, ಬಿಸಾಡುವವ.

Throwing, s. n. ಒಗಿಯುವದು, ಎಸೆಯೋದು, ಬಿಸಾಡುವದು.

Thrown, part. ಒಗೆದ, ಎಸೆದ, ಬಿಸಾಡಿದ.

Thrush, s. n. (*a disease*) ಮುಳ್ಳೆರು.

To Thrust, v. a. ದೊಬ್ಬು, ನೂಕು, ಒತ್ತು v. *To push, drive, shove, force*. (*to thrust with a sword*) ತಿವಿಯು, ಚುಚ್ಚು; (*to thrust one's self in*) ಮುಂದಕ್ಕೆದೊಬ್ಬು, ಉಬಾಯಿಸು.

Thrust, s. n. ದೊಬ್ಬಿಕೆ, ಹಾಯುವಿಕೆ. v. *Push*. (*a thrust with a sword*) ತಿವಿಕೆ, ಚುಚ್ಚುವಿಕೆ.

Thumb, s. n. ಹೆಬ್ಬೆರಳು, ಹೆಬ್ಬಟ್ಟು.

Thump, s. n. ಡಿಚ್ಚಿ, ಗುದ್ದು. v. *Blow*.

To Thump, v. a. ಡಿಚ್ಚಿಕೊಡು, ಒಡೆಯು; (*with the fist*) ಗುದ್ದು, ಹೊಡೆಯು, ಗುಂಮ್ಮು, ಕುಟ್ಟು.

Thunder, s. n. ಗುಡುಗು, ಮೊಳಗು, ಮುಗಿಲದನಿಯು, ಸ್ತನಿತ, ಘರ್ಜಿತ, ಮೇಘ, ನಿರ್ಘೋಷ, ರಸಿತ; (*a thunder-bolt, a thunder-stone*) ಸಿಡಿಲು; (*the noise of thunder*) ಗುಡುಗುಡಾಯಮಾನ, ಚಟಚಟಾಯಮಾನ, ಗರ್ಜಿತ; (*thunder-struck, amazed*) ಭ್ರಮೆಗೊಂಡ, ಭಯಂಕರಪಟ್ಟ; (*a thunder-clap*) ಗುಡುಗಿನರಭಸ, ತಡಾಖೆ, ಸ್ಫೂರ್ಜಥು, ವಜ್ರನಿರ್ಘೋಷ.

To Thunder, v. n. ಗುಡುಗು; (*a thunder-cloud*) ಗುಡುಗಿನಮೋಡ, ಸಿಡ್ಲುಮಿಂಚಿನಮೇಘ.

Thursday, s. n. ಬ್ರಹಸ್ಪತಿವಾರ, ಗುರುವಾರ.

Thus, pro. (*proximate*) ಹೀಗೆ, ಹೀಂಗೆ, ಈಬಗೆಯಾಗಿ, ಈರೀತಿಯಾಗಿ, ಈವಿಧವಾಗಿ; (*remote*) ಹಾಂಗೆ, ಹಾಗೆ, ಆಪ್ರಕಾರ; (*thus and thus*) ಹೀಗೆಹೀಗೆ; (*thus much*) ಇಷ್ಟು; (*thus far*) ಇಲ್ಲಿಪರಿಯಂತ್ರ, ಇಷ್ಟುದೂರ, ಈವರಿಗೂ; (*thus much for that*) ಅದಕ್ಕೆಅಷ್ಟು; (*thus much for this time*) ಈವೈಳ್ಯೆಗೆಯಿಷ್ಟುಸಾಕು.

Thwack, v. *Thump, blow*.

To Thwack, v. *To strike*.

To Thwart, v. a. (*cross, vex*) ಅಡ್ಡಂತ್ರಿಸು,

ಅಟಕಾಯಿಸು, ಅಡ್ಡಿಮಾಡು, ಆತಂಕಿಸು, ಎದುರಾಡು, ಪ್ರತಿಕೂಲಿಸು. v. *To oppose, contradict.*

Thwart, a. ಆತಂಕದ, ಅಭ್ಯಂತರದ, ಅಡ್ಡಬರುವ, ಅಡ್ಡಸಾಲಿನ.

Thwartingly, ad. ಆತಂಕವಾಗಿ, ಅಭ್ಯಂತರವಾಗಿ, ಅಟಕಾವಾಗಿ, ಅಡ್ಡಿಯಾಗಿ, ಅಡ್ಡಸಾಲಾಗಿ.

Thy, pro. ನಿನ್ನ; *Thy* name ನಿನ್ನಹೆಸರು; *Thyself* ನಿನಗೆನೀನೆ, ನಿನ್ನಷ್ಟಕ್ಕೆನೀನೆ.

Tiara, s. n. ಕಿರೀಟ, ತುರಾಯಿ, ಮಕುಟ.

Tick, s. n. (*of a watch*) ಘಡಿಯಾರದ ಶಬ್ದ.

Tick, s. n. (*score, debt*) ಸಾಲ, ಋಣ; (*to go tick*) ಸಾಲಮಾಡು, ಋಣಮಾಡು. v. *To get into debt.*

Tick, s. n. (*a bed case*) ಗಾಸಗಿಕೆ.

Tick, s. n. (*a louse which infests sheep and other animals*) ಹೇನು, ಉಣ್ಣೆ. The varieties are ಅಂಟುಣ್ಣೆ, ಸೋಮಾರಿ, ಹಾಲುಣ್ಣೆ, ಅಂಬಾರುಣ್ಣೆ; (*an animal infested with ticks*) ಉಣ್ಣೆಹತ್ತಿದದನು, ಸೋಮಾರಿಹಿಡಿದದನು.

Ticket, s. n. ಚೀಟು.

To Tickle, v. a. ಚಕ್ಕಲುಗುಳ್ಳಿಡು, ಅಲ್ಲೀಪುಚ್ಚು; (*to tickle the fancy*) ಮೆಚ್ಚಿಸು, ಸಂಮತಪಡಿಸು, ಸಂತೋಷಪಡಿಸು. v. *To please.*

Ticklish, a. (*sensible to tickling, easily tickled*) ಅಲ್ಲೆ; (*tottering, unfixed*) ಚಂಚಲದ, ಚಪಲದ, ಸ್ಥಿರವಿಲ್ಲದ. v. *Inconstant, capricious, whimsical, hazardous.*

Ticklishness, s. n. ಚಪಲತನ, ಚಂಚಲತನ. v. *Uncertainty, inconstancy.*

Tide, s. n. (*of the sea*) ಏರುವಿಕೆ, ಇಳಿತ, ತಗ್ಗುವಿಕೆ, ಹೆಚ್ಚುವಿಕೆ, ಏಗುಮದಿ; (*flux and reflux of the tide*) ಉಬ್ಬುವದು, ತಗ್ಗುವದು; (*turning of the tide*) ಮರಳಿಕೆ, ತಿರುಗುವಿಕೆ; (*ebb tide*) ಇಳಿವಿಕೆ; (*flood tide*) ಏರುವಿಕೆ; (*a leeward tide*) ಗಾಳಿಗೆದುರಾಗಿನೀರುಹೋಗುವದು; (*a windward tide*) ಗಾಳೀನೀರುಸಹಾಯವಾಗಿಹೋಗುವದು; (*tides of people*) ಜಂಗುಳಿಜನ, ವಿಸ್ತಾರಜನ; (*evening tide*) ಸಾಯಂಕಾಲ. v. *Ebb, flow*; also *time, season, flood, stream, course.*

Tidiness, s. n. ಸೊಬಗು, ಸೊಗಸು, ನೀಟು.

Tidy, a. ನೆಟ್ಟಗೆ, ಸೊಗಸಿನ, ನೀಟಾದ, ಸೊಬಗಿನ. v. *Neat.*

Tidings, s. n. ಸಮಾಚಾರ, ವರ್ತಮಾನ, ಖಬರು, ಸುದ್ದಿ, ವದಂತಿ, ವಾರ್ತೆ, ಪ್ರವೃತ್ತಿ, ವೃತ್ತಾಂತ, ಉದಂತ. v. *News.* (*good tidings, joyful tidings*) ಶುಭಸಮಾಚಾರ, ಒಳ್ಳೇಸುದ್ದಿ, ಶುಭವಾರ್ತೆ, ಸುವಿಶೇಷ; (*evil tidings, sorrowful tidings*) ಕೆಟ್ಟಸಮಾಚಾರ, ಅಶುಭಸಮಾಚಾರ, ದುಃಖದವಾರ್ತೆ.

To Tie, v. a. ಕಟ್ಟು, ನಿರ್ಬಂಧಮಾಡು. v. *To bind, fasten, knit, hold.* (*to constrain, oblige*) ಕಡ್ಡಾಯಮಾಡು, ಬಲವಂತ್ರಮಾಡು; (*to restrain, confine*) ಬಂಧಿಸು.

Tie, s. n. (*knot*) ಗಂಟು; (*to tie a knot*) ಗಂಟುಕಟ್ಟು; (*bond, obligation*) ಪ್ರತಿಜ್ಞಾಪತ್ರಿಕೆ.

Tier, s. n. ತರ, ಸಾಲು. v. *Row, range, rank.*

Tiff, s. n. ಸಿಟ್ಟು, ಬಿಗುಡಾಯಿಕೆ; (*to take a tiff*) ಸಿಟ್ಟುಮಾಡು, ಬಿಗುಡಾಯಿಸು.

Tiffing, s. n. ಮಧ್ಯಾಹ್ನಭೋಜನ.

Tiger, s. n. ಹುಲಿ, ವ್ಯಾಘ್ರ, ಶಾರ್ದೂಲ; *(a royal tiger)* ಹೆಬ್ಬುಲಿ, ಪೆರ್ಬುಲಿ; *(the dried skin of a tiger)* ಕಡಾಸ; *(a tiger's den)* ಗವಿ, ಗುಹೆ, ಡೊಂಗರ.

Tigress, s. n. ಹೆಣ್ಣುಹುಲಿ, ಶಾರ್ದೂಲಿ.

Tight, a. *(tense, stretched, drawn)* ಬಿಗಿ, ಪಿಕ್ಕಟೆ, ಬಿಗಿತ, ಬಿಡುಸಾದುದು, ಬಿರು, ಬೆಟ್ಟಿರು.

To Tighten, v. a. *(make tense)* ಬಿಗಿಯಮಾಡು.

Tightly, ad. *(tensely)* ಬಿಗಿಯಾಗಿ, ಪಿಕ್ಕಟೆವಾಗಿ.

Tightness, s. n. ಬಿಗುವು.

Tile, s. n. ಹಂಚು; *(covered with tiles)* ಹಂಚುಹಾಕಿದ, ಹಂಚುಹೊದ್ದಿಸಿದ, *(a broken tile)* ಓಡು, ಬೋಕಿಹಂಚು.

To Tile, v. a. ಹಂಚುಹಾಕು, ಹಂಚುಯಿಡು.

Tiler, s. n. ಹಂಚುಹಾಕುವವ.

Till, Until, ad. ವರಿಗೂ, ಪರಿಯಂತರ, ಮಟ್ಟಿಗೂ; *(till when?)* ಎಷ್ಟುಪರ್ಯಂತರ, ಯಾವಪರ್ಯಂತರ; *(till this time, till now)* ಇಷ್ಟುಪರ್ಯಂತರ, ಈಪರಿಯಂತರ; *(till that time, till then)* ಆವರಿಗೂ, ಆಪರಿಯಂತರಕ್ಕೂ; *(till this day)* ಇಂದಿನವರಿಗೂ, ಈವರಿಗೂ; *(till the end of time)* ಜಗತ್ತಿನಂತ್ಯದಮಟ್ಟಿಗೂ, ಲೋಕಾಂತ್ಯದವರಿಗೂ, ಕಲಿಯುಗಾಂತ್ಯದವರಿಗೂ.

To Till, v. a. ಹಸನುಮಾಡು, ಸಾಗುವಳಿಮಾಡು. v. *To plough, cultivate.*

Tillable, a. ಹಸನುಮಾಡತಕ್ಕ. v. *Arable.*

Tillage, s. n. ಸಾಗುವಳಿ, ವ್ಯವಸಾಯ, ಬೇವಸಾಯ, ಬೇಸಾಯ, ಕಂಮತ, ಕೃಷಿ, ಹಸನುಮಾಡ್ವಿಕೆ.

Tiller, s. n. ವ್ಯವಸಾಯದವ, ಬೇಸಾಯದವ, ಹಸನುಮಾಡುವವ, ರೈತನು.

Tilt, s. n. *(cover of a boat, &c.)* ಗುಬುರು, ಕೊಪ್ಪೆ, ಪಿಧಾನ, ಛಾದನೆ. v. Also *canopy, tent, thrust.* *(a tournament)* ಯುದ್ಧಸಾಧಕ; *(a tilt or tilting, a leaning on one side)* ವಾರೆ.

To Tilt, v. a. *(to cover with a tilt)* ಗುಬುರುಕಟ್ಟು, ಛಾಂದನೆಕಟ್ಟು; *(to tilt with lances, as at tournaments)* ಸಾಂಗಸಾಧಕಮಾಡು; *(to tilt or fight together with swords)* ಖಡ್ಗಸಾಧಕಮಾಡು, ಪಟ್ಟಾಸಾಧಕಮಾಡು; *(to tilt, lean or fall on one side)* ವರಗುದಿಯಾಗಿರು, ವಾಸರೆಯಾಗಿರು; *(to tilt a vessel)* ಪೀಪವರಗಿಸಿಯಿಡು.

Tilter, s. n. ಸಾಧಕಮಾಡುವವ. v. *Combatant.*

Timber, s. n. ಕಟ್ಟಿಗೆ, ತೊಲೆ, ಕಾಷ್ಟವು. v. *Wood.*

Timber-merchant, s. n. ಕಟ್ಟಿಗೆವರ್ತಕ; *(a place abounding in timber)* ಮಲೆ, ಮಲೆನಾಡು; *(timber or wood for firing)* ಸವುದೆ, ಅಡುಕಬ್ಬು, ಕಟ್ಟಿಗೆ, ಚಕ್ಕೆ; *(a piece of timber)* ತೊಲೆ, ತೊಲೆತುಂಡು; *(a float of timber)* ತೆಪ್ಪ; *(seasoned timber)* ಮಾಗಿದತೊಲೆ; *(unseasoned timber)* ಮಾಗದತೊಲೆ, ಹಸಿಯತೊಲೆ.

Timbrel, s. n. ದಂಮಟೆ.

Time, s. n. ವೇಳ್ಯ, ಕಾಲ, ಸಮಯ, ದಿಷ್ಟ, ಅಹೋರಸ್ಸು; *(time present)* ವರ್ತಮಾನಕಾಲ, ಈಗನಡಿವವ್ಯಾಳೆ; *(time past)* ಗತಕಾಲ, ಭೂತಕಾಲ, ಹೋದಕಾಲ; *(time to come, time future)* ಭವಿಷ್ಯತ್ಕಾಲ, ಬರುವಕಾಲ; *(in former times)* ಪೂರ್ವದಲ್ಲಿ, ಪೂರ್ವಕಾಲದಲ್ಲಿ.

v. *Formerly.* (*seed time*) ಬಿತ್ತುವಕಾಲ; (*harvest time*) ಸುಗ್ಗಿಕಾಲ; (*in good time*) ತಕ್ಕಕಾಲ, ತಕ್ಕವ್ಯಾಳ್ಯ. v. *Seasonably.* (*from time to time, at times*) ವ್ಯಾಳ್ಯವ್ಯಾಳ್ಯಕೆ, ಒಂದಾನೊಂದುವ್ಯಾಳ್ಯ. v. *Sometimes.* (*that time*) ಆವ್ಯಾಳ್ಯ, ಆಸಮಯ. v. *Then.* (*at no time*) ಎಂದಿಗುಯಿಲ್ಲ, ಯಾವಾಗ್ಯುಯಿಲ್ಲ. v. *Never.* (*in time of necessity*) ಇಕ್ಕಟ್ಟಿನವ್ಯಾಳ್ಯದಲ್ಲಿ, ಕಷ್ಟದವ್ಯಾಳ್ಯದಲ್ಲಿ; (*out of time*) ಅಕಾಲದ; (*in the morning time*) ಬೆಳಗಿನವ್ಯಾಳ್ಯದಲ್ಲಿ, ಮುಂಝಾನೆ; (*in the evening time*) ಸಾಯಂಕಾಲದವ್ಯಾಳ್ಯದಲ್ಲಿ, ಸಂಜೇನಾಗ; (*a long time*) ಬಹುಕಾಲ, ಬಹಳದಿನ, ಬಹಳಹೊತ್ತು, ಬಹಳವ್ಯಾಳ್ಯ; (*a short time*) ಸ್ವಲ್ಪಕಾಲ, ಸ್ವಲ್ಪದಿನ, ಸ್ವಲ್ಪವೇಳ್ಯ, ಸ್ವಲ್ಪಹೊತ್ತು; (*in a short time*) ಸ್ವಲ್ಪಕಾಲದಲ್ಲಿ, ಸ್ವಲ್ಪದಿನದಲ್ಲಿ, ಸ್ವಲ್ಪವ್ಯಾಳ್ಯಯೊಳು. v. *Soon.* (*at all times*) ಯಾವಾಗಲು, ನಿತ್ಯ, ಎಂದಿಗು, ಸದಾ, ಸರ್ವದಾ. v. *Always.* (*in the time of peace*) ಸಮಾಧಾನದಕಾಲದಲ್ಲಿ, ಸುಖಸ್ಥಿತಿವ್ಯಾಳ್ಯದಲ್ಲಿ, ಸುರಕ್ಷಿತಕಾಲದಲ್ಲಿ, ನೆಮ್ಮದಿಯಾದಕಾಲದಲ್ಲಿ; (*in the time of war*) ಯುದ್ಧಕಾಲದಲ್ಲಿ, ಲಡಾಯಿವ್ಯಾಳ್ಯದಲ್ಲಿ; (*the injuries of time*) ಕಾಲಾನುಸಾರದ ಸಿಥಿಲತೆ, ಕಾಲಯಾಪನೆಯಿಂದ ಜೀರ್ಣತ್ವವು; (*at the time when this happened*) ಇದಾದವ್ಯಾಳ್ಯದಲ್ಲಿ, ಇದಾದಾಗ; (*the revolutions of time*) ಕಾಲತಿರುಗುವಿಕೆ, ಯುಗಪರಿವರ್ತನೆ; (*a length of time*) ದೀರ್ಘಕಾಲ, ಬಹಳದಿವಸ; (*in the time of youth*) ಚಿಕ್ಕತನದಲ್ಲಿ, ಚಿಕ್ಕಪ್ರಾಯದಲ್ಲಿ; (*life time*) ಜೀವಿಸುವಕಾಲ, ಪ್ರಾಣದಿಂದಿರುವಕಾಲ, ಬದುಕಿರುವಕಾಲ; (*restricted to any fixed time, for making payments*) ವಾಯಿದೆ, ಗಡವು; (*an appointed time*) ನೇಮಿಸಿದಕಾಲ; (*a convenient time*) ತಕ್ಕಸಮಯ, ಯುಕ್ತವಾದಕಾಲ; (*an evil time*) ಕೇಡುಕಾಲ, ದುಷ್ಕಾಲ; (*time, leisure*) ತೀರಿಕೆ, ಸಾವಕಾಶ. v. Also *interval, age;* (*three times a day*) ಒಂದುದಿವಸಕ್ಕೆಮೂರಾವರ್ತಿ, ದಿನಕ್ಕೆಮುಮ್ಮೆ; (*at any time*) ಯಾವಾಗಾದರು; (*one or two times*) ಒಂದೆರಡಾವರ್ತಿ, ಒಂದೆರಡುಸಾರಿ; (*in the mean time*) ಇಷ್ಟರಲ್ಲಿ; (*from this time forward*) ಇಂದಿನಿಂದಾ, ಈಹೊತ್ತುಮೊದಲುಕೊಂಡು, ಇನ್ನುಮೇಲೆ; (*one time or other*) ಯಾವಾಗಾದರು, ಒಂದಾನೊಂದುವೇಳ್ಯ; (*equal time in music and dance*) ಲಯ; (*beating time in music*) ತಾಳ; (*slow time*) ವಿಳಂಬಿತ, ತತ್ವ; (*quick time*) ದ್ರುತ, ಓಘ; (*mean time*) ಮಧ್ಯ, ಘನ.

To Time, v. a. ಸಮಯೋಚಿತನೋಡ, ವ್ಯಾಳ್ಯನೋಡ; (*ill timed*) ಅಸಂದರ್ಭಕಾಲವಾದ, ಅಕಾಲವಾದ. ಅವ್ಯಾಳ್ಯೆಯಾದ.

Timely, ad. ಸುಸಮಯವಾಗಿ, ಉಚಿತವ್ಯಾಳ್ಯೆಯಾಗಿ. v. *Seasonably.*

Timeserver, s. n. ಕಾಲಾನುಸಾರಿ, ಸ್ವಕಾರ್ಯನಿಮಿತ್ಯಕಾಲಾನುಸಾರಿ.

Timid, Timorous, a. ಭೀತಿಯ, ಭಯದ, ಅಂಜಿಕೆಯ, ಅಂಜುಬುರುಕತನದ, ಹ್ಯೋಬಿಯ; (*a timid person*) ಅಂಜುಕುಳಿ, ಅಳಿದವನು, ಸುಗದನು, ಭಿಮದರ್ನು, ಸುರಾಳನು. v. *Fearful, frightened, pusillanimous, cowardly.*

Timidity, Timorousness, s. n. ಅಂಜುಬುರಕತನ, ಅಂಜಿಕೆ, ಭಯ, ಭೀತಿ. v. *Fear, cowardice.*

Timidly, Timorously, ad. ಭೀತಿಯಿಂದಾಗಿ, ಅಂಜುಬುರಕತನವಾಗಿ, ಅಂಜಿಕೆಯಾಗಿ.

Tin, s. n. ತಗರುಪತ್ರ, ಸತ್ತಿನತಗಡು.

To Tin, v. a. ಕಲಾಯಿಮಾಡು.

Tinman, s. n. ತಗಡುಮಾಡುವವನು.

Tinned, part. ಕಲಾಯಿಮಾಡಿದ.

Tincture, Tinct, s. n. *(colour)* ಬಂಣ್ಣ, ವರ್ಣ; *(taste)* ರುಚಿ, ಸ್ವಾದು.

To Tincture, Tinge, v. a. ಬಂಣ್ಣಕಲಿಸು. v. *To die.* *(to imbue)* ಪ್ರೋಕ್ಷಿಸು, ಕಲಿಸು.

Tinder, s. n. ಚಕಮುಕಿಕರುಕು; *(a tinder box)* ಚಕಮುಕಿಪೆಟ್ಟಿಗೆ.

To Tingle, Tinkle, Tink, v. n. ಝಣಝಣಾಯಿಸು, ಘಲ್ಘಲ್ಲೆಯೆನು, ಘಣಘಣಾಯಿಸು, ಕಿಣಿಕಿಣಿಯೆನು; *(a tinkling in the ear)* ನಾದ, ಘಂಟಾನಾದ.

Tinsel, s. n. ಕಾಕಿಬಂಗಾರ; *(any thing shining with false or superficial lustre)* ಡಬ್ಬು, ವಣ್ಣಾಬೆಳಕು, ಡಾಲು.

To Tinsel, v. a. *(decorate with false lustre)* ವಣ್ಣಾಬೆಳಕುಮಾಡು, ಡಾಲುಮಾಡು, ಡಬ್ಬುಮಾಡು.

Tint, s. n. ಬಂಣ್ಣ, ವರ್ಣ. v. *Tincture, tinct.*

Tiny, a. ಸಂಣ್ಣ, ಕಿರಿದು, ಅಲ್ಪ, ಕೊಂಚ, ಲವ, ಅಣು. v. *Small.*

Tip, s. n. *(point, extremity)* ಮೊನೆ, ಕೊನೆ, ಅಗ್ರ; *(the tip of the nose)* ನಾಸಿಕಾಗ್ರ, ಮೂಗಿನ ತುಂಬು; *(to look at the tip of the nose)* ಮೂಗಿನ ಸರಿಯಾಗಿ ನೋಡು; *(the tip of the finger)* ಬೆರಳಿನ ತುದಿ, ಅಂಗುಳ್ಯಗ್ರ; *(the tip of a sword)* ಖಡ್ಗದ ಕೊನೆ.

To Tip, v. a. *(cover the point)* ಕುಪ್ಪೆಹಾಕು; *(to tip with a ferrule)* ಕಟ್ಟುಹಾಕು, ಅಣಸುಹಾಕು; *(to tip the wink)* ಕಟ್ಟಿ, ಸಂಜ್ಞೆಮಾಡು. v. *To wink*; also *to pat, tap.* *(to tip down)* ತಾಕಿಸು, ಕೆಡವು; *(to tip one a box on the ear)* ಕಪಾಳಕ್ಕೆ ಕುಟ್ಟು, ಕೆಂನೆಗೆ ಕುಟ್ಟು; *(to tip off, fall off from a table, &c.)* ಜಾರಿಬೀಳು, ಜರಕಿಬೀಳು; *(to die)* ಸತ್ತುಹೋಗು; *(to tip one's hands)* ಲಂಚಕೊಡು; *(to stand a tiptoe)* ತುದಿಗಾಲಲ್ಲಿ ನಿಂತಿರು, ತುದಿಗಾಲಲ್ಲಿ ನಿಂತುಕೊಳ್ಳು.

To Tipple, v. a. ಮದ್ಯಪಾನಮಾಡು, ಲಾಹರಿಯಾಗು, ಸುರಾಪಾನಮಾಡು. v. *To drink.*

Tipple, s. n. ಪಾನ, ಮದ್ಯಪಾನ, ಮದಿರಾಪಾನ. v. *Drink wine.*

Tippler, s. n. ಪಾನಧಾರಿ, ಮೊಟ್ಟುಮುಚ್ಚ, ಕುಡಿಯುವ, ನಿಶಾಧಾರ, ಜಂಡಬಾಕ. v. *Drunkard.*

Tipsy, a. ಲಾಹರಿಯಾದ, ಅಮಲೇರಿದ, ತಲೆಗೇರಿದ. v. *Drunk.*

Tiptoe, s. n. ತುದಿಬೆರಳು; *(to walk on tiptoe)* ತುದಿಬೆರಳಿನ ಮೇಲೆ ನಡೆಯು, ತುದಿಗಾಲಿನ ಮೇಲೆ ನಡೆಯು.

Tire, s. n. *(rank, row)* ಥರ, ಸಾಲು; *(head dress)* ಶಿರೋಭೂಷಣ, ಅಲಂಕಾರ. v. Also *attire, furniture, apparatus.*

To Tire, v. a. *(weary out)* ದಣಿಸು, ಉಸುರಣಿಸು,

ಬೇಸರಗೊಳಿಸು. v. *To fatigue, weary*; also *to attire, dress.* (*to become fatigued*) ದಣಿಯು, ಉಸ್ಸೆನು, ಆಯಾಸಪಡು, ಆಸರು, ಬೇಸರು, ಬಳಲು; I am *tired* of it ನನಗೆಬೇಸರಿಕೆಯಾಯಿತು, or ನಾನು ಬೇಳೆಸಿಕೊಂಡೆ, or ನನಗೆ ಬೇಳೆಸಿಕೆಯಾಯಿತು.

Tired, part. ದಣುವಾದ, ಆಯಾಸವಾದ.

Tiredness, s. n. ದಣುವು, ಆಯಾಸವು. v. *Fatigue.*

Tiresome, a. ಆಯಾಸದ, ಬೇಳೆಕೆಯಾಗುವ. v. *Fatiguing.*

Tiresomeness, s. n. ಬೇಸರಿಕೆ, ಬೇಳೆಕೆ. v. *Tediousness.*

Tirewoman, s. n. ಸಲ್ಲಾಯಿಕಾರಿ, ಸಂಚೆಗಿತ್ತಿ.

Tissue, s. n. (*gold or silver stuff*) ನಿರಾಜಿ, ಜರಿದಾರ್, ಜರಾರಿನ ಬಟ್ಟೆ, ಜರ್ತಾರಿನ ಶಲ್ಯ, ಛಾದರು.

To Tissue, v. a. ಜರ್ತಾರುಹಾಕಿನೈಯ್ಯು, ಜರೀಹಾಕಿನೈಯ್ಯು. v. *To interweave, variegate.*

Tit, s. n. (*small horse*) ಚಿಕ್ಕ ಕುದರೆ, ಠಟ್ಟುವು.

Tit for tat, s. n. ಬದಲಿಗೆಬದಲು, ಮುಯ್ಯಿಗೆಮುಯ್ಯಿ, ಮೋಟಿಗೆಮೋಟು, ದೆಬ್ಬೆಗೆದೆಬ್ಬೆ, ಪೆಟ್ಟಿಗೆ ಪೆಟ್ಟು.

Titbit, s. n. ರುಚಿಕರವಾದ ಭೋಜನ, ಸವಿಯಾದ ಭೋಜನ.

Tithe, s. n. ಹತ್ತರಲ್ಲೊಂದು.

Tithe gatherer, s. n. ಆಯತೆಗೆದುಕೊಳ್ಳುವವ; (*to collect tithes*) ಆಯಕೂಡಿಸು; (*to pay tithes*) ಹತ್ತರಲ್ಲೊಂದುಕೊಡು, ಆಯಕೊಡು.

To Titillate, v. a. ಚಕ್ಕಲಗುಳಿಡು. v. *To tickle.*

Titillation, s. n. ಚಕ್ಕಲಗುಳಿ.

Title, s. n. ಬಿರುದಾವಳಿ, ಅಲ್ಕಾಬು, ನಾಮ, ಖ್ಯಾತಿ; (*the titlepage of a book*) ತಲೆಹೆಸರು, ಕಾವ್ಯನಾಮದಹಾಳೆ, ಮೊದಲಹಾಳೆ; (*a claim of right*) ಹಕ್ಕು, ಸ್ವತ್ತು.

To Title, v. a. ಬಿರುದುಕೊಡು, ಹೆಸರುಕೊಡು, ಕರೆಯು; (*to title a book*) ಪುಸ್ತಕದಹೆಸರುಬರೆಯು.

To Titter, v. n. ಮುಳಿಮುಳಿನಗು. v. *To laugh.*

Titter, s. n. ಮುಳಿಮುಳಿನಗುವು.

Tittle, s. n. ಚೂರು. v. *Point, particle.*

Tittle-tattle, s. n. ಬಾಯಿಬಡಕತನ, ಹರಟೆಖೋರತನ. v. *Tattle, prattle.*

To Tittle-tattle, v. n. ಬಾಯಿಬಡಕತನಮಾಡು.

Tittle-tattler, s. n. ಬಾಯಿಬಡಕನು, ಹರಟಿ, ಮಲ್ಲನು, ಹರಟೆಖೋರನು.

Titubation, s. n. ತೊದ್ರಿಕೆ.

Titulary, a. (*nominal*) ವಕ್ಕಣೆಯ.

Tivy, a. ಶೀಘ್ರವಾಗಿ, ಜಲದಾಗಿ, ತ್ವರೆಯಾಗಿ, ಬೇಗನೆ.

To, prep. (*in comp.*) ಕೆ, ಕು, ಗೆ, ಗು; (*to me*) ನನಗೆ; (*to thee*) ನಿನಗೆ; (*to him*) ಅವನಿಗೆ; (*to her*) ಆಕೆಗೆ, ಅವಳಿಗೆ; (*to it*) ಅದಕ್ಕೆ; (*to us*) ನಮಗೆ; (*to you*) ನಿಮಗೆ; (*to them*) ಅವರಿಗೆ; (*to that*) ಅದಕ್ಕೆ; (*to this*) ಇದಕ್ಕೆ; (*to these*) ಇವಕ್ಕೆ, ಇವುಗಳಿಗೆ; (*to those*) ಅವಕ್ಕೆ, ಅವುಗಳಿಗೆ; (*to that place*) ಆಸ್ಥಳಕ್ಕೆ, ಆಪ್ರಾರಿಗೆ, ಆಕಡೆಗೆ; (*from this place to that place*) ಈಸ್ಥಳದಿಂದಆಸ್ಥಳಕ್ಕೆ, or ಈಪ್ರಾರಿಂದಆಪ್ರಾರಿಗೆ; (*to, until*) ಮಟ್ಟಿಗೂ, ವರಿಗೂ, ಪರಿಯಂತ್ರ

ಕ್ಕ; (*to the end of time*) ಯುಗಾಂತ್ರದ ಮಟ್ಟಿಗೆ, ಪ್ರಪಂಚವಿರುವ ಕಾಲದಂತ್ಯದವರಿಗು; It is *to* no purpose ಪ್ರಯೋಜನವಿಲ್ಲಾ, ಕೆಲಸಕ್ಕೆ ಬಾರದು; (*to speak to no purpose*) ನಿರರ್ಥಕವಾಗಿ ಮಾತಾಡ, ಸಾರ್ಥಕವಿಲ್ಲದ ಮಾತಾಡ; (*to-day*) ಈಹೊತ್ತು, ಇಂದು; (*to-night*) ಈರಾತ್ರಿ, ಇಂದಿನ ರಾತ್ರಿ; (*to-morrow*) ನಾಳೆ; (*face to face*) ಅಭಿಮುಖವಾಗಿ, ಮುಖಾಮುಖವಾಗಿ, ಯೆದುರಿಗೆದುರು; (*to go over to a party*) ಕಡೆಗೆ ಹೋಗ, ಪಕ್ಷಕೆ ಸೇರ; (*to go to town*) ಪಟ್ಟಣಕ್ಕೆ ಹೋಗ; (*to commend one to his face*) ಮುಖಸ್ತುತಿಮಾಡ, ಸ್ತೋತ್ರಮಾಡ; (*from door to door*) ಮನೆಮನೆಗೆ; (*from morning to evening*) ಉದಯ ಮೊದಲುಗೊಂಡು ಸಾಯಂಕಾಲದ ಮಟ್ಟಿಗೆ; (*to the best of my power*) ನನ್ನ ಕೈಲಾದ ಮಟ್ಟಿಗೂ, ನನ್ನ ಕೈಲಾದಷ್ಟು, ನನ್ನ ಸಾಮರ್ಥ್ಯದ ಮಟ್ಟಿಗು; You are a child *to* him ನೀನು ಅವನ ಮುಂದೆ ಕೂಸು; (*to that purpose*) ಅದಕ್ಕಾಗಿ; (*as to that*) ಅದು ಹ್ಯಾಗಂದರೆ, ಅದಾದರೆ; I am *to* go ನಾ ಹೋಗಲಿಕ್ಕಿದ್ದೇನು; (*wounded to death*) ಪ್ರಾಣಘಾಯವಾದ, ಸಾವುಕಡತವಾದ; (*to excess*) ಹೆಚ್ಚಾಗಿ, ಅಧಿಕ್ಯವಾಗಿ, ಮಿಗಿಮೀರಿ, ಕಡೆಮೀರಿ.

Toad, s. n. ಕಪ್ಪೆ, ವಿಷಕಪ್ಪೆ.

Toad-stool, s. n. ಯಂಮ್ಮೆಮೊಳೆ, ನಾಯಿಕೊಡೆ. v. *Fungus*.

To Toast, v. a. ಕಾಸ, ಬೆಂಕಿಯಲ್ಲಿ ಹೊರಳಿಸ, ಬೆಚ್ಚಗೆಮಾಡ. v. *To roast.*

Toast, s. n. (*toasted bread*) ಸುಟ್ಟ ರೊಟ್ಟಿ.

Toasted, part. ಕಾಸಿದ, ಹುರಿದ, ಸುಟ್ಟ.

Tobacco, s. n. ಹೊಗೆಸೊಪ್ಪು, ತೊಪ್ಪಲು, ಶೆಡ್ಡಿಪತ್ರ, ಧೂಮ್ರಪತ್ರ; (*to smoke tobacco*) ಚುಟ್ಟುಸೇದಿಯ, ಸುತ್ತುಸೇದಿಯ, ಚುಟ್ಟಿಸೇದಿಯ, ತೊಪ್ಪಲುಸೇದ; (*the smoke of tobacco*) ಹೊಗೆಸೊಪ್ಪಿನ ಹೊಗೆ, ಚುಟ್ಟಿನ ಹೊಗೆ; (*leaves of tobacco*) ಎಸಳು, ಹೊಗೆತೊಪ್ಪಲಿನ ಎಸಳು; (*green leaves of tobacco*) ಹಸಿ ತೊಪ್ಪಲು; (*dried leaves of tobacco*) ಮಾಗಿದ ತೊಪ್ಪಲು; (*tobacco plant*) ತೊಪ್ಪಲುಗಿಡ; (*a tobacco pipe*) ಜೊಂಗಿ, ಚುಂಗಾಣೆ; (*a pipe bearer*) ಹುಕ್ಕಾಬರದಾರ.

Tobacconist, s. n. ಹೊಗೆತೊಪ್ಪಲಿನ ವರ್ತಕ.

Toddy, s. n. ಹೆಂಡ.

Toe, s. n. ಕಾಲುಬೆರಳು; (*the great toe*) ಅಂಗುಷ್ಠ; (*the little toe*) ಕಾಲುಕಿರಿಬೆಟ್ಟು; (*the toe of a shoe*) ಉಂಗುಟ.

Unmatched, a. ಜೋಡಿಲ್ಲದ, ಈಡಿಲ್ಲದ, ಜತೆಯಿಲ್ಲದ. v. *Matchless, unequalled.*

Unmeaning, a. ನಿರರ್ಥಕದ, ಅರ್ಥವಿಲ್ಲದ, ಅನನ್ವಯದ.

Unmeant, a. *(not intended)* ಬೇಕೆಂದಿಲ್ಲದೆ, ಅರಿಯದೆ, ಕಾಣದೆ.

Unmellowed, a. ಅಪಕ್ವದ, ಮಾಗದ, ಹಣ್ಣಾಗದ. v. *Unripe.*

Unmelted, a. ಕರಗದ, ನೀರಾಗದ, ಆರ್ದ್ರವಾಗದ.

Unmentioned, a. ಹೇಳದ. v. *Unnamed.*

Unmerchantable, a. ಮಾರಿಕೆಯಾಗದ, ಹಳು, ಮಂದವಾದ, ಬೇರವಾಗದ, ವಿಕ್ರಯವಾಗದ, ಮಾರುವದಕ್ಕೆಯೋಗ್ಯವಲ್ಲದ.

Unmerciful, a. ನಿರ್ದಯಾತ್ಮದ, ಕಾಠಿಂನ್ಯದ, ಕ್ರೂರದ, ನಿರಂತ್ರಃಕ್ಕರಣೆಯ, ದಯವಿಲ್ಲದ, ಕರ್ಕಶ. v. *Cruel, inhuman, exorbitant.*

Unmercifully, ad. ನಿರಂತ್ರಃಕರಣೆಯಾಗಿ, ನಿರ್ದಯಾತ್ಮಕವಾಗಿ, ಕಾಠಿಂನ್ಯವಾಗಿ, ಕ್ರೂರವಾಗಿ.

Unmercifulness, s. n. ನಿರಂತ್ರಃಕ್ಕರಣೆಯೂ, ನಿರ್ದಯಾತ್ಮಕತ್ವ. v. *Cruelty, inhumanity.*

Unmerited, a. ಲಕ್ಷ್ಯವಿಲ್ಲದ, ಪುಣ್ಯವಿಲ್ಲದ, ಯೋಗ್ಯತೆಯಿಲ್ಲದ. v. *Undeserved.*

Unmindful, a. ಆಲೈಸದ, ಮನಗೊಡದ, ಧ್ಯಾನವಿಲ್ಲದ, ಲಾಕ್ಷ್ಯರದ, ಹತ್ತಿಹತ್ತದ, ಒಡಿಮಿಡಿಯದ. v. *Inattentive.*

Unmingled, Unmixed, a. ಕಲಸದ, ಅಚ್ಚವಾದ, ಬೆರಿಕಿಲ್ಲದ, ಅಪೂಟಿವಾದ, ನಿಚ್ಚಳವಾದ, ಶಾಜಾಸ್ವಭಾವದ.

Unmoist, Unmoistened, a. ನೆನೆಯದ, ತೇವಾಗದ, ಆರ್ದ್ರವಾಗದ, ಒದ್ದೆಯಾಗದ, ತಂಗಳಾಗದ, ತೋಯದ.

Unmolested, a. ತಡೆಯದ, ಗೊಡವೆಹೋಗದ, ಗಂದಗಾಳಿಹೋಗದ, ಜೋಲಿಹೋಗದ, ಅಂಟದ, ಮುಟ್ಟದ.

To Unmoor, v. a. (*weigh anchor*) ಲಂಗರುಯೆಳಕೊಳ್ಳ, ಗುಂಡುಸೇದ.

Unmortgaged, a. ಧೃಶಾದಿಯಿಲ್ಲದ, ಓಲಿದದ, ವತ್ತೆಯಿಡದ, ವತ್ತೆಯಿಲ್ಲದ.

Unmoved, part. (*from one place to another*) ಕದಲಿಸದ, ಎತ್ತಿಡದ, ಜರಿಗಿಸಿದ, ಪಲ್ಲಟಿಮಾಡದ; (*not changed in resolution*) ಪಟ್ಟುಬಿಡದ, ಹಟವಾದದ, ಕಟ್ಟುಕದಲದ, ಬಿಕ್ಕಬಿಡದ; (*not affected by anger or violent passion*) ಉರಾಳವಿಲ್ಲದ, ತತ್ರಳಪಡದ, ಸಹಸದ, ನಿಧಾನದ; (*pitiless, obdurate*) ನಿರ್ದಯಾತ್ಮಕದ, ಕ್ರೂರದ, ಕಾಠಿಂನ್ಯದ.

Unmoving, a. (*having no motion*) ಸ್ಥಾವರದ, ಚಲಿಸದ, ಶಾಶ್ವತವಾದ, ಸ್ಥಿರವಾದ; (*unaffecting*) ಮನಸುಕರಿಗಿಸದ, ಕಳವಳಮಾಡದ, ಉರಾಳಪಡಸದ, ತತ್ರಳಪಡದ.

To Unmuzzle, v. a. ಮುಳ್ಳುಕುರಬಿಚ್ಚ, ಚಿಕ್ಕಬಿಚ್ಚ, ಮುಸಣಿಬಿಚ್ಚ, ಬಂಕ್ಕತೆಗೆಯ, ಮೋರೆಸುಕ್ಕಿಬಿಚ್ಚ.

Unmusical, a. ಅಪಸ್ವರದ, ಶ್ರುತಿಸೇರದ, ಮೇಳವಿಲ್ಲದ.

Unnamed, a. ಹೆಸರಿಡದ. ನಾಮವಿಲ್ಲದ.

Unnatural, a. (*against nature*) ಅಗಮ್ಯಾಗಮನದ, ಅಸ್ವಭಾವದ, ಅಮರ್ಯಾದೆಯ, ಅನೀತಿಯ; (*preternatural*) ವಾಡಿಕೆಯಿಲ್ಲದ, ಅಪ್ರವರ್ತನದ, ಲೋಕವಿರೋಧದ, ದೈವೀಕದ.

Unnaturalness, s. n. ಅಗಮ್ಯ, ಅಮರ್ಯಾದೆ, ಅಸ್ವಭಾವ, ಅಪ್ರವರ್ತನ, ಅಪೂರೂಪ, ಅಬಾಧ್ಯ.

Unnaturally, ad. ಅನೀತಿಯಾಗಿ, ಅಮರ್ಯಾದೆಯಾಗಿ, ಸ್ವಾಜಿಗವಾಗಿ, ಲೋಕವಿರೋಧವಾಗಿ.

Unnavigable, a. ಹಡಗನಡೆಯದ, ನಾವೆಹೋಗಕೂಡದ.

Unnecessary, a. ಅಗತ್ಯವಿಲ್ಲದ, ಬೇಕಿಲ್ಲದ, ಅಕ್ಕರೆಯಿಲ್ಲದ. v. *Useless.*

Unnecessarily, ad. ಅಗತ್ಯವಿಲ್ಲದ್ದಾಗಿ, ನಿಷ್ಪ್ರಯೋಜನವಾಗಿ.

Unneighbourly, a. ನೆರೆಕೇಡಿತನದ, ಅವಹಿತದ, ಮನುಷ್ಯವಾಸಿಲ್ಲದ, ಕ್ಷೆದಿಯುಪ್ಕಾರವಿಲ್ಲದ.

Unnumbered, a. ಲೆಖ್ಖವಿಲ್ಲದ, ಎಣಿಸದ, ಅಗಣಿತವಾದ.

Unobeyed, a. ವಿಧೇಯವಾಗದ, ಕೈಕೊಳ್ಳದ, ನಡಕೊಳ್ಳದ, ಮಾತುಕೇಳದ.

Unobjected, a. ಅಟಕಾವಿಲ್ಲದ, ಅಡ್ಡಿಯಿಲ್ಲದ, ಅಭ್ಯಂತರವಿಲ್ಲದ, ಎದುರಾಡದ, ಉತ್ತರಕೊಡದ.

Unobnoxious, a. ಗುರಿಯಾಗದ, ಹೇತುವಿಲ್ಲದ, ಈಡಾಗದ.

Unobservant, Unobserving, Unobsequious, a. ನಡಿಸದ, ಆಚರಿಸದ, ಕೈಕೊಳ್ಳದ. v. *Irreverent.* (*not attentive*) ಕಿವಿಗೊಡದ, ಆಲೈಸದ, ಎಚ್ಚರವಿಲ್ಲದ.

Unobstructed, a. ತಡೆಯಿಲ್ಲದ, ಆತಂಕಿಸದ.

Unobstructive, a. ಆತಂಕವಿಲ್ಲದ, ಅಟಕಾವಿಲ್ಲದ, ಅಭ್ಯಂತರವಿಲ್ಲದ.

Unobtained, a. ಸಂಪಾದಿಸದ, ದೊರಕದ, ಸಿಗದ.

Unoccupied, a. ಒಕ್ಕಲಿಲ್ಲದ, ಬರಿದಾದ, ಖಾಲಿಯಾದ, ಆಕ್ರಮಿಸದ, ನಿವಾಸಿಸದ. v. *Unpossessed.*

Unoffered, a. ಅರ್ಪಿಸದ.

Unoffending, a. ಅವಿರೋಧವಾಗಿರುವ, ಮೀರದ, ಅತಿಕ್ರಮಿಸದ. v. *Harmless, innocent.*

Unoperative, a. ಪ್ರಯೋಜನವಾಗದ, ಕೆಲಸಕ್ಕೆ ಬಾರದ, ಹತ್ತದ, ಹಿಡಿಯದ.

Unopposed, a. ಆತಂಕಿಸದ, ಅಟಕಾಯಿಸದ, ಅಭ್ಯಂತರಿಸದ. v. *Unobstructed.*

Unorderly, a. ಪಂಕ್ತಿಯಿಲ್ಲದ, ಸಾಲುಯಿಲ್ಲದ, ಹಾಂದದ, ಕ್ರಮವಿಲ್ಲದ. v. *Disorderly.*

Unorthodox, a. ವೇದವಿರೋಧದ.

Unowned, a. ತಾವುರಿಕಾಣೆಯಿಲ್ಲದ, ಗೊತ್ತುದರಿಯಿಲ್ಲದ; (*not acknowledged*) ಮೈಮೇಲೆ ತೆಗದುಕೊಳ್ಳದ.

To Unpack, v. a. ಕಟ್ಟುಬಿಚ್ಚು, ಕಟ್ಟುಬಿಚ್ಚು, ಗಂಟುಬಿಚ್ಚು. v. *To loose, disburden.*

Unpaid, a. ಸಲ್ಲಿಸದ, ತೀರಿಸದ, ಕೊಟ್ಟುಬಿಡದ.

Unpainful, a. (*giving no pain*) ನೋವಾಗದ, ನೋವಿಲ್ಲದ, ಚಿಂತೆಗೊಳ್ಳದ, ಕಳವಳಪಡದ.

Unpalatable, a. ಅರೋಚಕಿಯಾದ, ರುಚಿಕರವಿಲ್ಲದ, ಸವಿಯಾಗದ.

Unparagoned, Unparalleled, a. ಈಡಿಲ್ಲದ, ಅಸಮಾನವಾದ, ಅಸದೃಶವಾದ, ಸಮಾನವಿಲ್ಲದ, ಸರಿಯಿಲ್ಲದ. v. *Incomparable.* (*unparagoned in beauty*) ಅಸದೃಶವಾದಸೌಂದರ್ಯವುಳ್ಳ, ಅಪ್ರತಿಯಾದ ಸುಂದರವುಳ್ಳ, ಈಡಿಲ್ಲದ ಚೆಲುವಿಕೆಯುಳ್ಳ, ಅಚ್ಚರಿಯಾದ ಸಿಂಗರದ.

Unpardonable, a. ಕ್ಷಮಿಸಕೂಡದ, ಮಂನಿಸದ, ಪರಿಹರಿಸಕೂಡದ, ಕಾಯಕೂಡದ.

Unpardonably, ad. ಕ್ಷಮಿಸಕೂಡದ್ದಾಗಿ, ಕಾಯಕೂಡದ್ದಾಗಿ.

Unpardoned, a. ಪರಿಹರಿಸದ, ವಿಮೋಚನೆಮಾಡದ, ವಿಸರ್ಜಿಸದ.

Unpardoning, a. ಕರುಣಾಪಾಕಿಯ, ನಿರ್ದಾಕ್ಷಿಂ

ಣ್ಯದ, ದಯಾಳ್ವನದ, ಕ್ಷಮೆಯಿಲ್ಲದ, ಕ್ಷಮಿಸದ.

Unparted, a. ಪ್ರತ್ಯೇಕವಿಲ್ಲದ, ವಿಂಗಡವಾಗದ, ಅಗಲವಾಗದ. v. *Unseparated.*

Unpassionate, a. ಕ್ಷಮಾಗುಣ, ಸಾಧುತ್ವದ, ಶಾರಕ, ನಿದಾನದ, ಶಾಳ್ಕ್ಯಯ. v. *Dispassionate.*

Unpawned, a. ಅಡವುಹಾಕದ, ಒತ್ತೆಯಿಡದ.

Unpeaceable, a. ಅಸಮಾಧಾನದ, ಪೆದರುವ, ಕಟಿಪಟ್ಟಿನ, ರಪೂಣದ. v. *Quarrelsome, turbulent.*

Unpensioned, a. ಜಿರಾಯಿತಿಯಿಲ್ಲದ.

To Unpeople, v. a. ಹಾಳುಮಾಡು, ನಿರ್ಮಾನುಷ್ಯಸ್ಥಲಮಾಡು, ದೇಸಲಮಾಡು. v. *To depopulate.*

Unperceived, a. ಕಾಣದ, ಕಂಡುಹಿಡಿಯದ, ಗ್ರಾಹ್ಯಕವಾಗದ.

Unperceivedly, ad. ಅಗ್ರಾಂಹ್ಯಕವಾಗಿ, ಕಂಡುಹಿಡಿಯದ, ತಿಳಿಯದಹಾಗೆ.

Unperformed, a. ಉದ್ದೇರಿಸದ, ತೀರಿಸದ, ಶಾಂತ್ರಮಾಡದ, ಸಾಂಗಮಾಡದ, ಪೂರೈಸದ.

Unperishable, a. ಲಯವಾಗದ, ನಾಶನವಾಗದ, ಅಳಿವಿಲ್ಲದ, ನಿತ್ಯದ, ಚಿರವಾದ, ಸ್ಥಿರವಾದ.

Unperjured, a. ಅಪ್ರಮಾಣಮಾಡದ, ಅಸತ್ಯವಾಡದ, ಅಬದ್ಧವಿಲ್ಲದ.

Unperplexed, a. (*unentangled*) ಸಿಕ್ಕುಯಿಲ್ಲದ, ತೊಡಕುಯಿಲ್ಲದ, ಸಿಕ್ಕಬೀಳದ, ಗಜ್ಜುಯಿಲ್ಲದ, ಜಿಂಜಿಕೆಯಾಗದ; (*not perplexed in mind*) ಘಾಬರಿಬೀಳದ, ಕೊಂದಶಿಪಡದ, ಕಲಕಹೊಂದದ, ವಿಕಲತೆಯಿಲ್ಲದ.

Unphilosophical, a. ಶಾಸ್ತ್ರವಿರೋಧದ, ಅಶಾಸ್ತ್ರದ.

Unpierced, a. ಘಾಯಪಡದ, ತಿವಿಯದ, ತೂತುಬೀಳದ, ಛಿದ್ರಬೀಳದ, ಚುಚ್ಚದ, ಇರಿಯದ.

To Unpin, v. a. ಟಾಕುಬಿಚ್ಚು, ಟಾಕುಸಡ್ಲಿಸು.

Unpitied, a. ಕನಿಕರಪಡದ, ಅನ್ಯೋನ್ಯಯನದ, ಅಂತಃಕ್ಕರುಣೆಪಡದ.

Unpitiful, a. ನಿರ್ದಯಾತ್ಮದ, ಕಠಿನಪಾತಕನದ, ಕ್ರೂರದ. v. *Unmerciful.*

Unpitifully, ad. ಕ್ರೂರವಾಗಿ, ನಿರ್ದಯಾತ್ಮಕವಾಗಿ, ಕಠಿನಪಾತಕನವಾಗಿ. v. *Unmercifully.*

Unplagued, a. ಪೀಡಿಸದ, ಬೇಸರಗೊಳಿಸದ, ಅಸಹ್ಯಪಡಿಸದ.

Unplanted, a. ನಾಟದ, ಹಾಕದ.

Unpleasant, a. (*not agreeable to the feelings*) ರಂಮ್ಯವಿಲ್ಲದ, ಮನೋಹರವಾಗದ, ನೋಯಿಸುವ, ಅಪ್ರಶಸ್ತವಾದ; (*unpleasant to the view*) ಅಸಹ್ಯವಾದ, ಅಶ್ಲಾಘ್ಯವಾದ, ಕಂಣಿಗೆ ಹೋಲಿಕೆಯಾದ; (*unpleasant to the taste*) ಇಂಪಣವಾಗದ, ಸಾಕರ್ಯವಿಲ್ಲದ, ರುಚಿಕರವಿಲ್ಲದ, ವಾಕರಿಕೆಯಾದ. v. *Bitter, unpalatable.*

Unpleasantly, ad. ಅಮಂಗಳವಾಗಿ, ಅಪ್ರಶಸ್ತವಾಗಿ, ಪಂಗಳವಾಗಿ, ಅಸಂಹ್ಯಕರವಾಗಿ.

Unpleasantness, s. n. ಅಸಂಹ್ಯವು, ವಾಕರಿಕೆಯು.

Unpleased, a. ಮೆಚ್ಚಿಸದ, ಸಂತೋಷಪಡಿಸದ, ಸಂಮತಿಪಡಸದ.

Unpleasing, a. ಅಸಂಹ್ಯದ, ಇಂಪಣವಾಗದ,

ಇಂಪಾಗದ, ಮನಸ್ಸೊಗ್ಗದ, ಸಂತೋಷಕೊಡದ. v. *Unpleasant, disgusting, offensive.*

Unpliant, a. ನಮ್ರವಾಗದ, ನೆರವಾಗದ, ಬಗ್ಗದ, ಪರಕಟ್ಟಿಕೆಯ, ಪೆಡಸಿನ. v. Also *stubborn.*

Unplowed, a. ಉಳದ, ಉಳ ಬೆಯಿರುವ, ನೇಗಿಲು ಹೊಡಿಯದ, ಬೇಸಾಯಹೊಂದದ.

Unpoetical, a. ಲಕ್ಷಣಾಧೀನದ, ಛಂದೋಪದ್ಧತಿಯಿಲ್ಲದ, ಕುಕವಿತೆಯ.

Unpolished, a. ಮಿಂಚದದ, ಶಿಕಲಿಮಾಡದ, ಮೆರಗುಹಚ್ಚದ, ಮರ್ಯಾದೆಕಲಿಸದ. v. *Uncivilized.*

Unpolite, a. ಮರ್ಯಾದೆಯರಿಯದ, ನಡತೆಯರಿಯದ, ನಡೆವಳಿಕೆಯಿಲ್ಲದ.

Unpolluted, a. ಭ್ರಷ್ಟತ್ವಮಾಡದ, ಕೆಡಿಸದ, ಅಯೋಗ್ಯಮಾಡದ. v. *Undefiled.*

Unpopular, a. ಪ್ರಖ್ಯಾತಿಯಿಲ್ಲದ, ಕೀರ್ತಿಪಡದ, ಜನಸಂಮತವಾಗದ, ರಜಾವಂದಿಯಿಲ್ಲದ.

Unportable, a. ಯತ್ತಬಾರದ, ಹೊರಕೂಡದ, ಒಯ್ಯಕೂಡದ.

Unpracticable, a. ಅಸಾಧ್ಯದ, ಅನುಕೂಲವಾಗದ, ಹೊಂದದ, ಸಾಧಿಸಕೂಡದ.

Unpractised, a. ಅಭ್ಯಾಸವಿಲ್ಲದ, ಅನಭ್ಯಾಸವಾದ, ಕಲಿಯದ, ತರ್ಬೇತಿಲ್ಲದ. v. *Inexperienced, undisciplined.*

Unpraised, a. ಕೊಂಡಾಡದ, ಕೀರ್ತಿಸದ.

Unprecarious, a. ಅನುಮಾನವಿಲ್ಲದ, ಸಂದೇಹವಿಲ್ಲದ, ನಿಶ್ಚಯದ, ಸ್ಥಿರವಾದ, ಶಾಶ್ವತವಾದ. v. *Independent, fixed, certain.*

Unprecedented, a. ಯಂದಿಸ್ಥಾಯಿಲ್ಲದ, ಮೊದಲಿಲ್ಲದ, ಪೂರ್ವದಲ್ಲಿಲ್ಲದ. v. *Unexampled.*

Unpreferred, a. ಬೆಳೆಸದ, ಕೈಹಿಡಿಯದ.

Unpregnant, a. ಗರ್ಭವಿಲ್ಲದ, ಬಸುರಿಲ್ಲದ.

Unprejudiced, a. ಪಕ್ಷಪರಪಕ್ಷವಿಲ್ಲದ, ಪಕ್ಷಪಾತವಿಲ್ಲದ. v. *Impartial.*

Unpremeditated, a. ಮುಂಚಿಯಾಲೋಚಿಸದ, ಮೊದಲಾಲೋಚಿಸದ; (*an unpremeditated or unguarded expression*) ನಾಕರತಪ್ಪಿದಮಾತು, ಬುದ್ಧಿತಪ್ಪಿದಮಾತು, ಅಜ್ಞಾನಕೃತವಾದಮಾತು.

Unprepared, a. ಆಯತ್ತವಿಲ್ಲದ, ಸಿದ್ಧವಾಗದ.

Unprepossessed, a. ಪಕ್ಷಪರಪಕ್ಷವಿಲ್ಲದ. v. *Unprejudiced.*

Unpressed, a. (*not squeezed*) ಹಿಂಡದ, ಅಗೆಗಸದ, ಒತ್ತದ; (*not inforced or urged*) ಕಡ್ಡಾಯಮಾಡದ, ಜುಲುಮಿಮಾಡದ, ಬಲವಂತ್ರಮಾಡದ, ಬಲಾತ್ಕಾರಮಾಡದ.

Unpretending, Unpresuming, a. ದುರಭಿಮಾನವಿಲ್ಲದ, ದುರಹಂಕಾರವಿಲ್ಲದ, ಪ್ರಶಿತ, ಮಂದಾಕ್ಷದ, ವಿನೀತ. v. *Modest.*

Unprevailing, a. ಪ್ರಬಲವಿಲ್ಲದ, ಪ್ರಳಯವಿಲ್ಲದ, ಜಯವಿಲ್ಲದ.

Unprevented, a. ಅಭ್ಯಂತರಿಸದ, ಅಟಕಾಯಿಸದ, ಆತಂಕಿಸದ, ಅಡ್ಡಿಮಾಡದ.

Unprincely, a. ರಾಜನೀತಿಯಿಲ್ಲದ, ರಾಜಠೀವಿಯಿಲ್ಲದ.

Unprincipled, a. (*not settled in opinion*) ದಗಲ್ಬಾಜಿತನದ, ಠಕ್ಕಿನ, ಮೋಸದ, ನಂಬಕೂಡದ, ಅಪ್ರಮಾಣ್ಯದ. v. Also *knavish, wicked.*

Unprized, a. (*not valued*) ತೃಣೀಕರಿಸಿದ, ಅಲ್ಪವಾಗೆಣಿಸಿದ, ಲಕ್ಷ್ಯಮಾಡದ.

Unproclaimed, a. ಸಾರದ, ಪ್ರಸಿದ್ಧಿಮಾಡದ; ಡಂಗುರಹಾಕದ, ಚಾಟಿಸದ.

Unprofitable, a. ಪ್ರಯೋಜನವಿಲ್ಲದ, ಲಾಭವಿಲ್ಲದ, ಆದಾಯವಿಲ್ಲದ. v. *Useless*.

Unprofitableness, s. n. ನಿರರ್ಥಕ, ನಿಷ್ಪ್ರಯೋಜನ, ಅಸಾರ್ಥಕ.

Unprofitably, ad. ನಿರರ್ಥಕವಾಗಿ, ನಿಷ್ಪ್ರಯೋಜನವಾಗಿ, ಅಸಾರ್ಥಕವಾಗಿ.

Unprolifick, a. (*barren, as women*) ಬಂಜೆ; (*as cattle*) ಗೊಡ್ಡಿನ; (*as land*) ಬೀಳಿನ, ಫಲಿಸದ.

Unpropitious, a. ಅಂತಃಕರಣವಿಲ್ಲದ, ಕನಿಕರವಿಲ್ಲದ, ನಿರ್ದಯದ, ಕೃಪಾಕಟಾಕ್ಷವಿಲ್ಲದ.

Unproportioned, a. ಹೆಚ್ಚುಕಡಿಮೆಯ, ಸರಿಸಮಾನವಿಲ್ಲದ. v. *Disproportionate, unsuited.*

Unpropped, a. ಆಧಾರವಿಲ್ಲದ, ಪೋಟಿಯಿಲ್ಲದ, ಊರೆಯಿಲ್ಲದ. v. *Unsupported.*

Unprosperous, a. ದೆಶಾಹೀನದ, ಅದೃಷ್ಟಹೀನದ, ಅಪದಶೆಯ. v. *Unfortunate.*

Unprotected, a. ಆಧಾರವಿಲ್ಲದ, ಸಂಭಾಳಿಸದ, ಪೋಷಣೆಯಿಲ್ಲದ, ನಿರಾಧಾರದ, ದಿಕ್ಕಿಲ್ಲದ.

Unproved, a. ನಿದರ್ಶನಮಾಡದ, ನಿರೂಪಣಮಾಡದ, ದೃಷ್ಟಾಂತಮಾಡದ, ಸ್ಥಿರಮಾಡದ.

Unprovided, a. ಸಂನಾಹವಿಲ್ಲದ, ಸಿದ್ಧವಿಲ್ಲದ, ತಯಾರಾಗಿಲ್ಲದ. v. *Unprepared, unfurnished.*

Unprovoked, a. ಕೆಣಕದ, ಉಲ್ಬಣಮಾಡದ, ಪ್ರೇರೇಪಿಸದ, ಎಬ್ಬಿಸದ.

Unpruned, a. ಕಸಿಮಾಡದ, ಕಡಿಸಯ್ಯದ.

Unpurchased, a. ಕೊಂಡುಕೊಳ್ಳದ, ಕೊಳ್ಳದ, ಕ್ರಯಕ್ಕೆತಕ್ಕೊಳ್ಳದ.

Unqualified, a. ಯೋಗ್ಯತೆಯಿಲ್ಲದ, ಸಾಮರ್ಥ್ಯವಿಲ್ಲದ, ಕೈಲಾಗದ.

To Unqualify, v. a. ಕೆಲಸಕ್ಕೆಬಾರದಹಾಗೆಮಾಡ, ಕೈಲಾಗದಹಾಗೆಮಾಡ.

Unquenchable, a. ಆರದ, ಶಮನವಾಗದ, ತಂಣಾಗಾಗದ.

Unquestionable, a. ಸಂದೇಹವಿಲ್ಲದ, ಅನುಮಾನವಿಲ್ಲದ.

Unquestionably, ad. ನಿಸ್ಸಂಶಯವಾಗಿ, ನಿಸ್ಸಂದೇಹವಾಗಿ.

Unquestioned, a. ನಿಸ್ಸಂಶಯ, ನಿಸ್ಸಂದಿಗ್ಧ, ಅನುಮಾನವಿಲ್ಲದ.

Unquiet, a. ಮೌನವಾಗಿರದ, ಶಾಂತವಾಗಿರದ, ಪದರುವ, ವದರುವ.

To Unravel, v. a. (*disentangle*) ಗೋಜುಬಿಡಿಸು, ತೊಡಕುಬಿಡಿಸು.

Unread, a. (*not read*) ಓದದ; (*unlearned*) ಅಭ್ಯಾಸವಿಲ್ಲದ, ವಿದ್ಯಾಹೀನನಾದ.

Unready, a. ಆಯಿತ್ತವಿಲ್ಲದ, ಸಿದ್ಧವಿಲ್ಲದ. v. *Unprepared, unfit.*

Unreal, a. ಮಾಯದ, ಶೂನ್ಯದ, ಜಂತೆದ, ಮಿಥ್ಯ, ಬರಿಯದು.

Unreasonable, a. (*immoderate*) ಮಿತಿಮೀರಿದ, ಮೇರೆತಪ್ಪಿದ, ವಿಚಾರವಾಗದ, ಅನ್ಯಾಯವಾದ, ಸಲುವಳಿಯಿಲ್ಲದ; (*not agreeable to reason*) ಅಬದ್ಧದ, ಬುದ್ಧಿಗೆತೋಚದ, ಲೋಕವಿರೋಧದ.

Unreasonableness, s. n. *(immoderateness)* ಅನ್ಯಾಯ, ಅವಿವೇಕಾಚಾರ, ಅವಪದ್ಧತಿ, ಅಪರಾತಿಶಯ, ತಪ್ಪಾಚಾರ, ದಬಾದುಬಿ; *(want of reason)* ಉನ್ಮಾದ, ದುಷ್ಟತನ, ಬುದ್ಧಿಹೀನತೆ; *(an unreasonable demand)* ಅನ್ಯಾಯದ ಕೇಳ್ವಿಕೆ, ಆಗದ ಮನವಿ.

Unreasonably, ad. ಅನ್ಯಾಯವಾಗಿ, ಅವಿವೇಕಾಚಾರವಾಗಿ.

Unreceived, a. ಮುಟ್ಟದ, ತಲುಪಿಸದ, ಸಂದಾಯವಾಗದ, ಪಾವತಿಯಾಗದ.

Unreclaimed, a. ಮಾರ್ಗಕ್ಕೆಬಾರದ, ಸುಗಾವಾಗದ, ತಿದ್ದದ. v. *Unreformed.*

Unreconciled, a. ಅನ್ಯೋನ್ಯವಾಗದ, ಅನುಕೂಲವಾಗದ, ಕಲೆಗಲಾಗದ. v. *Inimical.*

Unrecounted, a. ಹೇಳದ, ತಿಳಿಸದ.

Unreduced, a. ಜೈಸದ, ಸ್ವವಶವಾಗದ.

Unreformed, a. ಮಾರ್ಗಕ್ಕೆಬಾರದ, ಸುಗಾವಾಗದ, ತಿದ್ದದ.

Unreined, a. ಪರಾಧೀನವಿಲ್ಲದ, ನಿರ್ಬಂಧಿಸದ, ಬಿಗಿಹಿಡಿಯದ, ಆವಂಕೆಯಿಲ್ಲದ. v. *Unrestrained*

Unrelenting, a. ಹೃದಯಕರಗದ, ಕಾರುಣ್ಯಪಡದ, ಕ್ರೂರವಾದ, ನಿರ್ದಯಾತ್ಮದ. v. *Inexorable, cruel, harsh, unfeeling.*

Unrelieved, a. *(unassisted)* ಸಹಾಯವಿಲ್ಲದ, ಒತ್ತಾಸೆಯಿಲ್ಲದ, ಅನುಕೂಲವಿಲ್ಲದ; *(not eased)* ಶಾಂತವಾಗದ, ಲಘುವಾಗದ, ಹಗುರವಾಗದ, ಉಪಶಮನವಾಗದ, ಸುಗಾವಾಗದ.

Unremarkable, a. ಆಶ್ಚರ್ಯವಿಲ್ಲದ, ಚೋದ್ಯವಿಲ್ಲದ.

Unremoveable, a. ಸರಿಸಕೂಡದ, ಪಲ್ಲಟವಾಗದ, ಎತ್ತಿದಕೂಡದ. v. *Fixed.*

Unremoved, a. ಎತ್ತಿಯಿಡದ, ಜರುಗಿಸದ, ಕದಲಿಸದ; *(unremoved from office)* ತೆಗೆದುಹಾಕದ.

Unrepaid, a. *(not returned or recompensed)* ಮುಯಿಕೊಡದ, ಬದಲುಕೊಡದ, ಪ್ರತಿಕೊಡದ.

Unrepealed, a. ತೆಗೆದುಹಾಕದ, ನಿಲ್ಲಿಸದ.

Unrepented, a. ಪಶ್ಚಾತ್ತಾಪಪಡದ, ಮನಸ್ತಾಪಪಡದ.

Unrepenting, Unrepentant, a. ಪಶ್ಚಾತ್ತಾಪವಿಲ್ಲದ, ಮನಸ್ತಾಪವಿಲ್ಲದ.

Unrepining, a. ಗೊಣಗುಟ್ಟದ, ಸಮಾಧಾನಪಡುವ. v. *Content.*

Unreplenished, a. ತುಂಬಿಸದ, ಬರಿಸೈದ, ಬರಿದಾದ.

Unreproached, Unreproved, a. ತಲೆತಗ್ಗಿಸದ, ಜಬರಿಸದ, ಬೆದರಿಸದ.

Unreproveable, a. ನಿರಪರಾಧದ, ತಪ್ಪಿಲ್ಲದ, ವ್ಯಪದೇಶಿಸಲಾಕೂಡದ.

Unreputable, a. ಅಪಖ್ಯಾತಿಯಾದ, ಅಪಕೀರ್ತಿಯಾದ.

Unrequested, a. ಮನವಿಮಾಡಿಕೊಳ್ಳದ, ಬೇಡಿಕೊಳ್ಳದ, ಕೇಳದ.

Unrequitable, a. ಪ್ರತಿಮಾಡಬಾರದ, ಮುಯಿಕೊಡಕೂಡದ.

Unresented, a. ಮುಯಿಕೊಡದ, ಛಲತೀರಿಸದ, ಬದಲುಮಾಡದ. v. *Unrevenged.*

Unresentful, a. ಅಜಾತಶತ್ರುವಾದ, ಸಹನದ, ತಂಪುಗೆಯಾದ.

Unreserved, a. *(open, frank)* ಪ್ರಕಟವಾದ, ಬಯಿರಂಗವಾದ, ವಂಚನೆಯಿಲ್ಲದ, ನಿಷ್ಕಪಟವಾದ, ನಿಚ್ಚಳವಾದ, ಪಕ್ಷಪಕ್ಷವಿಲ್ಲದ, ಠಾಕುತೆಸಲಿಲ್ಲದ; *(not reserved or kept back)* ಬಚ್ಚಿಟ್ಟಿರದ, ಉಳಿಸಿರದ, ಸಂಗ್ರಹಮಾಡದ.

Unreservedness, s. n. ಖಡಾಖಡಿ, ಸಾಫ, ಯಥಾರ್ಥವಾದಿತನ, ಖಂಡಿತ.

Unreservedly, ad. ಯಥಾರ್ಥವಾಗಿ, ಖಡಾಖಡಿಯಾಗಿ, ಸಾಫಾಗಿ, ಖಂಡಿತವಾಗಿ.

Unresisted, a. ಅಟಕಾಯಿಸದ, ಅಡ್ಡೀಮಾಡದ, ತಡೆಯದ.

Unresisting, a. ತಡೆಯದೆಯಿರುವ, ಕೊಂಡೆವೆದುರಾಗದ, ಜ್ಯಾಲಿಗೆ ಹೋಗದ, ಗೋಜಿಗೆಹೋಗದ.

Unresolvable, a. *(impossible to be resolved or explained)* ಛೇದಿಸಕೂಡದ, ಅನ್ವಯಿಸಬಾರದ, ಅರ್ಥವಾಗದ. v. Also *undetermined.*

Unrestored, a. ಯಥಾಸ್ಥಿತಿಯಾಗಿಕೊಡದ, ತಿರಿಗಿಕೊಡದ, ತಿರಿಗಿಕೊಟ್ಟುಬಿಡದ, ಮರಳಿಯುಸಲ್ಲಿಸದ.

Unrestrained, a. *(not hindered or confined)* ಅಂಕೆಯಿಲ್ಲದ, ಅನರ್ಗಳದ, ಅಪಾವೃತದ, ಅಟಕಾಯಿಸದ, ಆತಂಕಿಸದ, ಇಛಾವಿಹಾರದ. v. *Licentious, loose.* *(not limited)* ಮಿತಿಯಿಲ್ಲದ, ಮಟ್ಟಿಲ್ಲದ, ನಿರ್ಬಂಧಿಸದ.

Unretracted, a. ತಿರಿಗಿಹಾಕದ, ಮರುಕಳಿಸದ, ಮಾತುತಿರಗಿಸದ.

Unrevealed, a. ತಿಳಿಸದ, ಬಯಿರಂಗಮಾಡದ, ಹೊರಡಿಸದ.

Unrevenged, a. ಮುಯಿಕೊಡದ, ಛಲತೀರಿಸಿಕೊಳ್ಳದ, ಪ್ರತಿಗೆಪ್ರತಿಕೊಡದ.

Unreversed, a. *(not turned upside down)* ತಲೆಕೆಳಗಾಗದ; *(unrevoked)* ತೆಗದುಹಾಕದ, ಇಲ್ಲಿಸದ. v. *Unrepealed.*

Unrewarded, a. ಪ್ರತ್ಯುಪಕಾರಮಾಡದ, ಪ್ರತಿಫಲಕೊಡದ, ಮ್ಯಾಲಿಗೆಮ್ಯಾಲುಮಾಡದ.

To Unriddle, v. n. ಬಿಚ್ಚಿಹೇಳ, ವಡಪುಹೇಳ.

To Unrig, v. a. ಹಡಗದಮುಸ್ತೈದಿಯಿಳಿಸ.

Unrighteous, a. ದುರ್ಮಾರ್ಗದ, ಅಸತ್ಯದ, ಅಸಜ್ಜನತ್ವದ. v. *Unjust, sinful, wretched.*

Unrighteousness, s. n. ಅಸತ್ಯವು, ಅಸಜ್ಜನತ್ವವು, ದುರ್ಮಾರ್ಗವು, ಅನ್ಯಾಯವು, ದುರ್ನಡತೆಯು, ಕೆಟ್ಟತನವು. v. *Wickedness, injustice.*

Unrightful, a. ಅನ್ಯಾಯದ, ಸತ್ಯವಿಲ್ಲದ, ಧರ್ಮವಿಲ್ಲದ.

To Unrip, v. a. ಹೊಲಿಗೆಬಿಚ್ಚು, ಬಗಲ್ಬಿಡಿಸ. v. *To rip, cut open.*

Unripe, a. ಪಕ್ವವಿಲ್ಲದ, ಅಪಕ್ವದ, ಹಣ್ಣಾಗದ.

Unripeness, s. n. ಅಪಕ್ವವು.

Unrivalled, a. *(without a rival)* ಅರುದಾದ, ಸಹೋತ್ಸತ್ವವಿಪ್ರತಿಯಾದ, ಸರಿಸರಿಯಾದ; *(having no peer or equal)* ಅಪ್ರತಿಯಾದ, ಅಸಮಾನವಾದ, ಈಡಿಲ್ಲದ. v. *Unparagoned.*

To Unroll, v. a. ಸುರಳಿಬಿಚ್ಚು.

To Unroot, v. a. ನಿರ್ಮೂಲಮಾಡ, ಬ್ಯೇರುಕೀಳ.

Unruffled, a. ಶಾಂತದ, ಉಪಶಮನದ, ನಿಧಾನದ, ಸಿಟ್ಟಿಲ್ಲದ. v. *Calm, tranquil, quiet.*

Unruled, a. ಆಳದ, ಕೈಕೆಳಗಿನದಸದ, ಅಂಕೆಯಿಲ್ಲದ.

Unruliness, s. n. ಅವಿಧೇಯವು.

Unruly, a. ವಿಧೇಯವಾಗದ, ಕೈಕೆಳಗೆ ಸರಕೊಳ್ಳದ, ಅವಂಕೆಯಿಲ್ಲದ. v. *Turbulent.*

Unsafe, a. ಕ್ಷೇಮಕರವಿಲ್ಲದ, ಕ್ಷೇತ್ರವಿಲ್ಲದ. v. *Insecure, dangerous.*

Unsaid, a. ಹೇಳದ, ನುಡಿಯದ, ಅನದ.

Unsalted, a. ಉಪ್ಪುಹಾಕದ.

Unsanctified, a. ಪರಿಶುದ್ಧಮಾಡಪಡದ.

Unsatisfactoriness, s. n. ಅಸಂಮ್ಮತಿ, ಅಸಮಾಧಾನ, ಅಸಂತೃಪ್ತಿ.

Unsatisfactory, **Unsatisfying**, a. ಅಸಮಾಧಾನದ, ಅಸಂಮತದ, ಅಸಂತುಷ್ಟಿಯ.

Unsatisfied, a. *(not contented or pleased)* ಸಮಾಧಾನವಾಗದ, ಸಂತೃಪ್ತಿಪಡದ, ಸಂಮತಿಪಡದ.

Unsavouriness, s. n. ಅರುಚಿಯು, ಅಸ್ವಾದು, ಅಸಾಕರ್ಯವು.

Unsavoury, a. ರುಚಿಯಿಲ್ಲದ, ಅರುಚಿಯಾದ, ಸ್ವಾರಸ್ಯವಿಲ್ಲದ, ಸ್ವಾದಿಲ್ಲದ. v. *Tasteless, insipid, fetid.*

To Unsay, v. n. ನಾಲಿಗೆ ತಪ್ಪು, ಮಾತುತಿರಿಗಿಸ.

Unscreened, a. ಆಶ್ರಯವಿಲ್ಲದ, ದಿಕ್ಕಿಲ್ಲದ, ಆಸ್ಪದವಿಲ್ಲದ, ಮರೆಯಿಲ್ಲದ. v. *Uncovered, unprotected.*

To Unseal, v. a. *(open any thing sealed)* ಮುದ್ರೆತೆಗೆಯ, ಲಕೋಟೆವಡೆಯ.

Unsealed, a. *(having the seal broken)* ಲಕೋಟೆವಡೆದ, ಮುದ್ರೆಬಿಚ್ಚಿದ; *(without a seal)* ಮುದ್ರೆಯಿಲ್ಲದ, ಲಕೋಟೆಮಾಡದ.

Unseasonable, a. ಅಸಮಯದ, ಅಕಾಲದ.

Unseasonableness, s. n. ಅಸಮಯವು, ಅಕಾಲವು, ಸಮಯಸರಿಬೀಳದ್ದು.

Unseasonably, ad. ಅಸಮಯವಾಗಿ, ಅಕಾಲವಾಗಿ, ಸಮಯಸರಿಬೀಳದಹಾಗೆ.

Unseasoned, a. *(not inured)* ರೂಢಿಯಿಲ್ಲದ, ಅಭ್ಯಾಸವಿಲ್ಲದ, ತರಬೀಯತಾಗದ; *(unseasoned, as victuals)* ಸಂಬಾರವಿಡದ, ಉಪ್ಪುಹುಳಿಹಾಕದ, ಸಪ್ಪೆಯಾದ.

Unseemliness, s. n. ಅಯೋಗ್ಯವು, ಅಯುಕ್ತವು, ಅಮರ್ಯಾದೆಯು, ಭಂಡು. v. *Indecency.*

Unseemly, a. ಮಟ್ಟುಮರ್ಯಾದೆಯಿಲ್ಲದ, ಅಯೋಗ್ಯದ, ಅಯುಕ್ತದ, ಭಂಡುಗೆಟ್ಟ.

Unseemly, ad. ಅಪಮಾನವಾಗಿ, ಅಮರ್ಯಾದೆಯಾಗಿ ಅಯೋಗ್ಯವಾಗಿ.

Unseen, a. ಕಾಣಿಸದ, ನೋಡದ, ದೃಷ್ಟಿಸದ, ಅಗೋಚರದ. v. *Invisible.*

Unsent, a. ಕಳುಹಿಸದ; *(unsent for)* ಕರೆಯಕಳುಹಿಸದ, ಕರೆಯದ. v. *Uninvited.*

Unseparated, a. ಪ್ರತ್ಯೇಕವಾಗದ, ಅಗಲದ, ಬ್ಯಾರಾಗದ, ವಿಂಗಡವಾಗದ.

Unserviceable, a. ಕೆಲಸಕ್ಕೆಬಾರದ, ನಿಷ್ಪ್ರಯೋಜಕದ, ಉಪಯೋಗವಿಲ್ಲದ. v. *Useless.*

Unset, a. *(unplaced)* ಇಕ್ಕದ, ಇರಿಸದ, ಇಡದ.

To Unsettle, v. a. ಅನಿಶ್ಚಯಮಾಡ, ಅಸ್ಥಿರಮಾಡ, ಚಂಚಲಮಾಡ.

Unsettled, a. ಅನಿಶ್ಚಯದ, ಅಸ್ಥಿರದ, ಚಂಚಲದ, ಸ್ಥಾಪನೆಯಿಲ್ಲದ. v. *Uncertain, unstaid, inconstant, irregular.*

Unsettledness, s. n. ಅನಿಶ್ಚಯವು, ಅಸ್ಥಿರವು, ಚಂ

ಚಲತ್ವ, ಚಪಲತೆಯು. v. *Inconstancy, irresolution, uncertainty.*

Unshakeable, a. ಚಲಿಸಕೂಡದ, ಅಲ್ಲಾಡಿಸಕೂಡದ.

Unshaken, Unshook, a. *(not moved or agitated)* ಚಲಿಸದ, ಅಲ್ಲಾಡಿಸದ.

To Unsheath, v. a. ಒರೆತೆಗೆಯು, ಒರೆಕೀಳು.

Unshed, a. ಚೆಲ್ಲಪಡದ, ಚೆಟ್ಲಪಡದ, ಚಿಂಮದೆಯುದ್ದ.

Unsheltered, a. ಆಸ್ಪದವಿಲ್ಲದ, ಆಧಾರವಿಲ್ಲದ, ಆಶ್ರಯವಿಲ್ಲದ, ನಿರಾಶ್ರಯದ.

Unshod, a. ನಾಲುಕಟ್ಟಿದ.

Unshorn, a. ಕ್ಷೌರಮಾಡದ, ಬೋಳಿಸದ, ಕತ್ತರಿಸದ.

Unskilled, Unskilful, a. ಅಚಮತ್ಕಾರದ, ಜ್ಞಾನತನವಿಲ್ಲದ, ಯದ್ವಾತದ್ವದ.

Unskilfully, ad. ಅಚಮತ್ಕಾರವಾಗಿ, ಅಪ್ರವೀಣತ್ವವಾಗಿ, ಯದ್ವಾತದ್ವವಾಗಿ.

Unskilfulness, s. n. ಅಚಮತ್ಕಾರವು, ಅಪ್ರವೀಣತ್ವವು, ಯದ್ವಾತದ್ವಾವು.

Unsophisticated, a. ಅಚ್ಚ, ನಿರ್ಮಲ. v. *Genuine, pure.*

Unsound, a. *(sickly)* ಸ್ವಸ್ಥವಿಲ್ಲದ, ಜಾಡ್ಯದ, ರೋಗದ; *(cracked)* ಸೀಳದ, ಬಿರಕುಬಿಡದ; *(rotted, corrupted)* ಕೊಳತ, ಹುಳುಕುಬಿದ್ದ; *(not orthodox)* ವೇದಕೆವಿರೋಧದ, ಮತಕ್ಕೇಡಿಯ. v. *Ungodly. (not honest)* ಅಪ್ರಾಮಾಣಿಕ, ಅಸಜ್ಜನದ, ಕಳ್ಳತನದ; *(not sincere or faithful)* ವಂಚನೆಯ, ಮೋಸದ, ದಗಲ್ಬಾಜಿಯ. v. *Deceitful, insincere;* also *erroneous, wrong, unsteady. (an unsound sleep)* ಅರೆನಿದ್ರೆ.

Unsoundness, s. n. *(sickliness)* ಅಸ್ವಸ್ಥತೆ, ಅಜಾಡ್ಯವು, ರೋಗವು; *(crackedness)* ಸೀಳಿಕೆ; *(rottenness, corruption)* ಕೊಳೆವಿಕೆ, ಹುಳುಕುಬೀಳುವಿಕೆ; *(want of orthodoxy)* ಮತವಿರೋಧಿಕೆ, ಮತಭ್ರಂಶ; *(want of honesty or fidelity)* ಅಪ್ರಮಾಣವು, ಅಸಜ್ಜನತನ. v. *Deceitfulness. (want of strength or solidity)* ನಿಶ್ಚೈತನ್ಯವು, ಬಲಹೀನವು, ಅತಂತ್ರವು.

Unslain, a. ಸಂಹರಿಸದ, ಕೊಂದುಹಾಕದ, ಹತಮಾಡದ.

Unslaked, a. ಆರದ. v. *Unquenched.*

Unsociable, a. ಆಗಬಾರದತನ, ಅನ್ಯೋನ್ಯವಿಲ್ಲದ, ಅಮೈತ್ರಿಕೆತನದ. v. Also *unkind, morose.*

Unsociably, ad. ಅನ್ಯೋನ್ಯವಿಲ್ಲದ್ದಾಗಿ, ಆಗಬಾರದ್ದಾಗಿ, ಅಮೈತ್ರಿಕೆಯಾಗಿ. v. *Morosely.*

Unsown, a. ಬಿತ್ತದ, ಬೀಜಹಾಕದ.

Unspeakable, a. ಹೇಳಕೂಡದ, ನುಡಿಯಕೂಡದ.

Unspecified, a. ಹೇಳದ, ತಿಳಿಸದ, ವಿವರಿಸದ, ವಿಮರ್ಶಿಸದ. v. *Unmentioned.*

Unspent, a. ಚಲಿಸದ, ತೀರದ.

Unspied, a. ನೋಡದ, ಕಾಣದ. v. *Unseen.*

Unsplit, a. ಹರಿಯದ, ಸೀಳದ, ಬಿರುಕುಬೀಳದ, ಬಿರಿಯದ.

Unspotted, a. ಮಚ್ಚೆಯಿಲ್ಲದ, ನಿಷ್ಕಳಂಕದ.

Unstable, a. ಅಸ್ಥಿರದ, ಅಶಾಶ್ವತದ, ಅನಿತ್ಯದ, ಚಂಚಲದ, ಚಪಲತನದ, ಅಸ್ಥಿರಬುದ್ಧಿಯ. v. *Unfixed, inconstant, irresolute.*

Unsteadily, ad. ಚಂಚಲವಾಗಿ, ಚಪಲತನವಾಗಿ, ಅಸ್ಥಿರವಾಗಿ; ಅನಿತ್ಯವಾಗಿ.

Unsteadiness, s. n. ಚಪಲತನ, ಚಂಚಲತನ, ಅಸ್ಥಿರಬುದ್ಧಿ. v. *Inconstancy.*

Unsteady, Unsteadfast, a. ಚಪಲದ, ಚಂಚಲದ, ಅಸ್ಥಿರಬುದ್ಧಿಯ.

To Unstop, v. a. ಬಾಯಿತೆರೆಯು, ಬಂದುತೆರೆಯು, ತಡೆತೆರೆಯು, ಅಡ್ಡಿತೆರೆಯು, ಕಟ್ಟುತೆರೆಯು. v. *To open.*

Unstopped, a. *(not closed, meeting no obstruction)* ಅಟಕಾಯಿಸದ, ಆಭ್ಯಂತರಿಸದ, ನಿರ್ಬಂಧಿಸದ, ತಡೆಯದ.

To Unstring, v. a. *(a musical instrument)* ತಂತಿತೆಗೆಯು.

Unstruck, a. *(not struck or beat)* ಬಡಿಯದ, ಹೊಡೆಯದ; *(not struck with amazement)* ಆಶ್ಚರ್ಯಪಡದ, ಭ್ರಾಂತಿಪಡದ.

Unstudied, a. ಆಲೋಚಿಸದ, ಯೋಚಿಸದ. v. *Unpremeditated.*

Unsubdued, a. ಜಯಿಸದ, ಕೈವಶಮಾಡದ, ಗೆಲ್ಲದ, ಅಣಗಿಸದ.

Unsubstantial, a. ಅಸ್ಥಿರದ; ಅನಿತ್ಯದ, ಅಶಾಶ್ವತದ, ಬದ್ಧವಿಲ್ಲದ, ಸ್ಥಾಪನೆಯಿಲ್ಲದ. v. Also *unreal, unsolid.*

Unsuccessful, a. ಕಲತುಬಾರದ, ಕೈಕೂಡಿಬಾರದ, ಪ್ರತಿಕೂಲದ, ಅನುಕೂಲಿಸದ, ಹೆಚ್ಚುಳಿಯಾಗದ, ಅಪಜಯದ.

Unsuccessfulness, s. n. ಅಪಜಯವು, ಪ್ರತಿಕೂಲವು, ಅದೃಷ್ಟಹೀನವು, ದಶಾಹೀನವು. v. *Misfortune.*

Unsuccessive, a. ತರತರಂಗವಿಲ್ಲದ, ಪಾರಂಪರಿಯಿಲ್ಲದ, ಶಿವಿಶಿವಿಯಿಲ್ಲದ.

Unsuitable, Unsuiting, a. ಅಯುಕ್ತದ, ತಕ್ಕದ್ದಲ್ಲದ, ಹೊಂದದ. v. *Incongruous.*

Unsuitableness, s. n. ಅಯುಕ್ತವು, ವಿರೋಧವು, ಅಸಂದರ್ಭವು.

Unsullied, a. *(not fouled)* ಮಾಸದ, ಕಾಂತಿಕೆಡದ, ನಿಷ್ಕಳಂಕದ; *(not disgraced)* ಮಾನಭಂಗಮಾಡದ, ಭಗ್ನಮಾಡದ, ಕೆಡಿಸದ.

Unsupported, a. *(not held up, unsustained)* ಆಧಾರವಿಲ್ಲದ, ದಿಕ್ಕಿಲ್ಲದ, ನಿರಾಶ್ರಯದ, ಪೋಟೆಯಿಲ್ಲದ.

Unsure, a. ಜೋಕೆಯಿಲ್ಲದ, ಭದ್ರವಿಲ್ಲದ, ಬದ್ಧವಿಲ್ಲದ.

Unsurmountable, a. ಅಸಾಧ್ಯದ, ಅಗಾಧದ, ದಾಟಕೂಡದ.

Unsusceptible, a. ಆಗದ, ಹುಡುಕಮುಟ್ಟದ, ಆಯಕ್ತಿತಗಲದ. v. Also *unassisted, unaided.*

Unsuspected, a. ಸಂದೇಹಪಡದ, ಸಂಶಯಬೀಳದ. v. *Incapable.*

Unsuspecting, Unsuspicious, a. ಅನುಮಾನವಿಲ್ಲದ, ನಿಸ್ಸಂಶಯದ, ಸಂದೇಹವಿಲ್ಲದ, ನಿಶ್ಶಂಕೆಯ.

Unsustained, a. ಆಧಾರವಿಲ್ಲದ, ಹೋಟೆಯಿಲ್ಲದ, ನಿರಾಧಾರವಾದ. v. *Unsupported.*

Untainted, a. ಭಂಗಿಸದ, ಭಗ್ನವಿಲ್ಲದ, ಕೆಡಿಸದ, ನಿಷ್ಕಳಂಕದ. v. *Unsullied, unsuspected.*

Untaken, a. ತಕ್ಕೊಳ್ಳದ, ಕಸುಕೊಳ್ಳದ.

Untameable, a. ಸಾದಾಗದ, ಶಿಕ್ಷಕೂಡದ, ಸಾಧ್ಯವಾಗದ. v. *Ungovernable.*

Untamed, a. ಸಾದಕೆಯಿಲ್ಲದ, ಶಿದ್ದದ, ಅಸಾದಿನ, ಇರಕಳದ.

Untasted, a. ರುಚಿ ನೋಡದ, ಸ್ವಾದನೋಡದ, ಸವಿನೋಡದ.

Untaught, a. ಕಲಿಸದ, ಶಿಕ್ಷಿಸದ, ಬುದ್ಧಿಹೊಂದ್ಯದ, ತಿಳುವಳಿಕೆಯಿಲ್ಲದ. v. *Ignorant.*

Untenable, a. ನಿರ್ವಹಿಸಕೂಡದ, ನಿರ್ವಾಹಕ ಮಾಡಕೂಡದ.

Untenanted, a. ಹಾಳಾದ, ಒಕ್ಕಲಿಲ್ಲದ. v. *Unpossessed.*

Unterrified, a. ಭಯಪಡದ, ಭಯಂಕರವಿಲ್ಲದ, ಹೆದರಿಕೊಳ್ಳದ.

Unthankful, a. ಉಪಕಾರನೆನೆಸದ, ಕೃತಘ್ನದ. v. *Thankless.*

Unthankfully, ad. ಉಪಕಾರನೆನೆಸದಹಾಗೆ, ಕೃತಘ್ನವಾಗಿ.

Unthankfulness, s. n. ನಂಮಕಹರಾಮ, ಕೃತಘ್ನತ್ವವು, ಉಪಕಾರನೆನಸದಿರುವಿಕೆಯು. v. *Thanklessness, ingratitude.*

Unthinking, a. ಆಲೋಚಿಸದ, ಹಿಂದುಮುಂದರಿಯದ, ದೃಢಂತ್ರವೇಶದ, ಧಡಭಿಡಿಯ, ಸ್ಮರಣೆಯಿಲ್ಲದ, ಮೋದಾಮೋದಿಯ. v. *Thoughtless.*

Unthought, a. (*unheeded*) ಪರವೆಮಾಡದ, ನೆನಪುಬಿಟ್ಟ, ಮರುತುಹೋದ.

To Untie, v. a. ಗಂಟುಬಿಚ್ಚು, ಸಡ್ಲಿಸು, ಬಿಚ್ಚು. v. *To loose, unbind.*

Untied, a. ಗಂಟುಬಿಚ್ಚಿದ, ಸಡ್ಲಿಸಿದ, ಬಿಚ್ಚಿದ.

Until, a. ಮಟ್ಟಿಗೂ, ವರಿಗೂ, ಪರಿಯಂತ್ರಕ್ಕ, ತನಕ, ಇನಕು; Wait here *until* I come ನಾನುಬರುವಪರಿಯಂತ್ರಕ್ಕೂ ನೀನಿಲ್ಲಿರು, or ನಾನುಬರುವಮಟ್ಟಿಗೂ ನೀನಿಲ್ಲಿನಿಂತುಕೊ; The weather will continue hot *until* the rains set in ಮಳೆಬರುವಪರಿಯಂತ್ರಕ್ಕೂ ಉಷ್ಣಕಾಲವಿರುವದು, or ಮಳೆಕಾಲವಾಗುವಪರಿಯಂತ್ರಕ್ಕೂ ಬಿಸಿಲುಕಾಲಹೋಗದು.

Untilled, a. ಹಸನಾಗದ, ಹಸನಿಲ್ಲದ. v. *Uncultivated.*

Untimely, a. ಅಕಾಲದ, ಅಸಮಯದ, ಅಯೋಗ್ಯದ; (*an untimely birth*) ಅಳವಿಳುವಿಕೆ, ಕಂದುಹಾಕುವಿಕೆ; (*an untimely end*) ದುರ್ಮರಣ, ಪಿಟ್ಟುಪಿಡುಗಸಾವು, ಅಕಾಲಮೃತ್ಯುವು, ಅನ್ಯಾಯದಸಾವು.

Untinged, a. (*not coloured*) ಬಂಣಾಹಚ್ಚದ, ರಂಗುಹಾಕದ.

Untired, a. ಆಯಾಸವಿಲ್ಲದ, ದಣುವಿಲ್ಲದ, ಬೇಸರವಿಲ್ಲದ, ಅಲಸಟೆಯಿಲ್ಲದ.

Untitled, a. ವಕ್ಕಿಣೆಯಿಲ್ಲದ, ಅಲ್ಕಾಬುಯಿಲ್ಲದ.

Unto, v. *To.*

Untold, a. (*unrevealed*) ಹೇಳದ, ತಿಳಿಸದ.

Untouched, a. ಮುಟ್ಟದ, ತಾಕದ, ಕೈಯಿಡದ. v. Also *unmoved, unfelt.*

Untractable, a. ಅಸಾದಿನ, ಸಾದುಯಿಲ್ಲದ, ವಿಧೇಯವಿಲ್ಲದ, ಅವಂಕೆಯಿಲ್ಲದ, ಅಂಕೆಗೆಬಾರದ. v. *Unmanageable, ungovernable.*

Untractableness, s. n. ಅಸ್ವಾದವು, ಅವಿಧೇಯವು.

Untrained, a. ರೂಢಿಸದ, ತರಬೀಯಯಾಗದ, ಶೀಕಾಷಿಸದ.

Untried, a. ಶೋಧಿಸದ, ಪರೀಕ್ಷೆಮಾಡದ, ವಿಚಾರಿಸದ. v. *Inexperienced.*

Untrod, Untrodden, a. ತುಳಿಯದ.

Untroubled, a. ಪೀಡಿಸದ, ಆಯಾಸಪಡಿಸದ, ಬೇಸರಗೊಳಿಸದ. v. *Unvexed, undisturbed, clear.*

Untrue, a. ಅನಿಶ್ಚಯ, ಅಪದ್ಧ, ನಿಜವಲ್ಲದ, ಸುಳ್ಳಿನ, ಹುಸಿಯ. v. *False.* (*faithless*) ನಂಬಕೂಡದ, ಮೋಸದ, ವಂಚನೆಯ, ದಗಾಬಾಜಿತನದ.

Untruly, ad. ಅನಿಶ್ಚಯವಾಗಿ, ಅಬದ್ಧವಾಗಿ, ಸುಳ್ಳಾಗಿ, ಹುಸಿಯಾಗಿ.

Untrustiness, s. n. ಅಪ್ರಮಾಣತ್ವ, ಅಸಜ್ಜನತನ, ದಗಲಬಾಜಿತನ. v. *Unfaithfulness.*

Untruth, s. n. ಸುಳ್ಳು, ಅಪದ್ಧವು, ಹುಸಿಯು, ಅನೃತವು, ಅಪ್ರಮಾಣವು, ಮಿಥ್ಯೆ. v. *Falsehood.*

Unturned, a. ತಿರಗೊಂಡಿದಿಯದ.

To Untwine, v. a. (*untwist*) ಹುರಿಬಿಚ್ಚು.

Unvanquished, a. ಜಯಿಸದ, ಗೆಲ್ಲದ, ಕೈವಶಮಾಡದ. v. *Unconquered.*

Unvaried, Unvariable, Unvarying, a. ಚಂಚಲವಿಲ್ಲದ, ಹೆಚ್ಚುಕಡಿಮೆಯಾಗದ.

To Unveil, v. a. ಮುಸುಕುತೆಗೆಯು, ಮರೆತೆಗೆಯು, ಮುಚ್ಚಳ ತೆಗೆಯು, ಬಹಿರಂಗ ಮಾಡು.

Unversed, a. ಆಲೋಚನೆಯಿಲ್ಲದ, ರೂಢಿಯಿಲ್ಲದ, ಅಸುಕ್ತಿವಿಲ್ಲದ. v. *Unskilled, ignorant.*

Unvexed, a. ಪೀಡಿಸದ, ಬೇಸರಗೊಳಿಸದ, ವೇದಿಸದ. v. *Undisturbed.*

Unviolated, a. (*not injured*) ನಷ್ಟಮಾಡದ, ಭಗ್ನಮಾಡದ; (*not broken, as a promise, &c.*) ತಪ್ಪದ, ಮೀರದ, ಅತಿಕ್ರಮಿಸದ; (*not deflowered*) ಕೆಡಿಸದ, ವ್ರತಭಂಗ ಮಾಡದ.

Unused, a. ಬಳಸದ, ಬಳಿಕೆಮಾಡದ.

Unuseful, a. ಕೆಲಸಕ್ಕೆಬಾರದ. v. *Useless.*

Unusual, a. ವಾಡಿಕೆಯಿಲ್ಲದ, ಅಪರೂಪದ. v. *Uncommon.*

Unutterable, a. ಹೇಳಕೂಡದ.

Unwalled, a. ಗೋಡೆಯಿಲ್ಲದ.

Unwarily, ad. ಎಚ್ಚರಿಕೆಯಿಲ್ಲದೆ, ಅಜಾಗ್ರತೆಯಾಗಿ. v. *Carelessly.*

Unwariness, s. n. ಅಜಾಗ್ರತೆಯು, ಸ್ಮರಣೆತಪ್ಪಿಯಿರುವದು, ಮೈಮರತಿರುವದು. v. *Carelessness.*

Unwarlike, a. ಯುದ್ಧಕೆಸಾಧಕವಿಲ್ಲದ.

Unwarned, a. ಎಚ್ಚರಿಸದ, ಮುಂಛೆಗದ, ಮುಂಚೆ ತಿಳಿಸದ.

Unwarrantable, a. ನಿರಪ್ಪಣೆಯ, ನಿರಾಜ್ಞೆಯ.

Unwary, a. ಅಜಾಗ್ರತೆಯ, ಎಚ್ಚರಿಕೆಯಿಲ್ಲದ, ಮೈಮರತಿರುವ. v. *Careless, imprudent, rash, precipitate.*

Unwashed, a. ತೊಳೆಯದ, ಅಶುಚಿಯ, ಮೈಲಿಗೆಯ. v. *Nasty, dirty.*

Unwearied, a. ಆಯಾಸವಿಲ್ಲದ, ದಣುವಿಲ್ಲದ, ಬೇಸರವಿಲ್ಲದ, ಶ್ರಮವಿಲ್ಲದ. v. *Indefatigable, incessant.*

Unwelcome, a. ಮನೋರಮ್ಯವಾಗದ, ಯುಕ್ತವಿಲ್ಲದ. v. *Unpleasant, disagreeable.*

Unwell, a. ಸ್ವಸ್ಥವಿಲ್ಲದ, ಕ್ಷೇಮವಿಲ್ಲದ, ಜಾಡ್ಯದ.

Unwholesome, a. ಶರೀರಕ್ಕೆಆಗಿಬಾರದ, ಶರೀರಕ್ಕೆಒಂಟದ, ದೇಹಕೆಅನುಕೂಲವಿಲ್ಲದ.

Unwieldy, a. ಅಳವಲ್ಲದ, ಭಾರವಾದ, ಅಮರದ, ಹವಣಿಲ್ಲದ. v. *Ponderous, weighty, awkward.*

Unwieldiness, s. n. ಭಾರವು. v. *Heaviness.*

Unwieldily, ad. ಭಾರವಾಗಿ, ಅಮರದ್ದಾಗಿ. v. *Heavily, awkwardly.*

Unwilling, a. ಮನಸ್ಸಿಲ್ಲದ, ಸಂಮತಿಯಿಲ್ಲದ, ಸಮಾಧಾನವಿಲ್ಲದ.

Unwillingly, ad. ಅಸಂಮತಿಯಾಗಿ, ಅಸಮಾಧಾನವಾಗಿ.

Unwillingness, s. n. ಅಸಮಾಧಾನವು, ಅಸಂಮತಿಯು.

To Unwind, v. a. (*a clew, &c.*) ಬಿಚ್ಚು, ಸುತ್ತುಬಿಚ್ಚು.

Unwise, a. ಅಪ್ರಬುದ್ಧಿಯ, ಬುದ್ಧಿಹೀನದ, ಅಜ್ಞಾನದ, ಜಾಣತನವಿಲ್ಲದ. v. *Ignorant, weak, imprudent.*

Unwisely, ad. ಅಪ್ರಬುದ್ಧಿಯಾಗಿ, ಅಜ್ಞಾನವಾಗಿ, ಹುಚ್ಚಾಗಿ.

Unwished, a. ಅಪೇಕ್ಷಿಸದ, ಇಚ್ಛೈಸದ, ಪ್ರೇಮಿಸಲ್ಲದ, ಆಶಿಸದ.

Unwitnessed, a. ಸಾಕ್ಷಿಯಿಲ್ಲದ, ನೋಡದ.

Unwittingly, ad. ಬೇಕೆಂದಿಲ್ಲದೆ.

Unwonted, a. ವಾಡಿಕೆಯಿಲ್ಲದ, ರೂಢಿಯಿಲ್ಲದ.

Unworshipped, a. ಭಜಿಸದ, ವಂದಿಸದ, ಆರಾಧಿಸದ, ಪೂಜಿಸದ.

Unworthily, ad. ಅಪಾತ್ರವಾಗಿ, ಅಪ್ರಯೋಜಕವಾಗಿ.

Unworthiness, s. n. ಅಪಾತ್ರವು, ಅಪ್ರಯೋಜಕವು. v. *Worthlessness.*

Unworthy, a. ಅಪಾತ್ರದ, ಅಪ್ರಯೋಜಕವಾದ, ಅಯೋಗ್ಯದ. v. *Worthless, mean, unsuitable.*

To Unwreathe, v. a. ಸುತ್ತುಬಿಚ್ಚು, ಬಿಚ್ಚು. v. *To untwine.*

Unwritten, a. ಬರೆಯದ, ಲಿಖಿತವಿಲ್ಲದ. v. *Oral, traditional.*

Unwrought, a. ಕೈಕೃತ್ಯವಾಗದ.

To Unyoke, v. a. ನೊಗತೆಗೆಯು, ನೊಗಬಿಚ್ಚು.

Unyoked, a. ನೊಗಬಿಚ್ಚಿದ, ನೊಗಹಾಕದ.

Vocabulary, s. n. ಮಾತಿನಪುಸ್ತಕ, ವಂಟಿಮಾತಿನವಳಿ; (*to learn a vocabulary*) ಮಾತುಗಳುಕಲಿಯು, ಪಾಠಮಾಡು.

Vocal, a. ಬಾಯಿಶಬ್ದದ.

Vocation, s. n. (*calling, trade*) ಉದ್ಯೋಗ, ಶಿಲಸ, ವ್ಯವಹಾರ.

Vocative, (*part of speech*) ಪ್ಲುತ; (*a vocative of sorrow*) ವ್ಯಾಕುಲಪ್ಲುತ; (*a vocative of lamentation*) ರೋದನಪ್ಲುತ; (*a vocative of fear*) ಭಯಪ್ಲುತ; (*a vocative of distance*) ಆಹ್ವಾನಪ್ಲುತ; (*a vocative of praise*) ಸಂಗೀತಪ್ಲುತ; (*a vocative of doubt*) ಸಂದೇಹಪ್ಲುತ.

Vociferation, s. n. ಕೂಗುವಿಕೆ, ಗಲ್ಲು. v. *Clamour, outcry.*

Vociferous, a. ಕೂಗುವಿಕೆಯ, ಗಲ್ಲಿನ. v. *Clamorous, noisy.*

To Vociferate, v. n. ಕೂಗು, ಗಲ್ಲುಮಾಡು, ಬಿಗಿಯಾಗಿಮಾತಾಡು.

Vogue, a. ವಾಡಿಕೆಯ, ಲಕ್ಷಿಕೆಯ.

Voice, s. n. ಧ್ವನಿ, ಶಬ್ದ, ಬಾಯಿಶಬ್ದ, ವ್ಯಾಹಾರ,

ಉಕ್ತಿ, ಲಪಿತ, ಭಾಷಿತ, ವಚನ, ವಚಸ್ಸು, ವಾಕ್ಯ; (a loud voice) ಕೇಕೆ, ಬೊಬ್ಬೆ, ಆರ್ಭಟಿ, ಕಿಲರ್ಕ. v. *Clamour.* (to cry with a loud voice) ಕೇಕೆಹಾಕಿಕೂಗ; (having a loud voice) ಬಿರುಕುತ್ತಿಕೆಯುಳ್ಳ, ಭಾರಿಕಂಠವುಳ್ಳ, ಗಂಭೀರಧ್ವನಿಯ, ಸಿಂಹನಾದದ; (having a sweet voice) ಮಾಧುರ್ಯಧ್ವನಿಯ, ಕೋಕಿಲಸ್ವರದ, ಕಲಕಂಠದ; (a sweet voice) ಮಾಧುರ್ಯಧ್ವನಿ, ಕೋಕಿಲಧ್ವನಿ, ಮನೋಹರಧ್ವನಿ, ಶ್ರವಣಾನಂದಸ್ವರ; (a shrill voice) ಕೀಚುಕಂಠ, ಕೀರುಧ್ವನಿ; (a loud voice) ಗಂಭೀರಧ್ವನಿ, ಯತ್ತುಕಂಠ, ಸಿಂಹನಾದ; (a hoarse voice) ಗೊಗರಿಧ್ವನಿ, ತಗ್ಗುಕಂಠ.

Void, a. ಬರಿದಾದ, ನಿರಾಮಯವಾದ, ಶೂನ್ಯವಾದ. v. *Empty, vacant.* (null, vacated) ನಿಲ್ಲಿಸಿದ, ತೆಗದುಹಾಕಿದ. v. Also *ineffectual, vain, unsubstantial.* (void of care) ನಿಶ್ಚಿಂತೆಯ, ನಿರ್ವ್ಯಸನದ.

Void, s. n. ಬಯಲು, ಬರಿಬಯಲು, ಶೂನ್ಯ, ಗಗನ.

To Void, v. a. (leave empty) ಬರಿದುಮಾಡ; (to make null) ನಿಲ್ಲಿಸ, ತೆಗದುಹಾಕ. v. *To nullify, abolish, abrogate, repeal.* (to pour out) ಹೊಯ್ಯ, ಸುರಿಯ. v. *To shed.* (to void excrement) ಶೌಚಮಾಡ, ಹೊರಕಡೆಗೆಹೋಗ, ಎರಡಕ್ಕೆಹೋಗ, ಬಹಿರ್ದೇಶಕ್ಕೆಹೋಗ.

Voidable, a. (possible to be annulled) ವಿಸರ್ಜಿಸಿಬಿಡುವ, ತಪ್ಪಿಸಿಬಿಡುವ, ಬಿಟ್ಟುಬಿಡುವ.

Voided, a. (emptied) ಬರಿದುಮಾಡಿದ, ಶೂನ್ಯಮಾಡಿಬಿಟ್ಟ.

Voider, s. n. (in which dishes, fragments, &c. are carried from table) ತಲ್ಲೆ. v. *Tray.*

Voidness, s. n. ಶೂನ್ಯತ್ವ, ಬರಿದು. v. *Emptiness.*

Volatile, Volant, a. (flying through the air) ಹಾರುವ, ಎಗರುವ; (lively, fickle) ಚಪಲತ್ವದ, ಚಪಲತನದ, ಚಟುವಟಿಕೆಯ, ಗಡಿಬಿಡಿಯ.

Volatileness, Volatility, s. n. ಚಪಲತನ, ಚಪಲತ್ವ, ಚಟುವಟಿಕೆ, ಗಡಿಬಿಡಿ, ಬಾಷ್ಪಾಳಿಕೆ. v. *Fickleness, levity.*

Volcano, s. n. ಜ್ವಾಲಾಮುಖಿ, ಉಕ್ಕೆ, ಅಗ್ನಿಪರ್ವತ.

Volition, s. n. ಚಿತ್ತ, ಮನವು, ಈಪ್ಸೆ, ಇಚ್ಛೆ.

Volley, s. n. (a flight of arrows) ಶರವೃಷ್ಟಿ, ಪುಂಖಾನುಪುಂಖ.

Volubility, s. n. (of speech) ಬಡಬಡ, ಹೊಡಹೊಡ; (mutability, liableness to change) ಚಂಚಲ, ಚಪಲತನ; (the act or power of rolling round) ಆವರ್ತ, ಆವರಣ, ಪರಿವೇಷ್ಟನೆ, ಸುತ್ತಿತಿರುಗುವಿಕೆ, ಪ್ರದಕ್ಷಿಣೆ.

Voluble, a. (fluent in speech) ಹೊಡಿಬಿಡಿಯ, ಗಡಿಬಿಡಿಯ, ವಾಗ್ಮಿಯ; (rolling, easily put in circular motion) ಪ್ರದಕ್ಷಿಣೆಯಾದ, ಆವರ್ತನೆಯುಳ್ಳ, ಅತಿವರ್ತನೆಯ, ಸುತ್ತುತಿರುಗುವ; (unsteady) ಚಂಚಲದ, ಚಪಲತೆಯ.

Volume, s. n. ಸಂಪುಟ; (a book of two volumes) ಎರಡುಸಂಪುಟದ ಪುಸ್ತಕ; (three volumes of books) ಮೂರುಪುಸ್ತಕಗಳು.

Voluminous, a. ವಿಸ್ತಾರವಾದ, ಬಾಹುಳ್ಯವಾದ. v. Copious, diffusive.

Voluntarily, ad. ತಾನಾಗಿ, ಮನೋತ್ಸಾಹವಾಗಿ, ನಿಕಾಯವಾಗಿ, ಕಾಮವಾಗಿ, ಪ್ರಕಾಮವಾಗಿ, ಪರ್ಯಾಪ್ತವಾಗಿ, ನಿಕಾಮೇಷ್ಟವಾಗಿ, ಯಥೇಪ್ಸಿತವಾಗಿ.

Voluntary, a. ಮನೋತ್ಸಾಹದ.

Volunteer, s. n. ಉಮೇದವಾರ, ಸಂಬಳವಿಲ್ಲದ ಫೌಂಟಿ, ಪುಕಟೆಕಾಯುವವ, ಬಿಟ್ಟಿಯಾಳು.

To Volunteer, v. n. ಶಿಪಾಯಿ ಆಗು, ಫೌಂಟಿನಾಗು.

Voluptuary, s. n. ಭೋಜನಪ್ರಿಯನು, ಊಟದಲ್ಲಿ ಪ್ರೀತಿಯಾದವನು.

Voluptuous, a. ಭೋಜನಪ್ರಿಯವಾದ, ಊಟದಲ್ಲಿ ಪ್ರೀತಿಯುಳ್ಳ, ಡುಲಾಬಿತನದ.

Voluptuously, ad. ಭೋಜನಪ್ರಿಯವಾಗಿ, ಊಟದಲ್ಲಿ ಪ್ರೀತಿಯಾಗಿ, ಡುಲಾಬಿತನವಾಗಿ, ತಿಂಡೋಡಿತನವಾಗಿ.

Voluptuousness, s. n. ಭೋಜನಪ್ರಿಯ, ಊಟದಲ್ಲಿ ಪ್ರೀತಿ, ಡುಲಾಬಿತನ, ತಿಂಡೋಡಿಗತನ.

To Vomit, v. a. ವಾಂತಿಮಾಡು, ವಾಕರಿಸು, ಕಾರು.

Vomit, Vomition, s. n. *(act of vomiting)* ವಾಂತಿ, ವಾಕರಿಕೆ, ವಮನ; *(a flux and vomiting)* ವಾಂತಿಭ್ರಾಂತಿ; *(vomiting much)* ಅತಿವಾಂತಿ; *(the matter thrown up in a vomit)* ತಿಮಡೆ, ಕಾರಿಕೆ, ಬೋಂಪು; *(a vomit or emetick)* ವಾಂತಿ ಔಷಧ; *(the place where a person vomits)* ಕಾರಿಕೆಡೆ, ಕಾರಿಕೆಸ್ಥಲ.

Vomited, a. ಕಾರಿದ; He has *vomited* up his dinner ಉಂಡದ್ದುಯೆಲ್ಲಾನು ಕಾರಿಕೊಂಡ, or ಊಟವೆಲ್ಲಾ ವಾಂತಿಮಾಡಿಕೊಂಡ.

Vomitory, Vomitive, a. ವಾಂತಿಯಾಗುವ, ವಮನವಾಗುವ.

Voracious, a. ಗಬಾಡಿಸುವ, ಗಬಗಬರಿಸುವ, ಕೂರಿಕೊಳ್ಳುವ, ಹಂಡಾಂಡತನದ, ಬಹ್ವಾಶಿ. v. *Ravenous, greedy.*

Voraciousness, Voracity, s. n. ಹಂಡಾಂಡತನ, ಗಬಾಡಿಸುವಿಕೆ, ಗಬಗಬ. v. *Ravenousness.*

Vortex, s. n. ಪರಿವರ್ತನೆ, ಆವರ್ತನೆ, ಚಕ್ರ, ಗಿಂಮಿದಿರುಗುವಿಕೆ.

Votary, s. n. ವ್ರತಿ, ನಿಯಾಮಕನು, ನಿಯಮಸ್ಥನು, ಉಪಾಸಕನು, ಭಕ್ತನು, ದಾಸನು.

Vote, s. n. ರಜಾವಂದಿ, ರಾಜಿ, ಸಮ್ಮತ, ವರ್ತಾಸೆ, ಬೆಂಬಾಸತಿ, ಪುಸ್ತಿ.

To Vote, v. n. ರಾಜೀಪಡು, ಆರಿಸಿಕೊಳ್ಳು.

Votive, a. *(given by votes)* ರಜಾವಂದಿಯಾದ, ಆರಿಸಿತೆಗೆದುಕೊಂಡ.

To Vouch, v. a. ನಿಶ್ಚಯಿಸು, ಶಿದ್ಧಾಂತಮಾಡು, ದೃಢಪಡಿಸು, ಸ್ಥಾಪಿಸು. v. *To attest, prove.*

Vouched, a. ನಿಶ್ಚಯಿಸಿದ, ಶಿದ್ಧಾಂತಮಾಡಿದ, ದೃಢಪಡಿಸಿದ. v. *Proved.*

Voucher, s. n. ಸಾಕ್ಷಿ, ದೃಷ್ಟಾಂತ, ದಸ್ತೈವಜು. v. *Proof, witness.*

To Vouchsafe, v. a. ದಯಪಾಲಿಸು, ದಯಮಾಡು, ಅನುಗ್ರಹಿಸು. v. *To permit, grant, condescend, deign.*

Vouchsafement, s. n. ದಯಪಾಲಿಸುವಿಕೆ, ಅಪ್ಪಣೆ, ನಿರೂಪ. v. *Grant, permission, condescension.*

Vow, s. n. ವ್ರತ, ಹರಿಕೆ, ಹ್ಯೋರಿಕೆ, ಇಷ್ಟ,

ಪ್ರತಿಜ್ಞೆ, ಹರಕೆ; (*any thing dedicated to God in consequence of a vow*) ಮುಡುಪು, ಮೀಸಲು, ನೈವೇದ್ಯ; (*to perform a vow*) ನೋನು, ಹರಿಕೆತೀರಿಸು.

To Vow, v. a. ವ್ರತಮಾಡು, ಹರಿಕೆಮಾಡು, ಮೀಸಲುಮಾಡು. v. *To promise.*

Vowel, s. n. ಜೀವಾಕ್ಷರ, ಸ್ವರಾಕ್ಷರ.

Voyage, s. n. ಸಮುದ್ರಪ್ರಯಾಣ, ಹಡಗಪ್ರಯಾಣ.

To Voyage, v. a. ಸಮುದ್ರಪ್ರಯಾಣಮಾಡು.

Voyager, s. n. ಸಮುದ್ರಪ್ರಯಾಣಿಗನು.

Up, prep. ಮೇಲೆ, ಉಪರಿ; (*to come up*) ಏರಿಬರು, ಮೇಲಕ್ಕೆಬರು; (*to go up*) ಮೇಲಕ್ಕೆಹೋಗು, ಏರು; (*to run or get up*) ಹತ್ತಿಹೋಗು, ಏರಿಹೋಗು, ಎಗರು; (*to rise up, as the sun*) ಸೂರ್ಯಾಸ್ತಮಯವಾಗು; (*to stand up*) ಎದ್ದುನಿಲ್ಲು, ಎದ್ದುನಿಂದಿರು; (*to bring up, educate*) ಸಾಕು, ಮುಂದಕ್ಕೆತರು, ಪೋಷಿಸು, ಬುದ್ಧಿವಂತನ್ನಮಾಡು; (*to give up*) ಒಪ್ಪಿಸಿಕೊಡು, ಕೊಟ್ಟುಬಿಡು, ಬಿಟ್ಟುಬಿಡು. v. *To resign, surrender.* (*to give up an office*) ಸಾಹಮಾಧಿಕೊಳ್ಳು. v. *To resign.* (*to spring up*) ಮೊಳೆಕಿಹೋಗು, ಮೊಳೆಯು, ಚಿಗುರು, ನಿಕ್ಕು; (*to stir up*) ಉಲ್ಬಣಮಾಡು, ಪ್ರೇರೇಪಿಸು, ಹುರಿಕಲ್ಪಿಸು. v. *To excite, instigate.* (*to stir up sedition*) ಹುರಿಕಲ್ಪಿಸು, ಎಗಬಾಚು, ಬೆಂಕಿಹಚ್ಚು, ಕೊಳ್ಳಿಬಾಚು; (*to bear up*) ವಹಿಸು, ಆತುಕೊಳ್ಳು, ಹೊತ್ತುಕೊಳ್ಳು, ಪೋಟಿಯಿಡು. v. *To prop, support, sustain.* (*to raise up*) ಎಬ್ಬಿಸು, ಎತ್ತಿಸು, ಎತ್ತಮಾಡು; (*to blow up or swell*) ಬಾಯು, ಉಬ್ಬು; ಊದು, ಊಬಕಾಯಿಸು; (*to blow up with gunpowder*) ಉಡಾಯಿಸು, ಹಾರಿಸು; (*to tear up by the roots*) ಬೇರುಕಿತ್ತು, ನಿರ್ಮೂಲಮಾಡು. v. *To eradicate.* (*up and down*) ಮೇಲೆಕೆಳಗೆ, ಕೆಳಗೆಮೇಲೆ, ತಲೆಕೆಳಗೆ, ಅಡಿಮೇಲು; (*up to this time*) ಇಂದಿನವರಿಗೂ, ಈವರಿಗು, ಈವಟ್ಟಿಗು; (*up to that time*) ಆಕಾಲದವರಿಗೂ, ಅಂದಿನವಟ್ಟಿಗೂ, ಆವಟ್ಟಿಗೂ, ಆಪರಿಯಂತ್ರರಕ್ಕೂ; (*up, get up*) ಎದ್ದೇಳು, ಏಳು; (*up with it*) ಅದನ್ನೆಬ್ಬಿಸು, ಅದನ್ನೆತ್ತು; The sun is *up* ಸೂರ್ಯಅಸ್ತಮಯವಾಗಿದ್ದಾನೆ; I am *up* ನಾಕಿಳಿದೆನು; (*up to the rules*) ಆಜ್ಞಾನುಸಾರಣೆಯಾಗಿ, ಪದ್ಧತಿಯಪ್ರಕಾರಕ್ಕೆ; From my youth *up* ನನ್ನಚಿಕ್ಕತನಮೊದಲ್ಗೊಂಡು, ಚಿಕ್ಕಂದಿನಿಂದ; (*up to the knee*) ಮೊಣಕಾಲುವಟ್ಟಿಗೂ; Drink it *up* ಕುಡಿದುಬಿಡು; Lock it *up* in the box ಅದನ್ನಪೆಟ್ಟಿಗೆಯಲ್ಲಿಟ್ಟು ಬೀಗಹಾಕಿಬಿಡು; He is *up*stairs ಅವನುಮೇಲಿದ್ದಾನೆ, or ಅವನುಮೆಲಂತಸ್ತಿನಲ್ಲಿದ್ದಾನೆ, or ಅವನುಮೇಲ್ಮಾಳಿಗೆಯಲ್ಲಿದ್ದಾನೆ; His blood is *up* ಅವನುಸಿಟ್ಟಿನಲ್ಲಿದ್ದಾನೆ, or ಅವನುರಂಗಾಗಿದ್ದಾನೆ; (*to do up a letter*) ಕಾಗದಮಡಿಸಿಬಿಡು, ಲಖೋಟಾಮಾಡಿಬಿಡು.

To Upbraid, v. a. ಕುಂಗಿಸು, ಸಗ್ಗಿಸು, ಹಂಗಿಸು. v. *To reproach, revile.* (*to upbraid one with a favour conferred*) ಎತ್ತಿಮಾತಾಡು, ರಂಧ್ರಾನ್ವೇಷಣೆಮಾಡು, ಹೇರುಗರ್ವಿತವಾಡು, ಹಂಗಿಸು.

Upbraidingly, ad. ದೂಷಣಗರ್ಭಿತವಾಗಿ, ಛಿದ್ರಾನ್ವೇಷಣೆಯಾಗಿ, ಅಡಿಗೆಯಾಗಿ, ಚೋಟುಮಾತಾಗಿ.

Upcast, a. ಮೇಲಕ್ಕೊಗೆದ, ಮೇಲೊಗೆದ.

Upheld, a. (*maintained*) ಉದ್ಧರಿಸಿದ, ಉದ್ಧಾರಮಾಡಿದ, ವಹಿಸಿದ; (*supported, propped*) ಆತುಕೊಂಡ, ಹೊತ್ತುಕೊಂಡ, ತಾಳಿದ.

To Uphold, v. a. ಉದ್ಧಾರಮಾಡು, ನಿರ್ವಾಹಮಾಡು, ಕಾಪಾಡು, ಹೊತ್ತುಕೊಳ್ಳು. v. *To support, sustain, maintain.*

Upholder, s. n. ಉದ್ಧರಿಸುವವ, ಉದ್ಧಾರಕ. v. *Supporter.*

To Uplift, v. a. ಎಬ್ಬಿಸು, ಎತ್ತು, ಉಚಲಾಯಿಸು, ಉರಾಯಿಸು.

Upmost, a. ಅಷ್ಟಕ್ಕೂಮೇಲಿರುವ. v. *Uppermost, highest.*

Upon, prep. ಮೇಲೆ; (*upon the right hand*) ಬಲಪಾರ್ಶ್ವದಲ್ಲಿ, ಬಲಗಡೆಯಲ್ಲಿ; (*upon his coming*) ಅವನುಬರುವಾಗಲು; When I was *upon* my journey ನಾನುಪ್ರಯಾಣವಾಗಿಹೋಗುವಾಗ, or ನಾನುದಾರಿನಡೆಯುವಾಗ; *Upon* the first opportunity ಸಮಯವಾದಾಗ, or ವೇಳೆದೊರಕಿದಾಗ, or ಕೈರಿಕೆಯಾಗುತ್ತಲೆ; *Upon* his recommendation ಅವನಶಿಫಾರಸಿನಮೇಲೆ, or ಅವನಶಿಫಾರಶಿನಿಂದ, or ಅವನವಾಕ್ಸಹಾಯದಿಂದ; He is *upon* his knees ಅವನುಮೊಣಕಾಲಮೇಲೆನಿಂತಿದ್ದಾನೆ; He lies *upon* his face ಅವನುಬೋರ್ಲಬಿದ್ದಿದ್ದಾನೆ, ಮಲಗಿದ್ದಾನೆ; He *lies* upon his back ಅವನುಅಂಗಾತನಾಗಿಮಲಗಿದ್ದಾನೆ, or ಅವನುಅಂಗಾತನಾಗಿಬಿದ್ದಿದ್ದಾನೆ; *Upon* my word ನನ್ನಮಾತನಂಬು; (*to impose upon one*) ಮೋಸಗೊಳಿಸು, ವಂಚಿಸು, ಮೋಸಮಾಡು, ದಗೆಮಾಡು; It is *upon* record ಅದುದಪ್ತರದಲ್ಲಿಬರದದೆ, or ಅದುಲೆಖ್ಖದಲ್ಲಿದಾಖಲಾಗದೆ; *Upon* the whole ಕಾರ್ಯವೆಲ್ಲಾನೋಡಿದರೆ; *Upon* that day ಆದಿನದಲ್ಲಿ, ಅಂದು, ಆದಿನವೆ; *Upon* our lives ನಮ್ಮಪ್ರಾಣಗಂಡಾಂತರವಾಗಿ; What are you *upon*? ಯಾವದರಮೇಲೆಯಿದ್ದೀ, ಏನುಧ್ಯಾನಿಸುತ್ತೀ, ಏನುಯೋಚಿಸುತ್ತೀ; *Upon* it they live ಅವರುಅದರಮೇಲೆಬದುಕುತ್ತಾರೆ, or ಅವರದರಿಂದುಪಜೀವಿಸುತ್ತಾರೆ; He is *upon* his departure ಅವನುಪ್ರಯಾಣದಾಯತ್ತನಾಗಿದ್ದಾನೆ, or ಅವನುಹೊರಡಲಿಕ್ಕೆಯಿದ್ದಾನೆ; *Upon* a mere suspicion ಬರೀಸಂಶಯದಿಂದ, ವೃಥಾಅನುಮಾನದಿಂದ; *Upon* a perusal of the papers ಕಾಗದಗಳನ್ನೋದಿದತರುವಾಯ, ಸುಗಾವಲೋಕನೆಯಾದತರುವಾಯ.

Upper, a. ಮೇಲಿನ. v. *Superior.* (*the upper side*) ಮೇಲ್ಭಾಗ, ಮೇಲ್ದಶೆ, ಮೇಲ್ಗಡೆ; (*the upper lip*) ಮೇಲ್ದುಟಿ, ಮೇಗಿನತುಟಿ; (*an upper story*) ಉಪ್ಪರಿಗೆ, ಮಾಡ, ಕಡುವಾಡ.

To Upraise, Uprear, v. a. ಎಬ್ಬಿಸು, ಎತ್ತು, ತಲೆಯಗಟ್ಟು, ಏರಮಾಡು. v. *To raise, exalt.*

Upright, a. (*straight up*) ನೇಟಾದ, ಚೂಟಿಯಾದ, ನೆಟ್ಟಗೆ, ಸರಿಯಾದ; (*honest*) ನಿಷ್ಕಪಟವುಳ್ಳ, ನಿರ್ವಂಚನೆಯ, ಸಜ್ಜನನಾದ, ಪ್ರಶಸ್ತನಾದ; (*an upright man*) ಸಜ್ಜನನು, ನಿಷ್ಕಪಟನು, ನಂಬಿಗಸ್ತನು, ಪ್ರಶಸ್ತನು.

Uprightly, ad. *(perpendicularly)* ನೀಟಾಗಿ, ಜೋಟಿಯಾಗಿ; *(honestly)* ನಿರ್ವಂಚನೆಯಾಗಿ, ಸಜ್ಜನನಾಗಿ.

Uprightness, s. n. *(straightness)* ನೀಟು, ನೇರ, ಸರಿ, ಸಮ; *(honesty)* ಸಜ್ಜನತ್ವ, ಪ್ರಶಸ್ತಮರ್ಯಾದೆ, ನಿಷ್ಕಾಪಟ್ಯ, ನಿರ್ವಂಚನೆ.

To Uprise, v. *To rise, rise up.*

Uprise, v. *Rise.*

Uproar, s. n. ತುಮುಲ, ಗಬಾರು, ಕಲಕಲ. v. *Tumult, clamour.*

To Uproot, v. a. ಬೇರುಕೀಳ್, ನಿರ್ಮೂಲಮಾಡು. v. *To eradicate, root up.*

To Uprouse, v. a. ಎಚ್ಚರಿಸು, ಮೊಡಿಚೆಬ್ಬಿಸು, ಹೊರಳಿಸೆಬ್ಬಿಸು.

Upshot, s. n. ಆದದ್ದು, ಕಡೆಕ್ಕೇರಿದ್ದು. v. *Conclusion, event.*

Upside-down, a. ತಲೆಕೆಳಗೆ; *(to turn upside down)* ತಲೆಕೆಳಗೆಮಾಡು, ಕೀಳುಮೇಲ್ಮಾಡು.

To Upstart, v. n. ತಂಮಿದೊಂಮಿಯೇಳ್, ದವಲತುಬದಾಯಿಸು.

Upstart, s. n. ನಿಂನೆಮೊಂನಿನವ, ನಡುವಂತ್ರರೈಶ್ವರ್ಯದವ, ನೂತನಭಾಗ್ಯಸ್ಥನು.

Upward, Upwards, ad. ಮೇಲಕ್ಕೆ; *(towards a higher place)* ಮೇಲಂತಸ್ತಿಗೆ; *(more than)* ಹೆಚ್ಚು, ಹೆಗ್ಗಳ; He is *upwards* of twenty years old ಅವನು ಇಪ್ಪತ್ತು ವರುಷಕ್ಕೆಮೇಲ್ ಪ್ರಾಯದವನಾಗಿದ್ದಾನೆ; It is *upwards* of two years since this happened ಇದುಸಂಭವಿಸಿಯ ಎರಡುವರುಷದಾಟಿಹೋಯಿತು, or ಇದಾಗಿಯ ಎರಡುವರುಷಗಳ್ ಮೇಲಾಯಿತು.

Urbanity, s. n. ಉಪಚಾರ, ಉಪಚರಣೆ, ವಿನಯ. v. *Politeness, elegance.*

Urchin, s. n. ವಾಮನ, ಗಿಡ್ಡ, ಹೋಟ್ಟಿ, ನೆಲಸಂಮ್ಮನು. v. *Dwarf.*

Urethra, s. n. ಮೂತ್ರದ್ವಾರ, ಯೋನಿ.

To Urge, v. a. ಬಹಳವಾಗಿಬೇಡಿಕೊಳ್, ಪೀಡಿಸು, ಕಕ್ಕುಲಾತಿಪಡಿಸು, ಕೋಟಿಕೆಮಾಡು, ಪ್ರೇರೇಪಿಸು. v. *To press, importune, enforce.*

Urged, a. ಪ್ರೇರೇಪಿಸಿದ, ಪೀಡಿಸಿದ, ಬೇಸರಗೊಳಿಸಿದ.

Urgency, s. n. ಅವಸರವು, ಅಗತ್ಯವು, ಪ್ರತ್ಯಾಸಕ್ತಿ, ಜರೂರು, ಅಸವಸ.

Urgent, a. ಅವಸರದ, ಬಹುಅಗತ್ಯದ, ಜರೂರಿನ; *(an urgent affair)* ಬಹುಅಗತ್ಯದಕೆಲಸ, ಬಹುಪ್ರಯೋಜನವಾದಕಾರ್ಯ. v. *Importunate, pressing, violent, cogent.*

Urgently, ad. ಅವಸರವಾಗಿ, ಬೇಸರಿಕೆಯಾಗಿ.

Urger, s. n. ಬೇಸರಗೊಳಿಸುವವ, ಪೀಡಿಸುವವ.

Urinal, s. n. ಬುಡ್ಡಿ, ಶೀಸೆ.

Urinary, a. *(belonging to urine)* ಮೂತ್ರದ, ಉಚ್ಚೆಯ; *(urinative, provoking urine)* ಮೂತ್ರವಿರೋಚನೆಯ.

Urinator, s. n. ಮುಣುಗುವವ. v. *Diver.*

Urine, s. n. ಮೂತ್ರ, ಉಚ್ಚೆ; *(the inspection of urine to discover diseases)* ಮೂತ್ರಪರೀಕ್ಷೆ; *(unusual flow of urine, diabetes)* ಬಹುಮೂತ್ರ; *(retention or stoppage of urine)* ಮೂತ್ರಕೃಛ್ರ, ಮೂತ್ರಕಟ್ಟು; *(heat of urine)* ಉರಿಮೂತ್ರ, ನೀರುಚುರುಕು.

To Urine, v. n. ಕಾಲ್ಮಡಿಮಾಡು, ಮೂತ್ರಶೌಚ್ಯ, ಪಂದಕ್ಕೆಹೋಗು. v. *To piss.*

Urn, s.n. ಅಸ್ಥಿಪಾತ್ರವು; *(water pot)* ಗಡಿಗೆ; *(a brass urn)* ಬಿಂದಿಗೆ, ಕೊಡ.

Us, pro. ನಂಮಂನ; Tell *us* ನಮಗೆಹೇಳು, ನಮಗೆತಿಳಿಸು; Do not beat *us* ನಂಮಂನಬಡಿಯಬೇಡ; Do not deceive *us* ನಂಮಂನಮೋಸಗೊಳಿಸಬೇಡ; He accused *us* falsely ಅವನುನಮಮೇಲಿಲ್ಲದವ್ಯಪದೇಶಹಾಕಿದ.

Usage, s. n. *(treatment)* ನಡಸುವದು, ನಡಶಿಕೊಂಡುಬರುವದು; *(custom)* ಮರಿಯಾದೆ, ನಡತೆ, ಮಾಮೂಲು.

Usance, s. n. ಬಡ್ಡಿ, ಕುಸೀದ, ಜುಂಗಡಿ. v. *Use, usury.*

Use, s. n. *(experience)* ಅನುಭವ, ಅನುಭೋಗ; *(practice)* ರೂಢಿ, ಅಭ್ಯಾಸ, ವಾಡಿಕೆ; *(habit, custom)* ಮರಿಯಾದೆ, ನಡತೆ, ಆಚಾರ; *(the act of employing any thing, to any purpose)* ಬಳಸುವಿಕೆ, ಅನುವರ್ತಿಸುವಿಕೆ, ಆಳುವದು; *(advantage)* ಲಾಭವು, ಆದಾಯವು, ಪ್ರಯೋಜನವು. v. *Utility, convenience, help.* *(use of money)* ಬಡ್ಡಿ, ಜುಂಗಡಿ. v. *Interest, usury.* *(to be of use)* ಪ್ರಯೋಜನವಾಗಿರ, ಕೆಲಸಕ್ಕೆಬರ; Of what *use* is this to you? ಇದರಿಂದನಿನಗೇನುಪ್ರಯೋಜನ, ಇದರಿಂದನಿನಗೇನುಕೆಲಸ; This is of no *use* ಇದುಪ್ರಯೋಜನವಿಲ್ಲ, ಇದುಕೆಲಸವಿಲ್ಲ; *(to employ to a bad use)* ದುಲಾಬಿತನಮಾಡ. v. *To waste.*

To Use, v. a. *(employ to any purpose)* ಬಳಿಸ, ಆಳ; *(to practise)* ಅಭ್ಯಾಸಮಾಡ, ರೂಢಿಮಾಡ; *(to frequent)* ಪದೇಪದೇಬರ.

Used, a. ರೂಢಿಯಾದ, ಅಭ್ಯಾಸವಾದ. v. *Accustomed.* *(brought into use)* ಬಳಿಸಿದ, ಬಳಿಕೆಯಾದ; *(expended)* ಆಗಿಹೋದ, ಮುಗಿದುಹೋದ.

Useful, a. ಪ್ರಯೋಜನದ, ಕೆಲಸದ, ಆದಾಯದ. v. *Advantageous, profitable.* *(to be useful)* ಪ್ರಯೋಜನವಾಗ, ಕೆಲಸಕ್ಕೆಬರ.

Usefully, ad. ಪ್ರಯೋಜನವಾಗಿ, ಆದಾಯವಾಗಿ; ಲಾಭವಾಗಿ.

Usefulness, s. n. ಪ್ರಯೋಜನವು, ಕೆಲಸವು, ಲಾಭವು, ಆದಾಯವು. v. *Utility.*

Useless, a. ನಿಷ್ಪ್ರಯೋಜನ, ಕೆಲಸಕ್ಕೆಬಾರದ; ವ್ಯರ್ಥವಾದ; *(an useless thing)* ನಿಷ್ಪ್ರಯೋಜನವಸ್ತು, ಕೆಲಸಕ್ಕೆಬಾರದವಸ್ತು. v. *Trifle.*

Uselessness, s. n. ನಿಷ್ಪ್ರಯೋಜನವು, ನಿರ್ಲಾಭವು.

User, s. n. ಬಳಿಸುವವ, ರೂಢಿಮಾಡುವವ, ಅನುವರ್ತಿಸುವವ.

Usher, s. n. *(who introduces)* ಅರ್ಜಬೇಗಿ, ಸಂದರ್ಶನಮಾಡಿಸುವವ; *(an under schoolmaster)* ಒಡಿಕ್ಕೇಮಗಳೆ.

To Usher-in, v. a. ಸಂದರ್ಶನಮಾಡಿಸ, ದರ್ಶನಮಾಡಿಸ, ಭೇಟಿಮಾಡಿಸ. v. *To introduce, forerun.*

Ushered-in, a. ಸಂದರ್ಶನಮಾಡಿಶಿದ, ಭೇಟಿಮಾಡಿಶಿದ. v. *Introduced.*

Usual, a. ವಾಡಿಕೆಯ, ಸಾಧಾರಣದ. v. *Common, customary, frequent.*

Usually, ad. ವಾಡಿಕೆಯಾಗಿ, ಪದೇಪದೆಯಾಗಿ.

Usualness, s. n. ವಾಡಿಕೆಯು, ಪದೇಪದೇಯು. v. *Frequency.*

Usufruct, s. n. ಫಲಾನುಭವ, ಭೋಗ.

Usufructuary, s. n. ಫಲಾನುಭವಿಸುವವ.

Usurer, s. n. ಬಡ್ಡಿತೆ ಕೊಂಬುವವ, ಬಡ್ಡಿಗಾರ, ಕುಸೀದಿಕನು.

Usurious, a. ಬಡ್ಡಿಯ, ಚುಂಗಡಿಯ.

Usuriously, ad. ಬಡ್ಡಿಯಾಗಿ, ಚುಂಗಡಿಯಾಗಿ.

To Usurp, v. a. ಆಕ್ರಮಿಸು, ಇಲ್ಲದಧಿಕಾರತೆಕ್ಕೊಳ್ಳು.

Usurpation, s. n. ಆಕ್ರಾಂತವು, ಆಕ್ರಮಣವು.

Usurped, part. ಆಕ್ರಮಿಸಿದ.

Usurper, s. n. ಆಕ್ರಮಿಸುವವ.

Usury, s. n. ಬಡ್ಡಿ, ಚುಂಗಡಿ, ಕುಸೀದ, ವೃದ್ಧಿ; *(to lend at usury)* ಬಡ್ಡಿಗೆಕೊಡು, ಚುಂಗಡಿಗೆಕೊಡು.

Utensil, s. n. *(tool, implement)* ಉಪಕರಣವು; *(utensils, pots, pans, &c.)* ಬಾಶಿಮುಟ್ಟುಗಳು; *(travelling utensils)* ಪ್ರಯಾಣಸಂಭಾರ, ಪ್ರಯಾಣಸಾಮಗ್ರಿ. v. *Tool, instrument, weapon;* also *apparatus, furniture, necessaries, vessel.*

Uterine, a. *(belonging to the womb)* ಗರ್ಭದ.

Uterus, s. n. ಗರ್ಭ, ಬಸುರು, ಜರಾಯು. v. *Womb.*

Utility, s. n. ಪ್ರಯೋಜನವು, ಆದಾಯವು, ಲಾಭವು, ಕೆಲಸವು, ಉಪಯೋಗ. v. *Use, profit, advantage, service.*

Utmost, a. ಕಟ್ಟಕಡೆಯ, ಕೊನೆಯ, ಕೊಟ್ಟಕೊನೆಯ. v. *Extreme, highest, greatest. (to do one's utmost)* ಶಕ್ತಿಯಿಂದಾದಮಟ್ಟಿಗೂ ಮಾಡು, ಸಾಮರ್ಥ್ಯವಿದ್ದಮಟ್ಟಿಗೂ ಮಾಡು.

Utter, v. *Total, complete, outer, outward.*

To Utter, v. n. ಹೇಳು, ನುಡಿಯು. v. *To speak, relate. (to sell)* ಮಾರು, ಕ್ರಯಕ್ಕೆಕೊಡು, ಬೆಲೆಗೆಕೊಡು, ಖರೀದಿಗೆಕೊಡು, ವಿಕ್ರಯಿಸು; *(to give currency)* ಪ್ರಸಿದ್ಧಿಮಾಡು, ಬಹಿರಂಗಮಾಡು, ಪ್ರಕಟನೆಮಾಡು.

Utterable, a. ಹೇಳತಕ್ಕ. v. *Speakable.*

Utterance, s. n. ಹೇಳುವಿಕೆ, ನುಡಿಯುವಿಕೆ. v. *Speaking, pronunciation.*

Utterer, s. n. *(narrator)* ಹೇಳುವವ, ನುಡಿಯುವವ; *(publisher)* ಪ್ರಸಿದ್ಧಿಮಾಡುವವ, ಪ್ರಬಲಮಾಡುವವ. v. *Speaker, vender.*

Uttered, part. ಹೇಳಿದ, ನುಡಿದ. v. *Spoken, told.*

Utterly, ad. ಸಂಪೂರ್ಣವಾಗಿ, ಪೂರ್ತಿಯಾಗಿ, ಪೂರಾವಾಗಿ. v. *Wholly, completely, perfectly, quiet.*

Uttermost, v. *Extreme.*

Vulcano, v. *Volcano.*

Vulgar, a. ಪ್ರಜೆಯ. v. *Plebeian. (mean, low)* ನೀಚದ, ಅಯೋಗ್ಯದ, ಚಾಂಡಾಲದ, ಕುಲಹೀನದ; The *vulgar* ಪ್ರಜೆಗಳು, ಗ್ರಾಮಸ್ಥರು, ಮಕ್ಕಳು, ರಯಿತರು. v. *Plebeian, commonalty, mob.*

Vulgarity, s. n. ನೀಚತನ, ಅಯೋಗ್ಯತನ. v. *Meunness.*

Vulgarly, ad. ವಾಡಿಕೆಯಾಗಿ, ಬಳಿಕೆಯಾಗಿ. v. *Commonly.*

Vulnerable, a. ಘಾಯವಾಗತಕ್ಕ.

Vulture, s. n. ಗೃಧ್ರ, ಹದ್ದು.

Vulva, s. n. ಯೋನಿ, ತುಲ್ಲು, ಭಗ, ಉಪಸ್ಥ, ಕಾಮದ್ವಾರ.

Uvula, s. n. ಕಿರುನಾಲಿಗೆ, ಉಪಜಿಂಹ್ವೆ; (*the falling or swelling of the uvula*) ಕಿರುನಾಲಿಗೆಬಾವು.

Uxorious, a. ಸ್ತ್ರೀಮೋಹಲಸಳ.

Uxoriousness, s. n. ಸ್ತ್ರೀಮೋಹತ್ವ.

W

To Wabble, v. n. ಅಲ್ಲಾಡ, ಕದಲ. v. *To shake.*

Wad, s. n. ಹುಲ್ಲುಹೊರೆ.

Wadding, s. n. ಹತ್ತಿಜಾನಾ, ಹುಪಟೆದಜಾನಾ.

To Waddle, v. n. ಸೊಟ್ಟಬಟ್ಟೆಗೆನಡೆಯ, ಅಷ್ಟಾವಕ್ರವಾಗಿನಡೆಯ. v. *To totter, stagger.*

To Wade, v. n. (*walk through water*) ಹಾಯ, ದಾಟು, ನೀರುಬೊಬ್ಬಿಕೊಂಡುಹೋಗ, ಬದ್ದೇಲಿ ಮಾಕಿಕೊಂಡುಹೋಗ; (*to pass through with difficulty*) ಕಡೆಹಾಯ, ಬೈಲಿಗೆಹಾಯ.

Wafer, s. n. ಗೋಂದಿನಬಿಲ್ಲೆ, ಸರಿಬಿಲ್ಲೆ.

To Waft, v. a. (*to carry or transport expeditiously*) ಶೀದಾನಾತೈಯ್ಯು, ಮಾಯವಾಗೊಯ್ಯು, ಜತ್ರನೆಯಳಕೊಂಡುಹೋಗ; (*carry through the air*) ಗಾಳಿಗೆಬಡುಕೊಂಡುಹೋಗ, ಅಂತರಿಕ್ಷಕ್ಕೆತೈಯ್ಯು; (*to make a waft or signal*) ಕೈಬೀಸ, ಕೈಯತ್ತು.

To Waft, v. n. (*to float*) ತೇಲಿಹೋಗ.

Waft, s. n. (*floating body*) ತೇಲಿಹೋಗುವವಸ್ತು, ತೆಪ್ಪ.

Wafted, part. ಅಳದುಹೋದ, ವಾಯುವೇಗವಾಗಿಹೋದ, ಘುಮವಾಗಿಹೋದ.

Wag, s. n. ಚಾವಾಕ, ಹೋರಾಟಿಕೆಯವ, ತಮಾಷೆಗಾರ, ನಕಲ್ದಾರ.

To Wag, v. a. (*cause to move or shake*) ಅಲ್ಲಾಡಿಸ, ಕದಲಿಸ, ಹಲಾಯಿಸ, ಊಪಿಸ; (*to move or be agitated*) ಅಲ್ಲಾಡ, ಕದಲ, ಅದರ, ಊಪ; (*to wag the tail*) ಬಾಲಾಡಿಸ, ಬಾಲವಲ್ಲಾಡಿಸ. v. Also *to wave.*

To Wage, v. a. (*war*) ಯುದ್ಧಮಾಡ, ಕಾದ, ಜಗಳವಾಡ, ಗುದ್ದ್ಯಾಡ,

Wager, s. n. ಜೂಜು, ಪಂತ, ಪಂದ್ದೆ.

To Wager, v. a. ಜೂಜಿಡ, ಪಂತವಾಡ, ಶರತ್ತುಮಾಡ, ಪಂದ್ಯವುಕಟ್ಟು.

Wages, s. n. ಸಂಬಳ, ಜೀತ, ಗ್ರಾಸ, ಕರ್ಮಣ್ಯ. v. *Salary, pay, stipend.* (*yearly wages*) ವರ್ಷದಸಂಬಳ, ವರ್ಷದಕಟ್ಲೆ; (*monthly wages*) ತಿಂಗಳಸಂಬಳ, ತಿಂಗಳಕಟ್ಲೆ; (*daily wages*) ದಿನಕೂಲಿ, ಬತ್ಯಕಟ್ಲೆ.

Waggish, a. ಚಾರ್ವಾಕತನದ, ಪೋರಾಟಿಕೆಯ, ತಮಾಷೆಯ, ನಕಲುದಾರತನದ.

Waggishness, Waggery, s. n. ಕೀಟಕತನ, ಚಾರ್ವಾಕತನ, ಪೋರಾಟಿಕೆ.

Waggon, s. n. ಭಾರವಾಸಿಬಂಡಿ, ನಾಲ್ಕುಗಾಲಿಯಬಂಡಿ, ಪಕ್ಕಲತನದಬಂಡಿ. v. *Cart.*

Wagtail, s. n. ಖಂಜರೀಟವು, ಖಂಜನವು, ಕುಂಬ್ಬಾರಹಕ್ಕಿ.

To Wail, v. n. ಮೊರ್ರೋಯಿಡು, ಅಯ್ಯೋಯೆನ್ನು, ಹಯ್ಯೋಯೆನ್ನು. v. *To lament, bewail, moan.*

Wailful, a. ದುಃಖದ, ಗೋಳಾಟದ, ಅಳುವಿನ. v. *Mournful, sorrowful.*

Wain, s. n. ವಾಹನ, ಬಂಡಿ, ಶಕಟ.

Wainscot, s. n. ತಕ್ತಬಂದಿ, ಕಟ್ಟಾಂಜನವು.

To Wainscot, v. a. ತಕ್ತಬಂದೀಮಾಡು, ಕಟ್ಟಾಂಜನಕಟ್ಟು.

Waist, s. n. ನಡುವು; *(the waist, or middle of the deck of a ship)* ಹಡಗದನಡುಮಧ್ಯ; *(slender waisted)* ಸೂಕ್ಷ್ಮಮಧ್ಯದ, ಬಡನಡುವಿನ, ಗಗನಮಧ್ಯದ; *(waistcoat)* ಚೋಣಿ; *(an under waistcoat)* ಒಳಚೋಣಿ, ಮೇಲಾಯ, *(a silver zone worn by women on the waist)* ಡಾಬು; *(a silver waistband worn by men)* ಬೆಳ್ಳಿವುಡಧಾರ, ಕಟಿಸೂತ್ರ.

To Wait, v. n. ಕಾದಿರು; *(to wait on one)* ಖಿಜ್ಮತೀಮಾಡು; I'll *wait* on you presently ಕ್ಷಣದಲ್ಲಿ ಬರುತ್ತೇನೆ, ಸ್ವಲ್ಪನಿಂತ್ತು ನಿನ್ನಬಳಿಗೆಬರುತ್ತೇನೆ; Punishment *waits* for him ಪ್ರಾಯಶ್ಚಿತ್ತವು ಅವನನ್ನು ಎದುರುನೋಡುತ್ತದೆ, or ಪ್ರಾಯಶ್ಚಿತ್ತವು ಅವನನ್ನು ಕಾದುಕೊಂಡದೆ, or ಪ್ರಾಯಶ್ಚಿತ್ತವು ಅವನಿಗೆಡೆಮಾಡಿಯಿಟ್ಟದೆ; Will you *wait* for me till I come? ನಾನುಬರುವಪರಿಯಂತರ ಕ್ಷಾನಿಲ್ಲಿರುವಿಯಾ, or ನಾನುಬರುವಮಟ್ಟಿಗೆ ಕಾದಿರುವಿ; *(to wait for, with expectation)* ನಿರೀಕ್ಷಿಸು, ಎದುರುನೋಡು, ಹಾದಿನೋಡು, ಕಾದುಕೊಂಡಿರು. v. *To stay, watch, expect. (to wait upon, as a servant)* ಸೇವಿಸು, ಊಳಿಗಮಾಡು, ಕಾದುಕೊಂಡಿರು; *(to visit)* ದರ್ಶನತೆಗೆದುಕೊಳ್ಳು, ಖಿಜ್ಮತೀಮಾಡು.

Wait, s. n. *(ambush)* ಅಡಗು, ತಗ್ಗು, ಹೊಂಚು, ದಾಗು, ದಾಪು; *(to lie in wait)* ಅಡಗಿಕೊಂಡಿರು, ಹೊಂಚಿಕೊಂಡಿರು, ದಾಗಿಕೊಂಡಿರು.

Waiter, s. n. *(servant)* ಹಡಪಿಗ, ಸೇವಕ, ಕಿಂಕರ, ಊಳಿಗದವ.

Waitingwoman, s. n. ದಾಸಿ.

To Wake, v. a. *(rouse another from sleep)* ಎಚ್ಚರಿಸು, ಜಾಗ್ರತೆಮಾಡು; *(to wake, be awake, or be awakened)* ಎಚ್ಚರ, ಜಾಗರ. v. Also *to watch.*

Waked, part. ಎಚ್ಚತ್ತ, ಎದ್ದ.

Wakeful, a. ಜಾಗರಣೆಯ. v. Also *watchful, vigilant.*

Wakefulness, s. n. ಜಾಗರಣೆ.

To Walk, v. n. ನಡೆಯು, ಗಮಿಸು, ಚಲನೆಯಾಗು, ಚಲಿಸು, ಹೋಗು. v. Also *to go, move, come, travel, pass. (to walk with an easy graceful air)* ಸಾಂಪ್ಯವಾಗಿನಡೆಯು, ಮಂದಗಮನವಾಗಿನ

ಯು; (*to walk out or abroad*) ಹೊರಗೆ ತಿರಗ; (*to walk on foot*) ಕಾಲುನಡೆಯಾಗಿ ನಡಿಯು, ಪಾದಚಾರಿಯಾಗಿ ನಡಿಯು; (*to cause to walk*) ನಡಿಸು; (*to walk alone, as a child*) ತಪ್ಪುದಿಯಿಡು, ಕಾಲ್ಬರು.

Walk, s. n. (*the act of walking*) ನಡಿಕೆ, ಗಮನ, ಯಾನ, ನಡೆ; (*gait*) ನಡಿಕೆಯವೈಖರಿ, ನಡಿಕೆಯ ಬಗೆ, ಗಮನದ ರೀತಿ; (*a place for walking for pleasure*) ವಿಹಾರಸ್ಥಲ, ಆರಾಮ, ಉಪವನ; (*a walk for pleasure*) ಶತಪಥವು, ಪಾದಚಾರಿ.

Walker, s. n. ನಡೆಯುವವ, ಗಮನಿಸುವವ, ಹೋಗುವವ; (*a great walker*) ಕಾಲಾದವ, ಕಾಮೊದಗಿನವ, ಶ್ವಶಿಗಮನದವ; (*a night walker*) ನಿಶಾಚರನು, ಚೋರನು.

Walking-staff, s. n. ಊರುಗೋಲು, ಟೊಣೆಗೋಲು, ಟೆಂಗಾಗೋಲು.

Wall, s. n. ಗೋಡೆ, ಕುಡ್ಯ, ಭಿತ್ತಿ, ಕೇರು, ಕುದುಡು; (*a wall of canvas inclosing an area about a tent*) ಕನಾತು; (*the walls of a fort*) ಕೋಟೆಗೋಡೆ, ಪ್ರಾಕಾರ, ಪ್ರಹರಿ, ಆವೇರಿ. v. *Rampart, fortification.* (*the top of a wall*) ಗೋಡೆಯಮೇಲ್ಭಾಗ; (*the coping of a wall*) ಕುಂಚೆ, ಕ್ರಯಶೀರ್ಷ, ಅರಲು, ಪರಟೆ, ಸಾಲಶೃಂಗವು; (*a partition wall*) ಅಡ್ಡಗೋಡೆ; (*a mud wall*) ಹಿಲ್ಲಿಗೋಡೆ; (*a stone wall*) ಕಲ್ಲಿನಗೋಡೆ; (*a dead wall*) ಘಾರೀಗೋಡೆ; (*the encrustation or plastering of a wall*) ಮೆತ್ತದಿ, ಮನಗಾಸನ, ಗಿಲಾಬು, ಗಾರೆ; (*a high wall surrounding a palace*) ಪ್ರಹರೀಗೋಡೆ; (*a parapet wall*) ಕುಂಚೆಗೋಡೆ. v. *Parapet.* (*the parapet wall surrounding a well*) ಭಾವಿಕಟ್ಟೆ; (*to build a wall*) ಗೋಡೆಕಟ್ಟು.

To Wall, v. a. (*enclose with walls*) ಗೋಡೆಹಾಕು, ಸುತ್ತುಗೋಡೆಕಟ್ಟು; (*to fortify with walls*) ಗೋಡೆಭದ್ರಮಾಡು, ಆವೇರಿಕಟ್ಟು.

Wallet, s. n. ಹಸಿಬಿ, ಚೀಲ, ವಟ್ಟೆದಚೀಲ, ಜೋಳಿಗೆ.

Wall-louse, s. n. ತಿಗಣೆ, ಮತ್ಕುಣ.

To Wallop, v. n. ಕಳಪಳನ, ಬುದಬುದನ.

To Wallow, v. n. (*to roll on the ground, in the mire, &c.*) ಹೊರಳು.

Wallnut, s. n. ಅಕ್ಷೋಡ, ಕಂದರಾಲವು.

Wan, a. ಕಳೆಕುಂದಾದ, ಕಂದಿದ, ಡಿಬೆಕಳೆಯ, ಸಾವುಬಂಗಾದ, ಬೆಳುಪಾದ; To grow *wan* ಕುಂದು, ಕಂದು, ಕಳೆಯೇರು, ಬಿಳುಪೇರಿಯಾಗು, ಹಂಗೆಕ್ಕಿಲಿಯಾಗು.

Wand, s. n. ಮುದ್ರೆಕೋಲು. v. *Rod, twig.*

To Wander, v. a. (*ramble about*) ತಿರುಗಾಡು, ಅಲ್ಲಾಡು, ಹೋಲಾಯಪಡು, ಅಗಬಾಟ್ಲೆಪಡು, ಭ್ರಮಿಸು; (*to go astray, lose the way*) ಹಾದಿತಪ್ಪಿಹೋಗು, ತಪ್ಪಿಶಿಹೋಗು, ಅಡವಿಪಾಲಾಗಿಹೋಗು. v. *To stray, rove, travel.*

Wanderer, s. n. ತಿರುಗಾಡುವವ, ಹೋಲಾಯಪಡುವವ, ಅಲ್ಲಾಡುವವ; (*vagrant, vagabond*) ತಿರಿಗೇಡಿ, ದಶೆಗೇಡಿ.

Wandering, a. ತಿರಿಗಾಡುವ, ಹೋಲಾಯಪಡುವ,

ಅಗಬಾಟ್ಲುಪಡುವ; *(wandering in mind)* adj. ಚಂಚಲಚಿತ್ತದ, ಚಪಲಚಿತ್ತದ; *(wandering in mind)* sub. ಚಂಚಲಚಿತ್ತವು, ಚಪಲಚಿತ್ತವು.

Wane, s. n. *(decline)* ಕ್ಷಯ, ತಗ್ಗುವಿಕೆ, ಇಳುವಿಕೆ, ಕ್ಷೀಣ. v. *Decrease, decay, diminution.* *(the wane of the moon)* ಚಂದ್ರಕ್ಷೀಣ, ಚಂದ್ರಕ್ಷಯ.

To Wane, v. n. *(grow less)* ತಗ್ಗ, ಇಳಿಯ, ಕ್ಷಯವಾಗ, ಕಡಿಮೆಯಾಗ; *(to make less)* ತಗ್ಗಿಸ, ಕಡಮೆಮಾಡ, ಕ್ಷಯಮಾಡ.

Wanness, s. n. ಸಾವುಬಣ್ಣ, ಹಂಗೆಡಿವಣ್ಣ, ಡಿಚಿಕಳೆ, ಸಪ್ಪಿದಿಕಳೆ, ಕಂದು, ಕುಂದು, ಬಿಳುಪು.

To Want, v. a. *(long or wish for)* ಅಪೇಕ್ಷಿಸ, ಇಚ್ಛೈಸ, ಕೋರ, ಬಯಿಸ; *(to need, be in want of)* ಅಕ್ಕರವಾಗಿರ, ಬೇಕಾಗಿರ; *(to be deficient, or wanting)* ಕಡಮೆಯಾಗಿರ, ಸಾಲದೆಯಿರ, ಕೊರತೆಯಾಗಿರ; *(to be necessary)* ಅಗತ್ಯವಾಗಿರ.

Want, s. n. *(wish)* ಅಪೇಕ್ಷೆ, ಆಶೆ, ಇಚ್ಛೆ, ಕೋರಿಕೆ, ಬಯಿಕೆ; *(need)* ಅಕ್ಕರವು, ಅಗತ್ಯ, ಅವಸರ; *(indigence)* ಬಡತನ, ದರಿದ್ರ. v. *Poverty, penury.* *(deficiency)* ಕಡಮೆ, ಕೊರತೆ.

Wanting, a. *(defective)* ಕಡಮೆಯ, ಕೊರತೆಯ, ಸಾಲದ. v. *Deficient.*

Wanton, a. ಕಾಮವಿಕಾರದ, ಮೋಹದ, ವಿರಹದ, ಕ್ರೀಡಿಸುವ. v. *Lascivious, libidinous, dissolute, licentious, frolicksome, airy, gay, saucy.*

Wanton, s. n. ಕಾಮಿ, ಸೂಳೆಗಾರಿ, ಜಾರೆ. v. Also *whore, whoremonger, trifler.*

To Wanton, v. n. ಅತಿಕ್ರೀಡೆಮಾಡ. v. *To revel, play.*

Wantonly, ad. ಕಾಮವಿಕಾರವಾಗಿ, ಮನ್ಮಥೋದ್ರೇಕವಾಗಿ, ಕ್ರೀಡಾವಿಲಾಸವಾಗಿ.

Wantonness, s. n. ಕಾಮವಿಕಾರವು, ಮನ್ಮಥೋದ್ರೇಕವು, ಕ್ರೀಡಾವಿಲಾಸವು. v. *Lasciviousness, licentiousness.* *(frolick humour)* ಉಲ್ಲಾಸವು, ಕ್ರೀಡೆಯು.

War, s. n. ಯುದ್ಧ, ದಂಡಜೆ, ಬಿಸುಗೆ, ಸಾಠಿ, ಕೊಳುಗಳ, ಬಂಡಣ, ಜುದ್ಧ, ಮೊನೆ, ಹೋರಾಟ, ಕಾಳಗ, ಜಗಳ, ಕಲಹ, ಲಡಾಯಿ, ಸಮರ, ರಣ, ಆಯೋಧನ, ಜನ್ಯ, ಪ್ರಧನ, ಪ್ರವಿದಾರಣ, ಮೃಧ, ಆಸ್ಕಂದನ, ಸಂಖ್ಯ, ಸಮೀಕ, ಸಮುದಾಯ, ಸಂಯತ್ತು, ಸಮಿತ್ತು, ಯುಧವು, ಸಂಗರ, ಕದನ, ಆಜಿ, ಸಮಿತಿ, ಸಂಮರ್ದ, ಅಭಿಹನನ, ಹನನ, ಆಹವವು, ಸಾಂಪ್ರದಾಯಿಕ, ಅನೀಕ, ವಿಗ್ರಹ, ಸಂಪ್ರಹಾರ, ಅಭಿಸಂಪಾತ, ಕಲಿ, ಸಂಸ್ಫೋಟ, ಸಂಯುಗ, ಅಭ್ಯಾಮರ್ದ, ಸಮಾಘಾತ, ಸಂಗ್ರಾಮ, ಅಭ್ಯಾಗಮ. v. *Hostility, fight, battle.* *(intestine wars, civil wars)* ಸ್ವರಾಷ್ಟ್ರಕಲಹ; *(foreign war)* ಶತೃಕಲಹ, ಪರಚಕ್ರಕಲಹ; *(the terror of war)* ಯುದ್ಧಭಯಂಕರ; *(the hero of war)* ವೀರನು, ಶೂರನು, ಶೌರ್ಯವಂತನು, ಪರಾಕ್ರಮಿ; *(the triumph of war)* ಜಯಧ್ವನಿ; *(the leader of war)* ದಳವಾಯಿ, ಸೇನಾಪತಿ, ಸೇನಾನಿ, ದಂಡಾಧಿಪತಿ; *(the carnage, &c. left after war)* ರಣಮಯ, ಹನನಮಯ, ನಿಧನಮಯ; *(trained or skilled in war)* ಯೋಧ, ರಣಪಟು.

ಷ, ಯುದ್ಧದಲ್ಲಿಕ್ಕೇರಿದವ; (*the author of a war*) ಯುದ್ಧವೆಬ್ಬಿಸುವವ, ಕಲಹಕಾರನು; (*a bloody war*) ಘೋರಯುದ್ಧ, ರಕ್ತಪ್ರವಾಹದಯುದ್ಧ, ಭಯಂಕರಸಮರ; (*a war chariot*) ಶತಾಂಗವು, ಸ್ಯಂದನವು.

To War, or make War, v. a. ಯುದ್ಧಮಾಡು, ಲಡಾಯಿಮಾಡು. v. *To fight.*

To Warble, v. a. ಹಾಡು, ಪಾಡು, ಧ್ವನಿಗೈಯ್ಯು, ರವಮಾಡು. v. *To sing.*

Warbler, s. n. ಹಾಡುವವ, ಪಾಡುವವ, ಧ್ವನಿಗೈಯ್ಯುವವ, ರವಮಾಡುವವ. v. *Singer.*

To Ward, v. a. ಕಾವಲಿಯಿರು, ಪಹರೆಯಿರು, ಕಾಪಾಡು; (*to ward off*) ತಟ್ಟಿಬಿಡು. v. *To guard, protect, defend.*

